॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೪

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕರು

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1947

॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೪

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕರು

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1947

Printed by T. S. Raghavachar, Manager,
Sree Panchacharya Electric Press
Sayaji Rao Road, Mysore
For The Palace Mysore.

ಮುನ್ನುಡಿ

ಶ್ರೀಶಿವರಹಸ್ಯದ ತೃತೀಯಾಂಶವು ಈ ಪ್ರತಿಯ ಮೂಲಕ ಪ್ರಕಾಶಕ್ಕೆ ಬರುತ್ತಿದೆ. ಶಿವರಹಸ್ಯವು ಸಂಪೂರ್ಣವಾಗಿ ಇತಿಹಾಸಗ್ರಂಥವೆನಿಸಿದರೂ ಈ ಅಂಶದಲ್ಲಿ ಮಾತ್ರ ಪುರಾಣಗಳ ಕೆಲವು ಲಕ್ಷಣಗಳು ಕಂಡುಬರುತ್ತಿವೆ. ಸಂಸಾರದುಃಖದಿಂದ ಪಾರಾಗಿ, ಸಂಸಾರಿಗಳ ಕಷ್ಟವನ್ನು ಅನಾಯಾಸವಾಗಿ ಕಳೆಯುವ ಪರಮೇಶ್ವರನೇ ತಾನು ಸಂಸಾರಬಂಧನಕ್ಕೆ ಸಿಕ್ಕಿದವನಂತೆ ನಟಿಸುವ ಪ್ರಕರಣವೊಂದು ಈ ಗ್ರಂಥ ಭಾಗದಲ್ಲಿ ತೋರಿಬರುವುದು. ಶಿವಪಾರ್ವತಿಯರ ವಿರಹ ಮತ್ತು ಸಮಾಗಮ ಇವುಗಳ ವರ್ಣನೆಯೇ ಇಲ್ಲಿನ ಕಥಾವಸ್ತು. ಇದನ್ನು ವಿಮರ್ಶಿಸಿದರೆ ಶಿವನು ಪಾರ್ವತಿಗಾಗಿ ಪರಿತಪಿಸುವುದು ನ್ಯಾಯವೇ? ಪಾರ್ವತಿಯು ಪರಶಿವನಿಂದ ದೂರ ಳಾಗುವುದು ಸಂಭಾವಿತವೆ? ಪ್ರಕೃತಿಪುರುಷರಂತೆ, ಮಾಯಾ ಮತ್ತು ಪರಬ್ರಹ್ಮ ವಸ್ತುವಿನಂತೆ ಪ್ರಪಂಚಸೃಷ್ಟ್ಯಾದಿಗಳಿಗೆ ಕಾರಣರಾದ ಪಾರ್ವತೀ ಪರಶಿವರು ಹೀಗೆ ವಿರಹವ್ಯಥೆಯನ್ನು ತಾಳಿದುದು ಯುಕ್ತವೆ? ಇತ್ಯಾದಿ ಅನೇಕ ಸಂದೇಹಗಳು ವಾಚಕರಿಗೆ ತೋರಿಬರುತ್ತವೆ. ಆದರೆ ಇದನ್ನು ತಾತ್ತ್ವಿಕದೃಷ್ಟಿಯಿಂದ ನಿಶ್ಚಯಿಸಿ, ತನ್ಮೂಲಕ ಪುರಾಣಕರ್ತೃಗಳ ಮನೋಭಾವವನ್ನರಿಯಬೇಕು. ಈಶ್ವರನು ಶುದ್ಧ ಜ್ಞಾನಸ್ವರೂಪನೆನಿಸಿದರೂ, ಮಾಯಾರೂಪಳಾದ ದೇವಿಯ ಸಾನ್ನಿಧ್ಯದಿಂದ ಪ್ರಾಪಂಚಿಕವ್ಯವಹಾರವು ಅವನಲ್ಲಿ ಭಾಸಮಾನವಾಗುವುದು. ಆಗ ಅವನೇ ಪ್ರಪಂಚರೂಪದಿಂದ ತೋರಿಬರುವನು. ಪ್ರಪಂಚದಲ್ಲಿ ನಡೆಯಬೇಕಾದ ಸುಖ ದುಃಖಗಳಿಗೆ ಅವನೂ ಭಾಗಿಯಂತೆ ನಟಿಸುವನು. ಆದರೆ ದೇವಿಯ ವಿರಹದಲ್ಲಿಯೂ ಪರಶಿವನು ಶುದ್ಧ ಆನಂದಮಯನಾಗಿರುವುದಿಲ್ಲ. ಸಂಸ್ಕಾರವಶದಿಂದ ಆಗಲೂ ಆತನಿಗೆ ಸ್ವಸ್ವರೂಪಜ್ಞಾನವು ಆಚ್ಛಾದಿತವಾಗಿ ಪ್ರಾಪಂಚಿಕವ್ಯವಹಾರವು ಸ್ಫುರಿಸು ತ್ತಲೇ ಇರುವುದು. ಪ್ರಾಯಿಕವಾಗಿ ಸಕಲ ದಾರ್ಶನಿಕರೂ, ಪುರಾಣಕಾರರೂ ಒಂದೊಂದು ವ್ಯವಹಾರದಿಂದಲೇ ತತ್ತ್ವನಿರ್ಣಯಮಾಡುತ್ತಾರೆ. ವ್ಯವಹಾರವೆಂದರೆ ಸಾಮಾನ್ಯಜನರು ಆಡುವ ಮಾತುಗಳು, ನಡೆಯುವ ಮಾರ್ಗಗಳು. ಬಾಲಕರಿಗೆ ಅಕ್ಷರಾಭ್ಯಾಸದಂತೆ, ಮೊದಲು ಸಂಸಾರಿಗಳಿಗೆ ಶಿವ, ಪಾರ್ವತೀ, ಬ್ರಹ್ಮ, ನಾರಾಯಣ, ನಾನು, ನೀನು, ಅವನು ಎಂಬ ಮಾತುಗಳು ಪ್ರತ್ಯಕ್ಷವಾದ ಶರೀರ ದಲ್ಲಿ ಶಿಕ್ಷಿಸಲ್ಪಡುವುವು. ಕಾಲಕ್ರಮದಲ್ಲಿ ಸ್ವಯಂವಿದ್ಯಾವಂತರಾದರೂ, ವಿದ್ವಾಂಸರ ಸಹಾಯ ದೊರೆತರೂ ಅವರಿಗೆ ಶರೀರ ಬೇರೆ, ಶರೀರಾಂತರ್ಗತ ಆತ್ಮ ಬೇರೆ ಎಂಬ ಭಾವನೆಯೊದಗುವುದು. ಆಗ ನಾನು, ನೀನು, ಅವನು ಎಂಬ ಪದಗಳಿಗೆ ಶರೀರ

ದೊಡನೆ ಕೂಡಿರುವ ಆತ್ಮನು ಎಂಬ ಅಭಿಪ್ರಾಯ ಬರುತ್ತದೆ. ಕೊನೆಗೆ ಅದೇ ಸಂಸ್ಕಾರವು ದೃಢವಾಗಿ ನಾನು, ನೀನು ಎಂಬುದನ್ನು ಆತ್ಮನಲ್ಲೇ ವಿನಿಯೋಗಿಸಿಕೊಳ್ಳುವರು. ಅಂತಹ ಆತ್ಮನೇ ಶಿವನು; ಅಥವಾ ನಾರಾಯಣನು ಎಂಬ ನಿರಂತರ ಭಾವನೆಯೊದಗಿದರೆ 'ಸರ್ವಂ ಶಿವಮಯಂ' 'ಸರ್ವಂ ನಾರಾಯಣಮಯಂ' ಎಂಬ ಜ್ಞಾನವು ಲಭಿಸುವುದು. ಆಗ ಆತನು ಜ್ಞಾನಿಯೆನಿಸುವನು. ಅಂತಹವನೇ ಮುಮುಕ್ಷು, ಎಂಬ ವಿಶೇಷಾಭಿಪ್ರಾಯವನ್ನಿಟ್ಟುಕೊಂಡೇ ಪುರಾಣೇತಿಹಾಸಕಾರರು ಈ ವ್ಯಾವಹಾರಿಕ ವಿಷಯಗಳನ್ನು ಉಮಾಮಹೇಶ್ವರಾದಿಗಳಿಗೆ ಸಂಬಂಧಿಸುವರು.

ಈ ತೃತೀಯಾಂಶವು ಬಹು ದೊಡ್ಡದಾಗಿ ಪೂರ್ವಾರ್ಧ ಉತ್ತರಾರ್ಧಗಳೆಂಬ ಎರಡು ಭಾಗಗಳಿಂದ ಕೂಡಿದೆ. ಈ ಪ್ರತಿಯಲ್ಲಿ ನಾನಾ ಜಾತಿಯ ವೃತ್ತಗಳಿಂದ ಕೂಡಿದ ಶ್ಲೋಕಗಳು ಪಾರ್ವತಿಯ ಮತ್ತು ಪರಶಿವನ ವಿಹಾರವನ್ನೂ ಪರಸ್ಪರವಾಗಿ ಅವರ ದರ್ಶನಾಭಿಲಾಷೆಯನ್ನೂ ವಿವರಿಸುತ್ತವೆ. ಹತ್ತನೆಯ ಅಧ್ಯಾಯದಲ್ಲಿ ಶ್ರೀ ಗಣಪತಿಯು ಶಂಕರನನ್ನು ಸ್ತುತಿಸುವ ಪ್ರಕರಣ ಬಂದಾಗ ಶ್ರೀ ರುದ್ರಾಧ್ಯಾಯವನ್ನೇ ಶ್ಲೋಕರೂಪವಾಗಿ ಪರಿಣಾಮಗೊಳಿಸಿರುವರು. ರುದ್ರಾಧ್ಯಾಯದ ಪದಗಳೇ ಇಲ್ಲಿ ಅನುವರ್ತಿತವಾಗಿರುವುದರಿಂದ, ಆ ಪದಗಳ ಅರ್ಥವನ್ನು ಸಾಯನಭಾಷ್ಯಾನುಸಾರವಾಗಿ ವಿವರಿಸಲಾಗಿದೆ. ಮಧ್ಯೆ ಜನಸಾಮಾನ್ಯರಲ್ಲಿ ಕಂಡುಬರುವ ನ್ಯೂನತೆಗಳನ್ನು ವಿವರಿಸಿ, ತತ್ಪರಿಹಾರಕ್ಕಾಗಿ ಅವರು ಈಶ್ವರ ಭಕ್ತಿಯನ್ನು ಹೊಂದುವುದೇ ಮೇಲೆಂದೂ, ಉಳಿದ ಯಜ್ಞ ಹೋಮಾದಿ ಯಾವ ಕರ್ಮಗಳೂ ಆ ನ್ಯೂನತೆಗಳನ್ನು ದೂರಮಾಡಲಾರವೆಂದೂ ಉಪಪಾದಿತವಾಗಿದೆ.

ಜಗತ್ಪೂಜ್ಯವೂ, ಪೂಜ್ಯರಿಂದ ಗೋಪ್ಯವೂ ಆಗಿದ್ದ ಇಂತಹ ಮಹೇತಿಹಾಸವನ್ನು ಬೆಳಕಿಗೆ ತಂದು, ತನ್ಮೂಲಕ ಕನ್ನಡ ನಾಡಿಗೇ ಮಹೋಪಕಾರವೆಸಗಿದ, ಶ್ರೀಮತ್ಕರ್ಣಾಟಕ ರತ್ನಸಿಂಹಾಸನಾಧೀಶ್ವರ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.,** ಮಹಾಪ್ರಭುಗಳವರಿಗೂ, ಅವರ ಕುಟುಂಬವರ್ಗಕ್ಕೂ, ಪುತ್ರೀರತ್ನವೆನಿಸಿದ ಶ್ರೀ ಗಾಯತ್ರೀ ದೇವಿಯವರಿಗೂ ಉಮಾಸಹಚರನಾದ ಸರ್ವೇಶ್ವರನು ಆಯುರಾರೋಗ್ಯಾದಿ ಸಕಲ ಶುಭವರಗಳನ್ನೂ ಅನುಗ್ರಹಿಸಿ ರಕ್ಷಿಸಲಿ ಎಂದು ಭಕ್ತಿಯಿಂದ ಪ್ರಾರ್ಥಿಸುವೆನು.

ವ್ಯಯನಾಮ ಸಂವತ್ಸರದ
ಮಾಘ ಶುದ್ಧ ಸಪ್ತಮೀ
ಬುಧವಾರ
29—1—1947.

ಇತಿ ಸಜ್ಜನವಿಧೇಯ,
ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,
ಆಸ್ಥಾನವಿದ್ವಾನ್, ಮೈಸೂರು.

|| ಶ್ರೀಃ ||

ಶ್ರೀಶಿವರಹಸ್ಯದ ಹರನಾಮುಕವಾದ ತೃತೀಯಾಂಶ ಪೂರ್ವಾರ್ಧದ ವಿಷಯಸೂಚೀ

(ಒಂದರಿಂದ ಇಪ್ಪತ್ತು ಅಧ್ಯಾಯಗಳು ಮಾತ್ರ)

ಹದಿಮೂರನೆಯ ಅಧ್ಯಾಯ

ಹದಿನಾಲ್ಕನೆಯ ಅಧ್ಯಾಯ

ಹದಿನೈದನೆಯ ಅಧ್ಯಾಯ

ಹದಿನಾರನೆಯ ಅಧ್ಯಾಯ

ಹದಿನೇಳನೆಯ ಅಧ್ಯಾಯ

ಹದಿನೆಂಟನೆಯ ಅಧ್ಯಾಯ

ಹತ್ತೊಂಬತ್ತನೆಯ ಅಧ್ಯಾಯ

ಇಪ್ಪತ್ತನೆಯ ಅಧ್ಯಾಯ

॥ ಶ್ರೀಃ ॥

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಅಥ ಶ್ರೀಶಿವರಹಸ್ಯೇ

ಹರಾಖ್ಯತೃತೀಯಾಂಶಸ್ಯ ಪೂರ್ವಾರ್ಧಪ್ರಾರಂಭಃ

ಪ್ರಥಮೋಽಧ್ಯಾಯಃ

ಓಂ ॥ ಶಿವಪಾದಾರವಿಂದಶ್ರೀರ್ಯಾ ಶ್ರಿಯಂ ಶ್ರೀಪತಿಂ ವಿಧಿಂ ।
ಇಂದ್ರಂ ಚಂದ್ರಂ ಸುರಾನನ್ಯಾನುತ್ಪಾದಯತಿ ಸಾ ಶಿವಾ ॥೧॥

ಪುರಾ ನೈಮಿಶಮಾಶ್ರಿತ್ಯ ಮುನಯಃ ಶೌನಕಾದಯಃ ।
ಸೂತಂ ವೇದಾರ್ಥತತ್ತ್ವಜ್ಞಂ ಪ್ರಣಮ್ಯೋಚುಃ ಪ್ರಯತ್ನತಃ ॥೨॥

ಶ್ರೀಶಿವರಹಸ್ಯದಲ್ಲಿ ಹರಸಂಜ್ಞಕವಾದ ಮೂರನೆಯ ಅಂಶವು ಪ್ರಾರಂಭವಾಗುತ್ತದೆ.

ಪರಶಿವನ ಅಡಿದಾವರೆಗಳ ಯಾವ ಒಂದು ಕಾಂತಿಯು ಲಕ್ಷ್ಮಿಯನ್ನೂ, ವಿಷ್ಣುವನ್ನೂ, ಇಂದ್ರನನ್ನೂ, ಚಂದ್ರನನ್ನೂ ಮತ್ತು ಇನ್ನುಳಿದ ದೇವತೆಗಳನ್ನೂ ಜನ್ಮತಾಳುವಂತೆ ಮಾಡುತ್ತದೆಯೋ, ಅಂತಹ ಕಾಂತಿಯೇ ಸಕಲರಿಗೂ ಸೌಭಾಗ್ಯ ಪ್ರದವಾಗಿರಲಿ. ॥೧॥

ಹಿಂದೆ ಒಂದಾನೊಂದು ಕಾಲದಲ್ಲಿ ಶೌನಕನೇ ಮೊದಲಾದ ಮುನಿಗಳು ನೈಮಿಶಾರಣ್ಯವನ್ನು ಪ್ರವೇಶಿಸಿ, ಅಲ್ಲಿ ವೇದಾರ್ಥದ ಸಕಲ ರಹಸ್ಯವನ್ನು ತಿಳಿದು ಕೊಂಡಿರುವ ಸೂತಮಹರ್ಷಿಯನ್ನು ಕಂಡು, ಅತ್ಯಾದರದಿಂದ ನಮಸ್ಕರಿಸಿ, ವಿನಯದಿಂದ ಮುಂದೆ ಹೇಳುವಂತೆ ಕೆಲವು ಪ್ರಶ್ನೆ ಮಾಡಿದರು. ॥೨॥

|| ಋಷಯ ಊಚುಃ ||

ವೇದವೇದಾಂತತತ್ತ್ವಜ್ಞ ಶಿವಜ್ಞಾನೈಕಜೀವನ ।
ಶಿವತತ್ತ್ವಂ ವದಾಸ್ಮಭ್ಯಂ ಶಿವಸ್ಥಾನಂ ಶ್ರುತಿಶ್ರುತಂ ||೩||

ಯತ್ರ ಸರ್ವಸುಖಾವಾಪ್ತಿರ್ಯತ್ರಾಪತ್ಸಂಘವಾರಣಂ ।
ಸನ್ನಿಧಾನಂ ಮಹೇಶಸ್ಯ ಭಕ್ತಾನುಗ್ರಹಸಾಧನಂ ||೪||

ಶಾಂಭವಾನಾಮಭೀಷ್ಟಾರ್ಥಾಃ ಸರ್ವೇ ಸಿಧ್ಯಂತಿ ಯತ್ರ ವೈ ।
ಅನಾಯಾಸೇನ ಸತತಂ ಪ್ರಸನ್ನಃ ಪಾರ್ವತೀಪತಿಃ ||೫||

ಯತ್ರ ತೀರ್ಥಾನಿ ರಮ್ಯಾಣಿ ಪಾಪನಾಶಕರಾಣಿ ಚ ।
ಧರ್ಮಪ್ರವೃದ್ಧಿದಂ ಲಿಂಗಂ ಶಾರ್ವಂ ಮಂಗಳದಾಯಕಂ ||೬||

ಏತಾದೃಶಂ ಸ್ಥಲಂ ಕುತ್ರ ತ್ರಿನೇತ್ರಸ್ಯಾಪಿ ಸಂಮತಂ ।
ತದ್ವಿಚಾರ್ಯಾತಿಯತ್ನೇನ ವದ ಪ್ರೀತಿಪುರಸ್ಸರಂ ||೭||

ವೇದಗಳ ಮತ್ತು ಉಪನಿಷತ್ತುಗಳ ರಹಸ್ಯವನ್ನು ತಿಳಿದುಕೊಂಡಿರುವ ಮತ್ತು ಸದಾ ಶಿವಧ್ಯಾನದಲ್ಲಿಯೇ ತತ್ಪರನಾದ ಓ ಸೂತಮಹರ್ಷಿಯೇ, ವೇದ ವಾಕ್ಯಗಳಿಂದ ತಿಳಿದುಬರುವ ಆ ಶಿವನು ಎಲ್ಲಿ ನೆಲಸಿರುವನು? ಅಂತಹ ಶಂಕರನ ನಿಜತತ್ತ್ವವೇನು? ಅದನ್ನು ನಮಗೆ ಹೇಳುವವನಾಗು. ||೩||

ಯಾವ ಶಿವಸಾನ್ನಿಧ್ಯದಲ್ಲಿ ಸಕಲ ಸೌಖ್ಯಗಳೂ ಲಭಿಸುವುವೋ ಮತ್ತು ಯಾರ ಸಮೀಪದಲ್ಲಿ ಸಕಲ ತೊಂದರೆಗಳೂ ದೂರವಾಗುವುವೋ, ಅಂತಹ ಶಿವಸಾನ್ನಿಧ್ಯವು ಭಕ್ತಾನುಗ್ರಹಕ್ಕೆ ಮೂಲಸ್ಥಾನವಾಗಿರುವುದಲ್ಲವೆ! ||೪||

ಯಾವ ಸ್ಥಾನದಲ್ಲಿ ಈಶ್ವರನ ಸೇವಕರ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವೋ, ಮತ್ತು ಯಾವ ಸ್ಥಳದಲ್ಲಿ ಉಮಾಪತಿಯಾದ ಶಿವನು ಸರ್ವದಾ ಪ್ರಸನ್ನನಾಗಿರುವನೋ ಅಂತಹ ಪ್ರದೇಶವು ಯಾವುದೆಂಬುದನ್ನು ಹೇಳುವವನಾಗು. ||೫||

ಎಲ್ಲಿ ಮನೋಹರವಾಗಿಯೂ ಪಾಪನಾಶಕಗಳಾಗಿಯೂ ಇರುವ ಪುಣ್ಯ ತೀರ್ಥಗಳಿರುವುವೋ, ಮತ್ತು ಮಂಗಳಕರವೂ ಪುಣ್ಯವನ್ನು ವೃದ್ಧಿಪಡಿಸುವುದೂ ಆದ ಶಿವಲಿಂಗವು ಎಲ್ಲಿ ಇರುವುದೋ, ಶಿವನಿಗೂ ಪ್ರೀತಿಪಾತ್ರವಾದ ಅಂತಹ

ತ್ವಯಾ ಕ್ಷೇತ್ರಾಣಿ ದೃಷ್ಟಾನಿ ವಿಚಿತ್ರಾಣಿ ಬಹೂನ್ಯಪಿ ।
ತೇಷು ಕಿಂ ಸಿದ್ಧಿದಂ ಕ್ಷಿಪ್ರಂ ವಿರೂಪಾಕ್ಷಪ್ರಿಯಂ ಚ ಕಿಂ ॥೮॥

ಇತಿ ತನ್ಮುನಿವಾಕ್ಯಾನಿ ಶ್ರುತ್ವಾ ರಮ್ಯಾಣಿ ಸಾದರಂ ।
ತಾನುವಾಚ ಮುನಿರ್ಧ್ಯಾತ್ವಾ ಹರ್ಷನಿರ್ಭರಮಾನಸಃ ॥೯॥

॥ ಸೂತ ಉವಾಚ ॥

ಸಾಧು ಸಾಧು ಮಹಾಭಾಗಾಃ ಶುದ್ಧಚಿತ್ತಾ ಸ್ತಪಸ್ಯಯಾ ।
ಭವದ್ದರ್ಶನಮಾತ್ರೇಣ ಪ್ರಸನ್ನಮಧುನಾ ಮನಃ ॥೧೦॥

ಭಾಗ್ಯವಂತೋ ಭವಂತೋಽಪಿ ಭವಲಿಂಗಾರ್ಚನಪ್ರಿಯಾಃ ।
ಭವತಾಂ ಸನ್ನಿಧಾನೇನ ಭವೇ ಭಕ್ತಿಃ ಪ್ರಜಾಯತೇ ॥೧೧॥

ಸ್ಥಳವು ಯಾವುದೆಂಬುದನ್ನೂ ಪ್ರೀತಿಪುರಸ್ಸರವಾಗಿ ನಮಗೆ ಹೇಳುವವನಾಗು. ||೬-೭||

ಓ ಸೂತಮಹರ್ಷಿಯೇ, ನೀನು ವಿಚಿತ್ರವಾದ ಮಹಿಮೆಯುಳ್ಳ ಅನೇಕ ಕ್ಷೇತ್ರಗಳನ್ನು ನೋಡಿರುವೆ. ಅವುಗಳಲ್ಲಿ ಯಾವ ಕ್ಷೇತ್ರವು ಶೀಘ್ರವಾಗಿ ತಪಃ ಸಿದ್ಧಿಯನ್ನು ಕೊಡುವುದಾಗಿರುತ್ತದೆ? ಮತ್ತು ಯಾವ ಕ್ಷೇತ್ರವು ಈಶ್ವರನಿಗೆ ಪ್ರಿಯವಾದುದಾಗಿರುತ್ತದೆ? ಎಂಬುದನ್ನು ದಯೆಯಿಟ್ಟು ತಿಳಿಸು. ||೮||

ಮುನಿಗಳ ಮನೋಹರವಾದ ಈ ಮಾತುಗಳನ್ನು ಕೇಳಿ, ಸೂತಮಹರ್ಷಿಯು ಶಿವನನ್ನು ಧ್ಯಾನಿಸಿ ಸಂತೋಷಭರಿತನಾಗಿ ಮುನಿಗಳನ್ನು ಕುರಿತು ಆದರದಿಂದ ಹೀಗೆಂದು ಹೇಳಿದನು. ||೯||

ಎಲೈ ಭಾಗ್ಯಶಾಲಿಗಳಾದ ಮುನಿಗಳೇ, ನೀವು ತಪಶ್ಚರ್ಯೆಯಿಂದ ಪರಿಶುದ್ಧವಾದ ಮನಸ್ಸುಳ್ಳವರಾಗಿರುವಿರಿ. ಈಗ ನಿಮ್ಮ ದರ್ಶನಮಾತ್ರದಿಂದಲೇ ನನ್ನ ಮನಸ್ಸು ಶಾಂತವಾಗಿರುವುದು. ||೧೦||

ಭಾಗ್ಯಶಾಲಿಗಳಾದ ನೀವೂ ಶಿವಲಿಂಗವನ್ನು ಪೂಜಿಸುವುದರಲ್ಲಿ ಪ್ರೀತಿಯುಳ್ಳವರಾಗಿರುತ್ತೀರಿ. ನಿಮ್ಮ ಸಾನ್ನಿಧ್ಯದಿಂದ ನನಗೆ ಶಿವನಲ್ಲಿರುವ ಭಕ್ತಿಯು ಇನ್ನೂ ವೃದ್ಧಿಯನ್ನು ಹೊಂದುವುದು. ||೧೧||

ಸತ್ಸಂಗೋ ದುರ್ಲಭೋ ಲೋಕೇ ಸಂತಃ ಶಾಂಭವಪುಂಗವಾಃ ।
ಶಾಂಭವಾನಾಂ ಮಹಾಭಾಗ್ಯಂ ಲೋಕೇ ನಾಸ್ತ್ಯತ್ರ ತತ್ಫಲು ॥೧೨॥

ಶಾಂಗಸಂಗಾಭಿವಾಂಭಾಪಿ ಮಮ ಜಾತಾ ಪುರಾ ಶುಭಾ ।
ಸಾ ತಾವದದ್ಯ ಫಲಿತಾ ಭವದಾಗಮನಾದಿಹ ॥೧೩॥

ಶಾಂಭವಾಗಮನಂ ಭಾಗ್ಯೈರ್ಜನ್ಮಜನ್ಮಾಂತರಾರ್ಜಿತೈಃ ।
ಭವತೀತಿ ಶ್ರುತಂ ಪೂರ್ವಂ ವಸಿಷ್ಠಾದಿಕವಾಕ್ಯತಃ ॥೧೪॥

ಶಾಂಭವತ್ವಂ ಚ ವಿಜ್ಞಾತಂ ಭವತ್ಸು ಬಹುಸಾಧನೈಃ ।
ತಾನಿ ತಾವತ್ಸಾಧನಾನಿ ಪುಣ್ಯಕೋಟ್ಯಾರ್ಜಿತಾನಿ ಹಿ ॥೧೫॥

ಉದ್ಧೂಳನಂ ತ್ರಿಪುಂಡ್ರಂ ಚ ರುದ್ರಾಕ್ಷಾಣಾಂ ಚ ಧಾರಣಂ ।
ಶಿವಲಿಂಗಾರ್ಚನಂ ಚೇತಿ ತಪಃಫಲಮನುತ್ತಮಂ ॥೧೬॥

ಲೋಕದಲ್ಲಿ ಸಜ್ಜನರ ಸಹವಾಸವು ದುರ್ಲಭವಾಗಿರುವುದು. ಸತ್ಪುರುಷರು ಈಶ್ವರಭಕ್ತರಲ್ಲಿ ಅಗ್ರೇಸರರಾಗಿರುವರು. ಆ ಶಾಂಕರರಿಗಿರುವ ಭಾಗ್ಯವಿಶೇಷವು ಲೋಕದಲ್ಲಿ ಇನ್ನಾರಿಗೂ ಇರುವುದಿಲ್ಲ. ಈಗಲಾದರೋ ಈ ಸ್ಥಳದಲ್ಲಿ ನಮಗೆಲ್ಲರಿಗೂ ಆ ಭಾಗ್ಯವು ಪ್ರಾಪ್ತವಾಗಿರುವುದು. ॥೧೨॥

ನನಗೆ ಶಿವಭಕ್ತರ ಸಹವಾಸವನ್ನು ಮಾಡಬೇಕೆಂಬ ಅಭಿಲಾಷೆಯು ಉತ್ಪನ್ನವಾಗಿತ್ತು. ಅದರಂತೆ ನಿಮ್ಮ ಆಗಮನದಿಂದ ಆ ಮನೋರಥವು ಈಗ ಈಡೇರಿತು. ॥೧೩॥

ಈ ಜನ್ಮದಲ್ಲಿಯೂ ಜನ್ಮಾಂತರಗಳಲ್ಲಿಯೂ ಸಂಪಾದಿಸಿರುವ ಪುಣ್ಯಕರ್ಮವಿಶೇಷಗಳಿಂದಲೇ ಶಂಭುಪೂಜಕರ ಸಮಾಗಮವು ಉಂಟಾಗುವುದೆಂಬುದನ್ನು ನಾನು ಹಿಂದೆ ವಸಿಷ್ಠಾದಿಮಹರ್ಷಿಗಳ ವಾಕ್ಯದಿಂದ ಕೇಳಿರುವೆನು. ॥೧೪॥

ಅನೇಕವಿಧವಾದ ತಪೋನುಷ್ಠಾನಗಳಿಂದ ನಿಮ್ಮಲ್ಲಿ ಶಿವಪೂಜಕ ಲಕ್ಷಣವು ಸ್ಪಷ್ಟವಾಗಿ ಕಾಣುತ್ತಿರುವುದು. ಆ ಸಾಧನವಿಶೇಷಗಳು ಕೋಟ್ಯಂತರ ಪುಣ್ಯಕರ್ಮಗಳಿಂದ ಸಂಪಾದಿಸಲ್ಪಟ್ಟುವುಗಳಲ್ಲವೇ. ॥೧೫॥

ಭಸ್ಮಲೇಪನವೂ ತ್ರಿಪುಂಡ್ರರುದ್ರಾಕ್ಷಿಗಳ ಧಾರಣೆಯೂ, ಶಿವಲಿಂಗಾರ್ಚನೆಯೂ ತಪಸ್ಸಿನ ಶ್ರೇಷ್ಠವಾದ ಫಲಗಳಾಗಿರುತ್ತವೆ. ॥೧೬॥

ಯತ್ರ ಶಾಂಭವಪಾದಾಬ್ಜರಜೋಲೇಶಃ ಪತಿಷ್ಯತಿ ।
ತತ್ತಾವದುತ್ತಮಂ ತೀರ್ಥಂ ತತ್ರ ಶಂಕರಸಂನಿಧಿಃ ॥೧೭॥

ತತ್ರೈವ ಧರ್ಮಾಃ ಸರ್ವೇಽಪಿ ಸರ್ವಾಭೀಷ್ಟಫಲಪ್ರದಾಃ ।
ಶಾಂಭವಾನಾಂ ಸನ್ನಿಧಾನೇ ಕೃತಂ ಪುಣ್ಯಂ ತದಕ್ಷಯಂ ॥೧೮॥

ನ ಯತ್ರ ಪಾಪಸಂಬಂಧಃ ಸರ್ವಸಂಪತ್ಸಮಾಗಮಃ ।
ತತ್ರ ಶಾಂಭವಸಂಗಶ್ಚೇತ್ಕಿಮಿಷ್ಟಂ ನ ಹಿ ಸಿದ್ಧ್ಯತಿ ॥೧೯॥

ದೂರಾದ್ದೃಷ್ಟ್ವಾ ಶಾಂಭವಾನಾಂ ಪಾದಾಂಬುಜಮಜಾದಯಃ ।
ಪ್ರಣಮಂತಿ ಪ್ರಸ್ತುವಂತಿ ಪ್ರಾರ್ಥಯಂತಿ ತದಾಗಮಂ ॥೨೦॥

ಆಗತೇ ಶಾಂಭವೇ ಗೇಹಂ ನೃತ್ಯಂತಿ ಪಿತರಃ ಸುರಾಃ ।
ತದಾಸನಪ್ರದಾನೇನ ಸ್ವರ್ಗಲೋಕಪತಿರ್ಭವೇತ್ ॥೨೧॥

ಯಾವ ಸ್ಥಳದಲ್ಲಿ ಶಾಂಕರರ ಅಡಿದಾವರೆಗಳ ಧೂಳಿಯು ಬೀಳುವುದೋ, ಅದೇ ಶ್ರೇಷ್ಠವಾದ ಕ್ಷೇತ್ರವೆನಿಸುವುದು. ಅದೇ ಈಶ್ವರನ ಸನ್ನಿಧಿ. ॥೧೭॥

ಆ ಸ್ಥಳದಲ್ಲಿ ಆಚರಿಸಿದ ಪುಣ್ಯಕರ್ಮಗಳೇ ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವುಗಳಾಗುತ್ತವೆ. ಶಿವಭಕ್ತರ ಸನ್ನಿಧಿಯಲ್ಲಿ ಆಚರಿಸಿದ ಪುಣ್ಯಕರ್ಮವು ಅಕ್ಷಯವಾದದ್ದು. ॥೧೮॥

ಪಾಪಸಂಪರ್ಕವಿಲ್ಲದೆ ಐಶ್ವರ್ಯಪ್ರದವಾಗಿರುವ ಪುಣ್ಯಸ್ಥಳದಲ್ಲಿ ಈಶ್ವರಾರಾಧಕರ ಸಹವಾಸವು ದೊರೆತರೆ ಇಷ್ಟಾರ್ಥಗಳು ಸಿದ್ಧಿಸುವುದರಲ್ಲಿ ಆಶ್ಚರ್ಯವೇನು ? ॥೧೯॥

ಶಿವಭಕ್ತರ ಅಡಿದಾವರೆಗಳನ್ನು ದೂರದಿಂದಲೇ ನೋಡಿ ಬ್ರಹ್ಮಾದಿ ದೇವತೆಗಳು ಸಹ ಅವರನ್ನು ನಮಸ್ಕರಿಸುವರು, ಸ್ತೋತ್ರಗೈಯ್ಯುವರು, ಮತ್ತು ಅವರ ಸಮಾಗಮವನ್ನು ಕೋರುವರು. ॥೨೦॥

ಶಂಕರಭಕ್ತನು ಮನೆಗೆ ಬಂದರೆ ಪಿತೃಗಳೂ ಮತ್ತು ದೇವತೆಗಳೂ ಸಂತೋಷದಿಂದ ನರ್ತನಮಾಡುವರು. ಶಿವಪೂಜಕರಿಗೆ ಮರ್ಯಾದೆಯಿಂದ ಆಸನವನ್ನು ಕೊಟ್ಟವರು ಸ್ವರ್ಗಲೋಕಕ್ಕೆ ಒಡೆಯರಾಗುವರು. ॥೨೧॥

ಭಕ್ತ್ಯಾ ತಚ್ಚರಣಾಂಭೋಜಂ ಪ್ರಕ್ಷಾಲ್ಯ ವಿಮಲೈರ್ಜಲೈಃ ।
ಪೂತೋ ಭವತಿ ಪುಣ್ಯಾತ್ಮಾ ನಿವೃತ್ತಃ ಪಾಪಸಂಘುತಃ ॥೨೨॥

ಯೋ ಭಾವಚರಣಾಂಭೋಜಂ ಶಿರಸಾ ಪ್ರಣಮೇನ್ಮುಹುಃ ।
ತಂ ನಮಂತಿ ಸುರಾಃ ಸರ್ವೇ ಧನ್ಯೋಽಯಮಿತಿ ವಾದಿನಃ ॥೨೩॥

ತ ಏವ ಧನ್ಯಾ ಪುಣ್ಯಾಶ್ಚ ಯೇ ಶಾಂಭವಪದಾರ್ಚಕಾಃ ।
ತತ್ಪಾದಜಲಪಾನೇನ ಪೀಯೂಷಂ ಪೀತಮೇವ ಹಿ ॥೨೪॥

ಶಿವಲಿಂಗಾಂಕಿತಂ ದೃಷ್ಟ್ವಾ ನ ನಮೇದ್ಯಃ ಪ್ರಮಾದತಃ ।
ಸ ತಾವತ್ಪಾತಕೀ ಲೋಕೇ ವೇದಬಾಹ್ಯಃ ಸ ಏವ ಹಿ ॥೨೫॥

ಶಿವಬುದ್ಧ್ಯಾ ಪ್ರಪಶ್ಯಂತಿ ಶೈವಂ ಶಿವಪರಾಯಣಾಃ ।
ಶಿವಾಲಯಃ ಶೈವ ಏವ ಕಿಂ ಪುನಃ ಶಿವ ಏವ ಸಃ ॥೨೬॥

ಪುಣ್ಯಾತ್ಮನಾದವನು ಭಕ್ತಿಯಿಂದ ಕೂಡಿದವನಾಗಿ ಶಿವಭಕ್ತನ ಪಾದಾರವಿಂದಗಳನ್ನು ಪರಿಶುದ್ಧವಾದ ನೀರಿನಿಂದ ತೊಳೆದು ಪಾಪರಾಶಿಗಳಿಂದ ರಹಿತನಾಗಿ ಪವಿತ್ರನೆನಿಸುವನು. ॥೨೨॥

ಯಾವ ಮನುಜನು ಶಿವಸೇವಕನ ಚರಣಕಮಲಕ್ಕೆ ತಲೆಬಾಗಿಸಿ ಪುನಃ ಪುನಃ ನಮಸ್ಕರಿಸುವನೋ ಅವನನ್ನು ಸಕಲ ದೇವತೆಗಳು, "ಧನ್ಯ, ಧನ್ಯ" ಎಂದು ಹೊಗಳುವರು. ॥೨೩॥

ಯಾರು ಶಿವಭಕ್ತರ ಪಾದಪೂಜೆಯನ್ನು ಮಾಡುವರೋ ಅವರೇ ಕೃತಕೃತ್ಯರೂ ಮತ್ತು ಪುಣ್ಯಶಾಲಿಗಳೂ ಆಗಿರುವರು. ಅವರ ಪಾದಜಲವನ್ನು ಪಾನ ಮಾಡುವುದರಿಂದ ಅಮೃತವನ್ನೇ ಪಾನಮಾಡಿದಂತಾಗುವುದು. ॥೨೪॥

ಯಾವನು ಶಿವಲಿಂಗಪೂಜಕನನ್ನು ಅಹಂಕಾರದಿಂದ ನಮಸ್ಕರಿಸುವುದಿಲ್ಲವೋ, ಅವನು ಲೋಕದಲ್ಲಿ ಪಾಪಿಯೆನಿಸುವನು. ಮತ್ತು ಅವನೇ ವೇದಬಾಹಿರನು. ॥೨೫॥

ಶಿವಧ್ಯಾನದಲ್ಲಿ ಆಸಕ್ತಿಯುಳ್ಳವರು, ಈಶ್ವರ ಭಕ್ತನನ್ನು ಶಿವನೆಂಬ ಭಾವನೆಯಿಂದಲೇ ನೋಡುತ್ತಾರೆ. ಶಂಕರ ಭಕ್ತನೇ ಶಿವಾಲಯ. ಇಷ್ಟೇಕೆ? ಅವನೇ ಶಿವಸ್ವರೂಪನು. ॥೨೬॥

ಅನಂತಜನ್ಮಪುಣ್ಯಾನಾಂ ಫಲಂ ಶೈವತ್ವಮೀರಿತಂ ।
ಶೈವಂ ವಿಲೋಕ್ಯ ಪುಣ್ಯೇನ ಕಃ ಸುಖಂ ನಾಪ್ನುಯಾದ್ಭುವಿ ॥೨೭॥

ಯೇ ಪೂಜಯಂತಿ ಮನುಜಾಃ ಶೈವಪೂಜಕಪೂಜಕಾನ್ ।
ತೇ ಪೂಜ್ಯಾಃ ಸರ್ವದೇವಾನಾಂ ಮುನೀನಾಂ ಚ ವಿಶೇಷತಃ ॥೨೮॥

ಅರ್ಘ್ಯಪಾದ್ಯಾದಿಕಂ ಯಚ್ಚ ಸಂಪಾದಿತಮಿಹಾಧುನಾ ।
ತತ್ಸ್ವೀಕೃತ್ಯ ಕೃತಾರ್ಥಂ ಮಾಂ ಕುರ್ವಂತು ಶಿವತತ್ಪರಾಃ ॥೨೯॥

ಅದ್ಯ ಧನ್ಯೋಽಸ್ಮಿ ಧನ್ಯೋಽಸ್ಮಿ ಕೃತಾರ್ಥೋಽಸ್ಮಿ ಶಿವಾರ್ಚಕಾಃ ।
ಶಿವರೂಪಾಣಿ ಭವತಾಂ ಶರೀರಾಣೀತಿ ಮನ್ಮಹೇ ॥೩೦॥

ಏತಾನಿ ಶಿವಲಿಂಗಾನಿ ಶರೀರಾಣಿ ಮುನೀಶ್ವರಾಃ ।
ಉತ್ತಮಾನ್ಯೇವ ಲಿಂಗಾನಿ ಶಿವೋ ಯತ್ರಾಧಿತಿಷ್ಠತಿ ॥೩೧॥

ಶಿವನಿಗೆ ಸೇವಕನಾಗಿರುವಿಕೆಯು, ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯಗಳ ಫಲವೆಂಬುದಾಗಿ ಹೇಳಲ್ಪಟ್ಟಿರುತ್ತದೆ. ಅಂತಹ ಪುಣ್ಯಶಾಲಿಯನ್ನು ಪೂರ್ವಜನ್ಮದ ಸುಕೃತದಿಂದ ನೋಡಿ, ಲೋಕದಲ್ಲಿ ಯಾವನು ತಾನೇ ಸುಖವನ್ನು ಪಡೆಯಲಾರನು? ॥೨೭॥

ಯಾವ ಮನುಷ್ಯರು ಈಶ್ವರಭಕ್ತಪೂಜಕನ, ಪೂಜಕರನ್ನು ಪೂಜಿಸುವರೋ, ಅವರು ಸಕಲ ದೇವತೆಗಳಿಗೂ ಪೂಜ್ಯರಾಗುವರು. ವಿಶೇಷವಾಗಿ ಮುನಿಗಳಿಗೂ ಅವರೇ ಪೂಜ್ಯರು. ॥೨೮॥

ಶಿವಧ್ಯಾನದಲ್ಲಿ ಆಸಕ್ತರಾದ ನೀವು ಈಗ ಇಲ್ಲಿ ನಾನು ಕೊಡುವ ಅರ್ಘ್ಯಪಾದ್ಯಾದಿಸತ್ಕಾರಗಳನ್ನು ಸ್ವೀಕರಿಸಿ ನನ್ನನ್ನು ಕೃತಕೃತ್ಯನನ್ನಾಗಿ ಮಾಡಿರಿ. ॥೨೯॥

ಓ ಶಿವಪೂಜಕರಾದ ಮುನಿಗಳೇ, ಇಂದು ನಾನು ಧನ್ಯನಾಗಿರುವೆನು. ಮತ್ತು ಕೃತಕೃತ್ಯನಾಗಿರುವೆನು. ನಿಮ್ಮ ದೇಹಗಳನ್ನೇ ನಾನು ಶಿವನವಿಗ್ರಹಗಳನ್ನಾಗಿ ಭಾವಿಸುತ್ತೇನೆ. ॥೩೦॥

ಮುನಿಪುಂಗವರೇ, ನಿಮ್ಮ ಈ ಶರೀರಗಳು ಶಿವಲಿಂಗಗಳೇ ಆಗಿರುತ್ತವೆ. ನಿಮ್ಮ ಹೃದಯದಲ್ಲಿ ಶಿವನು ವಾಸವಾಗಿರುವುದರಿಂದ ಪವಿತ್ರಗಳೇ ಆಗಿರುವುವು. ॥೩೧॥

ಶಿವಾಭಿಮಾನಲಿಂಗಾನಿ ಶೈವಗಾತ್ರಾಣಿ ತಾನಿ ಮೇ ।
ಪೂಜನೀಯಾನಿ ಯತ್ನೇನ ಬಿಲ್ವಪತ್ರಾದಿಭಿರ್ಮುದಾ ॥೩೨॥

ಇತ್ಯುಕ್ತ್ವಾ ತಾನಿ ಲಿಂಗಾನಿ ಪೂಜಯಿತ್ವಾ ಮುಹುರ್ಮುಹುಃ ।
ಪ್ರಣತಃ ಪ್ರಾಂಜಲಿಃ ಸೂತಃ ಪ್ರಹೃಷ್ಟಃ ಸ್ಥಿರಮಾನಸಃ ॥೩೩॥

ತಂ ತಾದೃಶಂ ವಿಲೋಕ್ಯೈವ ಸೂತಂ ಶಾಂಭವಪುಂಗವಾಃ ।
ಆನಂದಾಶ್ರುಸಮಾಕೀರ್ಣಾಃ ಕೃತಾಂಜಲಿಪುಟಾ ಜಗುಃ ॥೩೪॥

॥ ಋಷಯ ಊಚುಃ ॥

ಸೂತ ಧನ್ಯೋಽಸಿ ಧನ್ಯೋಽಸಿ ಶಿವಭಕ್ತಿರಿಯಂ ತ್ವಯಾ ।
ಕಥಂ ಪ್ರಾಪ್ತಾ ಪುರಾ ಚೀರ್ಣಂ ಕಿಂ ಕಿಂ ಪುಣ್ಯಮನಶ್ವರಂ ॥೩೫॥

ಶಿವನಿಗೆ ಪ್ರೀತಿಕರವಾಗಿರುವ, ಭಸ್ಮಲೇಪನ ತ್ರಿಪುಂಡ್ರಾದಿಧಾರಣೆ ಮೊದಲಾದ ಚಿಹ್ನೆಗಳಿಂದ ಶೋಭಿಸುತ್ತಲಿರುವ, ಈಶ್ವರಾರ್ಚಕವಾದ ನಿಮ್ಮ ಶರೀರಗಳು, ನನಗೆ ಸಂತೋಷಪುರಃಸರವಾಗಿ ಬಿಲ್ವಪತ್ರೆ ಮೊದಲಾದ ಪೂಜಾಸಾಮಗ್ರಿಗಳಿಂದ ಪೂಜಿಸಲು ಯೋಗ್ಯವಾದುವುಗಳಾಗಿರುತ್ತವೆ. ॥೩೨॥

ಹೀಗೆಂದು ಹೇಳಿ ಸೂತಮಹರ್ಷಿಯು, ಆ ಲಿಂಗಗಳನ್ನು (ಶಿವಭಕ್ತರ ಶರೀರಗಳನ್ನು) ಪೂಜಿಸಿ ಸ್ಥಿರವಾದ ಮನಸ್ಸುಳ್ಳವನಾಗಿಯೂ, ಆನಂದತುಂದಿಲನಾಗಿಯೂ, ಅಂಜಲಿಬದ್ಧನಾಗಿಯೂ ನಿಂತು ಆ ಮುನಿವರ್ಯರಿಗೆ ಪುನಃ ಪುನಃ ನಮಸ್ಕರಿಸಿದನು. ॥೩೩॥

ಹಾಗೆ ತಮ್ಮನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಪೂಜಿಸಿ ನಮಸ್ಕರಿಸಿದ ಆ ಸೂತಮಹರ್ಷಿಯನ್ನು ನೋಡಿ ಭಕ್ತಾಗ್ರೇಸರರಾದ ಆ ಶೌನಕಾದಿಮುನಿಗಳು, ಆನಂದಬಾಷ್ಪಗಳಿಂದೊಡಗೂಡಿದವರಾಗಿ ಕೈಜೋಡಿಸಿಕೊಂಡು ಈರೀತಿ ಪ್ರಶಂಸಿಸಿದರು. ॥೩೪॥

ಸೂತಮಹರ್ಷಿಯೇ, ನೀನೇ ಧನ್ಯನು. ಇಂತಹ ದೃಢವಾದ ಈಶ್ವರಭಕ್ತಿಯನ್ನು ನೀನು ಯಾವ ಬಗೆಯಿಂದ ಪಡೆದೆ? ಪೂರ್ವಜನ್ಮದಲ್ಲಿ ನೀನುಯಾವ ಯಾವ ಪುಣ್ಯಕರ್ಮಗಳನ್ನು ಆಚರಿಸಿದೆ? ॥೩೫॥

ಕೇನ ಪುಣ್ಯಪ್ರಭಾವೇನ ಭವತಾ ಮಂಗಳಾವಹಂ ।
ಮಂಗಳಾಪತಿಪಾದಾಬ್ಜಸ್ಮರಣಂ ಕ್ರಿಯತೇ ವದ ॥೩೬॥

॥ ಸೂತ ಉವಾಚ ॥

ಪುರಾ ವ್ಯಾಸಃ ಸಮಾಗತ್ಯ ಕೇದಾರೇಶ್ವರಸನ್ನಿಧೌ ।
ಕೇದಾರೇಶ್ವರಮಭ್ಯರ್ಚ್ಯ ಸ್ಥಿತಃ ಸಂತುಷ್ಟಮಾನಸಃ ॥೩೭॥

ತದಾ ಶಿವಾರ್ಚನಪರಂ ವ್ಯಾಸಂ ಶಿಷ್ಯಗಣಾವೃತಂ ।
ಪ್ರಣಮ್ಯೋಕ್ತಂ ಶಿವಜ್ಞಾನಂ ಕಥಂ ಜಾತಂ ತವೇತ್ಯಪಿ ॥೩೮॥

ಸ ಶಿವಾರಾಧನಾಸಕ್ತಃ ಶಿವಪಂಚಾಕ್ಷರಂ ಸ್ಮರನ್ ।
ಸ್ಪೃಷ್ಟ್ವಾ ವಿಭೂತಿಂ ಲಿಂಗಂ ಚ ಕೇದಾರೇಶಮುವಾಚ ಮಾಂ ॥೩೯॥

ಯಾವ ಪುಣ್ಯಕರ್ಮಾನುಷ್ಠಾನದ ಮಹಿಮೆಯಿಂದ ನೀನು ಸೌಭಾಗ್ಯಕರವಾದ ಅಂಬಿಕಾಪತಿಯೆನಿಸಿದ ಪರಮೇಶ್ವರನ ಅಡಿದಾವರೆಗಳನ್ನು ಸ್ಮರಿಸುತ್ತಿರುವೆ? ಅದನ್ನು ನಮಗೆ ಹೇಳುವವನಾಗು. ಎಂದು ಋಷಿಗಳು ಕೇಳಲು ||೩೬||

ಆಗ ಸೂತನು ಎಲೈ ಮುನಿವರ್ಯರೇ, ಹಿಂದೆ ಒಂದಾನೊಂದು ಕಾಲದಲ್ಲಿ ವ್ಯಾಸಮಹರ್ಷಿಯು ಕೇದಾರೇಶ್ವರನ ಸನ್ನಿಧಿಯನ್ನು ಹೊಂದಿ, ಅಲ್ಲಿ ಕೇದಾರೇಶ್ವರನನ್ನು ಪೂಜಿಸಿ, ಸಂತುಷ್ಟಾಂತರಂಗನಾಗಿದ್ದನು. ||೩೭||

ಆಗ ನಾನು ಶಿವಪೂಜೆಯಲ್ಲಿ ಆಸಕ್ತನಾಗಿ ಶಿಷ್ಯವರ್ಗದಿಂದ ಕೂಡಿಕೊಂಡಿದ್ದ ಆ ವ್ಯಾಸಮಹರ್ಷಿಯನ್ನು ವಂದಿಸಿ, ಹೀಗೆ ಶಿವವಿಷಯಕವಾದ ಭಕ್ತಿಯನ್ನು ಸಂಪಾದಿಸಿದ ಬಗೆ ಹೇಗೆ ಎಂದು ಕೇಳಿದೆನು. ||೩೮||

ಆಗ ಶಿವಪೂಜಾತತ್ಪರನಾದ ವ್ಯಾಸಮಹರ್ಷಿಯು ಶಿವಪಂಚಾಕ್ಷರಮಂತ್ರವನ್ನುಚ್ಚರಿಸುತ್ತಾ, ವಿಭೂತಿಯನ್ನೂ, ಲಿಂಗವನ್ನೂ ಮತ್ತು ಕೇದಾರೇಶ್ವರನನ್ನೂ ಸ್ಪರ್ಶಿಸಿ, ನನ್ನನ್ನು ಕುರಿತು ಹೀಗೆ ಉಪದೇಶಿಸಿದನು. ||೩೯||

॥ ವ್ಯಾಸ ಉವಾಚ ॥

ಸೂತಾಧುನಾ ತತ್ತ್ವಮೇಕಂ ವಕ್ಷ್ಯೇ ಶೈವಂ ಸನಾತನಂ ।
ರಹಸ್ಯಂ ಪರಮಂ ಗುಹ್ಯಮನಾಖ್ಯೇಯಂ ವಿಚಕ್ಷಣೈಃ ॥೪೦॥

ಪಶ್ಯತ್ಸು ಶೈವವರ್ಯೇಷು ಸರ್ವೇಷ್ವೇತೇಷು ಸಾದರಂ ।
ರಹಸ್ಯಮುಚ್ಯತೇ ಕಿಂಚಿತ್ತ್ವಂ ಭಕ್ತೋಽಸಿ ಮಮೇತ್ಯಪಿ ॥೪೧॥

ಯದ್ರಹಸ್ಯಂ ಮಯಾ ನೋಕ್ತಂ ತದಿದಾನೀಂ ಮಯೋಚ್ಯತೇ ।
ಗೋಪನೀಯಂ ಪ್ರಯತ್ನೇನ ಶಿವಭಕ್ತಿಪುರಃಸರಂ ॥೪೨॥

ಶಿವಭಕ್ತಾಯ ವಕ್ತವ್ಯಮಾತುರಾಯ ವಿಶೇಷತಃ ।
ವಿಲೋಕ್ಯ ಸರ್ವತೋ ದಿಕ್ಷು ನ ಯತ್ರ ಸ್ವವಿರೋಧಿನಃ ॥೪೩॥

ಅಶಾಂಭವಾಯ ಸಹಸಾ ನ ವಕ್ತವ್ಯಮಿದಂ ತ್ವಯಾ ।
ಅಪ್ರಾಪ್ತಾಯ ನ ವಕ್ತವ್ಯಂ ರಹಸ್ಯಮಿತಿ ನಿಶ್ಚಯಃ ॥೪೪॥

ಎಲೈ ಸೂತಮಹರ್ಷಿಯೇ, ಈಗ ಪುರಾತನವೂ, ಸ್ಥೂಲಬುದ್ಧಿಯಿಂದ ತಿಳಿಯಲಸಾಧ್ಯವೂ, ಅತ್ಯಂತ ಗೋಪ್ಯವೂ, ಮತ್ತು ಪಂಡಿತರಿಂದಲೂ ಹೇಳಲ ಸಾಧ್ಯವಾದ ಈಶ್ವರನ ಮುಖ್ಯತತ್ತ್ವಗಳನ್ನು ನಿನಗೆ ಈಗ ಹೇಳುವೆನು. ॥೪೦॥

ಇಲ್ಲಿರುವ ಸಕಲ ಶಿವಭಕ್ತಾಗ್ರೇಸರರೂ ಆದರಭಾವನೆಯಿಂದ ಇದನ್ನೇ ಕೇಳಬಯಸುತ್ತಿರುವರು. ಅದರಂತೆ ಮುಖ್ಯವಾಗಿ ನೀನೂ ಈಗ ಇಲ್ಲಿ ತತ್ವ ಶುಶ್ರೂಷುವಾಗಿರುವುದರಿಂದ ಈಗಲೇ ನಿನಗೆ ಅದನ್ನು ತಿಳಿಯಪಡಿಸುತ್ತೇನೆ.॥೪೧॥

ಈ ರಹಸ್ಯವನ್ನು ಇದುವರೆಗೂ ನಾನು ಯಾರಿಗೂ ಹೇಳಿರುವುದಿಲ್ಲ. ಅದನ್ನು ಈಗ ನಿನಗೆ ತಿಳಿಸುವೆನು. ಆದುದರಿಂದ ಶಿವನಲ್ಲಿ ಭಕ್ತಿಯನ್ನಿಟ್ಟು ಈ ರಹಸ್ಯ ವನ್ನು ನೀನು ಜಾಗರೂಕತೆಯಿಂದ ಗೋಪ್ಯವಾಗಿಟ್ಟರಬೇಕು. ॥೪೨॥

ಈ ರಹಸ್ಯವನ್ನು ಮುಖ್ಯವಾಗಿ ತಿಳಿದುಕೊಳ್ಳಬೇಕೆಂಬ ಉತ್ಕಟೇಚ್ಛೆಯುಳ್ಳ ವರಿಗೆ ಮಾತ್ರ ಹೇಳಬೇಕು. ಎಲ್ಲಾ ದಿಕ್ಕುಗಳನ್ನೂ ಪರೀಕ್ಷಿಸಿ, ನೋಡಿ ಯಾವ ಸ್ಥಳದಲ್ಲಿ ಶಿವಭಕ್ತರ ದ್ವೇಷಿಗಳು ಇರುವುದಿಲ್ಲವೋ ಆ ಸ್ಥಳದಲ್ಲಿ ಈ ರಹಸ್ಯವನ್ನು ಉಪದೇಶಿಸಬೇಕು. ॥೪೩॥

ನೀನು ಈ ರಹಸ್ಯವನ್ನು ಶಿವಭಕ್ತನಲ್ಲದಿರುವವನಿಗೆ ಆಕಸ್ಮಿಕವಾಗಿಯೂ

ಶಪಥಃ ಕ್ರಿಯತಾಮತ್ರ ಕೇದಾರೇಶ್ವರಸನ್ನಿಧೌ ।
ಅಶಾಂಭವಾಯ ಸಹಸಾ ನ ವದಾಮೀತಿ ನಿಶ್ಚಯಾತ್ ॥೪೫॥

ನಿಧಾನಕುಂಭಂ ಚೋರಾಯ ದುಷ್ಟಾಯಾಹಿತಮಾನಸಃ ।
ಕಃ ಪ್ರಯಚ್ಛತಿ ಯತ್ನೇನ ತಂ ಸಂಪಾದ್ಯ ಪ್ರಯತ್ನತಃ ॥೪೬॥

ಅನ್ಯೇ ನಿಧಾನಕಲಶಾಃ ದೇಯಾಃ ಸಂತು ಕಥಂಚನ ।
ಅಯಂ ನಿಧಾನಕಲಶಃ ಸರ್ವಥಾ ದೇಯ ಏವ ನ ॥೪೭॥

ಶೃಣ್ವಂತ್ವದ್ಯ ಭವಂತೋಽಪಿ ಮುನಯಃ ಶಿವತತ್ಪರಾಃ ।
ಪ್ರಸಂಗಾದಧುನಾ ಶೈವಂ ರಹಸ್ಯಂ ರಮ್ಯಮುಚ್ಯತೇ ॥೪೮॥

ಇದಂ ಭವದ್ಭಿರ್ಯತ್ನೇನ ಗೋಪನೀಯಂ ಸಮಾಹಿತೈಃ ।
ರಹಸ್ಯಾನಾಮಿದಂ ತಾವದ್ರಹಸ್ಯಂ ಶೈವಮುತ್ತಮಂ ॥೪೯॥

ಹೇಳಬೇಡ. ಆದಲ್ಲದೆ ಇದನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿಂದ ನಿನ್ನ ಸಮೀಪಕ್ಕೆ ಬರದಿರುವವನಿಗೆ ಎಂದೂ ಹೇಳಬೇಡ. ||೪೪||

ಈಶ್ವರಭಕ್ತರಲ್ಲದವರಿಗೆ ಈ ರಹಸ್ಯವನ್ನು ಉಪದೇಶಿಸುವುದಿಲ್ಲವೆಂದು ಈ ಕೇದಾರೇಶ್ವರನ ಸನ್ನಿಧಿಯಲ್ಲಿ ಪ್ರತಿಜ್ಞೆಮಾಡು. ಏಕೆಂದರೆ, ||೪೫||

ಮನುಷ್ಯನು ಸ್ಥಿರಮನಸ್ಸುಳ್ಳವನಾಗಿದ್ದಾಗ ಯಾವನು ತಾನೇ ಹಣದ ಗಡಿಗೆಯನ್ನು ದುಷ್ಟನಾದ ಕಳ್ಳನಿಗೆ ಕೊಡಬಲ್ಲನು ? ||೪೬||

ಇತರ ದ್ರವ್ಯದ ಕಲಶಗಳನ್ನು ಒಂದುವೇಳೆ ದುಷ್ಟನಿಗೆ ಕೊಟ್ಟರೂ ಕೊಡಬಹುದು. ಆದರೆ ಈ ಶಿವರಹಸ್ಯವೆಂಬ ನಿಧಿಯ ಕಲಶವನ್ನು ಎಂದಿಗೂ ಕೊಡತಕ್ಕುದ್ದಲ್ಲ. ||೪೭||

ಎಲೈ ಮುನಿಗಳೇ, ಈಗ ಪ್ರಾಸಂಗಿಕವಾಗಿ ಕಿವಿಗಳಿಗೆ ಇಂಪಾದ ಶಿವರಹಸ್ಯವನ್ನು ಹೇಳುವೆನು. ಶಿವಧ್ಯಾನಾಸಕ್ತರಾದ ನೀವೂ ಇದನ್ನು ಲಾಲಿಸುವವರಾಗಿರಿ. ||೪೮||

ನೀವು ಸ್ಥಿರಮತಿಯುಳ್ಳವರಾಗಿ ಪ್ರಯತ್ನ ಪುರಃಸರವಾಗಿ ರಹಸ್ಯವಾದ ಈ ವಿಷಯವನ್ನು ಗುಪ್ತವಾಗಿರಿಸಿರಿ. ಈ ಶಿವರಹಸ್ಯವು ಗೋಪ್ಯವಿಷಯಗಳಲ್ಲಿ ಅತ್ಯಂತ ಶ್ರೇಷ್ಠವಾದುದಾಗಿರುತ್ತದೆ. ||೪೯||

ಯಥಾ ರತ್ನಾನಿ ದಿವ್ಯಾನಿ ಗೋಪನೀಯಾನಿ ಯತ್ನತಃ ।
ತಥಾ ರಹಸ್ಯಮಪ್ಯೇತದ್ಗೋಪನೀಯಂ ವಿಶೇಷತಃ ॥೫೦॥

ರಹಸ್ಯರತ್ನಮಿತ್ಯೇತತ್ಪ್ರಖ್ಯಾತಂ ವೇದಸಂಶ್ರುತಂ ।
ಇದಂ ರಹಸ್ಯಂ ವೇದಾಂತಂ ಗೋಪನೀಯಂ ಮಹತ್ತರಂ ॥೫೧॥

ಮಯಾಪಿ ಶ್ರದ್ಧಯಾ ತಾವದ್ಭವತ್ಸು ದಯಯಾ ಪರಂ ।
ರಹಸ್ಯಮುಚ್ಯತೇ ಶೈವಮವಕ್ತವ್ಯಮಪಿ ಧ್ರುವಂ ॥೫೨॥

ರತ್ನಾನ್ಯನಂತದಿವ್ಯಾನಿ ಪ್ರದೇಯಾನಿ ಕದಾಚನ ।
ಇದಂ ರಹಸ್ಯಂ ಪರಮಂ ನ ದೇಯಂ ಶಿವತತ್ಪರಾಃ ॥೫೩॥

ಪ್ರಾಣರಕ್ಷಾಮಣಿತ್ವೇನ ಪ್ರಸಿದ್ಧಮಿದಮಾದರಾತ್ ।
ಅತ ಏವ ಭವದ್ಭಿಸ್ತು ಗೋಪನೀಯಂ ವಿಶೇಷತಃ ॥೫೪॥

ಲೋಕದಲ್ಲಿ ಅಮೂಲ್ಯವಾದ ರತ್ನಗಳನ್ನು ಹೇಗೆ ಜಾಗರೂಕತೆಯಿಂದ ಗುಪ್ತವಾಗಿರಿಸಬೇಕಾದುದೋ, ಅದೇರೀತಿ ಈ ರಹಸ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡಿರಬೇಕು. ॥೫೦॥

ವೇದಗಳಿಂದ ತಿಳಿದುಬರುವ ಈ ವಿಷಯವು ರಹಸ್ಯಗಳಲ್ಲೆಲ್ಲಾ ಶ್ರೇಷ್ಠವಾದುದೆಂದು ಪ್ರಸಿದ್ಧಿಯನ್ನು ಪಡೆದಿರುತ್ತದೆ. ಶ್ರೇಷ್ಠವಾದ ವೇದಾಂತವೆಂದೆನಿಸಿಕೊಂಡಿರುವ ಈ ರಹಸ್ಯವನ್ನು ರಕ್ಷಿಸಬೇಕು. ॥೫೧॥

ಈ ಶಿವರಹಸ್ಯವು ಸುಲಭವಾಗಿ ಇತರರಿಗೆ ಹೇಳಲು ಸಾಧ್ಯವಲ್ಲವಾದರೂ, ನಿಮ್ಮಲ್ಲಿ ದಯೆದೋರಿ ಶ್ರದ್ಧೆಯಿಂದ ಹೇಳುವೆನು, ಲಾಲಿಸಿರಿ. ॥೫೨॥

ಅಮೂಲ್ಯವಾದ ರತ್ನಗಳನ್ನಾದರೂ ಒಂದಾನೊಂದು ವೇಳೆಯಲ್ಲಿ ಇತರರಿಗೆ ಕೊಡಬಹುದು. ಆದರೆ ಶ್ರೇಷ್ಠವಾದ ಈ ಶಿವರಹಸ್ಯವನ್ನು ಅನಧಿಕಾರಿಗಳಿಗೆ ಎಂದಿಗೂ ಉಪದೇಶಿಸಬಾರದು. ॥೫೩॥

ಈ ರಹಸ್ಯವು ಪ್ರಾಣವನ್ನು ಕಾಪಾಡುವ ಮಣಿಯೆಂದು ತಿಳಿಯಿರಿ. ಆದುದರಿಂದಲೇ ನೀವು ಇದನ್ನು ಮುಖ್ಯವಾಗಿ ರಕ್ಷಿಸಬೇಕು. ॥೫೪॥

ಈ ಶಿವತತ್ತ್ವವು ಅತ್ಯಂತ ರಹಸ್ಯವಾದುದೆಂದು ಶಿವನೇ ಪಾರ್ವತಿಯನ್ನು ಕುರಿತು ಹೇಳಿರುವನು. ಪಾರ್ವತಿಯು ಉತ್ತಮವಾದ ಈ ರಹಸ್ಯವನ್ನು ಭಕ್ತಿಯಿಂದ ಸದಾ ಕಾಪಾಡಿಕೊಂಡಿರುವಳು. ॥೫೫॥

ಇದಂ ರಹಸ್ಯಮಿತ್ಯುಕ್ತ್ತಂ ಶಿವೇನ ಗಿರಿಜಾಂ ಪ್ರತಿ ।
ತಯಾ ಗುಪ್ತಮಿದಂ ಪುಣ್ಯಂ ಭವಾನ್ಯಾ ಭಕ್ತಿಪೂರ್ವಕಂ ॥೫೫॥

ತಯಾ ತಾವತ್ಕುಮಾರಾಯ ಪೃಷ್ಟಯಾ ಭಕ್ತಿಪೂರ್ವಕಂ ।
ಸ್ನೇಹೇನೋಕ್ತಂ ರಹಸ್ಯಂ ಹಿ ಶೈವಂ ವೇದಾಂತಸಂಭವಂ ॥೫೬॥

ತದುಕ್ತಂ ನಂದಿಕೇಶಾಯ ಕುಮಾರೇಣ ಕದಾಚನ ।
ಪ್ರಣತಾಯ ವಿನೀತಾಯ ಕೃತಾಂಜಲಿಪುಟಾಯ ಚ ॥೫೭॥

ಇದಂ ನಾರಾಯಣಾಯೋಕ್ತಂ ನಂದಿಕೇಶೇನ ಧೀಮತಾ ।
ತತ್ಪಾದಪದ್ಮರಜಸಾ ಸಂಯುತಾಯ ಯತಾತ್ಮನೇ ॥೫೮॥

ಇದಂ ನಾರಾಯಣೇನೋಕ್ತಂ ಚತುರ್ವಕ್ತ್ರಾಯ ಧೀಮತೇ ।
ಪ್ರಣತಾಯಾತಿನಮ್ರಾಯ ಸರಸ್ವತ್ಯಾ ಸಹಾನ್ವಹಂ ॥೫೯॥

ಬ್ರಹ್ಮಣಾ ಸನಕಾದಿಭ್ಯಃ ಪ್ರೋಕ್ತಮೇತನ್ಮಹತ್ತರಂ ।
ತೈರುಕ್ತಂ ನಾರದಾಯಾದ್ಯ ಮಹ್ಯಂ ತೇನೋಕ್ತಮಾದರಾತ್ ॥೬೦॥

ಒಂದುಸಾರಿ ಮಗನಾದ ಕುಮಾರಸ್ವಾಮಿಯು ತಾಯಿಯಾದ ಗಿರಿಜೆಯನ್ನು ಕುರಿತು ಶಿವರಹಸ್ಯವನ್ನು ಹೇಳೆಂದು ಭಕ್ತಿಯಿಂದ ಬಿನ್ನವಿಸಿಕೊಳ್ಳಲು, ಗಿರಿಜೆಯು ಉಪನಿಷತ್ತಿನಿಂದ ಪ್ರತಿಪಾದ್ಯವಾದ ಈ ರಹಸ್ಯವನ್ನು ಅಕ್ಕರೆಯಿಂದ ಹೇಳಿದಳು. ॥೫೬॥

ಬಳಿಕ ಒಂದಾನೊಂದು ಕಾಲದಲ್ಲಿ ಕುಮಾರಸ್ವಾಮಿಯು, ಅದೇ ರಹಸ್ಯವನ್ನು ವಿನೀತನೂ ಅಂಜಲಿಬದ್ಧನೂ ಆದ ನಂದಿಕೇಶ್ವರನಿಗೆ ಪ್ರೀತಿಯಿಂದ ಹೇಳಿದನು.॥೫೭॥

ಜ್ಞಾನಿಯಾದ ನಂದಿಕೇಶ್ವರನು ಅದನ್ನು ಅಪೇಕ್ಷಿಸಿ ಕೇಳಿಕೊಂಡ ಜಿತೇಂದ್ರಿಯನಾದ ಶ್ರೀಮನ್ನಾರಾಯಣನಿಗೆ ತಿಳಿಸಿದನು. ॥೫೮॥

ಬಳಿಕ ನಾರಾಯಣನು ಅತ್ಯಂತ ನಮ್ರನೂ, ಪ್ರೇಯಸಿಯಾದ ಸರಸ್ವತಿಯೊಂದಿಗೆ ನಮಸ್ಕರಿಸಿದವನೂ ಆದ ಬ್ರಹ್ಮನಿಗೆ ಉಪದೇಶಿಸಿದನು. ॥೫೯॥

ಅನಂತರ ಈ ರಹಸ್ಯವನ್ನು ಬ್ರಹ್ಮನು ಸನಕಾದಿ ಮುನಿಗಳಿಗೆ ಹೇಳಿದನು. ಸನಕಾದಿಗಳು ನಾರದನಿಗೆ ಹೇಳಿದರು. ಬಳಿಕ ನಾರದನು ಅಕ್ಕರೆಯಿಂದ ನನಗೆ ತಿಳಿಸಿದನು. ॥೬೦॥

ಅಭ್ಯಾಸಾರ್ಥಮಿದಂ ತಾವತ್ತದ್ವಿಸ್ಮರಣಶಂಕಯಾ ।
ಮಯಾ ವಕ್ತುಂ ಸಮಾರಬ್ಧಂ ಭವದ್ಭ್ಯೋ ಮುನಿಪುಂಗವಾಃ ॥೬೧॥

ಅತ ಏವ ಪ್ರಯತ್ನೇನ ವಿನೀತಾಯ ಹಿತಾಯ ಚ ।
ಭವದ್ಭಿರಪಿ ವಕ್ತವ್ಯಂ ನಾನ್ಯಸ್ಮೈ ಸರ್ವಥಾ ದ್ವಿಜಾಃ ॥೬೨॥

ಇದಮಪ್ರಾರ್ಥಿತಂ ತಾವತ್ಕರ್ತವ್ಯಂ ನಾತ್ರ ಸಂಶಯಃ ।
ಇದಮೇವ ಪರಂ ಸತ್ಯಂ ಮಮೇಯಂ ಗುರುದಕ್ಷಿಣಾ ॥೬೩॥

॥ ಋಷಯ ಊಚುಃ ॥

ಯದುಕ್ತಂ ಶ್ರೀಮತಾ ಭಕ್ತ್ಯಾ ತತ್ಸರ್ವಂ ಶ್ರುತಮೇವ ಹಿ ।
ಹಿತಾಯಾಸ್ಮಭ್ಯಮಪ್ಯುಕ್ತಂ ತ್ವಯಾ ತತ್ತ್ವವಿದಾಂ ವರ ॥೬೪॥

ಯದ್ಗೋಪನೀಯಂ ದೇವಾನಾಂ ರಹಸ್ಯಂ ಶಾಂಭವಂ ಮುನೇ ।
ತದ್ಗೋಪನೀಯಮಸ್ಮಾಕಂ ರತ್ನವನ್ನಾತ್ರ ಸಂಶಯಃ ॥೬೫॥

ಮುನಿವರ್ಯರೇ, ನಾರದನ ಮೂಲಕ ತಿಳಿದ ಈ ರಹಸ್ಯವೆಲ್ಲಿ ಮರೆತು ಹೋಗುವುದೋ ಎಂಬ ಶಂಕೆಯಿಂದ ಪುನರಾವೃತ್ತಿಯಿಂದ ದೃಢಪಡಿಸಿಕೊಳ್ಳುವುದಕ್ಕೋಸ್ಕರ ಈಗ ಹೇಳಲು ಉಪಕ್ರಮಿಸಿರುವೆನು. ॥೬೧॥

ಎಲೈ ಬ್ರಾಹ್ಮಣರೇ, ಆದುದರಿಂದಲೇ ನೀವೂ ಸಹ ಜಾಗರೂಕತೆಯಿಂದ ಈ ಶಿವರಹಸ್ಯವನ್ನು ನಮ್ರನೂ, ಹಿತೈಷಿಯೂ ಆದವನಿಗೆ ಮಾತ್ರ ಉಪದೇಶಿಸಬೇಕೇ ಹೊರತು ಎಲ್ಲರಿಗೂ ತಿಳಿಯಪಡಿಸಬಾರದು. ॥೬೨॥

ನಾನಾಗಿ ಕೇಳಿಕೊಳ್ಳದೇ ಇದ್ದರೂ ನನ್ನ ಈ ಪ್ರತಿಜ್ಞೆಯನ್ನು ನೀವು ಸಾಧಿಸಬೇಕು. ಇದಲ್ಲದೆ ಈ ಕಾರ್ಯವು ನನ್ನಿಂದ ಅಭ್ಯಸಿಸಿದ ವಿದ್ಯೆಗೆ ಗುರುದಕ್ಷಿಣೆಯ ರೂಪದಲ್ಲಿರುವುದು ಎಂದು ವ್ಯಾಸಮಹರ್ಷಿಯು ಮಾತನಾಡಿದನು.

" ತಪೋಧನನಾದ ಮಹರ್ಷಿಯೇ, ನಿನ್ನ ಹಿತವಚನವು ನಮಗೆ ಅರ್ಥವಾಯಿತು. ಜ್ಞಾನಿಗಳಲ್ಲಿ ಜ್ಞಾನಿಯಾದ ವ್ಯಾಸಮಹರ್ಷಿಯೇ, ನಿನ್ನ ಈ ವಚನವು ನಮ್ಮ ಶ್ರೇಯಸ್ಸಿಗಲ್ಲವೆ ? ॥೬೪॥

ಓ ಮುನಿಯೇ, ಯಾವ ರಹಸ್ಯವು ದೇವತೆಗಳಿಗೂ ರಕ್ಷಣೀಯವಾಗಿರುವುದೋ ಅಂತಹ ಶಿವರಹಸ್ಯವು ನಮಗೆ ರತ್ನದಂತೆ ಗೋಪನೀಯವಾಗಿರುವುದರಲ್ಲಿ ಸಂಶಯವಿಲ್ಲ. ॥೬೫॥

ಇದಂ ಕಂಠಮಣಿತ್ವೇನ ರಕ್ಷಣೀಯಂ ವಿಶೇಷತಃ ।
ಅಸ್ಮಿನ್ನರ್ಥೇ ಸಂಶಯೋಽಪಿ ಶ್ರೀಮತಾ ಕಾರ್ಯ ಏವ ನ ॥೬೬॥

ಯದ್ರಹಸ್ಯಂ ತ್ವಯಾ ನೋಕ್ತಂ ಶ್ರೀಮತಾಪಿ ತ್ವಯಾ ಮುಹುಃ ।
ಪೃಷ್ಟೇನಾಪಿ ಪ್ರಯತ್ನೇನ ರಹಸ್ಯಂ ತದಿಹೋಚ್ಯತೇ ॥೬೭॥

ಇತಿ ಶ್ರುತ್ವಾ ಮುನಿವಚೋ ವ್ಯಾಸಃ ಸಂತುಷ್ಟಮಾನಸಃ ।
ರಹಸ್ಯಂ ವಕ್ತುಮುದ್ಯೋಗಂ ಚಕಾರ ಚತುರಸ್ತತಃ ॥೬೮॥

ಪ್ರಣಮ್ಯ ಶಿವಮದ್ವೈತಂ ಭಸ್ಮಧಾರಣಪೂರ್ವಕಂ ।
ಶಿವಲಿಂಗಮುಪಸ್ಪೃಶ್ಯ ಪುನರ್ನತ್ವಾ ಮಹೇಶ್ವರಂ ॥೬೯॥

ಆನಂದಾಶ್ರುಸಮಾಕೀರ್ಣಸ್ತೂರ್ಣಂ ಗದ್ಗದಯಾ ಗಿರಾ ।
ಹೃದಿ ಸಾಂಬಂ ಸ್ಮರನ್ನೇವ ಘೋರಸಂಸಾರಶಾಮಕಂ ॥೭೦॥

ಇದನ್ನು ನಾವು ಪ್ರಾಣರಕ್ಷಾಮಣಿಯನ್ನಾಗಿ ಭಾವಿಸಿ, ಅತ್ಯಂತ ಜಾಗರೂಕತೆಯಿಂದ ರಕ್ಷಿಸುತ್ತೇವೆ. ಈ ವಿಷಯದಲ್ಲಿ ತಪೋಧನನಾದ ನೀನು ಸಂಶಯಪಡಬೇಕಾದುದಿಲ್ಲ. ॥೬೬॥

ಹಿಂದೆ ಈ ಶಿವರಹಸ್ಯವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿಂದ ನಿನ್ನ ಬಳಿಗೆ ಅನೇಕರು ಬಂದು ಪುನಃ ಪುನಃ ಕೇಳಿಕೊಂಡರೂ ಸಹ ನೀನು ತಿಳಿಯಪಡಿಸಲಿಲ್ಲವಲ್ಲವೆ! ಆ ರಹಸ್ಯವನ್ನು ಈಗ ನಮಗೆ ಹೇಳಿರುವೆ." ॥೬೭॥

ಹೀಗೆಂದ ಮುನಿಗಳ ಈ ಮಾತನ್ನು ಕೇಳಿ ಸಂತುಷ್ಟನಾದ ವ್ಯಾಸನು ಬಳಿಕ ಭಸ್ಮವನ್ನು ಧರಿಸಿ ಅದ್ವಿತೀಯನಾದ ಶಿವನಿಗೆ ನಮಸ್ಕರಿಸಿ, ಶಿವಲಿಂಗವನ್ನು ಸ್ಪರ್ಶಿಸಿ, ಮತ್ತೊಮ್ಮೆ ಶಿವನನ್ನು ಸ್ತುತಿಸಿ, ಆನಂದಬಾಷ್ಪಗಳನ್ನು ಸುರಿಸುವವನಾಗಿ ಅಂಬಿಕಾಸಹಿತನಾದ ಮತ್ತು ಭಯಂಕರವಾದ ಸಂಸಾರವನ್ನು ಹೋಗಲಾಡಿಸುವ ಆ ಪರಶಿವನನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ, ಗದ್ಗದವಾದ ಧ್ವನಿಯಿಂದ ಶಿವರಹಸ್ಯವನ್ನು ಹೇಳಲುಪಕ್ರಮಿಸಿದನು. ॥೬೮-೬೯-೭೦॥

॥ ವ್ಯಾಸ ಉವಾಚ ॥

ಧನ್ಯಾ ಯೂಯಂ ನ ಸಂದೇಹೋ ಭಸ್ಮಭೂಷಿತವಿಗ್ರಹಾಃ ।
ಶಿವವಿದ್ಯಾದಾನಪಾತ್ರಂ ತ್ರಿಣೇತ್ರಪ್ರಿಯಮೀದೃಶಂ ॥೨೧॥

ಪಾತ್ರೇ ದತ್ತಾನಿ ರತ್ನಾನಿ ಧನಾನಿ ವಿವಿಧಾನಿ ಚ ।
ಸರ್ವಸೌಖ್ಯಪ್ರದಾನೀತಿ ಶ್ರುತಾನಿ ಶ್ರುತಿಭಿರ್ಮುಹುಃ ॥೨೨॥

ಶಿವವಿದ್ಯಾದಾನಪಾತ್ರಂ ದುರ್ಲಭಂ ಭುವನೇಷ್ವತಃ ।
ಲಬ್ಧೇ ಪಾತ್ರೇ ಪರಿತ್ಯಾಗಃ ಕಥಂ ಕಾರ್ಯೋ ಮುನೀಷಿಭಿಃ ॥೨೩॥

ಶಿವವಿದ್ಯಾಪ್ರದಾನೇನ ದಾತುಃ ಪಾತ್ರಸ್ಯ ಚ ದ್ವಯೋಃ ।
ತರಣಂ ತು ಭವತ್ಯೇವ ಘೋರಸಂಸಾರಸಾಗರಾತ್ ॥೨೪॥

ಎಲೈ ಋಷಿಗಳೇ, ಭಸ್ಮದಿಂದ ಅಲಂಕೃತವಾದ ದೇಹವುಳ್ಳ ನೀವೇ ಧನ್ಯರು. ಇಂತಹ ಋಷಿಸಂಘವೇ ಶಿವರಹಸ್ಯವನ್ನು ದಾನಮಾಡಲು ಯೋಗ್ಯವಾದ ಪಾತ್ರವೂ ಮತ್ತು ಈಶ್ವರನಿಗೆ ಪ್ರಿಯವಾದುದೂ ಆಗಿರುತ್ತದೆ. ॥೬೧॥

ಯೋಗ್ಯವಾದ ಪಾತ್ರದಲ್ಲಿ ದಾನಮಾಡಿದ ರತ್ನಗಳೂ ಮತ್ತುನಾನಾವಿಧವಾದ ದ್ರವ್ಯವೂ ದಾತೃವಿಗೆ ಸಕಲ ಸೌಭಾಗ್ಯಗಳನ್ನುಂಟುಮಾಡುವುವು. ಎಂಬುದನ್ನು ಅನೇಕಾವೃತ್ತಿ ವೇದಗಳ ಮೂಲಕ ತಿಳಿದುಕೊಂಡಿರುವೆನು. ॥೨೨॥

ಲೋಕದಲ್ಲಿ ಶಿವವಿದ್ಯೆಯನ್ನು ಹೊಂದಲು ಯೋಗ್ಯವಾದ ಪಾತ್ರವು ಲಭಿಸುವುದೇ ದುರ್ಲಭ. ಆದುದರಿಂದ ಯೋಗ್ಯವಾದ ಪಾತ್ರವು ಲಭಿಸಿರಲು ಜ್ಞಾನಿಗಳು ಅದನ್ನು ಹೇಗೆ ತಾನೇ ಪರಿತ್ಯಜಿಸುವರು ? ॥೨೩॥

ಶಿವವಿದ್ಯೆಯನ್ನು ದಾನಮಾಡುವುದರಿಂದ ದಾನಮಾಡುವವನಿಗೂ ಮತ್ತು ದಾನವನ್ನು ಸ್ವೀಕರಿಸುವವನಿಗೂ, ಭಯಂಕರವಾದ ಈ ಸಂಸಾರಮಹೋದಧಿಯಿಂದ ಬಿಡುಗಡೆಯಾಗುವುದು. ॥೨೪॥

ಯತ್ರಾಪಾರಹರಾಜರಾಮರಕಥಾಸಿಂಧುಃ ಸಮುಜ್ಜೃಂಭತೇ
ತತ್ರಾಂಬಾಗಣನಾಥಷಣ್ಮುಖಯುತಃ ಶಂಭುಃ ಸ್ವಯಂ ನೃತ್ಯತಿ ।
ವಿಷ್ಣುರ್ವೇತ್ರಕರಶ್ಚತುರ್ಮುಖಮುಖಾನ್ ದೂರೀಕರೋತ್ಯಾದರಾತ್ ।
ನಂದೀಶೋಗ್ರಕಟಾಕ್ಷವೀಕ್ಷಣಭಯಗ್ರಸ್ತಃ ಸಮಸ್ತಾನ್ ಸುರಾನ್ ॥೭೫॥

ಪದಾರ್ಥಮಪಿ ವಾ ಮುದಾ ಮದನಮರ್ದನಾನಂದದ
ಪ್ರಸಾದನಕಥಾಗತಂ ಕಥಮಪಿ ಶ್ರುತಂ ವಾಶ್ರುತಂ ।
ದದಾತಿ ಮುದಮಂತಕಪ್ರಣತಮಾಶು ತಾವತ್ಕರೋ
ತ್ಯಪಾರಸುಕೃತಾಂಬುಧಿಪ್ರವರಸದ್ವಿವೃದ್ಧಿಂ ಮುಹುಃ ॥೭೬॥

ಪಾಯಾತ್ಸೋಽಯಮಲೌಕಿಕಶ್ಶಿವಕಥಾಗಂಗಾತರಂಗಾಳಿನಃ
ಶ್ರೋತೄನ್ಪಾವಯತೀತಿ ನಾದ್ಭುತಮಿದಂ ತತ್ಸಂತತಿಂ ತತ್ಕುಲಂ ।
ತತ್ಪ್ರೇಷ್ಯಾನಪಿ ಪಾವಯತ್ಯನುದಿನಂ ನೂನಂ ಸಕೃದ್ವಾ ಸ್ಮೃತಃ
ಕಿಂ ವಕ್ತವ್ಯಮನುಕ್ಷಣಂ ಶ್ರುತಿಪಥಾರೂಢೋ ಮೃಡಾನೀಪತೇಃ ॥೭೭॥

ಈಶ್ವರಸಂಬಂಧವಾದ ವಿಚಾರಗಳು ಧ್ವನಿತವಾದೆಡೆಯಲ್ಲೆಲ್ಲಾ, ಶಂಕರನು ಪಾರ್ವತಿಯೊಡನೆಯೂ ಗುಹಗಣಪತಿಯರೊಡನೆಯೂ ಕೂಡಿ ನರ್ತನಮಾಡುವನು. ನಂದೀಶ್ವರನು ತನ್ನ ಉಗ್ರದೃಷ್ಟಿಯಿಂದ ವಿಷ್ಣುವಿಗೆ ಭಯವನ್ನುಂಟುಮಾಡಿ, ವಿಷ್ಣುವು ಬೆತ್ತವನ್ನು ಕೈಯ್ಯಲ್ಲಿ ಹಿಡಿದು, ಶಂಕರನ ನಾಟ್ಯಕ್ಕೆ ಸ್ಥಳ ಕೊಡಿಸುವ ಉದ್ದೇಶದಿಂದ ಬ್ರಹ್ಮಾದಿಗಳನ್ನು ಹಿಂದಕ್ಕೆ ತಳ್ಳುತ್ತಾ ಓಡಾಡುವಂತೆ ಮಾಡುವನು. ॥೭೫॥

ಮನ್ಮಥನಾಶಕನಾದ ಪರಶಿವನ ಇತಿಹಾಸದಲ್ಲಿ ಒಂದು ಪದದ ಅರ್ಥವನ್ನಾದರೂ ಸ್ಪಷ್ಟವಾಗಿಯೋ, ಅಸ್ಪಷ್ಟವಾಗಿಯೋ ಕೇಳಿದವನಿಗೆ ಸರ್ವೇಶ್ವರನು ಆನಂದಾಂಬುಧಿಯನ್ನೇ ದಯಪಾಲಿಸುವನು. ಅಲ್ಲದೆ ಸುಕೃತಿಯೆನಿಸಿದ ಆತನನ್ನು ನೋಡಿ ಯಮನೂ ಸಹ ಹೆದರಿ ನಮಸ್ಕರಿಸಿ ಹಿಂದಕ್ಕೆ ಹೋಗುವಂತಹ ಮಹಿಮೆಯನ್ನು ದಯಪಾಲಿಸುವನು. ॥೭೬॥

ಈಶ್ವರನ ಕಥೆಯೆಂಬ ಗಂಗಾಪ್ರವಾಹದಲ್ಲಿ ಒಂದು ಅಲೆಯ ತುಂತುರನ್ನು ಪಡೆದವರೂ ಪುಣ್ಯಶಾಲಿಗಳಾಗುವರು. ಅಷ್ಟೇ ಅಲ್ಲ, ಅವರ ವಂಶವೇ ಪಾವನವಾಗುವುದು. ಅವರ ಸಂತತಿಯೇ ಸಕಲರನ್ನೂ ಉದ್ಧರಿಸುವುದು. ಹೀಗಿರುವಾಗ

ಗಾತ್ರಶ್ರೋತ್ರವಿಶಾಲನೇತ್ರರಸನಾಚಿತ್ತಾಯುಷಾಮುಕ್ಷಯೋ
ವೃತ್ತಿಃ ಪುಣ್ಯವಶೇನ ತೇನ ಗಣನಾಪ್ಯೇಷಾಂ ಪರಾರ್ಧಾಧಿಕಾ ।
ಯದ್ಯಪ್ಯಸ್ತು ತಥಾಪಿ ಶಂಕರಕಥಾಪೀಯೂಷಸಿಂಧುಸ್ಫುರ
ತ್ಕೋಟ್ಯಂಶಾಂಶವಿಶೇಷತತ್ತ್ವಕಥನಂ ಶಕ್ಯಂ ನ ಸರ್ವಾತ್ಮನಾ ॥೭೮॥

ದ್ರಾಕ್ಷೇಕ್ಷುಕ್ಷೀರಸಾರಾದತಿರುಚಿರರಸಾಸ್ವಾದನಾಖ್ಯಾಪನಾದ್ಯೈ
ರದ್ಯಾಲಂಕಾಲಕಾಳಶ್ರುತಿಕಥಿತಕಥಾಯೂಥಪೀಯೂಷಧಾರಾಂ ।
ಧೀರಾಕಾರಪ್ರಸಾರಸ್ಫುರದುರುಸರಸಾಸಾರಧಾರಾನುರಕ್ತಾಂ
ವ್ಯಕ್ತಾಂ ಶಕ್ತೇ ವಿವಿಕ್ತೇ ಪಿಬ ಪಿಬ ರಸನೇ ಸ್ವಾದನಾಮೋದಮಾನಾ ॥೭೯॥

ವಾಮೇ ಮೇರುಶರಾಸನಂ ಹರಿಶರಂ ಸವ್ಯೇ ದಧಾನಂ ಕರೇ
ಸಂಹರ್ತುಂ ತ್ರಿಪುರಾಣಿ ಭೂರಥವರನ್ಯಸ್ತಾಗ್ರಪಾದಾಂಗುಲಿಂ ।

ಸರ್ವದಾ ಶಂಕರಕಥಾಮೃತವನ್ನೇ ಪಾನಮಾಡುವಂತಹ ಭಕ್ತರಿಗೆ ಒದಗುವ ಮಹಿಮೆಯನ್ನು ನಾನೆಷ್ಟೆಂದು ಹೇಳಲಿ? ॥೭೭॥

ಈಶ್ವರಕಥಾಶ್ರವಣದಿಂದ ಶ್ರೋತೃವಿನ ಗಾತ್ರನೇತ್ರಾದಿಗಳೂ, ಚಿತ್ತರಸನಾದಿಗಳೂ ಧನ್ಯವಾಗುವುದಿರಲಿ, ಆತನಿಗೆ ಒದಗುವ ಪುಣ್ಯರಾಶಿಯು ಅಸಂಖ್ಯಾತವಾಗಿರುವುದರಿಂದ ಅದರ ಎಣಿಕೆಯನ್ನು ಹೇಳಲು ಸಾಧ್ಯವೇ? ಅದೂ ಅಲ್ಲದೆ ಶಂಕರನ ಕಥಾಸಮುದ್ರದಲ್ಲಿ ಕೋಟಿಪಾಲಿನ ಒಂದು ಪಾಲನ್ನಾದರೂ, ಕೇಳುವವರಿಗೆ ತಿಳಿಸುವ ಶಕ್ತಿಯು ಯಾರಿಗಿರುವುದು? ॥೭೮॥

ಎಲೈ ನಾಲಿಗೆಯೇ, ಈಶ್ವರ ಕಥೆಯೆಂಬುದು ದ್ರಾಕ್ಷಿ, ಕಬ್ಬು ಇವುಗಳ ಸವಿಗಿಂತಲೂ ಹೆಚ್ಚಾದ ರುಚಿಯನ್ನು ಹೊಂದಿರತಕ್ಕದ್ದು. ಕಾಲಕೂಟವೆಂಬ ಮಹಾವಿಷವನ್ನು ಬಗ್ಗಿಸುವ ಅಮೃತಪ್ರವಾಹದಂತೆ ಕಿವಿಗಳಿಗೆ ಇಂಪನ್ನುಂಟು ಮಾಡುವುದು. ಇಂತಹ ಗಂಭೀರವೂ ಮುಕ್ತಿಪ್ರದವೂ, ಸರಸವೂ, ಆಸ್ವಾದ್ಯಮಾನವೂ ಆದ ಈ ಶಿವರಹಸ್ಯವನ್ನು ಸದಾ ಪಠನೆಮಾಡು. ॥೭೯॥

ತ್ರಿಪುರಸಂಹಾರಕ್ಕೋಸ್ಕರ ಎಡಗೈಯಲ್ಲಿ ಮೇರುವನ್ನೇ ಧನುಸ್ಸನ್ನಾಗಿಯೂ, ಬಲಗೈಯ್ಯಲ್ಲಿ ವಿಷ್ಣುವನ್ನೇ ಬಾಣವನ್ನಾಗಿಯೂ ಧರಿಸಿ, ಭೂಮಿಯೆಂಬ ರಥದ ಮೇಲೆ ಮಂಡಿಸಿದ ಪರಮೇಶ್ವರನ ಪಾದಗಳ ಮೇಲೆ ತಮ್ಮ ಶಿರಸ್ಸನ್ನು ಇಟ್ಟಿರತಕ್ಕ

ಆಪಾದಪ್ರಣತಾಮಿತಾಮರಶಿರಃಕೋಟೀರರತ್ನಪ್ರಭಾ
ಸ್ಪರ್ಧಾನರ್ಘಕಪಾದುಕಾರ್ಘಚರಣಂ ಫಾಲೇಕ್ಷಣಂ ಭಾವಯೇತ್ ॥೮೦॥

ವಂದೇ ಮೇರುಶರಾಸನೋರುಶಿಖರಜ್ಯಾಕಾರಕಾಕೋದರಂ
ಗ್ರೀವಾಲಂಕೃತವಾಮಪಾಣಿಚರಣಂ ನಾರಾಚನಾರಾಯಣಂ ।
ಸವ್ಯಾಕುಂಚಿತಪಾಣಿನಾ ಸಕರುಣಂ ಸಂಭ್ರಾಮಯಂತಂ ಪುರಂ
ಜಿತ್ವಾ ವೀಕ್ಷ್ಯ ಶಿವಾಸಹಾಯಮಮರಸ್ರಗ್ದೃಷ್ಟಿತುಷ್ಟಂ ಮುಹುಃ ॥೮೧॥

ಪ್ರಣಾಮಾನಂಮ್ರೇಂದ್ರಪ್ರಮುಖವನಿತಾಯಲ್ಲಕಮಣಿ
ಪ್ರಭಾಸ್ಪರ್ಧಾಮರ್ದಾಮೃತಕರಶಿರೋರತ್ನಮಹಿಲಾ ।
ಮುಹುರ್ದೃಷ್ಟ್ವಾ ಹೃಷ್ಟಾ ನಿಜಚರಣಜಾಗ್ರಚ್ಛವಿಕೃತಾಂ
ಸ್ಮಿತವ್ಯಕ್ತಾನಂದಾ ದಿಶತು ಮಮ ಕಲ್ಯಾಣಸರಣೀಂ ॥೮೨॥

ದೇವತೆಗಳ ಕಿರೀಟದಲ್ಲಿರುವ ರತ್ನಗಳ ಕಾಂತಿಯು, ಶಂಕರನ ಪಾದಾಂಗುಷ್ಠದ ಹೊಳಪನ್ನು ವೃದ್ಧಿಗೊಳಿಸುತ್ತಿರುವುದು. ಇಂತಹ ಪಾದುಕೆಗಳಿಂದೊಡಗೂಡಿದ ಫಾಲ ಲೋಚನನಾದ ಮಹೇಶ್ವರನನ್ನು ಸದಾ ಧ್ಯಾನಿಸಬೇಕು. ||೮೦||

ಮೇರುವನ್ನೇ ಧನುಸ್ಸನ್ನಾಗಿಯೂ, ಆದಿಶೇಷನನ್ನೇ ಹಗ್ಗವನ್ನಾಗಿಯೂ, ನಾರಾಯಣನನ್ನೇ ಬಾಣವನ್ನಾಗಿಯೂ ಮಾಡಿಕೊಂಡ ಪರಶಿವನು, ತ್ರಿಪುರಗಳ ಮೇಲೆ ಕರುಣೆಯಿಂದ, ಎಡಗೈಯ್ಯನ್ನು ಬಗ್ಗಿಸಿ ಹೊಡೆದಂತಹ ಬಾಣಗಳು ಸಮಸ್ತ ಲೋಕಗಳನ್ನೂ ಕ್ಷಣಮಾತ್ರದಲ್ಲಿ ತಿರುಗಿಸಿಬಿಟ್ಟವು. ಆಗ ದೇವತೆಗಳೆಲ್ಲರೂ ಆಶ್ಚರ್ಯ ದಿಂದ ನೋಡುತ್ತಾ ಪುಷ್ಪವೃಷ್ಟಿಮಾಡಿದರು. ಇಂತಹ ಲೋಕನಾಯಕನೂ, ಉಮಾಪತಿಯೂ ಆದ ಪರಮೇಶ್ವರನನ್ನು ಸದಾ ಭಕ್ತಿಯಿಂದ ವಂದಿಸುವೆನು. ||೮೧||

ದೇವೇಂದ್ರನ ಪತ್ನಿಯೇ ಮೊದಲಾದ ಅನೇಕ ದೇವತಾಸ್ತ್ರೀಯರು ತಮ್ಮ ಶಿರಸ್ಸಿನಲ್ಲಿ ಅಮೂಲ್ಯವಾದ ಆಭರಣಗಳನ್ನು ಧರಿಸಿ ಶಂಕರನ ಪಾದಗಳಿಗೆ ಎರಗು ವರು. ಶಂಕರನ ಶಿರಸ್ಸಿನಲ್ಲಿರುವ ಅಮೃತಕಿರಣನಾದ ಚಂದ್ರನಾದರೋ ಆಭರಣಗಳ ಪ್ರಭೆಯನ್ನು ನೋಡಲು ಅಲ್ಲಿಗೆ ತನ್ನ ಕಾಂತಿಯನ್ನು ಎರಚುವನು. ಆಗ ಶಂಕರನ ಸ್ವಭಾವಸಿದ್ಧವಾದ ಪಾದಕಾಂತಿಯು ಆಭರಣಗಳ ಮತ್ತು ಚಂದ್ರನ ತೇಜಸ್ಸಿನಿಂದ

ಜಾತಾಃ ಶಾಂಕರಸುಂದರೋದರದರೀದ್ವಾರೋರ್ವರಾಸ್ವಂಕುರಾಃ
ಸಿಕ್ತಾಃ ಶಾಂಕರನಾಮಧೇಯಸುಧಯಾ ಸದ್ಯಃ ಪ್ರವೃದ್ಧಾಃ ಫಲೇ ।
ಆನಮ್ರಾಃ ಶಿವನಾಮಲಕ್ಷಣಸುಧಾಯಂತ್ರಾಭಿಲಾಷಾಂ ಮುಹುಃ
ಕೂಜಂತೀಂ ರಸನಾಂ ರಸೈರಭಿನವಾಂ ಕರ್ತುಂ ಕಿಮುದ್ಯೋದ್ಯತಾಃ ॥೮೩॥

ಇತಿ ಶ್ರೀಶಿವರಹಸ್ಯೇ ಮಹೇತಿಹಾಸೇ ಹರಾಖ್ಯೇ ತೃತೀಯಾಂಶೇ
ಋಷಿಪ್ರಶ್ನೇ ಶಿವಭಕ್ತಮಹಿಮಾ ಶಿವಕಥಾಸಾರ ವರ್ಣನಂ ನಾಮ
ಪ್ರಥಮೋಽಧ್ಯಾಯಃ

ಕೂಡಿ ಮತ್ತೂ ಹೆಚ್ಚಾಗಿ ಶೋಭಿಸಲು ಆರಂಭವಾಗುವುದು. ಇಂತಹ ಶಾಂಕರ ಪ್ರಭೆಯು ನನಗೆ ಸರ್ವದಾ ಮಂಗಳಪ್ರದವಾಗಿರಲಿ. ॥೮೨॥

ಈ ಶಿವರಹಸ್ಯವು ಈಶ್ವರಭಕ್ತನ ಮುಖವೆಂಬ ಸಸ್ಯಕ್ಷೇತ್ರದಲ್ಲಿ ಮೊಳಕೆ ಯಿಟ್ಟಿರುವುದು. ಅದೇ ಮೊಳಕೆಯು ಶಂಕರದಿವ್ಯನಾಮಗಳೆಂಬ ಅಮೃತಸೇಕದಿಂದ ಬೆಳೆದು ಫಲಕೊಡುತ್ತಿರುವುದು. ಅಂಥ ಶಿವನಾಮಗಳ ಲಕ್ಷಣವನ್ನು ಹೇಳುವ, ಅಭಿಲಾಷೆಯುಳ್ಳ ನಿಮ್ಮ ನಾಲಗೆಯು ಸರ್ವದಾ ಶಿವನಾಮಧ್ವನಿಮಾಡುವಂತೆ ಪ್ರಯತ್ನಿಸುವ ನೀವೇ ಈಗ ಧನ್ಯರಲ್ಲವೇ? ॥೮೩॥

ಇಲ್ಲಿಗೆ ಹರಸಂಜ್ಞೆಯುಳ್ಳ ಶಿವನ ಇತಿಹಾಸರೂಪವಾದ ಶಿವರಹಸ್ಯದಲ್ಲಿ ಮೂರನೆಯ
ಉಪದೇಶದಲ್ಲಿ ಶಿವಭಕ್ತರ ಮಹಿಮೆ ಮತ್ತು ಶಿವಕಥಾಸಾರ ಇವುಗಳ
ವರ್ಣನೆಯೆಂಬ ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ದ್ವಿತೀಯೋಽಧ್ಯಾಯಃ

॥ ಋಷಯ ಊಚುಃ ॥

ಶಿವವಿದ್ಯಾ ಮಹಾವಿದ್ಯಾ ಯಾ ವಿದ್ಯಾ ಮುಕ್ತಿದಾಯಿನೀ ।
ತಾಂ ವಿದ್ಯಾಂ ವೇದ ವೇದೋ ವಾ ಗೌರೀ ವಾ ಶಂಕರೋಽಥ ವಾ ॥೧॥

ಕುಮಾರೋ ವಾ ಗಣೇಶೋ ವಾ ನಂದಿಕೇಶೋಽಪಿ ವಾ ಸ್ವಯಂ ।
ಯದಿ ಸ್ಯಾದ್ಗಿರಿಜಾಕಾಂತೇ ಭಕ್ತಿರವ್ಯಭಿಚಾರಿಣೀ ॥೨॥

ತದೈವ ಶಿವವಿದ್ಯಾಯಾಃ ಸ್ವರೂಪಪ್ರವಣೋ ಭವೇತ್ ।
ಭಕ್ತಿರೀಶೇ ತಥಾ ತಾವನ್ನ ತಸ್ಯಾಪ್ಯದ್ಭುತಂ ತಪಃ ॥೩॥

ಎರಡನೆಯ ಅಧ್ಯಾಯ

ಮಹಾವಿದ್ಯೆಯೆನಿಸಿದ ಶಿವವಿದ್ಯೆಯು ಮೋಕ್ಷಪ್ರದವಾಗಿರುವುದು. ಆ ವಿದ್ಯೆಯನ್ನು ಇಲ್ಲಿನವರೆಗೆ ವೇದವೂ, ಪಾರ್ವತಿಯೂ, ಪರಮೇಶ್ವರನೂ, ಕುಮಾರಸ್ವಾಮಿಯೂ, ಗಣೇಶನೂ ಮತ್ತು ನಂದಿಕೇಶ್ವರನೂ ಇವರು ಮಾತ್ರ ತಿಳಿದುಕೊಂಡಿರುವರು. ॥೧॥

ಉಮಾಪತಿಯಾದ ಪರಮೇಶ್ವರನಲ್ಲಿಯೇ ನಿಶ್ಚಲವಾದ ಭಕ್ತಿಯು ಇರುವುದಾದರೆ ಆಗಲೇ ಶಿವವಿದ್ಯೆಯ ತತ್ತ್ವವನ್ನು ತಿಳಿದುಕೊಳ್ಳುವುದರಲ್ಲಿ ಜನರು ಆಸಕ್ತರಾಗುತ್ತಾರೆ. ಈಶ್ವರನಲ್ಲಿ ನಿಶ್ಚಲವಾದ ಭಕ್ತಿಯು ಇದ್ದುದೇ ಆದರೆ ಅದಕ್ಕಿಂತಲೂ ಶ್ರೇಷ್ಠವಾದ ತಪಸ್ಸು ಬೇರೆ ಬೇಕಿಲ್ಲ. ॥೨-೩॥

ಶಿವವಿದ್ಯಾಪ್ರಭಾವಜ್ಞೋ ದುರ್ಲಭೋ ಭೂತಲೇ ಮುನೇ ।
ಯಥಾ ಭಕ್ತಿರ್ಮಹಾದೇವೇ ತವ ಸಾ ತಪಸಾ ಖಲು ॥೪॥

ತಥಾ ಕ್ವಾಪಿ ನ ದೃಷ್ಟೈವಂ ಭಕ್ತಿರವ್ಯಭಿಚಾರಿಣೀ ।
ಭಕ್ತೀ ರತ್ನತಯಾ ಖ್ಯಾತಾ ಸೈವ ಭಕ್ತಿರ್ಮಹೇಶ್ವರೇ ॥೫॥

ಸಾ ಭಕ್ತಿರ್ಮುಕ್ತಿದಾ ನೃಣಾಂ ಸಂಸಾರಭಯಮೋಚಿನೀ ।
ಮಹಾದೇವಶ್ಚಿದಾಕಾರಃ ಪರಮಾನಂದವಿಗ್ರಹಃ ॥೬॥

ನಿರ್ಗುಣೋಽಪೀತಿ ನಿರ್ಣೀತಃ ಪಾರ್ವತೀಪತಿರಿತ್ಯಪಿ ।
ಚಂದ್ರಚೂಡ ಇತಿ ಖ್ಯಾತಃ ತ್ರಿಪುರಾಂತಕ ಇತ್ಯಪಿ ॥೭॥

ಸ್ಮರಾರಿರಿತಿ ವಿಖ್ಯಾತಃ ಕಾಲಕಾಲ ಇತಿ ಸ್ಮೃತಃ ।
ತ್ರಿಶೂಲಪಾಣಿಃ ಸರ್ವೇಶೋ ಜಟಾಮಂಡಲಮಂಡಿತಃ ॥೮॥

ಓ ಸೂತಮಹರ್ಷಿಯೇ, ಜಗತೀತಲದಲ್ಲಿ ಶಿವವಿದ್ಯೆಯ ಮಹಿಮೆಯನ್ನು ತಿಳಿದುಕೊಂಡಿರುವವನು ದುರ್ಲಭನಾಗಿರುವನು. ನಿನಗೆ ಮಹಾದೇವನಲ್ಲಿಯೇ ಯಾವ ರೀತಿಯಲ್ಲಿ ಅಚಲವಾದ ಭಕ್ತಿಯಿರುವುದೋ, ಆ ರೀತಿಯಲ್ಲಿ ಇನ್ನಿತರ ತಪಶ್ಚರ್ಯಾದಿಗಳಲ್ಲಿರುವುದಿಲ್ಲ. ||೪||

ಯಾವ ಭಕ್ತಿಯು ಮಹೇಶ್ವರನಲ್ಲಿರುವುದೋ ಆ ಭಕ್ತಿಯೇ ರತ್ನಕ್ಕಿಂತ ಶ್ರೇಷ್ಠವಾದುದೆಂದು ಹೇಳಲ್ಪಟ್ಟಿದೆ. ಆ ಭಕ್ತಿಯೇ ಮನುಜರಿಗೆ ಸುಲಭವಾಗಿ ಮೋಕ್ಷವನ್ನುಂಟುಮಾಡುವುದು. ||೫||

ಮಹಾದೇವನು ಚಿದ್ರೂಪನೂ, ನಿರತಿಶಯವಾದ ಆನಂದಸ್ವರೂಪನೂ, ಗುಣಾತೀತನೂ ಎಂದು ನಿರ್ಣಯಿಸಲ್ಪಟ್ಟಿರುವನು. ಇವು ಅವನ ನಿರುಪಾಧಿಕವಾದ ಸ್ವರೂಗಳಾಗಿರುತ್ತವೆ. ಇದಲ್ಲದೇ ಪಾರ್ವತೀಪತಿ, ಚಂದ್ರಚೂಡ, ತ್ರಿಪುರಾಂತಕ, ಸ್ಮರಾರಿ, ಕಾಲಕಾಲ ಎಂಬ ಸೋಪಾಧಿಕವಾದ ನಾಮಧೇಯಗಳಿಂದಲೂ ಪ್ರಸಿದ್ಧನಾಗಿರುವನು. ||೬-೭||

ತ್ರಿಶೂಲಧಾರಿಯೂ, ಸಕಲಭೂತಗಳ ನಿಯಾಮಕನೂ, ಜಟಾಮಂಡಲದಿಂದ ಅಲಂಕೃತನೂ ಆದ ಆ ಪರಶಿವನು ಅರ್ಧನಾರೀಶ್ವರನೆಂಬ ನಾಮಧೇಯದಿಂದ ಪ್ರಸಿದ್ಧನಾಗಿರುವನು. ||೮||

ಉಮಾರ್ಧವಿಗ್ರಹತ್ವೇನ ವಿಖ್ಯಾತಃ ಪರಮೇಶ್ವರಃ ।
ಅಂಧಕಾರಿರಿತಿ ಖ್ಯಾತೋ ವೃಷಭಧ್ವಜ ಇತ್ಯಪಿ ॥೯॥

ಲಿಂಗಾಕಾರ ಇತಿ ಖ್ಯಾತೋ ಭಸ್ಮೋದ್ಧೂಳಿತವಿಗ್ರಹಃ ।
ರುದ್ರಾಕ್ಷಭೂಷಣಃ ಶಾಂತೋ ನೀಲಕಂಠ ಇತಿ ಸ್ಮೃತಃ ॥೧೦॥

ವಿರೂಪಾಕ್ಷ ಇತಿ ಖ್ಯಾತೋ ದಕ್ಷೋ ದಾಕ್ಷಾಯಣೀಪ್ರಿಯಃ ।
ಕುಮಾರಗುರುರವ್ಯಕ್ತೋ ವ್ಯಕ್ತಃ ಸುಂದರವಿಗ್ರಹಃ ॥೧೧॥

ಕಾಮಾರಿರಿತಿ ವಿಖ್ಯಾತಃ ಕಾಮದತ್ವೇನ ಕೀರ್ತಿತಃ ।
ಅಕ್ಷರತ್ವೇನ ವಿಖ್ಯಾತಃ ವಿಜ್ಞಾನಾನಂದಸಾಗರಃ ॥೧೨॥

ಈಶ್ವರಃ ಪರಮಾತ್ಮಾ ಚ ಪರಬ್ರಹ್ಮ ಪರಾತ್ಪರಃ ।
ಇತ್ಯನ್ಯೋನ್ಯವಿರುದ್ಧಂ ಹಿ ನಾಮ ಶರ್ವೇ ಚಿದಾತ್ಮಕೇ ॥೧೩॥

ಮತ್ತು ಅಂಧಕಾರಿ, ವೃಷಭಧ್ವಜ, ಲಿಂಗಾಕಾರ, ಭಸ್ಮೋದ್ಧೂಳಿತವಿಗ್ರಹ (ಭಸ್ಮಲಿಪ್ತವಾದ ಶರೀರವುಳ್ಳವನು) ರುದ್ರಾಕ್ಷಭೂಷಣ, ಶಾಂತ, ನೀಲಕಂಠ ಎಂಬೀ ಹೆಸರುಗಳಿಂದಲೂ ಪ್ರಸಿದ್ಧನಾಗಿರುವನು. ॥೯-೧೦॥

ಆ ಶಿವನಿಗೆ ವಿರೂಪಾಕ್ಷ, ದಕ್ಷ, ದಾಕ್ಷಾಯಣೀಪ್ರಿಯ, ಕುಮಾರಗುರು (ಷಣ್ಮುಖನ ವಿದ್ಯೋಪದೇಶಕನು) ಅವ್ಯಕ್ತ, ವ್ಯಕ್ತ, ಸುಂದರಮೂರ್ತಿ, ಕಾಮಾರಿ, ಕಾಮ ಎಂಬ ವ್ಯಾವಹಾರಿಕವಾದ ನಾಮಧೇಯಗಳೂ ಇರುವುವು. ಇದಲ್ಲದೇ ಅಕ್ಷರ, ವಿಜ್ಞಾನಾನಂದಸಾಗರ ಎಂಬ ನಿರುಪಾಧಿಕವಾದ ನಾಮಧೇಯಗಳೂ ಪ್ರಸಿದ್ಧಗಳಾಗಿವೆ. ॥೧೧-೧೨॥

ಚಿದ್ರೂಪನಾದ ಶಿವನಲ್ಲಿ ಈಶ್ವರ (ಜಗತ್ಪ್ರಭು) ಪರಮಾತ್ಮಾ (ನಿತ್ಯಾತ್ಮರೂಪ) ಪರಬ್ರಹ್ಮ (ಸಂಸಾರವಿನಿರ್ಮುಕ್ತವಾದ ಬ್ರಹ್ಮಸ್ವರೂಪ) ಪರಾತ್ಪರ (ಅವ್ಯಕ್ತವೆಂದು ಸಂಜ್ಞೆಯುಳ್ಳ ಅನಾದಿಸಿದ್ಧವಾದ ಮಾಯೆಗಿಂತಲೂ ಬೇರೆಯಾದವನು ಎಂದರೆ ಮಾಯಾಸಂಬಂಧರಹಿತನಾಗಿ ನಿರ್ಲಿಪ್ತನಾಗಿರುವವನು ಎಂದರ್ಥವು) ಎಂದು ಪರಸ್ಪರವಿರುದ್ಧಾರ್ಥಕವಾದ ನಾಮಧೇಯಗಳಿರುತ್ತವೆ. (ವಸ್ತುತಃ ಬ್ರಹ್ಮವಸ್ತುವು ಒಂದೇ ಆದರೂ ಸೋಪಾಧಿಕ ನಿರುಪಾಧಿಕ ಸ್ವರೂಪಭೇದದಿಂದ ನಾನಾರೀತಿಯಲ್ಲಿ ಕಾಣಿಸಿಕೊಳ್ಳುವನು. ಆದ್ದರಿಂದಲೇ ಅಜ್ಞಾನಿಗಳಿಗೆ ಪರಸ್ಪರ ವಿರುದ್ಧ

ಚಿದ್ವಿಲಾಸ ಇತಿ ಖ್ಯಾತೋ ಚಿದಿತ್ಯಪಿ ವಿಶೇಷತಃ ।
ಇದಂ ಸರ್ವಂ ವದಾಸ್ಮಭ್ಯಂ ಶಿವಧರ್ಮಾನ್ ವಿಶೇಷತಃ ॥೧೪॥

ತದ್ಧರ್ಮಶ್ರವಣಾದೇವ ತಜ್ಞಾನಂ ಚ ಭವಿಷ್ಯತಿ ॥೧೫॥

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಯಃ ಸರ್ವೇ ಭೂತಿಧಾರಣಪೂರ್ವಕಂ ।
ಹೃದಿ ಧ್ಯಾತ್ವಾ ಮಹಾದೇವಂ ಮಂಗಳಾರ್ಧಾಂಗಮವ್ಯಯಂ ॥೧೬॥

ಶಿವಾರ್ಚನಂ ಪರೋ ಧರ್ಮಃ ಸರ್ವಧರ್ಮೋತ್ತಮೋತ್ತಮಃ ।
ತದ್ಭಿನ್ನಧರ್ಮಾಃ ಸರ್ವೇಽಪಿ ತದರ್ಥಾ ಏವ ಕೇವಲಂ ॥೧೭॥

ವಾದ ನಾಮಧೇಯಗಳುಳ್ಳವನೆಂಬ ಭ್ರಾಂತಿಯು ಉಂಟಾಗುತ್ತದೆ ಎಂದು ಅರ್ಥ.) ||೧೩||

ಈ ಸಕಲ ದೃಶ್ಯವಸ್ತುವೂ ಚಿದ್ರೂಪನಾದ ಬ್ರಹ್ಮನಿಗೆ ಅಧೀನವಾದ ಮಾಯೆಯಿಂದ ಕಲ್ಪಿಸಲ್ಪಟ್ಟಿರುವುದು. ಮತ್ತು ಮುಖ್ಯವಾಗಿ ಈ ದೃಶ್ಯವಸ್ತುಗಳಲ್ಲಿ ಚಿತ್ಸ್ವರೂಪಕ್ಕಿಂತಲೂ ವ್ಯತಿರಿಕ್ತವಾದ ಸತ್ತೆಯು ಇರುವುದಿಲ್ಲವೆಂದೂ ಪ್ರಸಿದ್ಧಿಯಿದೆ. ಇಂತಹ ಉತ್ಕೃಷ್ಟವಾದ ಶಿವಧರ್ಮಗಳನ್ನು ನಮಗೆ ಹೇಳುವವನಾಗು. ಶಿವನ ಧರ್ಮಗಳನ್ನು ಕೇಳುವುದರಿಂದಲೇ, ಅವನ ಸ್ವರೂಪಜ್ಞಾನವು ಉಂಟಾಗಿ ಕೊನೆಗೆ ಶಿವಸಾಯುಜ್ಯವು ದೊರೆಯುವುದು. ಎಂದು ಕೇಳಿದ ಋಷಿಗಳಿಗೆ ವ್ಯಾಸನು ||೧೪-೧೫||

" ಎಲೈ ಮುನಿಗಳೇ, ಶಿವನ ಧರ್ಮಗಳನ್ನು ಈಗ ಹೇಳುವೆನು ಲಾಲಿಸಿರಿ. ನೀವೆಲ್ಲರೂ ವಿಭೂತಿಯನ್ನು ಧರಿಸಿ, ಅರ್ಧನಾರೀಶ್ವರನೂ ನಾಶರಹಿತಸ್ವರೂಪನೂ ಆದ ಮಹಾದೇವನನ್ನು ಮನಸ್ಸಿನಲ್ಲಿ ಸ್ಮರಿಸಿ, ಶಿವನ ಸ್ವರೂಪವನ್ನು ಕೇಳುವವರಾಗಿರಿ. ||೧೬||

ಶಿವಪೂಜೆಯು ಸರ್ವಧರ್ಮಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಮತ್ತು ಮೋಕ್ಷರೂಪವಾದ ಪರಮಪುರುಷಾರ್ಥವನ್ನು ಕೊಡತಕ್ಕುದು. ಇನ್ನಿತರವಾದ ಸರ್ವಧರ್ಮಗಳೂ ಸಹ ಶಿವಭಕ್ತಿಸಾಧಕವೇ ಹೊರತು ಸಾಕ್ಷಾನ್ಮುಕ್ತಿಪ್ರದಗಳಲ್ಲ. ||೧೭||

ಶಿವಃ ಪರಃ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಂ ।
ವಿಜ್ಞಾನಘನಮೇವೇದಂ ಆನಂದಘನಮಿತ್ಯಪಿ ॥೧೮॥

ತನ್ನಿರ್ವಿಕಾರಂ ನಿರ್ಲಿಪ್ತಂ ತದಾದ್ಯಂತವಿವರ್ಜಿತಂ ।
ಜ್ಯೋತಿಃ ಸ್ವರೂಪಮಮಲಂ ನಾಮರೂಪವಿವರ್ಜಿತಂ ।
ಅಪ್ರಮೇಯಂ ನಿರ್ಗುಣಂ ಚ ನಿರಂಜನಮನಾಮಯಂ ॥೧೯॥

ವಾಚಾಮಗೋಚರಂ ಮನ್ಯೇ ಮನಸಾಮಪ್ಯಗೋಚರಂ ॥೨೦॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ವೇದವೇದಾಂತವಚನೈರಶಕ್ಯಂ ತನ್ನಿರೂಪಣಂ ॥೨೧॥

ಶಿವನು, ನಿತ್ಯನೂ, ಸಚ್ಚಿದಾನಂದಲಕ್ಷಣವಾದ ಬ್ರಹ್ಮಸ್ವರೂಪನೂ, ವಿಜ್ಞಾನಸ್ವರೂಪನೂ ಮತ್ತು ಆನಂದಸ್ವರೂಪನೂ ಆಗಿರುವನು. ॥೧೮॥

ಆ ಪರಬ್ರಹ್ಮಸ್ವರೂಪವು ಜರಾಮರಣರೂಪವಾದ ವಿಕಾರಗಳಿಂದ ರಹಿತವಾದುದು. ಪುಣ್ಯಪಾಪಗಳ ಸಂಸರ್ಗದಿಂದ ಬಾಹಿರವಾದುದು. ಉತ್ಪತ್ತಿವಿನಾಶರಹಿತವೂ, ನಾಮರೂಪವರ್ಜಿತವೂ (ನಾಮವೆಂದರೆ ವ್ಯವಹರಿಸಲು ಯೋಗ್ಯವಾದ ಶಬ್ದವೆಂದರ್ಥ. ರೂಪವೆಂದರೆ ನಾಮದಿಂದ ಉಪಸ್ಥಿತವಾದ ಅರ್ಥ. ಉದಾಹರಣೆಗೆ ಗೋವು ಎಂಬುದು ಒಂದು ಪ್ರಾಣಿವಿಶೇಷವನ್ನು ವ್ಯವಹರಿಸಲು ಯೋಗ್ಯವಾದ ಶಬ್ದವಾಗಿರುತ್ತದೆ. ಈ ಶಬ್ದದಿಂದ ಒಂದು ವ್ಯಕ್ತಿವಿಶೇಷವು ಉಪಸ್ಥಿತವಾಗುತ್ತದೆ. ಇದೇ ರೂಪ. ಈ ನಾಮರೂಪಗಳು ಬ್ರಹ್ಮನಲ್ಲಿರುವುದಿಲ್ಲ.) ಆಗಿರುತ್ತದೆ. ಇದಲ್ಲದೇ ಬ್ರಹ್ಮಸ್ವರೂಪವು ಪ್ರತ್ಯಕ್ಷಾದಿಪ್ರಮಾಣಗಳಿಂದ ನಿರೂಪಿಸಲು ಅಸಾಧ್ಯವಾದುದು. ಗುಣರಹಿತವಾದುದು. ಪುಣ್ಯಪಾಪಗಳ ಲೇಪವಿಲ್ಲದಿರುವುದು, ಮತ್ತು ನಿರುಪದ್ರವವಾದ ಸ್ವರೂಪವುಳ್ಳದ್ದು. ॥೧೯॥

ಆ ಬ್ರಹ್ಮನು ವಾಗಿಂದ್ರಿಯಕ್ಕೂ ಮತ್ತು ಮನೋರೂಪವಾದ ಇಂದ್ರಿಯಕ್ಕೂ ಅಗೋಚರನಾಗಿರುವನೆಂಬುದಾಗಿ ತಿಳಿಯುತ್ತೇನೆ. ॥೨೦॥

ಏಕೆಂದರೆ, ಶಬ್ದಗಳು ಬ್ರಹ್ಮಸ್ವರೂಪವನ್ನು ತಿಳಿಸುವುದಕ್ಕೋಸ್ಕರ ಪ್ರವೃತ್ತವಾದುವುಗಳಾಗಿ ಬಳಿಕ ಅದನ್ನು ತಿಳಿಸಲು ಅಸಮರ್ಥವೆನಿಸಿ ತಮಗೆ ಪ್ರೇರಕವಾದ ಮನಸ್ಸಿನೊಂದಿಗೆ ಹಿಂದಿರುಗುವುವು. ಏಕೆಂದರೆ ಶಬ್ದಗಳು ಪದಾರ್ಥವನ್ನು ತಿಳಿಸಲು

ಪುರಾಣಾನಾಂ ಕಾ ಕಥಾತ್ರ ವಾಙ್ಮಾರ್ಗಾರ್ಗಳನೇವ ತತ್ ।
ಅನರ್ಗಳಪ್ರವಾಹಾನಾಂ ಕಥಾನಾಮಪಿ ವಾ ಕಥಾ ॥೨೨॥

ವಾಗಗೋಚರಮಪ್ಯೇತತ್ಕಥಂಚಿತ್ಕೃಪಯಾ ಪ್ರಭೋ ।
ಶಂಭೋರ್ವಿಷಯತಾಮಾಪ ತತಸ್ತದ್ವಚಸಾಮಪಿ ॥೨೩॥

ಇದಮಪ್ಯುಚ್ಯತೇ ತಾವತ್ಪ್ರೇರಿತೇನ ಕಥಂಚನ ।
ಶಿವೇನೈವ ಮಯಾ ವಿಪ್ರಾಃ ಸ ಬುದ್ಧಿಪ್ರೇರಕಃ ಶಿವಃ ॥೨೪॥

ಜಾತಿ, ಕ್ರಿಯೆ, ಗುಣ, ಸಂಜ್ಞಾ ಮುಂತಾದುವುಗಳನ್ನು ಅಪೇಕ್ಷಿಸಿ ಪದಗಳ ಅರ್ಥವನ್ನು ನಿರ್ಣಯಿಸುವ ಸಾಮರ್ಥ್ಯವನ್ನು ಹೊಂದಿವೆ. ಆದರೆ ಬ್ರಹ್ಮನಲ್ಲಿ ಜಾತಿ, ಕ್ರಿಯಾ, ಗುಣ ಮತ್ತು ಸಂಜ್ಞೆ ಇವುಗಳಲ್ಲಿ ಒಂದು ಧರ್ಮವೂ ಇರುವುದಿಲ್ಲ. ॥೨೧॥

ವೇದಾಂತವಚನಗಳಿಂದಲೂ ಆ ಬ್ರಹ್ಮಸ್ವರೂಪವನ್ನು ನಿರೂಪಿಸಲು ಅಶಕ್ಯವಾಗಿರುವಾಗ ಪುರಾಣಗಳು ಹೇಗೆ ತಾನೇ ಪ್ರತಿಪಾದಿಸಲು ಸಮರ್ಥವಾದಾವು? ಚಿದ್ರೂಪಬ್ರಹ್ಮನನ್ನು ನಿರೂಪಿಸುವ ವಿಷಯದಲ್ಲಿ ಪುರಾಣಗಳೂ ಸಹ ವಾಕ್ಕಿಗೆ ಪ್ರತಿಬಂಧಕಗಳಾಗಿರುವುವೇ ಹೊರತು ಸಾಧಕಗಳಾಗಿಲ್ಲ. ಸರ್ಗ, ಪ್ರತಿಸರ್ಗನಿರೂಪಣಾದಿ ಪಂಚಲಕ್ಷಣಗಳಿಂದ ಕೂಡಿರುವ ಪುರಾಣಗಳ ಪಾಡೇ ಹೀಗಿರುತ್ತಿರಲು, ನಿಯಮರಹಿತವಾಗಿ ಸ್ವೇಚ್ಛೆಯಿಂದ ರಚಿಸಲ್ಪಟ್ಟ ಪ್ರಬಂಧರೂಪವಾದ ಕಥೆಯು ಹೇಗೆತಾನೇ ಸಚ್ಚಿದಾನಂದಲಕ್ಷಣನಾದ ಬ್ರಹ್ಮನನ್ನು ಪ್ರತಿಪಾದಿಸಲು ಸಮರ್ಥವಾದೀತು? ॥೨೨॥

ಓ ಪ್ರಭುವಾದ ಸೂತಮಹರ್ಷಿಯೇ, ಈ ಹಿಂದೆ ಹೇಳಿದ ರೀತಿಯಲ್ಲಿ ಬ್ರಹ್ಮಸ್ವರೂಪವು ವಾಕ್ಕುಗಳಿಗೆ ಅಗೋಚರವಾಗಿದ್ದರೂ, ಪರಶಿವನಾದ ಮಹಾದೇವನಿಗೆ ಗೋಚರವೆನಿಸಿ ಮತ್ತು ಅವನ ವಾಕ್ಕುಗಳಿಂದ ಸುಲಭಗೋಚರವಾಗಿಯೂ ಆಗುವುದು. ॥೨೩॥

ಎಲೈ ವಿಪ್ರರೇ, ನೀವು ಈಗ ಕೇಳಿದ ಈ ವಿಷಯವನ್ನೂ ಸಹ ನಾನು ಶಿವನಿಂದಲೇ ಪ್ರೇರಿತನಾಗಿ ನಿಮಗೆ ವಿಶದಪಡಿಸುತ್ತಿದ್ದೇನೆ. ಇದನ್ನು ತಿಳಿಯಪಡಿಸುವ ವಿಷಯದಲ್ಲಿ ಆ ಶಿವನು ನನಗೆ ಪ್ರೇರಕನಾಗಿರುವನು. ॥೨೪॥

ದೇವಸ್ಯ ಸವಿತುರ್ಬುದ್ಧಿಂ ಪ್ರಚೋದಯತಿ ಶಂಕರಃ ।
ಸ ಏವ ಭಗವಾನ್ ಭರ್ಗಃ ಧಿಯೋ ಯೋ ನಃ ಪ್ರಚೋದಯಾತ್ ॥೨೫॥

ದೇವಸ್ಯ ದೀಪ್ಯಮಾನಸ್ಯ ಸವಿತುಃ ಜ್ಞಾನಮುತ್ತಮಂ ।
ಪ್ರಚೋದಯತಿ ವಿಶ್ವಾತ್ಮಾ ವರೇಣ್ಯಂ ಶಿವ ಏವ ಸಃ ॥೨೬॥

ಅನ್ಯಃ ಕೋ ವಾ ತದ್ವರೇಣ್ಯಂ ಸವಿತುರ್ವಾ ಪ್ರಚೋದಯಾತ್ ।
ಅಸ್ಮಾಕಮಿತರೇಷಾಂ ವಾ ಸ ಭರ್ಗಃ ಶಂಕರಃ ಸ್ಮೃತಃ ॥೨೭॥

ಅಸ್ಯ ಭರ್ಗಪದಸ್ಯೈವ ಮಾಹಾತ್ಮ್ಯಂ ಶ್ರುತಿಷು ಶ್ರುತಂ ।
ಸಂಸಾರಭರ್ಜನಾದ್ಭರ್ಗಃ ಸೋಽಯಂ ಸ್ವರ್ಗಾಪವರ್ಗದಃ ॥೨೮॥

ಲೋಕಕಲ್ಯಾಣಕರನಾದ ಶಂಕರನು ಪ್ರಕಾಶಮಾನನಾಗಿರುವ ಸೂರ್ಯನ ತೇಜೋಮೂಲಕ ಲೋಕವನ್ನು ತನ್ನ ಪ್ರಕಾಶದಿಂದ ಬೆಳಗುವಂತೆ ಪ್ರೇರಿಸುವನು. ಇದರಿಂದ ಆ ಶಿವನೇ ನಮ್ಮ ಬುದ್ಧಿಯನ್ನು ಪ್ರೇರಣೆಯಿಂದ ಸರಿಪಡಿಸುತ್ತಿರುವನು. ॥೨೫॥

ಆ ಶಿವನೇ, ಪ್ರಕಾಶದಿಂದ ಕಂಗೊಳಿಸುತ್ತಲಿರುವ ದೇವದೇವನಾದ ಸೂರ್ಯನಿಗೆ ಲೋಕಕಲ್ಯಾಣಕರವೂ, ಪವಿತ್ರವೂ ಆದ ಜ್ಞಾನವನ್ನು ದಯಪಾಲಿಸುತ್ತಾನೆ. ॥೨೬॥

ಸೂರ್ಯನಿಗಾಗಲಿ, ನಮಗಾಗಲಿ ಅಥವಾ ಇನ್ನಿತರರಿಗಾಗಲಿ ಸ್ತುತ್ಯನಾದ ಆ ಶಂಕರನಿಗಿಂತಲೂ ಇತರ ಯಾವ ದೇವತೆಗಳು ತಾನೇ ಉತ್ತಮವಾದ ಜ್ಞಾನವನ್ನು ದಯಪಾಲಿಸಲು ಸಮರ್ಥರು ? ॥೨೭-

ಭರ್ಗ ಎಂಬ ಪದದ ಅರ್ಥಪ್ರಭಾವವು ವೇದಗಳಿಂದ ಹೀಗೆ ತಿಳಿದು ಬರುತ್ತದೆ. “ ಭರ್ಜಯತಿ ಸಂಸಾರಂ ಇತಿ ಭರ್ಗಃ ” ಎಂಬ ವ್ಯುತ್ಪತ್ತಿಯಿಂದ ಸಂಸಾರವೆಂಬ ಅನರ್ಥವನ್ನು ನಿರ್ಮೂಲವಾಗಿ ನಾಶಮಾಡತಕ್ಕವನು ಎಂಬ ಅರ್ಥ ವಿಶೇಷವು ತಿಳಿದುಬರುತ್ತಿದೆ. ಆ ಭರ್ಗನೇ ಪ್ರಾಣಿಗಳಿಗೆ ಅವರವರ ಕರ್ಮಾನುಸಾರವಾಗಿ ಸ್ವರ್ಗ ಮತ್ತು ಮೋಕ್ಷವೆಂಬ ಪುರುಷಾರ್ಥಗಳನ್ನು ಕೊಡುವವನಾಗಿರುವನು. ॥೨೮॥

ಪುರಾ ಚಕಾರ ಗಾಯತ್ರೀ ತಪೋ ಘೋರತರಂ ತಪಃ ।
ಪ್ರೀತಸ್ತತ್ತಪಸಾ ಶಂಭುಃ ತದ್ಭಕ್ತ್ಯಾ ಪರಯಾ ತದಾ ॥೨೯॥

ತತಃ ಪರಂ ಸ ಭಗವಾನ್ ಭರ್ಗಂ ಸರ್ಗಾದಿಕಾರಣಂ ।
ತಾಮುವಾಚಾತಿಚತುರಃ ಘನಗಂಭೀರಯಾ ಗಿರಾ ॥೩೦॥

॥ ಸದಾಶಿವ ಉವಾಚ ॥

ತ್ವಯಾ ತಪ್ತಂ ತಪೋ ಘೋರಂ ಕಲ್ಪಾನಾಮಯುತಂ ಧ್ರುವಂ ।
ತೇನ ಪ್ರೀತೋಽಸ್ಮ್ಯಹಂ ದೇವಿ ವರಂ ವೃಣು ಯಥೇಚ್ಛಯಾ ॥೩೧॥

ವರದೇಷು ವರೇಣ್ಯೋಽಹಂ ತ್ವದೀಪ್ಸಿತವರಪ್ರದಃ ।
ಕಿಮದೇಯಂ ಮಯಾಪ್ಯತ್ರ ಪ್ರೀತೋ ವೈ ತಪಸಾಧುನಾ ॥೩೨॥

ಇತಿ ತದ್ವಚನಂ ಶ್ರುತ್ವಾ ಪ್ರಣಮ್ಯ ಭುವಿ ದಂಡವತ್ ।
ಗಾಯತ್ರೀ ಮೂರ್ತಿಮಾಸಾದ್ಯ ಸ್ವಾನಂದಾಶ್ರುಪರಿಪ್ಲುತಾ ॥೩೩॥

ಹಿಂದೆ ಒಂದಾನೊಂದು ಸಮಯದಲ್ಲಿ ಗಾಯತ್ರಿಯು ಭಯಂಕರವಾದ ತಪಸ್ಸನ್ನು ಮಾಡಿದಳು. ಆಗ ಅವಳ ನಿರತಿಶಯವಾದ ಭಕ್ತಿಯಿಂದ ಕೂಡಿರುವ ತಪಸ್ಸಿಗೆ ಪರಶಿವನು ಸುಪ್ರೀತನಾದನು. ॥೨೯॥

ಬಳಿಕ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೂ, ಷಡ್ಗುಣೈಶ್ವರ್ಯ ಸಂಪನ್ನನೂ ಮತ್ತು ಚತುರನೂ ಆದ ಶಿವನು ಗಾಯತ್ರಿಯನ್ನು ಕುರಿತು ಮೇಘದಂತೆ ಗಂಭೀರವಾದ ವಾಣಿಯಿಂದ ಇಂತೆಂದನು. ॥೩೦॥

"ಎಲೌ ದೇವಿಯೇ, ನೀನು ದಶಸಹಸ್ರಪರಿಮಿತವಾದ ಕಲ್ಪಪರ್ಯಂತ ತಪಸ್ಸನ್ನಾಚರಿಸಿರುವೆ. ಆ ನಿನ್ನ ತಪೋನುಷ್ಠಾನದಿಂದ ನಾನು ಸುಪ್ರೀತನಾಗಿರುವೆನು. ನಿನ್ನ ಇಷ್ಟಾನುಸಾರವಾಗಿ ವರವನ್ನು ಬೇಡಿಕೋ. ॥೩೧॥

ವರವನ್ನು ದಯಪಾಲಿಸುವವರಲ್ಲಿ ನಾನು ಅಗ್ರಗಣ್ಯನಾಗಿರುವೆನು. ಆದುದರಿಂದ ನಿನಗೆ ಅಭಿಲಷಿತವಾದ ವರವನ್ನು ಕೊಡುವೆನು. ನಿನ್ನ ತಪಸ್ಸಿನಿಂದ ಸಂತೋಷಗೊಂಡ ನಾನು ಈಗ ನಿನಗೆ ಯಾವ ವರವನ್ನು ತಾನೇ ಕೊಡಲಾರೆ!" ॥೩೨॥

ಹೀಗೆಂದು ಹೇಳಿದ ಈಶ್ವರನ ಆ ಮಾತನ್ನು ಕೇಳಿ ಗಾಯತ್ರಿಯು ತನ್ನ

|| ಗಾಯತ್ರ್ಯುವಾಚ ||

ಭಗವನ್ ದೇವದೇವೇಶ ಭರ್ಗ ಸಂಸಾರಭರ್ಜಕ ।
ಪ್ರಸೀದ ಕರುಣಾಸಿಂಧೋ ವರಂ ದೇಹಿ ಮದೀಪ್ಸಿತಂ ||೩೪||

ಮಂತ್ರಃ ಶಿವಪದಾಭಾವೇ ಜಪಾಯೋಗ್ಯ ಇತಿ ಶ್ರುತಿಃ ।
ಪ್ರಸಿದ್ಧಾ ಸಾ ಶ್ರುತಿಸ್ತಾವನ್ಮಾನ್ಯಾ ಧನ್ಯಸ್ಯ ಕೇವಲಂ ||೩೫||

ಮಂತ್ರೇ ಶಿವಪದಂ ಯತ್ರ ತೇನ ಸಿದ್ಧಿಃ ಪ್ರಜಾಯತೇ ।
ಅತೋ ಮುನೀಶ್ವರಾಃ ಸರ್ವೇ ಶಿವಮಂತ್ರಜಪೋತ್ಸುಕಾಃ ||೩೬||

ಶಿವಮಂತ್ರೇ ವಿದ್ಯಮಾನೇ ಸರ್ವವಿದ್ಯಾಪ್ರಕಾಶಕೇ ।
ಅವಿದ್ಯಾನಾಶಕೇ ತಸ್ಮಿನ್ನನ್ಯೋ ಮಂತ್ರೋ ನ ಜಪ್ಯತೇ ||೩೭||

ನಿಜವಾದ ಆಕಾರವನ್ನು ತಾಳಿ ಆನಂದಬಾಷ್ಪಗಳನ್ನು ಸುರಿಸುವವಳಾಗಿ, ಶಿವನಿಗೆ ದಂಡಪ್ರಣಾಮವನ್ನು ಮಾಡುತ್ತಾ ಹೀಗೆಂದಳು. ||೩೩||

ಓ ದೇವತೆಗಳ ಪ್ರಭುವಾದ, ಮತ್ತು ಸಂಸಾರದುಃಖವನ್ನು ದೂರಮಾಡುವ ಶಿವನೇ, ಪ್ರಸನ್ನನಾಗು. ಕೃಪಾಸಾಗರನೇ, ನನ್ನ ಮನೋಭಿಲಷಿತವಾದ ಇಷ್ಟಾರ್ಥವನ್ನು ದಯಪಾಲಿಸುವವನಾಗು. ||೩೪||

ಯಾವ ಮಂತ್ರವೇ ಆಗಲಿ ಅದು ಶಿವನಾಮಧೇಯದಿಂದ ರಹಿತವಾಗಿದ್ದರೆ ಜಪಯೋಗ್ಯವಲ್ಲವೆಂದು ಶ್ರುತಿಯಿದೆ. ಪ್ರಸಿದ್ಧವಾದ ಆ ಶ್ರುತಿಯು ಭಾಗ್ಯವಂತನಾದವನಿಗೆ ಸನ್ಮಾನ್ಯವಾದುದಾಗಿರುವುದಲ್ಲವೆ ? ||೩೫||

ಯಾವ ಮಂತ್ರದಲ್ಲಿ ಶಿವಪದಸಂಬಂಧವಿರುವುದೋ, ಆ ಮಂತ್ರಜಪದಿಂದಲೇ ಸಿದ್ಧಿಯುಂಟಾಗುತ್ತದೆ. ಆದುದರಿಂದಲೇ ಸಕಲ ಮುನಿವರ್ಯರೂ ಶಿವಮಂತ್ರವನ್ನು ಜಪಿಸುವುದರಲ್ಲಿಯೇ ಆಸಕ್ತರಾಗಿರುವರು. ||೩೬||

ಅಜ್ಞಾನವನ್ನು ಹೋಗಲಾಡಿಸಿ, ಸಕಲ ವಿದ್ಯೆಗಳನ್ನೂ ಪ್ರಕಾಶಪಡಿಸುವ, ಶಿವಮಂತ್ರವು ಇರುವಾಗ ಅದಕ್ಕಿಂತ ಬೇರೆಯದಾದ ಮಂತ್ರವು ಎಂದಾದರೂ ಜಪಯೋಗ್ಯವೆನಿಸೀತೆ ? ||೩೭||

ವ್ಯರ್ಥಾಯಾಸಪ್ರದಾಃ ಮಂತ್ರಾಃ ಶಿವಶಬ್ದವಿವರ್ಜಿತಾಃ ।
ಅತಸ್ತೈರ್ಬಹುಧಾ ಜಪ್ತೈರಲ್ಪಂ ವಾ ನ ಫಲಂ ಧ್ರುವಂ ॥೩೮॥

ನೀರಸೈಸ್ತರುಭಿಃ ಪುಷ್ಪಂ ನ ಫಲಂ ವಾ ಯಥಾ ತಥಾ ।
ಶಿವಮಂತ್ರಾನ್ಯಮಂತ್ರೇಣ ಪ್ರಜಪ್ತೇನಾಪಿ ಕಿಂ ಫಲಂ ॥೩೯॥

ಕಿಂ ವಂಧ್ಯಾ ಜರತಾ ಪುತ್ರಂ ಸೂತೇ ವಿದ್ಯಾವಿಶಾರದಂ ।
ತಥಾ ಮಂತ್ರಾಸ್ತು ತೇ ವಂಧ್ಯಾಃ ಶಿವನಾಮವಿವರ್ಜಿತಾಃ ॥೪೦॥

ಶಿವನಾಮಸ್ವರೂಪೇಣ ದೌಹೃದೇನ ಮಹೇಶ್ವರ ।
ಫಲಂ ಮಂತ್ರತರಃ ಸೂತೇ ಭಕ್ತಿಸಿಕ್ತಃ ಪುನಃ ಪುನಃ ॥೪೧॥

ಶಿವನಾಮಪ್ರವೇಶೇನ ಮಂತ್ರೋ ಭಾತಿ ಯಥಾ ರವಿಃ ।
ಉದಯಾಚಲಮಾಸಾದ್ಯ ಸಹಸ್ರಕಿರಣೋಽಪಿ ಸನ್ ॥೪೨॥

ಶಿವಶಬ್ದದಿಂದ ರಹಿತವಾದ ಮಂತ್ರಗಳು ವೃಥಾ ಆಯಾಸವನ್ನು ಕೊಡತಕ್ಕವುಗಳೇ ಹೊರತು ಫಲಪ್ರದಗಳಲ್ಲ. ಆದುದರಿಂದ ಅವುಗಳನ್ನು ಅನೇಕಬಾರಿ ಜಪಿಸಿದರೂ ವಿಶೇಷವಾದ ಫಲವನ್ನೂ ಪಡೆಯಲಾರೆನು. ॥೩೮॥

ಒಣಗಿದ ವೃಕ್ಷಗಳಿಂದ ಹೇಗೆ ಹೂವನ್ನಾಗಲಿ ಅಥವಾ ಫಲವನ್ನಾಗಲಿ ನಿರೀಕ್ಷಿಸಲು ಅಸಾಧ್ಯವೋ, ಅದರಂತೆ ಶಿವಮಂತ್ರಕ್ಕಿಂತಲೂ ಇತರವಾದ ಯಾವ ಮಂತ್ರವನ್ನು ಜಪಿಸಿದರೂ, ಯಾವ ಫಲವೂ ಲಭಿಸಲಾರದು. ॥೩೯॥

ವಾರ್ಧಕ್ಯವನ್ನು ಹೊಂದಿರುವ ಬಂಜೆಯು, ವಿದ್ಯಾಪಾರಂಗತನಾದ ಮಗನನ್ನು ಎಂದಾದರೂ ಪ್ರಸವಿಸುವಳೇ ? ಅದರಂತೆಯೇ ಶಿವನಾಮರಹಿತವಾದ ಮಂತ್ರಗಳು ಸದಾ ನಿಷ್ಫಲಗಳೆಂದೇ ತಿಳಿಯಬೇಕು. ॥೪೦॥

ಭಕ್ತಿಯೆಂಬ ನೀರಿನಿಂದ ಸೇಚಿಸಲ್ಪಟ್ಟ ಮಂತ್ರವೆಂಬ ವೃಕ್ಷವು ಶಿವನಾಮಧೇಯವೆಂಬ ಗರ್ಭವನ್ನು ತಾಳಿ ಫಲವನ್ನು ಪ್ರಸವಿಸುತ್ತದೆ. ॥೪೧॥

ಶಿವನಾಮದಿಂದ ಕೂಡಿರುವ ಮಂತ್ರವು, ಉದಯಾಚಲವನ್ನು ಪಡೆದು ತನ್ನ ಸಹಸ್ರಕಿರಣಗಳಿಂದ ದೇದೀಪ್ಯಮಾನನಾದ ಸೂರ್ಯನೋಪಾದಿಯಲ್ಲಿ ಕಂಗೊಳಿಸುತ್ತದೆ. ಆದ್ದರಿಂದ ನಾಮರಹಿತವಾದ ಮಂತ್ರವು ಫಲವನ್ನು ಕೊಡಲು ಅಸಮರ್ಥವಾಗಿಯೇ ನಿಲ್ಲುವುದು. ॥೪೨-೪೩॥

ಮಹಾಂಧಕಾರೇಣ ರವಿರ್ಯಥಾ ಭಾತಿ ತಥಾ ಮನುಃ ।
ಶಿವಮಂತ್ರಾಭಾವಬದ್ಧೋ ನ ಫಲಾಯೋಪಯುಜ್ಯತೇ ॥೪೩॥

ಮಂತ್ರಾಕಾರಂ ದಿನಂ ಭಾನುರಪೇಕ್ಷ್ಯಾಸಾದ್ಯ ಭಾಸತೇ ।
ಮಂತ್ರರೂಪದಿನಸ್ಯಾಯಂ ಭರ್ಗಶಬ್ದಸ್ತು ಭಾಸ್ಕರಃ ॥೪೪॥

ದಿನಂ ನ ಭಾಸ್ಕರಾಭಾವೇ ದಿನತ್ವಮಪಿ ಯಾಸ್ಯತಿ ।
ಯಥಾ ತಥಾ ಮಂತ್ರಕಾಪಿ ಮಂತ್ರೇ ತೇನ ವಿನಾ ತು ನ ॥೪೫॥

ಸೃಷ್ಟಂ ಶಿವಪದಂ ಪೂರ್ವಂ ತ್ವಯಾ ತಾವನ್ಮಹಾತ್ಮನಾ ।
ತದ್ಯತ್ರ ಮಂತ್ರೇ ನ ಭವೇತ್ ಸ ಮಂತ್ರೋ ಜಪ್ಯ ಏವ ನ ॥೪೬॥

ಕಂಠೇ ಮಂಗಳಸೂತ್ರಂ ಚೇತ್ಸಾ ನಾರೀ ಮಂಗಳಾವಹಾ ।
ತಥೈವ ಮಂತ್ರವಿದ್ಯಾಪಿ ಮಂಗಳಾಯತನಂ ವಿನಾ ॥೪೭॥

ದಿನವನ್ನು ಬೆಳಗಿಸಲು ಸೂರ್ಯನ ಆವಶ್ಯಕತೆಯು ಎಷ್ಟಿರುವುದೋ, ಮಂತ್ರವನ್ನು ಮಹಿಮೆಗೊಳಿಸಲು ಶಿವನಾಮಕ್ಕೂ ಅಷ್ಟು ಪ್ರಾಶಸ್ತ್ಯವಿರುವುದು. ಮಂತ್ರರೂಪವೆಂಬ ದಿನಕ್ಕೆ ಭರ್ಗರೂಪಿಯಾದ ಪರಶಿವನೇ ಭಾಸ್ಕರನು. ||೪೪||

ಸೂರ್ಯನು ಇಲ್ಲದಿದ್ದರೆ ದಿನವು (ಹಗಲು) ತನ್ನ ದಿನತ್ವವನ್ನು (ಸ್ವರೂಪ ವನ್ನು) ಹೇಗೆ ಪಡೆಯಲಾರದೋ ಅದರಂತೆ ಮಂತ್ರವೂ ಸಹ ಮಹೇಶ್ವರನಾಮ ವಿಲ್ಲದಿದ್ದರೆ ತನ್ನ ಸ್ವರೂಪವನ್ನು (ಮಂತ್ರತ್ವವನ್ನು) ಪಡೆಯಲಾರದು. ||೪೫||

ಶಂಕರನೇ, ಮಹಾತ್ಮನಾದ ನೀನು ಸೃಷ್ಟಿಯ ಆದಿಯಲ್ಲಿ ಶಿವಪದವನ್ನು ಸೃಷ್ಟಿಸಿರುವೆ. ಆದುದರಿಂದ ಯಾವ ಮಂತ್ರದಲ್ಲಿ ಆ ಶಿವಪದವು ಇರುವುದಿಲ್ಲವೋ ಆ ಮಂತ್ರವು ಜಪಿಸಲು ಯೋಗ್ಯವೇ ಅಲ್ಲ. ||೪೬||

ಯಾವ ಸ್ತ್ರೀಯ ಕಂಠದಲ್ಲಿ ಮಂಗಳಸೂತ್ರವಿರುವುದೋ ಆ ಸ್ತ್ರೀಯೇ ಸೌಭಾಗ್ಯವತಿಯೆನಿಸಿಕೊಳ್ಳುವಳು. ಆದರಂತೆಯೇ ಮಂಗಳವಾಚಕವಾದ ಶಿವಪದ ದಿಂದ ಕೂಡಿರುವ ಮಂತ್ರವಿದ್ಯೆಯೇ ಶ್ರೇಷ್ಠವೆನಿಸಿಕೊಳ್ಳುವುದು. ಮಂಗಳವಾಚಕ ಶಬ್ದರಹಿತವಾದ ಮಂತ್ರವಿದ್ಯೆಯು ಪ್ರಶಸ್ತವಲ್ಲ. ||೪೭||

ಶಿವಮಂತ್ರಸ್ತು ಮಂತ್ರಾಣಾಂ ತಾವನ್ಮಂಗಳಸೂತ್ರವತ್ ।
ಜಾತೇ ಮಂಗಳದಾನಾಯ ಕಿಮನ್ಯೈಸ್ಸಾಧನೈರಪಿ ॥೪೮॥

ರತ್ನಭೂಷಣಯುಕ್ತಾಪಿ ನ ರಂಡಾ ಭಾತಿ ಸರ್ವಥಾ ।
ವಿನಾ ಮಂಗಳಸೂತ್ರೇಣ ತಥಾ ಮಂತ್ರೋ ನ ತಂ ವಿನಾ ॥೪೯॥

ಕಿಂ ತಯಾ ಕ್ರಿಯತೇ ಧೇನ್ವಾ ಯಾ ನ ದೋಗ್ಧ್ರೀ ನ ಗರ್ಭಿಣೀ ।
ಶಿವಮಂತ್ರವಿಹೀನೇನ ಜಪ್ತೇನ ಮನುನಾಪಿ ಕಿಂ ॥೫೦॥

ಯಾ ಗೌಸ್ಸಗರ್ಭಾ ಸಾ ಪೋಷ್ಯಾ ಸಾಧನೈರ್ವಿವಿಧೈಸ್ತಥಾ ।
ಶಿವಮಂತ್ರೇಣ ಸಂಯುಕ್ತೋ ಮನುರ್ಜಪ್ಯೋ ಮನೀಷಿಭಿಃ ॥೫೧॥

ಶಿವಮಂತ್ರವಾದರೋ ಮಂತ್ರಗಳಿಗೆಲ್ಲಾ ಮಂಗಳಸೂತ್ರದೋಪಾದಿಯಲ್ಲಿದ್ದು, ಕಲ್ಯಾಣವನ್ನುಂಟುಮಾಡುವುದಾಗಿರುತ್ತದೆ. ಹೀಗಿರುವಲ್ಲಿ ಈ ಮಂತ್ರಕ್ಕಿಂತಲೂ ಬೇರೆಯಾದ ಮಂತ್ರಗಳಿಂದ ಯಾವ ಪ್ರಯೋಜನವಿರುವುದು ? ॥೪೮॥

ವಿಧವೆಯು ನಾನಾವಿಧವಾದ ರತ್ನಾಭರಣಗಳಿಂದ ಅಲಂಕೃತಳಾದರೂ, ಮಂಗಳಸೂತ್ರವಿಲ್ಲದಿರುವುದರಿಂದ ಹೇಗೆ ಸೌಭಾಗ್ಯವತಿಯೆನಿಸಿಕೊಳ್ಳಲಾರಳೋ ಅದರಂತೆ ಮಂತ್ರವಿದ್ಯೆಯೂ ಸಹ ಅನೇಕ ಪರಿಕರಗಳಿಂದ ಕೂಡಿದ್ದರೂ ಮಂಗಳ ಸೂಚಕವಾದ ಶಿವಪದದಿಂದ ರಹಿತವಾದರೆ ಶೋಭಿಸಲಾರದು. ॥೪೯॥

ಯಾವ ಹಸುವು ಹಾಲನ್ನು ಕೊಡುವುದಿಲ್ಲವೋ ಅಥವಾ ಗರ್ಭಿಣಿಯೂ ಆಗುವುದಿಲ್ಲವೋ, ಅಂತಹ ಹಸುವಿನಿಂದ ಯಾವ ಪ್ರಯೋಜವುತಾನೇ ಲಭಿಸೀತು ? ಅದರಂತೆಯೇ ಶಿವನಾಮದಿಂದ ರಹಿತವಾದ ಮಂತ್ರವಿದ್ಯೆಯ ಜಪದಿಂದ ಫಲವು ಎಂದೂ ಲಭಿಸಲಾರದು. ॥೫೦॥

ಯಾವ ಹಸುವು ಗರ್ಭದಿಂದ ಕೂಡಿರುವುದೋ ಆ ಹಸುವನ್ನು ನಾನಾವಿಧ ವಾದ ಉಪಾಯಗಳಿಂದ ರಕ್ಷಿಸಬೇಕು. ಅದರಂತೆಯೇ ಶಿವಮಂತ್ರದಿಂದ ಸಹಿತವಾದ ಮಂತ್ರವಿದ್ಯೆಯನ್ನು ಮಂತ್ರಶಾಸ್ತ್ರಪ್ರೋಕ್ತವಾದ ಅನೇಕ ನಿಯಮಗಳಿಂದ ಜಪಮಾ ಡಬೇಕು. ॥೫೧॥

ಶಿವಮಂತ್ರಾತ್ಮಕಂ ರತ್ನಂ ಮಂತ್ರಃ ಪ್ರಾಪ್ಯ ವಿರಾಜತೇ ।
ಯಥಾ ಧರಾ ರತ್ನಗರ್ಭಾ ಫಲಂ ಸೂತೇ ಮನೋಹರಂ ॥೫೨॥

ಪತಿವ್ರತಾಪಿ ಯಾ ನಾರೀ ಪುತ್ರಹೀನಾ ನ ರಾಜತೇ ।
ತಥಾ ಶಿವಪದಾಭಾವೇ ಮಂತ್ರವಿದ್ಯಾ ನ ರಾಜತೇ ॥೫೩॥

ಮಂತ್ರೋ ಮಂತ್ರತ್ವಮಾಪ್ನೋತಿ ಶಿವಮಂತ್ರಪ್ರವೇಶನಾತ್ ।
ತದಭಾವೇ ಸಮಂತ್ರಃ ಸ್ಯಾದಮಂತ್ರಃ ಕೇವಲಃ ಶಿವಃ ॥೫೪॥

ಮಹಿಮಾ ಶಿವಶಬ್ದಾನಾಂ ನ ಜ್ಞಾತುಂ ಶಕ್ಯತೇ ಮಯಾ ।
ವೇದೈರಪಿ ನ ವಿಜ್ಞಾತೋ ಮುನಿಭಿಶ್ಚ ಸುರೈರಪಿ ॥೫೫॥

ಮನ್ಮಂತ್ರೇ ಜಪಯೋಗ್ಯತ್ವಂ ನಾಸ್ತೀತಿ ಮುನಿಭಿಃ ಪ್ರಭೋ ।
ನ ಜಪಾಯ ಪ್ರಯುಕ್ತೋಽಯಮತೋ ದುಃಖಮಿದಂ ಮಮ॥೫೬॥

ರತ್ನಗಳಿಂದ ಕೂಡಿರುವ ಭೂಮಿಯು ಹೇಗೆ ಮನೋಹರವಾದ ಫಲವನ್ನು ಪ್ರಸವಿಸುವುದೋ, ಅದರಂತೆ ಮಂತ್ರವಿದ್ಯೆಯೂ ಸಹ ಶಿವಮಂತ್ರವೆಂಬ ರತ್ನವನ್ನು ಪಡೆದು ಶೋಭಿಸುತ್ತದೆ. ॥೫೨॥

ಸ್ತ್ರೀಯು ಪತಿವ್ರತೆಯಾಗಿದ್ದರೂ ಪುತ್ರವಿಹೀನಳಾಗಿದ್ದರೆ ಅಷ್ಟು ಶೋಭಿಸಲಾರಳು. ಹಾಗೆಯೇ ಮಂತ್ರವಿದ್ಯೆಯು ಶಿವಪದದಿಂದ ರಹಿತವಾದರೆ ಉತ್ತಮವೆನಿಸದು. ॥೫೩॥

ಮಂತ್ರವು ಶಿವಮಂತ್ರದಿಂದ ಯುಕ್ತವಾದುದೇ ಆದರೆ ತನ್ನ ನಿಜಸ್ವರೂಪವನ್ನು ತಾಳುವುದು. ಅದಿಲ್ಲದಿದ್ದರೆ ಆ ಮಂತ್ರವು ತಾತ್ವಿಕದೃಷ್ಟಿಯಿಂದ ಮಂತ್ರವೆನಿಸದೆ ಮಂತ್ರಶಬ್ದದಿಂದ ಮಾತ್ರ ವ್ಯವಹರಿಸಲ್ಪಡುವುದು. ॥೫೪॥

ಶಿವನಾಮಘಟಿತಮಂತ್ರಗಳ ಪ್ರಭಾವವು ನನ್ನಿಂದ ತಿಳಿಯಲು ಅಶಕ್ಯವಾಗಿರುತ್ತದೆ. ಅಷ್ಟೇಕೆ? ವೇದಗಳು, ಮುನಿಗಳು, ದೇವತೆಗಳು ಸಹ ಶಿವಶಬ್ದಪ್ರಭಾವವನ್ನು ತಿಳಿಯಲು ಅಸಮರ್ಥರಾಗಿದ್ದಾರೆ. ॥೫೫॥

ಓ ಸ್ವಾಮಿಯೇ, ನನ್ನ ಮಂತ್ರದಲ್ಲಿ (ಗಾಯತ್ರೀಮಂತ್ರದಲ್ಲಿ) ಜಪಿಸುವ ಯೋಗ್ಯತೆಯು ಇಲ್ಲವೆಂದು ತಿಳಿದು, ಮುನಿಗಳು ಅದನ್ನು ಜಪಿಸುತ್ತಿಲ್ಲ. ಆದುದರಿಂದ ಇದು ನನಗೆ ದುಃಖವನ್ನುಂಟುಮಾಡುತ್ತಿರುವುದು. ॥೫೬॥

ಏತದ್ದುಃಖವಿನಾಶಸ್ತು ತ್ವತ್ಪ್ರಸಾದಂ ವಿನಾ ಕಥಂ ।
ತ್ವಯಿ ಪ್ರಸನ್ನೇ ಭಗವನ್ನಪ್ರಾಪ್ಯಮಪಿ ಕಿಂ ಪ್ರಭೋ ॥೫೭॥

ಯನ್ನ ವೇದೈರಪಿ ಜ್ಞಾತಂ ತವ ರೂಪಂ ಮಹೇಶ್ವರ ।
ತದದ್ಯ ದೃಷ್ಟಂ ಭಗವನ್ ಪ್ರಸೀದ ಪರಮೇಶ್ವರ ॥೫೮॥

ನಮೋ ನಮಸ್ತೇಽಸ್ತು ಮಹೇಶ ತುಭ್ಯಂ
ನಮೋ ನಮಸ್ತೇಽಸ್ತು ವೃಷಧ್ವಜಾಯ ।
ನಮೋ ನಮಸ್ತೇ ಗಿರಿಜಾಧವಾಯ
ವಿದ್ಯಾಸ್ವರೂಪಾಯ ನಮೋ ನಮಸ್ತೇ ॥೫೯॥

ನಮೋ ನಮಸ್ತೇ ಪರಮಾತ್ಮನೇ ನಮಃ
ಸ್ವರ್ಗಾಪವರ್ಗಪ್ರದ ಭರ್ಗ ಶಂಭೋ ।
ಭವತ್ಪದಾಂಭೋಜವಿಲೋಕನೇನ
ಸುಖಾಂಬುಧಿರ್ಮಯ್ಯನುವೃತ್ತಿಮಾಪ ॥೬೦॥

ಓ ಪ್ರಭುವೇ, ನಿನ್ನ ಅನುಗ್ರಹವಿಲ್ಲದಿದ್ದರೆ ನನಗೆ ಪ್ರಾಪ್ತವಾಗಿರುವ ಈ ದುಃಖವು ಹೇಗೆ ತಾನೇ ನಶಿಸುವುದು? ನೀನು ಪ್ರಸನ್ನನಾದರೆ ನನಗೆ ಯಾವ ಇಷ್ಟಾರ್ಥವು ತಾನೇ ದೊರೆಯಲಾರದು? ॥೫೭॥

ಓ ಶಿವನೇ, ನಿನ್ನ ಯಾವ ರೂಪವು ವೇದಗಳಿಗೂ ಅಗೋಚರವಾಗಿರುವುದೋ ಅಂತಹ ಸ್ವರೂಪವನ್ನು ಈಗ ನಾನು ಸಾಕ್ಷಾತ್ಕರಿಸಿದೆನು. ದೇವದೇವನೇ, ಪ್ರಸನ್ನನಾಗು. ॥೫೮॥

ಪೂಜ್ಯನಾದ ಪ್ರಭುವೇ, ನಿನಗೆ ನಮಸ್ಕಾರ. ವೃಷಭವನ್ನು ಧ್ವಜದಲ್ಲಿರಿಸಿಕೊಂಡಿರುವ ದೇವನೇ, ನಿನಗೆ ನಮಸ್ಕಾರ. ಪಾರ್ವತೀಪತಿಯಾದ ನಿನಗೆ ನಮಸ್ಕಾರ. ಜ್ಞಾನಸ್ವರೂಪನಾದ ನಿನಗೆ ವಂದನೆ. ॥೫೯॥

ಪರಮಾತ್ಮನೂ, ಸ್ವರ್ಗ ಮತ್ತು ಮೋಕ್ಷವೆಂಬ ಪುರುಷಾರ್ಥಗಳನ್ನು ಕೊಡುವವನೂ, ಸಂಸಾರವನ್ನು ದೂರಮಾಡುವವನೂ ಆದ ನಿನಗೆ ನಮಸ್ಕಾರ. ನಿನ್ನ ಅಡಿದಾವರೆಗಳ ದರ್ಶನದಿಂದ ನಾನು ಈಗ ಆನಂದಸಾಗರದಲ್ಲಿ ಮುಳುಗಿರುವೆನು. ॥೬೦॥

ಆಪತ್ಕುಲಂ ನಷ್ಟಮನಂತನಿಾಶ
ತ್ವತ್ಪಾದಪದ್ಮಾರ್ಪಿತಚಿತ್ತವೃತ್ತೇಃ ।
ಶುಭಾಸ್ಪದತ್ವಂ ಸಮವಾಪ್ಯ ಶಂಭೋ
ಪ್ರಸನ್ನಚಿತ್ತೋಽಪಿ ಭವೇನ್ನರೋಽಪಿ ॥೬೧॥

ಅಣೋರಣೀಯಾನ್ ಮಹತೋ ಮಹೀಯಾನಾತ್ಮಾ
ಗುಹಾಯಾಂ ನಿಹಿತೋಽಸ್ಯ ಜಂತೋಃ ।
ತಮಕ್ರತುಂ ಪಶ್ಯತಿ ವೀತಶೋಕೋ
ಧಾತುಪ್ರಸಾದಾನ್ಮಹಿಮಾನಮಿಾಶಂ ॥೬೨॥

ಪ್ರಭುವೇ, ನಿನ್ನ ಪಾದಕಮಲಗಳ ಧ್ಯಾನದಿಂದ ನನ್ನ ಕಷ್ಟಪರಂಪರೆಗಳೆಲ್ಲವೂ ನಷ್ಟವಾದುವು. ಶಂಭುವೇ, ಇದರಿಂದ ಮನುಷ್ಯನು ಸದಾಶ್ರಯವನ್ನು ಹೊಂದಿ ನಿರ್ಮಲವಾದ ಅಂತಃಕರಣವುಳ್ಳವನಾಗುತ್ತಾನೆ. ॥೬೧॥

ಅಣುಪರಿಮಾಣವುಳ್ಳ ಪದಾರ್ಥಕ್ಕಿಂತಲೂ ಅಣುವಾದವನೂ, ಮಹತ್ಪರಿಣಾಮವುಳ್ಳ ಆಕಾಶಾದಿಗಳಿಗಿಂತಲೂ ವ್ಯಾಪಕನೆನಿಸಿರುವೆ. (ಎಂದರೆ ಪರಬ್ರಹ್ಮನು ತನಗಿಂತ ಭಿನ್ನವಾದ ಸಕಲ ಪದಾರ್ಥಗಳಿಗೂ ಅಧಿಷ್ಠಾನಸ್ವರೂಪನಾಗಿರುವನು. ಅತ್ಯಂತ ಚಿಕ್ಕದಾದ ಪರಮಾಣುವಿನಿಂದ ಮೊದಲುಗೊಂಡು, ಪರಮಮಹತ್ಪರಿಮಾಣವುಳ್ಳ ಆಕಾಶಾದಿಗಳ ಪರ್ಯಂತವೂ ಇರುವ ಸಕಲ ಪದಾರ್ಥಗಳೂ ಇವನಲ್ಲಿ ಕಲ್ಪಿತವಾದುದರಿಂದ ಅವುಗಳಿಗೆ ಇವನು ಅಧಿಷ್ಠಾನನಾಗಿರುವನು. ಅಣುಪರಿಮಾಣವುಳ್ಳ ಪದಾರ್ಥಗಳಿಗೆ ಅಧಿಷ್ಠಾನನಾಗಿರುವುದರಿಂದ, ಅಣುವಿಗಿಂತಲೂ ಅಣುವೆಂತಲೂ, ಪರಮಮಹತ್ಪರಿಮಾಣವುಳ್ಳ ಪದಾರ್ಥಗಳಿಗೆ ಅಧಿಷ್ಠಾನನಾದುದರಿಂದ, ಮಹತ್ಪದಾರ್ಥಕ್ಕಿಂತಲೂ ಮಹತ್ತ್ವವುಳ್ಳವನೆಂದು ವ್ಯವಹರಿಸಲ್ಪಡುತ್ತಾನೆ.) ಇಂತಹ ಪರಬ್ರಹ್ಮಸ್ವರೂಪನಾದ ಆತ್ಮನು ಪ್ರಾಣಿಗಳ ಬುದ್ಧಿಯೆಂಬ ಗುಹೆಯಲ್ಲಿ ಅಡಗಿರುವನು. ಸರ್ವತ್ರ ವ್ಯಾಪಕನಾದ ಆತ್ಮನು ಅಣುರೇಣುತೃಣಕಾಷ್ಠಮೊದಲುಗೊಂಡು ಸಕಲ ಪದಾರ್ಥಗಳಲ್ಲಿಯೂ ವ್ಯಾಪಿಸಿರುವನು. ಆದರೂ ತನಗೆ ಅಧೀನವಾದ ಅವಿದ್ಯೆಯ ಮಹಿಮೆಯಿಂದ ಜೀವಭಾವವನ್ನು ಹೊಂದಿ ಪ್ರಾಣಿಗಳ ಅಂತಃಕರಣವೆಂಬ ಕನ್ನಡಿಯಲ್ಲಿ ವಿಶೇಷವಾಗಿ ಪ್ರತಿಫಲಿಸಿ, "ಅಹಂ ಅಹಂ" ಎಂಬ ರೂಪದಿಂದ ಗೋಚರನಾಗುತ್ತಾನೆ. ಆದುದರಿಂದಲೇ, ಬುದ್ಧಿ ಎಂಬ ಗುಹೆಯಲ್ಲಿ ಆತ್ಮನು ಇರುವನೆಂದು

ಉಮಾಸಹಾಯಂ ಪರಮೇಶ್ವರಂ ಪ್ರಭುಂ
ತ್ರಿಲೋಚನಂ ನೀಲಕಂಠಂ ಪ್ರಶಾಂತಂ ।
ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ
ಸಮಸ್ತಸಾಕ್ಷಿಂ ತಮಸಃ ಪರಸ್ತಾತ್ ॥೬೩॥

ಅವ್ಯಕ್ತರೂಪಂ ಪರಮಾತ್ಮತತ್ತ್ವಂ
ನ ವೇದವೇದಾಂತಪರಿಶ್ರಮೇಽಪಿ ।
ಜ್ಞೇಯಂ ಪರಂತ್ವೀಶ್ವರಪಾದಪದ್ಮ
ಪ್ರಸಾದವಿಜ್ಞೇಯಮಿತಿ ಪ್ರಮಾ ಮೇ ॥೬೪॥

ನ ಯತ್ ಸ್ವರೂಪಂ ತವ ವೇದದೃಷ್ಟಂ
ನ ದೃಷ್ಟಮೀಶಾನಸುರೈರಪೀದಂ ।
ಮಯಾ ಪರಂ ಭಾಗ್ಯವಶೇನ ದೃಷ್ಟಂ
ಭಾಗ್ಯಸ್ಯ ಕಾ ವಾ ಭಗವನ್ನಿಯತ್ತಾ ॥೬೫॥

ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ. ಪುಣ್ಯಪಾಪಾದಿಗಳ ಸಂಪರ್ಕವಿಲ್ಲದಿರುವ ಆ ಪರಬ್ರಹ್ಮನನ್ನು ಜ್ಞಾನಿಯು ಜ್ಞಾನಪ್ರಭಾವದಿಂದ ಅಜ್ಞಾನವನ್ನು ಹೋಗಲಾಡಿಸಿ ಚಿತ್ತಶುದ್ಧತೆಯಿಂದ ಸಾಕ್ಷಾತ್ಕರಿಸಿಕೊಳ್ಳುವನು. ॥೬೨॥

ಜ್ಞಾನಿಯು ಉಮಾಸಹಿತನೂ, ನೇತ್ರತ್ರಯವಿಶಿಷ್ಟನೂ, ಸೌಮ್ಯನೂ, ಚರಾಚರವಸ್ತುಗಳಿಗೆ ಕಾರಣಭೂತನೂ, ಅಜ್ಞಾನಸಂಬಂಧದಿಂದ ವಿನಿರ್ಮುಕ್ತನೂ, ಸಕಲ ಪದಾರ್ಥಗಳನ್ನೂ ಸಹಾಯಾಂತರವಿಲ್ಲದೆ ಸ್ವಸ್ವರೂಪದಿಂದಲೇ ಸಾಕ್ಷಾತ್ಕರಿಸುವ ಸಾಮರ್ಥ್ಯವುಳ್ಳ ಸಾಕ್ಷಿಸ್ವರೂಪನೂ ಆದ ಪರಮೇಶ್ವರನನ್ನು ಧ್ಯಾನಿಸಿ, ಕೈವಲ್ಯವನ್ನು ಹೊಂದುತ್ತಾನೆ. ॥೬೩॥

ನಿರಾಕಾರವಾದ ಆ ಪರಬ್ರಹ್ಮವಸ್ತುವನ್ನು ವೇದ ಮತ್ತು ಉಪನಿಷತ್ತುಗಳ ಅಭ್ಯಾಸದಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಪರಮೇಶ್ವರನ ಪಾದಕಮಲಗಳ ಸೇವೆಯಿಂದ ಮಾತ್ರ ಸಾಧ್ಯವಾದುದೆಂದು ನಾನು ತಿಳಿಯುತ್ತೇನೆ. ॥೬೪॥

ಸ್ವಾಮಿಯೇ, ನಿನ್ನ ಯಾವ ಸ್ವರೂಪವನ್ನು ಸಾಕ್ಷಾತ್ಕರಿಸಲು ವೇದಗಳು ಮತ್ತು ದೇವತೆಗಳೂ ಸಹ ಅಸಮರ್ಥರಾದರೋ, ಆ ಸ್ವರೂಪವನ್ನು ನಾನು ಪೂರ್ವಜನ್ಮದ ಸುಕೃತವಿಶೇಷದಿಂದ ಈಗ ಸಾಕ್ಷಾತ್ಕರಿಸಿರುತ್ತೇನೆ. ಆ ಸುಕೃತದ

ಯತ್ಪಾದಪದ್ಮಸ್ಮರಣಪ್ರವೃತ್ತಾ ಕೃತಾಂತವಾರ್ತಾಮಪಿ ದುಃಸಹಾಂ ತಾಂ ।
ವಿಹಾಯ ಚಾನಂದಜಲಾಬ್ಧಿಮಗ್ನಾಃ ಸಂಸಾರತಾಪೈರ್ನಚ ಪೀಡಿತಾಃ
ಸ್ಯುಃ ॥೬೬॥

ಮಹೇಶ್ವರ ಶ್ರೀಚರಣಾರವಿಂದಂ ನಿಧಾಯ ಚಿತ್ತಾಂಬುಜಕರ್ಣಿಕಾಯಾಂ ।
ಆನಂದಧಾರಾವೃತಸಚ್ಛರೀರಾಸ್ಸುರಾಃ ಪ್ರಪಶ್ಯಂತಿ ನರಾ ನ ಧೀರಾಃ ॥೬೭॥

ಯದೀಕ್ಷಣಂ ವಾ ಶಿವಪಾದಪದ್ಮಂ
ಹೃತ್ಪದ್ಮಸಂವಿಷ್ಟಮತಿಪ್ರಕೃಷ್ಟಂ ।
ಪ್ರಕೃಷ್ಟ ಏವಾತಿನಿಕೃಷ್ಟಜನ್ಮಾ
ಪ್ರಕೃಷ್ಟಜನ್ಮಾ ಸ ತು ಕಿಂ ಪುನಃ ಸ್ಯಾತ್ ॥೬೮॥

ಮಹಿಮೆಯನ್ನು ಏನೆಂದು ಹೇಳಲಿ? ಅದನ್ನು ನಿರ್ಣಯಿಸುವುದೇ ಅಶಕ್ಯವಾಗಿರುತ್ತದೆ. ॥೬೫॥

ನಿರಂತರವೂ ನಿನ್ನ ಅಡಿದಾವರೆಗಳ ಸ್ಮರಣೆಯಲ್ಲಿ ಆಸಕ್ತರಾದ ಭಕ್ತರು, ಸಹಿಸಲಶಕ್ಯವಾದ ಅಂತಕನ ಪೀಡೆಗೆ ಬಲಿಯಾಗದೆ, ಆನಂದಸಾಗರದಲ್ಲಿ ಮುಳುಗಿದವರಾಗಿ, ಸಂಸಾರಕ್ಲೇಶಗಳಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದುತ್ತಾರೆ. ॥೬೬॥

ಧೀರರಾದ ದೇವತೆಗಳು ಮಹೇಶ್ವರನ ಕಾಂತಿಯುಕ್ತವಾದ ಅಡಿದಾವರೆಗಳನ್ನು ಮನಸ್ಸೆಂಬ ಕಮಲಪೀಠದಲ್ಲಿಟ್ಟು, ಧ್ಯಾನಿಸಿ, ಆನಂದವೆಂಬ ಮಕರಂದದ ಪ್ರವಾಹದಿಂದ ಸುತ್ತಲೂ ಆವರಿಸಲ್ಪಟ್ಟ ದಿವ್ಯದೇಹವುಳ್ಳವರಾಗಿ, ಪರಮಾತ್ಮನಲ್ಲಿ ಐಕ್ಯರಾಗುವರು. ಅಧೀರರಾದ ಮನುಜರು ಹಾಗೆ ಮಾಡಿ ಶಿವಸ್ವರೂಪವನ್ನು ಸಾಕ್ಷಾತ್ಕರಿಸಲಾರರು. ॥೬೭॥

ಹೃದಯವೆಂಬ ಪದ್ಮದಲ್ಲಿ ಅಡಗಿರುವ ಶಿವನ ಅಡಿದಾವರೆಯ ದರ್ಶನವು ಅತ್ಯಂತ ಉತ್ಕೃಷ್ಟವಾದುದು. ಹೀಗೆ ಆ ಶಿವಪಾದಪದ್ಮವನ್ನು ಸಂದರ್ಶಿಸಿದ ಜ್ಞಾನಿಯು ಎಂತಹ ನಿಕೃಷ್ಟನಾದರೂ ಶಿವಪಾದಪದ್ಮದ ಮಹಿಮೆಯಿಂದ ಉತ್ಕೃಷ್ಟನೆನಿಸುವನು. ಹೀಗಿರುವಲ್ಲಿ ಉತ್ಕೃಷ್ಟಜನ್ಮವನ್ನು ಪಡೆದವನಿಗೆ ಇದಕ್ಕಿಂತಲೂ ಬೇರೆಯ ಯಾವ ಪುರುಷಾರ್ಥವಿರುವುದು? ॥೬೮॥

ಸ್ವರ್ಗಾಪವರ್ಗಪ್ರದಮೀಶ್ವರಂ ತ್ವಾಂ
ಭಜಂತಿ ಧನ್ಯಾಃ ಪರಮಂತರಾಯೈಃ ।
ವಿನಾ ವಿಮುಕ್ತಾಘಪರಂಪರಾಸ್ತೇ
ಸಮಸ್ತಲೋಕೇಷು ಕಿಲಾಸ್ತಿಕಾಸ್ತೇ ॥೬೯॥

ಅನಂತಕಲ್ಯಾಣಪರಂಪರಾಸು ತಿಷ್ಠಂತಿ ತೇ ಶಂಕರಪೂಜಕಾಸ್ತೇ ।
ನಾಪತ್ಪ್ರಪಶ್ಯಂತಿ ಕದಾಪಿ ಧೀರಾಃ ಧೀರಾಸ್ತ ಏವೇತಿ ವಿಚಾರಿತಾಶ್ಚ ॥೭೦॥

ಮಯಿ ಪ್ರಸಾದೋಽಪಿ ಕೃತಸ್ತ್ವಯಾಯಂ
ತ್ವತ್ಪಾದಸಂದರ್ಶನದಾನರೂಪಃ ।
ಆನಂದಕಂದೋಽಯಮನುಕ್ಷಣಂ ಮೇ
ಸೂತೇ ಮಹಾನಂದವಿಧಾನಮೀಶ ॥೭೧॥

ಸ್ವರ್ಗ ಮತ್ತು ಮೋಕ್ಷವೆಂಬ ಪುರುಷಾರ್ಥಗಳನ್ನು ದಯಪಾಲಿಸುವ, ಪ್ರಭುವಾದ ನಿನ್ನನ್ನು ನಿನ್ನ ಭಕ್ತರು ಸೇವಿಸುತ್ತಾರೆ. ಹೀಗೆ ಎಡೆಬಿಡದೆ ನಿನ್ನನ್ನೇ ಧ್ಯಾನಮಾಡುತ್ತಲಿರುವ ಅವರು ಯಾವ ತೊಂದರೆಯೂ ಇಲ್ಲದೆ ಸಕಲ ಲೋಕಗಳಲ್ಲಿಯೂ ಧನ್ಯರೆನಿಸಿಕೊಳ್ಳುವರು. ಇವರೇ ಆಸ್ತಿಕರಲ್ಲವೇ? ॥೬೯॥

ಶಿವಪೂಜಕರಾದ ಅವರು ನಾನಾವಿಧವಾದ ಶುಭಪರಂಪರೆಗಳನ್ನು ಹೊಂದುತ್ತಾರೆ. ಧೈರ್ಯಶಾಲಿಗಳೆನಿಸಿ ಅವರು ಎಂದಿಗೂ ತೊಂದರೆಗಳಿಗೀಡಾಗುವುದಿಲ್ಲ. ಅಂತಹ ಶಿವಪೂಜಕರೇ ಧೀರರೆಂದು ನಿಶ್ಚಯಿಸಲ್ಪಡುವರು. ॥೭೦॥

ಓ ಪ್ರಭುವೇ, ನಿನ್ನ ಪಾದಸಂದರ್ಶನವನ್ನುಂಟುಮಾಡಿರುವುದರಿಂದಲೇ ನಾನು ನಿನ್ನಿಂದ ಅನುಗೃಹೀತನಾಗಿರುವೆನು. ಅದರಿಂದುಂಟಾದ ನನ್ನ ಆನಂದದ ಮೊಳಕೆಯೇ ಪ್ರತಿಕ್ಷಣದಲ್ಲಿಯೂ ನನಗೆ ನಿರತಿಶಯವಾದ ಆನಂದವನ್ನು ಒದಗಿಸುತ್ತಿದೆ. ॥೭೧॥

ಕಾರುಣ್ಯಪೂರ್ಣಾಂಬುಧಿಮೀಶ್ವರಂ ತ್ವಾಂ
ಸ್ಮೃತ್ವಾಪಿ ಸಂತೋಷಮಹಾಬ್ಧಿಪೂರ್ಣಃ ।
ದೃಷ್ಟ್ವಾ ಭವಂತಂ ಭಗವಂತಮೀಶಂ
ಕೋ ವಾ ನ ತೃಪ್ತಸ್ತರಸಾ ಸುಖೇನ ॥೭೨॥

ಅನುಕ್ಷಣಂ ತಸ್ಯ ಸುಖಾನಿ ಶಂಭೋ
ಸುಖಾನಿ ಸಂಪಜ್ಜಲರಾಶಯೋಽಪಿ ।
ಯಸ್ಯಾನಪಾಯಾ ತ್ವಯಿ ಭಕ್ತಿರೀಶ
ಸಾ ತಾವದತ್ಯಂತಸುದುರ್ಲಭಾ ನ ॥೭೩॥

ಯೇನಾಪ್ರಮಾದೇನ ಕೃತೋಽಸ್ತಿ ಧರ್ಮೋ
ಮಹೇಶಪಾದಾರ್ಚನರೂಪ ಏವ ।
ತಸ್ಯೈವ ತದ್ಭಕ್ತಿಶುಭಪ್ರವಾಹಃ
ಸುದುರ್ಲಭಃ ಕಿಂ ನ ಸತಾಮಪೀಶ ॥೭೪॥

ದಯಾಸಾಗರನಾದ ನಿನ್ನ ಸ್ಮರಣಮಾತ್ರದಿಂದಲೇ ಮನುಜನು ಆನಂದ ಸಾಗರದಲ್ಲಿ ತೇಲಾಡುವನು. ಹೀಗಿರುತ್ತಿರಲು ಭಗವಂತನಾದ ನಿನ್ನ ದರ್ಶನದಿಂದ ಯಾವ ಮನುಜನು ತಾನೇ ತೃಪ್ತನಾಗಿ ಸುಖವನ್ನು ಹೊಂದಲಾರನು. ॥೭೨॥

ಓ ಪ್ರಭುವೇ, ಯಾವ ಮನುಜನಿಗೆ ನಿನ್ನಲ್ಲಿ ಅಚಲವಾದ ಭಕ್ತಿಯಿರುವುದೋ, ಅವನು ಪ್ರತಿಕ್ಷಣದಲ್ಲಿಯೂ ಸುಖಿಯಾಗಿರುತ್ತಾನೆ. ಮತ್ತು ಅವನ ಸಮೀಪದಲ್ಲಿ ಸಂಪತ್ತೆಂಬ ನೀರಿನ ಪ್ರವಾಹವು ಪ್ರವಹಿಸುವುದು. ಆದರೆ, ಅಂತಹ ಅಚಲವಾದ ಭಕ್ತಿಯು ಮಾತ್ರ ಭಕ್ತನಿಗೆ ಅತ್ಯಂತ ದುರ್ಲಭವಾದುದಲ್ಲವೇ ? ॥೭೩॥

ಯಾವನು ಲೋಪವಿಲ್ಲದೇ ಜಾಗರೂಕತೆಯಿಂದ ಶಿವಪಾದಾರ್ಚನ ರೂಪವಾದ ಸತ್ಕರ್ಮವನ್ನು ಆಚರಿಸಿರುವನೋ, ಅವನಿಗೆ ಈಶ್ವರನಲ್ಲಿ ಅಚಲವಾದ ಭಕ್ತಿಯು ಸುಲಭವಾಗಿ ಲಭಿಸುವುದು. ಹೀಗಿರುವಲ್ಲಿ, ದುರ್ಜನರಿಗೆ ಆ ಭಕ್ತಿಯು ಎಂದಾದರೂ ಲಭಿಸೀತೇ ? ॥೭೪॥

ಶಂಭೋ ಯಥಾ ಭರ್ಗಪದಪ್ರವೇಶೋ
ಮಂತ್ರೇ ಮದೀಯೇಽಪಿ ತಥಾ ಪ್ರಸಾದಃ ।
ಭವತ್ವಯಂ ಮೇ ಭಗವನ್ ವರೋಽಸ್ಯ
ವರತ್ವಮಿತ್ಯೇವ ಮತಿರ್ಮಮಾಸ್ತು ॥೨೫॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ತಥಾಸ್ತ್ವಿತಿ ಮಹೇಶ್ವರಃ ।
ಗಾಯತ್ರೀಪೂಜಿತೇ ಲಿಂಗೇ ಪ್ರವಿಷ್ಟೋ ಗಣಸಂವೃತಃ ॥೨೬॥

ಗಾಯತ್ರೀಪೂಜಿತಂ ಲಿಂಗಂ ಯಃ ಪೂಜಯತಿ ಸಾದರಂ ।
ಸ ಸರ್ವಸಿದ್ಧಿಸಂಪನ್ನಸ್ಸಿದ್ಧೇಷು ಪ್ರಥಿತೋ ಭವೇತ್ ॥೨೭॥

ತದಾ ಪ್ರಭೃತಿ ಗಾಯತ್ರೀ ಜಪಯೋಗ್ಯಾ ಮುನೀಶ್ವರಾಃ ।
ಸ್ವರ್ಗಾಪವರ್ಗದಾತೃತ್ವಾತ್ ಭರ್ಗೋ ಭರ್ಗತ್ವಮಾಗತಃ ॥೨೮॥

ಓ ಸ್ವಾಮಿಯೇ, ನಿನ್ನ ಶಿವಮಂತ್ರದಲ್ಲಿ ಹೇಗೆ ಶಿವಪದವು ಸೇರಿರುವುದೋ, ಅದರಂತೆಯೇ ನನ್ನ ಮಂತ್ರದಲ್ಲಿಯೂ ಸಹ (ಗಾಯಿತ್ರೀಮಂತ್ರ) ಭರ್ಗಪದವು ಸೇರುವಂತೆ ಅನುಗ್ರಹಿಸುವವನಾಗು. ಇದೇ ನಾನು ನಿನ್ನಲ್ಲಿ ಬೇಡಿಕೊಳ್ಳುವ ವರವಾಗಲಿ. ಇದೇ ನನ್ನ ಇಷ್ಟಾರ್ಥ. ॥೨೫॥

ಹೀಗೆಂದು ಪ್ರಾರ್ಥಿಸಿದ ಗಾಯತ್ರಿಯ ಆ ಮಾತನ್ನು ಕೇಳಿ ಶಿವನು ಗಾಯತ್ರಿಯನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ, ಪ್ರಮಥಗಣಗಳೊಂದಿಗೆ ಗಾಯತ್ರಿಯು ಪೂಜಿಸಿದ ಲಿಂಗದಲ್ಲಿ ಐಕ್ಯವನ್ನು ಹೊಂದಿದನು. ॥೨೬॥

ಗಾಯತ್ರಿಯು ಅರ್ಚಿಸಿದ ಆ ಶಿವಲಿಂಗವನ್ನು ಯಾವ ಮನುಜನು ಆದರಪೂರ್ವಕವಾಗಿ ಪೂಜಿಸುವನೋ, ಅವನು ಸಕಲ ಸಿದ್ಧಿಗಳನ್ನೂ ಹೊಂದಿ ಸಿದ್ಧಪುರುಷರಲ್ಲಿ ಅಗ್ರೇಸರನಾಗುವನು. ॥೨೭॥

ಎಲೈ ಮುನಿಶ್ರೇಷ್ಠರೇ, ಅಂದಿನಿಂದ ಮೊದಲುಗೊಂಡು ಗಾಯತ್ರಿಯು ಜಪಯೋಗ್ಯತೆಯನ್ನು ಹೊಂದಿದಳು. ಶಿವನೂ ಸ್ವರ್ಗ ಮತ್ತು ಮೋಕ್ಷಗಳೆಂಬ ಪರಮಪುರುಷಾರ್ಥಗಳನ್ನು ಕೊಡುವುದರಿಂದ "ಭರ್ಗ" ಎಂಬ ಅನ್ವರ್ಥ ಸಂಜ್ಞೆಯನ್ನು ಹೊಂದಿದನು. ॥೨೮॥

ಯೋ ಗಾಯತ್ರೀಸ್ತವಂ ಪುಣ್ಯಂ ಮಹೇಶಜ್ಞಾನಪೂರ್ವಕಂ ।
ಪಠೇಜ್ಜಪಫಲಂ ಪ್ರಾಪ್ಯ ಸಿದ್ಧಮಂತ್ರೋ ಭವಿಷ್ಯತಿ ॥೭೯॥

ಏತಾದೃಶಃ ಶಿವಃ ಕೇನ ನಾರ್ಚಿತೋ ನ ನತೋ ಮುಹುಃ ।
ನ ಧ್ಯಾತೋ ನ ಸ್ಮೃತಃ ಪುಣ್ಯೈರಪಾರೈರ್ವಿವಿಧೈರಪಿ ॥೮೦॥

ಶಿವಮಂತ್ರಜಪಂ ಕೃತ್ವಾ ಶಿವಧ್ಯಾನಪುರಃಸರಂ ।
ಶಿವಂ ಯಾಂತಿ ಶಿವಾಚಾರಾಃ ಸದಾಚಾರರತಾಃ ಸದಾ ॥೮೧॥

ಅತಃ ಶಿವಪದಾಭಾವೇ ಮಂತ್ರೋ ಜಪ್ಯೋ ನ ಸರ್ವಥಾ ।
ಶಿವಮಂತ್ರಾನ್ವಿತೋ ಮಂತ್ರಃ ಜಪನೀಯಃ ಪ್ರಯತ್ನತಃ ॥೮೨॥

ವೇದೋಕ್ತತ್ವೇನ ಶಬ್ದಸ್ತು ನ ಜಪಾಯೋಪಯುಜ್ಯತೇ ।
ನ ಹಿ ರಾಸಭಶಬ್ದಸ್ಯ ಶುದ್ಧಸ್ಯ ಜಪಯೋಗ್ಯತಾ ॥೮೩॥

ಯಾವನು ಪುಣ್ಯಕರವಾದ ಗಾಯತ್ರೀಸ್ತೋತ್ರವನ್ನು ಈಶ್ವರಸ್ಮರಣ ಪೂರ್ವಕವಾಗಿ ಉಚ್ಚರಿಸುವನೋ, ಅವನು ಅದರ ಫಲವನ್ನು ಪಡೆದು ಗಾಯತ್ರೀ ಮಂತ್ರಸಿದ್ಧಿಯನ್ನು ಹೊಂದುತ್ತಾನೆ. ॥೭೯॥

ಪೂರ್ವೋಕ್ತವಾದ ಮಹಿಮೆಯುಳ್ಳ ಆ ಶಿವನನ್ನು ಯಾವನು ಧ್ಯಾನ ಪೂರ್ವಕವಾಗಿ ಅರ್ಚಿಸಿ ನಮಸ್ಕರಿಸುವನೋ, ಅವನಿಗೆ ಅಪಾರವಾದ ಪುಣ್ಯಪ್ರಾಪ್ತಿ ಯೊದಗುವುದು. ಆದರೆ ಆತನು ಸುಕೃತಿಯಾಗದಿದ್ದರೆ ಈಶ್ವರಸ್ಮರಣೆಯಾಗಲಿ, ಈಶ್ವರಾರ್ಚನಬುದ್ಧಿಯಾಗಲಿ ಉದ್ಭವಿಸಲಾರದು. ॥೮೦॥

ನಿರಂತರವೂ ಸತ್ಕರ್ಮಾಚರಣೆಯಲ್ಲಿ ಆಸಕ್ತರೂ, ಶಿವನನ್ನೇ ಅರ್ಚಿಸು ವವರೂ ಆದ ಮನುಜರು ಶಿವಧ್ಯಾನಪೂರ್ವಕವಾಗಿ ಶಿವಮಂತ್ರವನ್ನು ಜಪಿಸಿ, ಶಿವಸಾಯುಜ್ಯವನ್ನು ಹೊಂದುವರು. ॥೮೧॥

ಆದುದರಿಂದ ಯಾವ ಮಂತ್ರವು ಶಿವಪದದಿಂದ ಕೂಡಿರುವುದಿಲ್ಲವೋ, ಆ ಮಂತ್ರವು ಜಪಯೋಗ್ಯವಾದುದಲ್ಲ. ಶಿವನಾಮಧೇಯದಿಂದ ಕೂಡಿರುವ ಮಂತ್ರ ವನ್ನೇ ಆಸಕ್ತಿಯಿಂದ ಜಪಿಸಬೇಕು. ॥೮೨॥

ವೇದೋಕ್ತವಾದ ಮಂತ್ರದಿಂದಲೇ ಶಬ್ದವು ಜಪಯೋಗ್ಯತೆಯನ್ನು ಪಡೆಯು ಲಾರದು. "ರಾಸಭ" ಎಂಬ ಶಬ್ದವು ವೇದೋಕ್ತವೆನಿಸಿದ್ದಾ ಶುದ್ಧವಾಗಿದ್ದರೂ ಸಹ ಅದರಲ್ಲಿ ಜಪಯೋಗ್ಯತೆ ಇರುವುದಿಲ್ಲ. ॥೮೩॥

ತೃಣಂ ಪ್ರಸೂನಸಹಿತಂ ಯಥಾ ಮೌಳಿವಿಭೂಷಣಂ ।
ತಥಾ ಶಿವಪದೋಪೇತೋ ಮಂತ್ರಃ ಕಂಠವಿಭೂಷಣಂ ॥೮೪॥

ಮುಕ್ತಿಕಾಂತಾ ಕರಾಕ್ರಾಂತಾ ಶಿವಮಂತ್ರಜಪೈಃ ಪರಂ ।
ವೇದಾಂಬುರಾಶಿಃ ಸರ್ವೋಽಪಿ ನಾಲಂಕಾರಾಯ ಜಾಯತೇ ॥೮೫॥

ರತ್ನಾಕರತ್ವಂ ಜಲಧೇಃ ದಿವ್ಯರತ್ನಾನ್ವಯಾತ್ಪರಂ ।
ಕಿರೀಟಯೋಗ್ಯಂ ತದ್ರತ್ನಂ ತತ್ರತ್ಯಂ ನ ತೃಣಂ ತಥಾ ॥೮೬॥

ಸಮುದ್ರಸ್ಥತ್ವಮಾತ್ರೇಣ ತತ್ರತ್ಯಾಃ ಸಿಕತಾ ಅಪಿ ।
ಕೇನ ವಾ ಶಿರಸಾ ವಾಹ್ಯಾಃ ತತ್ರತ್ಯಾ ಮಣಯೋ ಯಥಾ ॥೮೭॥

ಹೂವಿನಿಂದ ಕೂಡಿಕೊಂಡಿರುವ ದಂಟು (ನಾಳ) ಹೇಗೆ ಶಿರಸ್ಸಿಗೆ ಭೂಷಣವಾಗಿರುವುದೋ, ಅದರಂತೆ ಶಿವನಾಮಧೇಯದಿಂದ ಸಹಿತವಾದ ಮಂತ್ರವು ಕಂಠಕ್ಕೆ ಭೂಷಣವಾಗಿರುತ್ತದೆ. (ಕಂಠ=ಶಬ್ದೋಚ್ಚಾರಣೆಯ ಸ್ಥಾನ). ॥೮೪॥

ಶಿವಮಂತ್ರದ ಜಪದಿಂದ ಮುಕ್ತಿಯೆಂಬ ರಮಣಿಯು ಕೈಗೆ ಸಿಕ್ಕುವಳು. ಆದುದರಿಂದ ಸಕಲ ವೇದರಾಶಿಯಲ್ಲಿಯೂ ಶಿವಮಂತ್ರವು ಜಪಯೋಗ್ಯವಾದುದೆಂದು ತಿಳಿಯಬೇಕು. ॥೮೫॥

ಶ್ರೇಷ್ಠವಾದ ರತ್ನಗಳು ಸೇರಿದ್ದರಿಂದಲೇ ಸಮುದ್ರವು "ರತ್ನಾಕರ" ಎಂಬ ಅನ್ವರ್ಥ ಸಂಜ್ಞೆಯನ್ನು ಪಡೆದಿರುವುದು. ಅದರಂತೆ ಶ್ರೇಷ್ಠವಾದ ಶಿವಮಂತ್ರದಿಂದ ಯುಕ್ತವಾದರೆ, ಮಂತ್ರರಾಶಿಯು ಜಪಯೋಗ್ಯತೆಯನ್ನು ಪಡೆಯುವುದು. ಸಮುದ್ರದಲ್ಲಿ ಶ್ರೇಷ್ಠವಾದ ರತ್ನಗಳಿರುವಂತೆ ಹುಲ್ಲು, ಪಾಚಿ ಮುಂತಾದ ಪದಾರ್ಥಗಳೂ ಇವೆ. ಆದರೆ ಅವುಗಳಲ್ಲೆಲ್ಲಾ ಕಿರೀಟಕ್ಕೆ ಯೋಗ್ಯವಾಗಿರುವುದು ರತ್ನವೇ ಹೊರತು ಹುಲ್ಲು ಮುಂತಾದುವುಗಳಲ್ಲ. ಅದರಂತೆ ವೇದರಾಶಿಯಲ್ಲಿ ಶಿವನಾಮಮಂತ್ರಗಳಿರುವ ಪ್ರಾಶಸ್ತ್ಯವು ಉಳಿದ ಮಂತ್ರಗಳಿಗಿರಲಾರದು. ॥೮೬॥

ಸಮುದ್ರದಲ್ಲಿ ಕಾಣುವ ರತ್ನಗಳನ್ನು ಹೇಗೆ ಶಿರಸ್ಸಿನಲ್ಲಿ ಧರಿಸುವರೋ ಹಾಗೆ ಸಮುದ್ರದಲ್ಲಿರುವ ಮಾತ್ರದಿಂದಲೇ ಅಲ್ಲಿರುವ ಮರಳನ್ನು ಯಾವನು ತಾನೇ ಧರಿಸುವನು ? ॥೮೭॥

ಶಿವಮಂತ್ರಮಣಿಸ್ತಾವದ್ವೇದರತ್ನಾಕರೇ ಸ್ಥಿತಃ ।
ಗ್ರಾಹ್ಯೋ ಜಪಾಯ ಯೋಗ್ಯತ್ವಾತ್ ತದನ್ಯೋ ಗ್ರಾಹ್ಯ ಏವ ನ ॥೮೮

ಅಲಂ ಕಿಂ ಬಹುನೋಕ್ತೇನ ಶಿವಶಬ್ದಃ ಪರಾತ್ಪರಃ ।
ಶಿವ ಏವೇತಿ ವಿಜ್ಞೇಯಃ ಶಿವಲಿಂಗಂ ಚ ತಾದೃಶಂ ॥೮೯॥

ಶಿವಶ್ಚ ಶಿವಲಿಂಗಂ ಚ ರುದ್ರಾಕ್ಷಃ ಸಿತಭಸ್ಮ ಚ ।
ಶಿವಕ್ಷೇತ್ರಂ ಚ ಭಾಗ್ಯೇನ ಲಭ್ಯತೇ ಮುನಿಪುಂಗವಾಃ ॥೯೦॥

ಶೈವೋ ಭೂತ್ವಾ ಶಿವಂ ಪ್ರಾಪ್ಯ ಭಸ್ಮಲಿಂಗಂ ಚ ಶಾಂಭವಂ ।
ಶಿವಮಂತ್ರಂ ಚ ಸಂಪ್ರಾಪ್ಯ ಮುಚ್ಯತೇ ಪಾಪಬಂಧನಾತ್ ॥೯೧॥

ಶೈವಾ ಏವ ವಯಂ ವಿಭೂತಿವಿಲಸದ್ರುದ್ರಾಕ್ಷಭೂಷಾಶ್ರಯಾಃ
ಪೂಜ್ಯಂ ನಃ ಶಿವಲಿಂಗಮೇವ ಸತತಂ ಧ್ಯೇಯಃ ಶಿವಃ ಕೇವಲಂ ।

ವೇದಶಾಶಿಯೆಂಬ ಸಮುದ್ರದಲ್ಲಿ ಶಿವಮಂತ್ರವೆಂಬ ರತ್ನವನ್ನೇ ಸ್ವೀಕರಿಸಬೇಕು. ಇತರ ಮಂತ್ರವು ಸ್ವೀಕರಿಸಲು ಅಷ್ಟಾಗಿ ಯೋಗ್ಯವೆನಿಸಲಾರದು. ॥೮೮॥

ಇಲ್ಲಿಗೆ ಶಿವಮಂತ್ರದ ಮಹಿಮೆಯನ್ನು ವರ್ಣಿಸಿರುವುದು ಸಾಕು. ಬಹಳವಾಗಿ ವರ್ಣಿಸುವುದರಿಂದ ಪ್ರಯೋಜನವಿಲ್ಲ. ಒಟ್ಟಿನಲ್ಲಿ ಶಿವನಾಮವು ಅವಿದ್ಯಾಸಂಬಂಧರಹಿತವಾದ ಶುದ್ಧಬ್ರಹ್ಮಸ್ವರೂಪವೇ ಆಗಿರುವುದು. ಅದಕ್ಕೆ ಸಮನೆನಿಸಿರುವುದೂ ಶಿವಲಿಂಗವೊಂದೇ. ॥೮೯॥

ಎಲೈ ಮುನಿವರ್ಯರೇ, ಶಿವನು, ಶಿವಲಿಂಗವು, ರುದ್ರಾಕ್ಷಿಯು, ಶ್ವೇತಭಸ್ಮವು ಮತ್ತು ಶಿವಕ್ಷೇತ್ರ ಇವೆಲ್ಲವೂ ಪೂರ್ವಜನ್ಮದ ಸುಕೃತವಿಶೇಷದ ಮಹಿಮೆಯಿಂದಲೇ ಲಭಿಸುವುವು. ॥೯೦॥

ಮನುಜನು ಶಿವನಲ್ಲಿ ಭಕ್ತಿಯಿಟ್ಟು ಶಿವನ ಲಿಂಗವನ್ನು ಪೂಜಿಸಿ ಭಸ್ಮವನ್ನು ಹಚ್ಚಿಕೊಂಡು ಶಿವಮಂತ್ರವನ್ನು ನಿರಂತರವೂ ಪಠಿಸುವುದರಿಂದ ಅಂತ್ಯದಲ್ಲಿ ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದಿ ಶಿವಸಾಯುಜ್ಯವನ್ನು ಪಡೆಯುವನು. ॥೯೧॥

ಎಲೈ ಮುನಿಗಳೇ, ಭಸ್ಮವನ್ನು ಧರಿಸಿ, ರುದ್ರಾಕ್ಷಗಳಿಂದ ಭೂಷಿತರಾದ ನಾವು ಶಿವಪೂಜಕರೇ ಆಗಿರುವೆವು. ಆದುದರಿಂದ ನಮಗೆ ನಿರಂತರವೂ ಶಿವಲಿಂಗವೇ

ಅಸ್ಮದ್ಭಾಗ್ಯವಶೇನ ಭರ್ಗಪದಭಾಙ್ಮಂತ್ರೋಽಪಿ ಪಂಚಾಕ್ಷರಃ
ರುದ್ರಾಧ್ಯಾಯಗತೋ ಜಪಾಯ ವಿವಿಧಕ್ಲೇಶಪ್ರಭಂಗಾಯ ಚ ॥೯೨॥

ಇತಿ ಶ್ರೀಶಿವರಹಸ್ಯೇ ಮಹೇತಿಹಾಸೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಗಾಯತ್ರೀ ತಪೋವರ್ಣನ ತತ್ಪ್ರಸಾದನಿರೂಪಣಂ ನಾಮ ದ್ವಿತೀಯೋಽಧ್ಯಾಯಃ

ಪೂಜ್ಯವಾಗಿರುವುದು. ಅಲ್ಲದೇ ನಾವು ಶಿವನನ್ನೇ ಧ್ಯಾನಿಸಬೇಕು. ನಮ್ಮ ಸುಕೃತ ವಿಶೇಷದಿಂದ, ಶಿವನಾಮಧೇಯದಿಂದ ಕೂಡಿರುವ, ರುದ್ರಾಧ್ಯಾಯ, ಭರ್ಗಪದಯುಕ್ತ ವಾದ ಗಾಯತ್ರೀ, ಶಿವಪಂಚಾಕ್ಷರ ಮಂತ್ರ ಇವು ಜಪಾರ್ಹವಾದ ಮಂತ್ರಗಳಾಗಿರು ಅಲ್ಲದೆ ಅವು ಸಕಲ ತೊಂದರೆಗಳನ್ನು ನಾಶಮಾಡುವುದೂ ಆಗಿರುತ್ತವೆ. ಎಂದು ಹೇಳಿ ವ್ಯಾಸಮಹರ್ಷಿಗಳು ಸುಮ್ಮನಾದರು. ||೩||

ಇಲ್ಲಿಗೆ ಶ್ರೀಶಿವರಹಸ್ಯದ ಮೊದಲನೆಯ ಭಾಗದಲ್ಲಿ "ಹರ" ಎಂಬ ಸಂಜ್ಞೆಯುಳ್ಳ ಮೂರನೆಯ ಅಂಶದಲ್ಲಿ ಗಾಯತ್ರಿಯು ಆಚರಿಸಿದ ತಪಸ್ಸು, ಮತ್ತು ತಪಸ್ಸಿಗೆ ಮೆಚ್ಚಿದ ಈಶ್ವರನ ಅನುಗ್ರಹ, ಈ ವಿಷಯಗಳನ್ನೊಳಗೊಂಡ ಎರಡನೆಯ ಅಧ್ಯಾಯವು ಸಮಾಪ್ತವಾಯಿತು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ತೃತೀಯೋಽಧ್ಯಾಯಃ

|| ಸೂತ ಉವಾಚ ||

ಇತಿ ತದ್ವಚನಂ ಶ್ರುತ್ವಾ ತೇ ಸರ್ವೇ ಮುನಿಪುಂಗವಾಃ ।
ಆನಂದಾಶ್ರುಪ್ರವಾಹಾಕ್ತಾಃ ಸಂಸಕ್ತಾಃ ಶಿವಪೂಜನೇ ॥೧॥

ಪುನಃ ಪ್ರಣಮ್ಯ ತಂ ವ್ಯಾಸಂ ಶಿವತತ್ತ್ವೋಪದೇಶಕಂ ।
ಶಿವತತ್ತ್ವೋಪದೇಶಾಯ ಪ್ರೇರಯಾಮಾಸುರಾದರಾತ್ ॥೨॥

|| ಮುನಯ ಊಚುಃ ||

ಶಿವಃ ಕಥಂ ಪೂಜನೀಯಶ್ಶಿವಧರ್ಮಾಶ್ಚ ತೇ ಮುನೇ ।
ಶಿವಾಚಾರರತಾಃ ಕೇ ವಾ ಶಿವಃ ಕೇನ ಪ್ರಸೀದತಿ ॥೩॥

ಮೂರನೆಯ ಅಧ್ಯಾಯ

ವ್ಯಾಸಮಹರ್ಷಿಯ ಈ ಮಾತನ್ನು ಕೇಳಿ ಮುನಿಶ್ರೇಷ್ಠರೆಲ್ಲರೂ ಆನಂದ ಬಾಷ್ಪಗಳನ್ನು ಸುರಿಸುತ್ತಾ ಶಿವಪೂಜೆಯಲ್ಲಿ ಆಸಕ್ತರಾದರು. ||೧||

ಬಳಿಕ ಮುನೀಶ್ವರರು ಶಿವಮಹಿಮೆಯನ್ನು ಉಪದೇಶಿಸಿದ ವ್ಯಾಸನನ್ನು ಪುನಃ ವಂದಿಸಿ ಮತ್ತೊಮ್ಮೆ ಶಿವತತ್ತ್ವವನ್ನು ಉಪದೇಶಿಸುವಂತೆ ಆದರಪೂರ್ವಕ ವಾಗಿ ಹೀಗೆ ಬಿನ್ನವಿಸಿದರು. ||೨||

"ವ್ಯಾಸಮುನಿಯೇ, ಶಿವನನ್ನು ಪೂಜಿಸುವ ಬಗೆ ಹೇಗೆ? ಶಿವನ ಲಕ್ಷಣಗಳೇನು? ಶಿವಪೂಜಾಸಕ್ತರಾದ ಭಕ್ತರು ಹೇಗಿರುವರು? ಮತ್ತು ಯಾವ

ಶಿವಾಯೈ ಕುತ್ರ ವಾ ಪ್ರೋಕ್ತಂ ರಹಸ್ಯಂ ಶೈವಮುತ್ತಮಂ ।
ತದಾವಾಸಸ್ವರೂಪಂ ಚ ಕೀದೃಶಂ ಮುನಿಪುಂಗವ ॥೪॥

ತದಾವಾಸಸ್ಯ ಕಿಂ ಮಾನಂ ತತ್ರ ಕೇಷಾಮವಸ್ಥಿತಿಃ ।
ಇದಂ ಸರ್ವಂ ವಿಶೇಷೇಣ ವಿಚಾರ್ಯ ವದ ಸಾದರಂ ॥೫॥

॥ ವ್ಯಾಸ ಉವಾಚ ॥

ಸಾಧು ಪೃಷ್ಟಂ ಮುನಿಶ್ರೇಷ್ಠಾಃ ಶ್ರೀಕಂಠಾರ್ಚನತತ್ಪರಾಃ ।
ಏತತ್ಕಥಾನುವಾದೇನ ಮಹಾನಂದಃ ಪ್ರವರ್ಧತೇ ॥೬॥

ಸಂಪದಂಬುನಿಧಿಃ ಪ್ರಾಪ್ತಃ ವಿನಷ್ಟಾಃ ಪಾಪಪರ್ವತಾಃ ।
ಏತದರ್ಥಂ ಪುರಾ ಪ್ರಾಹ ಜೈಗೀಷವ್ಯಾಯ ಪೃಚ್ಛತೇ ॥೭॥

ಸಾಧನಗಳ ಅನುಷ್ಠಾನಮಾತ್ರದಿಂದ ಶಿವನು ಪ್ರಸನ್ನನಾಗುವನು ?ಎಂಬುದನ್ನು ನಮಗೆ ಹೇಳುವವನಾಗು. ||೩||

ಮುನಿಶ್ರೇಷ್ಠನೇ, ಶಿವನು ತನ್ನ ಪ್ರೇಯಸಿಯಾದ ಪಾರ್ವತಿಗೆ ಪವಿತ್ರವಾದ ಈ ಶಿವರಹಸ್ಯವನ್ನು ಯಾವ ಸ್ಥಳದಲ್ಲಿ ಉಪದೇಶಿಸಿದನು ? ಮತ್ತು ಪರಶಿವನ ವಾಸಸ್ಥಳವು ಹೇಗಿರುವುದು ? ||೪||

ಅವನ ವಾಸಸ್ಥಳದ ಪರಿಮಾಣವೆಷ್ಟು ? ಮತ್ತು ಅಲ್ಲಿ ವಾಸವಾಗಿರುವವರು ಯಾರು ? ಎಂಬ ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಿ ಆಕ್ಕರೆಯಿಂದ ನಮಗೆ ವಿವರಿಸಬೇಕು, ಎಂದು ಸಕಲ ಋಷಿಗಳೂ ಕೇಳಿಕೊಳ್ಳಲು ಅದಕ್ಕೆ ವ್ಯಾಸ ಮಹರ್ಷಿಗಳು ಹೀಗೆಂದರು. ||೫||

" ಎಲೈ ಮುನಿಪುಂಗವರೇ, ಶಿವಪೂಜಾಸಕ್ತರಾದ ನಿಮ್ಮ ಈ ಪ್ರಶ್ನೆಯು ಅತ್ಯಂತ ರಮಣೀಯವಾದುದು. ಈ ಕಥೆಯನ್ನು ನಿಮಗೆ ಹೇಳುವುದರಿಂದ ಒಳಗೆ ಅಡಗಿರುವ ನನ್ನ ಆನಂದವು ವೃದ್ಧಿಯನ್ನು ಹೊಂದುವುದು. ||೬||

ಶಿವರಹಸ್ಯವನ್ನು ನಿಮಗೆ ತಿಳಿಯಪಡಿಸುವ ಸದವಕಾಶವು ದೊರಕಿದುದರಿಂದ ನನಗೆ ಸಕಲ ಸಂಪತ್ತುಗಳೂ ಲಭಿಸಿದಂತಾದುವು ಮತ್ತು ಪಾಪರಾಶಿಗಳು ನಾಶವಾದುವು. ಇದೇ ಶಿವರಹಸ್ಯವನ್ನು ಹೇಳುವಂತೆ ಹಿಂದೆ ಜೈಗೀಷವ್ಯನೆಂಬ

ತಾರಕಾರಿರುವಾಚೇತ್ಥಂ ಸಂತುಷ್ಟೇನಾಂತರಾತ್ಮನಾ ॥೮॥

॥ ಜೈಗೀಷವ್ಯ ಉವಾಚ ॥

ಜಗತಾಂ ಜನನೀ ಗೌರೀ ಕೈಲಾಸೇ ಶಂಕರಾಂತಿಕಂ ।
ಕದಾ ಗತಾ ವದಾಸ್ಮಭ್ಯಂ ಸ್ಕಂದ ಶಿಕ್ಷಿತತಾರಕ ॥೯॥

॥ ಸ್ಕಂದ ಉವಾಚ ॥

ಶೃಣುಷ್ವ ಜೈಗೀಷವ್ಯಾದ್ಯ ಹ್ಯಶೇಷೈರ್ಭೂಸುರೈಸ್ಸುರೈಃ ।
ಗಾಯತ್ರ್ಯಾಶ್ಚ ತಪಸ್ಸಿದ್ಧಿಂ ದೇವ್ಯಾ ಯಾನಂ ಹಿಮಾಚಲಾತ್ ॥೧೦॥

ಶೃಣು ಕೈಲಾಸಗಮನಂ ಗಣಾನಾಂ ಪ್ರೇಷಣಂ ಮುನೇ ।
ತವಾದ್ಯ ಕುಶಲಪ್ರಶ್ನೈರ್ಮಮಾನಂದಃ ಪ್ರಜಾಯತೇ ॥೧೧॥

ಮುನಿಯು ಷಣ್ಮುಖಸ್ವಾಮಿಯನ್ನು ಕೇಳಿಕೊಳ್ಳಲು, ಷಣ್ಮುಖನು ಈರೀತಿ ತಿಳಿಯಪಡಿಸಿದನು. ||೭-೮||

ಓ ತಾರಕಾರಿಯಾದ ಷಣ್ಮುಖನೇ, ಲೋಕಮಾತೆಯಾದ ಪಾರ್ವತಿಯು ಯಾವ ಸಮಯದಲ್ಲಿ ತಂದೆಯ ಮನೆಯಿಂದ ಮತ್ತೆ ಕೈಲಾಸವಾಸಿಯಾದ ಪರಮೇಶ್ವರನ ಸಮೀಪವನ್ನೈದಿದಳು? ಎಂಬುದನ್ನು ನಮಗೆ ಹೇಳುವವನಾಗು ಎಂದು ಜೈಗೀಷವ್ಯಮಹರ್ಷಿಯು ಪ್ರಾರ್ಥಿಸಿದನು. ಆಗ ಸ್ಕಂದಸ್ವಾಮಿಯು, ||೯||

ಎಲೈ ಜೈಗೀಷವ್ಯನೇ, ಸಕಲ ಭೂಸುರರೊಂದಿಗೂ ಮತ್ತು ದೇವತೆಗಳೊಂದಿಗೂ ನನ್ನ ಸಮೀಪವನ್ನೈದಿದ ನಿನಗೆ ಈಗ ಗಾಯತ್ರಿಯ ತಪಸ್ಸಿದ್ಧಿಯನ್ನೂ, ದೇವಿಯಾದ ಪಾರ್ವತಿಯು ಹಿಮಾಚಲದಿಂದ ಈಶ್ವರನ ಸಮೀಪಕ್ಕೆ ತೆರಳಿದುದನ್ನೂ ವಿಸ್ತರಿಸಿ ಹೇಳುವೆನು. ಕೇಳುವವನಾಗು. ಎಂದು ಕಥೆಯನ್ನು ಮುಂದುವರಿಸಿದನು. ||೧೦||

ದೇವಿಯು ಕೈಲಾಸವನ್ನು ಕುರಿತು ತೆರಳಿದುದನ್ನೂ ಮತ್ತು ಪ್ರಮಥಗಣಗಳನ್ನು ಹಿಂದಕ್ಕೆ ಕಳುಹಿಸಿದುದನ್ನೂ ಹೇಳುವೆನು, ಲಾಲಿಸು. ನಿನ್ನ ಕುತೂಹಲಯುತವಾದ ಪ್ರಶ್ನೆಗಳಿಂದ ನನಗೆ ಅತ್ಯಾನಂದವುಂಟಾಗಿರುವುದು. ||೧೧||

ಶ್ರೇಷ್ಠರಾದ ಈಶ್ವರಾರಾಧಕರ ಸಹವಾಸದಿಂದ ಸಂಸಾರಕ್ಲೇಶಗಳು ದೂರವಾಗುತ್ತವೆ. (ಸಂಸಾರವೆಂಬ ಸಮುದ್ರವೂ ಒಣಗಿಹೋಗುವುದು) ಪುಣ್ಯಶಾಲಿ

ಮಹಾಶಾಂಭವಸಂಗೇನ ಭವಾಬ್ಧಿರಪಿ ಶುಷ್ಯತಿ ।
ಶೈವಧರ್ಮೋಪದೇಶಾಯ ಯೋಗ್ಯೋ ಭಾಗ್ಯವತಾಂ ವರ ॥೧೨॥

ಅತಶ್ಶಿವಪ್ರಭಾವೋಽಪಿ ವರ್ಣನೀಯೋ ಮಯಾಧುನಾ ।
ಸುಮೇರುತುಂಗಶೃಂಗೇಷು ಶೃಂಗಮೇಕಮನುತ್ತಮಂ ॥೧೩॥

ನ ತುಂಗಶೃಂಗಮಸ್ತ್ಯನ್ಯತ್ ತಚ್ಛೃಂಗಾಪೇಕ್ಷಯಾ ದ್ವಿಜಾಃ ।
ತಚ್ಛೃಂಗೋಪರಿ ರತ್ನಾನಾಂ ಪ್ರಾಸಾದಃ ಕಶ್ಚಿದುತ್ತಮಃ ॥೧೪॥

ತತ್ಪ್ರಾಸಾದಪ್ರಭಾವೋಽಪಿ ವೇದಾನಾಮಪ್ಯಗೋಚರಃ ।
ಪರಾರ್ಧಯೋಜನಾಯಾಮಸ್ತಾವದ್ಯೋಜನಮುನ್ನತಃ ॥೧೫॥

ದಿಗಷ್ಟಕಮಪಿ ವ್ಯಾಪ್ಯ ದಿಗಂತೇಷ್ವಪಿ ತಿಷ್ಠತಿ ।
ನ ತತ್ಪ್ರಾಸಾದಶೃಂಗೇಷು ಸೂರ್ಯಚಂದ್ರಾದಿರಶ್ಮಯಃ ॥೧೬॥

ಗಳಲ್ಲಿ ಶ್ರೇಷ್ಠನಾದ ನೀನು ಶೈವಧರ್ಮದ ಉಪದೇಶಕ್ಕೆ ಯೋಗ್ಯನಾದ ಅಧಿಕಾರಿಯಾಗಿರುತ್ತೀಯೆ. ||೧೨||

ಆದುದರಿಂದ ನಾನು ಶಿವನ ಮಹಿಮೆಯನ್ನು ನಿನ್ನ ಮುಂದೆ ವರ್ಣಿಸುವುದು ಉಚಿತವಾಗಿರುವುದು. ಎಲೈ ದ್ವಿಜರೇ, ಮೇರುಪರ್ವತದಲ್ಲಿ ಅನೇಕ ಉನ್ನತವಾದ ಶಿಖರಗಳಿರುವುವು. ಅವುಗಳಲ್ಲಿ ಒಂದು ಶಿಖರವು ಅತ್ಯಂತ ಶ್ರೇಷ್ಠವಾದದ್ದು. ಆ ಶಿಖರಕ್ಕಿಂತಲೂ ಉನ್ನತವಾದ ಬೇರೊಂದು ಶಿಖರವಿರುವುದಿಲ್ಲ. ಆ ಶಿಖರದ ಮೇಲು ಭಾಗದಲ್ಲಿ ರತ್ನಖಚಿತವಾದ ಮತ್ತು ಉತ್ತಮವಾದ ಒಂದು ಮಹಡಿಯಮನೆಯು ಕಾಣುವುದು. ||೧೩-೧೪||

ಆ ಮಹಡಿಯ ಮಹಿಮೆಯನ್ನು ವರ್ಣಿಸಲು ವೇದಗಳೂ ಅಸಮರ್ಥವಾಗಿವೆ. ಅದು ಕೋಟ್ಯಂತರ ಯೋಜನಗಳ ಚದರವ್ಯಾಪ್ತಿಯಷ್ಟು ವಿಸ್ತಾರವಾಗಿಯೂ ಅಷ್ಟೇ ಉನ್ನತವಾಗಿಯೂ ಇರುತ್ತದೆ. ||೧೫||

ಆ ಪ್ರಾಸಾದವು ಅಷ್ಟದಿಕ್ಕುಗಳನ್ನೂ, ದಿಗಂತಗಳನ್ನೂ ವ್ಯಾಪಿಸಿ ನಿಂತಿರುವುದು. ಆದರ ಶಿಖರಗಳಲ್ಲಿ ಸೂರ್ಯಚಂದ್ರರ ಕಿರಣಗಳ ಸುಳಿವೇ ಇರುವುದಿಲ್ಲ. ||೧೬||

ಸೂರ್ಯಸ್ಯ ತತ್ರ ಕಾ ವಾರ್ತಾ ಚಂದ್ರಸ್ಯ ಚ ಮುನೀಶ್ವರಾಃ ।
ತತ್ಪ್ರಾಸಾದಪ್ರಾಂತದೇಶೇ ನಿತ್ಯಪುಷ್ಪಾಸ್ಸುರದ್ರುಮಾಃ ॥೧೭॥

ಸುಧಾಪ್ರವಾಹಕಲ್ಲೋಲಮಣಿಕಾಂತಿವಿರಾಜಿತಃ ।
ಪ್ರಾಸಾದಃ ಸೋಽಪ್ಯಯತ್ನೇನ ನವರತ್ನವಿನಿರ್ಮಿತಃ ॥೧೮॥

ತದ್ರತ್ನಕಾಂತಿಪೂರಾಣಾಮಂತ ಏವ ನ ಸರ್ವಥಾ ।
ತತ್ಪ್ರಾಸಾದಸ್ಯ ಮಧ್ಯೇಽಪಿ ಕೋಟಿಶೋ ಮಣಿಮಂಟಪಾಃ ॥೧೯॥

ವಿಚಿತ್ರರಚನಾಬದ್ಧಾಃ ಕೋಟಿಶೋ ಮಣಿವೇದಿಕಾಃ ।
ರತ್ನಶೃಂಗಾಣಿ ತೇಷ್ವೇವ ಸಂಖ್ಯಾಹೀನಾ ಮನೋಹರಾಃ ॥೨೦॥

ರತ್ನದ್ವಾರಾಣಿ ತಸ್ಯೈವ ವಿಪುಲಾನ್ಯಪಿ ಕೋಟಿಶಃ ।
ತತ್ಸೂಕ್ಷ್ಮದ್ವಾರಸಂಖ್ಯಾಪಿ ಕದಾಚಿದಪಿ ಸರ್ವಥಾ ॥೨೧॥

ಇಷ್ಟು ಎತ್ತರದಲ್ಲಿರುವಾಗ ಸೂರ್ಯಚಂದ್ರರು ಹೇಗೆ ತಾನೇ ಕಾಣಿಸಬಲ್ಲರು ? ಎಲೈ ಮುನಿಪುಂಗವರೇ, ಆ ಪ್ರಾಸಾದದ ಸುತ್ತಮುತ್ತಲಿನ ಪ್ರದೇಶದಲ್ಲಿ ದೇವಲೋಕದ ವೃಕ್ಷಗಳು ನಿರಂತರವೂ ಪುಷ್ಪಭರಿತಗಳಾಗಿರುತ್ತವೆ. ||೧೭||

ಆ ವೃಕ್ಷಗಳು ಅಮೃತದಂತೆ ತಂಪಾಗಿರುವ ನೀರಿನ ಪ್ರವಾಹದಿಂದ ಕೂಡಿ, ಚಂದ್ರಕಾಂತಶಿಲೆಯ ಕಾಂತಿಯಿಂದ ಪ್ರಕಾಶಮಾನವಾಗಿರುತ್ತವೆ. ಆ ಮಹಡಿಯೂ ಸಹ ನಿರಾಯಾಸವಾಗಿ ನವರತ್ನಗಳಿಂದಲೇ ನಿರ್ಮಿಸಲ್ಪಟ್ಟಿರುತ್ತದೆ. ||೧೮||

ಆ ರತ್ನಕಾಂತಿಯ ಸಮೂಹವು ಅಪರಿಮಿತವಾಗಿರುತ್ತದೆ. ಆ ಮಹಡಿಯ ಮಧ್ಯಭಾಗದಲ್ಲಿ ಕೋಟ್ಯಂತರವಾದ ರತ್ನಮಂಟಪಗಳಿರುವುವು. ||೧೯||

ಅದಲ್ಲದೇ, ಆ ಮಹಡಿಯ ಮಧ್ಯಭಾಗದಲ್ಲಿ ನಾನಾರೀತಿಯಾದ ರಚನೆಗಳಿಂದ ಕೂಡಿದ ಕೋಟ್ಯಂತರವಾದ ರತ್ನವೇದಿಕೆಗಳು (ಜಗುಲಿಗಳು) ಇರುವುವು. ಆ ವೇದಿಕೆಗಳ ಮೇಲುಗಡೆ ಲೆಕ್ಕಿಸಲು ಅಸಾಧ್ಯವಾದ ರಮಣೀಯವಾದ ರತ್ನಖಚಿತವಾದ ಗೋಪುರಗಳಿರುವುವು. ||೨೦||

ಆ ಮಹಡಿಗೆ ಕೋಟ್ಯಂತರವಾದ ಮತ್ತು ಅತಿ ವಿಶಾಲವಾದ ರತ್ನದ ಬಾಗಿಲುಗಳಿರುವುವು. ಆ ಬಾಗಿಲುಗಳ ಸಂಖ್ಯೆಯನ್ನು ಒಂದು ಕಲ್ಪವು ಮುಗಿಯುವವರೆಗೆ ಎಣಿಸಲು ದೇವತೆಗಳಿಗೂ ಅಸಾಧ್ಯವಾಗುವುದು. ||೨೧||

ಕರ್ತುಂ ನ ಶಕ್ಯತೇ ನೂನಂ ಕಲ್ಪಾಂತೇಽಪಿ ಸುರೈರಪಿ ।
ರಮ್ಯೇ ಸುರತರೋರ್ಮೂಲೇ ವೇದಿಕಾ ಚ ಮನೋರಮಾ ॥೨೨॥

ಸಾ ತತ್ತರುಪ್ರಸೂನಾನಾಂ ಸಮೂಹೈಃ ಪರಿವಾರಿತಾ ।
ಮಕರಂದಂ ತು ಪುಷ್ಪಾಣಿ ಸ್ರವಂತ್ಯೇವ ಪುನಃ ಪುನಃ ॥೨೩॥

ತಾಸು ಸರ್ವಾಸು ಸರ್ವತ್ರ ಶಿವಲಿಂಗಾನಿ ಸರ್ವಶಃ ।
ಸ್ಫುರತ್ಸ್ಫುಲಿಂಗರೂಪಾಣಿ ತೇಜಃಪುಂಜಮಯಾನ್ಯಪಿ ॥೨೪॥

ಮಕರಂದಾಭಿಷಿಕ್ತಾನಿ ತತ್ಪುಷ್ಪೈಃ ಪೂಜಿತಾನ್ಯಪಿ ।
ರತ್ನಪ್ರಾಸಾದಕಾಂತೀನಾಂ ಪ್ರವಾಹಾಃ ಪ್ರಚಲಂತಿ ಯೇ ॥೨೫॥

ತೈರಾವೃತಾನಿ ಲಿಂಗಾನಿ ಕೋಟಿಶಃ ಸರ್ವದಾ ದ್ವಿಜಾಃ ।
ತತ್ಪುಷ್ಪಗಂಧವಾಹಾನಾಂ ಮಂದಾನಾಮಪಿ ಸುಂದರಃ ॥೨೬॥
ಸ್ಪರ್ಶಃ ಸುಧಾತರಂಗಾಣಾಮನ್ವಯೇನ ಸುಖಾವಹಃ ।

ಮಂಜುಳವಾದ ಆ ಸುರತರುವಿನ ಕೆಳಭಾಗದಲ್ಲಿ ಸುಂದರವಾದ ಒಂದು ವೇದಿಕೆ (ಜಗುಲಿ) ಇರುವುದು. ವೃಕ್ಷದ ಹೂವುಗಳು ಆ ವೇದಿಕೆಯನ್ನು ಸುತ್ತಲೂ ಆವರಿಸಿರುವುವು. ಅಲ್ಲಿ ಹೂವುಗಳು ಬಾರಿಬಾರಿಗೂ ಮಕರಂದವನ್ನು (ಹೂವಿನ ರಸವನ್ನು) ಸುರಿಸುತ್ತಲೇ ಇರುವುವು. ॥೨೨-೨೩॥

ಆ ವೇದಿಕೆಗಳಲ್ಲಿ ಎಲ್ಲೆಡೆಯಲ್ಲಿಯೂ ಶಿವಲಿಂಗಗಳು ಇರುವುವು. ಅವು ಬೆಂಕಿಯ ಕಿಡಿಗಳಂತೆ ಪ್ರಕಾಶಿಸುತ್ತಾ, ತೇಜಸ್ಸಿನ ಸಮೂಹವೋ ಎಂಬಂತೆ ಕಂಗೊಳಿಸುತ್ತಿವೆ. ಪೂಜಾಕಾಲದಲ್ಲಿ ಆ ಶಿವಲಿಂಗಗಳ ಮೇಲೆ ಏರಿಸಿದ ಹೂವುಗಳು ಮಕರಂದವನ್ನು ಎರಚುತ್ತಿರುವುವು. ॥೨೪॥

ರತ್ನಖಚಿತವಾದ ಉಪ್ಪರಿಗೆಯ ಪ್ರಭಾರಾಶಿಯು ನಿರಂತರವೂ ಆ ಶಿವಲಿಂಗಗಳನ್ನು ಸುತ್ತಲೂ ಬೆಳಗಿಸುತ್ತದೆ. ॥೨೫॥

ಆ ಪುಷ್ಪಗಳ ಮೇಲೆ ಮಂದಮಂದವಾಗಿ ಬೀಸುವ ಸುಗಂಧಮಯವಾದ ಗಾಳಿಯು ಎಲ್ಲೆಡೆಯಲ್ಲಿಯೂ ಮಕರಂದದ ಸುಗಂಧವನ್ನು ಬೀರುತ್ತಾ ತನ್ನ ಮೃದುವಾದ ಸ್ಪರ್ಶದಿಂದ ಅತ್ಯಾನಂದವನ್ನುಂಟುಮಾಡುತ್ತಿದೆ. ॥೨೬॥

ತತ್ಪ್ರಾಸಾದಮಹಾಶೃಂಗಮಣಿಮಂಟಪಶೋಭಯಾ ॥೨೭॥

ಭೂಷಿತಾನಿ ಭವಂತ್ಯೇವ ಶಿವಲಿಂಗಾನಿ ಶಾಂಭವಾಃ ।
ಏಕೈಕಸ್ಮಿನ್ ದ್ವಾರದೇಶೇ ಗಣಾಃ ಸಂತಿ ಸಹಸ್ರಶಃ ॥೨೮॥

ತೇಜೋರೂಪಾಶ್ಚ ತೇ ತಾವತ್ಪ್ರಾಸಾದಮಣಿಕಾಂತಿಭಿಃ ।
ತತ್ರಾಂಧಕಾರವಾರ್ತಾಪಿ ನ ಕದಾಪಿ ಮುನೀಶ್ವರಾಃ ॥೨೯॥

ತತ್ತೇಜಃಪುಂಜಸಂಗೇನ ದೀಪಾಪೇಕ್ಷಾ ನ ಜಾಯತೇ ।
ಸೂರ್ಯಚಂದ್ರಾದ್ಯಪೇಕ್ಷಾಪಿ ತತ್ರತ್ಯಾನಾಂ ನ ಜಾಯತೇ ॥೩೦॥

ಸುರದ್ರುಮೈಶ್ಚ ತತ್ರತ್ಯೈಸ್ಸುಧಾಫಲಸಮನ್ವಿತೈಃ ।
ಗಣಾಸ್ತೃಪ್ತಾ ಭವಂತ್ಯೇವ ಸರ್ವದಾಪಿ ಪ್ರತಿಕ್ಷಣಂ ॥೩೧॥

ನ ತೇಷಾಮಶನಾಪೇಕ್ಷಾ ಗಣಾನಾಮಪಿ ಸರ್ವಥಾ ।
ತತ್ಪ್ರಾಸಾದವರೋತ್ತುಂಗಶೃಂಗಮಂಡಪವೇದಿಕಾ ॥೩೨॥

ಆ ಪ್ರಾಸಾದದ ಶಿಖರದಲ್ಲಿರುವ ರತ್ನಖಚಿತವಾದ ಮಂಟಪಗಳ ಕಾಂತಿಯು ಶಿವಲಿಂಗಗಳನ್ನು ಮತ್ತಷ್ಟು ಅಲಂಕರಿಸುತ್ತಿದೆ. ||೨೭||

ಒಂದೊಂದು ಬಾಗಿಲಿನಲ್ಲಿಯೂ ಸಾವಿರಾರು ಪ್ರಮಥಗಣಗಳು ನಿಂತಿರುತ್ತವೆ. ಪ್ರಾಸಾದದ ರತ್ನಕಾಂತಿಗಳು ಅವರ ಮುಖಕಾಂತಿಯನ್ನು ಇಮ್ಮಡಿಯಾಗಿ ಮಾಡಿರುತ್ತವೆ. ಅಲ್ಲಿ ಎಂದಿಗೂ ಕತ್ತಲೆಯ ಸುಳಿವೇ ಇರುವುದಿಲ್ಲ. ||೨೮-೨೯||

ಅಲ್ಲಿನ ಪ್ರಕೃತಿಸಿದ್ಧವಾದ ತೇಜೋರಾಶಿಯಿಂದ ಬೆಳಕಿನ ಆವಶ್ಯಕತೆಯೇ ಇರುವುದಿಲ್ಲ. ಆದುದರಿಂದಲೇ ಅಲ್ಲಿ ವಾಸವಾಗಿರುವವರಿಗೆ ಸೂರ್ಯಚಂದ್ರರ ಆಗತ್ಯವೇ ಇರುವುದಿಲ್ಲ. ||೩೦||

ಆ ಸುರದ್ರುಮಗಳು ಸದಾ ಸುಧಾಫಲಭರಿತಗಳಾಗಿರುವುವು. ಆದುದರಿಂದ ಅಲ್ಲಿ ವಾಸಿಸುವ ಗಣಗಳು ಆ ಹಣ್ಣುಗಳಿಂದಲೇ ಯಾವಾಗಲೂ ತೃಪ್ತರಾಗಿರುವರು. ||೩೧||

ಆ ಗಣಗಳಿಗೆ ಯಾವ ಕಾಲದಲ್ಲಿಯೂ ಹಸಿವೇ ಇರುವುದಿಲ್ಲ. ಆ ಮಹಡಿಯ ಉನ್ನತವಾದ ಶಿಖರದಲ್ಲಿರುವ ಮಂಟಪದ ಪೀಠದಲ್ಲಿ ರತ್ನನಿರ್ಮಿತವಾದ

ಯಾ ತತ್ರ ರತ್ನಖಚಿತಂ ಸಿಂಹಾಸನಮುಮಾಪತೇಃ ।
ಕೋಟಿಯೋಜನವಿಸ್ತೀರ್ಣಂ ಕೋಟಿಯೋಜನಮುನ್ನತಂ ॥೩೩॥

ತನ್ಮಂದಾರತರುಸ್ರಸ್ತಪುಷ್ಪಮಾಲಾವಿರಾಜಿತಂ ।
ತದುಪರ್ಯಂಬಿಕಾಕಾಂತಸ್ಸ್ವತಃ ಕಾಂತಃ ಪರಾತ್ಪರಃ ॥೩೪॥

ಪ್ರವಿಷ್ಟಸ್ತೇಜಸಾಂ ರಾಶಿರ್ಮನೋವಾಗ್ವಿಷಯೋಽಪಿ ನ ।
ಕ್ಷೀರಸಾಗರಸಂಕಾಶಪಟ್ಟತೂಲಪರಿಚ್ಛದಃ ॥೩೫॥

ನಾನಾಪರಿಮಳದ್ರವ್ಯದಿವ್ಯಚಂದನಚರ್ಚಿತಃ ।
ತ್ರಿಪುಂಡ್ರವಿಲಸತ್ಫಾಲೋ ರುದ್ರಾಕ್ಷಮಣಿಭೂಷಣಃ ॥೩೬॥

ಅನಂತರತ್ನಸಂನದ್ಧಕಂಧರಾಭರಣಾನ್ವಿತಃ ।
ರತ್ನಾಂಗದೈಶ್ಚ ಕೇಯೂರೈರ್ಮಣಿಮಂಡಲಮಂಡಿತೈಃ ॥೩೭॥
ಮುಕ್ತಾಹಾರೈಶ್ಚ ವಿವಿಧೈರ್ಭೂಷಿತೋ ಭೂತಿಭೂಷಣಃ ।

ಈಶ್ವರನ ಸಿಂಹಾಸನವಿರುವುದು. ಅದು ಕೋಟಿಯೋಜನದಷ್ಟು, ವಿಶಾಲವೂ, ಅಷ್ಟೇ ಉನ್ನತವೂ ಆಗಿರುತ್ತದೆ. ||೩೨-೩೩||

ಆ ಸಿಂಹಾಸನವು ಸಮೀಪದಲ್ಲಿರುವ ಮಂದಾರವೃಕ್ಷಗಳ ಹೂವಿನ ಮಾಲಿಕೆಗಳಿಂದ ಶೋಭಿಸುತ್ತಿರುವುದು. ಅದರ ಮೇಲೆ ಸುಂದರಮೂರ್ತಿಯಾದ ಪರಶಿವನು ವಿರಾಜಮಾನನಾಗಿರುತ್ತಾನೆ. ತೇಜೋರಾಶಿಗಳ ಸಮುದಾಯವೋ ಎನ್ನುವಂತೆ ಕಂಗೊಳಿಸುತ್ತಿರುವ ಆ ಪರಮೇಶ್ವರನ ಸೌಂದರ್ಯವು ಮನೋಮಾತ್ರದಿಂದಲೂ ವರ್ಣಿಸಲು ಅಶಕ್ಯವಾಗಿರುವುದು. ||೩೪||

ಶಿವನು ಕ್ಷೀರಸಾಗರದಂತೆ ಬಿಳುಪಾದ ಪಟ್ಟವಸ್ತ್ರವನ್ನು ಧರಿಸಿ, ನಾನಾ ರೀತಿಯ ಪರಿಮಳ ದ್ರವ್ಯಗಳನ್ನೂ ಮತ್ತು ಸುಗಂಧಯುಕ್ತವಾದ ಚಂದನವನ್ನೂ ಲೇಪಿಸಿಕೊಂಡು ವಿರಾಜಮಾನನಾಗಿರುವನು. ||೩೫||

ಮತ್ತು ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಿ, ರುದ್ರಾಕ್ಷಿಗಳಿಂದ ಅಲಂಕೃತನಾಗಿ ರತ್ನಖಚಿತವಾದ ಕಂಠಾಭರಣವನ್ನು ಧರಿಸಿರುವನು. ಇದಲ್ಲದೆ ಆ ಪರಶಿವನು ರತ್ನನಿರ್ಮಿತವಾದ ಭುಜಗಳಿಂದಲೂ, ನಾನಾರೀತಿಯ ಮುಕ್ತಾಹಾರಗಳಿಂದಲೂ ಶೋಭಿಸುವನು. ||೩೬-೩೭||

ಅಮೂಲ್ಯರತ್ನಖಚಿತೈರ್ವಿವಿಧೈರಂಗುಲೀಯಕೈಃ ॥೩೮॥

ಸುರತ್ನಕಟಿಸೂತ್ರೇಣ ವಿಪುಲೇನ ವಿಭೂಷಿತಃ ।
ಅಪಾರಚಿತ್ರರತ್ನೌಘ ಕಿರೀಟಪ್ರಭಯಾ ಯುತಃ ॥೩೯॥

ನಾನಾಮಣಿಸಮಾಕೀರ್ಣಕರ್ಣಭೂಷಣಭೂಷಿತಃ ।
ರತ್ನಮಾಲಾಸಮಾಕ್ರಾಂತರತ್ನಛತ್ರಾರ್ಬುದಶ್ರಿಯಾ ॥೪೦॥

ರತ್ನದಂಡಾಗ್ರವಿಲಸಚ್ಚಾಮರಾರ್ಬುದವೀಜಿತಃ ।
ಧ್ವಜೈಶ್ಚ ಮಣಿಸಂಬದ್ಧೈರ್ವಿವಿಧೈರ್ವೃಷಭಾಂಕಿತೈಃ ॥೪೧॥

ಪರಿತೋ ವ್ಯಾವೃತಃ ಶಂಭುಃ ಸ್ಥಿತಸ್ಸುಖನಿಧಿಃ ಪ್ರಭುಃ ।
ಮಹಾಪ್ರಭುಂ ತಮಾಸೀನಂ ದೂರಾದ್ದೃಷ್ಟ್ವಾ ಗಣಾ ಅಪಿ ॥೪೨॥

ಸಕಂಪಾಶ್ಚ ವಿನೀತಾಶ್ಚ ಹೇಮವೇತ್ರಕರಾಃ ಪರಂ ।
ತತ್ರ ತಾವನ್ನ ಗಂಧರ್ವಾಃ ಕಿನ್ನರಾ ನ ಸುರಾ ಅಪಿ ॥೪೩॥
ತಾವದ್ದೂರಂ ನ ಗಮನಂ ತೇಷಾಂ ಸಂಭಾವಿತಂ ಯತಃ ।

ಅಮೂಲ್ಯವಾದ ಮತ್ತು ರತ್ನನಿರ್ಮಿತವಾದ ಉಂಗುರಗಳನ್ನು ಧರಿಸಿ, ರತ್ನಖಚಿತವಾದ ಉಡಿದಾರದಿಂದ ಅಲಂಕೃತನಾಗಿರುವನು. ವಜ್ರವೈಡೂರ್ಯಾದಿಗಳಿಂದೊಡಗೂಡಿದ ಕರ್ಣಾಭರಣವನ್ನು ಧರಿಸಿದವನಾಗಿ, ರತ್ನದಿಂದಲೇ ರಚಿಸಿದ ಛತ್ರಿಯನ್ನು ಹೊಂದಿ ಕಣ್ಣುಗಳನ್ನು ಕೋರೈಸುವ ಕಾಂತಿಯಿಂದ ವಿರಾಜಿಸುವನು. ಆ ಛತ್ರಿಯ ಸುತ್ತಲೂ ರತ್ನಗಳ ಮಾಲಿಕೆಗಳು ತೂಗಾಡುತ್ತಿರುವುವು.॥೩೮-೩೯-೪೦॥

ರತ್ನಖಚಿತವಾದ ಹಿಡಿಯಿಂದ ಕೂಡಿದ ಚಾಮರವನ್ನು ಧರಿಸಿ ಸೇವಕರು ಸ್ವಾಮಿಯಾದ ಶಿವನನ್ನು ಸೇವಿಸುತ್ತಿರುವರು. ಶಿವನಿಗೆ ಗಾಳಿಯನ್ನು ಬೀಸುತ್ತಿರುವರು. ಜಗದೊಡೆಯನಾದ ಶಿವನು ವೃಷಭದ ಅಂಕಿತದ ಬಾವುಟಗಳಿಂದ ಸುತ್ತುವರಿಯಲ್ಪಟ್ಟು ಸುಖಾಸೀನನಾಗಿರುವನು. ॥೪೧॥

ಗಣಗಳು ಪ್ರಭುವನ್ನು ನೋಡಿ ಭಯದಿಂದ ನಡುಗುತ್ತಾ, ಸುವರ್ಣದಂಡವನ್ನು ಕೈಯ್ಯಲ್ಲಿ ಧರಿಸಿ ಅತ್ಯಂತ ವಿನಯದಿಂದ ನಿಂತಿರುವರು. ॥೪೨॥

ಅಲ್ಲಿ ಗಂಧರ್ವರಾಗಲಿ. ಕಿಂನರರಾಗಲಿ, ದೇವತೆಗಳಾಗಲಿ, ಯಾರೂ ಕಾಣುವುದಿಲ್ಲ. ಅವರಿಗೆ ಶಿವನನ್ನು ಸಂದರ್ಶಿಸಲು, ಅಷ್ಟು ದೂರ ಹೋಗುವ ಆವಶ್ಯಕತೆಯಿರುವುದಿಲ್ಲ. ॥೪೩॥

ಸುಮೇರುಮೂಲೇ ದೇವಾನಾಂ ಸ್ಥಲಾನಿ ವಿವಿಧಾನಿ ಚ ॥೪೪॥
ತೇಷಾಂ ನಾರಾಯಣಾದೀನಾಂ ತಾವದ್ಗಮನಮೇವ ನ ।
ಸುಮೇರುಮಧ್ಯೇ ಕೈಲಾಸಃ ಕದಾಚಿತ್ತತ್ರ ಶಂಕರಃ ॥೪೫॥
ವಿಹಾರಾರ್ಥಂ ಸಮಾಯಾತಿ ಲೀಲಾವಿಗ್ರಹಸುಂದರಃ ।
ತತ್ರ ತಾವನ್ನಂದಿಕೇಶಪ್ರಸಾದೇನ ಕದಾಚನ ॥೪೬॥
ನಾರಾಯಣಾದಯಃ ಶಂಭುಂ ಪ್ರಣಮಂತ್ಯತಿದೂರತಃ ।
ತತ್ರಾಪಿ ವೇತ್ರಸಂಘಾತಭೀತನಾರಾಯಣಾದಯಃ ॥೪೭॥
ತತೋಽಪಿ ದೂರಂ ಗಚ್ಛಂತಿ ಸಕಂಪಾಃ ಪ್ರಭುದರ್ಶನೇ ।
ತಥಾ ಸಂತಿ ತದುತ್ತುಂಗಶೃಂಗಪ್ರಾಕಾರದರ್ಶನಂ ॥೪೮॥
ತೇಷಾಂ ನಾರಾಯಣಾದೀನಾಮತಿದುರ್ಲಭಮೇವ ಹಿ ।

ಏಕೆಂದರೆ ಸುಮೇರು ಪರ್ವತದ ಕೆಳಭಾಗವೇ, ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳಿಗೆ ವಾಸಸ್ಥಳವಾಗಿರುವುದು. ಆದುದರಿಂದಲೇ ಅವರಿಗೆ ಶಿವನಿದ್ದಲ್ಲಿಗೆ ಹೋಗುವ ಶಕ್ತಿಯಿರುವುದಿಲ್ಲ. ||೪೪||

ಕೈಲಾಸವು ಸುಮೇರುಪರ್ವತದ ಮಧ್ಯಪ್ರದೇಶದಲ್ಲಿರುವುದು. ಶಿವನು ಒಂದೊಂದು ಬಾರಿ ತನ್ನ ಲೀಲೆಯಿಂದ ಸುಂದರವಾದ ರೂಪವನ್ನು ಧರಿಸಿ, ವಿಹಾರಕ್ಕೋಸ್ಕರ ಅಲ್ಲಿಗೆ ಬರುವನು. ಆಗ ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳು ಒಂದೊಂದು ವೇಳೆ ನಂದಿಕೇಶ್ವರನ ಅನುಗ್ರಹದಿಂದ ದೂರದಿಂದಲೇ ಶಿವನನ್ನು ನೋಡಿ ನಮಸ್ಕರಿಸುವರು. ||೪೫-೪೬||

ಆ ಸ್ಥಳದಲ್ಲಿ ಈಶ್ವರನು ಬರುತ್ತಿರುವಾಗ, ನಾರಾಯಣನೇ ಮೊದಲಾದ ದೇವತೆಗಳು ಅವನ ಸಮೀಪದಲ್ಲಿರುವ ದಂಡಧಾರಿಗಳಾದ ಗಣಗಳನ್ನು ನೋಡಿಯೇ ಭಯಭರಿತರಾಗುವರು. ಪ್ರಭುವಾದ ಶಿವನನ್ನು ನೋಡಲು ಹೋಗಿ, ಭಯದಿಂದ ಗಡಗಡನೆ ನಡುಗುತ್ತಾ ಹಿಂದಕ್ಕೆ ಸರಿಯುವರು. ||೪೭||

ಶಿವನ ಪರಿವಾರದ ದರ್ಶನವೇ ನಾರಾಯಣಾದಿ ದೇವತೆಗಳಿಗೆ, ಭಯಜನಕವಾಗಿರುವಾಗ ಉನ್ನತವಾದ ಶಿಖರ ಮತ್ತು ಅವನ ಅರಮನೆಯ ಕೋಟೆ ಇವುಗಳ ದರ್ಶನವು ಅತ್ಯಂತ ದುರ್ಲಭವಾದುದಲ್ಲವೇ ? ||೪೮||

ತತ್ರ ತಾವತ್ಕುಮಾರಸ್ಯ ಗಣೇಶಸ್ಯಾಪಿ ದೂರತಃ ॥೪೯॥

ಅವಸ್ಥಾನಂ ತತಸ್ತತ್ರ ನಾನ್ಯೇಷಾಂ ಗಮನಂ ಮತಂ ।
ತತ್ರ ಸ್ಥಿತಂ ಮಹಾದೇವಂ ಗಿರಿರಾಜಕುಮಾರಿಕಾ ॥೫೦॥

ದ್ರಷ್ಟುಮಭ್ಯುತ್ಥಿತಾ ಶಂಭುಂ ಪ್ರಪಶ್ಯಾಮೀತಿ ಸಾದರಂ ।
ಗಿರಿಜಾಪಿ ಸುಖಾಸೀನಂ ಹಿಮವಂತಂ ನಗೇಶ್ವರಂ ॥೫೧॥

ಪಪ್ರಚ್ಛ ಮಂದಹಾಸೇನ ದಿವ್ಯವೇಷವಿರಾಜಿತಾ ।
ಅದ್ಯ ಪಶ್ಯಾಮಿ ಶೈಲೇಂದ್ರ ಶಂಕರಂ ಲೋಕಶಂಕರಂ ॥೫೨॥

ಪ್ರಾಸಾದಶೃಂಗಪ್ರಾಸಾದರತ್ನಸಿಂಹಾಸನೇ ಸ್ಥಿತಂ ।
ನ ತತ್ರ ಸೂರ್ಯಕಿರಣಾಶ್ಚಂದ್ರಸ್ಯಾಪಿ ನ ರಶ್ಮಯಃ ॥೫೩॥
ವಿದ್ಯುತಾಮಪಿ ತಾರಾಣಾಂ ತತ್ರ ವಾರ್ತಾ ನ ವೈ ಧ್ರುವಂ ।

ಆ ಕೋಟೆಯಲ್ಲಿ, ಕುಮಾರಸ್ವಾಮಿ ಮತ್ತು ಗಣಪತಿ, ಇವರಿಬ್ಬರು ಮಾತ್ರ ವಾಸವಾಗಿರುವರು. ಇನ್ನುಳಿದವರಿಗೆ ಅಲ್ಲಿಗೆ ಹೋಗುವುದಕ್ಕೂ ಅನುಜ್ಞೆಯಿರುವುದಿಲ್ಲ. ॥೪೯॥

ಕೈಲಾಸದಲ್ಲಿ ವಾಸವಾಗಿರುವ ಆ ಶಿವನನ್ನು ನೋಡಬೇಕೆಂಬ ಕುತೂಹಲದಿಂದ, ಪರ್ವತರಾಜನಾದ ಹಿಮವಂತನ ಕುಮಾರಿ ಗೌರಿಯು, ಹೊರಡಲು ಉದ್ಯುಕ್ತಳಾದಳು. ॥೫೦॥

ಗಿರಿಜೆಯು, ಸುಂದರವಾದ ವೇಷವನ್ನು ಧರಿಸಿ, ಮಂದಹಾಸವನ್ನು ಬೀರುತ್ತಾ ಸುಖಾಸೀನನಾದ ತಂದೆಯನ್ನು ಕುರಿತು, ಶಿವನಿದ್ದಲ್ಲಿಗೆ ಹೋಗಲು, ಅನುಜ್ಞೆಯನ್ನು ಕೇಳಿದಳು. ॥೫೧॥

" ತಂದೆಯೇ, ಪರ್ವತರಾಜನೇ, ನಾನು ಈದಿವಸ ಪ್ರಾಸಾದದಮೇಲೆ ರತ್ನಸಿಂಹಾಸನನಲ್ಲಿ ಕುಳಿತಿರುವ ಲೋಕಕಲ್ಯಾಣಕರನಾದ ಶಿವನನ್ನು ನೋಡಬಯಸುವೆನು. ॥೫೨॥

ತೇಜೋರೂಪನಾದ ಪರಶಿವನ ಎದುರಿನಲ್ಲಿ ಸೂರ್ಯಚಂದ್ರರ ಕಿರಣಗಳೇ ಪ್ರಸರಿಸಲಾರವು. ನಕ್ಷತ್ರಗಳ ಮತ್ತು ಮಿಂಚುಗಳ ಸುಳಿವೇ ಅಲ್ಲಿ ಇರುವುದಿಲ್ಲ. ॥೫೩॥

ತದೇಕಾಂತಸ್ಥಲಂ ರಮ್ಯಂ ಸುಂದರಾಣಾಂ ಚ ಸುಂದರಂ ॥೫೪॥

ಕಲ್ಯಾಣಾನಾಂ ಚ ಕಲ್ಯಾಣಂ ಪಾವನಾನಾಂ ಚ ಪಾವನಂ ।
ಪುಣ್ಯಾನಾಂ ಪುಣ್ಯಮತ್ಯಂತಂ ತತೋ ನಾಸ್ತ್ಯಧಿಕಂ ಕ್ವಚಿತ್ ॥೫೫॥

ಅದ್ಯ ತದ್ದರ್ಶನೋತ್ಕಂಠಾ ಪುನಃ ಪುನರುದೇತಿ ಮೇ ॥೫೬॥

ಇತಿ ತದ್ವಚನಂ ಶ್ರುತ್ವಾ ಹರ್ಷಾಶ್ರುಪರಿಪೂರಿತಃ ।
ಅಂಬಾಮಾಹ ಸ ಶೈಲೇಂದ್ರೋ ವಿನಯಾನತಕಂಧರಾಂ ॥೫೭॥

॥ ಹಿಮವಾನುವಾಚ ॥

ಶಿವೇ ತತ್ರಾದ್ಯ ಗಮನೇ ವಿಲಂಬಸ್ತೇ ಕಿಯಾನ್ ವದ ।
ಪುನರಾಗಮನೇ ದೇವಿ ಕಿಮುತ್ಕಂಠಾ ಪ್ರಜಾಯತೇ ॥೫೮॥

ತ್ವದ್ವಿಯೋಗವ್ಯಥಾಂ ಸೋಢುಂ ಶಕ್ತ ಏವ ನ ಸರ್ವಥಾ ॥೫೯॥

ಆ ಸ್ಥಳವು ಏಕಾಂತವಾಗಿಯೂ ಮನಸ್ಸನ್ನು ಆಕರ್ಷಿಸುವ ಸಾಮರ್ಥ್ಯವುಳ್ಳದಾಗಿಯೂ ಇರುವುದು. ಅದಲ್ಲದೇ, ಅದಕ್ಕಿಂತ ಅತ್ಯಂತ ಮಂಗಳಕರವೂ, ಪವಿತ್ರವೂ, ಪುಣ್ಯಭೂಮಿಯೂ ಆದ ಮತ್ತೊಂದು ಪ್ರದೇಶವಿರುವುದಿಲ್ಲ. ॥೫೪-೫೫॥

ಆದುದರಿಂದ ಈಗ ನನಗೆ ಆ ಸ್ಥಲವನ್ನು ಬೇಗ ನೋಡುವ ಕುತೂಹಲವುಂಟಾಗಿರುತ್ತದೆ" ಎಂದ ಮಗಳ ಈ ಮಾತನ್ನು ಕೇಳಿ, ಹಿಮವಂತನು ಆನಂದ ಬಾಷ್ಪಗಳಿಂದ ಕೂಡಿದವನಾಗಿ, ವಿನಯದಿಂದ ತಲೆಯನ್ನು ಬಗ್ಗಿಸಿ ನಿಂತಿದ್ದ, ಲೋಕಮಾತೆಯಾದ ಗೌರಿಯನ್ನು ಕುರಿತು ಹೀಗೆಂದುಹೇಳಿದನು. ॥೫೬-೫೭॥

ಎಲೌ ವತ್ಸೆಯೇ, ಶಿವನ ಬಳಿಗೆ ಹೋಗಲು ನೀನು ಎಷ್ಟೊಂದು ಆತುರಳಾಗಿರುತ್ತೀಯೆ! ದೇವಿ, ಅಲ್ಲಿಗೆ ಹೋದರೆ ಮತ್ತೆ ಹಿಂತಿರುಗಿ ಬರಲು ನಿನಗೆ ಮನಸ್ಸು ಬಂದೀತೆ! ॥೫೮॥

ನಾನು ನಿನ್ನ ವಿಯೋಗದಿಂದ ಉಂಟಾಗುವ ವ್ಯಥೆಯನ್ನು ಸಹಿಸಲು ಅಸಮರ್ಥನಾಗಿರುವೆನು. ಆ ಸ್ಥಳವಾದರೋ ಇಲ್ಲಿಗೆ ಅತಿ ದೂರದಲ್ಲಿರುವುದರಿಂದ, ನಾನು ಅಲ್ಲಿಗೆ ಆಗಾಗ ಬರಲು ಅಸಮರ್ಥನಾಗಿರುವೆನು. ॥೫೯॥

ಅತಿದೂರೇಣ ಗಮನಂ ಮಮ ತತ್ರ ಗತಿರ್ನ ಹಿ ।
ನ ಯತ್ರ ಸೂರ್ಯಕಿರಣಾಃ ಪ್ರಸರಂತ್ಯೂರ್ಧ್ವಮುಚ್ಛ್ರಿತಃ ॥೬೦॥

ಕಥಂ ತತ್ರಾಸ್ಮದಾದೀನಾಂ ಗಮನಂ ಕಮಲಾನನೇ ।
ಇತಿ ತದ್ವಚನಂ ಶ್ರುತ್ವಾ ಮೇನಯಾ ಸಹ ಪಾರ್ವತೀ ॥೬೧॥

ಆನಂದಾಶ್ರುಸಮಾಕ್ರಾಂತಾ ಮಂದಮಾಹ ಗಿರೀಶ್ವರಂ ।

॥ ಶ್ರೀ ಪಾರ್ವತ್ಯುವಾಚ ॥

ಸಾಯಂ ವಾ ಶ್ವಃ ಪರಶ್ವೋ ವಾ ಪುನರಾಗಮ್ಯತೇ ಮಯಾ ॥೬೨॥

ತ್ವಯಾ ಚಿಂತಾ ನ ಕಾರ್ಯಾತ್ರ ಸತ್ಯಮೇವೋಚ್ಯತೇ ಮಯಾ ।
ಇತ್ಯುಕ್ತ್ವಾ ಪ್ರಸ್ಥಿತಾಂ ಗೌರೀಂ ಸ ವಿಲೋಕ್ಯ ಮುಹುರ್ಮುಹುಃ ।
ಆನಂದಾಶ್ರುಪರಿಕ್ಲಾಂತೋ ನ ಚ ವಾಚಮುವಾಚ ಚ ॥೬೩॥

ಎಲೌ ಪದ್ಮಮುಖಿಯೇ, ನಿನ್ನ ಪತಿಯ ವಾಸಸ್ಥಾನವಾದ ಕೈಲಾಸವು ಸೂರ್ಯಕಿರಣಗಳೂ ಪ್ರಸರಿಸಲಾರದಷ್ಟು ಉನ್ನತವಾಗಿರುವುದು. ಆ ಸ್ಥಳಕ್ಕೆ ನಮ್ಮಂತಹ ದುರ್ಬಲರು ಹೇಗೆತಾನೆ ಹೋಗಬಲ್ಲರು ! ॥೬೦॥

ಪರ್ವತರಾಜನ ಈ ಮಾತನ್ನು ಕೇಳಿ ಪಾರ್ವತಿಯು ಮೇನಕೆಯೊಂದಿಗೆ ಆನಂದಬಾಷ್ಪಗಳಿಂದ ಕೂಡಿದವಳಾಗಿ, ತಂದೆಯನ್ನು ಕುರಿತು, ವಿನಯದಿಂದ ಹೀಗೆಂದು ಹೇಳಿದಳು. ॥೬೧॥

ತಂದೆಯೇ, ಈದಿನ ಸಾಯಂಕಾಲವಾಗಲಿ, ನಾಳೆಯಾಗಲಿ ಅಥವಾ ನಾಡಿದ್ದಾಗಲಿ ನಾನು ಹಿಂದಿರುಗಿ ಬರುವೆನು. ಈ ವಿಷಯದಲ್ಲಿ ನೀನು ಚಿಂತಿಸಬೇಕಾದುದಿಲ್ಲ, ಇದು ನಿಜ. ॥೬೨॥

ಹೀಗೆಂದು ಹೇಳಿ ಮನೆಯಿಂದ ಹೊರಡಲು ಸಿದ್ಧಳಾದ ಮಗಳ ಮುಖವನ್ನು ಬಾರಿಬಾರಿಗೂ ನೋಡಿ, ತಂದೆಯು ಆನಂದಬಾಷ್ಪಗಳನ್ನು ಸುರಿಸಿದನು. ಆದರೆ ಮರುಮಾತನ್ನೇ ಹೇಳಲಿಲ್ಲ. ॥೬೩॥

ತಂ ದುಃಖಿತಂ ವಿಲೋಕ್ಯಾಂಬಾ ಮೇನಕಾಮಪಿ ದುಃಖಿತಾಂ ।
ವಿರತಾ ಗಮನೇ ತಸ್ಥೌ ಶಿವಾ ಶೈಲೇಂದ್ರಸನ್ನಿಧೌ ॥೬೪॥

ಏವಂ ಸ್ಥಿತಾ ಮಾಸಮಾತ್ರಂ ನಯಂತೀ ದಿವಸಾನ್ ಹಿ ಸಾ ।
ಸಲ್ಲಾಪೈಶ್ಚ ವಿಹಾರೈಶ್ಚ ಶೈಲೇಂದ್ರಾನಂದಸಾಧನೈಃ ॥೬೫॥

ಅತಃ ಪರಂ ಕದಾಚಿದ್ವಾ ಭವಾನೀ ಪತಿಮಂದಿರಂ ।
ಪ್ರಯಾಸ್ಯತೀತಿ ಹಿಮವಾನುಪಚಾರಾದರೋದ್ಯತಃ ॥೬೬॥

ವಿಲಕ್ಷಣೋಪಚಾರಾಣಾಂ ಪ್ರಚಾರೈಸ್ತಾಮನುಕ್ಷಣಂ ।
ಪೂಜಯಾಮಾಸ ಗಿರಿಜಾಂ ವಾತ್ಸಲ್ಯೇನ ವಿಶೇಷತಃ ॥೬೭॥

ಯಸ್ಮಿನ್ ದಿನೇ ಸಾಧನಾನಿ ತತ್ಪೂಜಾರ್ಹಾಣಿ ತಾನಿ ಚ ।
ದಿನಾಂತರೇ ತದನ್ಯಾನಿ ತದನ್ಯಾನಿ ದಿನಾಂತರೇ ॥೬೮॥

ತಂದೆಯ ದುಃಖವನ್ನೂ ಮತ್ತು ದುಃಖಿಸುತ್ತಿರುವ ಮೇನಕೆಯನ್ನೂ ನೋಡಿ ಗಿರಿಜೆಯು ಮೌನವನ್ನು ತಾಳಿ ಪರ್ವತರಾಜನ ಸಮೀಪದಲ್ಲಿಯೇ ನಿಂತಳು. ॥೬೪॥

ಮತ್ತು ನಾನಾವಿಧವಾದ ಸರಸಸಲ್ಲಾಪಗಳಿಂದ ತಂದೆಯ ಮನಸ್ಸನ್ನು ಆನಂದಗೊಳಿಸುತ್ತಾ ದಿನಗಳನ್ನು ಕಳೆಯುತ್ತಾ ಒಂದು ಮಾಸದವರೆಗೂ ಮತ್ತೆ ಅಲ್ಲಿಯೇ ನಿಂತುಬಿಟ್ಟಳು. ॥೬೫॥

ಅನಂತರ ತಂದೆಯಾದ ಹಿಮವಂತನು, ಇನ್ನು ಮುಂದೆ ಗೌರಿಯು ಎಂದಾದರೂ ಒಂದು ದಿನ ಪ್ರಿಯತಮನ ಮನೆಯನ್ನು ತೆರಳುವಳು ಎಂದು ನಿಶ್ಚಯಿಸಿ ಅವಳನ್ನು ಆದರೋಪಚಾರಗಳಿಂದ ಸಂತೋಷಗೊಳಿಸತೊಡಗಿದನು. ॥೬೬॥

ಪರ್ವತರಾಜನು ಗಿರಿಜೆಗೆ ವಿವಿಧವಾದ ಉಪಚಾರಗಳನ್ನು ಮಾಡುವೆನೆಂದು ಸಂಕಲ್ಪಿಸಿ, ನಿರತಿಶಯವಾದ ವಿಶ್ವಾಸದಿಂದ ಅವಳನ್ನು ಸಂತೋಷಪಡಿಸಲಾರಂಭಿಸಿದನು. ॥೬೭॥

ಯಾವ ದಿನದಲ್ಲಿ ಯಾವ ಸಾಧನಗಳಿಂದ ತೃಪ್ತಿಯೊದಗುವುದೋ ಆ ದಿನ ಅದೇ ಸಾಧನಗಳಿಂದ ಅವಳನ್ನು ಆದರಿಸುತ್ತಿದ್ದನು. ಹೀಗೆ ಪ್ರತಿದಿನವೂ ಬೇರೆ ಬೇರೆ ಉಪಕರಣಗಳಿಂದಲೂ, ಬೇರೆ ಬೇರೆ ರೀತಿಯ ಉಪಾಯಗಳಿಂದಲೂ ಉಪಚರಿಸುತ್ತಿದ್ದನು. ॥೬೮॥

ಏವಂ ಪ್ರತಿಕ್ಷಣಂ ಶೈಲಶ್ಶಿವಾಮಾರಾಧಯನ್ಮುದಾ ।
ಮಾಸಂ ಕ್ಷಣಮಿವಾಪಶ್ಯತ್ ಮೇನಯಾ ಸಹ ಸಾದರಂ ॥೧೯॥

ತತಃ ಪರಂ ನಂದಿಕೇಶಃ ಶಿವಾಜ್ಞಾಕಾರಿಣಾಂ ವರಃ ।
ಸಮಾಗತೋ ಹಿಮಗಿರಿಂ ಗಣೈರ್ದಿವ್ಯೈಸ್ಸಮನ್ವಿತಃ ॥೨೦॥

ತಮಾಲೋಕ್ಯ ಸ ಶೈಲೇಂದ್ರೋ ನಂದಿಕೇಶಂ ಗಣೇಶ್ವರಂ ।
ಪ್ರಹೃಷ್ಟಸ್ಸಾಸನಂ ತಸ್ಮೈ ದದೌ ಕಂಪಸಮನ್ವಿತಃ ॥೨೧॥

ತತಃ ಪೂಜಾಂ ಯಥಾಯೋಗ್ಯಂ ಕೃತ್ವಾ ನಂದೀಶ್ವರಾಯ ಸಃ ।
ಕೃತಾಂಜಲಿಪುಟೋ ಭೂತ್ವಾ ಪಪ್ರಚ್ಛ ವಿನಯಾನ್ವಿತಃ ॥೨೨॥

ಕುತಃ ಸಮಾಗತೋ ನಂದಿನ್ ಕುಶಲೀ ಖಲು ಶಂಕರಃ ।
ಕಿಮಸ್ತಿ ಕಾರ್ಯಮೇತಾವದ್ಭವನಾಗಮನೇ ವದ ॥೨೩॥

ಈ ಪ್ರಕಾರವಾಗಿ ಆ ಪರ್ವತರಾಜನು ಪ್ರತಿಕ್ಷಣವೂ ಪ್ರೀತಿಯಿಂದ ಗಿರಿಜೆಯನ್ನು ತೃಪ್ತಿಗೊಳಿಸುತ್ತಾ, ಮೇನಕೆಯೊಂದಿಗೆ ಒಂದು ತಿಂಗಳನ್ನು ಕ್ಷಣದಂತೆ ಕಳೆದನು. ॥೧೯॥

ಬಳಿಕ ಒಂದಾನೊಂದು ದಿವಸ ಶಿವನ ಆಜ್ಞೆಯನ್ನು ನೆರವೇರಿಸುವವರಲ್ಲಿ ಅಗ್ರಗಣ್ಯನಾದ ನಂದಿಕೇಶ್ವರನು ಪ್ರಮಥಗಣಗಳೊಡನೆ ಹಿಮಾಚಲಕ್ಕೆ ಬಂದನು. ॥೨೦॥

ಗಣನಾಥನಾದ ಆ ನಂದಿಕೇಶ್ವರನನ್ನು ನೋಡಿ ಪರ್ವತರಾಜನು ಸಂತುಷ್ಟನಾಗಿ, ವಿನಯದಿಂದ ಅವನಿಗೆ ತನ್ನ ಆಸನವನ್ನು ಕೊಟ್ಟನು. ॥೨೧॥

ಬಳಿಕ ಪರ್ವತರಾಜನು ಅಭ್ಯಾಗತನಾದ ನಂದಿಕೇಶ್ವರನನ್ನು ವಿಧಿವತ್ತಾಗಿ ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ಅಂಜಲಿಬದ್ಧನಾಗಿ ನಿಂತು ವಿನಯಪೂರ್ವಕವಾಗಿ ಕುಶಲಪ್ರಶ್ನೆಯನ್ನು ಮಾಡಿದನು. ॥೨೨॥

ನಂದಿಕೇಶ್ವರನೇ, ನೀನು ಈಗ ಎಲ್ಲಿಂದ ದಯಮಾಡಿದೆ! ಕೈಲಾಸವಾಸಿಯಾದ ಶಂಕರನು ಕುಶಲಿಯಾಗಿರುವನೇ? ಮತ್ತು ಯಾವ ಕಾರ್ಯವನ್ನುದ್ದೇಶಿಸಿ ನನ್ನ ಮನೆಗೆ ಬಂದಿರುವೆ? ಈ ಎಲ್ಲಾ ವಿಷಯಗಳನ್ನು ನನಗೆ ಹೇಳುವವನಾಗು. ಎಂದು ಹಿಮವಂತನು ಪ್ರಶ್ನಿಸಲು, ॥೨೩॥

॥ ನಂದಿಕೇಶ್ವರ ಉವಾಚ ॥

ಗಿರೇ ಕುಶಲರೂಪಸ್ಯ ಶಂಕರಸ್ಯ ಮಹಾತ್ಮನಃ ।
ಸರ್ವದಾ ಕುಶಲಂ ಸತ್ಯಂ ಕುಶಲಂ ಕುಶಲಂ ಖಲು ॥೭೪॥

ಯತ್ಪಾದಪದ್ಮಸ್ಮರಣಾತ್ಕುಶಲಂ ಸರ್ವದಾ ಗಿರೇ ।
ತಸ್ಯ ನಾಕುಶಲಂ ನೂನಂ ಸ ಏವ ಕುಶಲಪ್ರದಃ ॥೭೫॥

ಮಹಾಮೃತ್ಯುಂಜಯಸ್ತಸ್ಯ ಮೃತ್ಯುವಾರ್ತಾಪಿ ದೂರತಃ ।
ನ ವ್ಯಾಧಿವಾರ್ತಾಪಿ ಗಿರೇ ಸ ಯತೋ ವ್ಯಾಧಿನಾಶಕಃ ॥೭೬॥

ಯನ್ನಾಮಸ್ಮರಣೇನಾಪಿ ವಿನಷ್ಟೋ ರೋಗಸಾಗರಃ ।
ತಸ್ಯ ರೋಗಭಯಂ ಕುತ್ರ ನಿತ್ಯಾನಂದಸ್ಯ ವಸ್ತುತಃ ॥೭೭॥

ಎಲೈ ಪರ್ವತರಾಜನೇ, ಪೂಜ್ಯನೂ, ಆನಂದರೂಪಿಯೂ ಆದ ಶಂಕರನು ಯಾವಾಗಲೂ ಕುಶಲಿಯಾಗಿಯೇ ಇರುವನು. ಇದರಲ್ಲಿ ಸಂಶಯವಿರುವುದೇ ?॥೭೪॥

ಪರ್ವತರಾಜನೇ, ಯಾವನ ಅಡಿದಾವರೆಗಳ ಸ್ಮರಣಮಾತ್ರದಿಂದಲೇ ನಾವೆಲ್ಲರೂ ಕುಶಲಿಗಳಾಗಿರುವೆವೋ ಅಂತಹ ಶಿವನು ಎಂದೂ ದುಃಖಿಯಾಗಿರುವುದಿಲ್ಲ. ಸಕಲರಿಗೂ ಅವನೇ ಕುಶಲವನ್ನುಂಟುಮಾಡುವವನಾಗಿರುತ್ತಾನೆ. ಹೀಗಿರುವಲ್ಲಿ ಅವನಿಗೆ ದುಃಖವು ಹೇಗೆ ತಾನೇ ಉಂಟಾದೀತು ? ॥೭೫॥

ಮೃತ್ಯುವನ್ನೇ ಜಯಿಸಿರುವ ಅವನಿಗೆ ಮರಣವಾರ್ತೆಯೇ ಇರುವುದಿಲ್ಲ. ಅವನು ಸಕಲ ಜನರ ವ್ಯಾಧಿಯನ್ನು ನಾಶಮಾಡುವವನಾಗಿರುವುದರಿಂದ ಅವನಲ್ಲಿ ವ್ಯಾಧಿವಾರ್ತೆಯಿರುವುದೆ ? ॥೭೬॥

ಯಾವ ದೇವನ ನಾಮವನ್ನು ಸ್ಮರಿಸುವಮಾತ್ರದಿಂದಲೇ, ಅಪಾರವಾದ ರೋಗವೂ, ನಾಶವನ್ನೈದುವುದೋ ಅಂತಹ ದೇವದೇವನಿಗೆ ರೋಗದ ಭಯವು ಎಲ್ಲಿಂದ ! ಅವನು ನಿರಂತರವೂ ನಿತ್ಯಾನಂದರೂಪವಾದ ಸುಖದಲ್ಲಿಯೇ ಮಗ್ನನಾಗಿರುವನು. ॥೭೭॥

ಯದಕ್ಷಿಮೀಲನೇನೈವ ಬ್ರಹ್ಮಾದಿಪ್ರಲಯೋ ಭವೇತ್ ।
ತಸ್ಯಾಸ್ತ್ಯಕುಶಲಂ ಕಿಂ ನು ಸಾಶಂಕಾಪಿ ನ ಜಾಯತೇ ॥೭೮॥

ನಾರಾಯಣಾದ್ಯಾಸ್ಸರ್ವೇಽಪಿ ಬ್ರಹ್ಮಾಂತಾಃ ಪ್ರಲಯಂ ಗತಾಃ ।
ತಾನ್ಪಶ್ಯಾಮ್ಯಹಮಪ್ಯದ್ಧಾ ಶಿವಪಾದಪ್ರಸಾದತಃ ॥೭೯॥

ಮಹಾಮೃತ್ಯುಂಜಯತ್ವೇನ ವೇದವೇದಾಂತಸಂಸ್ತುತಃ ।
ಮಹಾದೇವಸ್ತತಸ್ತಸ್ಯ ಕುಶಲಂ ಸರ್ವದಾ ಖಲು ॥೮೦॥

ಯಲ್ಲಿಂಗಪೂಜಕೋ ಭಕ್ತ್ಯಾ ನರೋ ಮೃತ್ಯುಂ ನ ಪಶ್ಯತಿ ।
ತಸ್ಯ ದೇವಾಧಿದೇವಸ್ಯ ಕುಶಲಂ ಸರ್ವಥಾ ಖಲು ॥೮೧॥

ಮದಾಗಮನವಾರ್ತೇಯಂ ಜ್ಞಾಪನೀಯಾ ತ್ವಯಾಧುನಾ ।
ಅಂಬಿಕಾಯೈ ಪ್ರಣಾಮಾಶ್ಚ ವಕ್ತವ್ಯಾಶ್ಚ ಮಯಾ ಕೃತಾಃ ॥೮೨॥

ಪರಶಿವನು ಒಂದು ಸಾರಿ ಕಣ್ಣನ್ನು ಮುಚ್ಚಿದನಾದರೆ ಬ್ರಹ್ಮನಿಂದ ಮೊದಲುಗೊಂಡು ನಿಖಿಲಪ್ರಪಂಚವೂ ನಾಶವನ್ನೈದುವುದು. ಅಂತಹ ಶಿವನಿಗೆ ದುಃಖವೆಲ್ಲಿಂದ! ಅವನಲ್ಲಿ ಆ ದುಃಖವನ್ನು ಊಹಿಸಲುತಾನೆ ಸಾಧ್ಯವೇ? ॥೭೮॥

ಶ್ರೀಮನ್ನಾರಾಯಣನಿಂದ ಮೊದಲುಗೊಂಡು ಬ್ರಹ್ಮನವರೆಗೆ ಇರುವ ಸಮಸ್ತ ದೇವತೆಗಳು ನಾಶವನ್ನೈದಿದರೂ, ನಾನು ಮಾತ್ರ ಶಿವನ ಪಾದಾನುಗ್ರಹದಿಂದ, ಅದನ್ನೆಲ್ಲಾ ನೋಡುತ್ತಾ ಜೀವಿಸುವೆನು. ॥೭೯॥

ವೇದಗಳು, ಮತ್ತು ವೇದಾಂತಗಳು ಆ ಶಿವನನ್ನು ಮೃತ್ಯುಂಜಯನೆಂಬ ನಾಮಧೇಯದಿಂದ ಸ್ತೋತ್ರಮಾಡುತ್ತವೆ. ಹೀಗಿರುವಲ್ಲಿ ಅವನು ಸದಾ ಕುಶಲಿಯೇ ಅಲ್ಲವೇ! ॥೮೦॥

ಯಾವ ಶಿವನ ಲಿಂಗವನ್ನು ಭಕ್ತಿಪೂರ್ವಕವಾಗಿ ಪೂಜಿಸಿ ಮನುಜನು, ಮೃತ್ಯುವನ್ನು ಜಯಿಸುವನೋ ಅಂತಹ ಸಕಲ ದೇವತೆಗಳಿಗೂ ಪ್ರಭುವಾದ ಅವನಿಗೆ ನಿರಂತರವೂ ಕುಶಲವೇ ಅಲ್ಲವೇ! ॥೮೧॥

ಈಗ, ನೀನು ನನ್ನ ಸಮಾಗಮದ ವೃತ್ತಾಂತವನ್ನೂ ಮತ್ತು ನನ್ನ ನಮಸ್ಕಾರಗಳನ್ನೂ ಮಾತೆಯಾದ ಗಿರಿಜೆಗೆ ತಿಳಿಯಪಡಿಸುವವನಾಗು. ॥೮೨॥

ಅಂಗುಲೀಯಕಮಸ್ತ್ಯೇತನ್ಮಹಾದೇವಸ್ಯ ಭೂಷಣಂ ।
ಪ್ರದರ್ಶನೀಯಮಂಬಾಯೈ ಯೇನಾನಂದಃ ಪ್ರವರ್ಧತೇ ॥೮೩॥

ಇತಿ ತದ್ವಚನಂ ಶ್ರುತ್ವಾ ಗೃಹೀತ್ವಾಹ್ಯಂಗುಲೀಯಕಂ ।
ದದೌ ಸತ್ವರಮಂಬಾಯೈ ನಿವೇದ್ಯಾಗಮನಂ ಚ ತತ್ ॥೮೪॥

ತದಂಗುಲೀಯಕಂ ದೃಷ್ಟ್ವಾ ಹೃಷ್ಟಾ ಸಾ ಭವವಲ್ಲಭಾ ।
ದಧಾರ ಶಿರಸಾ ಭಕ್ತ್ಯಾ ನೇತ್ರಸ್ಪರ್ಶನಪೂರ್ವಕಂ ॥೮೫॥

ತದಾಲೋಕನಮಾತ್ರೇಣಾಪ್ಯಾನಂದಾಶ್ರುಕಣಾನ್ವಿತಾ ।
ಸ್ವಾತ್ಮಸಂವೇದನಂ ಕೃತ್ವಾ ಶಿವಧ್ಯಾನಂ ಚಕಾರ ಸಾ. ॥೮೬॥

ತೇನ ಧ್ಯಾನೇನ ನೀತೋಽಪಿ ಭೂಯಾನ್ ಕಾಲಸ್ತಯಾ ತತಃ ।
ಸ್ವಾತ್ಮಸಂವೇದನಂ ಪ್ರಾಪ್ಯ ಜಗಾದ ವಚನಂ ಶಿವಾ ॥೮೭॥

ಮತ್ತು ಈಶ್ವರನು ಅಲಂಕಾರಕ್ಕೋಸ್ಕರ ಧರಿಸುವ ಈ ಉಂಗುರವನ್ನೂ ದೇವಿಗೆ ತೋರಿಸು. ಈ ಉಂಗುರವನ್ನು ನೋಡುವುದರಿಂದ ದೇವಿಯ ಆನಂದವು ಮೊದಲಿಗಿಂತಲೂ ಹೆಚ್ಚು ವೃದ್ಧಿಯನ್ನು ಹೊಂದುವುದು. ॥೮೩॥

ಹಿಮವಂತರಾಜನು ನಂದಿಕೇಶ್ವರನ ಈ ಮಾತನ್ನು ಕೇಳಿ ಉಂಗುರವನ್ನು ತೆಗದುಕೊಂಡು ದೇವಿಯಾದ ಗಿರಿಜೆಯ ಬಳಿಗೆ ಹೋದನು. ಮತ್ತು ನಂದೀಶ್ವರನು ಬಂದ ವೃತ್ತಾಂತವನ್ನು ತ್ವರಿತವಾಗಿ ಅವಳಿಗೆ ತಿಳಿಸಿ ಉಂಗುರವನ್ನು ದೇವಿಗೆ ಅರ್ಪಿಸಿದನು. ॥೮೪॥

ದೇವಿಯಾದ ಭವಾನಿಯು ಪ್ರಿಯತಮನು ಕಳುಹಿಸಿದ ಆ ಉಂಗುರವನ್ನು ನೋಡಿ ಸಂತೋಷಭರಿತಳಾಗಿ ಕಣ್ಣಿಗೆ ಒತ್ತಿಕೊಂಡು ಭಕ್ತಿಪೂರ್ವಕವಾಗಿ ತಲೆಯಲ್ಲಿ ಧರಿಸಿದಳು. ॥೮೫॥

ಅದನ್ನು ನೋಡಿದ ಮಾತ್ರದಿಂದಲೇ ದೇವಿಯು ಆನಂದಬಾಷ್ಪಗಳನ್ನು ಸುರಿಸಿದಳು. ಬಳಿಕ ಮನಸ್ಸನ್ನು ಸ್ಥಿರಪಡಿಸಿ ಶಿವನನ್ನು ಸ್ವಲ್ಪ ಹೊತ್ತುಧ್ಯಾನಿಸಿದಳು. ॥೮೬॥

ಹೀಗೆ ಅವಳು ಧ್ಯಾನಾಸಕ್ತಳಾಗಲು ಹಾಗೆಯೇ ದೀರ್ಘಕಾಲವು ಕಳೆದು ಹೋಯಿತು. ಬಳಿಕ ಧ್ಯಾನದಿಂದ ವಿಮುಖಳಾಗಿ (ಎಚ್ಚೆತ್ತವಳಾಗಿ) ಮುಂದೆ ಹೇಳುವಂತೆ ಹೇಳಿದಳು. ॥೮೭॥

ಕುಶಲೀ ಖಲು ವಿಶ್ವಾತ್ಮಾ ಮಹಾಮೃತ್ಯುಂಜಯಸ್ಯ ತತ್ ।
ಕುಶಲಂ ಸರ್ವಥಾ ಜ್ಞಾತಂ ತತ್ರಾಕುಶಲಧೀಃ ಕುತಃ ॥೮೮॥

ಸ ಮಹಾಕಾಲಕಾಲೋಽತಃ ಕಾಲಶಂಕಾ ನ ಜಾಯತೇ ।
ಕಾಲಾಗ್ನಿರುದ್ರೋ ಭಗವಾನ್ ಪತಿರ್ಮಮ ಮಹಾಪ್ರಭುಃ ॥೮೯॥

ಅಪಮೃತ್ಯುವಿನಾಶಸ್ಸ್ಯಾನ್ಮಹಾಮೃತ್ಯುವಿನಾಶನಂ ।
ಯಸ್ಯ ಸ್ಮರಣಮಾತ್ರೇಣ ಸ ಪತಿರ್ಮಮ ಶಂಕರಃ ॥೯೦॥

ಯತ್ಪಾದಪದ್ಮಸ್ಮರಣಾನ್ಮಹಾಮೃತ್ಯುರ್ವಿನಶ್ಯತಿ ।
ಸ ಏವ ಮಮ ಭಾಗ್ಯೇನ ಭರ್ತಾ ಸೌಭಾಗ್ಯದಾಯಕಃ ॥೯೧॥

ಯಾ ಸರ್ವಮಂಗಳಾ ನಾಮ್ನಾ ಸಾ ತಾವದಹಮೇವ ಹಿ ।
ತನ್ನಾಮ ತಾವದೇವ ಸ್ಯಾತ್ತತ್ಪಾಣಿಗ್ರಹಣಾದಭೂತ್ ॥೯೨॥

ಜಗನ್ನಾಥನಾದ ಶಿವನು ಕುಶಲಿಯಾಗಿರುವನೇ! ಅಥವಾ ಮೃತ್ಯುವನ್ನೇ ಜಯಿಸಿದ ಅವನು ಎಲ್ಲಾ ರೀತಿಯಿಂದಲೂ ಕುಶಲಿಯಾಗಿರುವನೆಂದೇ ಭಾವಿಸುತ್ತೇನೆ. ಅವನು ದುಃಖಿಯೆಂಬ ಬುದ್ಧಿಯು ನಮಗೆ ಹೇಗೆ ತಾನೇ ಉತ್ಪನ್ನವಾದೀತು! ॥೮೮॥

ಜಗದೊಡೆಯನೂ, ಪ್ರಲಯಕಾಲದ ಅಗ್ನಿಯಂತೆ ರೌದ್ರವಾದ ಆಕಾರವುಳ್ಳವನೂ ಆದ ನನ್ನ ವಲ್ಲಭನು ಭಯಂಕರನಾದ ಅಂತಕನನ್ನೂ ಸಹ ಸಂಹರಿಸುವವನಾಗಿರುವನು. ಹೀಗಿರುವಲ್ಲಿ ಅವನಿಗೆ ಮೃತ್ಯುವಿನ ಭಯವೆಲ್ಲಿಂದ! ॥೮೯॥

ಯಾವ ದೇವನನ್ನು ಸ್ಮರಿಸಿದ ಮಾತ್ರದಿಂದಲೇ, ಅಕಾಲಮರಣವೂ, ಕಾಲಪಾಶವೂ ನಾಶವನ್ನೈದುವುವೋ, ಅಂತಹ ಶಿವನೇ ನನ್ನ ಪ್ರಿಯತಮನಾಗಿರುವನು. ॥೯೦॥

ಯಾರ ಅಡಿದಾವರೆಗಳ ಸ್ಮರಣೆಯಿಂದ, ಮಹಾಮೃತ್ಯುವಿನ ಭಯವು ಇರುವುದಿಲ್ಲವೋ, ಆ ದೇವನೇ ಸುಕೃತಮಹಿಮೆಯಿಂದ ನನ್ನ ರಕ್ಷಕನಾಗಿದ್ದು, ನಿತ್ಯ ಸೌಮಂಗಲ್ಯವನ್ನು ದಯಪಾಲಿಸುತ್ತಿರುವನು. ॥೯೧॥

ಯಾವಳು, ಸಕಲ ಸುಮಂಗಲಿಯರಿಗೂ, ನಿತ್ಯ ಸೌಮಂಗಲ್ಯವನ್ನುಂಟುಮಾಡುವುದರಿಂದ, "ಸರ್ವಮಂಗಳ" ಎಂಬ ಅನ್ವರ್ಥಸಂಜ್ಞೆಯನ್ನು ಹೊಂದಿ

ಪೂಜಯಂತಿ ಮಹಾದೇವಂ ಸುರಾಃ ಸೌಭಾಗ್ಯದಾಯಕಂ ।
ಸ ಸೌಭಾಗ್ಯಪ್ರದೋ ಭರ್ತಾ ಮಮ ಮೃತ್ಯುವಿವರ್ಜಿತಃ ॥೯೩॥

ಭಕ್ತ್ಯಾ ಶಂಕರಪೂಜನೋದ್ಯತಮತಿರ್ಭಾಗ್ಯೋದಯಾಜ್ಜಾಯತೇ
ಸೌಭಾಗ್ಯಂ ಮಮ ಸರ್ವದಾಪಿ ಸ ಕುತಃ ಸೌಭಾಗ್ಯದಾನೋನ್ಮುಖಾ ।
ಸೌಭಾಗ್ಯಪ್ರದಪಾದಪದ್ಮನಿಯಮಧ್ಯಾನೇನ ಮೇ ಸರ್ವದಾ
ಸೌಭಾಗ್ಯಂ ಕುಶಲಂ ಸುಖಾನ್ಯನುದಿನಂ ಸೌಭಾಗ್ಯವೃದ್ಧಿಶ್ಚ ಮೇ ॥೯೪॥

ಇತಿ ಶ್ರೀಶಿವರಹಸ್ಯೇ ಮಹೇತಿಹಾಸೇ ಹರಾಖ್ಯೇ ತೃತೀಯಾಂಶೇ ಹಿಮಾಚಲಂಪ್ರತಿ ನಂದೀಶ್ವರಾಗಮನಂ, ದೇವ್ಯೈ ಮಹಾಂಗುಲೀಯಕ ಪ್ರದಾನಂ, ದೇವ್ಯಾ ಆನಂದವರ್ಣನಂ ನಾಮ ತೃತೀಯೋಽಧ್ಯಾಯಃ

ದಳೋ ಅವಳು ನಾನೇ ಅಲ್ಲವೇ. ಆ ನಾಮಧೇಯವಾದರೋ, ನನಗೆ ಮೃತ್ಯುಂಜಯನ ಪಾಣಿಗ್ರಹಣದಿಂದಲೇ ಉಂಟಾಗಿರುತ್ತದೆ. ॥೯೨॥

ಶಾಶ್ವತವಾದ ಆಯುಸ್ಸನ್ನು ದಯಪಾಲಿಸುವ ಆ ಶಂಕರನನ್ನು ದೇವತೆಗಳು ಆರಾಧಿಸುವರು. ಅವರೆಲ್ಲರಿಗೂ ಸೌಭಾಗ್ಯವನ್ನುಂಟುಮಾಡುವ ಆ ಶಿವನು ನನ್ನ ಪತಿಯಾಗಿರುವನು. ಅವನಿಗೆ ಮೃತ್ಯುಭಯವೆಲ್ಲಿಂದ ಬಂತು? ॥೯೩॥

ಭಕ್ತಿಪುರಃಸರವಾಗಿ ಶಿವನನ್ನು ಆರಾಧಿಸಬೇಕೆಂಬ ಬುದ್ಧಿಯು ಪೂರ್ವಜನ್ಮದ ಸುಕೃತವಿಶೇಷದಿಂದಲೇ ಉಂಟಾಗುವುದು. ಹೀಗಿರುತ್ತಿರಲು ಪ್ರಿಯತಮನಾದ ಆ ಶಂಕರನನ್ನು ನಿರಂತರವೂ ಆರಾಧಿಸುವ ನಾನು ನಿತ್ಯಸುಮಂಗಲಿಯಲ್ಲವೇ! ಇದಲ್ಲದೇ, ನಾನೇ ಇತರರಿಗೆ ಸೌಭಾಗ್ಯವನ್ನು ಕೊಡುವವಳಾಗಿರುವೆನು. ಸೌಭಾಗ್ಯವನ್ನು ದಯಪಾಲಿಸುವ ಆ ಶಂಕರನ ಅಡಿದಾವರೆಗಳನ್ನು ನಿಯಮಪೂರ್ವಕವಾಗಿ ಧ್ಯಾನಿಸುವುದರಿಂದ ನನ್ನ ಸುಖಸೌಭಾಗ್ಯಗಳು ಪ್ರತಿದಿನವೂ ವೃದ್ಧಿಯನ್ನು ಹೊಂದುತ್ತ ಇರಲಿ. ॥೯೪॥

ಇಲ್ಲಿಗೆ ಶ್ರೀಶಿವರಹಸ್ಯದ ಮಹೇತಿಹಾಸದಲ್ಲಿ "ಹರ" ಎಂಬ ಸಂಜ್ಞೆಯುಳ್ಳ ಮೂರನೆಯ ಅಂಶದಲ್ಲಿ ಹಿಮಾಚಲವನ್ನು ಕುರಿತು ನಂದಿಕೇಶ್ವರನ ಸಮಾಗಮ, ಅವನು ದೇವಿಗೆ ಈಶ್ವರನ ಉಂಗುರವನ್ನು ಸಮರ್ಪಿಸಿದುದು, ಮತ್ತು ಇದರಿಂದ ದೇವಿಗೆ ಉಂಟಾದ ಆನಂದ ಈ ವಿಷಯಗಳನ್ನೊಳಗೊಂಡ ಮೂರನೆಯ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಚತುರ್ಥೋಽಧ್ಯಾಯಃ

॥ ವ್ಯಾಸ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಪ್ರಹೃಷ್ಟಃ ಶೈಲಪುಂಗವಃ ।
ಚಕಾರ ಭಾರ್ಯಯಾ ಸಾಕಂ ವಿಚಾರಮತಿಸಾದರಂ ॥೧॥

ನಂದಿಕೇಶೋ ಗಣಾಧೀಶಃ ಪ್ರಮಥೇಷ್ವಧಿಕಃ ಪರಃ ।
ತೇನ ಸತ್ವರಮಾಗಮ್ಯ ಶಿವವಾರ್ತಾ ಕೃತಾ ಖಲು ॥೨॥

ಅತಃ ಪರಂ ಸ ನ ಸ್ಥಾತಾ ತ್ರಿಣೇತ್ರಪ್ರೇಷಿತೋಽಸ್ತ್ಯತಃ ।
ನ ತೇನ ಸಹ ವಕ್ತವ್ಯಂ ಗಮನಪ್ರತಿಬಂಧಕಂ ॥೩॥

ನಾಲ್ಕನೆಯ ಅಧ್ಯಾಯ

ಪಾರ್ವತಿಯು ನುಡಿದ ಆ ಮಾತನ್ನು ಕೇಳಿ, ಪರ್ವತರಾಜನು ಸಂತೋಷಗೊಂಡವನಾಗಿ ಪ್ರಿಯತಮೆಯಾದ ಮೇನಕೆಯೊಂದಿಗೆ ಹೀಗೆ ಯೋಚಿಸ ತೊಡಗಿದನು. ॥೧॥

“ ಎಲೌ ಪ್ರಿಯತಮೆಯೇ, ಪ್ರಮಥಗಣಗಳಲ್ಲಿ ಅಗ್ರಗಣ್ಯನೂ, ನಾಯಕನೂ, ಆದ ನಂದಿಕೇಶ್ವರನು ತ್ವರೆಯಿಂದ ಇಲ್ಲಿಗೆ ಸಮಾಗಮಿಸಿ ನಮಗೆ ಶಿವವೃತ್ತಾಂತವನ್ನು ತಿಳಿಸಿದನಷ್ಟೆ! ॥೨॥

ಅವನು ಸ್ವಾಮಿಯಾದ ಶಿವನ ಅನುಜ್ಞೆಯ ಮೇರೆಗೆ ಇಲ್ಲಿಗೆ ಬಂದಿರುವವನಾಗಿರುವನು. ಆದುದರಿಂದ ಇನ್ನು ಅವನು ಇಲ್ಲಿರಲಾರನು. ನಾವು ಅವನ

ಅಂಬಿಕಾಯಾಃ ಪ್ರೇಷಣಾರ್ಥಂ ಪ್ರಯತ್ನಃ ಕ್ರಿಯತಾಂ ತ್ವಯಾ ।
ಬಹುಕಾಲಂ ಕಿಮತ್ರಾಂಬಾ ಸತೀ ಸಂಸ್ಥಾತುಮಿಚ್ಛತಿ ॥೪॥

ಪತಿವ್ರತಾ ಪತಿಂ ತ್ಯಕ್ತ್ವಾ ನಾನ್ಯತ್ರ ಸ್ಥಾತುಮಿಚ್ಛತಿ ।
ಪತಿಸೇವಾ ಪರೋ ಧರ್ಮಃ ಸರ್ವಸಂಪತ್ಪ್ರವೃದ್ಧಿದಃ ॥೫॥

ಪರಿಚರ್ಯಾ ಪರಂ ಭರ್ತು ಸ್ತದನುಗ್ರಹಕಾರಣಂ ।
ತೇನೇಷ್ಟಸಿದ್ಧಿರ್ಯಾ ಸಾ ತು ನ ಧರ್ಮಾಂತರತಃ ಪ್ರಿಯೇ ॥೬॥

ಪ್ರೀತಿಪೂರ್ವಕಮದ್ಯಾಂಬಾ ಪ್ರೇಷಣೀಯಾ ಕಿಲಾನ್ಯಥಾ ।
ಕೋಪೋಽಪಿ ಪ್ರಮಥೇಶಸ್ಯ ಕಥಂ ವಾ ನ ಭವಿಷ್ಯತಿ ॥೭॥

ಹಾರಾಸ್ತಾರತರಾಕ್ಷೌರಾಣ್ಯಸಾರಾಭರಣಾನ್ಯಪಿ ।
ರತ್ನನದ್ಧಾನಿ ದೇಯಾನಿ ಕೇಯೂರಾದೀನಿ ಕೋಟಿಶಃ ॥೮॥

ಗಮನಕ್ಕೆ ಆತಂಕವನ್ನುಂಟು ಮಾಡುವ ಯಾವ ಮಾತನ್ನೂ ಅವನೊಂದಿಗೆ ಆಡಬಾರದು. ॥೩॥

ನೀನು, ಅಂಬಿಕೆಯನ್ನು ಅವನೊಂದಿಗೆ ಕಳುಹಿಸಲು ಪ್ರಯತ್ನಿಸು. ಏಕೆಂದರೆ ಪತಿವ್ರತೆಯಾದ ಅವಳು ಇನ್ನೂ ಬಹಳ ಕಾಲದ ವರೆಗೆ ಇಲ್ಲಿರಲು ಇಚ್ಛಿಸುವಳೇ! ॥೪॥

ಪತಿವ್ರತೆಯಾದ ಸ್ತ್ರೀಯು ಪತಿಯನ್ನಗಲಿ ಬೇರೆಯ ಕಡೆಯಲ್ಲಿ ಇರಲು ಎಂದೂ ಇಚ್ಛಿಸುವುದಿಲ್ಲ. ಅವಳಿಗೆ ಪತಿಶುಶ್ರೂಷೆಯೇ ಶ್ರೇಯಃಸಾಧನವಾದ ಧರ್ಮ. ಅಲ್ಲದೆ ಅದು ಸಕಲಸೌಭಾಗ್ಯಗಳನ್ನು ವೃದ್ಧಿಪಡಿಸುವುದಾಗಿರುತ್ತದೆ. ॥೫॥

ಎಲೌ ಪ್ರೇಯಸಿಯೇ, ಪತಿಸೇವೆಯು ಪತಿಯ ಅನುಗ್ರಹಕ್ಕೆ ಕಾರಣವಾಗುತ್ತದೆ. ಅದರಿಂದುಂಟಾಗುವ ಇಷ್ಟಾರ್ಥಸಿದ್ಧಿಯು ಇತರ ಯಾವ ಧರ್ಮಾನುಷ್ಠಾನದಿಂದಲೂ ಆಗಲಾರದು. ॥೬॥

ಆದುದರಿಂದ ಅಂಬಿಕೆಯನ್ನು ಪ್ರೀತಿಪೂರ್ವಕವಾಗಿ ಪತಿಗೃಹಕ್ಕೆ ಕಳುಹಿಸುವುದು ನಮ್ಮ ಕರ್ತವ್ಯ. ಅದಿಲ್ಲದಿದ್ದರೆ ನಾವು ಗಣನಾಥನಾದ ನಂದಿಯ ಕೋಪಕ್ಕೆ ಪಾತ್ರರಾಗುವುದಿಲ್ಲವೇ! ॥೭॥

ಪತಿಗೃಹವನ್ನು ಕುರಿತು ತೆರಳುವ ಮಗಳಿಗೆ ಮುತ್ತಿನ ಹಾರಗಳನ್ನೂ ಅಮೂಲ್ಯವಾದ ಪಟ್ಟೆಯ ವಸ್ತ್ರಗಳನ್ನೂ, ರತ್ನಖಚಿತವಾದ ಭುಜಕೀರ್ತಿಗಳನ್ನು

ಯಾನಿ ನೂತನರತ್ನಾನಿ ಸಾಗರೇಣ ಹೃತಾನ್ಯಪಿ ।
ತಾನಿ ಸರ್ವಾಣಿ ದೇಯಾನಿ ತದರ್ಥಾನ್ಯೇವ ತಾನ್ಯಪಿ ॥೯॥

ಯದರ್ಥಾನೀತಿ ನಿಶ್ಚಿತ್ಯ ತಾನ್ಯನಂತಾನಿ ಯತ್ನತಃ ।
ತಾನಿ ತಾವತ್ತದರ್ಥಾನಿ ತೇಷಾಂ ಕೃತ್ಯಂ ಚ ಕಿಂ ಮಮ ॥೧೦॥

ಅತ್ಯುತ್ತಮಾದಿಮಣಯಃ ಕಂಕಣಾನ್ಯುತ್ತಮಾನ್ಯಪಿ ।
ಶಿವಾಯೈ ತಾನಿ ದೇಯಾನಿ ರಮ್ಯಾಣ್ಯನ್ಯಾನ್ಯಪಿ ಪ್ರಿಯೇ ॥೧೧॥

ಪ್ರಿಯೇ ಸತ್ವರಮಾಹಾರೋ ಗೌರ್ಯೈ ರಸವಿಜೃಂಭಿತಃ ।
ಸಂಪಾದನೀಯೋ ಯತ್ನೇನ ಭಕ್ಷ್ಯಾದ್ಯೈರ್ವಿವಿಧೈರಪಿ ॥೧೨॥

ಖಾದ್ಯೈರ್ಲೇಹ್ಯೈಶ್ಚ ಪೇಯೈಶ್ಚ ಮಧುರಾಮ್ಲೈರ್ಮನೋಹರೈಃ ।
ತತ್ತದ್ದ್ರುಮಸಮುತ್ಪನ್ನೈಃ ಫಲೈರಪ್ಯಮಲೈಃ ಪ್ರಿಯೇ ॥೧೩॥

(ಭುಜದಲ್ಲಿ ಧರಿಸುವ ಆಭರಣ) ಇನ್ನಿತರ ಹೇರಳವಾದ ರತ್ನ ಖಚಿತವಾದ ಆಭರಣ ಗಳನ್ನು ಕೊಡುವವಳಾಗು. ||೮||

ಸಮುದ್ರದಿಂದ ತೆಗೆದುಕೊಂಡು ಬಂದ ಹೊಸದಾದ ಎಲ್ಲಾ ರತ್ನಗಳನ್ನೂ, ಅವಳಿಗೆ ಕೊಡತಕ್ಕದ್ದು. ಆ ರತ್ನಗಳೆಲ್ಲಾ ಆವಳಿಗೋಸ್ಕರವೇ ತಂದಿರತಕ್ಕವುಗಳು. ||೯||

ಯಾರಿಗೋಸ್ಕರವಾಗಿ ಆ ರತ್ನಾಭರಣಗಳು ಶೇಖರಿಸಲ್ಪಟ್ಟವೋ ಅವರಿಗೇ ಅವುಗಳನ್ನು ಕೊಡಬೇಕು. ಅವುಗಳಿಂದ ನನಗೆ ಯಾವ ಪ್ರಯೋಜನವಿರುವುದು ? ||೧೦||

ಎಲೌ ಪ್ರಿಯೆಯೇ, ನಮ್ಮ ಗೃಹದಲ್ಲಿ ಅಮೂಲ್ಯವಾದ ಮಣಿಗಳೂ ಮತ್ತು ಕಂಕಣಗಳೂ ಇರುವುವು. ಅವೆಲ್ಲವನ್ನೂ ಅಂಬಿಕೆಗೆ ಕೊಡುವವಳಾಗು. ಮತ್ತು ಇನ್ನಿತರ ಸುಂದರವಾದ ಸಕಲ ಆಭರಣಗಳನ್ನೂ ಕೊಡುವವಳಾಗು. ||೧೧||

ಪ್ರಿಯೇ, ಗಿರಿಜೆಗೋಸ್ಕರ ನಾನಾವಿಧವಾದ ಭಕ್ಷ್ಯಗಳೊಂದಿಗೆ ರುಚಿಕರವಾದ ಆಹಾರವನ್ನು ಜಾಗ್ರತೆಯಾಗಿ ಸಿದ್ಧಪಡಿಸು. ಮಧುರವಾದ ತಿಂಡಿಗಳನ್ನೂ, ಲೇಹ್ಯಗಳನ್ನೂ, ವಿಜಾತೀಯವಾದ ಪಾನೀಯಗಳನ್ನೂ, ಮಧುರಾಮ್ಲವಾದ (ಸಿಹಿಮಿಶ್ರಿತವಾದ ಹುಳಿ) ಹಣ್ಣುಗಳನ್ನೂ ಸಿದ್ಧಪಡಿಸುವವಳಾಗು ! ||೧೨-೧೩||

ಆಚ್ಛಾದಯಂತಿ ಛಾಯಾಭಿಃ ಸುಮೇರುಶಿಖರಾಣ್ಯಪಿ ।
ನಮೇರುತರವಸ್ತೇಽಪಿ ಪ್ರೇಕ್ಷಣೀಯಾಃ ಸಹಾಂಬಯಾ ॥೧೪॥

ಪ್ರಸೂನಮಾಲಾಜಾಲಾನಿ ತ್ವೈರ್ಮೇರುಶಿಖರಾವಧಿ ।
ಕಲ್ಪನೀಯಾನ್ಯಪಾರಾಣಿ ಸಾಂದ್ರಾಣಿ ವಿಪುಲಾನ್ಯಪಿ ॥೧೫॥

ತನ್ಮರಂದೈಃ ಸನೀಹಾರೈಃ ಪುಷ್ಪಚ್ಛಾಯಾಸಮನ್ವಿತೈಃ ।
ಸಾಂದ್ರೈರ್ಹಿಮಕರಾಕಾರೈರ್ನ ಸೂರಕರಸಂಗಮಃ ॥೧೬॥

ತುಷಾರಕರಸಂಕಾಶೈರಾಕಾಶಾಶಾವಿಜೃಂಭಿತೈಃ ।
ಅಂಬಿಕಾಯಾನಮಾರ್ಗೋಽಪಿ ಪ್ರಚ್ಛನ್ನಃ ಪಟಮಂಟಪೈಃ ॥೧೭॥

ವಿಮಾನಾನ್ಯಪಿ ದಿವ್ಯಾನಿ ಕಾಮಗಾನಿ ಮನೋರಮೇ ।
ಸಂಪಾದನೀಯಾನ್ಯಧುನಾ ವಾಹನಾನ್ಯಪಿ ಕೋಟಿಶಃ ॥೧೮॥

ಇಗೋ ಇತ್ತನೋಡು, ಈ ನಮೇರುವೃಕ್ಷಗಳು ತಮ್ಮ ನೆರಳಿನಿಂದ ಮೇರು ವಿನ ಶಿಖರಗಳನ್ನೂ ವ್ಯಾಪಿಸಿರುವುವು. ಇಂತಹ ನಮೇರು ವೃಕ್ಷಗಳನ್ನೂ ಗಿರಿಜೆ ಯೊಂದಿಗೆ ಕಳುಹಿಸಿಕೊಡು. ॥೧೪॥

ನಮ್ಮ ಮನೆಯಿಂದ ಮೇರುಪರ್ವತದ ಶಿಖರದ ವರೆಗೂ ಇರುವ ಪ್ರದೇಶ ವನ್ನು ಹೂವಿನ ಮಾಲಿಕೆಗಳಿಂದ ನಿಬಿಡವಾಗಿಯೂ ಮತ್ತು ವಿಸ್ತಾರವಾಗಿಯೂ ಅಲಂಕರಿಸುವಂತೆ ಮಾಡುವವಳಾಗು. ॥೧೫॥

ದಾರಿಯುದ್ದಕ್ಕೂ ಹೂವಿನನೆರಳು ಮಕರಂದವನ್ನೂ ನೀರಿನ ತುಂತುರನ್ನೂ ಸುರಿಸುತ್ತಾ, ಚಂದ್ರಮಂಡಲದಂತೆ ಪ್ರಯಾಣಕಾಲದಲ್ಲಿ ದೇವಿಗೆ ತಂಪನ್ನುಂಟು ಮಾಡಲಿ. ಸೂರ್ಯರಶ್ಮಿಯೇ ಬೀಳದಂತೆ ಮಾರ್ಗದಲ್ಲಿ ಪುಷ್ಪಮಾಲೆಗಳು ಸಾಂದ್ರವಾ ಗಿರಲಿ. ॥೧೬॥

ಅಂಬಿಕೆಯು ವಾಹನವು ಹೋಗುವ ಮಾರ್ಗವನ್ನು, ಚಂದ್ರನ ಕಾಂತಿಯಂತೆ ಶುಭ್ರವಾಗಿರುವ ಮತ್ತು ಆಕಾಶದಲ್ಲಿ ಎಲ್ಲೆಡೆಯಲ್ಲಿಯೂ ವ್ಯಾಪಿಸುವಂತಹ, ವಸ್ತ್ರ ಮಂಟಪಗಳಿಂದ ಅಲಂಕರಿಸಬೇಕು. ॥೧೭॥

ಎಲೌ, ಸುಂದರಿಯೇ, ಸ್ವೇಚ್ಛೆಯಿಂದ, ಆಕಾಶದಲ್ಲಿ ಸಂಚರಿಸುವ ವಿಮಾನ ಗಳನ್ನೂ, ಮತ್ತು ಇನ್ನಿತರ, ಆನೆ, ಕುದುರೆ ಮುಂತಾದ ವಾಹನಗಳನ್ನೂ,

ಚಂದ್ರಮಂಡಲಸಂಕಾಶಶ್ಚಂದ್ರಮಂಡಲಮಂಡಿತಃ।
ಸಿಂಹೋಽಪಿ ವಾಹನಂ ದೇವ್ಯಾಃ ಗಿರಿಸ್ಪರ್ಧಾಂ ಕರೋತಿ ಸಃ ॥೧೯॥

ಔನ್ನತ್ಯಂ ವರ್ಧತೇ ತಸ್ಯ ಯಸ್ಯ ಯಾವದಪೇಕ್ಷಿತಂ।
ವಿಲಕ್ಷಣಂ ತದೌನ್ನತ್ಯಂ ಸೋಽಪಿ ರತ್ನಪರಿಚ್ಛದಃ ॥೨೦॥

ಅನ್ಯಾನ್ಯಪ್ಯುಪಯುಕ್ತಾನಿ ಭವಾನೀಗಮನಂ ಪ್ರತಿ।
ತಾನಿ ಸಂಪಾದನೀಯಾನಿ ಪ್ರಿಯೇ ಸತ್ವರಮದ್ಯ ಮೇ ॥೨೧॥

ಇತ್ಯುಕ್ತ್ವಾ ಗಿರಿಜಾಂ ದೃಷ್ಟ್ವಾ ದೂರಾದೇವ ಗಿರೀಶ್ವರಃ।
ಆನಂದಬಾಷ್ಪಸಂವೀತೋ ನಂದಿಕೇಶಮುಪಾಗತಃ ॥೨೨॥

ಈಗಲೇ ಸಿದ್ಧಪಡಿಸಬೇಕು. ಅವು ಕೂತಿರುವವರ ಇಷ್ಟವನ್ನನುಸರಿಸಿ, ಹೋಗುವುವುಗಳಾಗಿರಬೇಕು. ॥೧೮॥

ಚಂದ್ರಮಂಡಲದಂತೆ ಕಾಂತಿಮಯವಾಗಿ, ಚಂದ್ರನಿಂದ ಅಲಂಕೃತವಾದ ಸಿಂಹವನ್ನೂ ದೇವಿಗೆ ವಾಹನವನ್ನಾಗಿ ಏರ್ಪಡಿಸು. ಏಕೆಂದರೆ, ಸಿಂಹವು ಉನ್ನತಾವನತವಾದ (ಏರುತಗ್ಗುಗಳಿಂದ ಕೂಡಿರುವ) ಪ್ರದೇಶಗಳುಳ್ಳ ಪರ್ವತದ ಮಾರ್ಗದಲ್ಲಿ, ಅನಾಯಾಸವಾಗಿ ಸಂಚರಿಸಲು ಸಾಮರ್ಥ್ಯವುಳ್ಳುದಾಗಿದೆ. ಮತ್ತು ಪರ್ವತದ ಸಾಮ್ಯವನ್ನೇ ಪಡೆದಂತಿರುವುದು. ॥೧೯॥

ಆ ಸಿಂಹವಾದರೋ, ದೇವಿಯ ಅಪೇಕ್ಷೆಯಂತೆ ಎತ್ತರವನ್ನೂ ಪಡೆಯುವುದು. ದೇವಿಯ ಅಭಿಪ್ರಾಯದಂತೆ ಎತ್ತರದಲ್ಲಿ ವೈಲಕ್ಷಣ್ಯವನ್ನು ಪಡೆಯುವ ಮಹಿಮೆಯು ಆ ಸಿಂಹಕ್ಕಲ್ಲದೆ ಮತ್ತಾವುದಕ್ಕೂ ಬರಲಾರದು. ಅಂತಹ ರತ್ನಾಲಂಕೃತವಾದ ಸಿಂಹವನ್ನು ಸಿದ್ಧಗೊಳಿಸು. ॥೨೦॥

ಎಲೌ, ಪ್ರೇಯಸಿಯೇ, ಗಿರಿಜೆಯ ಪ್ರಯಾಣಕ್ಕೆ ಉಪಯುಕ್ತವಾದ ಇನ್ನಿತರ, ನನ್ನಲ್ಲಿರುವ ಸಕಲಸಾಧನಗಳನ್ನೂ ಜಾಗ್ರತೆಯಾಗಿ ಸಿದ್ಧಪಡಿಸಬೇಕು." ॥೨೧॥

ಹೀಗೆಂದು ಹೇಳಿ ಪರ್ವತರಾಜನು ಮಗಳಾದ ಗಿರಿಜೆಯನ್ನು ದೂರದಿಂದಲೇ ನೋಡಿ ಆನಂದಾಶ್ರುಗಳಿಂದ ಕೂಡಿದವನಾಗಿ, ನಂದಿಕೇಶ್ವರನ ಸಮೀಪವನ್ನು ಕುರಿತು ಹೋದನು. ॥೨೨॥

ಉಪಹಾರಾದಿಕಂ ಸರ್ವಂ ಭವಾನ್ಯಾ ಪ್ರೇಷಿತಂ ಮುದಾ ।
ಗೃಹೀತ್ವಾ ನಂದಿಕೇಶೋಽಪಿ ಭುಕ್ತ್ವಾ ಸುಖಮವಾಪ ಸಃ ॥೨೩॥

ತತ್ಪ್ರೇಷಿತಂ ಚಂದನಂ ಚ ಕಸ್ತೂರೀಕರ್ದಮಾನ್ವಿತಂ ।
ಸ್ವಾಂಗೇ ವಿಲೇಪಯಾಮಾಸ ಕೃತ್ವಾ ಶರ್ವಾರ್ಪಣಂ ಮುದಾ ॥೨೪॥

ವಸನಾನ್ಯಪಿ ದಿವ್ಯಾನಿ ದಿವ್ಯಾನ್ಯಾಭರಣಾನಿ ಚ ।
ಗೃಹೀತ್ವಾ ನಂದಿಕೇಶೋಽಥ ದಧಾರ ಪರಯಾ ಮುದಾ ॥೨೫॥

ಏತಸ್ಮಿನ್ನಂತರೇ ಕೇಚಿದ್ಗಣಾಸ್ತಸ್ಮಾದುಪಾಗತಾಃ ।
ವಿಲಂಬಃ ಕಿಮಭೂದೇವಮಿತಿ ಸತ್ವರಭಾಷಣಾಃ ॥೨೬॥

ತಾನಪ್ಯಭ್ಯಾಗತಾನ್ ದೃಷ್ಟ್ವಾ ಗಣಾನ್ ಗಿರಿವರಸ್ತತಃ ।
ತೇಷಾಂ ಚ ಸಾಂತ್ವನಂ ತಾವಚ್ಚಕಾರ ವಚನೈರ್ಮುಹುಃ ॥೨೭॥

ಭವಾನಿಯು ತನಗೋಸ್ಕರ ಕಳುಹಿಸಿದ ಆಹಾರವನ್ನೆಲ್ಲಾ ಸಂತೋಷದಿಂದ ಸ್ವೀಕರಿಸಿ ನಂದೀಶ್ವರನು ಆನಂದಭರಿತನಾದನು. ॥೨೩॥

ದೇವಿಯು ಕಳುಹಿಸಿದ ಕಸ್ತೂರಿಯಿಂದ ಮಿಶ್ರಿತವಾದ ಗಂಧವನ್ನು ಸಂತೋಷದಿಂದ ಈಶ್ವರನಿಗೆ ಅರ್ಪಿಸಿ, ಅನಂತರ ತನ್ನ ಅಂಗಗಳಲ್ಲಿ ಲೇಪಿಸಿಕೊಂಡನು. ॥೨೪॥

ಬಳಿಕ ನಂದಿಕೇಶ್ವರನು ಪಾರ್ವತಿಯು ಕಳುಹಿಸಿದ ಅಮೂಲ್ಯವಾದ ವಸ್ತ್ರಾಭರಣಗಳನ್ನು ಸ್ವೀಕರಿಸಿ ಅತ್ಯಂತ ಸಂತೋಷದಿಂದ ಧರಿಸಿದನು. ॥೨೫॥

ಅಷ್ಟರೊಳಗೆ ಅಲ್ಲಿಗೆ ಕೈಲಾಸದಿಂದ ಕೆಲವು ಪ್ರಮಥಗಣಗಳು ಬಂದು "ಇಷ್ಟೊಂದು ವಿಲಂಬವಾದುದೇಕೆ?" ಎಂದು ಆಕ್ಷೇಪಿಸುತ್ತಾ, ಆತುರಾತುರವಾಗಿ ನಂದಿಕೇಶ್ವರನ ಸಮೀಪಕ್ಕೆ ಬಂದರು. ॥೨೬॥

ಈರೀತಿಯಲ್ಲಿ ಕೋಪಗೊಂಡು ಬಂದಿರುವ ಆ ಗಣಗಳನ್ನು ನೋಡಿ, ಪರ್ವತರಾಜನು ನಾನಾವಿಧವಾದ ಹಿತೋಕ್ತಿಗಳಿಂದ ಸಮಾಧಾನಪಡಿಸಿದನು. ॥೨೭॥

ತಥಾ ಪೂಜಾಂ ಚಕಾರಾಸೌ ಭವಾನೀಸನ್ನಿಧಿಂ ಯಯೌ ।
ಅಂಬಾಂ ಭೋಜನಸಂತುಷ್ಟಾನುವಾಚ ವಚನಂ ಮುದಾ ॥೨೮॥

॥ ಗಿರಿರಾಜ ಉವಾಚ ॥

ಅಂಬಾನ್ಯೇಽಪಿ ಗಣಾಸ್ತಾವದಧುನಾ ಸಮುಪಾಗತಾಃ ।
ವಿಲಂಬಃ ಕಿಮಿತಿ ಪ್ರೀತ್ಯಾ ಶಂಕರಪ್ರೇಷಿತಾಶ್ಶಿವೇ ॥೨೯॥

ಇತ್ಯುದೀರ್ಯ ಗಿರೀಂದ್ರೋಽಪಿ ಸರ್ವಾಭರಣಭೂಷಿತಾಂ ।
ಗೌರೀಂ ದೃಷ್ಟ್ವಾ ಮೇನಕಾಂ ಚ ಪ್ರಾಹ ಮಂದಂ ವಿಚಕ್ಷಣಃ ॥೩೦॥

ಅಂಬಾದ್ಯ ಸುಮುಹೂರ್ತೋಽಸ್ತಿ ಮಧ್ಯಾಹ್ನೇ ಪುಷ್ಯಯೋಗತಃ ।
ಗುರುಯೋಗಾಚ್ಚ ಗಮನೇ ಶುಭಂ ವಾ ಮೇಽನುವರ್ತತೇ ॥೩೧॥

ಶಂಕರೇಚ್ಛಾನುಸಾರೇಣ ಗಂತವ್ಯಮಿತಿ ಮೇ ಮತಿಃ ।
ವಿಲಂಬಶ್ಚೇತ್ಪುನಃ ಶಂಭುರ್ನಪ್ರೇಷಯತಿ ಸತ್ವರಂ ॥೩೨॥

ಮತ್ತು ಅವರನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ಬಳಿಕ ಗಿರಿಜೆಯು ಇದ್ದೆಡೆಗೆ ಹೋದನು. ಅಲ್ಲಿ ಭೋಜನವನ್ನು ನೆರವೇರಿಸಿ, ಸಂತೋಷದಿಂದಿದ್ದ, ಅಂಬಿಕೆಯನ್ನು ಕುರಿತು ಇಂತೆಂದನು. ||೨೮||

" ಎಲೌ ದೇವಿಯೇ, ಈಗ ಇನ್ನೂ ಕೆಲವು ಶಿವಗಣಗಳು ಇಲ್ಲಿಗೆ ಬಂದಿರುತ್ತವೆ. ನಿನ್ನ ಪ್ರಯಾಣಕ್ಕೆ ಇಷ್ಟೊಂದು ವಿಲಂಬವೇಕೆ? ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಶಂಕರನು ಪ್ರೀತಿಯಿಂದ ಇಲ್ಲಿಗೆ ಅವರನ್ನು ಕಳುಹಿಸಿರುವನು." ||೨೯||

ಹೀಗೆಂದು ಹೇಳಿ ಪರ್ವತರಾಜನು ಸಕಲ ಆಭರಣಗಳಿಂದ ಅಲಂಕೃತಳಾದ ಗಿರಿಜೆಯನ್ನೂ, ಮತ್ತು ಮೇನಕೆಯನ್ನು ನೋಡಿ ಮತ್ತೆ ಇಂತೆಂದನು. ||೩೦||

" ಎಲೌ ಅಂಬಿಕೆಯೇ, ಈ ದಿವಸ ಪ್ರಯಾಣವನ್ನು ಬೆಳೆಸಲು ಒಳ್ಳೆಯ ಮುಹೂರ್ತವಿದೆ. ಈ ಮಧ್ಯಾಹ್ನದಲ್ಲಿ ಗುರುವು ಪುಷ್ಯನಕ್ಷತ್ರದಲ್ಲಿ ಸಂಚರಿಸುವುದರಿಂದ ಪ್ರಯಾಣವು ಸುಖಕರವಾಗುವುದು. ಇದು ನನಗೂ ಶ್ರೇಯಸ್ಕರವಾಗಿರುವುದು. ||೩೧||

ಶಿವನ ಇಷ್ಟಕ್ಕೆ ಅನುಸಾರವಾಗಿ ನೀನು ಅವನಿದ್ದಲ್ಲಿಗೆ ಈಗಲೇ ಹೋಗಬೇಕೆಂದು ನನ್ನ ಅಭಿಲಾಷೆಯಿರುವುದು. ತಡವಾದರೆ ಮತ್ತೊಮ್ಮೆ ಶಂಭುವು ನೀನಿದ್ದಲ್ಲಿಗೆ

ಶಿವೇಚ್ಛಾಮನುಸೃತ್ಯೈವ ಯಸ್ತು ಕಾರ್ಯಂ ಕರಿಷ್ಯತಿ ।
ತಸ್ಯ ಪ್ರತಿಕ್ಷಣಂ ಸೌಖ್ಯಮನ್ಯಥಾ ತತ್ಕಥಂ ಭವೇತ್ ॥೩೩॥

ಇತ್ಯುಕ್ತ್ವಾ ಸತ್ವರಂ ಶೈಲೋ ನಾನಾವಾದ್ಯಸಮನ್ವಿತಃ ।
ಮಂದಂ ಮಂದಂ ಗೃಹದ್ವಾರಾನ್ನಿರ್ಯಯಾ ವಂಬಿಕಾಯುತಃ ॥೩೪॥

ತತಃ ಪುರೋವಾಚಮಂಬಾಮಂಬಿಕೇ ವಾಹನಾನ್ಯಪಿ ।
ಬಹೂನಿ ಸಂತಿ ತೇ ಕುತ್ರ ಪ್ರೀತಿರ್ವದ ವಿಚಕ್ಷಣೇ ॥೩೫॥

ವಿಮಾನಾನಾಂ ಕಾಮಗಾನಾಮರ್ಬುದಂ ದ್ವಾರಿ ತಿಷ್ಠತಿ ।
ಕಂಠೀರವೋಽಪಿ ಗಿರಿಜೇ ಸೋತ್ಕಂಠಸ್ತಿಷ್ಠತಿ ಪ್ರಿಯಃ ॥೩೬॥

ಸೇವಕರನ್ನು ಕಳುಹಿಸಲಾರನು. ಮತ್ತು ಮತ್ತೊಂದು ವೇಳೆ ನಿನ್ನನ್ನು ಇಲ್ಲಿಗೆ ಕಳುಹಿಸಲು ಇಷ್ಟಪಡನು. ||೩೨||

ಯಾವನು ಶಂಕರನ ಇಚ್ಛೆಯನ್ನನುಸರಿಸಿ, ತನ್ನ ಕರ್ತವ್ಯವನ್ನು ಸಾಧಿಸುವನೋ ಅವನಿಗೆ ಪ್ರತಿಕ್ಷಣದಲ್ಲಿಯೂ ಸೌಖ್ಯವು ಲಭಿಸುವುದು. ಅದಿಲ್ಲದಿದ್ದರೆ ಅವನು ಹೇಗೆ ತಾನೇ ಸುಖಿಯಾದಾನು ?" ||೩೩||

ಹೀಗೆಂದು ಹೇಳಿ ಹಿಮವಂತನು ಜಾಗ್ರತೆಯಾಗಿ ವಿವಿಧವಾದ ವಾದ್ಯಗಳಿಂದೊಡಗೂಡಿದವನಾಗಿ, ದೇವಿಯಾದ ಗಿರಿಜೆಯೊಂದಿಗೆ ಮೆಲ್ಲಮೆಲ್ಲನೆ ಮನೆಯಿಂದ ಹೊರಟನು. ||೩೪||

ಬಳಿಕ ಪರ್ವತರಾಜನು ದೇವಿಯ ಮುಂದೆ ಬಂದು ಹೀಗೆಂದು ಹೇಳಿದನು. "ದೇವಿಯೇ, ನಿನಗೋಸ್ಕರ ಅನೇಕ ವಾಹನಗಳು ಇಲ್ಲಿ ಸಿದ್ಧವಾಗಿ ನಿಂತಿವೆ. ಇವುಗಳಲ್ಲಿ ನಿನಗೆ ಯಾವುವು ಪ್ರಿಯವಾಗಿರುವುವೋ ಅದನ್ನು ಹೇಳುವವಳಾಗು. ||೩೫||

ವತ್ಸೇ, ಸ್ವೇಚ್ಛಾಗಾಮಿಗಳಾದ, ಅಸಂಖ್ಯಾಕವಾದ ವಿಮಾನಗಳು ಮನೆಯ ಬಾಗಿಲಿನಲ್ಲಿರುವುವು. ನಿನಗೆ ಪ್ರಿಯವಾದ ಸಿಂಹವೂ ನಿನಗೆ ವಾಹನವಾಗಲು ಉತ್ಸಾಹಭರಿತವಾಗಿ ನಿಂತಿರುವುದು. ||೩೬||

ಏತಾಸಾಂ ನಿಷ್ಕಕಂಠೀನಾಂ ದಾಸೀನಾಮರ್ಬುದಾನಿ ತೇ ।
ತಿಷ್ಠಂತಿ ತಾನಿ ನೇಯಾನಿ ತ್ವತ್ಸೇವಾರ್ಥಮನುಕ್ಷಣಂ ॥೩೭॥

ಇತಿ ತದ್ವಚನಂ ಶ್ರುತ್ವಾ ವಿಮಾನಂ ವೀಕ್ಷ್ಯ ಸಾದರಂ ।
ಮೇನಯಾ ಸಹಸಾ ಗೌರೀ ಮಂದಂ ವಾಚಮುವಾಚ ಚ ॥೩೮॥

॥ ಪಾರ್ವತ್ಯುವಾಚ ॥

ಅಂಬ ತ್ವಯಾ ಮಯಾ ಸಾಕಮಾಮೇರುಶಿಖರಾವಧಿ ।
ಆಗಂತವ್ಯಂ ಗಿರೀಶೇನಾಪ್ಯಯೋಗಃ ಸಹ್ಯ ಏವ ನ ॥೩೯॥

ಇತ್ಯುಕ್ತ್ವಾ ತಾಂ ಸಮಾದಾಯ ಕರೇಣ ಗಿರಿಮಾದರಾತ್ ।
ಆರುರೋಹ ವರಾರೋಹವಿಮಾನಂ ಕಾಮಗಂ ತದಾ ॥೪೦॥

ದೇವದುಂದುಭಯೋ ನೇದುರ್ಜಗುರ್ಗಂಧರ್ವನಾಯಕಾಃ ।
ವವ್ರುರ್ವಾತಾಃ ಶೀತಲಾಶ್ಚ ಸುಗಂಧಪರಿವಿಷ್ಟಿತಾಃ ॥೪೧॥

ವಿವಿಧವಾದ ಆಭರಣಗಳಿಂದ (ಸುವರ್ಣದ ಕವಡೆಗಳಿಂದ) ಅಲಂಕೃತರಾದ, ಅನೇಕ ಸೇವಕಿಯರು ನಿನಗೋಸ್ಕರ ನಿಂತಿರುತ್ತಾರೆ. ಅವರನ್ನು ಸೇವೆಗೋಸ್ಕರ ಕರೆದುಕೊಂಡು ಹೋಗು.'' ॥೩೭॥

ಹೀಗೆಂದು ಹೇಳಿದ ತಂದೆಯ ಆ ಮಾತನ್ನು ಕೇಳಿ ಗಿರಿಜೆಯು ಆದರಭಾವನೆಯಿಂದ ವಿಮಾನದ ಕಡೆಗೆ ನೋಡಿ, ತಾಯಿಯಾದ ಮೇನಕೆಯನ್ನು ಕುರಿತು ನಿದಾನವಾಗಿ ಹೀಗೆಂದು ಹೇಳಿದಳು. ॥೩೮॥

" ಓ ಜನನಿಯೇ, ನೀನು ಮೇರುಪರ್ವತದ ಶಿಖರದವರೆಗೆ ನನ್ನೊಂದಿಗೆ ಬರುವವಳಾಗು. ನಾನು ತಂದೆಯಿಂದ ಉಂಟಾಗುವ ವಿರಹವನ್ನೂ ಸಹಿಸಲಸಮರ್ಥಳಾಗಿರುವೆನು. ಪತಿಯ ದರ್ಶನಪರ್ಯಂತವಾಗಿಯಾದರೂ ನೀವು ನನ್ನ ಜೊತೆಯಲ್ಲಿರಿ.'' ॥೩೯॥

ಹೀಗೆಂದು ಹೇಳಿ ಅಕ್ಕರೆಯಿಂದ ಹಿಮವಂತನ ಕೈಯ್ಯನ್ನು ಹಿಡಿದುಕೊಂಡು ತನ್ನ ಇಷ್ಟದಂತೆ ಹೋಗುವ ದಿವ್ಯವಿಮಾನವನ್ನು ಏರಿದಳು. ॥೪೦॥

ಆಗಲೇ ದೇವದುಂದುಭಿಗಳು ಮೊಳಗಿದುವು. ಗಂಧರ್ವರು ಗಾನಮಾಡಿದರು. ಸುಗಂಧಯುಕ್ತವಾದ ತಂಗಾಳಿಯು ಬೀಸಲಾರಂಭಿಸಿತು. ॥೪೧॥

ಪುಷ್ಪವೃಷ್ಟಿರಭೂದ್ಭೂಯೋ ಮಕರಂದರಸಾಕರಾಃ ।
ನನೃತುಶ್ಚಾಪ್ಸರಗಣಾಶ್ಚಾರುನಾಟ್ಯವಿಶಾರದಾಃ ॥೪೨॥

ರತ್ನಚ್ಛತ್ರಾರ್ಬುದಛಾಯಾ ಚಾರುಚಾಮರಕೋಟಿಭಿಃ ।
ಸಮಾಕ್ರಾಂತಾ ಬಭೌ ತಾವದ್ಯಾವನ್ನಿರ್ಯಾತಿ ಶಾಂಭವೀ ॥೪೩॥

ತದಾನೀಂ ಪುರತಸ್ತಸ್ಥೌ ಚಂದ್ರಮಂಡಲಮಂಡಿತಃ ।
ಪಂಚಾನನೋಽಪಿ ಮಾಮಂಬಾ ನ ಸಂಭಾವಯತೀತಿ ಕಿಂ ॥೪೪॥

ಸಿದ್ಧಯೋ ನಿಧಿಭಿಸ್ಸಾಕಮಂಬಿಕಾಗ್ರೇ ಮುದಾ ಸ್ಥಿತಾಃ ।
ಮಂದಾರತರುಭಿಃ ಸಾಕಂ ಪುಷ್ಪಮಾಲಾಸಮಾಕುಲೈಃ ॥೪೫॥

ತದಾನೀಮಾಗತಃ ಪ್ರೀತ್ಯಾ ಸತ್ವರಂ ರತ್ನಸಾಗರಃ ।
ರತ್ನಭಾರಗಣೋಪೇತಸ್ತತ್ಪ್ರಭಾವ್ಯಾಪ್ತಭೂಧರಃ ॥೪೬॥

ಮಕರಂದದ ಪ್ರವಾಹವನ್ನೇ ಹರಿಸುವ ಪುಷ್ಪವೃಷ್ಟಿಯುಂಟಾಯಿತು. ಮನೋಹರನಾಟ್ಯವನ್ನು ಅಭಿನಯಿಸುವ ಅಪ್ಸರಸ್ತ್ರೀಯರು ನರ್ತಿಸಲಾರಂಭಿಸಿದರು. ||೪೨||

ಭವಾನಿಯು ಹೊರಡುವ ಸಮಯದಲ್ಲಿ ಮನೋಹರವಾದ ಮತ್ತು ಅಸಂಖ್ಯಾಕವಾದ ಚಾಮರಗಳಿಂದೊಡಗೂಡಿದ ರತ್ನಖಚಿತವಾದ ಛತ್ರಿಗಳ ಕಾಂತಿಯು ಎಲ್ಲೆಡೆಯಲ್ಲಿಯೂ ಹೊಳೆಯಿತು. ||೪೩||

ಆಗ ಚಂದ್ರಮಂಡಲದಿಂದ ಅಲಂಕೃತವಾದ ಸಿಂಹವೂ ಸಹ, "ದೇವಿಯು ನನ್ನನ್ನು ಅನುಗ್ರಹಿಸುವಳೋ ಇಲ್ಲವೋ" ಎಂದು ಯೋಚಿಸುತ್ತಿರುವಂತೆ ಅವಳ ಮುಂಭಾಗದಲ್ಲಿ ಬಂದು ನಿಂತಿತು. ||೪೪||

ಸಿದ್ಧಸ್ತ್ರೀಯರು ರತ್ನ, ವಜ್ರ, ವೈಡೂರ್ಯ ಮೊದಲಾದ ನಿಧಿಗಳನ್ನು ಹೊತ್ತುಕೊಂಡು, ಪುಷ್ಪಮಾಲಿಕೆಗಳಿಂದ ಶೋಭಿಸುತ್ತಲಿರುವ ಮಂದಾರವೃಕ್ಷಗಳ ಸಮೀಪದಲ್ಲಿ, ದೇವಿಯ ಮುಂಭಾಗದಲ್ಲಿ ಸಂತೋಷದಿಂದ ನಿಂತಿದ್ದರು ||೪೫||

ಆಗ ಪ್ರಭಾಸಮುದಾಯದಿಂದ ಪರ್ವತವನ್ನು ಎಲ್ಲೆಡೆಯಲ್ಲಿಯೂ ಬೆಳಗಿಸುವ ರತ್ನರಾಶಿಗಳನ್ನು ಹೊತ್ತುಕೊಂಡು, ಸಮುದ್ರರಾಜನು ತ್ವರೆಯಿಂದ ಅಲ್ಲಿಗೆ ಬಂದವನಾದನು. ||೪೬||

ಉಪೇಂದ್ರಾದ್ಯಸುರಾಃ ಸರ್ವೇ ದೇವದುಂದುಭಿಜಧ್ವನಿಂ ।
ಶ್ರುತ್ವಾ ಸಂತುಷ್ಟಹೃದಯಾಃ ಕಿಂ ಮಂಗಳಮಿದಂ ತ್ವಿತಿ ॥೪೭॥

ಅದ್ಯ ಪ್ರಾಯೋ ಮಹಾದೇವನಿಲಯಂ ಪ್ರತಿ ಪಾರ್ವತೀ ।
ಗಂತುಮೇವೋದ್ಯತಾ ನೂನಂ ಶುಭಚಿಹ್ನಪ್ರಭಾವತಃ ॥೪೮॥

ಏವಂ ನ ಶುಭಚಿಹ್ನಾನಿ ಕದಾಪೀತ್ಯವಧಾರಿತಂ ।
ಗೌರೀವಿವಾಹಸಮಯೇ ಪರಂ ಜಾತಾನಿ ತಾನಿ ತು ॥೪೯॥

ಇತ್ಯುಕ್ತ್ವಾ ಬ್ರಹ್ಮವಿಷ್ಣ್ವಾದ್ಯಾ ದೇವಾಃ ಸರ್ವೇ ಸುಹೃದ್ಗಣೈಃ ।
ಸ್ವವಲ್ಲಭಾಭಿಃ ಸಹಿತಾಸ್ತದಾ ಸತ್ವರಮಾಗತಾಃ ॥೫೦॥

ತಪೋನಿಷ್ಠಾಶ್ಚ ಸಿದ್ಧಾಶ್ಚ ಸರ್ವೇ ಗಿರಿವರಾಶ್ರಯಾಃ ।
ಸ್ವಸ್ವಭಾರ್ಯಾದಿಸಂಯುಕ್ತಾಃ ಶಿವಾದರ್ಶನಕಾಂಕ್ಷಯಾ ॥೫೧॥

ವಿಷ್ಣುವೇ ಮೊದಲಾದ ದೇವತೆಗಳು ದೇವದುಂದುಭಿಗಳ ಧ್ವನಿಯನ್ನು ಕೇಳಿ "ಇದು ಯಾವ ಮಂಗಳಕಾರ್ಯವಾಗಿರುವುದು?" ಎಂದು ಅಚ್ಚರಿಗೊಳ್ಳುತ್ತಾ ಸಂತೋಷವನ್ನೈದಿದರು. ॥೪೭॥

ಬಳಿಕ ಅವರು ಹೀಗೆಂದು ತರ್ಕಿಸಿದರು. ಈಗ ಈ ಶುಭಚಿಹ್ನೆಯು ತೋರಿ ಬರುವುದರಿಂದ ಈ ದಿವಸ ಪ್ರಾಯಶಃ ಪಾರ್ವತಿಯು ಪತಿ ಗೃಹಕ್ಕೆ ಪ್ರಯಾಣ ಹೊರಟಿರುವಳು ಎಂದು ತೋರುವುದು. ॥೪೮॥

ಈ ರೀತಿಯಾದ ಶುಭಚಿಹ್ನೆಗಳು ಈ ಹಿಂದೆ ಎಂದೂ ಕಾಣಿಸಿರಲಿಲ್ಲ. ಆದರೆ ಪಾರ್ವತಿಯ ಪಾಣಿಗ್ರಹಣದ ವೇಳೆಯಲ್ಲಿ ಈ ರೀತಿಯಾದ ಶುಭಚಿಹ್ನೆಗಳನ್ನು ನಾವು ನೋಡಿದ್ದೆವು. ॥೪೯॥

ಹೀಗೆಂದು ಹೇಳಿ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ತಮ್ಮ ಇಷ್ಟ ಮಿತ್ರರೊಂದಿಗೂ ಮತ್ತು ಪ್ರಿಯತಮೆಯರೊಂದಿಗೂ ಕೂಡಿದವರಾಗಿ ಜಾಗ್ರತೆಯಾಗಿ ಅಲ್ಲಿಗೆ ಬಂದರು. ॥೫೦॥

ಹಿಮವತ್ಪರ್ವತದಲ್ಲಿ ವಾಸವಾಗಿದ್ದ ತಪಸ್ವಿಗಳೂ ಮತ್ತು ಸಿದ್ಧರೂ ತಮ್ಮ ತಮ್ಮ ಪ್ರೇಯಸಿಯರಿಂದೊಡಗೂಡಿ ಪಾರ್ವತಿಯನ್ನು ನೋಡಬೇಕೆಂಬ ಕುತೂಹಲದಿಂದ ಅಲ್ಲಿಗೆ ಬಂದರು. ॥೫೧॥

ತದಾ ಕಿಲಾತಿಸಂಮರ್ದಃ ಸಮುಭೂದ್ಯೋ ನ ಸರ್ವಥಾ ।
ಕದಾಚಿದ್ವಾ ನಾನುಭೂತಃ ಕೃತಾರ್ಥಾಸ್ತೇನ ಸರ್ವಥಾ ॥೫೨॥

ದೂರಾದ್ವಿಮಾನಶೃಂಗಾಣಿ ದೃಷ್ಟ್ವಾ ನಾರಾಯಣೋ ಮುದಾ ।
ಪ್ರಣತಃ ಕಮಲಾಯುಕ್ತಃ ಸ ಮುಹುಸ್ತದ್ವಿಲೋಕಯನ್ ॥೫೩॥

ಬ್ರಹ್ಮಾದಯೋಽಪಿ ಪ್ರಣತಾಃ ಪ್ರಣತಾಶ್ಚ ಪುನಃ ಪುನಃ ।
ದೃಷ್ಟ್ವಾ ವಿಮಾನಶೃಂಗಾಣಿ ಕೃತಾರ್ಥಾ ವಯಮಿತ್ಯಪಿ ॥೫೪॥

ತತಶ್ಚ ನಂದಿಕೇಶೋಽಪಿ ತತ್ಸಂಮರ್ದವಿಲೋಕನಾತ್ ।
ಗಣಾನಪಶ್ಯದ್ವಿವಿಧಾನ್ ರತ್ನವೇತ್ರೈಃ ಸಮನ್ವಿತಾನ್ ॥೫೫॥

ತತೋ ವೇತ್ರಾಣ್ಯುನ್ನತಾನಿ ದೃಷ್ಟ್ವಾ ಬ್ರಹ್ಮಾದಯಸ್ಸುರಾಃ ।
ವೇತ್ರಮೂಲಗತಂ ಭಾನುಂ ವಿಸ್ಮಯಾವಿಷ್ಟಮಾನಸಾಃ ॥೫೬॥

ಹಿಂದೆ ಎಂದೂ ಸಂಭವಿಸದೇ ಇರುವ ಸುರಸಂದಣಿಯು ಸೇರಿತು. ಆದರಿಂದ ಸರ್ವರೂ ತಮ್ಮನ್ನು ಕೃತಕೃತ್ಯರೆಂದು ಭಾವಿಸಿದರು. ॥೫೨॥

ಶ್ರೀಮನ್ನಾರಾಯಣನು ವಿಮಾನದ ಶಿಖರಗಳನ್ನು ದೂರದಿಂದ ನೋಡಿ, ಪುನಃ ಪುನಃ ಅದನ್ನೇ ದಿಟ್ಟಿಸಿ ನೋಡುತ್ತಾ, ಲಕ್ಷ್ಮೀಸಮೇತನಾಗಿ ತಾನು ಅಂಬಿಕೆಯನ್ನು ನಮಸ್ಕರಿಸಿದನು. ॥೫೩॥

ಬ್ರಹ್ಮನೇ ಮೊದಲಾದ ದೇವತೆಗಳು ವಿಮಾನದ ಅಗ್ರಭಾಗಗಳನ್ನು ನೋಡಿ, ಮತ್ತೆ ಮತ್ತೆ ನಮಸ್ಕರಿಸುತ್ತಾ, "ತಾವು ಕೃತಕೃತ್ಯರಾದೆವೆಂದು" ತಿಳಿದರು. ॥೫೪॥

ಬಳಿಕ ನಂದಿಕೇಶ್ವರನೂ ಸಹ ಆ ಸಂದಣಿಯನ್ನು ನೋಡಿ ಅಲ್ಲಿರುವ ರತ್ನ ಖಚಿತವಾದ ದಂಡಗಳನ್ನು ಧರಿಸಿದ ಪ್ರಮಥಗಣಗಳನ್ನು ನೋಡಿದನು. ॥೫೫॥

ಒಡನೆಯೇ ಬ್ರಹ್ಮಾದಿದೇವತೆಗಳು ಸೂರ್ಯಮಂಡಲವನ್ನು ಮುಟ್ಟುವಂತಿರುವ ದಂಡಗಳನ್ನೂ, ಅವುಗಳನ್ನು ಧರಿಸಿರುವ ಪ್ರಮಥಗಣಗಳನ್ನೂ ನೋಡಿ ಆಚ್ಚರಿಗೊಂಡವರಾದರು. ॥೫೬॥

ಅತ್ಯಂತ ಉನ್ನತವಾದ ಈ ದಂಡಗಳು ವೇಗದಿಂದ ಕೆಳಕ್ಕೆ ಬಿದ್ದುವೇ ಆದರೆ, ಅವುಗಳಿಂದುಂಟಾಗುವ ಅಪಘಾತವು ಸಹಿಸಲಸಾಧ್ಯವಾಗುವುದು! ಹೀಗೆಂದು ಅವರು ಚಿಂತಿಸಿದರು. ॥೫೭॥

ಅತ್ಯುನ್ನತಾನಿ ವೇತ್ರಾಣಿ ವೇಗೇನ ಪತಿತಾನಿ ಚೇತ್ ।
ತದಾಘಾತಸ್ತ್ವಸಹ್ಯಃ ಸ್ಯಾದಿತಿಚಿಂತಾಸಮಾಕುಲಾಃ ॥೫೭॥

ವೇತ್ರಾಘಾತಭಯಾದದ್ಯ ಯದಿ ಯಾಮೋ ದಿಗಂತರಂ ।
ತದಾ ಕಥಂ ವಾ ದ್ರಷ್ಟವ್ಯಂ ಭವಾನೀಚರಣಾಂಬುಜಂ ॥೫೮॥

ಅಸ್ತು ವೇತ್ರವರಾಘಾತಸ್ತಾವತಾಪಿ ನ ನಃ ಕ್ಷತಿಃ ।
ಭವಾನೀಚರಣಾಂಭೋಜದರ್ಶನಂ ದುರ್ಲಭಂ ಖಲು ॥೫೯॥

ವೇತ್ರಘಾತೇನ ಮೂರ್ಛಾಯಾಮಂತತೋ ಮರಣೇಽಪಿ ವಾ ।
ಗೌರೀಚರಣವಾತೇನ ಕಿಂ ನ ವೃತ್ತೇನ ಜೀವನಂ ॥೬೦॥

ಯೋ ಗೌರೀಚರಣಾಂಭೋಜಗಂಧವಾಹಃ ಸ ಜೀವನಂ ।
ತೇನ ಸಂಜೀವನಾಪೇಕ್ಷಾ ಜೀವನಾನ್ಯೋಽಪಜಾಯತೇ ॥೬೧॥

ದಂಡಗಳಿಂದ ಎಲ್ಲಿ ಅಪಘಾತವಾಗುವುದೋ ಎಂಬ ಹೆದರಿಕೆಯಿಂದ ಈಗ ನಾವು ಬೇರೆಯ ದಿಕ್ಕನ್ನು ಕುರಿತು ಓಡಿದರೆ, ನಮಗೆ ಭವಾನಿಯ ಅಡಿದಾವರೆಗಳ ದರ್ಶನವು ಹೇಗೆತಾನೇ ಲಭಿಸೀತು ? ॥೫೮॥

ದಂಡಗಳಿಂದ ಅಪಘಾತವುಂಟಾದರೂ ನಮಗೆ ನಷ್ಟವಿಲ್ಲ. ಏಕೆಂದರೆ, ಭಯದಿಂದ ಬೇರೆಯಕಡೆಗೆ ಓಡಿಹೋದರೆ ನಮಗೆ ಗಿರಿಜೆಯ ಪಾದಕಮಲಗಳ ದರ್ಶನವು ಲಭಿಸುವುದಿಲ್ಲ. ॥೫೯॥

ದಂಡಗಳಿಂದುಂಟಾಗುವ ಅಪಘಾತದಿಂದ ಮೂರ್ಛೆಯೇ ಸಂಭವಿಸಲಿ, ಅಥವಾ ಮರಣವೇ ಒದಗಲಿ. ಆದರೂ ಗಿರಿಜೆಯ ಪಾದಗಳ ಮೇಲಿನಿಂದ ಬೀಸಿ ಬರುವ ಗಾಳಿಯು ನಮ್ಮನ್ನು ಸ್ಪರ್ಶಿಸಿದರೆ ನಾವು ಮತ್ತೆ ಜೀವಿಸಲಾರೆವೆ ? ॥೬೦॥

ಗೌರಿಯ ಪಾದಕಮಲದ ಮೇಲಿನ ವಾಯುವೇ ನಿಜವಾದ ಪ್ರಾಣವಾಯು. ಅಂತಹ ವಾಯುಸ್ಪರ್ಶದಿಂದ ಒದಗುವ ಜೀವನವೇ ಸಂಜೀವನ. ಉಳಿದ ಜೀವನಗಳಿಂದ ಎಂದೂ ಫಲವಿರಲಾರದು. ॥೬೧॥

ಗೌರೀಪದಾಬ್ಜಗಂಧೇನ ಗಂಧವಾಹಸ್ಸಮನ್ವಿತಃ ।
ಗಂಧವಾಹತ್ವಮಾಪನ್ನಸ್ಸತಾವದತಿದುರ್ಲಭಃ ॥೬೨॥

ಪ್ರಾಪ್ತಾನಿ ಜನ್ಮಾನಿ ಬಹೂನಿ ಪೂರ್ವಂ
ನ ತಾನಿ ಧನ್ಯಾನಿ ಕದಾಚಿದೇವ ।
ನ ಜಾತಮೇವೇತಿ ವಿಚಾರಯಾಮೋ
ವಿಮಾನಶೃಂಗಂ ನ ಕದಾಪಿ ದೃಷ್ಟಂ ॥೬೩॥

ವಿಮಾನರತ್ನಾಶ್ರಿತಶೈಲಕನ್ಯಾ
ಪದಾಬ್ಜಗಂಧಾನ್ವಿತಗಂಧವಾಹಃ ।
ಪುಣ್ಯೈರನಂತೈರಪಿ ದುರ್ಲಭೋಽಯಂ
ಪ್ರಾಪ್ಯೋಽಧುನಾ ವೇತ್ರವರಾಭಿಘಾತೈಃ ॥೬೪॥

ಪಶ್ಯಂತಿ ಸರ್ವೇ ಋಷಯೋಽಪಿ ಸಿದ್ಧಾಃ
ತ್ಯಕ್ತ್ವಾ ಸಮಾಧಿಂ ಫಲಮೇತದೇವ ।
ಅಂಬಾವಿಮಾನಾಗ್ರವಿಲೋಕನಂ ವಾ
ಕಿಂ ವೈವ ತತ್ತತ್ತಪಸೋಽಧುನೇತಿ ॥೬೫॥

ಗಿರಿಜೆಯ ಪಾದಕಮಲಗಳ ಗಂಧದಿಂದ ಯುಕ್ತವಾಗಿಯೇ ವಾಯುವು "ಗಂಧವಾಹ" ಎಂಬ ಅನ್ವರ್ಥಸಂಜ್ಞೆಯನ್ನು ಪಡೆದಿರುವುದು. ಅಂತಹ ಗಂಧವಾಹ ನಾಮಕವಾಯುವು ಲೋಕದಲ್ಲಿ ದುರ್ಲಭ. ॥೬೨॥

ನಾವು ಹಿಂದೆ ಅನೇಕಜನ್ಮಗಳನ್ನು ಪಡೆದಿದ್ದೆವು. ಆದರೆ ಅವುಗಳು ಸಫಲತೆಯನ್ನು ಹೊಂದಲಿಲ್ಲ. ಯಾವ ಜನ್ಮದಲ್ಲಿಯೂ ಹೀಗೆ ದೇವಿಯು ಕುಳಿತಿರುವ ವಿಮಾನದ ಶಿಖರವನ್ನು ನೋಡಲಿಲ್ಲ. ॥೬೩॥

ಅನೇಕ ಪುಣ್ಯಕರ್ಮಗಳ ಅನುಷ್ಠಾನದಿಂದಲೂ ಪಡೆಯಲಸಾಧ್ಯವಾದ, ವಿಮಾನಾರೂಢಳಾದ ದೇವಿಯ ಪಾದಕಮಲಗಳ ವಾಯುವು, ಈಗ ದಂಡಗಳ ಆಪಘಾತಗಳ ದೆಸೆಯಿಂದಲಾದರೂ ಲಭಿಸಲಿ. ನಾವು ಧನ್ಯರಾಗೋಣ. ಎಂದು ಅಲ್ಲಿಯೇ ನಿಂತರು. ॥೬೪॥

ಸಿದ್ಧರೂ ಮತ್ತು ಋಷಿಗಳೂ ಸಮಾಧಿಯನ್ನು ತೊರೆದು ದೇವಿಯ ವಿಮಾನವನ್ನು ದರ್ಶನಮಾಡಿದರು. ಅನಂತರ ದೇವಿಯ ವಿಮಾನದ ಶಿಖರವನ್ನು

ಫಲಂ ಯದೇವೋಗ್ರತಪಃಪ್ರಭಾವಾತ್
ಪ್ರಾಪ್ತವ್ಯಮಸ್ಮಾಭಿರಿಹಾಧುನಾ ತು ।
ವಿಮಾನಶೃಂಗಾಗ್ರವಿಲೋಕನೇನ
ಜಾತಪ್ರಭಾವಃ ಶ್ರುತಿಷು ಶ್ರುತೋಽಪಿ ॥೬೬॥

ಅಸ್ಮಾಕಮಿಷ್ಟಂ ಫಲಮದ್ಯ ಜಾತಂ
ಶಿವಃ ಪ್ರಸನ್ನೋಽಪಿ ಭವಿಷ್ಯತೀತಿ ।
ಚಿಹ್ನಾನಿ ದೃಷ್ಟಾನಿ ಬಹೂನಿ ತೇಷಾಂ
ಫಲಂ ವಿಮಾನಾಗ್ರವಿಲೋಕನಂ ನಃ ॥೬೭॥

ಯತ್ಪಾದಪದ್ಮಪ್ರಭಯಾ ವಿಮಾನಂ
ತತ್ಪದ್ಮರಾಗಾನ್ವಿತವದ್ವಿಭಾತಿ ।
ತದ್ದರ್ಶನಂ ನೈವ ವಿಲೋಕಿತಂ ಚ
ಶಿವಾಪದಾಂಭೋಜಮಿತಿ ಸ್ಮರಾಮಃ ॥೬೮॥

ನೋಡುವುದೇ ನಮ್ಮ ತಪಸ್ಸುಗಳಿಗೆ ಫಲವಲ್ಲವೇ ಎಂದು ಸಂತೋಷಪಟ್ಟರು. ||೬೫||

ಕಠಿನವಾದ ತಪೋನುಷ್ಠಾನದಿಂದ ಯಾವ ಫಲವು ದೊರಕುವುದೆಂದು ವೇದದಲ್ಲಿ ಉಕ್ತವಾಗಿದೆಯೋ, ಅದೇ ಸುಕೃತವು ಈಗ ದೇವಿಯು ಕುಳಿತಿರುವ ವಿಮಾನದ ಅಗ್ರಭಾಗವನ್ನು ನೋಡುವುದರಿಂದಲೇ ನಮಗೆ ದೊರಕಿರುವುದು. ಆದುದರಿಂದ ವೇದೋಕ್ತವಾದ ಪುಣ್ಯರಾಶಿಯು ನಮಗೆ ಲಭಿಸಿದಂತಾಯಿತು.||೬೬||

ಈ ದಿವಸ ನಮಗೆ ಅಭೀಷ್ಟವಾದ ಫಲವು ಲಭಿಸಿತು. ನಮ್ಮ ತಪಸ್ಸಿನಿಂದ ಶಿವನು ಮೆಚ್ಚುವನೆಂಬ ಅನೇಕ ಗುರುತುಗಳೂ ತೋರಿಬರುತ್ತಿವೆ. ವಿಮಾನದ ಅಗ್ರವನ್ನು ನೋಡುವ ಫಲವೂ ಆ ಚಿಹ್ನೆಗಳಲ್ಲಿ ಒಂದಾಗಿರುತ್ತದೆ. ||೬೭||

ದೇವಿಯ ಅಡಿದಾವರೆಗಳ ಕಾಂತಿಯು ಎಲ್ಲೆಡೆಯಲ್ಲಿಯೂ ಪ್ರಸರಿಸಿರುವುದ ರಿಂದ, ವಿಮಾನವೂ ಸಹ ಪದ್ಮರಾಗಮಣಿಗಳ ಕೆಂಪಾದ ಕಾಂತಿಯಿಂದ ಕೂಡಿರು ವಂತೆ ಶೋಭಿಸುತ್ತಿದೆ. ಭವಾನಿಯ ಅಡಿದಾವರೆಗಳನ್ನು ನಾವು ನೋಡದಿದ್ದರೂ, ವಿಮಾನದ ದರ್ಶನದಿಂದಲೇ ದೇವಿಯ ಪಾದವನ್ನು ನೋಡಿದವರಂತೆಯೇ ಆಗಿದ್ದೇವೆ. ||೬೮||

ತತ್ಪಾದಪದ್ಮಪ್ರಭಯಾ ಸಮೇತಾಃ
ವಯಂ ಕ್ಷಣಾರ್ಧೇನ ಮುದಾ ಭವಾಮಃ ।
ತತಶ್ಚಲತ್ಯೇವ ನ ತದ್ವಿಮಾನಂ
ಸರ್ವಾತ್ಮನಾ ಸರ್ವಫಲಾಶ್ರಯಂ ಚ ॥೬೯॥

ತದೂರ್ಧ್ವದೇಶೇಷು ಯದಿ ಪ್ರಯಾತಿ
ತದಾ ತು ತದ್ದರ್ಶನಮೇವ ನಾತ್ರ ।
ಆಯಾತಿ ಚೇದತ್ರ ಸುಮೇರುಮೂಲಂ
ತದಾ ವಯಂ ಧನ್ಯತಮಾಃ ಸುರೇಷು ॥೭೦॥

ಯದ್ಯಸ್ಮಾಕಮನಂತಜನ್ಮತಪಸಾ ಪ್ರೀತೋ ಭವಾನೀಪತಿಃ ।
ಭಾಗ್ಯಂ ಚೇದನುಕೂಲಮದ್ಯ ಬಹುಧಾ ಗೌರೀಪದಾಂಭೋರುಹಂ
ದ್ರಕ್ಷ್ಯಾಮಃ ಸಕಲೇಷ್ಟದಾನನಿಪುಣಂ ಪುಣ್ಯಾಕರಂ ಪುಣ್ಯದಂ ।
ನೋ ಚೇದ್ದುರ್ಲಭಮೇವ ಜನ್ಮ ಸುಕೃತಪ್ರಾಪ್ಯಂ ಜಗನ್ಮಂಡಲೇ ॥೭೧॥

ದೇವಿಯ ಪಾದಕಮಲಗಳ ಕಾಂತಿಯಿಂದ ಕೂಡಿರುವ ನಾವು ಕ್ಷಣಾರ್ಧದಲ್ಲಿಯೇ ಸಂತೋಷಗೊಳ್ಳುವೆವು. ಅಲ್ಲಿಯವರೆಗೂ ಸಕಲ ತಪಸ್ಸುಗಳ ಫಲವನ್ನು ಕೊಡುವ ಆ ವಿಮಾನವು ಮುಂದಕ್ಕೆ ಚಲಿಸದೇ ನಮಗೋಸ್ಕರ ಅಲ್ಲಿಯೇ ನಿಲ್ಲುವುದು. ॥೬೯॥

ಆ ವಿಮಾನವು ಬಹಳ ಮೇಲುಗಡೆಯಲ್ಲಿ ಸಂಚರಿಸಿದರೆ, ಆಗ ನಮಗೆ ದೇವಿಯ ದರ್ಶನವು ಲಭಿಸಲಾರದು. ಅದು ಮೇರುಪರ್ವತದ ಕೆಳಗಡೆಗೆ ಬಂದರೆ ದೇವತೆಗಳ ಜನ್ಮವನ್ನು ತಾಳಿದ ನಾವು ಕೃತಕೃತ್ಯರಾಗುವೆವು. ॥೭೦॥

ಅನೇಕ ಜನ್ಮಗಳಲ್ಲಿ ನಾವು ಆಚರಿಸಿದ ತಪಸ್ಸಿನಿಂದ ಶಿವನು ಸುಪ್ರೀತನಾದುದೇ ಆದರೆ, ಮತ್ತು ದೈವಾನುಕೂಲವು ಒದಗಿದುದೇ ಆದರೆ, ನಾವು ಪ್ರಾಯಶಃ ಸಕಲ ಅಭೀಷ್ಟಗಳನ್ನು ದಯಪಾಲಿಸುವ, ಪುಣ್ಯಕರವಾದ ಗೌರಿಯ ಪಾದಕಮಲಗಳನ್ನು ನೋಡುವೆವು. ಅದಿಲ್ಲದಿದ್ದರೆ ಈ ಜಗತ್ತಿನಲ್ಲಿ ಜನ್ಮಾಂತರಗಳಲ್ಲಿ ಆಚರಿಸಿದ ಪುಣ್ಯಕರ್ಮಗಳ ಫಲವೇ ದುರ್ಲಭವಾಗುವುದು. ॥೭೧॥

ಇತಿ ಶ್ರೀಶಿವರಹಸ್ಯೇ ಮಹೇತಿಹಾಸೇ ಹರಾಖ್ಯೇ ತೃತೀಯಾಂಶೇ ಕೈಲಾಸಂಪ್ರತಿ ಪಾರ್ವತೀಪ್ರಯಾಣವರ್ಣನೇ ಸಮಸ್ತದೇವಗಣ ವಿಮಾನದರ್ಶನಂ ನಾಮ ಚತುರ್ಥೋಽಧ್ಯಾಯಃ

ಇಲ್ಲಿಗೆ ಶ್ರೀಶಿವರಹಸ್ಯದ ಮಹೇತಿಹಾಸದಲ್ಲಿ "ಹರ" ಎಂಬ ಸಂಜ್ಞೆಯುಳ್ಳ ಮೂರನೆಯ ಅಂಶದಲ್ಲಿ ಕೈಲಾಸವನ್ನು ಕುರಿತು ಪಾರ್ವತಿಯ ಪ್ರಯಾಣದ ವರ್ಣನೆಯಲ್ಲಿ ದೇವತೆಗಳ ವಿಮಾನದರ್ಶನವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಪಂಚಮೋಽಧ್ಯಾಯಃ

॥ ವ್ಯಾಸ ಉವಾಚ ॥

ತತಃ ಪರಂ ಸುರಾಸ್ಸರ್ವೇ ತದ್ವಿಮಾನಾವಲೋಕನಾತ್ ।
ಉತ್ಪಶ್ಯಂತೋಽಪಿ ಸಂತ್ರಸ್ತಾಸ್ತದಾಘಾತಭಯಾದಪಿ ॥೧॥

ತದ್ವೇತ್ರಛಾಯಯಾ ತ್ರಸ್ತೋ ನಿರ್ಗತೋಽನ್ಯತ್ರ ಭಾನುಮಾನ್ ।
ಅದೃಶ್ಯ ಏವ ಸಂಜಾತಶ್ಚಂದ್ರವಾರ್ತಾಪಿ ತತ್ರ ನ ॥೨॥

ತತಃ ಪರಂ ಪ್ರಚಲಿತಂ ಘಂಟಾಘೋಷವಿಜೃಂಭಿತಂ ।
ಪತಾಕಾರ್ಬುದಸಂವೀತಂ ಚಾಮರಾರ್ಬುದಸಂಯುತಂ ॥೩॥

ಐದನೆಯ ಅಧ್ಯಾಯ

ಬಳಿಕ ಸಮಸ್ತ ದೇವತೆಗಳೂ ದೇವಿಯು ಕುಳಿತಿರುವ ವಿಮಾನವನ್ನು ನೆಟ್ಟ ದೃಷ್ಟಿಯಿಂದ ನೋಡಲಾರಂಭಿಸಿದರು. ಆದರೂ ಪ್ರಮಥಗಣಗಳ ವೇತ್ರಾಘಾತವು ಎಲ್ಲಿ ಬೀಳುವುದೋ ಎಂಬ ಭಯದಿಂದ ನಡುಗಿದರು. ॥೧॥

ಪ್ರಮಥಗಣಗಳು ಹಿಡಿದಿರುವ ದಂಡಗಳ ನೆರಳಿನಿಂದ ಭಯಭ್ರಾಂತನಾದ ಸೂರ್ಯನು, ತನ್ನ ಸ್ಥಳವನ್ನು ತೊರೆದು ಬೇರೆಯ ಕಡೆಗೆ ಜರುಗಿದನು. ಚಂದ್ರನ ಸುಳಿವಂತೂ ಕಾಣುವಂತೆಯೇ ಇರಲಿಲ್ಲ. ॥೨॥

ಬಳಿಕ ವಿಮಾನವು ಮುಂದಕ್ಕೆ ಸಾಗಿತು. ಅದು ಘಂಟೆಗಳ ಧ್ವನಿಯಿಂದಲೂ ಲೆಕ್ಕಿಸಲು ಅಶಕ್ಯವಾದ ಪತಾಕೆಗಳಿಂದಲೂ, ಚಾಮರಗಳಿಂದಲೂ ಶೋಭಿಸುತ್ತಿದ್ದಿತು. ॥೩॥

ಚಂದ್ರಕೋಟಿಗಣೋಪೇತಂ ಗ್ರಹಮಾಲಾವಿರಾಜಿತಂ ।
ಪ್ರತಿಕ್ಷಣಂ ನವಮುಭೂತ್ತದ್ವಿಮಾನಂ ಮುನೀಶ್ವರಾಃ ॥೪॥

ಶಕ್ತಂ ದಿಗಂತಂ ತದ್ಗಂತುಂ ಕ್ಷಣೇನೈವ ನ ಸಂಶಯಃ ।
ತಥಾಪಿ ಮಂದಮೇವೇದಂ ಚರತಿ ಪ್ರೀತಿಪೂರ್ವಕಂ ॥೫॥

ಪುಷ್ಪವೃಷ್ಟಿರಭೂನ್ಮಧ್ಯೇ ಪ್ರತಿಕ್ಷಣಮನುತ್ತಮಾ ।
ಮಂದಮಂದಾರಪವನೈಃ ಪರಿವೀತಾ ಪ್ರತಿಕ್ಷಣಂ ॥೬॥

ಮಂದಾರತರವೋಽಪ್ಯುಚ್ಚಾಸ್ತೇನ ಪ್ರಚಲಿತಾಸ್ತದಾ ।
ಸ್ವಚ್ಛಾಯಯಾ ಸಮಾಕ್ರಾಂತಂ ಕುರ್ವಂತಃ ಸಾದರಂ ಮುಹುಃ ॥೭॥

ತಾರಾಹಾರಗಣಚ್ಛನ್ನಪುಷ್ಪಹಾರಸಮನ್ವಿತಂ ।
ವಿಮಾನಂ ದೂರತೋ ದೃಷ್ಟ್ವಾ ನನೃತುರ್ದೇವತಾಗಣಾಃ ॥೮॥

ಎಲೈ ಮುನಿಪುಂಗವರೇ, ಆ ವಿಮಾನವು ಕೋಟಿಚಂದ್ರರ ಕಾಂತಿಯಿಂದ ಕೂಡಿದುದಾಗಿಯೂ, ಗ್ರಹಗಳ ಮಾಲೆಯಿಂದ ಕಂಗೊಳಿಸುವುದಾಗಿಯೂ ಇದ್ದು, ಪ್ರತಿಯೊಂದು ಕ್ಷಣದಲ್ಲಿಯೂ ಹೊಸಹೊಸದಾಗಿ ಕಾಣಿಸುವಂತಿತ್ತು. ॥೪॥

ಅದು ಕ್ಷಣಮಾತ್ರದಲ್ಲಿ ದಿಗಂತವನ್ನು ಕುರಿತು ಪ್ರಯಾಣಮಾಡಲು ಸಮರ್ಥವಾಗಿರುವುದು. ಇದರಲ್ಲಿ ಸಂಶಯವೇ ಇಲ್ಲ. ಆದರೂ ಪ್ರೇಕ್ಷಕರಲ್ಲಿರುವ ಪ್ರೀತಿಯನ್ನು ವ್ಯಕ್ತಪಡಿಸುವುದೋ ಎಂಬಂತೆ ಮೆಲ್ಲಮೆಲ್ಲನೆ ಸಂಚರಿಸುತ್ತಿದ್ದಿತು. ॥೫॥

ಮಂದಾರವೃಕ್ಷಗಳ ಮೇಲೆ ಬೀಸುತ್ತಿರುವ ಮಂದಮಾರುತದ ಹೊಡೆತದಿಂದ ಮಂದಾರಪುಷ್ಪಗಳು ನಿರಂತರವಾಗಿ ಮಳೆಗರೆದುವು. ॥೬॥

ಅತ್ಯುನ್ನತವಾದ ಮಂದಾರವೃಕ್ಷಗಳೂ ಕೂಡ ಆ ವಿಮಾನದ ವೇಗದಿಂದ ಅಲ್ಲಾಡುತ್ತಾ, ತಮ್ಮ ನೆರಳಿನಿಂದ ವಿಮಾನವನ್ನು ಆದರಪೂರ್ವಕವಾಗಿ ಸ್ವಾಗತಿಸುವುವೋ ಎಂಬಂತೆ ಕಾಣಿಸಿಕೊಂಡುವು. ॥೭॥

ನಕ್ಷತ್ರಗಳ ಸಮುದಾಯದಿಂದ ಆವರಿಸಲ್ಪಟ್ಟು ಹೂವಿನ ಮಾಲಿಕೆಗಳಿಂದ ಅಲಂಕೃತವಾದಂತಿರುವ ಆ ವಿಮಾನವನ್ನು ದೂರದಿಂದಲೇ ನೋಡಿ, ದೇವತೆಗಳು ಸಂತೋಷದಿಂದ ನಾಟ್ಯವನ್ನು ಅಭಿನಯಿಸಿದರು. ॥೮॥

ತತಃ ಪರಂ ಮಂದಮೇವ ಮೇನಕಾ ಪ್ರಾಹ ತಾಂ ಶಿವಾಂ ।
ತತ್ಸಂತೋಷಪ್ರವೃದ್ಧ್ಯರ್ಥಂ ಸುರಾನುಗ್ರಹಕಾಂಕ್ಷಯಾ ॥೯॥

ಶಿವೇ ಪಶ್ಯ ಸುರಾನ್ ದೂರೇ ಪ್ರಣತಾನ್ ಭಕ್ತಿಪೂರ್ವಕಂ ।
ಸುರನಾರೀಗಣಂ ಪಶ್ಯ ಪಶ್ಯ ಸಿದ್ಧಾಂಗನಾಶ್ಶಿವೇ ॥೧೦॥

ಪಶ್ಯ ಕಿಂನರನಾರೀಣಾಂ ಗಣಂ ಗಂಧರ್ವಯೋಷಿತಾಂ ।
ತ್ವತ್ಪಾದದರ್ಶನೋದ್ಯೋಗಾದದ್ಯ ತಾಭಿರ್ವಿನಿರ್ಗತಂ ॥೧೧॥

ಮುನಿಪತ್ನೀಗಣಾನ್ ಪಶ್ಯ ಸಿದ್ಧಪತ್ನೀಗಣಾನಪಿ ।
ನಗನಾರೀಗಣಾನ್ ಪಶ್ಯ ಪರಿತಃ ಪ್ರಣತಾನ್ ಶಿವೇ ॥೧೨॥

ಪಶ್ಯ ನಾರಾಯಣಂ ಗೌರಿ ಪ್ರಣಮಂತಂ ಮುಹುರ್ಮುಹುಃ ।
ತಸ್ಯೈವ ನಿಕಟೇ ಲಕ್ಷ್ಮೀಂ ಪ್ರಣತಾಮತಿಸಾದರಂ ॥೧೩॥

ಬಳಿಕ ಮೇನಕೆಯು ದೇವತೆಗಳನ್ನು ಅನುಗ್ರಹಿಸುವ ಇಚ್ಛೆಯಿಂದಲೂ ಪಾರ್ವತಿಯ ಮನಃಸಂತೋಷಪಡಿಸುವುದಕ್ಕೋಸ್ಕರವೂ, ದೇವಿಯೊಡನೆ ಮೆಲ್ಲನೆ ಹೀಗೆಂದು ಹೇಳಿದಳು. ॥೯॥

ಎಲೌ ಭವಾನಿಯೇ, ದೂರದಿಂದಲೇ ಭಕ್ತಿಯಿಂದ ನಮಸ್ಕರಿಸುವ ಆ ದೇವತೆಗಳನ್ನು ನೋಡು! ದೇವೀ, ಅಗೋ ಅಲ್ಲಿ ಆ ದೇವತಾಸ್ತ್ರೀಯರನ್ನೂ ಮತ್ತು ಸಿದ್ಧಸ್ತ್ರೀಯರನ್ನು ನೋಡುವವಳಾಗು. ॥೧೦॥

ಕಿನ್ನರಸ್ತ್ರೀಯರನ್ನೂ ಮತ್ತು ಗಂಧರ್ವರಮಣಿಯರನ್ನೂ ನೋಡು! ಅವರು ನಿನ್ನ ಪಾದಕಮಲಗಳನ್ನು ಸಂದರ್ಶಿಸುವ ಇಚ್ಛೆಯಿಂದ ಇಲ್ಲಿಗೆ ಬಂದವರಾಗಿದ್ದಾರೆ. ॥೧೧॥

ಭದ್ರೆ, ಮುನಿಪತ್ನಿಯರನ್ನೂ ಮತ್ತು ಸಿದ್ಧರ ಪತ್ನಿಯರನ್ನೂ ನೋಡುವವಳಾಗು! ಪರ್ವತನಿವಾಸಿಗಳಾದ ಸ್ತ್ರೀಯರ ಸಮುದಾಯವನ್ನು ನೋಡು. ಅವರು ಸುತ್ತಲೂ ನಿನ್ನನ್ನು ನಮಸ್ಕರಿಸುತ್ತಲಿರುವರು. ॥೧೨॥

ಎಲೌ ಗಿರಿಜೆಯೇ, ಬಾರಿಬಾರಿಗೂ ನಿನ್ನನ್ನು ನಮಸ್ಕರಿಸುತ್ತಲಿರುವ ಶ್ರೀಮನ್ನಾರಾಯಣನನ್ನೂ, ಮತ್ತು ಅವನ ಸಮೀಪದಲ್ಲಿಯೇ ನಿಂತುಕೊಂಡು ನಮಸ್ಕರಿಸುತ್ತಿರುವ ಲಕ್ಷ್ಮಿಯನ್ನೂ ನೋಡು. ॥೧೩॥

ಶೂಲಪಾಣಿಪ್ರಿಯೇ ಪಶ್ಯ ವಾಣೀಂ ತಾಂ ಪ್ರಣತಾಂ ಮುಹುಃ ।
ಚತುರ್ವಕ್ತ್ರಂ ಪ್ರಪಶ್ಯಾಂಬ ಶಚೀನಾಥಂ ತಯಾ ಯುತಂ ॥೧೪॥

ಗಣವೇತ್ರಗಣತ್ರಸ್ತಾನ್ ಪಶ್ಯಾನ್ಯಾನಮರಾನಪಿ ;
ಗೌರಿ ತ್ವಚ್ಚರಣಾಂಭೋಜಪ್ರಭಾಸಂಭಾವನಾದರಾತ್ ॥೧೫॥

ನಾಟ್ಯಂ ಕರೋತಿ ಕಮಲಾ ಪಶ್ಯ ತಾಂ ಕಮಲಾನನೇ ।
ಸ್ವಾಭೀಷ್ಟಸಿದ್ಧಿರಧುನಾ ಶಿವಾಸಂಪ್ರೇಕ್ಷಣಾದಿಭಿಃ ॥೧೬॥

ವಾಣಿಗುಣಗಣಾನಂಬ ತವ ಸ್ತೌತಿ ಪುನಃ ಪುನಃ ।
ಸ್ವವಾಣೀ ಪುಣ್ಯತಾಂ ಯಾತು ಶಿವಾಸಂಕೀರ್ತನಾದಿತಿ ॥೧೭॥

ಸುಮೇರುಮೂಲಗಮನೇ ತದಿಷ್ಟಾವಾಪ್ತಿರಿತ್ಯತಃ ।
ಮೇರುಮಾರ್ಗೇಣ ಗಂತವ್ಯಮದ್ಯ ಶಂಕರಮಂದಿರಂ ॥೧೮॥

ಎಲೌ ಶಿವಪ್ರಿಯೇ, ಅಗೋ ಅತ್ತನೋಡು, ಸರಸ್ವತಿ, ಬ್ರಹ್ಮ, ಇಂದ್ರ, ಶಚೀ ಇವರು ನಿನ್ನನ್ನು ನಮಸ್ಕರಿಸುತ್ತಲಿರುವರು. ॥೧೪॥

ಪ್ರಮಥಗಣಗಳು ಹಿಡಿದಿರುವ ದಂಡಗಳನ್ನು ನೋಡಿ ಭಯಭ್ರಾಂತರಾದ ಇನ್ನಿತರ ದೇವತೆಗಳನ್ನು ನೋಡು. ಅವರು ನಿನ್ನ ಅಡಿದಾವರೆಗಳ ಕಾಂತಿಯನ್ನು ಸ್ವಾಗತಿಸುವರೋ ಎಂಬಂತೆ ನಿನ್ನನ್ನು ನಮಸ್ಕರಿಸುತ್ತಲಿರುವರು. ॥೧೫॥

ಎಲೌ ಪದ್ಮಮುಖಿಯೇ, ಅಲ್ಲಿನೋಡು. ವಿಷ್ಣುಪತ್ನಿಯಾದ ಲಕ್ಷ್ಮಿಯು ಸರ್ವಮಂಗಳೆಯಾದ ನಿನ್ನ ಸಂದರ್ಶನದಿಂದ, ತನ್ನ ಇಷ್ಟಾರ್ಥವು ಫಲಿಸಿತೆಂದು ನಾಟ್ಯವನ್ನು ಅಭಿನಯಿಸುತ್ತಲಿರುವಳು. ॥೧೬॥

ದೇವಿ! "ನಿನ್ನ ನಾಮವನ್ನು ಉಚ್ಚರಿಸುವುದರಿಂದ ವಾಕ್ಯಶುದ್ಧಿಯು ಉಂಟಾಗಲಿ" ಎಂಬ ಇಚ್ಛೆಯಿಂದ ಸರಸ್ವತಿಯು ಮತ್ತೆ ಮತ್ತೆ ನಿನ್ನ ಗುಣಗಾನ ಮಾಡುತ್ತಿರುವಳು. ॥೧೭॥

ನೀನು ಮೇರುಪರ್ವತದ ಕೆಳಭಾಗದಲ್ಲಿ ಹೋದವಳಾದರೆ ಅವರ ಇಷ್ಟಾರ್ಥವು ಕೈಗೂಡುವುದು. ಆದುದರಿಂದ ಈ ದಿವಸ ಮೇರುಪರ್ವತದ ದಾರಿಯಿಂದಲೇ ಶಿವಾಲಯಕ್ಕೆ ತೆರಳಬೇಕು. ॥೧೮॥

ಕಾಮುಗಸ್ಯ ವಿಮಾನಸ್ಯ ವಿಚಿತ್ರಾ ಗತಿರಿತ್ಯತಃ ।
ನಾನ್ಯಮಾರ್ಗೇಣ ಗಂತವ್ಯಂ ದಯಾ ಯದಿ ಸುರೇಷ್ವಪಿ ॥೧೯॥

ಇತ್ಯುಕ್ತ್ವಾ ಗಿರಿಜಾಂ ದೃಷ್ಟ್ವಾ ಕ್ಷುತ್ತೃಷ್ಣಾದಿಕಶಂಕಯಾ ।
ವಿವಿಧಾನುಪಹಾರಾಂಶ್ಚ ಕಲ್ಪಯಾಮಾಸ ಮೇನಕಾ ॥೨೦॥

ಸುಧಾಂ ಪೀತ್ವಾ ಸುಧಾಸ್ಪಂದಿಕಲ್ಪಾಕಲ್ಪಫಲಾನ್ಯಪಿ ।
ವಿವಿಧಾನಿ ಸಮಾಸ್ವಾದ್ಯ ಸಂತುಷ್ಟಾ ಗಿರಿಕನ್ಯಕಾ ॥೨೧॥

ದಿವ್ಯೋಪಹಾರಸಂತುಷ್ಟಾ ತಾಂಬೂಲಲಲಿತಾನನಾ ।
ಉತ್ಫುಲ್ಲಪದ್ಮನಯನಾ ಸಾ ಗೌರೀ ರುರುಚೇ ದ್ವಿಜಾಃ ॥೨೨॥

ಸ್ವೇಚ್ಛೆಯಿಂದ ಸಂಚರಿಸಲು ಸಮರ್ಥವಾದ ಈ ವಿಮಾನದ ಗಮನವು ವಿಚಿತ್ರತರವಾದುದು. ಆದುದರಿಂದ ದೇವತೆಗಳಲ್ಲಿ ಪ್ರೀತಿಯಿರುವುದೇ ಆದರೆ ಬೇರೆಯ ಮಾರ್ಗದಿಂದ ಪ್ರಯಾಣವನ್ನು ಬೆಳೆಸುವುದು ಉಚಿತವಾಗಿರುವುದಿಲ್ಲ. ॥೧೯॥

ಹೀಗೆಂದು ಹೇಳಿ, ಮೇನಕೆಯು ಗಿರಿಜೆಯನ್ನು ನೋಡಿ, ಮಗಳು ಹಸಿವು ಬಾಯಾರಿಕೆಗಳಿಂದ ಬಳಲಿರಬಹುದೆಂದು ಯೋಚಿಸಿ, ಅವಳಿಗೋಸ್ಕರ ವಿಧವಿಧವಾದ ಉಪಹಾರಗಳನ್ನು ಸಿದ್ಧಪಡಿಸಿದಳು. ॥೨೦॥

ಗಿರಿಜೆಯು ಅಮೃತವನ್ನು ಪಾನಮಾಡಿ, ಅಮೃತದ ರುಚಿಯನ್ನೂ ಮೀರಿಸುವ, ಕಲ್ಪವೃಕ್ಷದ ರುಚಿಕರವಾದ ಹಣ್ಣುಗಳನ್ನೂ, ಮತ್ತು ಇನ್ನಿತರ ನಾನಾವಿಧವಾದ ಫಲಗಳನ್ನೂ ತಿಂದು ತೃಪ್ತಳಾದಳು. ॥೨೧॥

ಎಲೈ, ಮುನಿಗಳೇ! ಮನೋಹರವಾದ ಉಪಹಾರಗಳಿಂದ ತೃಪ್ತಿಯನ್ನು ಹೊಂದಿದ ಗಿರಿಜೆಯು, ತಾಂಬೂಲಚರ್ವಣದಿಂದ, ಸುಂದರವಾದ ಮುಖಕಾಂತಿಯುಳ್ಳವಳಾಗಿಯೂ, ಚೆನ್ನಾಗಿ ಅರಳಿರುವ ಕಮಲದಂತೆ ವಿಶಾಲವಾದ ನೇತ್ರಗಳುಳ್ಳವಳಾಗಿಯೂ ಶೋಭಿಸಿದಳು. ॥೨೨॥

ತತಃ ಪಾರಂ ಪ್ರಚಲಿತಂ ವಿಮಾನಂ ರತ್ನರಾಜಿತಂ ।
ಮೇರುಮೂಲಮುಮಾ ದೇವಾನ್ ಪ್ರೀಣಯಿತ್ವಿತಿ ಸತ್ವರಂ ॥೨೩॥

ತತಸ್ಸುರಗಣಾಃ ಸರ್ವೇ ಸಂತುಷ್ಟಾಃ ಪ್ರಣತಾಃ ಶಿವಾಃ ।
ತುಷ್ಟುವುರ್ವಿವಿಧೈಃ ಸ್ತೋತ್ರೈಃ ಕೃತಾರ್ಥಾಸ್ಸ್ಮ ಇತಿ ದ್ವಿಜಾಃ ॥೨೪॥

ಜಯ ಗೌರಿ ಜಗದ್ವಂದ್ಯೇ ಜಯ ಶಂಕರವಲ್ಲಭೇ ।
ಜಯ ಪದ್ಮಾನನೇ ದೇವಿ ಜಯ ಶ್ರೀಸರ್ವಮಂಗಲೇ ॥೨೫॥

ಜಯ ಸ್ಮರಹರಾರ್ಧಾಂಗತುಂಗಸಿಂಹಾಸನಾಶ್ರಯೇ ।
ಜಯ ಶ್ರೀಕಂಠವಿವಿಧಶೃಂಗಾರರಸಸಂಶ್ರಯೇ ॥೨೬॥

ಜಯ ಕರ್ಪೂರಕಸ್ತೂರೀಚಂದನಾಂಗವಿಲೇಪನೇ ।
ಜಯ ಮಂದಾರವಿಲಸನ್ಮಾಲಿಕಾಸಮಲಂಕೃತೇ ॥೨೭॥

ಬಳಿಕ, ರತ್ನಶೋಭಿತವಾದ ವಿಮಾನವು "ಗಿರಿಜೆಯು ದೇವತೆಗಳನ್ನು ಸಂತೋಷಪಡಿಸಲಿ" ಎಂಬ ಇಚ್ಛೆಯುಳ್ಳದ್ದೋ ಎಂಬಂತೆ, ಜಾಗ್ರತೆಯಾಗಿ, ಮೇರುಪರ್ವತದ ಕೆಳಭಾಗವನ್ನು ಕುರಿತು ಸಂಚರಿಸಿತು. ॥೨೩॥

ಎಲೈ ಮುನಿಗಳೇ! ತರುವಾಯ, ದೇವತೆಗಳೆಲ್ಲರೂ ಗೌರಿಯನ್ನು ನಮಸ್ಕರಿಸಿ, ತಾವು ಧನ್ಯರಾದೆವೆಂದು ತಿಳಿದು, ದೇವಿಯನ್ನು ವಿವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು. ॥೨೪॥

"ಓ, ಜಗದ್ವಂದ್ಯಳಾದ ಗಿರಿಜೆಯೇ, ನಿನಗೆ ಜಯವಾಗಲಿ, ಓ ಶಿವನ ಪ್ರಿಯೆಯೇ, ನಿನಗೆ ಜಯವಾಗಲಿ. ಪದ್ಮಮುಖಿ, ನೀನು ಸರ್ವೋತ್ಕರ್ಷೆಯಾಗಿರು. ಸರ್ವರಿಗೂ ಮಂಗಳವನ್ನುಂಟುಮಾಡುವವಳೇ, ನೀನು ಸುಮಂಗಲಿಯರಿಗೆ ಸನ್ಮಂಗಳಗಳನ್ನು ಅನುಗ್ರಹಿಸುವವಳಲ್ಲವೇ! ॥೨೫॥

ಮನ್ಮಥರಿಪುವಾದ ಪರಮೇಶ್ವರನ ಅರ್ಧಾಂಗಿಯಾಗಿದ್ದು ಅವನ ಉನ್ನತವಾದ ಸಿಂಹಾಸನವನ್ನು ಅಲಂಕರಿಸುವವಳೇ, ಮತ್ತು ಶಿವನಿಗೆ ಶೃಂಗಾರ ರಸದಲ್ಲಿ ರುಚಿಯನ್ನುಂಟುಮಾಡುವವಳೇ, ನಿನಗೆ ಮಂಗಳವಾಗಲಿ. ॥೨೬॥

ಕರ್ಪೂರ, ಕಸ್ತೂರೀ, ಚಂದನ ಮುಂತಾದ, ಸುಗಂಧದ್ರವ್ಯಗಳನ್ನು ಲೇಪಿಸಿಕೊಂಡಿರುವವಳೇ, ಮಂದಾರಪುಷ್ಪಗಳಿಂದ ಶೋಭಿಸುವ ಮಾಲಿಕೆಗಳಿಂದ ಭೂಷಿತಳಾದವಳೇ, ನಿನಗೆ ಜಯವಾಗಲಿ. ॥೨೭॥

ಜಯ ಹಾರವಿಹಾರಾಢ್ಯಕುಂಭಕುಂಭಾಂತರಸ್ಥಲೇ ।
ಜಯ ರತ್ನಗಣಾಕೀರ್ಣಕೋಟೀರವರಭಾಸುರೇ ॥೨೮॥

ಜಯಾನಂತಮಣಿಚ್ಛನ್ನಸುವರ್ಣಾಭರಣಾನ್ವಿತೇ ।
ಜಯ ಪೂರ್ಣಸುಧಾರಶ್ಮಿಸಮಾನವಸನೋಜ್ಜ್ವಲೇ ॥೨೯॥

ತಾರಹೀರವರಾಕ್ರಾಂತತಾಟಂಕಘಟಿತಾಲಕೇ ।
ಮಣಿದರ್ಪಣಸಂಕಾಶಕಪೋಲಲಲಿತೇ ಶಿವೇ ॥೩೦॥

ಜಯ ನೀಲಾಚಲಾಕಾರವೇಣೀಮಂಡಲಮಂಡಿತೇ ।
ಜಯ ಮತ್ತೇಭಕುಂಭಾಭಸುಧಾಪೂರ್ಣಕುಚಾಶ್ರಯೇ ॥೩೧॥

ಓ, ದೇವಿಯೇ, ನೀನು ಮುಕ್ತಾಹಾರದಿಂದ ಶೋಭಿಸುವ ವಕ್ಷಃಸ್ಥಳವುಳ್ಳವಳೂ, ರತ್ನಖಚಿತವಾದ ಕಿರೀಟದಿಂದ ಶೋಭಿಸುವವಳೂ ಆಗಿರುತ್ತೀಯೇ ನಿನಗೆ ಮಂಗಳವಾಗಲಿ. ||೨೮||

ಅನೇಕ ಮಣಿಗಳಿಂದ ಕೂಡಿಕೊಂಡಿರುವ ಸ್ವರ್ಣಾಭರಣಗಳನ್ನು ಧರಿಸಿರುವವಳೇ? ಮತ್ತು ಕಲೆಗಳಿಂದ ತುಂಬಿ ತುಳುಕುವ ಚಂದ್ರನ ಕಿರಣಗಳಂತೆ, ಪ್ರಕಾಶಮಾನವಾದ ವಸ್ತ್ರಗಳನ್ನು ಧರಿಸಿರುವವಳೇ, ನಿನಗೆ ಮಂಗಳವಾಗಲಿ. ||೨೯||

ದೇವಿ! ನೀನು, ನಕ್ಷತ್ರಗಳಂತೆ ಉಜ್ಜ್ವಲವಾದ ವಜ್ರಗಳಿಂದ ನಿರ್ಮಿತವಾದ ಕರ್ಣಾಭರಣಗಳಿಂದ ನಿನ್ನ ಮುಂಗುರುಳುಗಳನ್ನು ಅಲಂಕರಿಸಿಕೊಂಡಿರುವೆ. ಮತ್ತು ಮಣಿಮಯವಾದ ಕನ್ನಡಿಯಂತೆ ಸ್ವಚ್ಛವಾಗಿರುವ ಕಪೋಲಗಳಿಂದ ಶೋಭಿಸುತ್ತಲಿರುವೆ. ಇಂತಹ ನಿನಗೆ ಜಯವಾಗಲಿ. ||೩೦||

ನೀನು, ಅಂಜನಪರ್ವತದಂತೆ ಕಪ್ಪಾಗಿರುವ ಜಡೆಯಿಂದ ಭೂಷಿತಳಾಗಿರುವೆ. ನಿನ್ನ ಕುಚಗಳು, ಮದಿಸಿದ ಆನೆಯ ಕುಂಭಸ್ಥಳದಂತೆ, ಸುಂದರವಾಗಿಯೂ, ಅಮೃತಪೂರಿತಗಳಾಗಿಯೂ ರಂಜಿಸುತ್ತಿವೆ. ||೩೧||

ಉನ್ಮತ್ತಮೀನಸಂಕಾಶನಯನಶ್ರೀಸಮನ್ವಿತೇ ।
ಗಂಗಾವರ್ತಾತಿಗಂಭೀರನಾಭೀಕಾಂತಿವಿರಾಜಿತೇ ॥೩೨॥

ಜಯಾಣುಮಧ್ಯಲಲಿತೇ ರೋಮಾಲಿಭ್ರಮರಾವೃತೇ ।
ಉನ್ಮತ್ತಹಂಸಗಮನೇ ಜಯ ಚಂದ್ರಾಲಕೇ ಶಿವೇ ॥೩೩॥

ಜಯ ಮೌನಿಮನಃಪದ್ಮಸದ್ಮಾಶ್ರಿತಪದಾಂಬುಜೇ ।
ಜಯ ಭಕ್ತಜನಾನಂದಪ್ರವೃದ್ಧಿಕರಣೋದ್ಯತೇ ॥೩೪॥

ಜಯ ಶ್ರೀಕಂಠಕಂಠಸ್ಥಬಾಹುವಲ್ಲೀವಿರಾಜಿತೇ ।
ಜಯ ಸ್ವಭಕ್ತದುಃಖಾಬ್ಧಿವಿಶೇಷಣವಿಚಕ್ಷಣೇ ॥೩೫॥

ನಿನ್ನ ನೇತ್ರಗಳು ಮದಿಸಿದ ಮೀನಿನಂತೆ, ಸುಂದರವಾದ ಆಕಾರವುಳ್ಳವುಗಳಾಗಿವೆ. ನಿನ್ನ ನಾಭಿಯು (ಹೊಕ್ಕಳು) ಗಂಗಾನದಿಯ ಸುಳಿಯಂತೆ ಆಳವಾಗಿ ಇರುತ್ತದೆ. ಹೀಗೆ ಅವಯವಸೌಂದರ್ಯದಿಂದ ಶೋಭಿಸುತ್ತಿರುವ ನಿನಗೆ ಮಂಗಳವಾಗಲಿ. ॥೩೨॥

ನಿನ್ನ ನಡುವು ಅತಿ ಸೂಕ್ಷ್ಮವಾಗಿರುತ್ತದೆ. ನಿನ್ನ ರೋಮಗಳ ಪಂಕ್ತಿಯು ಭ್ರಮರಗಳ ಪಂಕ್ತಿಯನ್ನು ಹೋಲುವುದು. ನಿನ್ನ ಗಮನವಾದರೋ ಮದಿಸಿರುವ ಹಂಸಗಳ ಗಮನವನ್ನು ಮೀರಿಸಿರುತ್ತದೆ. ಚಂದ್ರಕಲೆಯು ನಿನ್ನ ಮುಂಗುರುಳನ್ನು ಬೆಳಗಿಸುತ್ತಿರುವುದು. ॥೩೩॥

ದೇವಿಯೇ, ನಿನ್ನ ಪಾದಕಮಲಗಳನ್ನು ಮುನಿಗಳು ತಮ್ಮ ಮನಃಪದ್ಮವೆಂಬ ಮನೆಯಲ್ಲಿ ನಿಲ್ಲಿಸಿಕೊಂಡಿರುವರು. ನೀನು ನಿರಂತರವೂ ಭಕ್ತಜನರ ಆನಂದವನ್ನು ವೃದ್ಧಿಗೊಳಿಸುವ ಕಾರ್ಯದಲ್ಲಿ ಉದ್ಯುಕ್ತಳಾಗಿರುವೆ. ನಿನಗೆ ಜಯವಾಗಲಿ. ॥೩೪॥

ಲತೆಯಂತೆ ಮೃದುವಾದ ನಿನ್ನ ಆ ತೋಳುಗಳಿಂದ ಶಿವನ ಕಂಠವನ್ನು ಅಪ್ಪಿಕೊಂಡಿರುವೆ. ನೀನು ನಿನ್ನ ಭಕ್ತರ ದುಃಖವೆಂಬ ಸಮುದ್ರವನ್ನು ಒಣಗಿಸುವುದರಲ್ಲಿ ನಿಪುಣಳಾಗಿರುವೆ. ಅಂತಹ ನಿನಗೆ ಜಯವಾಗಲಿ. ॥೩೫॥

ಜಯಾನಂದಸುಧಾಂಭೋಧಿ ಸ್ವರೂಪೇ ಜಯಶಾಂಭವಿ ।
ಜಯಸ್ವರ್ಗಾಪವರ್ಗಾದಿಫಲದಾನೋನ್ಮುಖೇ ಶಿವೇ ॥೩೬॥

ಪಾಹಿ ಪಾಹಿ ಸುರಾನಸ್ಮಾನ್ ತ್ವತ್ಪದಾಂಬುರುಹಾರ್ಚಕಾನ್ ।
ಅನನ್ಯಶರಣಾನಂಬ ಜಗದಾಲಂಬನೇ ಜಯ ॥೩೭॥

ಭಜಾಮೋ ಭಜಾಮಃ ಸ್ಮರಾರಿಪ್ರಿಯಾಂ ತಾಂ ।
ಭಜಾಮೋ ಭಜಾಮೋ ಭಜಾಮೋ ಭವಾನೀಂ ।
ಭಜಾಮೋ ಭಜಾಮೋ ಭಜಾಮೋ ಭಜಾಮಃ ।
ಶರಣ್ಯಾಗ್ರಗಣ್ಯಾಂ ಭಜಾಮೋ ಭಜಾಮಃ ॥೩೮॥

ಭಜಾಮೋ ಭವತ್ಪಾದಪದ್ಮಪ್ರಸಾದ ।
ಪ್ರಭಾವಾನುಬದ್ಧಾಃ ಪ್ರಬುದ್ಧಾಸ್ಸುಖೇನ ।
ಭಜಾಮಶ್ಚಿರಂ ಗೌರಿ ಸಂಸಾರಬಂಧಂ ।
ಸನಿರ್ಬಂಧಮಾಶು ಪ್ರಲೀನಂ ಕುರುಷ್ವ ॥೩೯॥

ಆನಂದಾಮೃತಕ್ಕೆ ನಿಧಿಯೋಪಾದಿಯಲ್ಲಿರುವವಳೇ, ನಿನಗೆ ಜಯವಾಗಲಿ. ಶಿವಪತ್ನಿಯೇ, ನಿನಗೆ ಮಂಗಳವಾಗಲಿ, ಸ್ವರ್ಗ ಮತ್ತು ಮೋಕ್ಷವೆಂಬ ಪುರುಷಾರ್ಥಗಳನ್ನು ಕೊಡುವುದರಲ್ಲಿ ಆಸಕ್ತಿಯುಳ್ಳ ಓ ದೇವಿಯೇ, ನೀನು ಸರ್ವಶ್ರೇಷ್ಠಳಾಗಿರು. ||೩೬||

ನಿನ್ನ ಅಡಿದಾವರೆಗಳನ್ನು ಪೂಜಿಸುವ, ನಿನ್ನನ್ನು ಮೊರೆಹೊಕ್ಕಿರುವ ದೇವತೆಗಳಾದ ನಮ್ಮನ್ನು ರಕ್ಷಿಸು! ಜಗತ್ತಿಗೆ ಆಧಾರಭೂತಳಾದ ದೇವಿಯೇ, ನಿನಗೆ ಜಯವಾಗಲಿ. ||೩೭||

ಶಿವನ ಪ್ರಿಯತಮೆಯಾದ ದೇವಿಯನ್ನು ನಾವು ಭಜಿಸುವೆವು. ಶಂಕರನ ಪತ್ನಿಯನ್ನು ಸೇವಿಸುವೆವು. ಭಕ್ತರಕ್ಷಕರಲ್ಲಿ ಅಗ್ರೇಸರಳಾದ ದೇವಿಯನ್ನು ನಿರಂತರವೂ ಎಡಬಿಡದೆ ಭಜಿಸುವೆವು. ||೩೮||

ನಿನ್ನ ಪಾದಪದ್ಮಗಳ ಅನುಗ್ರಹದ ದೆಸೆಯಿಂದ ನಾವು ಅಜ್ಞಾನವೆಂಬ ನಿದ್ರೆಯಿಂದ ಎಚ್ಚೆತ್ತವರಾಗಿ, ಸುಖವಾಗಿ ನಿನ್ನನ್ನು ಸೇವಿಸುತ್ತಿರುವೆವು. ಆದರೆ ಸಂಸಾರಬಂಧವು ಮಾತ್ರ ನಮ್ಮನ್ನು ಬಿಟ್ಟಿಲ್ಲ. ಗಿರಿಜೆಯೇ, ಸದಾ ನಿನ್ನನ್ನೇ

ಭವತ್ಪಾದಸೇವಾಸಮಾಸಕ್ತಚಿತ್ತಾಃ ।
ಶ್ರಿಯಾ ಸೇವಿತಾಃ ಸರ್ವದಾ ಭಾಗ್ಯವಂತಃ ।
ಭವತ್ಪಾದಪದ್ಮಂ ವಿನಾನ್ಯಂ ನ ವಿದ್ಮಃ ।
ಪ್ರಸಾದಾನುಕೂಲಂ ನ ವಿದ್ಮೋ ನ ವಿದ್ಮಃ ॥೪೦॥

ಭವತ್ಪಾದುಕಾರಾಧಕಾ ಏವ ಲೋಕೇ ।
ನರಾಃ ಸ್ಯುರ್ಧರಾಧೀಶಪೂಜ್ಯಾತಿಪೂಜ್ಯಾಃ ।
ಭವದ್ದರ್ಶನಂ ಜಾತಮಸ್ಮಾಕಮಂಬ ।
ಪ್ರಸನ್ನಾಃ ಕೃತಾರ್ಥಾಃ ಕೃತಾರ್ಥಾಃ ಕೃತಾರ್ಥಾಃ ॥೪೧॥

ಸಕೃದ್ವಾ ಭವತ್ಪಾದಪದ್ಮಪ್ರಭಾಭಿ
ರ್ವಯಂ ಭೂಷಿತಾಶ್ಚೇತ್ತ್ವದಾದ್ಯಾಂಬ ಕಿಂ ವಾ ।
ಧನಂ ಯಾತಿ ದೀನೇಷು ದತ್ತಂ ಧನಂ ಚೇತ್
ಧನಂ ವೃದ್ಧಿಮೇತೀತಿ ಧನ್ಯಾ ವದಂತಿ ॥೪೨॥

ಸೇವಿಸುತ್ತಿರುವ, ನಮ್ಮ ಈ ಸಂಸಾರವೆಂಬ ಬಂಧನವನ್ನು ದೂರಮಾಡುವವಳಾಗು. ॥೩೯॥

ನಿನ್ನ ಪಾದಸೇವೆಯಲ್ಲಿಯೇ ಆಸಕ್ತರಾದ ನಾವು ಸಕಲೈಶ್ವರ್ಯಗಳಿಂದಲೂ ಯುಕ್ತರಾಗಿ ಭಾಗ್ಯವಂತರಾಗಿರುವೆವು. ನಮ್ಮನ್ನು ಅನುಗ್ರಹಿಸುವ ನಿನ್ನ ಆ ಪಾದಕಮಲವನ್ನು ಬಿಟ್ಟು ಮತ್ತೆ ಯಾವುದನ್ನೂ, ನಾವು ಎಂದಿಗೂ ಧ್ಯಾನಿಸಲಾರೆವು. ॥೪೦॥

ಲೋಕದಲ್ಲಿ ನಿನ್ನ ಪಾದುಕೆಗಳನ್ನೇ ಸತತವಾಗಿ ಪೂಜಿಸುವ ಮನುಜರು ರಾಜಾಧಿರಾಜರಿಗೂ ಪೂಜ್ಯರಾಗಿರುವರು. ಓ ಅಂಬಿಕೆಯೇ, ಈಗ ನಮಗೆ ನಿನ್ನ ದರ್ಶನವು ಲಭಿಸಿರುವುದು. ಅದರಿಂದ ನಾವು ಮನಸ್ಸಮಾಧಾನವುಳ್ಳವರೂ ಮತ್ತು ಧನ್ಯರೂ ಆಗಿರುವೆವು. ॥೪೧॥

ಜಗನ್ಮಾತೆಯೇ, ನಾವು ನಿನ್ನ ಈ ಪಾದಕಮಲಗಳ ಕಾಂತಿಯಿಂದ ಒಂದು ಬಾರಿ ಭೂಷಿತರಾದರೂ, ನಿನ್ನ ಪಾದದ ಕಾಂತಿಯು ಮಾತ್ರ ಇನ್ನೂ ವೃದ್ಧಿಹೊಂದುತ್ತಿರುವುದು. ಬಡಬಗ್ಗರಲ್ಲಿ ದಾನಮಾಡಿದ ಧನವು ಇನ್ನೂ ವೃದ್ಧಿಯನ್ನೈದುವುದೆಂದು ತಿಳಿದವರು ಹೇಳುತ್ತಾರೆ. ॥೪೨॥

ಪ್ರತೀಕ್ಷಾ ಕೃತಾ ತಾವದದ್ಯಾಂಬ ಶೀಘ್ರಂ
ತ್ವದಂಘ್ರ್ಯಂಬುಜಾರಾಧನೇ ಸಾಧುನಾಪಿ ।
ನ ಜಾತಾ ತಥಾಪಿ ಸ್ವಚಿತ್ತೇಷು ದುಃಖಂ
ನ ವೃತ್ತಂ ಭವತ್ಪಾದಪದ್ಮಶ್ರಿಯಾ ನಃ ॥೪೩॥

ಅನಂತೈಸ್ತಪೋಭಿಸ್ತುಲಾಕೋಟಿದಾನೈ
ಸ್ತಥಾ ಯಾಗಪೂಗೈರ್ವ್ರತಾನಾಂ ಸಮೂಹೈಃ ।
ಭವತ್ಪಾದಸಂದರ್ಶನಂ ಧರ್ಮಬೀಜಂ
ಪರಂ ತು ಪ್ರಸಾದಾತ್ತವೈವಾದ್ರಿಕನ್ಯೇ ॥೪೪॥

ಭವತ್ಪಾದಪದ್ಮಾಂಬುಜಾದೇತು ವಾತಃ
ಕರೋತು ಶ್ರಿಯಾ ಸಂಯುತಾನೇವ ಲೋಕಾನ್ ।
ಸ ಲೋಕೋಪಕಾರಾಯ ಸೃಷ್ಟಸ್ತ್ವಯಾಪಿ
ತ್ವಮೇವಾಸಿ ಮಾತಾ ಪಿತಾಸಿ ತ್ವಮೇವ ॥೪೫॥

ಮಾತೆಯೇ, ನಿನ್ನ ಚರಣಾರವಿಂದಗಳನ್ನು ಆದಷ್ಟು ಜಾಗ್ರತೆಯಾಗಿ ಆರಾಧಿಸಬೇಕೆಂದು ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಿದ್ದೆವು. ಆದರೆ ಇದುವರೆಗೂ ಆ ನಿರೀಕ್ಷಣೆಯು ಸಫಲವಾಗಲಿಲ್ಲ. ಆದರೂ ನಿನ್ನ ಆ ಚರಣಾರವಿಂದಗಳ ಕಾಂತಿಯಿಂದ, ನಮ್ಮ ಮನಸ್ಸಿನಲ್ಲಿದ್ದ ದುಃಖರಾಶಿಯು ಈಗ ದೂರವಾಯಿತು.॥೪೩॥

ದೇವಿ! ಅನೇಕ ತಪಸ್ಸುಗಳಿಂದಲೂ, ಅಸಂಖ್ಯಾತವಾದ ತುಲಾಭಾರದ ದಾನಗಳಿಂದಲೂ, ಯಾಗಾನುಷ್ಠಾನದಿಂದಲೂ, ಮತ್ತು ವ್ರತಾನುಷ್ಠಾನದಿಂದಲೂ, ಪುಣ್ಯವು ಸುಲಭವಾಗಿ ದೊರೆಯಲಾರದು. ಏಕೆಂದರೆ ಅವು ಅಷ್ಟು ಪುಣ್ಯವನ್ನುಂಟು ಮಾಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ನಿನ್ನ ಅಡಿದಾವರೆಗಳ ದರ್ಶನವು ಪುಣ್ಯಕ್ಕೆ ಮುಖ್ಯ ಕಾರಣವಾಗಿರುವುದು. ಆದರೆ ಗಿರಿಜೆಯೇ, ಅಂತಹ ಪಾದಕಮಲಗಳ ದರ್ಶನವು ಲಭಿಸುವುದು ನಿನ್ನ ಅನುಗ್ರಹದಿಂದಲೇ ಅಲ್ಲವೇ! ॥೪೪॥

ನಿನ್ನ ಪಾದಕಮಲಗಳ ಮೇಲೆ ಬೀಸಿ ಬಂದ ವಾಯುವು ಭಕ್ತರನ್ನು ಉದ್ಧರಿಸುತ್ತಾ ಕಾಂತಿಯುಕ್ತರನ್ನಾಗಿ ಮಾಡಲಿ. ಆ ಗಾಳಿಯನ್ನು ಲೋಕೋಪಕಾರಕ್ಕೋಸ್ಕರವೇ ನೀನು ಸೃಷ್ಟಿಸಿರುವೆ. ದೇವಿ! ನೀನೇ ಜಗತ್ತಿಗೆ ತಂದೆಯೂ, ನೀನೇ ತಾಯಿಯೂ ಆಗಿರುತ್ತೀಯೆ. ॥೪೫॥

ಭವತ್ಪಾದಪದ್ಮಶ್ರಿಯಾ ಸಂಯುತಾನಾಂ
ಪವಿತ್ರಾಣಿ ಗಾತ್ರಾಣಿ ಸರ್ವಾಣಿ ಗೌರಿ ।
ಗಿರೀಂದ್ರೋಽಪಿ ಧನ್ಯಸ್ತ್ವದಾರಾಧನೇನ
ಶ್ರಿಯಾ ಮೇನಕಾ ಸಾಪಿ ಧನ್ಯಾಪಿ ಮಾನ್ಯಾ ॥೪೬॥

ತವಾನುಗ್ರಹಃ ಪ್ರಾರ್ಥಿತೋಽಪಿ ಪ್ರಯಾಸೈ
ರಲಭ್ಯಃ ಕೃತೋಽಪಿ ಪ್ರಯಾಸಂ ವಿನಾಪಿ ।
ಅಕಸ್ಮಾದ್ಯದಿ ತ್ವತ್ಪದಾಂಭೋಜಭಕ್ತಿ
ಸ್ತದಾ ಸೋಽಪಿ ಲಭ್ಯೋ ಭವತ್ಯೇವ ಗೌರಿ ॥೪೭॥

ಭವತ್ಪಾದಪದ್ಮಪ್ರಸಾದಸ್ಯ ಪಾತ್ರಂ
ವಯಂ ತಾವದಂಬಾಧುನಾ ಧನ್ಯಧನ್ಯಾಃ ।
ಇತೋಽಪ್ಯನ್ಯದಸ್ಮಾಕಮಾಶಾಸ್ಯಮಸ್ತೀ
ತ್ಯುಪೇಕ್ಷಾ ನ ಕಾರ್ಯಾ ತ್ವಯಾ ದೀನವರ್ಗೇ ॥೪೮॥

ಗಿರಿಜೆಯೇ, ನಿನ್ನ ಪಾದಕಮಲಗಳ ಪ್ರಭೆಗೆ ಪಾತ್ರರಾದ ಜನರ ಸಕಲ ಅಂಗಗಳೂ ಪವಿತ್ರವಾಗುತ್ತವೆ. ನಿನ್ನನ್ನು ತೃಪ್ತಿಪಡಿಸುವುದರಿಂದ, ಪರ್ವತರಾಜನೂ ಮತ್ತು ಮೇನಕೆಯೂ ಇಂದು ಧನ್ಯರಾಗಿರುವರು. ॥೪೬॥

ಉಗ್ರವಾದ ತಪಸ್ಸೇ ಮೊದಲಾದ ಸಾಧನಗಳ ಮೂಲಕ ನಿನ್ನ ಅನುಗ್ರಹವನ್ನು ಬಯಸಿದರೂ ಅದು ದುರ್ಲಭವಾಗಿರುವುದು. ಆದರೆ ನಾವು ಮಾತ್ರ ಈಗ ಅನಾಯಾಸವಾಗಿ ನಿನ್ನ ಅನುಗ್ರಹಕ್ಕೆ ಪಾತ್ರರಾಗಿರುವೆವು. ದೈವವಶದಿಂದ ನಿನ್ನ ಅಡಿದಾವರೆಗಳಲ್ಲಿ ಭಕ್ತಿಯು ಹುಟ್ಟಿದರೆ, ಅನುಗ್ರಹವೂ ದೊರಕಿಯೇ ದೊರಕುವುದು ಎಂಬುದಕ್ಕೆ ಇದೇ ಸಾಕ್ಷಿ. ॥೪೭॥

ಜನನಿ, ನಿನ್ನ ಪಾದಕಮಲಗಳ ಅನುಗ್ರಹಕ್ಕೆ ಪಾತ್ರರಾದ ನಾವು ಈಗ ಧನ್ಯರಾಗಿರುವೆವು. ನಮಗೆ ಇದಕ್ಕಿಂತಲೂ ಬೇರೆಯದಾದ ಭಾಗ್ಯವು ಯಾವುದಿರುತ್ತದೆ? ದೀನರಾದ ನಮ್ಮನ್ನು ಮಾತ್ರ ಎಂದಿಗೂ ತೊರೆಯಬೇಡ. ॥೪೮॥

ಶಿವೇ ಕಿಂಚಿದನ್ಯಂ ನ ನಃ ಪ್ರಾರ್ಥನೀಯಂ
ಭವತ್ಪಾದಪದ್ಮಾನುರಾಗಂ ವಿನಾಪಿ ।
ಸ ಏವಾನುರಾಗೋ ಮಹಾಭೋಗಹೇತುಃ
ಸ ಸೇತುಃ ಸುರಾಭೀಷ್ಟರತ್ನಾಂಬುರಾಶೇಃ ॥೪೯॥

ನಮಸ್ತೇ ಕಲ್ಯಾಣಿ ತ್ರಿಪುರಹರವಾಮಾಂಗಸದನೇ
ನಮಸ್ತೇ ಶರ್ವಾಣಿ ಸ್ಮರಹರಮನೋಹಾರಿವದನೇ ।
ನಮಸ್ತೇ ರುದ್ರಾಣಿ ಸ್ಫಲದಮಲನೀಲೋತ್ಪಲದಲ
ಛಲಛಾಯಾಛನ್ನಛವಿಮಧುರಗಂಭೀರನಯನೇ ॥೫೦॥

ನಮಸ್ತೇ ನೀಲಾದ್ರಿದ್ರವವಿಪುಲಕಲ್ಲೋಲವಿವಿಧ
ಪ್ರಭಾಭಾವಾಭಾವದ್ರವಲಲಿತನೀಲಾಲಕಕುಲೇ ।
ನಮಸ್ತೇ ಭಕ್ತೇಷ್ಟಪ್ರದಚತುರಪಾದಾಂಬುಜಯುಗೇ
ನಮಸ್ತೇ ಭೂಯಸ್ತೇ ಪುನರಪಿ ನಮಸ್ತೇ ಪುನರಪಿ ॥೫೧॥

ದೇವಿ! ನಿನ್ನ ಪಾದಕಮಲಗಳಲ್ಲಿ ಪ್ರೀತಿಯನ್ನು ಬಿಟ್ಟು ಬೇರೆ ಏನನ್ನೂ ನಾವು ಬಯಸುವುದಿಲ್ಲ. ಆ ಪ್ರೀತಿಯೇ ನಿರತಿಶಯವಾದ ಸುಖಕ್ಕೆ ಕಾರಣವಾಗಿರುತ್ತದೆ. ಅದೇ ದೇವತೆಗಳಾದ ನಮ್ಮ ಇಷ್ಟಾರ್ಥವೆಂಬ ಸಮುದ್ರಕ್ಕೆ ಸೇತುವೆಯಾಗಿರುವುದು. ॥೪೯॥

ತ್ರಿಪುರಾಂತಕನಾದ ಈಶ್ವರನ ಅರ್ಧಾಂಗಿಯೂ, ಈಶ್ವರನ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಮುಖವುಳ್ಳವಳೂ ಆದ ನಿನಗೆ ನಮಸ್ಕಾರ. ಕನ್ನೈದಿಲೆಯಂತೆ ಕಪ್ಪಾಗಿ ಕಾಂತಿಯಿಂದ ಅದನ್ನು ಧಿಕ್ಕರಿಸುವ ಗಂಭೀರವಾದ ಕಟಾಕ್ಷವುಳ್ಳ ದೇವಿಯೇ, ನಿನಗೆ ವಂದನೆ. ॥೫೦॥

ಅಂಜನಪರ್ವದಿಂದ ಪ್ರವಹಿಸುತ್ತಲಿರುವ ಕಪ್ಪಾದ ಬಣ್ಣವುಳ್ಳ ನೀರಿನಂತೆ, ಕಪ್ಪಾಗಿಯೂ ಕಾಂತಿಮಯವಾಗಿಯೂ ಇರುವ ಮುಂಗುರುಳುಗಳನ್ನು ಧರಿಸಿರುವ ನಿನಗೆ ನಮಸ್ಕಾರ. ಭಕ್ತರ ಮನೋರಥಗಳನ್ನು ಈಡೇರಿಸುವುದರಲ್ಲಿ ಸಮರ್ಥವಾದ ಪಾದ ಕಮಲಗಳಿಂದ ಶೋಭಿಸುವವಳೇ! ನಿನ್ನನ್ನು ಬಾರಿಬಾರಿಗೂ ನಮಸ್ಕರಿಸುವೆನು. ॥೫೧॥

ಪ್ರಣಾಮಾನಂಮ್ರೇಂದ್ರಪ್ರಮುಖವನಿತಾಯಲ್ಲಕಮಣಿ
ಪ್ರಭಾಸ್ಪರ್ಧಾಮರ್ಧಾನ್ಮೃತಕಲಶಿರೋರತ್ನಮಹಿಲಾ ।
ಮುಹುರ್ದೃಷ್ಟ್ವಾ ದೃಷ್ಟ್ವಾ ನಿಜಚರಣಜಾಗ್ರಚ್ಛವಿಕೃತಾ
ಸ್ಮಿತವ್ಯಕ್ತಾನಂದಾ ದಿಶತು ಮಮ ಕಲ್ಯಾಣಸರಣೀಂ ॥೫೨॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ದೇವಗಣಕೃತದೇವೀಸ್ತವನಂ ನಾಮ ಪಂಚಮೋಽಧ್ಯಾಯಃ

ದೇವಿಯೇ, ಇಂದ್ರನ ಪತ್ನಿಯರೇ ಮೊದಲಾದ ದೇವತಾಸ್ತ್ರೀಯರು ನಿನ್ನ ಪಾದಪದ್ಮಗಳಲ್ಲಿ ತಮ್ಮ ತಲೆಯಿಟ್ಟು ನಮಸ್ಕರಿಸುತ್ತಿರುವರು. ಆಗ ಅವರ ಶಿರೋರತ್ನಗಳ ಕಾಂತಿಯು ನಿನ್ನ ಪಾದಾಗ್ರದ ಪ್ರಭೆಯ ಎದುರಿನಲ್ಲಿ ಮಂಕಾಗಿ ಕಾಣುವುವು. ಅಂತಹ ಕರುಣಾಮಯವಾದ ಮತ್ತು ಆನಂದದಾಯಕವಾದ ಆ ದಿವ್ಯಚರಣ ಪ್ರಭೆಯು ನಮಗೆ ಸರ್ವದಾ ಕಲ್ಯಾಣವನ್ನುಂಟುಮಾಡುತ್ತಿರಲಿ. ॥೫೨॥

ಇಲ್ಲಿಗೆ ಶ್ರೀ ಶಿವರಹಸ್ಯದ ಪೂರ್ವಾರ್ಧದ ಮೂರನೆಯ ಅಂಶದಲ್ಲಿ ದೇವತೆಗಳ
ದೇವೀಸ್ತೋತ್ರವೆಂಬ ಐದನೆಯ ಅಧ್ಯಾಯವು ಸಮಾಪ್ತವಾಯಿತು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಷಷ್ಠೋಽಧ್ಯಾಯಃ

|| ವ್ಯಾಸ ಉವಾಚ ||

ಇತಿ ಪ್ರಸಾದಿತಾ ದೇವೀ ಮೇರುಮೂಲಸಮಾಶ್ರಿತಂ ।
ಸ್ವರ್ಗಲೋಕಮವಾಪಾಂಬಾ ದಿವ್ಯಪುಷ್ಪಕಸಂಶ್ರಿತಾ ||೧||

ಪುಷ್ಪವೃಷ್ಟಿರಭೂತ್ತತ್ರ ಸಾಂದ್ರಾ ಸುಂದರಮಂಜರೀ ।
ಮಂದಮಂದಾರಪುಷ್ಪೌಘಗಂಧವಾಹಸಮನ್ವಿತಾ ||೨||

ತತಃ ಪುರಸ್ಸರಾಸ್ಸರ್ವೇ ವಿಮಾನವರಸಂಸ್ಥಿತಾಃ ।
ತತ್ಪ್ರಭಾಸಂಘಸಂಕ್ರಾಂತಾಂ ದ್ರಷ್ಟುಮಭ್ಯುದ್ಯತಾ ಮುದಾ ||೩||

ಬಳಿಕ ವ್ಯಾಸನು ಮುನಿಗಳನ್ನು ಕುರಿತು ಇಂತೆಂದನು.—ಈರೀತಿಯಲ್ಲಿ ದೇವತೆಗಳಿಂದ ಸ್ತುತಿಸಲ್ಪಟ್ಟ ಅಂಬಿಕೆಯು ವಾಯುವೇಗದಿಂದ ಕೂಡಿರುವ ವಿಮಾನವನ್ನೇರಿದವಳಾಗಿ ಮೇರುಪರ್ವತದ ಕೆಳಗಡೆಯಲ್ಲಿರುವ ಸ್ವರ್ಗಲೋಕವನ್ನು ಸೇರಿದಳು. ||೧||

ಅಲ್ಲಿ ಮಂದಾರಪುಷ್ಪಗಳ ಮೇಲೆ ಬೀಸಿ ಬರುವ ಗಾಳಿಯಿಂದ, ಸುಂದರವಾದ ಹೂ ಗೊಂಚಲುಗಳು ನಿರಂತರವಾಗಿ ಮಳೆಗರೆದವು. ||೨||

ಬಳಿಕ ದೇವತೆಗಳಲ್ಲಿ ಪ್ರಮುಖರಾದ ವಿಷ್ಣು ಬ್ರಹ್ಮಾದಿಗಳು, ವಿಮಾನದಲ್ಲಿ ಕುಳಿತು ಪ್ರಭಾರಾಶಿಗಳಿಂದ ಕಂಗೊಳಿಸುತ್ತಿರುವ ದೇವಿಯನ್ನು ನೋಡಲು ಉದ್ಯುಕ್ತರಾದರು. ||೩||

ಅತ್ಯುನ್ನತವಿಮಾನಸ್ಥಾಂ ನ ಶೇಕುರ್ದ್ರಷ್ಟುಮಂಬಿಕಾಂ ।
ತತಃ ಪರಂ ಗದ್ಗದಾಭಿರ್ವಾಗ್ಭಿಸ್ತುಷ್ಟುವುರಂಬಿಕಾಂ ॥೪॥

॥ ದೇವಾ ಊಚುಃ ॥

ಗಿರಿರಾಜಕುಮಾರಿಕೇ ಶಿವೇ ಚರಣಂ ತೇ ಕಮಲಾಮಲಂ ಕಥಂ ।
ನ ನಿರೀಕ್ಷಿತಮಾದರೇಣ ತನ್ನಿಗಮೈರಪ್ಯವಧಾರಿತಂ ನ ಹಿ ॥೫॥

ಅಧುನಾ ಚರಣಾಂಬುಜಂ ಶಿವೇ ಯದಿ ತೇ ದೃಷ್ಟಿಪಥಂ ಪ್ರಯಾಸ್ಯತಿ ।
ಕಥಮಪ್ಯಘಕೋಟಿನಾಶಕಂ ಸಕಲಾಭೀಷ್ಟದಮಪ್ಯಸಂಶಯಂ ॥೬॥

ನ ವಿಮಾನಮಣಿಪ್ರಭಾಗಣೈಃ ಕಥಮಪ್ಯಾದರತೋಽಪಿ ಸರ್ವಥಾ ।
ನಯನೈರ್ನ ನಿರೀಕ್ಷಿತಂ ತದಾ ಕಥಮಸ್ಮಾಕಮುಮೇ ಗತಿರ್ಭವೇತ್ ॥೭॥

ಶಫರೀಚರಲೋಲದೃಷ್ಟಿಭಿಃ ಕಥಮಪ್ಯಂಬ ವಿಲೋಕಯಾಶು ನಃ ।
ಯದಿ ತೇ ಕರುಣಾರಸಾಲಯಃ ಸುರವರ್ಗೋಽಪ್ಯಪವರ್ಗಭಾಜನಂ ॥೮॥

ಅತ್ಯಂತ ಉನ್ನತವಾದ ಪ್ರದೇಶದಲ್ಲಿ ಹಾರಾಡುತ್ತಿರುವ ವಿಮಾನಮಧ್ಯೆ ಕುಳಿತಿದ್ದ ದೇವಿಯನ್ನು ನೋಡಲು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಆಗ ಗದ್ಗದವಾದ ವಚನಗಳಿಂದ ದೇವಿಯನ್ನು ಈರೀತಿ ಸ್ತುತಿಸಲಾರಂಭಿಸಿದರು. ||೪||

ಓ ಪರ್ವತರಾಜಪುತ್ರಿಯೇ, ಪದ್ಮದಂತೆ ಪರಿಶುದ್ಧವಾದ ನಿನ್ನ ಪಾದಗಳನ್ನು ದರ್ಶನ ಮಾಡಲು ನಾವು ಸಮರ್ಥರಲ್ಲ. ವೇದಗಳೂ ಸಹ ಅದರ ಸ್ವರೂಪವನ್ನು ನಿರ್ಧರಿಸಲು ಅಸಮರ್ಥಗಳಾಗಿವೆ ಎಂಬುದು ನಮಗೆ ತಿಳಿದೇ ಇದೆ. ||೫||

ದೇವಿ, ನಿನ್ನ ಆ ಪಾದಕಮಲವು ನಮ್ಮ ದೃಷ್ಟಿಗೆ ಒಂದುವೇಳೆ ಗೋಚರವಾದುದೇ ಆದರೆ, ಅದು ನಮ್ಮ ಪಾಪರಾಶಿಗಳನ್ನು ನಾಶಪಡಿಸಿ ಸಕಲ ಮನೋರಥಗಳನ್ನು ಈಡೇರಿಸುವುದು. ಇದರಲ್ಲಿ ಸಂಶಯವಿಲ್ಲ. ||೬||

ನಿನ್ನ ವಿಮಾನದಲ್ಲಿ ಅಲಂಕರಿಸಿರುವ ಮಣಿಗಳ ಪ್ರಭಾರಾಶಿಯಿಂದ ನಮ್ಮ ಕಣ್ಣುಗಳು ಕೋರೈಸಿ ನಿನ್ನನ್ನು ನೋಡಲು ನಮಗೆ ಸಾಧ್ಯವಾಗಲಿಲ್ಲ. ಹೀಗಿರುವಲ್ಲಿ ನಮಗೆ ಹೇಗೆತಾನೇ ಸದ್ಗತಿಯುಂಟಾದೀತು ? ||೭||

ಮಾತೆಯೇ, ಮೀನಿನಂತೆ ಚಂಚಲವಾದ ಆ ನಿನ್ನ ನಯನಗಳಿಂದ ಶೀಘ್ರವಾಗಿ ನಮ್ಮನ್ನು ಒಂದುಸಾರಿ ನೋಡುವವಳಾಗು. ನಿನ್ನ ಕಟಾಕ್ಷಕೃಪೆಯೊಂದಿದ್ದರೆ ಈ ದೇವತೆಗಳಿಗೆ ಮೋಕ್ಷವು ಸಿಕ್ಕಿದಂತೆಯೇ ಆಗುವುದು. ||೮||

ಅತಿದೀನದಯಾಲುತಾ ಶಿವೇ ತ್ವಯಿ ವೇದೈರಪಿ ನಿಶ್ಚಿತಾ ತತಃ ।
ಅತಿದೀನಗಣೇಷು ನೈ ಸುರಾನ್ ಗಣಯಿತ್ವಾ ಜಗದಂಬ ಪಾಹಿ ನಃ ॥೯॥

ಕಿಮಶಕ್ಯಮಿಹಾಂಬ ತೇ ಶಿವೇ ನ ಹಿ ದೀನೋಚ್ಚವಚಃ ಶ್ರುತಂ ಚ ಕಿಂ ।
ಅತಿದೂರವಿಲೋಕನೇಽಪಿ ತೇ ಶ್ರಮ ಏವೇತಿ ವಿಶೇಷತೋಽಮಿತಂ ॥೧೦॥

ನಿಕಟಸ್ಥಿತಭಕ್ತಪಾಲನಂ ಕರುಣಾವೀಕ್ಷಣದೃಷ್ಟಿಭಿಃ ಶಿವೇ ।
ಕಥಮಪ್ಯನುವಾರಮಂಬಿಕೇ ನ ಹಿತೇ ಕೋಽಪಿ ತಥಾ ಭವೇಚ್ಛ್ರಮಃ॥೧೧॥

ಅಧುನಾ ಯದಿ ಗಮ್ಯತೇ ತ್ವಯಾ ತ್ರಿದಶಾಧೀಶ್ವರಶಂಕರಾಲಯಂ ।
ವಿಲಯಂ ಸುಖಸಾಗರಸ್ಯ ತೇ ಪುನರಪ್ಯಾಗಮನಂ ಕಥಂ ಭವೇತ್ ॥೧೨॥

ನ ವಯಂ ಗಿರಿರಾಜಕನ್ಯಕೇ ಕರುಣಾಪಾತ್ರಮಿತಿ ಪ್ರಮಾಪಿ ತೇ ।
ಪತಿತಾನಪಿ ಪಾವಯಸ್ಯಮೇ ಪತಿತೇಷ್ವೇವ ಸುರಾನ್ ವಿಲೋಕಯ ॥೧೩॥

ನೀನು ಅತ್ಯಂತ ದೀನರಾದವರಲ್ಲಿ ದಯೆಯನ್ನು ತೋರ್ಪಡಿಸುವೆಯೆಂದು ವೇದಗಳೂ ಹೇಳುತ್ತಿವೆ. ಆದುದರಿಂದ ನಮ್ಮನ್ನು ಅತ್ಯಂತ ದೀನರೆಂದು ತಿಳಿದು ರಕ್ಷಿಸುವವಳಾಗು. ||೯||

ಶಿವೇ, ನಿನಗೆ ಅಸಾಧ್ಯವಾದ ಕಾರ್ಯವು ಯಾವುದಿರುತ್ತದೆ. ನಮ್ಮ ದೀನವಾದ ವಾಣಿಯನ್ನು ನೀನು ಕೇಳುತ್ತಿಲ್ಲವೇ ? ನೀನು ಅತ್ಯಂತ ದೂರದಿಂದ ನಮ್ಮನ್ನು ನೋಡಿದರೆ ನಿನಗೆ ಶ್ರಮವುಂಟಾಗಬಹುದೆಂದು ನಿನ್ನ ಸಮೀಪಕ್ಕೆ ಬಂದಿರುವೆವು. ||೧೦||

ನಿನ್ನ ಕರುಣಾಪೂರಿತವಾದ ನೇತ್ರಗಳಿಂದ, ಸಮೀಪದಲ್ಲಿಯೇ ನಿಂತಿರುವ ಈ ಭಕ್ತರನ್ನು ರಕ್ಷಿಸು. ಆದರಿಂದ ನಿನಗೆ ಯಾವ ಆಯಾಸವೂ ಉಂಟಾಗಲಾರದು. ||೧೧||

ಈಗ ನೀನು ದೇವೇಶನಾದ ಶಂಕರನ ಆಲಯಕ್ಕೆ ಹೋಗಿ ಸೇರಿದವಳಾದರೆ ಸುಖಗಳಿಗೆ ಆಶ್ರಯವಾದ ಆ ಶಿವಾಲಯವನ್ನು ತೊರೆದು, ನೀನು ಹಿಂತಿರುಗಿ ಎಂದು ಬರುವೆ? ಎಂದಿಗೂ ಬರಲಾರೆ. ||೧೨||

ಓ ಪರ್ವತಪುತ್ರಿಯೇ ! ನೀನು ಪರಮ ಪಾತಕಿಗಳನ್ನು ಸಹ ಮೇಲಕ್ಕೆ ತ್ತುವೆ. ಉದ್ಧರಿಸುವೆ. ನಾವು ನಿನ್ನ ಅನುಗ್ರಹಕ್ಕೆ ಪಾತ್ರರಲ್ಲವೆಂದು ನೀನು ತಿಳಿಯು

ತವ ದೃಷ್ಟಿರದೃಷ್ಟತೋ ಭವೇದಿತಿ ನಿರ್ಣೀತಮತಿಪ್ರಯತ್ನತಃ ।
ತಪಸಾಪಿ ನ ತಸ್ಯ ಸಾಧನಂ ಭವತೀತಿ ಪ್ರಮಿತಂ ಪ್ರಮಾತೃಭಿಃ ॥೧೪॥

ಕಿಮಹೋ ನ ದಯಾ ಗಿರೀಂದ್ರಜೇ ದಯನೀಯಾಃ ಕತಿ ತೇ ಜಗತ್ತ್ರಯೇ ।
ನ ಹಿ ತೇಷು ಸುರಾಃ ಪತಂತಿ ವಾ ದುರದೃಷ್ಟಂ ಕಿಮಿಹಾಮರೇಷ್ವಪಿ ॥೧೫॥

ಶಿವಪೂಜನಸಾಧಿತಾಪರಾ ಸುರತಾ ಸಾ ನ ಕಥಂ ಮತಾ ತವ ।
ಶಿವಪೂಜನಭಕ್ತಿರಸ್ತಿ ತೇ ತ್ವಮುಮೇ ಶಂಕರತತ್ಪರಾ ಖಲು ॥೧೬॥

ತವ ಯದ್ಯಪಿ ಶಂಕರೋ ರತಿಸ್ತ್ವರಯಾ ಗಂತುಮಮಾರ್ಧವಿಗ್ರಹಃ ।
ಕಥಮದ್ಯ ಭವಿಷ್ಯತೀತಿ ಸಾ ಗಿರಿಜೇ ನೈವ ಹಿ ವಿಘ್ನತಾ ಭವೇತ್ ॥೧೭॥

ವುದಾದರೆ, ನಾವು ಅತಿ ಪಾತಕಿಗಳೆಂದಾದರೂ ತಿಳಿದು, ನಮ್ಮನ್ನು ಅನುಗ್ರಹಿಸು. ಪತಿತರನ್ನು ಉದ್ಧರಿಸುವ ಶಕ್ತಿಯು ನಿನಗಲ್ಲದೆ ಮತ್ತಾರಿಗಿರುವುದು? ॥೧೩॥

ದೈವವಶದಿಂದ ಭಕ್ತರು ನಿನ್ನ ದೃಷ್ಟಿಗೆ ಗೋಚರರಾಗುವರೇ ಹೊರತು, ತಮ್ಮ ತಪಸ್ಸಿನಿಂದಲೂ ನಿನ್ನ ಅನುಗ್ರಹವನ್ನು ಹೊಂದಲಾರರು, ಎಂದು ಜ್ಞಾನಿಗಳು ಸದಾ ಹೇಳುತ್ತಿರುವರು. ॥೧೪॥

ಓ ಶೈಲೇಂದ್ರಪುತ್ರಿಯೇ, ಇನ್ನೂ ನಮ್ಮಲ್ಲಿ ದಯೆದೋರಲಿಲ್ಲವೇ! ಮೂರು ಲೋಕಗಳಲ್ಲಿಯೂ ಎಷ್ಟೋ ಜನ ಭಕ್ತರನ್ನು ಉದ್ಧರಿಸಿರುವ ನೀನು ಅವರಲ್ಲಿಯೇ ದೇವತೆಗಳನ್ನೂ ಸೇರಿಸಬಾರದೇ! ಇದು ದೇವತೆಗಳ ದುರ್ಭಾಗ್ಯವಲ್ಲವೇ! ॥೧೫॥

ಶಿವನನ್ನು ಪೂಜಿಸಿ ಅವನನ್ನು ಸಾಕ್ಷಾತ್ಕರಿಸಿರುವವರಲ್ಲಿ ನಿನಗೆ ವಿಶ್ವಾಸವಿಲ್ಲವೆ? ಅದೇ ಭಾವನೆಯಿಂದ ನಮ್ಮನ್ನೂ ಏಕೆ ಪ್ರೀತಿಸಬಾರದು? ಶಿವಪೂಜೆಯಲ್ಲಿ ನಿನಗೆ ಭಕ್ತಿಯಿರುವುದು ಸಹಜವಾದುದರಿಂದ ಶಿವಪೂಜಕರಾದ ನಮ್ಮನ್ನು ಉದ್ಧರಿಸು. ॥೧೬॥

ಒಂದುವೇಳೆ ನಿನಗೆ ಆ ಶಿವನಲ್ಲಿಯೇ ಪ್ರೀತಿಯಿರುವುದೆಂಪರೂ, ಅರ್ಧನಾರೀಶ್ವರನಾದ ಆ ಶಿವನನ್ನು ನೀನು ಬಿಟ್ಟಿರುವುದು ಹೇಗೆ? ಆದಕ್ಕಾಗಿ ಜಾಗ್ರತೆ ಹೋಗಬೇಕೆಂಬ ಮಾತು ನಮಗೆ ಒಂದು ವಿಘ್ನವಾಗಲಾರದು. ॥೧೭॥

ಅತಿದೀನಸುರಾನುಪಾಲನೇ ನ ಚ ವಿಘ್ನೋಽಪಿ ಪಥಿ ಪ್ರಿಯಾಪರೇ ।
ಪರಮಾಪದಗಾಧಸಾಗರೇ ಪತಿತಾನುದ್ಧರ ಸಾದರಂ ಸುರಾನ್ ॥೧೮॥

ಯದಿ ಗೌರಿ ಭವೇದುಪೇಕ್ಷಯಾ ಗಮನಂ ತೇ ಪತಿಮಂದಿರಂ ಪ್ರತಿ ।
ಸ ಶಿವೋಽಪಿ ಕಥಂ ನ ಪೃಚ್ಛತಿ ತ್ರಿದಶಾಃ ಕಿಂ ನ ವಿಲೋಕಿತಾ ಇತಿ ॥೧೯॥

ಗಮನಪ್ರತಿಬಂಧಕಂ ಚ ಕಿಂ ಕ್ಷಣಮಾತ್ರಾದವಲೋಕನೇಽಪಿ ತೇ ।
ಅತಿದುಃಖಮಹಾಬ್ಧಿಮಾಲಯಾ ವಲಿತಾ ಏವ ಸುರಾಃ ಶಿವೇ ನ ಕಿಂ ॥೨೦॥

ಕಿಮಸಾಧುಜನತ್ವನಿರ್ಣಯ ಸ್ತವ ದೇವಿ ತ್ರಿದಶೇಷ್ವಪೀತಿ ತೇ ।
ಕ್ಷತಿರಸ್ತಿ ಕಿಮತ್ರ ನಃ ಶಿವೇ ತದಪಾಕರ್ತುಮಪಿ ಕ್ಷಮಾ ನ ಕಿಂ ॥೨೧॥

ತವ ದರ್ಶನಮಾತ್ರತಃ ಶಿವೇ ದುರಿತಾಬ್ಧಿಃ ಪ್ರಲಯಂ ಪ್ರಯಾಸ್ಯತಿ ।
ಸುಖಸಾದರಪಂಕ್ತಿಮಾದರಾದನುಯಾತ್ಯೇವ ಶಿವಾರ್ಚಕಾಲಯಂ ॥೨೨॥

ದೀನರಾದ ದೇವತೆಗಳನ್ನು ಉದ್ಧರಿಸುವುದರಲ್ಲಿಯೂ, ಮತ್ತು ದಾರಿಯಲ್ಲಿ ನಿನ್ನ ಆ ಪ್ರಿಯಭಕ್ತರನ್ನು ಆದರಿಸುವುದರಲ್ಲಿಯೂ ನಿನಗೆ ತೊಂದರೆಯಾಗುವುದೇ? ಆದರೂ ಆಪತ್ಸಮುದ್ರದಲ್ಲಿ ಮುಳುಗಿರುವ ನಮ್ಮನ್ನು ಉದ್ಧರಿಸು. ॥೧೮॥

ಓ ಗಿರಿಜೆಯೇ, ನೀನು ನಮ್ಮನ್ನು ತಿರಸ್ಕರಿಸಿ ಶಿವಾಲಯವನ್ನು ಕುರಿತು ತೆರಳಿದರೆ ದಯಾಳುವಾದ ಶಿವನು "ನೀನು ದೇವತೆಗಳನ್ನು ಮಾರ್ಗದಲ್ಲಿ ನೋಡ ಲಿಲ್ಲವೇ" ಎಂದು ಕೇಳಬಹುದಲ್ಲವೆ? ॥೧೯॥

ನಮ್ಮ ಕಡೆಗೆ ಕ್ಷಣಕಾಲ ನೋಡಿದರೆ ನಿನ್ನ ಗಮನಕ್ಕೆ ಪ್ರತಿಬಂಧಕವು ಉಂಟಾ ಗುವುದೇ? ದೇವಿ, ದೇವತೆಗಳು ದುಃಖಸಾಗರದಲ್ಲಿ ಮುಳುಗಿರುವರೆಂಬುದನ್ನು ನೀನು ಗಮನಿಸಬಾರದೇ? ॥೨೦॥

ದೇವಿ, ನಿನಗೆ ದೇವತೆಗಳು ದುರ್ಜನರೆಂಬ ಭಾವನೆಯು ಇರುವುದೇ? ಹಾಗಿದ್ದರೂ ಇದರಿಂದ ನಮಗೆ ಯಾವ ಕುಂದೂ ಇರುವುದಿಲ್ಲ. ಏಕೆಂದರೆ ದೇವಿಯೇ, ನಮ್ಮಲ್ಲಿರುವ ಆ ಭಾವನೆಯನ್ನು ಹೋಗಲಾಡಿಸಿಕೊಡಲು ನೀನೇ ಸಮರ್ಥ ಳಲ್ಲವೇ? ॥೨೧॥

ನಿನ್ನ ದರ್ಶನಮಾತ್ರದಿಂದಲೇ ಪಾಪರಾಶಿಯು ನಾಶವಾಗಿ ಭಕ್ತನು ಸುಖ ಸಾಗರದಲ್ಲಿ ಮುಳುಗಿ, ಅಂತ್ಯದಲ್ಲಿ ಅನಾಯಾಸವಾಗಿ ಶಿವಾಲಯವನ್ನು ಪಡೆಯು ವನು ಎಂಬುದು ನಿಜ. ॥೨೨॥

ಗಿರಿಜೇ ಸ ವದಾನ್ಯತಾಮಗಾಚ್ಚರಣಸ್ತೇನ ಚ ತನ್ನಿರೀಕ್ಷಣಂ ।
ಅಧುನಾ ಸುಖಸಾಧನಂ ಶಿವೇ ನ ತವಾಯಾಸಲವೋಽಪಿ ಸರ್ವಥಾ ॥೨೩॥

ತವ ಕಲ್ಪತರುರ್ನ ಚಾಂಬಿಕೇ ನ ಚ ಚಿಂತಾಮಣಿರದ್ರಿಕನ್ಯಕೇ ।
ಸುರಧೇನುರಯಂ ಪರಂತ್ವಹೋ ಚರಣಃ ಕೋಽಪಿ ಸುಧಾಘನೋ
ಘನಃ ॥೨೪॥

ಸ ಸುಧಾಘನತಾಮುಪಾಗತಶ್ಚರಣಸ್ತೇ ಸುರರೂಪಪಾದಪಾತ್ ।
ಅಭಿಷಿಂಚತು ದುಃಖಪಾವಕಂ ಪ್ರತಿತಪ್ತಾನಧುನಾ ಮುಹುರ್ಮುಹುಃ ॥೨೫॥

ಕ್ವ ಸುಧಾಘನತಾ ಕ್ವ ಧೀರತಾ ಸುರಚಿತ್ತಾಂಬುಜಪೂಜನಾರ್ಹತಾ ।
ಕ್ವ ಸುರಾಸವಲೋಕನಾದರಶ್ಚರಣಸ್ಯಾಸ್ಯ ತವಾಂಬ ಶಾಂಭವಿ॥ ೨೬॥

ಗೌರಿಯೇ, ನಿನ್ನ ಚರಣವು ದಾನಿಗಳಲ್ಲಿ ಅಗ್ರೇಸರವೆನಿಸಿರುವುದು. ಅದರ ದರ್ಶನದಿಂದ ಈಗ ನಮಗೆ ಆನಂದವು ಲಭಿಸುವುದು. ಇದರಲ್ಲಿ ನಿನಗೆ ಯಾವ ರೀತಿಯ ಆಯಾಸವೂ ಇರುವುದಿಲ್ಲ. ||೨೩||

ಮಾತೆಯೇ, ನಿನ್ನ ಈ ಚರಣವು ಕಲ್ಪತರುವಲ್ಲ. ಚಿಂತಾಮಣಿಯೂ ಅಲ್ಲ. ಮತ್ತೇನೆಂದರೆ, ಕಾಮಧೇನುವೇ ಆಗಿರುವುದು. ಅಮೃತಧಾರೆಗಳನ್ನು ಸುರಿಸುತ್ತಲಿರುವುದೇ ಇದರ ವಿಶೇಷ ಲಕ್ಷಣ. ||೨೪||

ನಿನ್ನ ಚರಣವು ಕಲ್ಪವೃಕ್ಷಕ್ಕಿಂತ ಬೇರೆಯಾಗಿ ಅಧಿಕವೂ, ಮಧುರವೂ ಆದ ಅಮೃತವನ್ನು ಸುರಿಸುತ್ತಿರುವುದು. ಅದು ಈಗ ದುಃಖಿಗಳಾದ ನಮ್ಮ ದುಃಖವೆಂಬ ಅಗ್ನಿಯನ್ನು ನಂದಿಸಲಿ. ||೨೫||

ಅಮೃತವನ್ನು ಸುರಿಸುವ ನಿನ್ನ ಆ ಚರಣಗಳೆಲ್ಲಿ! ಅದನ್ನು ಪೂಜಿಸುವ ನಮ್ಮ ಧೈರ್ಯವೆಲ್ಲಿ! ದೇವತೆಗಳಾದ ನಮಗೆ ನಿನ್ನ ಚರಣಗಳನ್ನು ನಮ್ಮ ಚಿತ್ತವೆಂಬ ಕಮಲದಲ್ಲಿ ಸ್ಥಾಪಿಸಿ ಪೂಜಿಸುವ ಯೋಗ್ಯತೆಯು ಎಲ್ಲಿಂದ ಬಂತು! ನಿನ್ನ ಚರಣವು, ದೀನರಾದ ದೇವತೆಗಳ ಕಡೆಗೆ ಪ್ರೀತಿಯಿಂದ ದೃಷ್ಟಿಸುವುದೆ? ||೨೬||

ಕರುಣಾಬ್ಧಿತರಂಗಮಾಲಯಾ ಲಲಿತಂ ತೇ ನಯನಾಂಬುಜಂ ಶಿವೇ ।
ತದಿದಂ ಸುರವೃಂದಮಂದಿರೇ ಪ್ರಸರತ್ವಾಶು ಸುಖಾಂಬುಧಿಪ್ರದಂ ॥೨೭॥

ಗಿರಿಜಾನಯನಾವಲೋಕನಂ ಸುರನಾರೀಸಮಪೇಕ್ಷಿತಂ ಕ್ಷಣಂ ।
ಕಮಲಾಪ್ಯನುವೇಲಮಂಬಿಕಾಚರಣಾಂಭೋಜರಜಃಪ್ರಸಾದಜಾ ॥೨೮॥

ಕಮಲಾ ಕಮಲೈರಲಂ ವಲಿಂ ಗಿರಿಜಾಪಾದುಕಾಪೂಜನಪ್ರಿಯಾ ।
ಪುರತಃ ಪುರತಃ ಪ್ರಸರ್ಪತಿ ಪ್ರವಹಂತೀ ಗಿರಿಜೇ ವಿಲೋಕಯ ॥೨೯॥

ಕಿಮತಃ ಪರಮಸ್ತಿ ವಾಂಛಿತಂ ಗಿರಿಜಾಪಾದುಕದರ್ಶನಂ ವಿನಾ ।
ತದನಂತಸುಖಪ್ರದಂ ಶಿವೇ ತ್ರಿದಶಾನಾಮಪಿ ದುರ್ದಶಾಪಹಂ ॥೩೦॥

ದೇವಿಯೇ, ನಿನ್ನ ನೇತ್ರಕಮಲವು ಕರುಣೆ ಎಂಬ ಸಮುದ್ರದ ಅಲೆಗಳಿಂದ ವ್ಯಾಪ್ತವಾಗಿ ಸುಂದರವಾಗಿ ಶೋಭಿಸುತ್ತಿದೆ. ಸುಖಕರವಾದ ಆ ನೇತ್ರಕಮಲವನ್ನು ದೇವತೆಗಳಾದ ನಮ್ಮ ಆಲಯದ ಕಡೆಗೆ ತಿರುಗಿಸುವವಳಾಗು. ॥೨೭॥

ದೇವತಾಸ್ತ್ರೀಯರು ತಾವು ಗಿರಿಜೆಯ ನೋಟಕ್ಕೆ ಕ್ಷಣಮಾತ್ರವಾದರೂ ಪಾತ್ರವಾದೇವೇ ಎಂದು ಅಪೇಕ್ಷಿಸುತ್ತಿರುವರು. ಲಕ್ಷ್ಮಿಯೂ ಕೂಡ ಗಿರಿಜೆಯ ಅಡಿದಾವರೆಗಳ ದೂಳಿಯ ಅನುಗ್ರಹವನ್ನು ಪ್ರತಿಕ್ಷಣದಲ್ಲಿಯೂ ನಿರೀಕ್ಷಿಸುತ್ತಿರುವಳು. ॥೨೮॥

ದೇವಿಯೇ, ಈ ಲಕ್ಷ್ಮಿಯಾದರೋ ಗಿರಿಜೆಯಾದ ನಿನ್ನ ಪಾದುಕಾರಾಧನೆ ಮಾಡಬೇಕೆಂಬ ಕುತೂಹಲದಿಂದ ಕಮಲಗಳ ರೂಪದಲ್ಲಿ ಪ್ರವಹಿಸುತ್ತಾ ನಿನ್ನ ಸಮೀಪಕ್ಕೆ ಬರಲು ಮುಂದುವರಿಯುತ್ತಿರುವಳು. ॥೨೯॥

ನಿನ್ನ ಪಾದದರ್ಶನವನ್ನು ಬಿಟ್ಟು, ಬೇರೆ ಯಾವುದನ್ನು ತಾನೇ ನಾವು ಅಪೇಕ್ಷಿಸುವೆವು? ಆ ಪಾದಗಳು ನಮಗೆ ನಿರತಿಶಯವಾದ ಸುಖವನ್ನುಂಟು ಮಾಡುವುವಾಗಿವೆ. ಮತ್ತು ದೇವತೆಗಳ ದೌರ್ಭಾಗ್ಯವನ್ನೆಲ್ಲಾ ದೂರಮಾಡುವುವು. ॥೩೦॥

ಕ್ವ ಚತುರ್ದಶಲೋಕನಾಥತಾ ಕ್ವ ಕೃಪಾಸಾಗರತಾ ದಯಾರ್ದ್ರತಾ ।
ಕ್ವ ನಿರಂತರದೀನಬಂಧುತಾ ಕ್ವ ತವಾದ್ಯಾಸ್ಯಕೃಪಾ ಸುರೇಷ್ವಪಿ ॥೩೧॥

ಕ್ವ ವದಾನ್ಯ ವದಾನ್ಯಮಾನ್ಯತಾ ಕ್ವ ದಯಾತುಂಗತರಂಗಲೋಲತಾ ।
ಕ್ವ ಶಿವಾರ್ಚಕಪಾತ್ರತಾ ಶಿವೇ ಕ್ವ ತವಾದ್ಯಾಸ್ಯಕೃತಾ ಸುರೇಷ್ವಪಿ ॥೩೨॥

ಮನುಜೇಷ್ವಪಿ ತೇ ಶಿವೇ ದಯಾ ಗುರುಸಂಸಾರರತೇಷ್ವನುಕ್ಷಣಂ ।
ನ ವಯಂ ತದಪೇಕ್ಷಯಾ ಕ್ಷತಾಃ ಕ್ಷಣಮಪ್ಯಂಬ ವಿಲೋಕಯಾಶು ನಃ ॥೩೩॥

ಯದಿ ತೇ ಚರಣಾರವಿಂದಯೋಃ ಪ್ರಭಯಾಪಿ ಪ್ರಭುಭೂತಯಾನಯಾ ।
ನ ವಯಂ ಪರಿಶೋ ವಿಭೂಷಿತಾಃ ಕಥಮಸ್ಮಾಕಮಮೋಽಪಿ ಜೀವನಂ ॥೩೪॥

ಹದಿನಾಲ್ಕು ಲೋಕಗಳಿಗೂ ಒಡತಿಯಾಗಿರುತ್ತಾ, ದಯಾಸಾಗರಳೆಂದು ಪ್ರಸಿದ್ಧಿಪಡೆದು ದೀನರನ್ನು ರಕ್ಷಿಸುವವಳಾದ ನೀನು, ಇನ್ನೂ ದೇವತೆಗಳಾದ ನಮ್ಮಲ್ಲಿ ದಯೆದೋರದಿರುವುದು ನಮಗೆ ಆಶ್ಚರ್ಯವೆನಿಸಿದೆ. ॥೩೧॥

ಲೋಕಮಾತೆಯೇ, ದಾನಿಗಳಲ್ಲಿ ನಿನಗೆ ಇರುವ ಆ ನಿಸ್ಸೀಮವಾದ ವಿಶ್ವಾಸವನ್ನು ಏನೆಂದು ಹೇಳಲಿ? ಮತ್ತು ನಿನ್ನ ಆ ಕರುಣಾತರಂಗದ ಮಾಲೆಯನ್ನು ಎಷ್ಟೆಂದು ವರ್ಣಿಸಲಿ? ಶಿವಪೂಜಕರಾದ ಭಕ್ತರ ಪೋಷಿಣಿಯೆಂಬುದನ್ನು ಮತ್ತೆ ಮತ್ತೆ ಹೇಳಬೇಕೆ? ಆದರೂ ಇನ್ನೂ ದೇವತೆಗಳಲ್ಲಿರುವ ನಿನ್ನ ನಿರ್ದಯತೆಗೆ ನಾವು ಅಚ್ಚರಿಪಡುತ್ತಿರುವೆವು. ॥೩೨॥

ಅಪಾರವಾದ ಸಂಸಾರದಲ್ಲಿ ಆಸಕ್ತರಾಗಿರುವ ಮನುಷ್ಯರಲ್ಲಿಯೂ ದಯೆದೋರುವ ನೀನು ನಮ್ಮಲ್ಲಿ ಹೀಗೆ ಉದಾಸೀನದಿಂದಿರಬಹುದೇ? ಆ ಮನುಷ್ಯರಿಗಿಂತಲೂ ನಾವು ಹೀನರೇ! ಕ್ಷಣಕಾಲವಾದರೂ ನಮ್ಮನ್ನು ನೋಡುವವಳಾಗು. ॥೩೩॥

ನಿನ್ನ ಅಡಿದಾವರೆಗಳ ಶ್ರೇಷ್ಠವಾದ ಕಾಂತಿಯಿಂದಲೇ ಜನ್ಮತಾಳಿರುವ ನಮ್ಮನ್ನು ನೀನು ಅನುಗ್ರಹಿಸದಿದ್ದರೆ ನಾವು ಜೀವಿಸುವ ಬಗೆ ಹೇಗೆ? ॥೩೪॥

ಅಮರಾನವ ಶಂಕರಪ್ರಿಯೇ ಕರುಣಾಪಾತ್ರಮಿತಿ ಸ್ಮರಾಮರಾನ್ ।
ಶರಣಂ ತವ ಪಾದಪಂಕಜಂ ನ ತದನ್ಯಚ್ಛರಣಂ ಸುರಪ್ರಿಯಂ ॥೩೫॥

ವಯಮೇವಮುಮಾರ್ಧವಿಗ್ರಹಂ ಗಿರಿಜಾಮಪ್ಯಭಯಾಯ ಸರ್ವಥಾ ।
ಶರಣಂ ಶರಣಾಯ ಕುರ್ಮಹೇ ಶರಣಂ ನಾನ್ಯದಪೇಕ್ಷಿತಂ ಖಲು ॥೩೬॥

ಅನುವಾರಮುಮಾಹರೌ ಪರಂ ಪ್ರಣತಾಃ ಸ್ಮಃ ಸ್ಮರಣೈರನುಕ್ಷಣಂ ।
ಗತಕಲ್ಮಷರಾಶಯಃ ಪುನಃ ಪ್ರಣತಾಃ ಸ್ಮಃ ಪ್ರಣತಾಃ ಪುನಃ ಪುನಃ ॥೩೭॥

ಯದಿ ದೈವತದೈವತಂ ಪ್ರಭುಂ ಭವಮಂಬಾಂ ಭವಭಾರಭೀರವಃ ।
ನ ವಯಂ ಪ್ರಣತಾಃ ಪುನಃ ಪುನಃ ನ ಕೃತಾಂತೋಽಪಿ ಕಿಮತ್ರ ನೃತ್ಯತಿ ॥೩೮॥

ಅಮಿತಾ ಪ್ರಭುತಾ ತವಾಂಬಿಕೇ ತವ ಯಾ ಸೈವ ಮಹೇಶ್ವರೇಽಪಿ ಸಾ ।
ನ ತದನ್ಯಗತಾಗತಃ ಕ್ವ ವಾ ಶರಣಂ ನಃ ಶರಣಾರ್ಥಿನಾಮಪಿ ॥೩೯॥

ಶಿವನ ಪ್ರೇಯಸಿಯೇ, ದೇವತೆಗಳಾದ ನಮ್ಮನ್ನು ನಿನ್ನ ಕೃಪೆಗೆ ಪಾತ್ರರಾದವರೆಂದು ತಿಳಿ. ನಿನ್ನ ಪಾದಕಮಲವನ್ನೇ ಈಗ ಮರೆಹೊಕ್ಕಿರುವೆವು. ಅದನ್ನು ಬಿಟ್ಟು ದೇವತೆಗಳಿಗೆ ಪ್ರಿಯವಾದ ಮತ್ತಾವ ಆಶ್ರಯವೂ ಇಲ್ಲ. ॥೩೫॥

ಈ ರೀತಿಯಲ್ಲಿ ನಾವು ಅರ್ಧನಾರೀಶ್ವರನಾದ ಪರಶಿವನನ್ನೂ ಮತ್ತು ಗಿರಿಜೆಯನ್ನೂ ಆಶ್ರಯಿಸುವೆವು. ಇದಕ್ಕಿಂತಲೂ ಬೇರೆಯಾದ ರಕ್ಷಣೋಪಾಯವು ನಮಗೆ ಯಾವುದೂ ಇಲ್ಲ. ॥೩೬॥

ಪಾರ್ವತೀಪರಮೇಶ್ವರರನ್ನು ಪ್ರತಿಕ್ಷಣದಲ್ಲಿಯೂ ಸ್ಮರಿಸಿ ನಮಸ್ಕರಿಸುವೆವು. ಅವರ ಸ್ಮರಣೆಯಿಂದ ಸಕಲ ಪಾಪಗಳನ್ನೂ ಹೋಗಲಾಡಿಸಿಕೊಂಡು, ನಾವು ಬಾರಿಬಾರಿಗೂ ಅವರನ್ನೇ ವಂದಿಸುವೆವು. ॥೩೭॥

ದೇವೇಶನಾದ ಮತ್ತು ಜಗದೊಡೆಯನಾದ ಆ ಶಿವನನ್ನೂ, ಜಗದ್ವಂದ್ಯಳಾದ ಅಂಬಿಕೆಯನ್ನೂ ನಾವು ಮತ್ತೆ ಮತ್ತೆ ನಮಸ್ಕರಿಸುತ್ತಿದ್ದೇವೆ. ಮೃತ್ಯುವಿನ ಬಾಯಿಗೆ ಎಂದೂ ನಾವು ಹೆದರುವುದಿಲ್ಲ. ॥೩೮॥

ದೇವಿಯೇ, ನಿನ್ನ ಪ್ರಭುಶಕ್ತಿಯು ಅಪಾರವಾಗಿರುವುದು. ಅದೇ ಅಪಾರವಾದ ಪ್ರಭುಶಕ್ತಿಯು ನಿನ್ನ ಪ್ರಿಯತಮನಾದ ಶಂಕರನಲ್ಲಿಯೂ ಕಂಡುಬರುವುದು.

ನ ಮಹಾಪ್ರಭುಸೇವಕಾಃ ಪರಂ ಭವದುಃಖಂ ನ ಭವಂ ಪ್ರಪೇದಿರೇ ।
ನ ಮೃಗೇಂದ್ರಗೃಹೇಷು ಕೀಕಸಾಃ ಕರಿಮುಕ್ತಾಫಲಕಂಧರೇಷ್ವಪಿ ॥೪೦॥

ಯದಿ ತೇ ಚರಣಾರವಿಂದಯೋಃ ಪ್ರಸವಃ ಕೋಽಪಿ ಸಮರ್ಪಿತಸ್ತದಾ ।
ಅಧಮೋಽಪಿ ನರೋ ಜಗತ್ಪತಿರ್ಭವತೀತ್ಯೇವ ವದಂತಿ ಸಾಧವಃ ॥೪೧॥

ಅಮರಾನತಿದೀನವತ್ಸಲೇ ಕ್ಷಣಮಪ್ಯಂಬ ವಿಲೋಕಯಾದರಾತ್ ।
ಕರುಣಾರಸಸಾರಧಾರಯಾ ದರಸಂಸಾರದವಾತುರಾನಮೋ ॥೪೨॥

ಯದಿ ತೇ ನ ವಿಲೋಕನಂ ತದಾ ಸುರತಾಯಾಮಪಿ ನಾದರೋಽಸ್ತಿ ನಃ ।
ನ ತಯಾ ಫಲಮಸ್ತಿ ಕಿಂ ತ್ವಯಾ ಗಿರಿಜೇ ಕಲ್ಪತರುಸ್ವರೂಪಯಾ ॥೪೩॥

ಹೀಗಿರುವಾಗ ಅನಾಥರಾಗಿ, ಅನ್ಯರ ಆಶ್ರಯವನ್ನು ಅಪೇಕ್ಷಿಸುತ್ತಿರುವ ನಾವು ನಿಮ್ಮಿರ್ವರನ್ನು ತೊರೆದು ಬೇರೆ ಯಾರನ್ನು ತಾನೇ ಆಶ್ರಯಿಸೋಣ? ॥೩೯॥

ಜಗದೊಡೆಯನಾದ ಶಿವನ ಭಕ್ತರು ಸಂಸಾರವನ್ನಾಗಲಿ, ಸಂಸಾರದಿಂದುಂಟಾಗುವ ದುಃಖವನ್ನಾಗಲಿ ಲಕ್ಷಿಸುವುದಿಲ್ಲ. ಸಂಸಾರನಾಶಕನಾದ ಪ್ರಭುವನ್ನು ಸತತವೂ ಸೇವಿಸುವ ಅವರಿಗೆ ಸಂಸಾರದುಃಖವು ಹೇಗೆ ತಾನೇ ಸಂಭವಿಸೀತು? ಮೃಗರಾಜನಾದ ಸಿಂಹದ ಗುಹೆಯಲ್ಲಿ ಪ್ರಾಣಿಗಳ ಮೂಳೆಗಳು ಎಂದಾದರೂ ದೊರೆಯುವುವೇ? ಅದು ಅಷ್ಟೊಂದು ಹೀನವಾದ ಪದಾರ್ಥವನ್ನು ಎಂದೂ ಬಯಸುವುದಿಲ್ಲ. ಅದು ಮಾಂಸಖಂಡಗಳಿಂದಲೂ ಮತ್ತು ಮುಕ್ತಾಫಲ (ಮುತ್ತುಗಳು) ಗಳಿಂದಲೂ ಭರಿತವಾದ ಆನೆಯ ಕುಂಭಸ್ಥಳವನ್ನೇ ಬಯಸೀತು. ಹಾಗೆಯೇ ಭಕ್ತರು ಅವರವರ ಯೋಗ್ಯತೆಗೆ ತಕ್ಕ ಫಲವನ್ನು ಹೊಂದುವರು. ॥೪೦॥

ನಿನ್ನ ಪಾದಾರವಿಂದಗಳ ಅನುಗ್ರಹವು ಲಭಿಸಿದರೆ, ಹೀನನಾದ ಮನುಷ್ಯನೂ ಸಹ ಜಗದೊಡೆಯನಾಗಬಲ್ಲನು ಎಂದು ಸತ್ಪುರುಷರು ಹೇಳುವರು. ॥೪೧॥

ದೇವಿಯೇ, ದೀನಬಂಧುವಾದ ನೀನು ನಿನ್ನ ಮುಂದೆ ನಿಂತಿರುವ ಈ ದೇವತೆಗಳನ್ನು ಕ್ಷಣಕಾಲವಾದರೂ ನೋಡುವವಳಾಗು. ದಯೆದೋರಿ ಹೀನವಾದ ಈ ಸಂಸಾರವೆಂಬ ಕಾಡುಕಿಚ್ಚಿನಲ್ಲಿ ಬಿದ್ದು, ಬೆಂದು ಬಳಲಿರುವ ನಮ್ಮನ್ನು ಉದ್ಧರಿಸು! ॥೪೨॥

ನಿನ್ನ ದರ್ಶನ ಲಾಭವೊದಗದಿದ್ದರೆ ಇಂತಹ ದೇವತ್ವವೂ ನಮಗೆ ಬೇಡ. ಈ ದೇವತ್ವವು ನಮಗೆ ಯಾವ ಫಲವನ್ನೂ ಕೊಡಲಾರದು. ಕಲ್ಪತರುವಿನಂತೆ

ತವ ವಾ ಕಿಮುಪೇಕ್ಷಯಾ ಫಲಂ ಪ್ರವಿಲಾಪೋಽಪಿ ನ ನಃ ಶ್ರುತಸ್ತ್ವಯಾ।
ಅಯಿ ಮಾತರುಮೇ ಕಿಮಾಸ್ತಿಕೇಷ್ವದಯಾಕಾರಣಮಸ್ತಿ ಶಾಂಭವಿ ॥೪೪॥

ಶಿವ ಏವ ದಯಾನಿಧಿಃ ಶಿವೇ ತವ ತಾವತ್ಕಠಿನಂ ಮನೋ ಯತಃ ।
ಅಧುನಾಪಿ ನ ದೀನವೀಕ್ಷಣಂ ಕ್ರಿಯತೇ ಸಾದರಮಂಬುಜಾನನೇ ॥೪೫॥

ಸುತಮಪ್ಯಪರಾಧಸಂಕುಲಂ ಜನನೀ ಪಾಲಯತೀತಿ ನಃ ಶ್ರುತಂ ।
ಕಿಮುನೋ ವದ ಪಾತಕಾನಿ ನಃ ತವ ನಾಮಸ್ಮರಣೇಽಪ್ಯನುಕ್ಷಣಂ ॥೪೬॥

ಬಹುತೂಲಗಿರಿಪ್ರದಾಹಕೋ ದವಲೇಶೋ ನ ಶಿವೇ ತಥೈನಸಾಂ ।
ಕುಲಮಾಶು ವಿನಾಶಮೇತ್ಯಹೋ ಶಿವನಾಮಸ್ಮರಣಾಗ್ನಿಲೇಶತಃ ॥೪೭॥

ಸಕಲೇಷ್ಟಪ್ರದಳಾದ ನಿನ್ನ ಅನುಗ್ರಹವೊಂದಿದ್ದರೆ ಉಳಿದ ಯಾವ ಅಪೇಕ್ಷೆಯೂ ನಮಗಿರುವುದಿಲ್ಲ. ॥೪೩॥

ನಮ್ಮನ್ನು ಉಪೇಕ್ಷಿಸಿದುದರಿಂದ ನಿನಗೆ ಯಾವ ಪ್ರಯೋಜನವಿರುವುದು ! ನಮ್ಮ ಆರ್ತಪ್ರಲಾಪವು ನಿನಗೆ ಕೇಳಿಬರುವುದಿಲ್ಲವೇ ! ತಾಯಿಯೇ, ದೈವಭಕ್ತಿಯುಳ್ಳ ನಮ್ಮಲ್ಲಿ ದಯೆದೋರದಿರುವುದಕ್ಕೆ ಯಾವ ಅಪರಾಧವಿರುವುದು ? ॥೪೪॥

ಪದ್ಮಮುಖಿಯಾದ ದೇವಿಯೇ, ನಿನ್ನ ಮನಸ್ಸು ಅತಿ ಕಠಿಣವಾದುದು. ಶಿವನೇ ದಯಾಸಾಗರನಾಗಿರುವಾಗ, ನೀನೂ ಸಹ ಈ ದೀನರ ಕಡೆಗೆ ಕಣ್ತೆರೆಯ ಬಾರದೇ ! ॥೪೫॥

ಮಗನು ಎಷ್ಟು ಅಪರಾಧವನ್ನೆಸಗಿದರೂ ತಾಯಿಯು ಮಾತ್ರ ಅವನನ್ನು ಕಾಪಾಡುವಳೆಂದು ನಾವು ಕೇಳಿರುತ್ತೇವೆ. ಹೀಗಿರುವಲ್ಲಿ ಸತತವೂ ನಿನ್ನ ನಾಮಾವಳಿಯನ್ನೇ ಸ್ಮರಿಸುತ್ತಿರುವ ನಮ್ಮ ಅಪರಾಧವಾದರೂ ಏನಿರುತ್ತದೆ? ಅಥವಾ ಅಪರಾಧವಿದ್ದರೂ ತಾಯಿಯಾದ ನೀನು ಅದನ್ನು ಕ್ಷಮಿಸಲಾರೆಯಾ !॥೪೬॥

ಹತ್ತಿಯಂತೆ ಹಗುರವಾದ ತರಗೆಲೆಗಳಿಂದ ಕೂಡಿರುವ ಗುಡ್ಡಗಾಡುಗಳನ್ನು ಚಿಕ್ಕದಾದ ಕಾಡುಕಿಚ್ಚೂ ಸಹ ಭಸ್ಮಮಾಡುತ್ತದೆ. ಹಾಗೆಯೇ ಚಿಕ್ಕದಾದ, ಶಿವನ ನಾಮಸ್ಮರಣೆಯೆಂಬ ಅಗ್ನಿಯು ನಮ್ಮ ಪಾಪರಾಶಿಯೆಂಬ ಹತ್ತಿಯ ಬೆಟ್ಟವನ್ನು ನಿರ್ಮೂಲವಾಗಿ ದಹಿಸಿಲ್ಲವೆ ! ॥೪೭॥

ಯದಿ ಪಾಪವಿನಾಶಸಾಧನಂ ಶಿವನಾಮಸ್ಮರಣಂ ನ ಶೈಲಜೇ ।
ವದ ತರ್ಹಿ ಕಿಮಸ್ತಿ ಸಾಧನಂ ವದ ಸತ್ಯಂ ವದ ತದ್ವಿಮರ್ಶತಃ ॥೪೮॥

ನಿಗಮೇಷ್ವಘನಾಶಸಾಧನಂ ಶಿವನಾಮಸ್ಮರಣಂ ಪರಂ ಶ್ರುತಂ ।
ತದಿದಂ ನ ಕಥಂ ವಿನಾಶಕಂ ವಿವಿಧಾಘೌಘಕುಲಸ್ಯ ಶೈಲಜೇ ॥೪೯॥

ಸಿತಭೂತಿವಿಭೂಷಣಃ ಶಿವಂ ಯದಿ ತಾವತ್ಪ್ರಣತಃ ಸ್ಮರನ್ ಮುದಾ ।
ಪ್ರಪತಂತಿ ಮಹಾಘಕೋಟಯಃ ಪುನರುತ್ಥಾನವಿವರ್ಜಿತಾಃ ಪರಂ ॥೫೦॥

ವಯಮೀಶ್ವರಲಿಂಗಪೂಜಕಾಃ ಕ್ವ ಮಹಾಪಾತಕಭೀತಿರದ್ರಿಜೇ ।
ನ ಮಹಾನಲಸಂನಿಧಿಂ ಗತೋ ಹಿಮಭೀತಃ ಪತಿತಃ ಪ್ರಧಾವತಿ ॥೫೧॥

ಕ್ಷುಧಿತೋಽಪ್ಯಮೃತಾಶನಃ ಪುಮಾನ್ ತೃಷಿತೋಽಪೀತಿ ಯಥಾತಥಾ ಶಿವೇ ।
ಶಿವಲಿಂಗಸಮರ್ಚನಪ್ರಿಯೋ ನ ಚ ದುಃಖಾಂಬುನಿಧಿಂ ಪ್ರಯಾಸ್ಯತಿ॥೫೨॥

ಶೈಲೇಂದ್ರಪುತ್ರಿಯೇ! ಶಿವನಾಮಸ್ಮರಣೆಯೇ ಪಾಪಗಳನ್ನು ನಾಶಪಡಿಸದಿದ್ದರೆ, ಅದನ್ನು ನಾಶಪಡಿಸುವ ಮತ್ತೊಂದು ವಸ್ತುವು ಲೋಕದಲ್ಲಿ ಯಾವುದಿರುವದು? ವಿಚಾರಿಸಿ ಹೇಳು. ॥೪೮॥

ಶಿವನಾಮಸ್ಮರಣೆಯಿಂದ ಪಾಪವು ನಷ್ಟವಾಗುವುದೆಂದು ವೇದಗಳು ಸಾರುತ್ತಿವೆ. ಹೀಗಿರುವಲ್ಲಿ ನಾವು ಮಾಡಿರುವ ಶಿವನಾಮಸ್ಮರಣೆಯು ನಮ್ಮ ಪಾಪರಾಶಿಗಳನ್ನು ನಾಶಪಡಿಸಲಾರದೇ! ॥೪೯॥

ಶುಭ್ರವಾದ ವಿಭೂತಿಯನ್ನು ಧರಿಸಿ, ಭಕ್ತಿಪೂರ್ವಕವಾಗಿ ಶಿವನನ್ನು ಸ್ಮರಿಸಿ ನಮಸ್ಕರಿಸಿದರೆ ಅಸಂಖ್ಯಾತವಾದ ಮಹಾಪಾತಕಗಳೂ ಸಹ, ನಾಶವಾಗುವುವಲ್ಲದೇ ಅವು ಎಂದಿಗೂ ಮತ್ತೆ ತಲೆಯನ್ನೆತ್ತಲಾರವು. ॥೫೦॥

ಶಿವಲಿಂಗವನ್ನು ಪೂಜಿಸುವ ನಮಗೆ ಪಾಪಭೀತಿಯು ಹೇಗೆ ಸಂಭವಿಸೀತು! ಚಳಿಯಿಂದ ಗಡಗಡನೆ ನಡುಗುತ್ತಿರುವವನು ಅಗ್ನಿಯ ಸಮೀಪಕ್ಕೆ ಹೋಗಿ ಚಳಿಯನ್ನು ಹೋಗಲಾಡಿಸಿಕೊಳ್ಳದೇ ಹಿಂತಿರುಗುವನೇ! ॥೫೧॥

ಅಮೃತವನ್ನು ಪಾನಮಾಡುವವನಿಗೆ ಹೇಗೆ ಹಸಿವು ಬಾಯಾರಿಕೆಗಳ ಬಾಧೆಯಿಲ್ಲವೋ, ಅದರಂತೆ ಶಿವಪೂಜೆಯಲ್ಲಿಯೇ ಆದರವುಳ್ಳ ಮನುಷ್ಯನು ದುಃಖಸಾಗರದಲ್ಲಿ ಎಂದಿಗೂ ಮುಳುಗಲಾರನು. ॥೫೨॥

ನ ಚ ಶಂಕರಪೂಜಕಾರ್ಚಕೋಽಪ್ಯಘಲೇಶಾಶ್ರಯತಾಮುಪೇತ್ಯತಃ ।
ಅಘಸಂಶ್ರಯವಾರ್ತಯಾಪಿ ವಾ ನ ವಯಂ ಶೈಲಸುತೇ ಸಮಾಪ್ಲುತಾಃ ॥೫೩॥

ಕೃಪಯಾ ಪರಯಾ ಶಿವಪ್ರಿಯೇ ತ್ವರಯಾ ಪಶ್ಯ ದಯಾಸುಧಾಕರಾನ್ ।
ಕುರು ಕಾಪಿ ನ ತಾವತಾ ಕ್ಷತಿಃ ನ ಸುಧಾರಶ್ಮಿಸಮಾನತಾ ತವ ॥೫೪॥

ಗಿರಿಜೇ ನ ಚಕೋರರಕ್ಷಕಃ ಕ್ಷಣದಾನಾಯಕ ಇತ್ಯಪಿ ಶ್ರುತಃ ।
ನ ಹಿ ತೇನ ಸ ಸೇವಿತಸ್ತಥಾ ಕೃಪಯಾ ಪಶ್ಯ ಸುರಾನ್ ಶಿವಪ್ರಿಯೇ ॥೫೫॥

ಕಿಮನಾಥಸನಾಥತಾಂ ತ್ವಯಾ ಗಿರಿಜೇ ಕರ್ತುಮನುದ್ಯಮಃ ಕೃತಃ ।
ಕಿಮನೇನ ಫಲಂ ಫಲಾರ್ಥಿನಾಂ ಕಿಮಯಂ ಧರ್ಮ ಇತಿ ಶ್ರುತಸ್ತ್ವಯಾ ॥೫೬॥

ದೇವಿಯೇ, ಶಿವನನ್ನು ಪೂಜಿಸುವವನಿಗೆ ಪಾಪಲೇಶವೂ ಸಂಬಂಧಿಸುವುದಿಲ್ಲ. ಆದುದರಿಂದ ನಮ್ಮಲ್ಲಿ ಪಾಪಸಂಚಯದ ಸುಳಿವನ್ನೇ ನೀನು ಯೋಚಿಸಬೇಡ. ॥೫೩॥

ಶಂಕರ ಪ್ರಿಯೇ, ಕೃಪಾಪೂರಿತವಾದ ದೃಷ್ಟಿಯಿಂದ ನೀನು ಒಮ್ಮೆ ನಮ್ಮ ಕಡೆ ನೋಡುವವಳಾಗು. ನಮ್ಮನ್ನು ನಿನ್ನ ದಯಾಮೃತಕ್ಕೆ ಪಾತ್ರರನ್ನಾಗಿ ಮಾಡಿಕೊ. ಇದರಿಂದ ನಿನಗೆ ಯಾವ ತೊಂದರೆಯೂ ಇರುವುದಿಲ್ಲ. ಸುಧಾಕರನಾದ ಚಂದ್ರನ ಹೋಲಿಕೆಯು ನಿನ್ನಲ್ಲಿಲ್ಲವೇ? ॥೫೪॥

ಆ ಚಂದ್ರನು ಪಿಪಾಸುಗಳಾದ ಚಕೋರಪಕ್ಷಿಗಳಿಗೆ ತನ್ನ ಅಮೃತಸಮಾನವಾದ ಚಂದ್ರಿಕೆಯನ್ನು ದಾನಮಾಡಿ ಚಕೋರರಕ್ಷಕ ಎಂಬ ಅನ್ವರ್ಥಸಂಜ್ಞೆಯನ್ನು ಪಡೆದನು. ಅದರಿಂದಲೇ ಚಂದ್ರನು ಶಿವಾನುಗ್ರಹದಿಂದ ಕ್ಷಣದಾನಾಯಕ (ರಾತ್ರಿಯ ಒಡೆಯ) ಎಂಬ ಪದವಿಯನ್ನು ಹೊಂದಿದನು. ಮತ್ತು ಶಂಕರನಿಗೆ ಪ್ರೀತಿಪಾತ್ರನಾದ ಸೇವಕನೆನಿಸಿದನು. ಹೀಗಿರಲು ಶಿವಪೂಜೆಯಲ್ಲಿ ತತ್ಪರರಾದ ನಮ್ಮನ್ನು ನೀನು ಅನುಗ್ರಹಿಸಿದುದಾದರೆ, ನೀನೂ ಸಹ ಪರಶಿವನ ಮೆಚ್ಚಿಗೆಗೆ ಪಾತ್ರಳಾಗುವೆ ಎಂಬುದನ್ನು ತಿಳಿ. ॥೫೫॥

ದೇವಿಯೇ, ನೀನು ಅನಾಥರನ್ನು ಸನಾಥರನ್ನಾಗಿ ಮಾಡಲು ಸದಾ ಪ್ರವೃತ್ತಳಾಗಿರುವೆಯಲ್ಲವೆ? ಇಷ್ಟಾರ್ಥವನ್ನು ಅಪೇಕ್ಷಿಸುವ ನಮಗೆ ಅದರಿಂದ

ನ ಭವತ್ಕೃಪಯಾ ವಿನಾ ಗತಿ ರ್ಯದಿ ಗತ್ಯಂತರಮಸ್ತಿ ನಸ್ತದಾ ।
ತವ ಮಾಸ್ತು ನಿರೀಕ್ಷಣಂ ತತಃ ಗತಿಹೀನಾನಮರಾನವಾಂಬಿಕೇ ॥೫೭॥

ಅಸ್ಮಾಕಂ ಶರಣಾಗತಾಮರಶಿರಃಕೋಟೀರಹೀರಪ್ರಭಾ
ಪಾರಾವಾರತರಂಗಸಂಗತಶಿವಾಃಕಾಂತಾಂಘ್ರಿಪಂಕೇರುಹೇ ।
ಪದ್ಮಾಯುಚ್ಛ್ರಕಮಲ್ಲಚಂಚಲತತೀ ಶ್ರೀಚಂದನಾಪಾದುಕೇ
ದುಷ್ಟಾನಿಷ್ಟನಿವಾರಕೇ ಶರಣಮಿತ್ಯನ್ಯಂ ನ ಮನ್ಯಾಮಹೇ ॥೫೮॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ದೇವಗಣಪ್ರಾರ್ಥನಂ ನಾಮ ಷಷ್ಠೋಽಧ್ಯಾಯಃ

ಯಾವ ಫಲವೂ ಲಭಿಸಲಿಲ್ಲ. ಇದನ್ನು ಧರ್ಮಮಾರ್ಗವೆಂದು ನೀನು ಭಾವಿಸುವೆಯಾ! ॥೫೬॥

ನಿನ್ನ ಕೃಪೆಯೊಂದಿಲ್ಲದಿದ್ದರೆ ನಾವು ಜೀವಿಸಲಾರೆವು. ನಿನ್ನನ್ನು ಬಿಟ್ಟು ನಮಗೆ ಬೇರೆ ಆಶ್ರಯವು ಲಭಿಸುವುದಾದರೆ, ನಿನ್ನನ್ನು ಈ ಪರಿಯಾಗಿ ಪ್ರಾರ್ಥಿಸುತ್ತಿದ್ದೆವೇ! ಆದುದರಿಂದ ನಿರ್ಗತಿಕರಾದ ಈ ದೇವತೆಗಳನ್ನು ಉದಾಸೀನಮಾಡದೆ ಕಾಪಾಡುವವಳಾಗು. ॥೫೭॥

ದೇವಿಯೇ, ನಿನ್ನ ಪಾದಕಮಲವು ಶರಣಾಗತರಾಗಿ ಬಂದ ದೇವತೆಗಳ ಕಿರೀಟಾಂತರ್ಗತವಾದ ರತ್ನಗಳ ಕಾಂತಿಯಿಂದ ಪ್ರಕಾಶಿಸುತ್ತಿರುವುದು. ಮತ್ತು ಪದ್ಮರಾಗಮಣಿಗಳ ಕಾಂತಿಯಿಂದ ಚಂಚಲವಾಗಿ ಹೊಳೆಯುವ ಶ್ರೀ ಚಂದನದ ಪಾದುಕವೂ ನಿನ್ನ ಪಾದವನ್ನು ಅಲಂಕರಿಸಿರುವುದು. ಇಂತಹ ಸುಂದರವೂ ದುಷ್ಟಾನಿಷ್ಟಗಳನ್ನು ನಿವಾರಿಸುವುದೂ ಆದ ನಿನ್ನ ಪಾದವನ್ನು ಬಿಟ್ಟು ಮತ್ತಾವುದನ್ನೂ ನಾವು ರಕ್ಷಕಗಳೆಂದು ನಂಬಲಾರೆವು. ॥೫೮॥

ಇಲ್ಲಿಗೆ ಶ್ರೀ ಶಿವರಹಸ್ಯದಲ್ಲಿ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ದೇವತೆಗಳ ಪ್ರಾರ್ಥನೆ ಎಂಬ ಆರನೆಯ ಅಧ್ಯಾಯವು ಕೊನೆಗಂಡಿತು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಸಪ್ತಮೋಽಧ್ಯಾಯಃ

॥ ವ್ಯಾಸ ಉವಾಚ ॥

ಇತಿ ವೃಂದಾರಕಾಃ ಸ್ತುತ್ವಾ ಕೃತಾಂಜಲಿಪುಟಾ ಮುಹುಃ ।
ಉತ್ಪಶ್ಯಂತೋ ವಿಮಾನಾಗ್ರಂ ನನೃತುಃ ಸ್ವಸುಹೃದ್ಗಣೈಃ ॥೧॥

ತತಃ ಶಿವಾಪದಾಂಭೋಜಪ್ರಭಾಧಾರಾನುಲೋಕನಂ ।
ಕೃತ್ವಾ ಕೃತಾರ್ಥತಾಂ ಪ್ರಾಪ್ಯ ಪ್ರಣತಾಸ್ತೇ ಮುಹುಸ್ತತಃ ॥೨॥

ಏಳನೆಯ ಅಧ್ಯಾಯ

ವ್ಯಾಸನು ಶಿವರಹಸ್ಯೋಪದೇಶವನ್ನು ಮುಂದುವರಿಸುತ್ತಾ ಮುನಿಗಳನ್ನು ಕುರಿತು ಹೀಗೆಂದು ಹೇಳಿದನು—ಎಲೈ ಮುನಿಗಳೇ, ದೇವತೆಗಳು ಈರೀತಿಯಲ್ಲಿ ಅಂಬಿಕೆಯನ್ನು ವಿಧವಿಧವಾಗಿ ಸ್ತುತಿಸಿ ಅಂಜಲಿಬದ್ಧರಾಗಿ, ದೇವಿಯು ಕುಳಿತಿರುವ ವಿಮಾನದ ಅಗ್ರಭಾಗವನ್ನು ನೋಡುತ್ತಾ, ತಮ್ಮ ಮಿತ್ರವೃಂದದೊಂದಿಗೆ ಕೂಡಿ ನರ್ತನಮಾಡಿದರು. ॥೧॥

ಬಳಿಕ ಗಿರಿಜೆಯ ಅನುಗ್ರಹದಿಂದ ಲಭಿಸಿದ ದೇವಿಯ ಅಡಿದಾವರೆಗಳ ಪ್ರಭಾರಾಶಿಯನ್ನು ನೋಡಿ, ತಾವು ಧನ್ಯರಾದೆವೆಂದು ಭಾವಿಸಿ ಪುನಃ ಪುನಃ ಗೌರಿಯನ್ನು ನಮಸ್ಕರಿಸಲಾರಂಭಿಸಿದರು. ॥೨॥

ತತಃ ಪ್ರಚಲಿತಂ ತಾವತ್ಸ್ವರ್ಗಲೋಕಮತೀತ್ಯ ತತ್ ।
ಬ್ರಹ್ಮಲೋಕಂ ವಿಷ್ಣುಲೋಕಂ ಕೈಲಾಸಮಗಮತ್ತತಃ ॥೩॥

ತದಾನೀಮಮರಾಃ ಸರ್ವೇ ಪರಸ್ಪರವಿಲೋಕನೈಃ ।
ಪರಿಶ್ರಾಂತಾಶ್ಚ ತುಷ್ಟಾಸ್ತೇ ವಾರ್ತಾಂ ಚಕ್ರುರ್ಯಥೋಚಿತಾಂ ॥೪॥

ಪಶ್ಯಂತು ಗತಮೇವೇದಂ ವಿಮಾನಮತಿಸತ್ವರಂ ।
ತನ್ನಾಸ್ಮದ್ದೃಷ್ಟಿವಿಷಯಸ್ತತ್ಕಾಂತಿರ್ದೃಶ್ಯತೇ ಸುರಾಃ ॥೫॥

ತಪಃ ಫಲಿತಮಸ್ಮಾಕಂ ತದ್ಧಾರಾವೀಕ್ಷಣಾದಪಿ ।
ದ್ರಷ್ಟವ್ಯಂ ಕಥಮಸ್ಮಾಭಿಶ್ಶಿವಾಚರಣಪಂಕಜಂ ॥೬॥

ತದ್ಧಾರಾದರ್ಶನೇನೈವ ಕೃತಾರ್ಥಾಃ ಪ್ರಮಥಾ ಅಪಿ ।
ಅಸ್ಮಾಕಂ ತತ್ರ ಕಾ ವಾರ್ತಾ ತಾವತೈವ ಕೃತಾರ್ಥತಾ ॥೭॥

ತರುವಾಯ ಮೇರುವಿನ ಪ್ರದೇಶವನ್ನು ಬಿಟ್ಟು ಮುಂದಕ್ಕೆ ತೆರಳಿದ ಆ ವಿಮಾನವು ಸ್ವರ್ಗಲೋಕವನ್ನೂ, ಹಾಗೆಯೇ ಬ್ರಹ್ಮಲೋಕವನ್ನೂ, ಅನಂತರ ವಿಷ್ಣುಲೋಕವನ್ನೂ ಅತಿಕ್ರಮಿಸಿ ಕೈಲಾಸವನ್ನು ಸೇರಿತು. ||೩||

ಆಗ ಪಾರ್ವತಿಯ ದರ್ಶನದಿಂದ ಸಂತೋಷಗೊಂಡ ದೇವತೆಗಳು, ಸ್ವಲ್ಪಕಾಲ ವಿಶ್ರಾಂತಿಪಡೆದು ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ತಮ್ಮೊಳಗೇ ಹೀಗೆ ಮಾತನಾಡತೊಡಗಿದರು. ||೪||

ಎಲೈ ದೇವತೆಗಳಿರಾ, ಅತ್ತ ನೋಡಿರಿ. ಈ ವಿಮಾನವು ಜಾಗ್ರತೆಯಾಗಿ ಮುಂದಕ್ಕೆ ಹೊರಟೇ ಹೋಯಿತು, ಈಗ ಅದು ನಮ್ಮ ದೃಷ್ಟಿಪಥದಿಂದ ದೂರವಾಗಿರುವುದು. ಆದರೂ ಅದರ ಪ್ರಭೆಯು ಮಾತ್ರ ಇನ್ನೂ ಕಾಣಿಸುತ್ತಲೇ ಇರುವುದು. ||೫||

ಗೌರಿಯ ಪಾದದರ್ಶನದಿಂದಲೂ, ವಿಮಾನದ ಆ ಪ್ರಭೆಯನ್ನು ನೋಡುವುದರಿಂದಲೂ, ನಮ್ಮ ತಪಸ್ಸು ಸಫಲವಾಯಿತು. ಇನ್ನು ನಾವು ಗಿರಿಜೆಯ ಪಾದಕಮಲವನ್ನು ಮತ್ತೆ ನೋಡುವ ಬಗೆ ಹೇಗೆ? ||೬||

ಆ ಪ್ರಮಥಗಣಗಳೂ ಕೂಡ ಪಾರ್ವತಿಯ ಪಾದಕಮಲಗಳ ಕಾಂತಿಯನ್ನು ನೋಡಿಯೇ ಧನ್ಯರಾಗುತ್ತಾರೆ. ಹಾಗಿರುವಾಗ ನಾವು ಆ ದೇವಿಯು ಇದ್ದಲ್ಲಿಗೆ

ಯತ್ಪಾದಪದ್ಮರಜಸಃ ಪ್ರಸಾದೇನ ಜಗತ್ತ್ರಯಂ ।
ಸಮುತ್ಪನ್ನಮಿದಂ ದೇವಾಃ ಸಮುತ್ಪನ್ನಾಸ್ತದದ್ಭುತಂ ॥೮॥

ತದ್ಧಾರಾಪ್ರಭಯಾ ಛನ್ನಃ ಸುರಲೋಕೋಽತಿಪಾವನಃ ।
ಸತ್ಯಲೋಕೋಽಪಿ ವೈಕುಂಠೋಽಪ್ಯಯಮತ್ಯಂತಪಾವನಃ ॥೯॥

ಅತಃ ಪರಮಿಹಾಸ್ಮಾಕಮಗ್ರೇಽಪಿ ಕುಶಲಂ ಖಲು ।
ತತ್ಪಾದಪ್ರಭಯಾ ಸರ್ವೇಽಪ್ಯಾವೃತಾಃ ಸ್ಮೋ ವಯಂ ಕ್ಷಣಂ ॥೧೦॥

ಕಿಂ ಕಿಂ ಪುಣ್ಯಂ ಪುರಾ ಚೀರ್ಣಂ ನ ವಿದ್ಮಸ್ತತ್ಫಲೇನ ತತ್ ।
ಅನೇನಾನುಮಿತಂ ದೇವಾಃ ತದ್ಧಾರಾಮಂಡಲೇನ ಹಿ ॥೧೧॥

ಹೋಗುವ ಬಗೆ ಹೇಗೆ? ಆದುದರಿಂದ ಇಷ್ಟು ದರ್ಶನದಿಂದಲೇ ನಾವು ಕೃತಾರ್ಥರಾಗಿರುವುವೆಂದು ತಿಳಿಯಬೇಕು. ||೭||

ಎಲೈ ದೇವತೆಗಳಿರಾ, ಆ ದೇವಿಯ ಪಾದಕಮಲಗಳ ಧೂಳಿಯಿಂದಲೇ ಲೋಕತ್ರಯಗಳೂ ಮತ್ತು ದೇವತೆಗಳೂ ಜನ್ಮವನ್ನು ತಾಳಿದರು. ಇದು ಅತ್ಯಂತ ವಿಚಿತ್ರವಲ್ಲವೆ! ||೮||

ದೇವಿಯ ಪಾದಪದ್ಮಗಳಿಂದ ಧಾರಾಕಾರವಾಗಿ ಹೊರಹೊಮ್ಮುವ ಕಾಂತಿಯಿಂದ ಶ್ರೇಷ್ಠವಾದ ದೇವಲೋಕವೂ, ಸತ್ಯಲೋಕವೂ ನಮ್ಮ ಮುಂದೆ ಕಾಣಿಸುತ್ತಿರುವ ಈ ವೈಕುಂಠಲೋಕವೂ ಮುಚ್ಚಿಹೋಗಿರುತ್ತವೆ. ||೯||

ಆದುದರಿಂದ ನಮಗೆ ಇನ್ನುಮುಂದೆ ನಿರಂತರವೂ ಸೌಖ್ಯವು ಲಭಿಸುವುದು. ದೇವಿಯ ಪಾದಗಳ ಕಾಂತಿಯಿಂದ ನಾವೆಲ್ಲರೂ ಕ್ಷಣಕಾಲ ಆವರಿಸಲ್ಪಟ್ಟಿದ್ದೇವೆ. ||೧೦||

ಎಲೈ ದೇವತೆಗಳಿರಾ, ನಾವು ಈ ಹಿಂದೆ ಯಾವ ಯಾವ ಪುಣ್ಯಕರ್ಮಗಳನ್ನು ಆಚರಿಸಿದ್ದೆವೆಂಬುದನ್ನು ಇದುವರೆಗೂ ತಿಳಿದಿರಲಿಲ್ಲ. ಆದರೆ ನಮ್ಮ ಸುತ್ತಲೂ ಆವರಿಸಿರುವ ಈ ಕಾಂತಿಯ ಸಮುದಾಯದಿಂದ ನಾವು ಎಂತಹ ಸುಕೃತಿಗಳೆಂಬುದನ್ನು ತಿಳಿಯಲು ಸಮರ್ಥರಾಗಿರುವೆವು. ||೧೧||

ಅಸ್ಮಾಕಮಪಿ ಗಾತ್ರಾಣಿ ಪವಿತ್ರಾಣ್ಯದ್ಯ ಧಾರಯಾ ।
ಶಿವಾಚರಣಕಾಂತೀನಾಂ ಸಾ ಧಾರಾ ಖಲು ದುರ್ಲಭಾ ॥೧೨॥

ದುರ್ಲಭಾ ದುರ್ಲಭಾ ಧಾರಾ ಶಿವಾಚರಣಕಾಂತಿಜಾ ।
ಸಾ ಪಾವನಂ ಪಾವನಾನಾಂ ಶೋಭನಾನಾಂ ಚ ಶೋಭನಂ ॥೧೩॥

ಅಸ್ಮನ್ಮಣಿಕಿರೀಟಾನಾಂ ತದ್ಧಾರಾಕಾಂತಿಸಂಗಮಾತ್ ।
ಕಾಂತಿಃ ಪ್ರವೃದ್ಧಾ ಸಂಗೇನ ತೇನ ಕಿಂ ಚಿತ್ರಮದ್ಭುತಂ ॥೧೪॥

ಹೇಮ್ನಃ ಪಾವಕಯೋಗೇನ ಕಾಂತಿವೃದ್ಧಿರ್ಯಥಾ ತಥಾ ।
ತದ್ಧಾರಾಸಂಗಮಾದ್ವೃದ್ಧಾ ಕಿರೀಟಮಣಿಭೂ ಪ್ರಭಾ ॥೧೫॥

ಇತ್ಯನ್ಯೋನ್ಯಂ ವದಂತಸ್ತೇ ತದ್ವಾರ್ತಾಮೇವ ತೇ ಪುನಃ ।
ಕುರ್ವಂತಃ ಸುಖಮಾಪನ್ನಾಸ್ತೇ ಹರ್ಷಾಶ್ರುಸಮಾವೃತಾಃ ॥೧೬॥

ಈ ಕಾಂತಿಯಿಂದ ನಮ್ಮ ದೇಹಗಳು ಪರಿಶುದ್ಧವಾದುವು. ಪಾರ್ವತಿಯ ಪಾದಗಳಿಂದ ಉಂಟಾದ ಆ ಕಾಂತಿಯ ಪ್ರವಾಹವು ನಮಗೆ ಇನ್ನು ದುರ್ಲಭ ವಲ್ಲವೇ." ॥೧೨॥

ಗಿರಿಜೆಯ ಪಾದಗಳಿಂದುಂಟಾದ ಕಾಂತಿಯ ಸ್ಪರ್ಶವು ಅತ್ಯಂತ ದುರ್ಲಭ ಎಂಬುದು ನಿಜ. ಅದು ಪವಿತ್ರವಾದ ವಸ್ತುಗಳಲ್ಲೆಲ್ಲಾ ಅತ್ಯಂತ ಪವಿತ್ರವೂ, ಮಂಗಳಕರವಾದ ವಸ್ತುಗಳಲ್ಲಿ ಅತ್ಯಂತ ಮಂಗಳಕರವೂ ಆಗಿರುತ್ತದೆ. ॥೧೩॥

ದೇವಿಯ ಪಾದಗಳ ಕಾಂತಿಯ ಸಂಬಂಧದಿಂದ ನಮ್ಮ ಕಿರೀಟರತ್ನಗಳ ಕಾಂತಿಯು ಇಮ್ಮಡಿಯಾಯಿತು. ಈ ವಿಚಿತ್ರವಾದ ವಿಷಯವನ್ನು ಏನೆಂದು ಹೇಳೋಣ ? ॥೧೪॥

ಪುಟಕ್ಕೆ ಹಾಕಿದ ಸುವರ್ಣದ ಕಾಂತಿಯು ಹೇಗೆ ಮೊದಲಿಗಿಂತಲೂ ಹೆಚ್ಚು ವೃದ್ಧಿಯನ್ನೈದುವುದೋ, ಅದರಂತೆ ಪಾರ್ವತಿಯ ಪಾದಕಾಂತಿಯ ರೇಖೆಯ ಸಂಬಂಧದಿಂದ ನಮ್ಮ ಕಿರೀಟದಲ್ಲಿರುವ ರತ್ನಗಳಿಂದುಂಟಾದ ಕಾಂತಿಯು ಏಳಿಗೆ ಯನ್ನು ಪಡೆಯಿತು. ॥೧೫॥

ಈ ರೀತಿಯಲ್ಲಿ ಪರಸ್ಪರವಾಗಿ ಮಾತನಾಡುತ್ತಾ ಆನಂದಬಾಷ್ಪಗಳಿಂದ ಕೂಡಿದವರಾಗಿ ಮತ್ತೆ ಮತ್ತೆ ದೇವಿಯನ್ನೇ ಧ್ಯಾನಿಸುತ್ತಿದ್ದರು. ॥೧೬॥

ತತಃ ಪರಂ ತದ್ವಿಮಾನಂ ಕೈಲಾಸಮಗಮದ್ದ್ವಿಜಾಃ ।
ಅವತೀರ್ಯ ತತೋ ಗೌರೀ ಮೇನಕಾಮಾಹ ಸಾದರಂ ॥೧೭॥

ಚಿತ್ರಾಣಿ ಮಂದಿರಾಣ್ಯತ್ರ ಸುಂದರಾಸ್ತರವಃ ಪರಂ ।
ಯೇ ತೇ ಹಾರವಿಹಾರಾರ್ಹಾಃ ಪ್ರದೇಶಾಃ ಸುರದುರ್ಲಭಾಃ ॥೧೮॥

ನ ದೃಷ್ಟಾಸ್ತೇ ತ್ವಯಾ ಪೂರ್ವಮಧುನಾ ನಾತ್ರ ಶಂಕರಃ ।
ತತಃ ಪ್ರಪಶ್ಯ ತಚ್ಚಿತ್ರಂ ಗಿರಿರಾಜಸಮನ್ವಿತಾ ॥೧೯॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಮೇನಯಾ ಗಿರಿಣಾ ಸಹ ।
ಕೈಲಾಸದ್ವಾರಸನ್ನದ್ಧಾಂ ವೇದಿಕಾಂ ಕಾಂತಿಸಂವೃತಾಂ ॥೨೦॥

ವಿಚಿತ್ರರತ್ನರಚಿತಾಂ ವೇದಿಕಾಂ ವೀಕ್ಷ್ಯ ಪರ್ವತಃ ।
ಅತಿವಿಸ್ಮಯಮಾಪನ್ನಃ ತದ್ರತ್ನಪ್ರಭಯಾ ವೃತಃ ॥೨೧॥

ಬಳಿಕ ದೇವಿಯ ವಿಮಾನವು ಕೈಲಾಸವನ್ನು ಸೇರಿತು. ಅಲ್ಲಿ ಗಿರಿಜೆಯು ವಿಮಾನದಿಂದ ಕೆಳಕ್ಕಿಳಿದು ಮೇನಕೆಯನ್ನು ಕುರಿತು ಪ್ರೀತಿಪುರಃಸ್ಸರವಾಗಿ ಹೀಗೆಂದಳು. ॥೧೭॥

"ಜನನಿಯೇ, ಈ ಪ್ರದೇಶದಲ್ಲಿ ವಿಚಿತ್ರವಾದ ಗೃಹಗಳೂ, ಮನೋಹರವಾದ ವೃಕ್ಷಗಳೂ ಕಾಣುತ್ತಿರುವುವು. ಹೂವಿನ ಹಾರಗಳಿಂದ ಅಲಂಕರಿಸಲ್ಪಟ್ಟು, ವಿಹಾರಕ್ಕೆ ಯೋಗ್ಯವಾದ ಈ ಪ್ರದೇಶಗಳು ದೇವತೆಗಳಿಗೂ ದುರ್ಲಭವಲ್ಲವೇ! ॥೧೮॥

ಹಿಂದೆ ನೀನು ಇಷ್ಟೊಂದು ಸುಂದರವಾದ ಪ್ರದೇಶವನ್ನು ನೋಡಲಿಲ್ಲ. ಈಗ ಇಲ್ಲಿ ಶಂಕರನು ಇಲ್ಲದಿರುವುದರಿಂದ ತಂದೆಯಾದ ಹಿಮವಂತನೊಂದಿಗೆ ಈ ಪ್ರದೇಶಗಳನ್ನು ಈಗಲೇ ನೋಡುವವಳಾಗು." ॥೧೯॥

ಎಂದು ಗಿರಿಜೆಯು ಹೇಳಿದ ಈ ಮಾತನ್ನು ಕೇಳಿ, ಮೇನಕೆಯು ಪತಿಯಾದ ಹಿಮವಂತನಿಂದೊಡಗೂಡಿ, ಕೈಲಾಸದ ಬಾಗಿಲಿನಲ್ಲಿ ರಚಿತವಾಗಿರುವ ಕಾಂತಿಯುಕ್ತವಾದ ವೇದಿಕೆಯನ್ನು (ಜಗುಲಿಯನ್ನು) ನೋಡಿದಳು. ॥೨೦॥

ಹಿಮವಂತನು ನಾನಾವಿಧವಾದ ರತ್ನಗಳಿಂದ ನಿರ್ಮಿಸಲ್ಪಟ್ಟ ಆ ವೇದಿಕೆಯನ್ನು ನೋಡಿ, ರತ್ನಗಳ ಕಾಂತಿಯಿಂದ ಸುತ್ತಲೂ ಆವರಿಸಲ್ಪಟ್ಟವನಾಗಿ ಅತ್ಯಾಶ್ಚರ್ಯಗೊಂಡವನಾದನು. ॥೨೧॥

ಕಿಮಾಶ್ಚರ್ಯಮಿದಂ ಗೌರಿ ರತ್ನಾನ್ಯೇತಾದೃಶಾನಿ ನ ।
ರತ್ನಾಕರೇಽಪಿ ರಮ್ಯಾಣಿ ದೃಷ್ಟಪೂರ್ವಾಣಿ ನ ಧ್ರುವಂ ॥೨೨॥

ಕೈಲಾಸನಗರದ್ವಾರವೇದಿಕಾರತ್ನಕಾಂತಿಭಿಃ ।
ಕಾಂತಮೇತಚ್ಛರೀರಂ ಮೇ ದೃಷ್ಟಪೂರ್ವಮಿದಂ ತು ನ ॥೨೩॥

ಕಾಂತಾಂ ಫಣಿಫಣಾರತ್ನಕಾಂತಿಂ ಧೂಲೀಕರೋತ್ಯತಃ ।
ವೇದಿಕಾ ಸಂಗತಾ ಸೇಯಂ ವಿಮಾನೇನಾಪಿ ಸಂಗತಾ ॥೨೪॥

ಏತತ್ಕಾಂತಿಸಮಾಕ್ರಾಂತಂ ವಿಮಾನಮಿಹ ರಾಜತೇ ।
ಅತ್ಯಾಶ್ಚರ್ಯಮಿದಂ ದೃಷ್ಟಮಗ್ರೇ ಕಿಂ ಕಿಂ ಭವಿಷ್ಯತಿ ॥೨೫॥

ತೇ ಧನ್ಯಾಃ ಪ್ರಮಥಾಃ ಸರ್ವೇ ವೇದಿಜಾಕಾಂತಿಸಂವೃತಾಃ ।
ನಿತ್ಯಮತ್ರ ಪ್ರಭಾರೂಪಾಃ ಸ್ವಾನುರೂಪವಿವರ್ಜಿತಾಃ ॥೨೬॥

ಹೀಗೆ ಆಚ್ಚರಿಗೊಂಡ ಹಿಮವಂತನು ಗಿರಿಜೆಯನ್ನು ಕುರಿತು ಹೀಗೆಂದು ಹೇಳಿದನು. "ಎಲೌ ಗೌರಿಯೇ, ಇದೇನು ಆಶ್ಚರ್ಯ! ಈ ರೀತಿಯಾದ ರತ್ನಗಳು ಇನ್ನೆಲ್ಲಿಯೂ ಇರುವುದಿಲ್ಲ. ರತ್ನಗಳಿಗೆ ಮಾತೃಸ್ಥಾನವಾದ ಸಮುದ್ರದಲ್ಲಿಯೂ ಎಂದೂ ಈ ರೀತಿಯಾದ ರತ್ನಗಳನ್ನು ನಾನು ನೋಡಲಿಲ್ಲವಲ್ಲ! ॥೨೨॥

ಕೈಲಾಸನಗರದ ಬಾಗಿಲಿನಲ್ಲಿರುವ ಈ ವೇದಿಕೆಗಳ ರತ್ನಗಳ ಕಾಂತಿಯಿಂದ ನನ್ನ ಶರೀರವು ಅತಿ ರಮಣೀಯವಾಗಿ ಕಾಣಿಸುತ್ತದೆ. ಹಿಂದೆ ಎಂದೂ ನನ್ನ ಶರೀರವು ಈ ರೀತಿಯಾಗಿ ಪ್ರಕಾಶಿಸಿರಲಿಲ್ಲ. ॥೨೩॥

ವೇದಿಕೆಯ ಈ ಕಾಂತಿಯು ನಾಗರತ್ನದ ಕಾಂತಿಯನ್ನೂ ತಿರಸ್ಕರಿಸುತ್ತಲಿರುವುದು. ಈ ರೀತಿಯಲ್ಲಿ ಶೋಭಾಯಮಾನವಾಗಿರುವ ಈ ವೇದಿಕೆಯ ಮೇಲೆ ವಿಮಾನವು ಬಂದಿಳಿದಿರುವುದು. ॥೨೪॥

ವಿಮಾನವೂ ಸಹ ಈ ವೇದಿಕೆಯ ಕಾಂತಿಯಿಂದ ಯುಕ್ತವಾಗಿ ಅತಿ ಸುಂದರವಾಗಿ ಕಂಗೊಳಿಸುತ್ತಿದೆ. ಇದು ಅತ್ಯಾಶ್ಚರ್ಯ. ಇನ್ನೂ ಮುಂದೆ ಹೋದರೆ ಇದಕ್ಕಿಂತಲೂ ಕಾಂತಿಯುಕ್ತವಾದ ಅನೇಕ ಪದಾರ್ಥಗಳು ಕಾಣಿಸುವುವೋ ಏನೋ! ॥೨೫॥

ವೇದಿಕೆಯ ಕಾಂತಿಯಿಂದ ಸದಾ ಆವೃತರಾದ ಈ ಪ್ರಮಥಗಣಗಳೆಲ್ಲರೂ

ಅಹೋ ಮಹದಿದಂ ಭಾಗ್ಯಂ ದೃಷ್ಟಮೇವಮಿದಂ ಸ್ಥಲಂ ।
ಅಸ್ಮಾಭಿರೀದೃಶಂ ಸ್ಥಾನಂ ನ ಶ್ರುತಂ ಚ ಕದಾಚನ ॥೨೭॥

ಇತ್ಯುಕ್ತಂ ಗಿರಿವಾಕ್ಯಂ ಸಾ ಶ್ರುತ್ವಾ ಗೌರೀ ಶಿವಪ್ರಿಯಾ ।
ತತ್ರೋಪವಿಷ್ಟಾ ತೇನಾಪಿ ಮೇನಯಾಪಿ ಸಹಾದರಾತ್ ॥೨೮॥

ತತಃ ಪರಂ ಮೇನಕಾ ಸಾ ಸುಂದರೈಃ ಸುರಭೂರುಹೈಃ ।
ಫಲಾನ್ಯಾದಾಯ ರಮ್ಯಾಣಿ ಗೌರೀಮಾಹ ಮನೋಹರಂ ॥೨೯॥

ಏತಾದೃಶಾನಿ ದೃಷ್ಟಾನಿ ನ ಫಲಾನಿ ಪುರಾ ಮಯಾ ।
ತರವೋಽಪಿ ತಥಾ ದೃಷ್ಟಾಃ ಪ್ರಕೃಷ್ಟಾಸ್ತುಷ್ಟಿಹೇತವಃ ॥೩೦॥

ಧನ್ಯರು! ಅವರು ಇಲ್ಲಿ ತಮ್ಮ ನೈಜವಾದ ಕಾಂತಿಯನ್ನು ಮುಚ್ಚಿ ವೇದಿಕೆಯ ಕಾಂತಿಯಿಂದ ಯುಕ್ತವಾದ ತಮ್ಮ ಸೊಬಗಿನಿಂದಲೇ ವಿರಾಜಿಸುತ್ತಿರುವರು. ॥೨೬॥

ಇಂತಹ ಕಾಂತಿಯುತವಾದ ಪ್ರದೇಶವನ್ನು ನಾವು ನೋಡಿದುದೇ ನಮ್ಮ ಭಾಗ್ಯವಲ್ಲವೇ! ಇಷ್ಟು ಸುಂದರವಾದ ಮತ್ತು ಕಾಂತಿಯುಕ್ತವಾದ ಪ್ರದೇಶವಿರುವುದೆಂದು ನಾವು ಇದುವರೆಗೂ ಕೇಳಿರಲಿಲ್ಲ." ॥೨೭॥

ಹಿಮವಂತನು ಹೀಗೆಂದು ಹೇಳಲು ಅದನ್ನು ಕೇಳಿ, ಶಿವನ ಪ್ರಿಯತಮೆಯಾದ ಗಿರಿಜೆಯು, ಅವನೊಂದಿಗೂ ಮತ್ತುಮೇನಕೆಯೊಂದಿಗೂ ವಿಶ್ವಾಸಪೂರ್ವಕವಾಗಿ ಆ ವೇದಿಕೆಯ ಮೇಲೆ ಕುಳಿತವಳಾದಳು. ॥೨೮॥

ಬಳಿಕ ಮೇನಕೆಯು ಅಲ್ಲಿದ್ದ ಸುಂದರವಾದ ಕಲ್ಪವೃಕ್ಷಗಳಿಂದ ರುಚಿಕರವಾದ ಹಣ್ಣುಗಳನ್ನು ತಂದು, ಗಿರಿಜೆಯನ್ನು ಕುರಿತು ಅಕ್ಕರೆಯಿಂದ ಹೀಗೆಂದಳು. ॥೨೯॥

"ವತ್ಸೇ! ಇಷ್ಟು ರುಚಿಕರವಾದ ಹಣ್ಣುಗಳನ್ನು ನಾನು ಹಿಂದೆ ಎಂದೂ ತಿಂದಿರಲಿಲ್ಲ. ಮತ್ತು ಇಷ್ಟೊಂದು ಸಂತೋಷಜನಕವಾದ ವೃಕ್ಷಗಳನ್ನೂ ನಾನು ಎಲ್ಲೂ ಕಾಣೆನು. ॥೩೦॥

ಏತದ್ದರ್ಶನಮಾತ್ರೇಣ ಸಂಪೂರ್ಣಮುದರಂ ಶಿವೇ ।
ಅತಃ ಪರಂ ಭಕ್ಷಣೇಚ್ಛಾ ಜಾತು ಗೌರಿ ನ ಜಾಯತೇ ॥೩೧॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಗೌರೀ ತಾಮಾಹ ಮೇನಕಾಂ ।
ಅತ್ರಾಪ್ಯದ್ಭುತಬುದ್ಧಿಸ್ತೇ ತಥಾ ನ ಮಮ ಜಾಯತೇ ॥೩೨॥

ಇತ್ಯುಕ್ತ್ವಾ ಪರಿತೋ ದೃಷ್ಟ್ವಾ ತಾನ್ಯಾಸ್ವಾದ್ಯ ಫಲಾನಿ ಚ ।
ಮಂದಂ ಮಂದಂ ಪ್ರವಿಷ್ಟಾ ಸಾ ಗಿರಿಜಾ ಶಿವಮಂದಿರಂ ॥೩೩॥

ತತ್ರಾದ್ಭುತಾನಿ ದೃಷ್ಟಾನಿ ಮಂದಿರಾಣಿ ಬಹೂನ್ಯಪಿ ।
ರತ್ನೈರೇವ ವಿಚಿತ್ರೈಸ್ತೈಃ ಕೃತಾನಿ ಸುಮನೋಹರಂ ॥೩೪॥

ಸುಧಾಪ್ರವಾಹಸಂವೀತಾಃ ಕುಲ್ಯಾಸ್ತುಲ್ಯಾ ನ ಕೈರಪಿ ।
ತತ್ತೀರಕಲ್ಪತರವೋಽಪ್ಯಪಾರಫಲಸಂವೃತಾಃ ॥೩೫॥

ಈ ಹಣ್ಣುಗಳ ದರ್ಶನಮಾತ್ರದಿಂದಲೇ ನನ್ನ ಹೊಟ್ಟೆಯು ತುಂಬಿ ಹೋಯಿತು. ಆದುದರಿಂದ ಇನ್ನು ಇವುಗಳನ್ನು ತಿನ್ನುವ ಇಚ್ಛೆಯೇ ನನಗಿರುವುದಿಲ್ಲ." ॥೩೧॥

ಹೀಗೆಂದು ಹೇಳಿದ ಮೇನಕೆಯ ವಚನವನ್ನು ಕೇಳಿ, ಗಿರಿಜೆಯು ಅವಳನ್ನು ಕುರಿತು ಹೀಗೆಂದಳು. "ನೀನು ಹೇಳುವ ವಿಷಯವು ಅತ್ಯಾಶ್ಚರ್ಯಕರವಾಗಿದೆ. ಆದರೆ ನನಗೆ ಇಲ್ಲಿ ಯಾವವಿಧವಾದ ಅಂತಹ ವಿಚಿತ್ರತೆಯೂ ಕಂಡುಬರುವುದಿಲ್ಲ" ಎಂದು ಹೇಳಿದಳು. ॥೩೨॥

ಮತ್ತು ಗಿರಿಜೆಯು ಸುತ್ತಲೂ ನೋಡಿ, ಆ ಹಣ್ಣುಗಳನ್ನು ತಿಂದು ಮೆಲ್ಲ ಮೆಲ್ಲನೆ ಶಿವನ ಗೃಹವನ್ನು ಪ್ರವೇಶಿಸಿದಳು. ॥೩೩॥

ಅಲ್ಲಿ ವಿಚಿತ್ರವಾದ ಚಿಕ್ಕ ಚಿಕ್ಕ ಮನೆಗಳು ಕಾಣಿಸಿಕೊಂಡವು. ಅವೆಲ್ಲವೂ ಚಿತ್ರವಿಚಿತ್ರವಾದ ರತ್ನಗಳಿಂದಲೇ ಅಂದವಾಗಿ ಕೆತ್ತಲ್ಪಟ್ಟಿದ್ದುವು. ॥೩೪॥

ಅಲ್ಲಿ ಪ್ರವಹಿಸುತ್ತಲಿದ್ದ ಅಮೃತಭರಿತವಾದ ಚಿಕ್ಕ ಚಿಕ್ಕ ನದಿಗಳು ವರ್ಣನಾತೀತವಾಗಿದ್ದುವು. ಅವುಗಳ ತೀರದಲ್ಲಿದ್ದ ಕಲ್ಪವೃಕ್ಷಗಳು ಅಸಂಖ್ಯಾತವಾದ ಫಲಗಳಿಂದ ತುಂಬಿದ್ದವು. ॥೩೫॥

ಅಂಬಾಗಮನಕಾಲಜ್ಞೈಃ ಪ್ರಹೃಷ್ಟೈಸ್ತರುಭಿಃ ಸದಾ ।
ಪುಷ್ಪವೃಷ್ಟಿಃ ಕೃತಾ ಕಾಪಿ ಯಾ ನ ಪೂರ್ವಮಭೂನ್ಮುಹುಃ ॥೩೭॥

ತತ್ರ ತತ್ತರುಮೂಲೇಷು ರತ್ನಲಿಂಗಾನಿ ಕೋಟಿಶಃ ।
ದೃಷ್ಟ್ವಾ ಸಾ ಪೂಜಯಾಮಾಸ ಮರಂದ್ಯೈಃ ಕುಸುಮೈರಪಿ ॥೩೮॥

ತನ್ಮಧ್ಯೇ ಮಂಡಪಸ್ತಾವದಖಂಡಮಣಿಮಂಡಿತಃ ।
ಯೋಜನಾಯುತವಿಸ್ತೀರ್ಣಸ್ತಾವದ್ಯೋಜನಮುನ್ನತಃ ॥೩೯॥

ತತ್ರೈವ ಪ್ರತಿಮಾಃ ಕಾಶ್ಚಿದಪೂರ್ವಾಶ್ಚಾತಿಸುಂದರಾಃ ।
ಹೃಷ್ಟಾಃ ಸಹಾಸಾಶ್ಚಾನ್ಯೋನ್ಯಂ ಗಾನತಾನವಿಜೃಂಭಿತಾಃ ॥೪೦॥

ವೃಕ್ಷಗಳು ಪಾರ್ವತಿಯ ಸಮಾಗಮದ ಸಮಯವನ್ನು ತಿಳಿದುಕೊಂಡು ಆನಂದಭರಿತಗಳಾಗಿರುವುವೋ ಎಂಬಂತೆ, ಪುನಃ ಪುನಃ ದೇವಿಯ ಮೇಲೆ ಪುಷ್ಪ ವೃಷ್ಟಿಯನ್ನು ಸುರಿಸಿದುವು. ಅದಕ್ಕೆ ಪೂರ್ವದಲ್ಲಿ ಎಂದೂ ಈರೀತಿಯಾದ ಪುಷ್ಪ ವೃಷ್ಟಿಯು ಆಗಿರಲಿಲ್ಲ. ॥೩೭॥

ಆ ವೃಕ್ಷಗಳ ಕೆಳಭಾಗದಲ್ಲಿ ಅಸಂಖ್ಯಾತವಾದ ಮತ್ತು ರತ್ನಖಚಿತವಾದ ಶಿವಲಿಂಗಗಳನ್ನು ನೋಡಿ, ಮಕರಂದಗಳಿಂದ ಘಮಘಮಿಸುತ್ತಿರುವ ಹೂವುಗಳಿಂದ ಅವುಗಳನ್ನು ಪೂಜಿಸಿದಳು. ॥೩೮॥

ಆ ರಮ್ಯನದಿಯ ಮಧ್ಯದಲ್ಲಿರುವ ಒಂದು ಮಂಟಪವು, ಮಣಿಗಳಿಂದ ಅಲಂಕರಿಸಲ್ಪಟ್ಟು ಹತ್ತುಸಹಸ್ರ ಯೋಜನಗಳಷ್ಟು ವಿಸ್ತೀರ್ಣವಾಗಿಯೂ ಅಷ್ಟೇ ಉನ್ನತವಾಗಿಯೂ ಇತ್ತು. ॥೩೯॥

ಆ ಮಂಟಪದಲ್ಲಿ ಅತ್ಯಂತ ಸುಂದರವೂ, ಅದೃಷ್ಟಪೂರ್ವಗಳೂ ಆದ ಪ್ರತಿಮೆಗಳು ಅನೇಕವಾಗಿದ್ದುವು. ಅವು ಸಂತೋಷಭರಿತಗಳಾಗಿಯೂ ಮಂದ ಹಾಸವನ್ನು ಬೀರುವುವುಗಳಾಗಿಯೂ ಇದ್ದು ಪರಸ್ಪರವಾಗಿ ನಾಟ್ಯನಾಡುವುವೋ ಎಂಬಂತೆ ಕಂಗೊಳಿಸುತ್ತಿದ್ದವು. ॥೪೦॥

ಪರ್ಯಂಕಮೇಕಂ ತತ್ರೈವ ಶತಯೋಜನಮುತ್ತಮಂ ।
ಶತಯೋಜನವಿಸ್ತೀರ್ಣಂ ಪ್ರಭಾಕೋಟಿವಿರಾಜಿತಂ ॥೪೧॥

ಮಂದಾರಪುಷ್ಪಸಂವೀತಂ ಶಯನಾರ್ಹಂ ಶಿವಸ್ಯ ತತ್ ।
ಶಿವಾವಿಹಾರಗಂಧೇನ ತತ್ಸಂವೀತಮನುತ್ತಮಂ ॥೪೨॥

ರತ್ನಸೋಪಾನಸಂಬದ್ಧಮಷ್ಟದಿಕ್ಷು ವಿಶೇಷತಃ ।
ಸೋಪಾನೇಷ್ವಪಿ ಪುಷ್ಪಾಣಿ ನೂತನಾನಿ ಕ್ಷಣೇ ಕ್ಷಣೇ ॥೪೩॥

ತಾದೃಶಂ ಮಂಚಮಾಲೋಕ್ಯ ಶೈಲೇಂದ್ರೋ ಮೇನಯಾ ಸಹ ।
ಉವಾಚ ವಚನಂ ಚಾರು ಭವಾನೀಂ ಚ ವಿಲೋಕ್ಯ ಸಃ ॥೪೪॥

ಇದಂ ಪ್ರಾಯೋ ಮಹೇಶಸ್ಯ ವಿಲಾಸಸದನಂ ಪ್ರಿಯೇ ।
ದೃಷ್ಟಮಾನಂದದಂ ಜಾತಂ ಸ್ಪೃಷ್ಟಂ ಚೇತ್ಕಿಂ ಪ್ರಯಚ್ಛತಿ ॥೪೫॥

ಆ ಮಂಟಪದ ಮಧ್ಯಭಾಗದಲ್ಲಿ ನೂರುಯೋಜನಗಳಷ್ಟು ವಿಸ್ತೀರ್ಣವೂ ನೂರುಯೋಜನಗಳಷ್ಟೇ ಉನ್ನತವೂ, ಕಾಂತಿಯುಕ್ತವೂ ಆದ ಒಂದು ಮಂಚ ವಿದ್ದಿತು. ॥೪೧॥

ಮಂದಾರಪುಷ್ಪಗಳಿಂದ ಅಲಂಕರಿಸಲ್ಪಟ್ಟ ಆ ಮಂಚದಲ್ಲಿ ಶಿವನು ಪವಡಿಸುತ್ತಿದ್ದನು. ಪವಿತ್ರವಾದ ಆ ಮಂಚವು ಪಾರ್ವತಿಯೊಂದಿಗೆ ಕ್ರೀಡಿಸುವಾಗ ಉಂಟಾದ ಸುವಾಸನೆಯಿಂದ ಸುಗಂಧಿತವಾಗಿದ್ದಿತು. ॥೪೨॥

ಮಂಚದ ಎಂಟು ಮೂಲೆಗಳಲ್ಲಿಯೂ ರತ್ನಖಚಿತವಾದ ಸೋಪಾನಗಳಿದ್ದುವು. ಆ ಸೋಪಾನಗಳ ಮೇಲೆ ಪ್ರತಿಕ್ಷಣದಲ್ಲಿಯೂ ಹೊಸ ಹೊಸದಾದ ಪುಷ್ಪಗಳು ಕಾಣುವುವು. ॥೪೩॥

ಅಂತಹ ಮಂಚವನ್ನು ನೋಡಿ ಹಿಮವಂತನು ಮೇನಕೆಯನ್ನೂ ಪಾರ್ವತಿಯನ್ನೂ ಕುರಿತು, ಮೃದುವಾದ ಮಾತುಗಳಿಂದ ಹೀಗೆಂದು ನುಡಿದನು. ॥೪೪॥

" ಪ್ರಿಯೇ, ಇದು ಪ್ರಾಯಶಃ ಶಿವನ ಕ್ರೀಡಾಗೃಹವಾಗಿರಬಹುದು. ದರ್ಶನಮಾತ್ರದಿಂದಲೇ ಈ ಮಂದಿರವು ಆತ್ಮಾನಂದವನ್ನುಂಟುಮಾಡುತ್ತಿರುವುದು.

ಗೌರೀಮನೋಹರಂ ರಮ್ಯಂ ಶಂಕರಸ್ಯ ಮನೋಹರಂ।
ಪರ್ಯಂಕಂ ದೃಷ್ಟಮದ್ಯೇದಂ ಧನ್ಯೋಽಹಂ ನಾತ್ರ ಸಂಶಯಃ॥೪೬॥

ಇದಂ ನ ದೃಷ್ಟಮಮರೈರ್ಗಂಧರ್ವೈರುರಗೈರಪಿ।
ಕಿನ್ನರೈರಪಿ ಸಿದ್ಧೈರ್ವಾ ಗಣೈರಪಿ ವಿಶೇಷತಃ ॥೪೭॥

ಏತಾದೃಶೇ ಮಣಿಮಯೇ ಪರ್ಯಂಕೇ ಶಂಕರಾಲಯೇ।
ಗೌರೀ ತಿಷ್ಠತಿ ಸಂತುಷ್ಟಾ ಶಂಕರಾನುಗ್ರಹಾತ್ಪರಂ ॥೪೮॥

ಏತಾದೃಶಂ ಸ್ಥಲಂ ತಾವದುಗ್ರಯಾಪಿ ತಪಸ್ಯಯಾ।
ನ ಲಭ್ಯತೇ ಸತ್ಯಮೇವ ನ ಕ್ವಾಪ್ಯೇತಾದೃಶಂ ಸ್ಥಲಂ ॥೪೯॥

ಅಸ್ಮತ್ಪ್ರೀತಿಪ್ರದಾನಾಯ ಗೌರ್ಯಾ ತಾವತ್ಪ್ರದರ್ಶಿತಂ।
ನಾಧುನಾ ಶಂಕರೋಽಸ್ತೀತಿ ತಸ್ಮಿನ್ ಸತ್ಯತಿದುರ್ಲಭಃ ॥೫೦॥

ಹೀಗಿರುವಲ್ಲಿ ಇದರಲ್ಲಿ ವಿಹರಿಸುವುದರಿಂದ ಉಂಟಾದ ಆನಂದವನ್ನು ವರ್ಣಿಸಲು ಸಾಧ್ಯವೇ! ॥೪೫॥

ಗೌರೀ ಮತ್ತು ಪರಮೇಶ್ವರರ ಮನಸ್ಸನ್ನು ಆಕರ್ಷಿಸುವ ಈ ಮಂಚವನ್ನು ನೋಡಿದಮಾತ್ರದಿಂದಲೇ ನಾನು ಕೃತಕೃತ್ಯನಾದೆನು. ಇದರಲ್ಲಿ ಸಂಶಯವಿಲ್ಲ. ॥೪೬॥

ಇದನ್ನು ದೇವತೆಗಳಾಗಲಿ, ಗಂಧರ್ವರಾಗಲಿ, ಕಿನ್ನರರಾಗಲಿ, ಸಿದ್ಧರಾಗಲಿ, ನಾಗರೇ ಆಗಲಿ, ಪ್ರಮಥಗಳೇ ಆಗಲಿ, ಯಾರೂ ನೋಡಿಲ್ಲ. ॥೪೭॥

ಶಿವಾಲಯದಲ್ಲಿರುವ ಇಂತಹ ಮಣಿಮಯವಾದ ಮಂಚದಲ್ಲಿ ಶಿವನ ಅನುಗ್ರಹದಿಂದ ಗೌರಿಯು ಸಂತೋಷದಿಂದಿರುತ್ತಾಳೆ. ॥೪೮॥

ಇಷ್ಟೊಂದು ರಮ್ಯವಾದ ಪ್ರದೇಶವು ಉಗ್ರವಾದ ತಪಸ್ಸನ್ನು ಆಚರಿಸುವುದರಿಂದಲೂ ದೊರಕತಕ್ಕುದಲ್ಲ. ಅಲ್ಲದೆ ಇನ್ನೆಲ್ಲಿಯೂ ಇಂತಹ ಪ್ರದೇಶವು ನಿಜವಾಗಿಯೂ ಕಾಣುವುದಿಲ್ಲ. ॥೪೯॥

ಗೌರಿಯು ನಮ್ಮಲ್ಲಿರುವ ಪ್ರೀತಿಯನ್ನು ವ್ಯಕ್ತಪಡಿಸುವುದಕ್ಕೋಸ್ಕರ ನಮಗೆ ಅತಿರಮ್ಯವಾದ ಈ ಪ್ರದೇಶವನ್ನು ತೋರಿಸಿರುವಳು. ಅದರಲ್ಲಿಯೂ ಈಗ ಇಲ್ಲಿ ಶಿವನು ಇಲ್ಲದುದರಿಂದ ಇದನ್ನು ನೋಡುವುದು ಸುಲಭವಾಯಿತು. ಇಲ್ಲಿ ಶಂಕರನು ಇದ್ದಿದ್ದರೆ ಈ ಸ್ಥಳದ ದರ್ಶನವು ನಮಗೆ ದೊರೆಯುತ್ತಲೇ ಇರಲಿಲ್ಲ. ॥೫೦॥

ಸಭಾಮಂಟಪಪರ್ಯಂತಂ ಸಂಚರಂತಿ ಗಣಾ ಅಪಿ ।
ಅಮರಾಣಾಂ ನ ವಾರ್ತಾಪಿ ದ್ವಾರಿ ತೇಷಾಮವಸ್ಥಿತಿಃ ॥೫೧॥

ಸಭಾಮಂಟಪಮಾಲೋಕ್ಯ ಕಸ್ತೃಪ್ತಿಂ ನ ಪ್ರಯಾಸ್ಯತಿ ।
ತನ್ಮಂಟಪಮಣಿಸ್ತಂಭಗಾಂಭೀರ್ಯಂ ವರ್ಣ್ಯತೇ ಕಥಂ ॥೫೨॥

ತದರ್ಬುದಮಣಿಸ್ತಂಭಪ್ರಾಕಾರಪರಿವೇಷ್ಟಿತಂ ।
ಅಖಂಡಾಸ್ತೇ ಮಣಿಸ್ತಂಭಾಶ್ಚಿತ್ರರತ್ನವಿರಾಜಿತಾಃ ॥೫೩॥

ಘನೀಭೂತಾ ರತ್ನಕಾಂತಿಸ್ತತ್ರಾಸ್ತರಣಮವ್ಯಯಂ ।
ಕೋಟಿಶಃ ಸಂತಿ ಪರಿತಃ ರಮ್ಯಾಸ್ತೇ ರತ್ನಮಂಡಪಾಃ ॥೫೪॥

ತೇಷು ಸರ್ವೇಷು ಪುಷ್ಪಾಣಿ ಮಂದಾರತರುನಿಃಸೃತಾಃ ।
ಮರಂದಧಾರಾಸಂಕೀರ್ಣಾಸ್ತೇಷು ಲಿಂಗಾನಿ ಕೋಟಿಶಃ ॥೫೫॥

ಈ ಗೃಹದಲ್ಲಿ ಪ್ರಮಥಗಣಗಳು ಸಭಾಮಂಟಪದವರೆಗೆ ಮಾತ್ರ ಸಂಚರಿಸುವುವು. ದೇವತೆಗಳಿಗಾದರೋ ಒಳಕ್ಕೆ ಪ್ರವೇಶವೇ ದೊರಕಲಾರದು. ಅವರು ಬಾಗಿಲಿನ ಬಳಿಯಲ್ಲಿಯೇ ನಿಲ್ಲುವರು. ॥೫೧॥

ಈ ಸಭಾಮಂಟಪವನ್ನು ನೋಡಿ ಯಾವನು ತಾನೇ ತೃಪ್ತಿಯನ್ನು ಹೊಂದಲಾರನು! ಈ ಮಂಟಪದಲ್ಲಿರುವ ಮಣಿಮಯವಾದ ಕಂಬಗಳ ಸೌಂದರ್ಯಾತಿಶಯವು ವರ್ಣಿಸಲಸಾಧ್ಯವಾಗಿರುತ್ತದೆ. ॥೫೨॥

ಈ ಸಭಾಮಂಟಪವು ಅಸಂಖ್ಯಾತ ಮಣಿಮಯ ಕಂಬಗಳಿಂದ ಅಲಂಕರಿಸಲ್ಪಟ್ಟ ಕೋಟೆಯಿಂದ ಸುತ್ತುವರಿದಿರುವುದು. ಆ ಮಣಿಮಯವಾದ ಕಂಬಗಳು ಅಖಂಡಾಕಾರವಾದ ವಿಚಿತ್ರವಾದ ರತ್ನಗಳಿಂದ ಶೋಭಿಸುತ್ತಿವೆ. ॥೫೩॥

ಕಂಬಗಳಲ್ಲಿರುವ ರತ್ನಗಳ ಕಾಂತಿಯು ಎಲ್ಲೆಡೆಯಲ್ಲಿಯೂ ನಿಬಿಡವಾಗಿ ಪ್ರಸರಿಸಿರುವುದು. ಅಲ್ಲಿ, ಸುಂದರವಾದ ಮತ್ತು ಶಾಶ್ವತವಾಗಿ ನೆಲಸಿರುವ ಒಂದು ರತ್ನಾಸನವು (ಪೀಠವು) ಇರುವುದು. ಆ ಮನೆಯಲ್ಲಿ ಸುತ್ತಲೂ ಈರೀತಿಯಾದ ಅನೇಕ ರತ್ನಖಚಿತವಾದ ಮಂಟಪಗಳಿರುವುವು. ॥೫೪॥

ಎಲ್ಲಾ ಮಂಟಪಗಳಲ್ಲಿಯೂ ಮಂದಾರವೃಕ್ಷಗಳು ಹೂವುಗಳಿಂದ ಶೋಭಿಸುತ್ತಿರುವುವು. ಆ ಹೂವುಗಳು ಮಕರಂದದ ಪ್ರವಾಹವನ್ನೇ ಸುರಿಸುತ್ತಾ

ತದೇವ ರಮಣೀಯಾನಾಂ ರಮಣೀಯಂ ಮನೋಹರಂ ।
ರಮಣೀಯತ್ವಮೇತಸ್ಯ ಕಿಂ ವಕ್ತವ್ಯಮತಃ ಪರಂ ॥೫೬॥

ಏತಾದೃಶಂ ವಿಹಾಯಾಂಬಾ ಸ್ಥಲಂ ಮನ್ಮಂದಿರೇ ಕಥಂ ।
ಸ್ಥಾತುಮಿಚ್ಛತಿ ಕಲ್ಯಾಣೀ ಪ್ರೇಮ್ಣಾಪಿ ಸತತಂ ಪ್ರಿಯೇ ॥೫೭॥

ಯಾದೃಶಾನಿ ಫಲಾನ್ಯತ್ರ ತಾದೃಶಾನಿ ಫಲಾನಿ ನಃ ।
ಅಸ್ಮನ್ಮಂದಾರತರುಷು ತಥಾ ಸುರತರುಷ್ವಪಿ ॥೫೮॥

ತೈರರ್ಕತರುಸಂಕಾಶೈಃ ಮಂದಾರತರುಭಿಶ್ಚ ಕಿಂ ।
ಏತೇ ವಿಲಕ್ಷಣಾ ಏವ ತರವಃ ಸಫಲಾಃ ಸದಾ ॥೫೯॥

ಮಂಟಪಗಳ ಮಧ್ಯದಲ್ಲಿದ್ದು ಕೋಟ್ಯಂತರವಾದ ಶಿವಲಿಂಗಗಳನ್ನು ಒಳಗೊಂಡಿರುವುವು. ॥೫೫॥

ಸುಂದರವಾದ ವಸ್ತುಗಳಲ್ಲೆಲ್ಲಾ ಸುಂದರವಾದುದೆಂದರೆ ಈ ಸ್ಥಳವೇ. ಅದು ಅಪ್ಸರಮಟ್ಟಿಗೆ ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುವುದು. ಈ ಸ್ಥಳದ ಸೌಂದರ್ಯವನ್ನು ಇದಕ್ಕಿಂತಲೂ ಹೆಚ್ಚಾಗಿ ವರ್ಣಿಸಲು ಸಾಧ್ಯವಿಲ್ಲ. ॥೫೬॥

ಪ್ರಿಯೇ, ಇಷ್ಟೊಂದು ಸುಂದರವಾದ ಬೇರೊಂದು ಸ್ಥಳವು ನಮ್ಮ ಮನೆಯಲ್ಲಿರುವುದೇ! ಆದುದರಿಂದಲೇ ಭಾಗ್ಯವತಿಯಾದ ಗಿರಿಜೆಯು ಈ ಸ್ಥಳವನ್ನು ಮೋಹಿಸಿ ನಿರಂತರವೂ ಇಲ್ಲಿಯೇ ವಾಸಮಾಡಲು ಬಯಸುವಳು. ॥೫೭॥

ಇಲ್ಲಿಯ ವೃಕ್ಷಗಳಲ್ಲಿರುವಂತೆ ರುಚಿಕರವಾದ ಹಣ್ಣುಗಳು ಮತ್ತು ಹೂವುಗಳು ನಮ್ಮ ಮನೆಯ ಮಂದಾರವೃಕ್ಷಗಳಲ್ಲಾಗಲಿ ಅಥವಾ ಕಲ್ಪವೃಕ್ಷಗಳಲ್ಲಾಗಲಿ ಕಾಣುವುವೇ? ॥೫೮॥

ಅರ್ಕವೃಕ್ಷಗಳಂತೆ (ಸೂರ್ಯವೃಕ್ಷ, ಎಕ್ಕದಗಿಡ) ನಿಷ್ಫಲವಾಗಿರುವ ನಮ್ಮ ಆ ಮಂದಾರವೃಕ್ಷಗಳಿಂದ ಯಾವ ಪ್ರಯೋಜನ? ಇಲ್ಲಿರುವ ಈ ವೃಕ್ಷಗಳಾದರೋ ಸತತವಾಗಿ ಫಲಭರಿತಗಳಾಗಿ ಅತ್ಯಾಶ್ಚರ್ಯವನ್ನುಂಟುಮಾಡುತ್ತಿವೆ. ॥೫೯॥

ನಾಮಮಾತ್ರೇಣ ಸಮತಾ ತರೂಣಾಮರ್ಥತಸ್ತಥಾ ।
ಅತಸ್ತೇ ತರವಸ್ತಾವನ್ನೈತತ್ತರುಸಮಾಃ ಪ್ರಿಯೇ ॥೬೦॥

ಏತತ್ತರುಫಲೇ ದೃಷ್ಟೇ ಆನಂದೋಽಪಿ ಪ್ರಜಾಯತೇ ।
ನ ತತ್ತರುಫಲೈರೇವಂ ಭಕ್ಷಣೇನಾಪಿ ಭೂರಿಶಃ ॥೬೧॥

ಇತ್ಯುಕ್ತ್ವಾ ಮಣಿಪರ್ಯಂಕಂ ದೂರಾನ್ನತ್ವಾ ಪುನಃ ಪುನಃ ।
ಗಿರಿಃ ಪ್ರದಕ್ಷಿಣೀಕೃತ್ಯ ಸ್ವಕೃತಾರ್ಥಮಮನ್ಯತ ॥೬೨॥

ತತಃ ಪರಂ ಘನೀಭೂತವಿಚಿತ್ರಮಣಿಕಾಂತಿಷು ।
ಮೃದುಲೇಷೂಪವಿಶ್ಯಾಂಬಾ ಗಿರಿಮಾಹ ವಿಚಕ್ಷಣಾ ॥೬೩॥

ಪ್ರೇಯಸಿಯೇ, ನಮ್ಮ ಗೃಹದಲ್ಲಿರುವ ಆ ವೃಕ್ಷಗಳು ಹೆಸರಿನಿಂದ ಮಾತ್ರ ಈ ವೃಕ್ಷಗಳೊಂದಿಗೆ ಸಾಮ್ಯವನ್ನು ಪಡೆದಿರುವುವಲ್ಲದೇ, ಅರ್ಥದಿಂದ ಸಾಮ್ಯವನ್ನು ಪಡೆಯಲಾರವು. ಆದುದರಿಂದ ಆ ವೃಕ್ಷಗಳು ಇಲ್ಲಿಯ ಈ ವೃಕ್ಷಗಳ ಸಾಮ್ಯವನ್ನು ಎಂದೂ ಹೊಂದಲಾರವು. ॥೬೦॥

ಈ ವೃಕ್ಷಗಳಲ್ಲಿರುವ ಒಂದೇ ಒಂದು ಹಣ್ಣನ್ನು ನೋಡಿದ ಮಾತ್ರದಿಂದಲೇ ಅತ್ಯಾನಂದವುಂಟಾಗುತ್ತದೆ. ಆದರೆ ನಮ್ಮ ಗೃಹದಲ್ಲಿರುವ ವೃಕ್ಷಗಳ ಹಣ್ಣುಗಳನ್ನು ಹೇರಳವಾಗಿ ತಿಂದರೂ ತೃಪ್ತಿಯಾಗುವುದಿಲ್ಲ. ” ॥೬೧॥

ಹೀಗೆಂದು ನುಡಿದು ಹಿಮವಂತನು ಮಣಿಮಯವಾದ ಆ ಮಂಚವನ್ನು ದೂರದಿಂದ ಬಾರಿಬಾರಿಗೂ ನಮಸ್ಕರಿಸಿ, ಪ್ರದಕ್ಷಿಣೆಮಾಡಿ ತಾನು ಧನ್ಯನಾದೆನೆಂದು ಭಾವಿಸಿದನು. ॥೬೨॥

ಬಳಿಕ ಸಮಯೋಚಿತವಾದ ಮಾತುಗಳನ್ನಾಡುವುದರಲ್ಲಿ ಚತುರಳಾದ ಮೇನಕೆಯೂ, ನಿಬಿಡವಾಗಿ ಪ್ರಸರಿಸಿರುವ ಮಣಿಗಳ ಕಾಂತಿರಾಶಿಯಿಂದ ಶೋಭಾಯಮಾನವಾಗಿರುವ ಸ್ಥಳದಲ್ಲಿ ಕುಳಿತು, ಪತಿಯಾದ ಹಿಮವಂತನನ್ನು ಕುರಿತು ಹೀಗೆಂದಳು. ॥೬೩॥

ತಲ್ಪೈರನಲ್ಪೈರ್ಮೃದುಲೈಸ್ಸುಖಸ್ಪರ್ಶಸ್ತು ನೇದೃಶಃ ।
ಸ್ವತಸ್ಸುಗಂಧ ಏವಾಯಂ ರತ್ನಕಾಂತಿಸಮುಚ್ಚಯಃ ॥೬೪॥

ಇದಮೇತಾದೃಶಂ ರಮ್ಯಂ ಸ್ಥಲಮೇತದಪೇಕ್ಷಯಾ ।
ಅನಂತಗುಣಿತೇ ರಮ್ಯೇ ಸ್ಥಲೇ ತಿಷ್ಠತಿ ಶಂಕರಃ ॥೬೫॥

ತನ್ಮೇರುಶಿಖರಾಗ್ರೇಷು ರತ್ನೈರನ್ಯೈಕೇನ ನಿರ್ಮಿತಃ ।
ಪ್ರಾಸಾದಸ್ತಸ್ಯ ಶೃಂಗೇಷು ಪ್ರಸಾದಃ ಕಶ್ಚಿದುತ್ತಮಃ ॥೬೬॥

ತತ್ರಾಸ್ತಿ ಸ ಮಹಾದೇವಃ ಪರಮಾನಂದವಿಗ್ರಹಃ ।
ಅನಂತೇಂದುರವಿಪ್ರಖ್ಯಃ ಪ್ರಖ್ಯಾತಃ ಶ್ರುತಿಷು ಸ್ಮೃತಃ ॥೬೭॥

ತದ್ದರ್ಶನಾರ್ಥಮಧುನಾ ಗಂತವ್ಯಂ ತ್ವರಯಾ ಮಯಾ ।
ಭವತಾಂ ಗಮನಂ ತತ್ರ ನೈವ ಸಂಭಾವಿತಂ ಗಿರೇ ॥೬೮॥

ಓ ಪತಿದೇವನೇ, ಇಷ್ಟು ಮೃದುವಾಗಿಯೂ ವಿಶಾಲವಾಗಿಯೂ ಇರುವ ಈ ಹಾಸಿಗೆಗಳಲ್ಲಿ ಕುಳಿತುಕೊಳ್ಳುವುದರಿಂದುಂಟಾಗುವ ಆನಂದವು ಇನ್ನೆಲ್ಲಿಯೂ ದೊರಕಲಾರದು. ರತ್ನಗಳ ಪ್ರಭೆಯಿಂದ ಶೋಭಿಸುತ್ತಲಿರುವ ಈ ಪ್ರದೇಶವು ಸ್ವಾಭಾವಿಕವಾಗಿಯೇ ಸುವಾಸನೆಯನ್ನು ಬೀರುತ್ತಿರುವುದು. ॥೬೪॥

ಈ ಪ್ರದೇಶವೇ ಇಷ್ಟೊಂದು ಮನೋಹರವಾಗಿರುತ್ತದೆ. ಇದಕ್ಕಿಂತಲೂ ಶಿವನು ವಾಸಿಸುವ ಸ್ಥಳವು ಶತಾಧಿಕವಾಗಿ ರಮಣೀಯವೆನಿಸಿರುವುದು. ॥೬೫॥

ಶಂಕರನ ವಾಸಸ್ಥಳವು ಮೇರುಪರ್ವತದ ಅಗ್ರಭಾಗವಾಗಿರುತ್ತದೆ. ಮೇರುವಿನ ಕೊನೆಯಲ್ಲಿ ಕೇವಲ ರತ್ನದಿಂದಲೇ ನಿರ್ಮಿಸಿದ ದಿವ್ಯ ಹರ್ಮ್ಯವೊಂದಿರುವುದು. ಅದರ ಮೇಲ್ಭಾಗದಲ್ಲಿ ಮತ್ತೊಂದು ಉತ್ಕೃಷ್ಟವಾದ ಉಪ್ಪರಿಗೆಯಿರುವುದು. ॥೬೬॥

ಅದರಲ್ಲಿ ನಿರತಿಶಯಾನಂದಸ್ವರೂಪನಾದ ಆ ಪರಶಿವನು ವಾಸಿಸುವನು. ಅವನು ಕೋಟ್ಯಂತರ ಚಂದ್ರಸೂರ್ಯರಷ್ಟು ತೇಜಸ್ಸುಳ್ಳವನೂ, ವೇದವೇದಾಂತಗಳಲ್ಲಿ ಪ್ರಸಿದ್ಧನೂ ಎನಿಸಿ ಮಹಿಮಾಪೂರ್ಣನೆನಿಸಿರುವನು. ॥೬೭॥

ಶೈಲೇಂದ್ರನೇ, ಈಗಲೇ ನಾನು ಶೀಘ್ರವಾಗಿ ಶಂಕರನನ್ನು ಸಂದರ್ಶಿಸಲು ಹೋಗುವೆನು. ಆದರೆ ಅಲ್ಲಿಗೆ ನಿಮ್ಮ ಗಮನವು ಅಸಂಭಾವಿತವೆನಿಸುವುದು. ॥೬೮॥

ಚಂದ್ರಮಂಡಲಮಾದಾತುಂ ನರಃ ಕಿಮಭಿವಾಂಛತಿ ।
ಕೃತಾಯಾಮಭಿವಾಂಛಾಯಾಂ ಕಥಂ ತತ್ತೇನ ಲಭ್ಯತೇ ॥೧೯॥

ಏವಮೇವ ಗಿರಿಶ್ರೇಷ್ಠ ತನ್ಮಂದಿರವಿಲೋಕನಂ ।
ದುರ್ಲಭಂ ತತ್ರ ಗಮನಂ ಗಂತವ್ಯಮಿತ ಏವ ಹಿ ॥೨೦॥

ನಿಧೀನ್ ಪಶ್ಯ ಗಿರಿಶ್ರೇಷ್ಠ ಪಶ್ಯಾಭರಣಮಂಡಪಾನ್ ।
ದುಕೂಲಮಂಡಪಾನ್ ಪಶ್ಯ ವಿಚಿತ್ರಮಣಿಮಂಡಪಾನ್ ॥೨೧॥

ಮಂಡಪೇ ಮಣಯಃ ಸಂತಿ ತೇ ಸರ್ವೇಽಭಿಷ್ಟದಾಃ ಸದಾ ।
ಅಪೇಕ್ಷಿತಂ ಪ್ರಯಚ್ಛಂತಿ ಸ್ವಯಮಾನೀಯ ಸಾದರಂ ॥೨೨॥

ಇತ್ಯುಕ್ತ್ವಾ ರತ್ನಪಾತ್ರೇಷು ವಿಶಾಲೇಷು ತದಾ ಶಿವಾ ।
ಮನೋಹರಾನ್ನಪೂರ್ಣೇಷು ಚಕಾರ ಪರಿವೇಷಣಂ ॥೨೩॥

ಮನುಷ್ಯನು ಚಂದ್ರಮಂಡಲವನ್ನು ಹಿಡಿತರಲು ಇಚ್ಛಿಸುವನೇ! ಹಾಗೆ ಇಚ್ಛಿಸಿದರೂ, ಅವನ ಮನೋರಥವು ಈಡೇರುವುದೇ! ॥೧೯॥

ಅದರಂತೆ ಶಿವನ ಮಂದಿರವನ್ನು ನೀವು ಸಂದರ್ಶಿಸುವುದೆಂದರೆ ಅದು ದುರ್ಲಭವೇ ಸರಿ. ಅಲ್ಲಿಗೆ ಹೋಗಲು ಅಸಾಧ್ಯವಾಗಿರುವುದರಿಂದ ಇಲ್ಲಿಂದಲೇ ನೀವು ಹಿಂದಿರುಗುವುದು ಒಳ್ಳೆಯದು. ॥೨೦॥

ಎಲೈ ಪರ್ವತರಾಜನೇ, ಅನೇಕ ಆಭರಣದಿಂದ ಕೂಡಿರುವ ಈ ಮಂಟಪಗಳನ್ನು ನೋಡು. ಈ ವಸ್ತ್ರಮಂಟಪಗಳನ್ನೂ ಹಾಗೆಯೇ ಮಣಿಮಯವಾದ ಈ ಮಂಟಪಗಳನ್ನು ನೋಡುವವನಾಗು. ॥೨೧॥

ಈ ಮಂಟಪದಲ್ಲಿ ಅನೇಕ ರತ್ನಗಳಿರುತ್ತವೆ. ಅವುಗಳೆಲ್ಲವೂ ಇಷ್ಟಾರ್ಥಪ್ರದಗಳೇ ಆಗಿವೆ. ನಮ್ಮ ಅಭೀಷ್ಟವಾದ ವಸ್ತುವನ್ನು ತಾವಾಗಿಯೇ ಆದರದಿಂದ ನಾವಿದ್ದಲ್ಲಿಗೇ ತಂದುಕೊಡುವುವು. ॥೨೨॥

ಹೀಗೆಂದು ನುಡಿದು ಗಿರಿಜೆಯು ವಿಸ್ತಾರವಾದ ಮತ್ತು ರತ್ನಖಚಿತವಾದ ಪಾತ್ರೆಗಳಲ್ಲಿ ವಿವಿಧ ರುಚಿಕರವಾದ ಪಕ್ವಾನ್ನಗಳನ್ನು ಸಿದ್ಧಪಡಿಸಿ ಬಡಿಸಿದಳು. ॥೨೩॥

ತತೋ ಭುಕ್ತ್ವಂ ತಯಾ ಸಾಕಂ ಮೇನಯಾ ಶಿವಯಾ ಸಹ ।
ಸುಧಾಫಲಾನಿ ಭುಕ್ತಾನಿ ಪಕ್ವಾನ್ನಾನ್ಯಪಿ ಕೋಟಿಶಃ ॥೭೪॥

ಪಶ್ಚಾದಾಚಮ್ಯ ಸುಧಯಾ ತಾಂಬೂಲಮಪಿ ಸಾದರಂ ।
ಗೃಹೀತ್ವಾ ವಿಸ್ಮಯಾಪನ್ನೋ ಗಿರಿರಾನಂದಸಂವೃತಃ ॥೭೫॥

ತತಃ ಪರಂ ವಿಚಿತ್ರಾಣಿ ವಸನಾನಿ ದದೌ ಶಿವಾ ।
ಕಲ್ಪಾಂತೇಽಪಿ ನ ನಶ್ಯಂತಿ ಮಲಿನಾನ್ಯಪಿ ತಾನಿ ನ ॥೭೬॥

ತೇಷಾಮುಜ್ಜ್ವಲತಾ ತಾವದ್ದೃಷ್ಟಿಮೇತಿ ಪ್ರತಿಕ್ಷಣಂ ।
ಪರಿಧಾನೇಽಪಿ ಜೀರ್ಣತ್ವಮಸಂಭಾವಿತಮೇವ ಹಿ ॥೭೭॥

ಐರಾವತಮದಸ್ತಂಭಹೇತುಭೂತಾನ್ ಗಜಾನಪಿ ।
ತುರಗಾಂಶ್ಚ ತಥೋತ್ತುಂಗಾನ್ ದೇವಾಶ್ವಮದನಾಶಕಾನ್ ॥೭೮॥

ಬಳಿಕ ಹಿಮವಂತನು ಮೇನಕೆ ಮತ್ತು ಪಾರ್ವತಿಯರೊಂದಿಗೆ, ಅದನ್ನು ಭುಂಜಿಸಿ ಹಾಗೆಯೇ ಅಮೃತದಂತೆ ಮಧುರವಾದ ಫಲಗಳನ್ನೂ, ಮತ್ತು ವಿವಿಧವಾದ ಪಕ್ವಾನ್ನಗಳನ್ನೂ ಸೇವಿಸಿದನು. ॥೭೪॥

ಭೋಜನವಾದ ಬಳಿಕ ಅಮೃತದಿಂದ ಅಚಮನ ವಿಧಿಯನ್ನು ನೆರವೇರಿಸಿ, ಸಂತೋಷದಿಂದ ತಾಂಬೂಲವನ್ನು ಸ್ವೀಕರಿಸಿ, ಹಿಮವಂತನು ಆನಂದಗೊಂಡು ಆ ಸತ್ಕಾರಕ್ಕೆ ಆಶ್ಚರ್ಯಭರಿತನಾದನು. ॥೭೫॥

ತರುವಾಯ, ಪಾರ್ವತಿಯು ಹಿಮವಂತಮೇನಕೆಯರಿಗೆ ವಿವಿಧವಾದ ವಸ್ತ್ರಗಳನ್ನು ಕೊಟ್ಟಳು. ಆ ವಸ್ತ್ರಗಳು ಕಲ್ಪಾಂತ್ಯದವರೆಗೂ ಬಾಳಿಕೆ ಬರುವುವು. ಮತ್ತು ಎಂದಿಗೂ ಕೊಳಕಾಗದೇ ಇರುವುವು. ॥೭೬॥

ಅವುಗಳ ಕಾಂತಿಯು ಪ್ರತಿಕ್ಷಣದಲ್ಲಿಯೂ ಕಣ್ಣುಗಳನ್ನು ಕೋರೈಸುವಂತಿದ್ದಿತು. ಇದಲ್ಲದೇ ಬಹುಕಾಲದ ಪರ್ಯಂತ ಅವುಗಳನ್ನು ಹೊದ್ದುಕೊಂಡರೂ ಅವು ಜೀರ್ಣವಾಗುವಂತಿರಲಿಲ್ಲ. ॥೭೭॥

ಹಾಗೆಯೇ ಇಂದ್ರನ ವಾಹನವಾದ ಐರಾವತಕ್ಕಿಂತಲೂ ಮದಶಾಲಿಗಳಾದ ಆನೆಗಳನ್ನೂ, ದೇವಲೋಕದ ಕುದುರೆಗಳನ್ನು ಸಹ ತಿರಸ್ಕರಿಸುವಂತಹ ಕುದುರೆ

ದದೌ ಗಾಶ್ಚ ವಿಚಿತ್ರಾಸ್ತಾಃ ಸುರಗೋಮದನಾಶನೀಃ ।
ಪ್ರವೃತ್ತಾಃ ಸರ್ವಫಲದಾಃ ಮಂದಾರಾನಪಿ ಕೋಟಿಶಃ ॥೭೯॥

ವಿಮಾನಾನ್ಯಪಿ ದಿವ್ಯಾನಿ ಕಾಮಗಾನ್ಯಪಿ ಕೋಟಿಶಃ ।
ಅನ್ಯಾನ್ಯಪಿ ವಿಚಿತ್ರಾಣಿ ಫಲಾನಿ ಪ್ರದದೌ ಶಿವಾ ॥೮೦॥

ದದೌ ಪರಿಮಳದ್ರವ್ಯಾಣ್ಯಪಾರಾಣಿ ಶಿವಪ್ರಿಯಾ ।
ದದೌ ಹಾರಾನುದಾರಾನ್ ಸಾ ತಾರಾಹಾರಸಮಾವೃತಾನ್ ॥೮೧॥

ಗೃಹೀತ್ವಾ ತಾವದೇತಾವದಂಬಾದತ್ತಮಿದಂ ಗಿರಿಃ ।
ವಿಯೋಗಭೀತ್ಯಾ ಸಂತುಷ್ಟೋಽಪ್ಯಸಂತುಷ್ಟ ಇವ ಸ್ಥಿತಃ ॥೮೨॥

ಏತಸ್ಮಿನ್ನಂತರೇ ಕಾಲೇ ವಿಮಾನವರಸಂಯುತಾಃ ।
ಅನ್ಯೇ ಗಣಾಃ ಶಂಕರೇಣ ಪ್ರೇಷಿತಾಃ ಸಮುಪಾಗತಾಃ ॥೮೩॥

ಗಳನ್ನೂ ಪಾರಿತೋಷಕವನ್ನಾಗಿ ಕೊಟ್ಟಳು. ಇದಲ್ಲದೆ ದೇವಲೋಕದ ಗೋವುಗಳನ್ನೂ ತಿರಸ್ಕರಿಸುವಂತಹ, ಇಷ್ಟಾರ್ಥಪ್ರದವಾದ ಗೋವುಗಳನ್ನೂ, ಅನೇಕ ಮಂದಾರವೃಕ್ಷಗಳನ್ನೂ ಬಹುಮಾನವನ್ನಾಗಿತ್ತಳು. ॥೭೮-೭೯॥

ಮತ್ತೂ ಇಚ್ಛಾಗಾಮಿಗಳಾಗಿ ದಿವ್ಯವೆನಿಸಿದ ವಿಮಾನಗಳನ್ನೂ, ಇದಲ್ಲದೆ ಇನ್ನಿತರ ನಾನಾವಿಧವಾದ ಫಲಗಳನ್ನೂ ಕೈಗಾಣಿಕೆಯಾಗಿ ಸಮರ್ಪಿಸಿದಳು. ॥೮೦॥

ಭವಾನಿಯು ಅನೇಕವಾದ ಸುಗಂಧದ್ರವ್ಯಗಳನ್ನೂ, ಸುಂದರವಾದ ಪುಷ್ಪಮಾಲಿಕೆಗಳನ್ನೂ, ಮುತ್ತು ಮುತ್ತಿನ ಹಾರಗಳನ್ನೂ ಮಾತಾಪಿತೃಗಳಿಗೆ ಸಮರ್ಪಿಸಿದಳು. ॥೮೧॥

ದೇವಿಯು ಸಮರ್ಪಿಸಿದ ಅಮೂಲ್ಯವಾದ ಈ ಸನ್ಮಾನವನ್ನು ಸ್ವೀಕರಿಸಿ, ಪರ್ವತರಾಜನು ಒಂದು ವಿಧದಿಂದ ಸಂತೋಷಗೊಂಡವನಾದರೂ, ಮುಂದೆ ಮಗಳಿಂದ ತನಗುಂಟಾಗುವ ವಿರಹವ್ಯಥೆಯಿಂದ ದುಃಖಿತನೂ ಆದನು. ॥೮೨॥

ಇಷ್ಟು ಸಮಯದೊಳಗೇ ಶಿವನಿಂದ ಕಳುಹಿಸಲ್ಪಟ್ಟ ಪ್ರಮಥಗಣಗಳು, ವಿಮಾನವನ್ನೇರಿ ಅಲ್ಲಿಗೆ ಬಂದವರಾದರು. ॥೮೩॥

ತೇ ಸರ್ವೇ ನಂದೀಕೇಶೇನ ಗಣೈರನ್ಯೈಶ್ಚ ಸಂವೃತಾಃ ।
ಕೈಲಾಸನಗರದ್ವಾರವೇದಿಕಾಯಾಂ ಪರಂ ಸ್ಥಿತಾಃ ॥೮೪॥

॥ ಗಣಾ ಊಚುಃ ॥

ವಿಲಂಬಃ ಸಮುಭೂನ್ನಂದಿನ್ ಕಿಮೇತದುಚಿತಂ ತವ ।
ಸ್ವಾಮಿಕಾರ್ಯಾರ್ಥಮುದ್ಯುಕ್ತೋ ನ ವಿಲಂಬಂ ಕರೋತಿ ಹಿ॥೮೫॥

ಕದಾಚಿತ್ಕುಪಿತಃ ಸ್ವಾಮೀ ಯದಿ ಕಾರ್ಯವಿರೋಧತಃ ।
ತದಾ ಕಥಂ ಜೀವನಂ ಸ್ಯಾತ್ಸೇವಕಾನಾಂ ವಿಶೇಷತಃ ॥೮೬॥

ಸೇವಕಾನಾಂ ಚ ಯತ್ಕೃತ್ಯಂ ತತ್ಕೃತ್ಯಮತಿಯತ್ನತಃ ।
ಕರ್ತವ್ಯಂ ಸತ್ವರಂ ತೇನ ತುಷ್ಟಃ ಸ್ವಾಮೀ ಭವಿಷ್ಯತಿ ॥೮೭॥

ಅವರಲ್ಲಿ ನಂದಿಕೇಶ್ವರನೂ ಮತ್ತು ಇನ್ನಿತರಗಣಗಳೂ ಇದ್ದರು. ಅವರು ಕೈಲಾಸನಗರದ ಹೊರಬಾಗಿಲಿನಲ್ಲಿರುವ ಜಗುಲಿಯ ಮೇಲೆ ಬಂದು ನಿಂತರು. ॥೮೪॥

ಹೀಗೆ ನಂದಿಕೇಶ್ವರನು ಗಣಗಳಿಂದೊಡಗೂಡಿ ಅಲ್ಲಿಗೆ ಬರಲು, ಅಲ್ಲಿದ್ದ ಇತರ ಗಣಗಳು ಮುಖಂಡನಾದ ನಂದಿಕೇಶನನ್ನು ಕುರಿತು ಹೀಗೆಂದು ಹೇಳಿದರು. " ಎಲೈ ನಂದಿಕೇಶ್ವರನೇ, ನಿನ್ನ ಸಮಾಗಮಕ್ಕೆ ಇಷ್ಟೊಂದು ವಿಲಂಬವೇಕೆ ? ನಿನಗೆ ಇದು ಉಚಿತವೇ ? ಪ್ರಭುವಿನ ಕಾರ್ಯವನ್ನು ಸಾಧಿಸುವುದಕ್ಕೋಸ್ಕರ ಪ್ರವೃತ್ತನಾದ ಸೇವಕನು ಇಷ್ಟೊಂದು ವಿಲಂಬವನ್ನು ಮಾಡುವನೇ ? ॥೮೫॥

ಒಂದುವೇಳೆ ತನ್ನ ಕಾರ್ಯವು ಸಕಾಲದಲ್ಲಿ ನೆರವೇರದಿದ್ದುದನ್ನು ತಿಳಿದು, ಪ್ರಭುವು ಕೋಪಗೊಂಡರೆ ಸೇವಕನು ಬದುಕುವ ಬಗೆಯಾದರೂ ಹೇಗೆ ? ಅದರಲ್ಲಿಯೂ ಸತತವಾಗಿ ಸೇವಕವೃತ್ತಿಯಲ್ಲಿಯೇ ಇರುವ ನಮ್ಮ ಪಾಡೇನಾದೀತು ? ॥೮೬॥

ಪ್ರಭುವು ತಮಗೆ ವಿಧಿಸಿರುವ ಕಾರ್ಯವನ್ನು ಸೇವಕರು ಅತ್ಯಾಸಕ್ತಿಯಿಂದ ನೆರವೇರಿಸಬೇಕು. ಆದರಿಂದ ಪ್ರಭುವು ಸಂತೋಷಗೊಳ್ಳುವನು. ॥೮೭॥

ರುಷ್ಟಶ್ಚೇತ್ಕಷ್ಟಮೇವಾಸ್ಯ ಫಲಂ ಕಿಂ ನ ಭವಿಷ್ಯತಿ ।
ತತ್ಕಷ್ಟಾಪೇಕ್ಷಯಾ ಕಷ್ಟಂ ಸ್ವಾಮಿಕಾರ್ಯವಿನಾಶನೇ ॥೮೮॥

ತದೇವ ಕಾರ್ಯಂ ಕರ್ತವ್ಯಂ ಭೃತ್ಯೈರ್ಯೈರ್ನ ಸ್ವನಾಯಕಃ ।
ತುಷ್ಟೋ ಭವತಿ ತದ್ಭಿನ್ನಂ ನ ಕಾರ್ಯಂ ಪ್ರಲಯೇಽಪಿ ವಾ ॥೮೯॥

ಅನ್ಯಾನುರೋಧಕೃತ್ಯಂ ಕಿಂ ಸ್ವಾಮಿಕಾರ್ಯವಿರೋಧತಃ ।
ಸರ್ವೈಃ ಪ್ರಯತ್ನೈಃ ಕರ್ತವ್ಯಂ ಸರ್ವಥಾ ಸ್ವಾಮಿತೋಷಣಂ ॥೯೦॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ನಂದಿಕೇಶೋ ವಿಚಕ್ಷಣಃ ।
ಪ್ರಾಹ ಪ್ರಸನ್ನವದನಂ ವಿನಯಾನ್ನಯಸಂಯುತಂ ॥೯೨॥

ಸ್ವಾಮಿಯು ಕೋಪಗೊಂಡರೆ ಸೇವಕರೇ ಕಷ್ಟಕ್ಕೆ ಈಡಾಗುವರಲ್ಲದೇ, ಪ್ರಭುವಿನ ಅನುಗ್ರಹವು ಅವರಿಗೆ ಎಂದೂ ಲಭಿಸದು. ಆದುದರಿಂದ ಸ್ವಾಮಿಯ ಕಾರ್ಯವನ್ನು ಸಾಧಿಸದೆ ಇರುವ ಸೇವಕನು ಅತ್ಯಂತ ದುಃಖಕ್ಕೆ ಈಡಾಗುವನು. ||೮೮||

ಯಾವ ಕಾರ್ಯವನ್ನು ಸಾಧಿಸುವುದರಿಂದ ಸ್ವಾಮಿಯು ಸಂತೋಷಗೊಳ್ಳುವನೋ, ಅಂತಹ ಕಾರ್ಯವನ್ನು ಸೇವಕನು ಕೈಗೊಳ್ಳಬೇಕು. ಅದಕ್ಕೆ ವಿರುದ್ಧವಾದ ಕಾರ್ಯವನ್ನು ಎಂದಿಗೂ ಸಾಧಿಸಬಾರದು. ||೯೦||

ಪ್ರಭುವಿನ ಕಾರ್ಯವನ್ನು ಕೆಡಿಸುವುದಕ್ಕಿಂತಲೂ ಅಪಘಾತವಾದ ಮತ್ತೊಂದು ಕಾರ್ಯವು ಲೋಕದಲ್ಲಿ ಯಾವುದೂ ಇರಲಾರದು. ಆದುದರಿಂದ ನಮ್ಮ ಪ್ರಯತ್ನದಿಂದ ನಾವು ಕೈಲಾದಮಟ್ಟಿಗೂ ಪ್ರಭುವನ್ನು ಸಂತೋಷಗೊಳಿಸಲು ಪ್ರಭುಕಾರ್ಯವನ್ನು ಶೀಘ್ರವಾಗಿ ನೆರವೇರಿಸಬೇಕು. ||೯೧||

ಎಂದು ಗಣಗಳು ನುಡಿದ ಆ ಮಾತನ್ನು ಕೇಳಿ, ಚತುರನಾದ ನಂದಿಕೇಶ್ವರನು, ವಿನಯಭರಿತನಾಗಿ ನಯವೂ ಗಂಭೀರವೂ ಆದ ವಾಣಿಯಿಂದ ಹೀಗೆಂದು ನುಡಿದನು. ||೯೨||

|| ನಂದಿಕೇಶ ಉವಾಚ ||

ಯೂಯಮಾಪ್ತತಮಾ ಏವ ಶಂಕರಸ್ಯ ನ ಸಂಶಯಃ ।
ಭವದುಕ್ತಂ ಹಿ ತತ್ಸತ್ಯಂ ನ ತತ್ರಾಪ್ಯಸ್ತಿ ಸಂಶಯಃ ॥೯೩॥

ಯದಿ ಕಾರ್ಯಾಂತರೇ ಸ್ವಾಮೀ ನಿಯೋಜಯತಿ ಮಾಂ ತದಾ ।
ತತ್ಕ್ಷಣೇನೈವ ಕರ್ತವ್ಯಮಸಾಧ್ಯಂ ನ ಜಗತ್ರಯೇ ॥೯೪॥

ಅಂಬಾ ಸ್ವತಂತ್ರಾ ತಸ್ಯಾಸ್ತು ದರ್ಶನಂ ಮಮ ದುರ್ಲಭಂ ।
ತಸ್ಯಾಃ ತ್ವರಾ ತು ಕೇನಾಪಿ ಕರ್ತುಮೇವ ನ ಶಕ್ಯತೇ ॥೯೫॥

ಸಾ ಸ್ವೇಚ್ಛಯಾ ವಿಹಾರಂ ಚೇತ್ಕರಿಷ್ಯತಿ ತದಾ ಕಥಂ ।
ಅಸ್ಮಾಕಂ ಪ್ರತಿಬಂಧೋಽಪಿ ಕರ್ತವ್ಯಃ ಸಾದರಂ ವದ ॥೯೬॥

ಎಲೈ ಗಣಶ್ರೇಷ್ಠರೇ “ ನೀವು ಶಿವನಿಗೆ ಅತ್ಯಂತ ಪ್ರಿಯರೆನಿಸಿರುವಿರಿ. ಇದು ಸತ್ಯ. ನೀವು ಆಡಿದ ಮಾತೂ ಯಥಾರ್ಥವಾದದ್ದು. ಇದರಲ್ಲಿ ಸ್ವಲ್ಪವೂ ಸಂಶಯ ವಿಲ್ಲ. ಆದರೆ, ||೯೩||

ನಾನು ಸ್ವಾಮಿಕಾರ್ಯದಲ್ಲಿಯೇ ಪ್ರವೃತ್ತನಾಗಿದ್ದರೂ ಸ್ವಾಮಿಯು, ಕಾರ್ಯಾಂತರವನ್ನು ಸಾಧಿಸಲು ನನಗೆ ಮತ್ತೆ ಅನುಜ್ಞೆಯನ್ನಿತ್ತರೆ, ಆ ಕ್ಷಣದಲ್ಲಿಯೇ ಅದನ್ನು ಕೈಗೊಳ್ಳುವೆನು. ನನಗೆ ಈ ಮೂರು ಲೋಕಗಳಲ್ಲಿಯೂ ಸಾಧಿಸಲಸಾಧ್ಯವಾದ ಕಾರ್ಯವು ಮತ್ತಾವುದೂ ಇರಲಾರದು. ||೯೪||

ಲೋಕಮಾತೆಯಾದ ದೇವಿಯು ಸ್ವತಂತ್ರಳಾಗಿರುವಳು. ಆದುದರಿಂದಲೇ ನನಗೆ ದೇವಿಯ ದರ್ಶನವು ದುರ್ಲಭವೆನಿಸುವುದು. ದೇವಿಯು ಆ ಸ್ವತಂತ್ರ ವೃತ್ತಿಯನ್ನು ಅವಲಂಬಿಸಿ ಜಾಗ್ರತೆ ಹೊರಟರೆ ಯಾರುತಾನೇ ದೇವಿಯನ್ನು ನಿರೋಧಿಸಬಲ್ಲರು. ||೯೫||

ಪಾರ್ವತಿಯು ಇಷ್ಟಾನುಸಾರವಾಗಿ ವಿಹರಿಸುತ್ತಿರಲು, ಅವಳನ್ನು ಸಂದರ್ಶಿಸುವ ಇಚ್ಛೆಯಿಂದ ಇಲ್ಲಿಗೆ ಸಮಯನೋಡಿ ಬಂದಿರುವ ನಮ್ಮನ್ನು ಏಕೆ ಆಕ್ಷೇಪಿಸುವೆ ? ಅದನ್ನು ವಿಶ್ವಾಸದಿಂದ ನಮಗೆ ಹೇಳುವವನಾಗು. ||೯೬||

ಮಹಾಪ್ರಭುತ್ವಮಂಬಾಯಾಃ ಶಂಕರಸ್ಯ ಯಥಾ ತಥಾ ।
ತದಗ್ರೇ ವಕ್ತುಮಿಚ್ಛಾಮಿ ಕಥಂ ವಾ ಭವತಿ ಸ್ಫುಟಂ ॥೯೭॥

ಕೋಟಿಯೋಜನದೂರಸ್ಥಾಸ್ಸುರಾಸ್ಸರ್ವೇಽಪಿ ಸಾದರಾಃ ।
ಪೂಜಾರ್ಥಮಾಗತಾಸ್ತೇಷಾಂ ದರ್ಶನಂ ಜಾತಮೇವ ನಃ ॥೯೮॥

ಪ್ರಣಾಮೈಸ್ತೇ ಪರಿಶ್ರಾಂತಾಃ ಸ್ವೇದಧಾರಾಪರಿಪ್ಲುತಾಃ ।
ತದ್ಧಾರಾಭಿಃ ಸಮುದ್ರೋಽಪಿ ಪೂರ್ಣೋಽಪ್ಯುದ್ವೇಲತಾಂ ಗತಃ ॥೯೯॥

ದೇವಾಂಗನಾಶ್ಚ ಪದ್ಮಾದ್ಯಾಃ ಪ್ರಣತಾಸ್ತಾಃ ಪುನಃ ಪುನಃ ।
ಶ್ರಾಂತಾಃ ಕೇವಲಮಂಬಾಯಾಸ್ತಾಸು ದೃಷ್ಟಿರ್ನ ಸರ್ವಥಾ ॥೧೦೦॥

ವಿಮಾನರತ್ನಮಾರೂಢಾ ಮೃಡಾಣೀ ಸಂಸ್ಥಿತಾ ತದಾ ।
ಉತ್ಪಶ್ಯಂತಿ ಸುರಾಃ ಸರ್ವೇ ಸ್ವಸ್ವದಾರಾಸಮಾವೃತಾಃ ॥೧೦೧॥

ಶಿವನಿಗಿರುವಂತೆಯೇ, ದೇವಿಯಾದ ಭವಾನಿಗೂ ಮಹತ್ತರವಾದ ಪ್ರಭುತ್ವವಿರುವುದು. ಅದು ಹೇಗೆಂಬುದನ್ನು ಮುಂದೆ ಸ್ಪಷ್ಟವಾಗಿ ತಿಳಿಯಪಡಿಸುವೆನು. ॥೯೭॥

ಇಲ್ಲಿಂದ ಕೋಟಿಯೋಜನಗಳಷ್ಟು ದೂರದಲ್ಲಿ ವಾಸವಾಗಿರುವ ಸಕಲ ದೇವತೆಗಳೂ ಸಹ ಪ್ರೀತಿಪುರಃಸರವಾಗಿ ದೇವಿಯನ್ನು ಆರಾಧಿಸಲು ಬಂದಿರುವರು. ಹೀಗೆ ಬಂದಿರುವ ಅವರನ್ನು ನಾವು ನೋಡಿಯೇ ಬಂದೆವು. ॥೯೮॥

ಅವರು ದೇವಿಯನ್ನು ಬಾರಿಬಾರಿಗೂ ನಮಸ್ಕರಿಸಿ, ಅದರಿಂದ ಬಳಲಿ ಬೇಸತ್ತು ಬೆವರಿನ ಧಾರೆಯನ್ನು ಸುರಿಸುತ್ತಿರುವರು. ಅವರ ಬೆವರಿನ ಪ್ರವಾಹದಿಂದ ತುಂಬಿ ತುಳುಕುವ ಸಮುದ್ರವು ದಡವನ್ನು ಅತಿಕ್ರಮಿಸಿ ಪ್ರವಹಿಸುತ್ತಿರುವುದು. ॥೯೯॥

ಲಕ್ಷ್ಮಿಯೇ ಮೊದಲಾದ ದೇವತಾಸ್ತ್ರೀಯರು ಭವಾನಿಯನ್ನು ಮತ್ತೆ ಮತ್ತೆ ನಮಸ್ಕರಿಸಿ, ಬಳಲಿ ಬೇಸತ್ತಿರುವರು. ಆದರೂ ಅವರು ದೇವಿಯ ದೃಷ್ಟಿಗೆ ಪಾತ್ರರಾಗಲಿಲ್ಲ. ॥೧೦೦॥

ಶಿವನ ಅರ್ಧಾಂಗಿಯಾದ ದೇವಿಯು ಸ್ವೇಚ್ಛಾಗಾಮಿಯಾದ ವಿಮಾನವನ್ನೇರಿ ಇತ್ತಕಡೆ ಬರುತ್ತಿರುವ ಸಮಯದಲ್ಲಿ ದೇವತೆಗಳೆಲ್ಲರೂ ತಮ್ಮ ತಮ್ಮ

ಅಹೋ ಸ ಸಂಭ್ರಮಸ್ತಾವದವಾಙ್ಮನಸಗೋಚರಃ ।
ತದ್ವಿಹಾರಪ್ರಭಾವೋಽಪಿ ವೇದಾನಾಮಪ್ಯಗೋಚರಃ ॥೧೦೨॥

ಅಹೋ ಶಿವಾವಿಲಾಸೋಽಯಂ ವಿಲಾಸಃ ಶೈವ ಏವ ಹಿ ।
ತದ್ದರ್ಶನಂ ನ ಪುಣ್ಯಾನಾಂ ರಾಶಿಭಿರ್ವಾ ಪ್ರಜಾಯತೇ ॥೧೦೩॥

ತದಾಗಮನವೇಲಾಯಾಮುತ್ಸಾಹಾ ಯಾದೃಶಾಃ ಪುರಾ ।
ತಾದೃಶಾ ನ ಕದಾಪ್ಯಗ್ರೇ ಭವಿಷ್ಯಂತಿ ವಿಶೇಷತಃ ॥೧೦೪॥

ವಿಲಕ್ಷಣಃ ಸ ಸಮಯಃ ಶಿವಾಗಮನಸಂಯುತಃ ।
ತಾನಿ ತೂರ್ಯಾಣಿ ತೇ ವಾತಾಸ್ತಾದೃಶಾಃ ಪುಷ್ಪವೃಷ್ಟಯಃ॥೧೦೫ ॥

ತಾ ಜಯಧ್ವನಯೋ ದೇವ್ಯಾಸ್ತಾನಿ ಸ್ತೋತ್ರಾಣಿ ಯೈಃ ಸುರೈಃ ।
ಕೃತಾನಿ ಶ್ರವಣೇನಾಪಿ ಸಿದ್ಧಿದಾನಿ ಪದೇ ಪದೇ ॥೧೦೬॥

ಪತ್ನಿಯರಿಂದೊಡಗೂಡಿ ದೇವಿಯನ್ನು ಕತ್ತೆತ್ತಿ ಮೇಲಕ್ಕೆ ನೋಡುತ್ತಿದ್ದರು. ||೧೦೧||

ದೇವಿಯ ಪ್ರಯಾಣ ಸಂಭ್ರಮವನ್ನು ವರ್ಣಿಸಲಶಕ್ಯ. ಅವಳ ಸಂಚಾರದ ಸೊಬಗನ್ನು ವರ್ಣಿಸಲು ವೇದಗಳೂ ಅಸಮರ್ಥಗಳೆಂದೇ ಹೇಳಬಹುದು. ||೧೦೨||

ಭವಾನಿಯ ಈ ಕ್ರೀಡೆಯು ಶಿವನ ಅನುಗ್ರಹದಿಂದ ಬಂದಿರುವ ಮಹಿಮೆಯೇ ಅಲ್ಲವೆ! ಅನೇಕ ಪುಣ್ಯಗಳನ್ನು ಸಂಪಾದಿಸಿ ಸುಕೃತಿಗಳೆನಿಸಿದವರಿಗೂ ಅದರ ದರ್ಶನವು ದುರ್ಲಭವಾಗಿರುತ್ತದೆ. ಇದಲ್ಲವೇ ಆಶ್ಚರ್ಯ. ||೧೦೩||

ದೇವಿಯು ಬರುವ ಕಾಲದಲ್ಲಿ ಯಾವ ಪ್ರಕಾರವಾದ ಉತ್ಸಾಹಗಳು ಉಂಟಾಗಿದ್ದವೋ, ಆ ರೀತಿಯ ಸಂಭ್ರಮಗಳು ಮುಂದೆ ಎಂದೂ ಒದಗಲಾರವು. ||೧೦೪||

ದೇವಿಯ ಸಮಾಗಮನವು ತುಂಬಾ ಆಶ್ಚರ್ಯಕರವಾಗಿದ್ದಿತು. ಆ ಕಾಲದ ಮನೋಹರವಾದ ವಾದ್ಯಗಳು, ಪ್ರಯಾಣಾನುಕೂಲವಾದ ಮತ್ತು ಸುಗಂಧಭರಿತವಾದ ಪುಷ್ಪಗಳು, ಇವುಗಳನ್ನು ವರ್ಣಿಸಲು ಸಾಧ್ಯವೇ? ||೧೦೫||

ದೇವಕೆಗಳ ಜಯಕಾರಗಳೂ ಮತ್ತು ದೇವತೆಗಳು ಮಾಡಿದ ಸ್ತೋತ್ರಗಳೂ ಶ್ರವಣಮಾತ್ರದಿಂದಲೇ ಅಭೀಷ್ಟವನ್ನು ದಯಪಾಲಿಸುವುವುಗಳಾಗಿವೆ. ||೧೦೬||

ಸಿದ್ಧಾನಾಮಪಿ ಸಂಮರ್ದಃ ಗಂಧರ್ವಾಣಾಂ ಚ ಕೋಟಿಶಃ।
ಕಿನ್ನರಾಣಾಂ ಮುನೀನಾಂ ಚ ವಕ್ತುಮೇವ ನ ಶಕ್ಯತೇ ॥೧೦೭॥

ವೇತ್ರಪ್ರಹಾರಸಂತ್ರಾಸಾಸ್ಸರ್ವೇ ನಾರಾಯಣಾದಯಃ।
ಅದ್ಯಾಪಿ ಕಂಪಸಂಪನ್ನಾಸ್ಸುರನಾರೀಗಣೈಸ್ಸಹ ॥೧೦೮॥

ಸಂತ್ರಸ್ತಾ ಅಪಿ ಸಾನಂದಾಃ ಸರ್ವೇ ನಾರಾಯಣಾದಯಃ।
ಸ ವಾಗ್ವಿಷಯತಾಂ ನಾಪ ಮನೋವಿಷಯತಾಮಪಿ ॥೧೦೯॥

ನ ವೃತ್ತಂ ಭವತಾಂ ಭಾಗ್ಯಂ ತತ್ಸಂಮರ್ದಾವಲೋಕನೇ।
ರತ್ನನೀರಾಜನಾನಾಂ ಚ ರಾಜಯಸ್ತಾಸ್ತಥಾವಿಧಾಃ ॥೧೧೦॥

ದೇವಾಂಗನಾಭಿಸ್ಸರ್ವಾಭಿಸ್ತದಾ ಗಾನಪುರಃಸರಂ।
ನೀರಾಜನಾನಿ ದತ್ತಾನಿ ತೇಷಾಂ ಸಂಖ್ಯಾ ನ ಸರ್ವಥಾ ॥೧೧೧॥

ಆಗ ಅಸಂಖ್ಯಾಕರಾದ ಸಿದ್ಧರೂ, ಗಂಧರ್ವರೂ, ಕಿನ್ನರರೂ, ಮುನಿಗಳೂ ಅಲ್ಲಿಗೆ ಬಂದಿದ್ದರು. ಆ ಸುರಸಂದಣಿಯನ್ನು ವರ್ಣಿಸಲು ಅಸಾಧ್ಯವೆಂದೇ ಹೇಳಬಹುದು. ॥೧೦೭॥

ವೇತ್ರಧಾರಿಗಳ ಬೆತ್ತಗಳಿಂದ ಎಲ್ಲಿ ಅಪಘಾತವಾಗುವುದೋ ಎಂದು ಹೆದರಿದ ಶ್ರೀಮನ್ನಾರಾಯಣನೇ ಮೊದಲಾದ ಸಕಲ ದೇವತೆಗಳೂ ತಮ್ಮ ತಮ್ಮ ಸ್ತ್ರೀಯರಿಂದೊಡಗೂಡಿ ಈಗಲೂ ಗಡಗಡನೆ ನಡುಗುತ್ತಲೇ ಇರುವುವು. ॥೧೦೮॥

ಹೀಗೆ ನಾರಾಯಣಾದಿ ಸಕಲ ದೇವತೆಗಳು, ಭಯಭ್ರಾಂತರಾಗಿದ್ದರೂ ದೇವಿಯನ್ನು ನೋಡುವ ಕುತೂಹಲದಿಂದ ಆನಂದಭರಿತರಾಗಿಯೇ ಮುಂದುವರಿಯುತ್ತಿದ್ದರು. ಆಗ ಅವರೆಲ್ಲರ ಆ ಸಂಭ್ರಮವನ್ನು ವಾಙ್ಮನಸ್ಸುಗಳಿಂದಲೂ ಚಿತ್ರಿಸಲು ಅಸಾಧ್ಯವಾಗಿದ್ದಿತು. ॥೧೦೯॥

ನೀವೆಲ್ಲರೂ ಆ ಸುರಸಂದಣಿಯನ್ನು ನೋಡುವ ಭಾಗ್ಯವನ್ನು ಪಡೆಯಲಿಲ್ಲ. ಮತ್ತು ಆ ಕಾಲದ ರತ್ನಖಚಿತವಾದ ನೀರಾಜನಗಳ ರಾಶಿಯನ್ನು ನೋಡುವ ಸುಯೋಗವೂ ನಿಮಗೆ ಲಭಿಸಲಿಲ್ಲ. ॥೧೧೦॥

ದೇವತಾಸ್ತ್ರೀಯರೆಲ್ಲರೂ ಆ ಸಮಯದಲ್ಲಿ, ದೇವಿಯ ಸ್ತೋತ್ರಗಳನ್ನು ಗಾನರೂಪವಾಗಿ ಹಾಡುತ್ತಾ, ದೇವಿಗೆ ನೀರಾಜನಗಳನ್ನು ಸಮರ್ಪಿಸಿದರು. ಆ ನೀರಾಜನಗಳ ಸಂಖ್ಯೆಯು ಲೆಕ್ಕಿಸಲು ಅಶಕ್ಯವಾಗಿದ್ದಿತು. ॥೧೧೧॥

ನೀರಾಜನಪ್ರಭಾಕೋಟೀ ಮೇರುಕೂಟಪ್ರಭಾಕರಃ ।
ಸ ಕಿಂ ನ ದೃಷ್ಟೋ ಸಹಸಾ ಭವದ್ಭಿರ್ಮೇರುಕೂಟಗೈಃ ॥೧೧೨॥

ಮನ್ನೇತ್ರಾಣಾಂ ಫಲಂ ಜಾತಂ ತತ್ಸಂಮುದಾವಲೋಕನೇ ।
ಶಂಕರಸ್ಯೈವ ಕೃಪಯಾ ತತ್ಫಲಂ ಜಾತಮದ್ಯ ಮೇ ॥೧೧೩॥

ತತ್ಫಲೇನ ಪವಿತ್ರಸ್ಯ ಮಮ ಭೀತಿರ್ನ ಸರ್ವಥಾ ।
ಶಂಕರೇಣಾಪಿ ತಜ್ಜ್ಞಾತಮತಃ ಕೇನ ಭಯಂ ಮಮ ॥೧೧೪॥

ಸ ಸರ್ವಜ್ಞೋ ಮಹಾದೇವಃ ಕುಪಿತಃ ಕಿಂ ಮಯಿ ಪ್ರಭುಃ ।
ಅಸ್ವಾತಂತ್ರ್ಯಮಪಿ ಜ್ಞಾತಂ ತೇನಾಪ್ಯಾಗಮನೋತ್ಸವೇ ॥೧೧೫॥

ಇದಾನೀಂ ಸಂಪ್ರವಿಷ್ಟಾಸ್ತಿ ಕೈಲಾಸಭವನಾಂತರೇ ।
ತತ್ರಾಸ್ಮಾಕಂ ಪ್ರವೇಶಃ ಕಿಂ ಯೇನ ಸ್ಯಾದ್ಗಮನತ್ವರಾ ॥೧೧೬॥

ನೀರಾಜನಗಳ ಕಾಂತಿಯು ಮೇರುಪರ್ವತದ ಶಿಖರಗಳ ಸೂರ್ಯನೋ ಎಂಬಂತೆ ಕಂಗೊಳಿಸುತ್ತಿದ್ದಿತು. ಅದನ್ನು ಮೇರುಪರ್ವತದ ಅಗ್ರಭಾಗದಲ್ಲಿ ಇದ್ದ ನೀವು ನೋಡಲಿಲ್ಲವೇ ? ॥೧೧೨॥

ಆ ಸುರಸಮೂಹವನ್ನು ನೋಡಿದುದರಿಂದ ನನ್ನ ನೇತ್ರಗಳು ಸಫಲವಾದುವು. ನನಗೆ ಆ ಫಲವು ಲಭಿಸಿದುದು ಶಿವನ ಕೃಪೆಯಿಂದಲೇ. ॥೧೧೩॥

ಅದನ್ನು ಸಂದರ್ಶಿಸಿದುದರಿಂದ ಉಂಟಾದ ಫಲವು ನನ್ನನ್ನು ಪವಿತ್ರನನ್ನಾಗಿಯೂ, ನಿರ್ಭೀತನನ್ನಾಗಿಯೂ ಮಾಡಿರುವುದು. ಈ ಸಂಗತಿಯನ್ನು ಶಿವನೂ ತಿಳಿದುಕೊಂಡಿರುವನು. ಹೀಗಿರುತ್ತಿರಲು ನನಗೆ ಭಯವು ಎಲ್ಲಿಂದ ಬರಬೇಕು ? ॥೧೧೪॥

ಅದರಿಂದ ನಾನು ಇಲ್ಲಿಗೆ ಬರಲು ವಿಲಂಬವಾದುದಕ್ಕೆ ತ್ರಿಕಾಲಜ್ಞನಾದ ಆ ಪರಶಿವನು ನನ್ನಲ್ಲಿ ಕೋಪಗೊಳ್ಳುವನೇ ! ನಾನು ಸ್ವೇಚ್ಛೆಯಿಂದ ಇಲ್ಲಿಗೆ ಬರಲು ಅಸಮರ್ಥನಾಗಿದ್ದನೆಂಬುದನ್ನು ಅವನೂ ತಿಳಿದಿರುವನು. ॥೧೧೫॥

ಈಗ ದೇವಿಯು ಕೈಲಾಸಪರ್ವತದ ಒಂದಾನೊಂದು ಗೃಹದಲ್ಲಿ ಪ್ರವೇಶಿಸಿರುವಳು. ಆದರೆ ನಮಗೆ ಅಲ್ಲಿ ಪ್ರವೇಶಿಸಲವಕಾಶವಿರುವುದೇ? ಹಾಗಿದ್ದರೆ ನಾವು ಅಲ್ಲಿಗೆ ಹೋಗಲು ಆತುರರಾಗುತ್ತಿದ್ದೆವು. ॥೧೧೬॥

ಅತಃ ಪರಂ ಪ್ರಯತ್ನೋಽಪಿ ಕರ್ತವ್ಯೋ ಭವತಾಂ ಯದಿ ।
ಸಾಮರ್ಥ್ಯಂ ತತ್ರ ವಾರ್ತಾಂ ವಾ ನಃ ಕರಿಷ್ಯತಿ ಸತ್ವರಂ ॥೧೧೭॥

ಏವಂ ವದತ್ಸು ಸರ್ವೇಷು ಗಣೇಷ್ವನ್ಯೋನ್ಯಮಾದರಾತ್ ।
ವಾಣೀ ಕಾಪಿ ಸಮುತ್ಪನ್ನಾ ತಸ್ಮಿನ್ನೇವಾಶರೀರಿಣೀ ॥೧೧೮॥

ಅಂಬ ಪ್ರಯಾತು ಶೈಲೇಂದ್ರೋ ಮೇನಯಾ ಸಹ ಮಂದಿರಂ ।
ಸ್ವಮಂದಿರಪರಿಷ್ಕಾರಃ ಕರ್ತವ್ಯಸ್ತೇನ ಕಿಂ ಶಿವೇ ॥೧೧೯॥

ವಿಲಂಬೋಽಪಿ ಕಿಯಾನೇವಂ ಶಿವದರ್ಶನಲಾಲಸೇ ।
ಶಿವಾನುಗ್ರಹವಾಂಛಾಯಾಂ ವಿಲಂಬೋ ಯುಕ್ತ ಏವ ನ ॥೧೨೦॥

ಇತಿ ತದ್ವಚನಂ ಶ್ರುತ್ವಾ ಸಿಂಹಮಾರುಹ್ಯ ಶೈಲಜಾ ।
ಪ್ರೇಷಯಾಮಾಸ ಶೈಲೇಂದ್ರಂ ಸರ್ವಸಂಪತ್ಸಮನ್ವಿತಂ ॥೧೨೧॥

ಆದುದರಿಂದ ನಿಮ್ಮೊಳಗೆ ಯಾರಾದರೂ ನಾನು ಬಂದಿರುವ ವಾರ್ತೆಯನ್ನು ತಿಳಿಸಲು ಸಮರ್ಥರಾದರೆ, ಶೀಘ್ರವಾಗಿ ದೇವಿಯ ಬಳಿಗೆ ಹೋಗಿ ನಾನು ಬಂದಿರುವುದನ್ನು ತಿಳಿಸಲು ಪ್ರಯತ್ನಿಸಿರಿ." ||೧೧೭||

ಆ ಗಣಗಳು ಪರಸ್ಪರವಾಗಿ ಈ ರೀತಿಯಲ್ಲಿ ಸಂಭಾಷಿಸುತ್ತಿರಲು, ಅಲ್ಲಿಯೇ ಯಾವುದೋ ಒಂದು ಅಶರೀರವಾಣಿಯು ಕೇಳಿಬಂದಿತು. ||೧೧೮||

ಅಶರೀರವಾಣಿಯು ದೇವಿಯಾದ ಪಾರ್ವತಿಯನ್ನು ಕುರಿತು ಹೀಗೆಂದಿತು. "ಎಲೌ, ಅಂಬಿಕೆಯೇ, ಪರ್ವತರಾಜನು ಮೇನಕೆಯೊಂದಿಗೆ ತನ್ನ ಗೃಹವನ್ನು ಕುರಿತು ತೆರಳಲಿ. ನೀನು ನಿನ್ನ ಗೃಹವಾದ ಶಿವಾಲಯವನ್ನು ಪ್ರವೇಶಿಸಿ ಅದನ್ನು ಅಲಂಕಾರಗೊಳಿಸುವವಳಾಗು. ||೧೧೯||

ದೇವಿಯೇ, ಶಿವನನ್ನು ಸಂದರ್ಶಿಸುವುದರಲ್ಲಿ ಉತ್ಕಟೇಚ್ಛೆಯುಳ್ಳ ನೀನು ಅವನಿದ್ದಲ್ಲಿಗೆ ಹೋಗಲು, ಇಷ್ಟೇಕೆ ತಡಮಾಡುವೆ? ಶಿವನ ಅನುಗ್ರಹವನ್ನು ನೀನು ಬಯಸುವೆಯಾದರೆ ಇನ್ನು ವಿಲಂಬಮಾಡುವುದು ನಿನಗೆ ಉಚಿತವಾದುದಲ್ಲ."||೧೨೦||

ಈ ರೀತಿಯಾದ ಅಶರೀರವಾಣಿಯನ್ನು ಕೇಳಿ ಪಾರ್ವತಿಯು ಸಿಂಹವನ್ನೇರಿ ಸಕಲ ಧನಕನಕಾದಿ ಸಂಪತ್ತುಗಳಿಂದ ಕೂಡಿದ ಪರ್ವತರಾಜನನ್ನು ತನ್ನ ಗೃಹಕ್ಕೆ ತೆರಳಲು ಬೀಳ್ಕೊಟ್ಟಳು. ||೧೨೧||

ಸಾ ದೃಷ್ಟ್ವಾ ಗಿರಿಶಾ ಪುನಃ ಪುನರುಮಾ ದೃಷ್ಟ್ವಾಥ ಸಾ ಮಾತರಂ
ಸಾ ದೃಷ್ಟ್ವಾಪಿ ತಯಾ ಪುನಃ ಪುನರಪಿ ಪ್ರೇಮ್ಣಾ ಪುನರ್ದರ್ಶನೇ।
ಇಚ್ಛಾಂ ಸಾಪಿ ಚಕಾರ ಸೋಽಪಿ ಗಿರಿರಾಡಾನಂದಧಾರಾವೃತಂ
ಪ್ರಾಹಾಂಬಾಮನುವಾರಮಂಬ ಕೃಪಯಾ ಮಾಂ ಪಶ್ಯ ಪಶ್ಯೇತ್ಯಪಿ॥೧೨॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಕೈಲಾಸಪರ್ವತಂ ಪ್ರತಿ ಪಾರ್ವತ್ಯಾಃ ಗಮನಂ ನಾಮ ಸಪ್ತಮೋಽಧ್ಯಾಯಃ

ದೇವಿಯು ಈ ರೀತಿಯಲ್ಲಿ ತಂದೆಯಾದ ಪರ್ವತರಾಜನನ್ನು ಬೀಳ್ಕೊಡಲು, ಪರ್ವತರಾಜನು ತನ್ನ ಪ್ರಿಯಪುತ್ರಿಯ ಕಡೆಗೆ ಮತ್ತೆ ಮತ್ತೆ ನೋಡಿ ಆನಂದ ಸಾಗರದಲ್ಲಿ ಮುಳುಗಿದನು. ಪಾರ್ವತಿಯೂ ಸಹ ತಾಯಿಯಾದ ಮೇನಕೆಯನ್ನು ಬಾರಿಬಾರಿಗೂ ದಿಟ್ಟಿಸಿ ನೋಡಿದಳು. ಮೇನೆಯಾದರೋ ಮಗಳ ಆ ಮುದ್ದು ಮುಖವನ್ನು ಪ್ರೀತಿಯಿಂದ ನೋಡಿದಳು. ಈ ರೀತಿಯಲ್ಲಿ ಅವರು ಪುನಃ ಪುನಃ ಪರಸ್ಪರವಾಗಿ ಒಬ್ಬರನ್ನೊಬ್ಬರು ನೋಡುತ್ತಾ ಅತ್ಯಂತ ಸಂತೋಷಭರಿತರಾದರು. ಮೇನಕೆಯು ಮಗಳನ್ನು ಬಾರಿಬಾರಿಗೂ ನೋಡಿದರೂ ತೃಪ್ತಿಯನ್ನು ಹೊಂದದೆ ಮತ್ತೆ ಮತ್ತೆ ಅವಳನ್ನು ನೋಡಲಿಚ್ಛಿಸಿದಳು. ಬಳಿಕ ಪರ್ವತರಾಜನು ಆನಂದಾಶ್ರುಗಳನ್ನು ಸುರಿಸುತ್ತಿರುವ ತನ್ನ ಪ್ರಿಯಪುತ್ರಿಯನ್ನು ನೋಡಿ "ಜನನಿ, ನನ್ನಲ್ಲಿ ಕೃಪೆಯನ್ನಿಟ್ಟು ಅನುಗ್ರಹಿಸುವವಳಾಗು" ಎಂದು ಪ್ರತಿಕ್ಷಣವೂ ದೀನವಾಣಿಯಿಂದ ಬೇಡಿಕೊಂಡನು. ||೧೨||

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದಲ್ಲಿ ಮೊದಲನೆಯಭಾಗದಲ್ಲಿ ಕೈಲಾಸ
ಪರ್ವತವನ್ನು ಕುರಿತು ಪಾರ್ವತಿಯ ಸಮಾಗಮವೆಂಬ
ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಅಷ್ಟಮೋಽಧ್ಯಾಯಃ

॥ ವ್ಯಾಸ ಉವಾಚ ॥

ಆರುಹ್ಯ ಸಿಂಹಮಂಬಾ ಸಾ ಕ್ಷಣಮಾತ್ರಂ ತತಃ ಪರಂ ।
ಶಂಕರಪ್ರೇಷಿತಂ ದಿವ್ಯಂ ವಿಮಾನವರಮಾಶ್ರಿತಾ ॥೧॥

ತಸ್ಮಿನ್ವಿಮಾನೇ ಸಂವಿಷ್ಟಾ ಯದಾ ಶಂಕರವಲ್ಲಭಾ ।
ತದಾ ದುಂದುಭಯೋ ನೇದುರ್ಜಯಶಬ್ದಪುರಃಸರಂ ॥೨॥

ತತಸ್ತೇ ಪ್ರಮಥಾಸ್ಸರ್ವೇ ಶರ್ವಾಣೀಚರಣಾಂಬುಜಂ ।
ಸ್ಮೃತ್ವಾ ಪ್ರಹೃಷ್ಟಾಃ ಪ್ರಣತಾ ಪುನಃ ಪುನರನಾತುರಾಃ ॥೩॥

ಎಂಟನೆಯ ಅಧ್ಯಾಯ

ಬಳಿಕ ವ್ಯಾಸಮುನಿಯು ಶಿವರಹಸ್ಯವನ್ನು ಮುಂದುವರಿಸುತ್ತಾ ಮುನಿಗಳನ್ನು ಕುರಿತು ಹೀಗೆಂದನು. ಎಲೈ ಮುನಿಪುಂಗವರೇ, ಈ ಪ್ರಕಾರವಾಗಿ ಹಿಮವಂತ ಮೇನಕೆಯರನ್ನು ಬೀಳ್ಕೊಟ್ಟು, ಪಾರ್ವತಿಯು ಕ್ಷಣಕಾಲ ಸಿಂಹವನ್ನೇರಿ, ಬಳಿಕ ಪ್ರಿಯತಮನಾದ ಶಿವನು ಕಳುಹಿಸಿದ ಅಮೂಲ್ಯವಾದ ವಿಮಾನವನ್ನು ಹತ್ತಿದಳು. ॥೧॥

ಪಾರ್ವತಿಯು ವಿಮಾನದಲ್ಲಿ ಕುಳಿತುಕೊಳ್ಳಲು ಆ ಕಾಲದಲ್ಲಿ ದೇವದುಂದುಭಿಗಳು ಜಯಜಯಕಾರದಿಂದ ಧ್ವನಿಗೈದವು. ॥೨॥

ತರುವಾಯ ಅಲ್ಲಿದ್ದ ಆ ಪ್ರಮಥಗಣಗಳೆಲ್ಲವೂ, ಭವಾನಿಯ ಅಡಿದಾವರೆ

ತೂರ್ಯದುಂದುಭಿಘೋಷೈಸ್ತೇ ಜಯಧ್ವನಿಪುರಃಸರಂ ।
ವೇತ್ರಹಸ್ತಾಃ ಪ್ರಚಲಿತಾಃ ಕಂಪಯಂತಸ್ಸುರಾಚಲಂ ॥೪॥

ಶಿವನಾಮಾನುವಾದೇನ ಶಿವಾಸಂತೋಷಹೇತುನಾ ।
ಸಾನಂದಾ ಏವ ಸರ್ವೇಽಪಿ ಧಾವಂತಃ ಪುರತೋ ಬಭುಃ ॥೫॥

ಶ್ರುತ್ವಾ ನಾಮಾನಿ ತಾನ್ಯಂಬಾ ಮನೋಜ್ಞಾನಿ ಶಿವಪ್ರಿಯಾ ।
ಆನಂದಪರಿಪೂರ್ಣಾ ಸಾ ಸ್ಮರಂತೀ ಶಂಕರಂ ಮುದಾ ॥೬॥

ಶಿವನಾಮಾನಿ ಗಾಯಂತೀ ಮಧುರಂ ಮಧುರಸ್ವರಾ ।
ಮಧುರಾಕ್ಷರಸಂಪನ್ನಾನ್ಯನುವಾರಂ ಶಿವಪ್ರಿಯಾ ॥೭॥

ಶಿವ ಹರ ಭವ ಭರ್ಗ ಭೀಮ ಸ್ಮರಹರ ಶಂಕರ ಶರ್ವ ಚಂದ್ರಮೌಳೇ ।
ತ್ರಿನಯನ ವೃಷಕೇತನಾಂತಕಾರೇ ಗಿರಿಶ ಗಿರೀಶ ಮೃಡೇಶ ರುದ್ರ ಪಾಹಿ॥೮॥

ಗಳನ್ನು ಸ್ಮರಿಸುತ್ತಾ ಸಂತೋಷಗೊಂಡವರಾಗಿ ಅತಿ ನಮ್ರತೆಯಿಂದ ಬಾರಿಬಾರಿಗೂ ನಮಸ್ಕರಿಸಿದರು. ॥೩॥

ಗಣಗಳು ಜಯಜಯಕಾರವನ್ನು ಮಾಡುತ್ತಾ ತುತ್ತೂರಿ, ನಗಾರಿ ಮುಂತಾದುವುಗಳನ್ನು ಬಾರಿಸುತ್ತಾ, ಸುವರ್ಣದಂಡಗಳನ್ನು ಕೈಯಲ್ಲಿ ಧರಿಸಿದವರಾಗಿ ಮೇರು ಪರ್ವತವನ್ನು ನಡುಗಿಸುತ್ತಿರುವರೋ ಎಂಬಂತೆ ಮುಂದೆ ನಡೆದರು. ॥೪॥

ದೇವಿಗೆ ಕರ್ಣಾನಂದವನ್ನುಂಟುಮಾಡುವ ಶಿವನಾಮಗಳನ್ನುಚ್ಚರಿಸುತ್ತಾ ಅವರೆಲ್ಲರೂ ಸಂತೋಷಭರಿತರಾಗಿ ಮುಂದೆ ಓಡುತ್ತಾ ಪ್ರಕಾಶಿಸಿದರು. ॥೫॥

ಪಾರ್ವತಿಯು ಮನೋಹರವಾದ ಆ ಶಿವನಾಮಗಳನ್ನು ಕೇಳಿ ಪ್ರಿಯತಮನಾದ ಶಂಕರನನ್ನು ಪ್ರೀತಿಯಿಂದ ಸ್ಮರಿಸುತ್ತಾ ಆನಂದಭರಿತಳಾಗುತ್ತಿದ್ದಳು. ॥೬॥

ದೇವಿಯೂ ಸಹ ಮಧುರವಾದ ಧ್ವನಿಯಿಂದ, ಮಧುರವಾದ ಅಕ್ಷರಗಳಿಂದ ಕೂಡಿರುವ ಶಿವನಾಮಗಳನ್ನು ಪ್ರತಿಕ್ಷಣದಲ್ಲಿಯೂ ಗಾನಮಾಡುತ್ತಾ ನಡೆದಳು. ॥೭॥

ಅವಳು ಶಿವ, ಹರ, ಭರ್ಗ, ಭೀಮ, ಶಂಕರ, ಶರ್ವ ಇವೇ ಮೊದಲಾದ ಶಿವನಾಮಗಳನ್ನು ಗಾನಮಾಡುತ್ತಾ ಹೊರಟಳು. ॥೮॥

ಶಂಭೋ ಭರ್ಗ ಭವೇಂದುಶೇಖರ ಮಹಾದೇವಸ್ಮರಾರೇ ಹರ
ಶ್ರೀಕಂಠೇಶ ಮಹೇಶ ಶಂಕರ ಮೃಡ ತ್ರ್ಯಕ್ಷಾಕ್ಷರೋಮಾಪತೇ ।
ಶರ್ವೋಗ್ರೇಶ್ವರ ರುದ್ರ ಭೀಮ ಭಗವಚ್ಛೂಲಿನ್ ಕಪರ್ದಿನ್ ಶಿವ
ಶ್ರೀಮೃತ್ಯುಂಜಯವಿಶ್ವನಾಥಗಿರಿಶಶ್ರೀವಾಮದೇವಾವ ಮಾಂ ॥೯॥

ಶಂಭುಂ ಶಂಕರಮಿಂದುಶೇಖರಮುಮಾಕಾಂತಂ ಮಹೇಶಂ ಶಿವಂ
ಶರ್ವಂ ರುದ್ರಮನಂಗದಕ್ಷಮಥನಂ ಮೃತ್ಯುಂಜಯಂ ಶಂಕರಂ ।
ಭರ್ಗಂ ಭೂತಪತಿಂ ಭವಂ ಪಶುಪತಿಂ ಫಾಲಾಕ್ಷಮುಕ್ಷಧ್ವಜಂ
ಭೀಮಂ ದಿಗ್ವಸನಂ ಮೃಡಂ ಹರಮಜಂ ಶ್ರೀಕಂಠಮೀಶಂ ಭಜೇ ॥೧೦॥

ಶಂಭೋ ಕ್ವಾಪಿ ನ ತಾರಕಾ ಅಪಿ ನ ವಾ ಚಂದ್ರೋ ನ ವಾ ಭಾನುಮಾನ್
ನಾನ್ಯಃ ಕೋಽಪಿ ಸುರೋತ್ರ ಕುತ್ರ ವಸತಿ ಶ್ರೀಚಂದ್ರಮೌಳೇ ತವ ।

ಹೀಗೆ ಶಿವನಾಮಗಳನ್ನು ಉಚ್ಚರಿಸುತ್ತಲೂ "ಓ ಶಿವನೇ, ನನ್ನನ್ನು ಕಾಪಾಡು" ಎಂದು ಬೇಡಿಕೊಂಡು ಭರ್ಗ, ಭವ, ಚಂದ್ರಶೇಖರ, ಈಶ್ವರ, ಮೃಡ, ಮೃತ್ಯುಂಜಯ, ವಾಮದೇವ, ವಿಶ್ವೇಶ್ವರ, ಮಹೇಶ್ವರ, ಉಗ್ರರೂಪಿನ್, ಭೀಮ ಸ್ವರೂಪನೇ ಮುಂತಾದ ನಾಮಗಳಿಂದ ಸ್ತುತಿಸಿದಳು. ॥೯॥

ಸುಖಸ್ವರೂಪನೂ, ಸುಖದಾಯಕನೂ, ಚಂದ್ರಶೇಖರನೂ, ಪಾರ್ವತೀಶನೂ, ಜಗದೊಡೆಯನೂ, ಮಂಗಳಸ್ವರೂಪನೂ, ಶರ್ವನೂ, ಪ್ರಲಯಕಾಲದಲ್ಲಿ ಭೂಮಿಯನ್ನು ತನ್ನ ಕ್ರೋಧಾಗ್ನಿಯಿಂದ ನಡುಗಿಸುವವನೂ, ಮನ್ಮಥನನ್ನೂ ಮತ್ತು ದಕ್ಷ ಪ್ರಜಾಪತಿಯನ್ನು ನಾಶಮಾಡಿದವನೂ, ಮೃತ್ಯುವನ್ನು ಜಯಿಸಿದವನೂ, ಮುಕ್ತಿದಾಯಕನೂ, ತೇಜಸ್ಸಿನಿಂದ ಕೂಡಿದವನೂ, ಪ್ರಾಣಿಗಳಿಗೆಲ್ಲಾ ಒಡೆಯನೂ, ಜಗತ್ಕಾರಣನೂ, ಪಶುಪತಿಯೂ, ಮುಕ್ಕಣ್ಣನೂ, ವೃಷಭವನ್ನು ಧ್ವಜದಲ್ಲಿರಿಸಿಕೊಂಡವನೂ, ಪ್ರಲಯಕಾಲದಲ್ಲಿ ಭಯಂಕರನೂ, ದಿಗಂಬರನೆನಿಸಿದವನೂ, ಪ್ರಾಣಿಗಳನ್ನು ಸುಖವಾಗಿರಿಸುವವನೂ, ಪಾಪನಾಶಕನೂ, ಕಂಠದಲ್ಲಿ ಲಕ್ಷ್ಮಿಯನ್ನು ಧರಿಸಿದವನೂ ಆದ ಆ ಶಿವನನ್ನು ಭಜಿಸುತ್ತೇನೆ. ॥೧೦॥

ಚಂದ್ರಶೇಖರನೇ, ನಿನ್ನ ಯಾವ ಗೃಹದ ಉಪ್ಪರಿಗೆಯಲ್ಲಿ ನಕ್ಷತ್ರಗಳ ಮತ್ತು ಚಂದ್ರಸೂರ್ಯರ ಪ್ರಕಾಶವೂ ವ್ಯಾಪಿಸಲಾರದೋ, ಅಂತಹ ಪ್ರದೇಶದಲ್ಲಿ

ಪ್ರಾಸಾದದ್ಯುತಿಕೋಟಿಕೋಟಿಘಟಿತಾ ದೃಷ್ಟಿರ್ಮಮಾದ್ಯಾಧುನಾ
ನಿದ್ಯುತ್ಸಂಘಸಮಾವೃತೇವ ಭಗವಂತ್ಸರ್ವಾತ್ಮನಾ ಕಂಪಿತಾ ॥೧೧॥

ಏತನ್ನಿರ್ಮಿತಮತ್ರ ಕಿಂ ಮಣಿಮಯಸ್ಥಾನಂ ಪ್ರಭಾಮಂಡಲೈ
ರ್ವ್ಯಾಪ್ತಂ ಮಂಡಿತಮೇವ ಮಂಡಲಮಿದಂ ಕಿಂ ಮಂಡನಂ ವಾಂಛತಿ ।
ಸ್ಥಾನಂ ನೈವ ವಿಲೋಕ್ಯ ತೇ ಘನತರಂ ಗಂಭೀರಮೇತಾದೃಶಂ
ತೇಜಃಪುಂಜಘನಂ ಘನಾಂತರಮಿದಂ ನಾಪೇಕ್ಷತೇ ಸರ್ವದಾ ॥೧೨॥

ಯತ್ರಾನಂತಸುರಾದಿಸೇವಕಗಣಾಃ ಸ್ರಸ್ತಾಃ ಸ್ವನಾರೀಗಣೈಃ
ಸಾಕಂ ಶೋಕವಿವರ್ಜಿತಾಃ ಪ್ರತಿದಿನಂ ಕಂಪಾಯಮಾನಾ ಅಪಿ ।
ಸೇವಂತೇ ತದನುತ್ತಮಂ ಸ್ಥಲಮುಮಾಕಾಂತೋ ವಿಹಾಯಾತ್ರ ಕಿಂ
ತಿಷ್ಠತ್ಯತ್ರ ಮಹಾಪ್ರಭುಂ ಪ್ರಭುಮತಂ ರಮ್ಯಂ ಸ್ಥಲಂ ಕೇವಲಂ ॥೧೩॥

ನೆಟ್ಟಿರುವ ನನ್ನ ದೃಷ್ಟಿಯು ಆ ಉಪ್ಪರಿಗೆಯ ಪ್ರಭಾರಾಶಿಯಿಂದ ಉಜ್ಜಲವಾಗಿ ಕಂಗೊಳಿಸುತ್ತಾ, ಮಿಂಚಿನ ಸಮುದಾಯದಿಂದ ಕೂಡಿಕೊಂಡಿರುವುದೋ ಎಂಬಂತೆ ತೋರುತ್ತಿರುವುದು. ॥೧೧॥

ಇಲ್ಲಿರುವ ರತ್ನಖಚಿತವಾದ ಪ್ರದೇಶವು ಕಾಂತಿರಾಶಿಗಳಿಂದ ವ್ಯಾಪಿಸಲ್ಪಟ್ಟ, ಈ ಗೃಹದಂತೆ ಕಾಂತಿಯುಕ್ತವೂ ಮತ್ತು ಗಂಭೀರವೂ ಆದ ಬೇರೊಂದು ಗೃಹವೇ ಇರುವುದಿಲ್ಲ. ತೇಜಸ್ಸಿನ ರಾಶಿಯೋ ಎಂಬಂತೆ ಇರುವ ಈ ಗೃಹವು ಮತ್ತಾವ ಪ್ರಕಾಶವನ್ನು ತಾನೇ ಅಪೇಕ್ಷಿಸೀತು ? ॥೧೨॥

ಕೈಲಾಸನಗರದಲ್ಲಿ ಇಂದ್ರಾದಿ ದೇವತೆಗಳೂ ಸಹ ತಮ್ಮ ತಮ್ಮ ಸ್ತ್ರೀಪರಿವಾರದಿಂದ ಕೂಡಿದವರಾಗಿ ಸುಖಿಗಳಾಗಿದ್ದರೂ, ಈಶ್ವರಸಾನ್ನಿಧ್ಯದಲ್ಲಿ ಭಯದಿಂದ ಗಡಗಡನೆ ನಡುಗುತ್ತಾ ತನ್ನ ಪತ್ನಿಯರನ್ನು ದೂರಮಾಡಿ ಪ್ರಭುವಾದ ಶಿವನನ್ನು ಸೇವಿಸುವರು. ಅಂತಹ ಪವಿತ್ರವಾದ ಸ್ಥಲವನ್ನು ಬಿಟ್ಟು ಶಂಕರನೂ ಈ ಪ್ರಾಸಾದದಲ್ಲಿ ವಾಸವಾಗಿರಲು ಕಾರಣವೇನಿರಬಹುದು! ಅದನ್ನು ವಿಮರ್ಶಿಸಿದರೆ ಸುರಸಂದಣಿಯಿಂದ ಕೂಡಿರುವ ಆ ನಗರಕ್ಕಿಂತಲೂ ಏಕಾಂತವಾಗಿರುವ ಈ ಸ್ಥಳವೇ ಸ್ವಾಮಿಯಾದ ಶಿವನಿಗೆ ಪ್ರಿಯವಾದುದೆಂದು ತೋರುವುದು. ॥೧೩॥

॥ ವ್ಯಾಸ ಉವಾಚ ॥

ಇತ್ಯುಕ್ತ್ವಾ ಸಾ ಶಿವಾ ತಸ್ಮಿನ್ವಿಮಾನೇ ವಿಪುಲೇ ಸ್ಥಿತಾ ।
ಏಕೈವಾಹಂ ವಸಾಮೀತಿ ಚಿಂತಾವ್ಯಾಕುಲಮಾನಸಾ ॥೧೪॥

ಮಹೇಶನಿಕಟೇ ತಾವದೇವಂ ಗಂತುಂ ನ ಶಕ್ಯತೇ ।
ಪರಿಚರ್ಯಾರ್ಥಮತ್ರಾನ್ಯಾಃ ಕಲ್ಪನೀಯಾ ಮನೋರಮಾಃ ॥೧೫॥

ಮಯ್ಯೈವ ಯದಿ ತತ್ರಾದ್ಯ ಗಮ್ಯತೇ ಶಂಕರೋಽಪಿ ತಾಂ ।
ವಿಲೋಕ್ಯ ಸಾದರಂ ಕಿಂ ಮಾಂ ವದಿಷ್ಯತಿ ವಿಶೇಷತಃ ॥೧೬॥

ಏಕಾಕಿನೀ ಕಥಂ ನಾರೀ ವಿಮಾನೇ ವಿಪುಲೇ ಸ್ಥಿತಾ ।
ನಾರೀಪರಿಜನಾಕ್ರಾಂತಾ ನಾರೀ ತಾವದ್ವಿರಾಜತೇ ॥೧೭॥

ವ್ಯಾಸನು ಕಥೆಯನ್ನು ಮುಂದುವರಿಸುತ್ತಾ ಹೀಗೆಂದನು. ಎಲೈ ಮುನಿಗಳೇ, ಹೀಗೆಂದು ಯೋಚಿಸಿ, ವಿಶಾಲವಾದ ಆ ವಿಮಾನದಲ್ಲಿ ಏಕಾಕಿನಿಯಾಗಿ ಕುಳಿತಿರುವ ಭವಾನಿಯು, "ಈ ವಿಮಾನದಲ್ಲಿ ನಾನು ಒಬ್ಬಳೇ ಕುಳಿತಿರುವೆನಲ್ಲಾ" ಎಂದು ಹೇಳಿ ಚಿಂತಾಸಕ್ತಳಾದಳು. ॥೧೪॥

ಶಿವನಿದ್ದಲ್ಲಿಗೆಂದು ಹೊರಟ ನಾನು ಅಲ್ಲಿಗೆ ಒಬ್ಬಂಟಿಗಳಾಗಿಯೇ ಹೋಗುವುದು ಅಷ್ಟೊಂದು ಉಚಿತವಾಗಿ ತೋರುವುದಿಲ್ಲ. ಆದುದರಿಂದ ನನ್ನ ಸೇವೆಗೋಸ್ಕರ ಕೆಲವು ಮಂದಿ ಮನೋಹರರಾದ ಸ್ತ್ರೀಯರನ್ನು ನಿರ್ಮಿಸಿಕೊಳ್ಳಬೇಕು. ॥೧೫॥

ಈಗ ನಾನೊಬ್ಬಳೇ ಅಲ್ಲಿಗೆ ಹೋದವಳಾದರೆ ಏಕಾಕಿನಿಯಾಗಿ ಹೋದ ನನ್ನಲ್ಲಿ ಶಿವನು ಹೆಚ್ಚಾದ ಆಸಕ್ತಿಯನ್ನು ವಹಿಸಿ ಪ್ರೀತಿಪೂರ್ವಕವಾಗಿ ನನ್ನೊಂದಿಗೆ ಮಾತನಾಡುವನೇ! ॥೧೬॥

ವಿಶಾಲವಾದ ವಿಮಾನದಲ್ಲಿ ಸ್ತ್ರೀಯು ಒಬ್ಬಂಟಿಗಳಾಗಿ ಕುಳಿತುಕೊಳ್ಳುವುದು ನ್ಯಾಯವಲ್ಲ. ಇತರ ಸ್ತ್ರೀಪರಿವಾರದಿಂದ ಕೂಡಿರುವ ಸ್ತ್ರೀಯಲ್ಲವೇ ವಿಶೇಷವಾಗಿ ಶೋಭಿಸುವವಳು? ॥೧೭॥

ಅಸುರಪ್ರವರಾರ್ಧಾಂಗಮುಹಸೋಕಾಕಿನೀ ಕಥಂ ।
ಗಂತುಮಭ್ಯುದ್ಯತಾ ಧೀರಾ ವೀರಶಂಕರಮಂದಿರಂ ॥೧೮॥

ಇತ್ಯಾಲೋಚ್ಯ ತದಾ ಗೌರೀ ದಿವ್ಯಸೌಂದರ್ಯವಿಗ್ರಹಾನ್ ।
ಸಸರ್ಜ ಕ್ಷಣಮಾತ್ರೇಣ ಕೋಟಿಶೋ ಮುನಿಪುಂಗವಾಃ ॥೧೯॥

ರತ್ನಾಭರಣಸಂಪನ್ನಾ ಯೌವನಾಕ್ರಾಂತವಿಗ್ರಹಾಃ ।
ರೂಪಲಾವಣ್ಯಸಂಪನ್ನಾ ನವಾ ಏವ ಪ್ರತಿಕ್ಷಣಂ ॥೨೦॥

ವಿಚಿತ್ರಮಾಲ್ಯವಸನಾಃ ಸುರನಾರೀವಿನಿಂದಕಾಃ ।
ರೂಪೇಣಾನನ್ಯತುಲ್ಯೇನ ಸ್ವಯೌವನಮದೇನ ಚ ॥೨೧॥

ರುದ್ರವೀಣಾಸ್ಸಮಾದಾಯ ತಾಸ್ಸರ್ವಾಶ್ಚ ಪೃಥಕ್ ಪೃಥಕ್ ।
ಶಿವನಾಮಾನಿ ದಿವ್ಯಾನಿ ಗಾಯಂತಿ ಸ್ಮ ಮನೋಹರಾಃ ॥೨೨॥

ಸಕಲದೇವತೆಗಳಲ್ಲೆಲ್ಲಾ ಶ್ರೇಷ್ಠನೆನಿಸಿಕೊಂಡ ಈಶ್ವರನ ಅರ್ಧಾಂಗಿಯಾದ ನಾನು, ಈಗ ಒಬ್ಬಂಟಿಗಳಾಗಿ ದಿಟ್ಟತನದಿಂದ ಶಿವನ ಗೃಹವನ್ನು ಕುರಿತು ತೆರಳಲು ಉದ್ಯುಕ್ತಳಾಗಿರುವುದು ಉಚಿತವೆನಿಸುವುದೆ? ॥೧೮॥

ಹೀಗೆಂದು ಆಲೋಚಿಸಿ ಆಗ ಗಿರಿಜೆಯು ಕ್ಷಣಮಾತ್ರದಲ್ಲಿಯೇ ಅತ್ಯಂತ ಸುಂದರವಾದ ಆಕಾರವುಳ್ಳ ಕೋಟ್ಯಂತರ ಸ್ತ್ರೀಯರನ್ನು ಸೃಷ್ಟಿಸಿದಳು. ॥೧೯॥

ಆ ಸ್ತ್ರೀಯರು ರತ್ನಖಚಿತವಾದ ಆಭರಣಗಳನ್ನು ಧರಿಸಿದವರಾಗಿಯೂ, ನವಯೌವನಭರಿತರಾಗಿಯೂ, ರೂಪಲಾವಣ್ಯಗಳಿಂದ ಕೂಡಿದವರೂ ಆಗಿ ಪ್ರತಿಕ್ಷಣದಲ್ಲಿಯೂ ನವಯೌವನಶಾಲಿನಿಯರಂತೆಯೇ ಕಾಣಿಸುತ್ತಿದ್ದರು. ॥೨೦॥

ನಾನಾವಿಧವಾದ ಪುಷ್ಪಮಾಲಿಕೆಗಳನ್ನೂ ಮತ್ತು ವಸ್ತ್ರಗಳನ್ನೂ ಧರಿಸಿದ ಅವರು, ತಮ್ಮ ವಿಲಕ್ಷಣವಾದ ರೂಪಲಾವಣ್ಯಗಳಿಂದಲೂ ಮತ್ತು ಯೌವನದ ಮದದಿಂದಲೂ ಅಪ್ಸರಸ್ತ್ರೀಯರನ್ನೂ ಸಹ ತಿರಸ್ಕರಿಸುವಂತಿದ್ದರು. ॥೨೧॥

ಅವರಲ್ಲಿ ಪ್ರತಿಯೊಬ್ಬರೂ ರುದ್ರವೀಣೆಯೆಂಬ ವೀಣೆಗಳನ್ನು ಕೈಯ್ಯಲ್ಲಿ ತೆಗೆದುಕೊಂಡು, ಸುಂದರವಾದ ಆ ಶಿವನಾಮಗಳನ್ನು ಮನಮೋಹಕವಾಗಿ ಗಾನ ಮಾಡುತ್ತಿದ್ದರು. ॥೨೨॥

ತಾನಿ ನಾಮಾನಿ ಶೃಣ್ವಂತೀ ಪರಮಾನಂದರೂಪಿಣೀ ।
ಸಾ ಕಲ್ಯಾಣೀ ಮುದಂ ಪ್ರಾಪ್ಯ ಸಚ್ಚಿದಾನಂದಲಕ್ಷಣಾ ॥೨೩॥

ಆದಾಯ ಸ್ವಯಮಪ್ಯೇಕಾಂ ವೀಣಾಂ ವಾಣೀಷು ಲಾಲಸಾ ।
ವೀಣಾಪ್ರವೀಣಾ ರುದ್ರಾಣೀ ಗಾನತಾನರತಾ ಬಭೌ ॥೨೪॥

ನ ತದ್ಗಾನಂ ವಿಜಾನಂತಿ ಗಂಧರ್ವಾ ಅಪಿ ಕಿನ್ನರಾಃ ।
ಅಥಾನ್ಯೇಽಪಿ ಸುರಾಸ್ಸರ್ವೇ ಸುರನಾರೀಗಣಾ ಅಪಿ ॥೨೫॥

ಏವಂ ಗಾನವಿಲೋಲಾ ಸಾ ವೀತಾ ಚಾಮರಕೋಟಿಭಿಃ ।
ಛತ್ರಾರ್ಬುದಛಾಯಯಾಪಿ ಸಂಛನ್ನಾ ಸಾ ಯಯೌ ಶಿವಾ ॥೨೬॥

ಶಂಕರಸ್ತತ್ಸಮಾರಂಭಂ ಜ್ಞಾತ್ವಾ ತತ್ತೋಷಕಾರಣಂ ।
ಪುನಸ್ಸ ಪ್ರೇಷಯಾಮಾಸ ಗಣಾನ್ನಮಿತವಿಗ್ರಹಾನ್ ॥೨೭॥

ಸಚ್ಚಿದಾನಂದಸ್ವರೂಪಳಾದ ದೇವಿಯು ಶಿವನಾಮಗಳನ್ನು ಕೇಳಿ ಸಂತೋಷ ಭರಿತಳಾಗಿ ತಾನೂ ಸಹ ವೀಣೆಯೊಂದನ್ನು ಕೈಯ್ಯಲ್ಲಿ ತೆಗೆದುಕೊಂಡು ಶಿವನಾಮ ಗಳನ್ನು ಹಾಡುತ್ತಾ ವಿರಾಜಿಸಿದಳು. ॥೨೩-೨೪॥

ಅವಳು ಹಾಡಿದ ಆ ಗಾನದ ರೀತಿಯನ್ನು ಗಂಧರ್ವರಾಗಲಿ, ಕಿನ್ನರರಾಗಲಿ, ಸಕಲ ದೇವತೆಗಳಾಗಲಿ, ಅಪ್ಸರಸ್ತ್ರೀಯರೇ ಆಗಲಿ ಇವರಾರೂ ತಿಳಿಯದವರಾಗಿ ದ್ದರು. ॥೨೫॥

ಈ ಪ್ರಕಾರವಾಗಿ ಗಾನದಲ್ಲಿ ಆಸಕ್ತಳಾದ ದೇವಿಯು ಅನೇಕವಾದ ಛತ್ರಿ ಚಾಮರಗಳಿಂದ ಅಲಂಕೃತಳಾಗಿ ಸಖಿಯರೊಂದಿಗೆ ಮುಂದಕ್ಕೆ ತೆರಳಿದಳು. ॥೨೬॥

ಇತ್ತ ಶಿವನು ಸಂತೋಷದಾಯಕವಾದ ಈ ಮಹೋತ್ಸವದ ಮರ್ಮವನ್ನು ತಿಳಿದುಕೊಂಡು, ಬಳಿಕ ತಾನೂ ಸಹ ಸುಂದರವಾದ ವಿಗ್ರಹವುಳ್ಳ ಸ್ತ್ರೀಯರನ್ನು ಸೃಷ್ಟಿಸಿದನು. ತನ್ನನ್ನು ನಮಸ್ಕರಿಸುತ್ತಲಿರುವ ಆ ಸ್ತ್ರೀಗಣಗಳನ್ನು, ದೇವಿಯನ್ನು ಎದುರುಗೊಳ್ಳಲು ಕಳುಹಿಸಿದನು. ॥೨೭॥

ಯೋಷಿದ್ಗಣಾಂಶ್ಚ ವಿವಿಧಾನ್ ಸರ್ವಾಭರಣಭೂಷಿತಾನ್ ।
ಸೌಂದರ್ಯಭೇದಸಂಪನ್ನಾನ್ ರಾಗಲೋಕಾನ್ ಮನೋಹರಾನ್ ॥೨೮॥

ಗಣತೂರ್ಯಧ್ವನಿಂ ಶ್ರುತ್ವಾ ತದ್ಗಾನಮಪಿ ದೂರತಃ ।
ಅದ್ಭುತಂ ಗಾನಮೇತಾವತ್ಕೃತ್ಯಮಿತ್ಯಾಹ ಶಾಂಭವೀ ॥೨೯॥

ಪ್ರಾಯಸ್ಸೋಽಯಂ ಶಿವೇನೈವ ತೋಷಃ ಸಂಪಾದಿತೋ ಮಮ ।
ಅಪೂರ್ವನಾರೀಸೃಷ್ಟ್ಯಾಪಿ ಗಾನಸೃಷ್ಟ್ಯಾಪಿ ಶಂಕರಃ ॥೩೦॥

ಶಂಕರತ್ವಾನ್ಮಹಾದೇವಃ ಶಂಕರತ್ವಂ ಸ್ವಕಂ ಪುನಃ ।
ಪ್ರವೃತ್ತಂ ಕರ್ತುಮೇವೇದಂ ಸೃಷ್ಟಂ ಸರ್ವಮಿತಿ ಸ್ಮೃತಂ ॥೩೧॥

ಅಶಕ್ಯಂ ಕಿಂ ಮಹೇಶಸ್ಯ ಮದನುಗ್ರಹವಾಂಛಯಾ ।
ಸೃಷ್ಟಮೇತಾವದಧುನಾ ವಿವಿಧಂ ಚಂದ್ರಮೌಳಿನಾ ॥೩೨॥

ಅವನಿಂದ ಸೃಷ್ಟಿಸಲ್ಪಟ್ಟ ಆ ಸ್ತ್ರೀಯರು ಸಕಲವಿಧವಾದ ಆಭರಣಗಳನ್ನು ಧರಿಸಿದವರಾಗಿಯೂ, ಪರಸ್ಪರ ವಿಚಿತ್ರವಾದ ರೂಪಲಾವಣ್ಯಗಳಿಂದ ಕೂಡಿದವರಾಗಿ ಗಾನವನ್ನು ಬಲ್ಲವರಾಗಿಯೂ ಇದ್ದರು. ||೨೮||

ಆ ಗಣಗಳ ವಾದ್ಯಧ್ವನಿಯನ್ನೂ ಮತ್ತು ಸ್ತ್ರೀಯರ ಮಧುರಗಾನವನ್ನೂ ದೂರದಿಂದಲೇ ಕೇಳಿ ಪಾರ್ವತಿಯು "ವಿಚಿತ್ರವಾದ ಈ ಗಾನವು ನಿಜವಾದ ಗಾನ ದಂತಲ್ಲದೆ ವಿಚಿತ್ರವಾದುದಾಗಿದೆಯಲ್ಲವೇ ? ಇದು ಯಾವುದು" ಎಂದು ಯೋಚಿಸಿ ದಳು. ||೨೯||

ಪ್ರಾಯಶಃ ಪರಶಿವನೇ ನನ್ನನ್ನು ಸಂತೋಷಗೊಳಿಸುವುದಕ್ಕೋಸ್ಕರ ಹಿಂದೆಂದೂ ಕಾಣದಿರುವ ಸುಂದರಿಯರಾದ ಈ ಸ್ತ್ರೀಯರನ್ನೂ ಮತ್ತು ಅದ್ಭುತ ವಾದ ಈ ಗಾನವನ್ನೂ ಸೃಷ್ಟಿಸಿರಬಹುದು. ||೩೦||

ಶಿವನು "ಶಂಕರನಾಗಿರುವುದರಿಂದ" ಎಂದರೆ ಸರ್ವರಿಗೂ ಸುಖಕರನಾಗಿರು ವುದರಿಂದ ಶಂಕರನೆಂಬ ನಾಮಧೇಯವನ್ನು ಅನ್ವರ್ಥಗೊಳಿಸುವುದಕ್ಕೋಸ್ಕರ ವಾಗಿಯೇ ಈ ಸಕಲವಸ್ತುಗಳನ್ನೂ ಸೃಷ್ಟಿಸಿರಬೇಕು. ||೩೧||

ಜಗದೊಡೆಯನಾದ ಆ ಶಿವನಿಗೆ ಅಸಾಧ್ಯವಾದ ಕಾರ್ಯವು ಯಾವುದಿರು ವುದು? ಚಂದ್ರಶೇಖರನಾದ ಅವನು ನನ್ನನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ಈ ಸಕಲ ವಸ್ತುಗಳನ್ನೂ ನಿಮಿಷಮಾತ್ರದಲ್ಲಿ ಸೃಷ್ಟಿಸಿರುವನು. ||೩೨||

ಮಯಿ ತಾವತ್ಕೃಪಾದೃಷ್ಟಿರದ್ಯಾಪಿ ಗಿರಿಶಸ್ಯ ಸಾ ।
ಸಾ ತಾವದ್ರಕ್ಷಣೀಯಾ ಮೇ ವಿರೂಪಾಕ್ಷಾವಲೋಕನಾತ್ ॥೩೩॥

ಮತ್ಕೃತೋಽಪಿ ವಿಲಂಬೋಽದ್ಯ ವಿಸ್ಮೃತಶ್ಚಂದ್ರಮೌಳಿನಾ ।
ಕೃಪಾಲುತ್ವಂ ಮಯಿ ಸ್ವಾಮೀ ಪ್ರಕಟಂ ಕರ್ತುಮಿಚ್ಛತಿ ॥೩೪॥

ತಸ್ಯ ದೇವಾಧಿದೇವಸ್ಯ ಶಂಕರಸ್ಯ ಮಹಾತ್ಮನಃ ।
ಮದನುಗ್ರಹವಾಂಛಾಪಿ ತಪಸಾ ಭೂಯಸಾಪಿ ಸಾ ॥೩೫॥

ಇತ್ಯಾಲೋಚ್ಯ ಪುನರ್ಗೌರೀ ಮಹೇಶಪ್ರೇಷಿತಂ ಗಣಂ ।
ನಾರೀಣಾಮಮಿತಂ ದೃಷ್ಟ್ವಾ ಪ್ರಹೃಷ್ಟಾ ಸಾ ಪುನಃ ಪುನಃ ॥೩೬॥

ತತಸ್ತಾಃ ಸುರನಾರೀಣಾಂ ಪರಾಭವವಿಚಕ್ಷಣಾಃ ।
ದಂಡವತ್ಪ್ರಣತಾಸ್ಸರ್ವಾ ಸ್ಸ್ತುತಿಪೂರ್ವಕಮಾದರಾತ್ ॥೩೭॥

ಶಿವನಿಗೆ ಇನ್ನೂ ನನ್ನಲ್ಲಿ ಇಷ್ಟು ದಯೆಯಿರುವುದು. ಅದನ್ನು ನಾನು ಅವನನ್ನು ಸಂದರ್ಶಿಸುವುದರಿಂದಲೇ ಕಾಪಾಡಿಕೊಳ್ಳಬೇಕು. ॥೩೩॥

ನಾನು ಸಾವಕಾಶಮಾಡಿದರೂ ಸಹ ನನ್ನಿಂದಾದ ಆ ವಿಲಂಬವನ್ನು ಚಂದ್ರಶೇಖರನು ಮರೆತಿರುವನು. ಮತ್ತು ಅವನು ನನ್ನಲ್ಲಿ ತನ್ನ ದಯಾನಿಧಿತ್ವವನ್ನು ಪ್ರಕಟಿಸುತ್ತಿರುವನು. ॥೩೪॥

ದೇವೇಶನಾದ ಆ ಶಿವನಿಗೆ ನನ್ನನ್ನು ಅನುಗ್ರಹಿಸುವ ಇಚ್ಛೆಯು ಉಂಟಾಗಿರುವುದಕ್ಕೆ ಕಾರಣವು ನಾನು ಆಚರಿಸಿದ ತಪಸ್ಸಿನ ಫಲವಾಗಿರಬೇಕು.” ॥೩೫॥

ಹೀಗೆಂದು ಯೋಚಿಸಿ ಗಿರಿಜೆಯು, ಈಶ್ವರನಿಂದ ಕಳುಹಿಸಲ್ಪಟ್ಟ ಆ ಅಸಂಖ್ಯಾತವಾದ ಸ್ತ್ರೀಸಮುದಾಯವನ್ನು ನೋಡಿ ಮತ್ತೆ ಮತ್ತೆ ಸಂತೋಷಭರಿತಳಾದಳು. ॥೩೬॥

ಬಳಿಕ ಅಪ್ಸರಸ್ತ್ರೀಯರನ್ನು ತಿರಸ್ಕರಿಸುವ ರೂಪಲಾವಣ್ಯಗಳಿಂದ ಕೂಡಿದ ಆ ಸ್ತ್ರೀಯರು, ಪಾರ್ವತಿಯ ಬಳಿಗೆ ಹೋಗಿ ನಾನಾರೀತಿಯಲ್ಲಿ ಸ್ತುತಿಸುತ್ತಾ ಅತ್ಯಾದರದಿಂದ ದಂಡಪ್ರಣಾಮ ಮಾಡಿದರು. ॥೩೭॥

ನೀರಾಜನಾನಿ ದತ್ತಾನಿ ದಿವ್ಯರತ್ನಗಣಶ್ರಿಯಾ ।
ನಾನಾಮಣಿಗಣಾಕೀರ್ಣಪಾತ್ರಾಣ್ಯಾದಾಯ ಕೋಟಿಶಃ ॥೩೮॥

ಉಪಹಾರಾನನೇಕಾಂಶ್ಚ ತದಾನೀಂ ತಾನ್ ಗಿರೀಂದ್ರಜಾ ।
ಶಿವನೈವೇದ್ಯಶೇಷತ್ವಬುದ್ಧ್ಯಾ ಜಗ್ರಾಹ ಸಾದರಂ ॥೩೯॥

ತಾನ್ಯಾಸ್ವಾದ್ಯ ವಿಚಿತ್ರಾಣಿ ಫಲಾನಿ ಜಗದಂಬಿಕಾ ।
ಕೃತಾರ್ಥತ್ವಮತಿಂ ಚಕ್ರೇ ಶಿವನೈವೇದ್ಯಸೇವನಾತ್ ॥೪೦॥

ದುರ್ಲಭಂ ಶಿವನೈವೇದ್ಯಮದ್ಯ ಪ್ರಾಪ್ತಂ ಮಯಾಧುನಾ ।
ಪಾವಸಂ ಚಿತ್ರಮುಪ್ಯದ್ಯ ಪಾವನಾನಾಂ ಚ ಪಾವನಂ ॥೪೧॥

ಶಿವನೈವೇದ್ಯಕೋಟ್ಯಂಶಕೋಟ್ಯಂಶೋಽಪ್ಯತಿದುರ್ಲಭಃ ।
ಸಂಪೂರ್ಣಶಿವನೈವೇದ್ಯಂ ಕಸ್ಯ ವಾ ಸುಲಭಂ ಭವೇತ್ ॥೪೨॥

ಅಮೂಲ್ಯವಾದ ರತ್ನಗಳ ಕಾಂತಿಯಿಂದ ಶೋಭಿಸುವ ನೀರಾಜನಗಳನ್ನು ಸಮರ್ಪಿಸಿ, ವಿವಿಧವಾದ ರತ್ನಗಳಿಂದ ತುಂಬಿರುವ ಪಾತ್ರೆಗಳನ್ನು ಅವಳ ಸನ್ನಿಧಿಯಲ್ಲರ್ಪಿಸಿದರು. ॥೩೮॥

ಗಿರಿಜೆಯು, ಸಮರ್ಪಿಸಿದ ವಿವಿಧವಾದ ಆ ಉಪಹಾರಗಳನ್ನು "ಶಿವನ ನೈವೇದ್ಯಶೇಷವಾಗಿರುವುದು" ಎಂಬ ಭಾವನೆಯಿಂದ ಪ್ರೀತಿಪೂರ್ವಕವಾಗಿ ಎಲ್ಲವನ್ನೂ ಸ್ವೀಕರಿಸಿದಳು. ॥೩೯॥

ದೇವಿಯು ರುಚಿಕರವಾದ ಆ ಹಣ್ಣುಗಳನ್ನು ಶಿವನಿಗೆ ನಿವೇದಿಸಿ ತಿಂದು ಹಾಗೆ ಫಲಗಳನ್ನು ಸೇವಿಸಿರುವುದರಿಂದ ತಾನು ಕೃತಾರ್ಥಳಾದೆನೆಂದು ಭಾವಿಸಿದಳು. ॥೪೦॥

"ನಾನು ಈ ದಿವಸ ದುರ್ಲಭವಾದ ಈ ಶಿವನೈವೇದ್ಯವನ್ನು ಸ್ವೀಕರಿಸಿರುವೆನು. ಇದು ಪವಿತ್ರವಾದ ವಸ್ತುಗಳಲ್ಲೆಲ್ಲಾ ಪವಿತ್ರವಾಗಿರುತ್ತದೆ. ॥೪೧॥

ಶಿವನೈವೇದ್ಯ ಶೇಷದಲ್ಲಿ ಕೋಟಿಭಾಗಗಳಲ್ಲಿ ಒಂದು ಅಂಶವನ್ನು ಪುನಃ ಕೋಟಿ ಭಾಗಗಳನ್ನಾಗಿ ವಿಂಗಡಿಸಿದರೆ ಅದರಲ್ಲೊಂದು ಭಾಗವೂ ದುರ್ಲಭವಾಗಿರುವುದು. ಹೀಗಿರುವಲ್ಲಿ ಸಂಪೂರ್ಣವಾದ ಶಿವನೈವೇದ್ಯವೇ ಯಾರಿಗೆ ತಾನೇ ದೊರೆತೀತು? ॥೪೨॥

ಪುರೋಡಾಶಂ ಧಿಕ್ಕರೋತಿ ಶಿವನೈವೇದ್ಯಮೀದೃಶಂ ।
ಪುರೋಡಾಶೈಃ ಕಿಮೇತಾವದ್ಭಕ್ಷಿತೈಃ ಫಲಮಾಪ್ನುತೇ ॥೪೩॥

ಅಲಂ ಯಾಗಸಹಸ್ರೇಣಾಪ್ಯಲಂ ಯೋಗಾರ್ಬುದೈರಪಿ ।
ಭಕ್ಷಿತೇ ಶಿವನೈವೇದ್ಯೇ ಶಿವಸಾಯುಜ್ಯಮಾಪ್ನುಯಾತ್ ॥೪೪॥

ಅತಃ ಪರಂ ಶಂಕರಸ್ಯ ಸನ್ನಿಧಾನಮವಿಸ್ತೃತಂ ।
ಯೇನೇದಂ ಶಿವನೈವೇದ್ಯಮಕಸ್ಮಾತ್ಸಮುಪಾಗತಂ ॥೪೫॥

ನ ಯದ್ಯಪಿ ಕ್ಷುಧಾ ತಾವದಧುನಾ ಮೇ ತಥಾಪಿ ಕಿಂ ।
ನೋಪೇಕ್ಷಣೀಯಂ ಸಹಸಾ ಶಿವನೈವೇದ್ಯಮಾಗತಂ ॥೪೬॥

ದೃಷ್ಟ್ವೋಽಪಿ ಶಿವನೈವೇದ್ಯಂ ಯಾಂತಿ ಪಾಪಾನಿ ದೂರತಃ ।
ಭುಕ್ತೇ ತು ಶಿವನೈವೇದ್ಯೇ ಪುಣ್ಯಾನ್ಯಾಯಾಂತಿ ಕೋಟಿಶಃ ॥೪೭॥

ಈ ನೈವೇದ್ಯವು ಪುರೋಡಾಶವನ್ನೂ ತಿರಸ್ಕರಿಸುವಂತಿದೆ. ಎಷ್ಟೊಂದು ಪುರೋಡಾಶವನ್ನು ತಿಂದರೂ, ಶಿವನೈವೇದ್ಯವನ್ನು ಭಕ್ಷಿಸಿದುದರಿಂದ ಉಂಟಾದ ಫಲವು ಲಭಿಸಲಾರದು. (ಪುರೋಡಾಶವೆಂದರೆ ಮಜ್ಜಿಗೆಯಲ್ಲಿ ಕಲೆಸಿದ ಹಸಿಯ ಅಕ್ಕಿಯ ಹಿಟ್ಟು. ಇದನ್ನು ಯಜ್ಞಗಳಲ್ಲಿ ಶ್ರೇಷ್ಠವಾದ ವಸ್ತುವೆಂದು ಪರಿಗಣಿಸುವರು.) ||೪೩||

ಅಸಂಖ್ಯಾತವಾದ ಯಾಗಗಳನ್ನು ಅನುಷ್ಠಾನಮಾಡುವುದು ಏತಕ್ಕೆ? ಮತ್ತು ಯೋಗಾಭ್ಯಾಸದಿಂದ ಶರೀರವನ್ನು ದಂಡಿಸುವುದೂ ಸಹ ಪ್ರಯೋಜನವಿಲ್ಲ. ಶಿವನೈವೇದ್ಯವನ್ನೊಂದನ್ನೇ ಭಕ್ತಿಯಿಂದ ಭಕ್ಷಿಸಿದರೆ, ಸರ್ವಫಲವೂ ದೊರೆತು ಸುಲಭವಾಗಿ ಶಿವಸಾನ್ನಿಧ್ಯವನ್ನು ಪಡೆಯಬಹುದು. ||೪೪||

ಅದೃಷ್ಟವಶದಿಂದ ನನಗೆ ಲಭಿಸಿರುವ ಈ ಶಿವನೈವೇದ್ಯದಿಂದ ಶೀಘ್ರವಾಗಿಯೇ ಶಿವಸಾನ್ನಿಧ್ಯವು ಲಭಿಸುವುದೆಂಬುದು ಸಿದ್ಧಾಂತವಾಯಿತು. ||೪೫||

ಈಗ ನನಗೆ ಹಸಿವೇ ಇಲ್ಲ. ಆದರೂ ದೈವಾಧೀನವಾಗಿ ನನಗೆ ಲಭಿಸಿರುವ ಈ ಶಿವನೈವೇದ್ಯವನ್ನು ಸ್ವೀಕರಿಸದೇ ಇರಬಾರದು. ||೪೬||

ಶಿವನೈವೇದ್ಯದ ದರ್ಶನಮಾತ್ರದಿಂದಲೇ ಪಾಪಗಳು ನಾಶವಾಗುತ್ತವೆ, ಅಂದಮೇಲೆ ಅದನ್ನು ಭಕ್ಷಿಸಿದರೆ ಅನಂತವಾದ ಪುಣ್ಯವು ಲಭಿಸುವುದರಲ್ಲಿ ಸಂದೇಹವುಂಟೇ? ||೪೭||

ದೂರತಃ ಶಿವನೈವೇದ್ಯಗಂಧೋಽಪ್ಯಾಯಾತಿ ಚೇತ್ತದಾ ।
ಪಾಪಸಂಘಾಸ್ತು ಸಹಸಾ ಪ್ರಲಯಂ ಯಾಂತಿ ವಸ್ತುತಃ ॥೪೮॥

ಆಗತಂ ಶಿವನೈವೇದ್ಯಂ ಗೃಹೀತ್ವಾ ಶಿರಸಾ ಮುದಾ ।
ಭಕ್ಷಣೀಯಂ ಪ್ರಯತ್ನೇನ ಶಿವಸ್ಮರಣಪೂರ್ವಕಂ ॥೪೯॥

ಕ್ಷೀರಂ ವಾ ಫಲಲೇಶಂ ವಾ ಜಲಂ ವಾ ಶಂಕರಾರ್ಪಿತಂ ।
ಗೃಹೀತ್ವಾ ಮುಚ್ಯತೇ ಸದ್ಯಃ ಪಾಪಕೋಟಿಗಣಾದಪಿ ॥೫೦॥

ಯದ್ಗೃಹೇ ಶಿವನೈವೇದ್ಯಪ್ರಚಾರೋಽಪಿ ಪ್ರಜಾಯತೇ ।
ತದ್ಗೃಹಂ ಪಾವನಂ ಸರ್ವಮನ್ಯಪಾವನಕಾರಣಂ ॥೫೧॥

ಆಗತಂ ಶಿವನೈವೇದ್ಯಮನ್ಯದಗ್ರಾಹ್ಯಮಿತ್ಯಪಿ ।
ವಿಲಂಬೇ ಪಾಪಸಂಬದ್ಧೋ ಭವತ್ಯೇವ ಹಿ ಮಾನವಃ ॥೫೨॥

ದೂರದಿಂದಲೇ ಶಿವನೈವೇದ್ಯದ ವಾಸನೆಯು ಲಭಿಸಿದರೆ ಸಾಕು. ಪಾಪ ರಾಶಿಗಳು ಕ್ಷಣಮಾತ್ರದಲ್ಲಿಯೇ ಭಸ್ಮವಾಗುವುವು. ॥೪೮॥

ಅಕಸ್ಮಾತ್ತಾಗಿ ತನ್ನ ಬಳಿಗೆ ಬಂದ ಶಿವನೈವೇದ್ಯವನ್ನು ಅತಿ ನಮ್ರತೆಯಿಂದ ಸ್ವೀಕರಿಸಿ, ಶಿವನನ್ನು ಸ್ಮರಿಸಿ ಭಕ್ಷಿಸಬೇಕು. ॥೪೯॥

ಶಿವನಿಗೆ ಅರ್ಪಿಸಿದ ಹಾಲಾಗಲಿ, ಫಲವಾಗಲಿ ಅಥವಾ ನೀರೇ ಆಗಲಿ ಅದನ್ನು ಭಕ್ತಿಯಿಂದ ಸ್ವೀಕರಿಸಿದರೆ, ಆತನು ಶೀಘ್ರವಾಗಿಯೇ ಪಾಪವಿನಿರ್ಮುಕ್ತನೆನಿಸುವನು. ॥೫೦॥

ಯಾರ ಮನೆಯಲ್ಲಿ ಭಕ್ತರು ಸದಾ ಶಿವನೈವೇದ್ಯವನ್ನು ಭುಜಿಸುವರೋ, ಆ ಮನೆಯು ಪವಿತ್ರವಾದುದು. ಅಲ್ಲದೆ ಅದು ಅತಿಥಿಗಳನ್ನೂ ಮತ್ತು ಸರ್ವರನ್ನೂ ಪವಿತ್ರಗೊಳಿಸುವುದೂ ಆಗಿರುತ್ತದೆ. ॥೫೧॥

ಶಿವನೈವೇದ್ಯವು ಪ್ರಾಪ್ತವಾದಾಗ, ಅದು ಸ್ವೀಕರಿಸಲು ಅಯೋಗ್ಯವಾದುದು ಎಂಬ ತುಚ್ಛಭಾವನೆಯಿಂದ ತ್ಯಜಿಸಬಾರದು. ಮತ್ತು ಅದನ್ನು ಸ್ವೀಕರಿಸುವುದರಲ್ಲಿ ವಿಲಂಬವನ್ನೂ ಮಾಡಬಾರದು. ವಿಲಂಬಮಾಡುವವನು ಪಾಪಿಯೆನಿಸುವನು. ॥೫೨॥

ನ ಯಸ್ಯ ಶಿವನೈವೇದ್ಯಗ್ರಹಣೇಚ್ಛಾ ಪ್ರಜಾಯತೇ ।
ಸ ಪಾಪಿಷ್ಠಗರಿಷ್ಠಸ್ಸ್ಯಾನ್ನರಕಂ ಯದ್ಯಪಿ ಧ್ರುವಂ ॥೫೩॥

ಇತ್ಯುಕ್ತ್ವಾ ಶಿರಸಾ ಗೌರೀ ತಾನಿ ಸರ್ವಾಣಿ ಸಾದರಂ ।
ಆಸ್ವಾದ್ಯಾಸ್ವಾದ್ಯ ಸಂತುಷ್ಟಾ ಶಂಕರಸ್ಮರಣೋತ್ಸುಕಾ ॥೫೪॥

ಮಹೇಶಪೀತಶೇಷಾಂ ತಾಂ ಸುಧಾಮಾದಾಯ ಶೈಲಜಾ ।
ಪುನಃ ಪುನಃ ಪಪೌ ಭಕ್ತ್ಯಾ ಧಾರಾಭೂತಾಂ ಧುನೀಮಿವ ॥೫೫॥

ತತಸ್ತಾಂಬೂಲಮಾದಾಯ ಶಿವಾರ್ಪಿತಮುಮಾ ತದಾ ।
ತತ್ಕೃತಂ ಗಾನಮಾಕರ್ಣ್ಯ ನಾಟ್ಯಂ ದ್ರಷ್ಟುಂ ಸಮುದ್ಯತಾ ॥೫೬॥

ತತಸ್ತತ್ಕೃತನಾಟ್ಯಾನಿ ವಿಚಿತ್ರಾಣಿ ವಿಶೇಷತಃ ।
ದೃಷ್ಟ್ವಾ ವಿಸ್ಮಯಮಾಪನ್ನಾ ಗಾನಾಕರ್ಣನತತ್ಪರಾ ॥೫೭॥

ಯಾವ ಮನುಷ್ಯನು ಶಿವನೈವೇದ್ಯವನ್ನು ಸ್ವೀಕರಿಸಲು ಇಚ್ಛಿಸುವುದಿಲ್ಲವೋ ಅವನು ಪಾಪಿಷ್ಠರಲ್ಲಿ ಅಗ್ರಗಣ್ಯನಾಗುವನಲ್ಲದೆ, ನರಕವನ್ನೂ ಹೊಂದುವನು. ಇದು ನಿಜ." ॥೫೩॥

ಹೀಗೆಂದು ಯೋಚಿಸಿ ಗಿರಿಜೆಯು ಅತಿ ವಿನಯದಿಂದ ಅದನ್ನು ಸ್ವೀಕರಿಸಿ, ತಿಂದು, ಮತ್ತೆ ಮತ್ತೆ ತಿಂದು ಸಂತೋಷಗೊಂಡಳು. ॥೫೪॥

ಶಿವನು ಪಾನಮಾಡಿ ಉಳಿದಿರುವ ಅಮೃತವನ್ನು ತೆಗೆದುಕೊಂಡು ಗಿರಿಜೆಯು, ಧಾರಾಕಾರವಾಗಿ ಹರಿಯುವ ನದಿಯಂತೆ, ಬಾಯಿಯಲ್ಲಿ ಬೀಳುವ ಆ ಸುಧೆಯನ್ನು ಭಕ್ತಿಪೂರ್ವಕವಾಗಿ ಪಾನಮಾಡಿದಳು. ॥೫೫॥

ಬಳಿಕ ಶಿವನು ಕಳುಹಿಸಿದ ತಾಂಬೂಲವನ್ನು ತಾನು ಸ್ವೀಕರಿಸಿ, ಸ್ತ್ರೀಗಣದ ಗಾನವನ್ನು ಕೇಳಿ, ಅವರ ನರ್ತನವನ್ನು ನೋಡಲು ಉದ್ಯುಕ್ತಳಾದಳು. ॥೫೬॥

ಅನಂತರ ಸ್ತ್ರೀಯರು ಅಭಿನಯಿಸಿದ ನಾನಾವಿಧವಾದ ನರ್ತನಗಳನ್ನು ನೋಡಿ ಅಚ್ಚರಿಗೊಂಡು ಮತ್ತೆ ಗಾನವನ್ನು ಕೇಳುವುದರಲ್ಲಿ ಆಸಕ್ತಳಾದಳು. ॥೫೭॥

ನ ಕೇನಾಽಪಿ ಕೃತಂ ನಾಟ್ಯಂ ಪೂರ್ವಂ ಶಂಕರಮಂದಿರೇ ।
ಕೈಲಾಸೇಽಪಿ ವಿಲಾಸಾಢ್ಯೇ ತಾದೃಶಂ ತದ್ವಿಲಕ್ಷಣಂ ॥೫೮॥

ಮತ್ಪ್ರೀತ್ಯರ್ಥಮಿದಂ ಸೃಷ್ಟಂ ನಾಟ್ಯಮೀಶೇನ ವಸ್ತುತಃ ।
ಮಯಿ ತಾವತ್ಕೃಪಾ ಶಂಭೋರಧುನಾಪ್ಯನುವರ್ತತೇ ॥೫೯॥

ಇದಂ ನಾಟ್ಯಂ ವಿಹಾಯಾಗ್ರೇ ಗಂತುಮೇವ ನ ಶಕ್ಯತೇ ।
ಪ್ರಾಯಶ್ಶಿವಾಪರಾಧೋಽಪಿ ಗಮನೇ ಮೇ ಭವಿಷ್ಯತಿ ॥೬೦॥

ಪ್ರೇಷಿತಶ್ಶಂಕರೇಣೈವ ನಾಟ್ಯಸ್ತ್ರೀಣಾಂ ಗಣೋಽಧುನಾ ।
ಏತದ್ವಿಹಾಯ ಗಮನೇ ಪ್ರತ್ಯವಾಯೋ ಭವಿಷ್ಯತಿ ॥೬೧॥

ಅಸ್ಯ ನಾಟ್ಯಸ್ಯ ಸಮಯಃ ಕಿಯಾನಾರಂಭಮಾತ್ರತಃ ।
ಸಂತೋಷರಾಶಯೋ ವೃದ್ಧಾಃ ಕಿಮಗ್ರೇ ಮೇ ಭವಿಷ್ಯತಿ ॥೬೨॥

ಈ ಹಿಂದೆ ಶಿವನ ಗೃಹವಾದ ಕೈಲಾಸದಲ್ಲಿಯೂ ಸಹ ಅಷ್ಟೊಂದು ಅದ್ಭುತವೂ, ಮನೋಹರವೂ ಆದ ನರ್ತನವನ್ನು ಯಾರೂ ಅಭಿನಯಿಸಿರಲಿಲ್ಲ. ॥೫೮॥

ನಿಜವಾಗಿಯೂ ಶಿವನು ನನಗೆ ಪ್ರೀತಿಯುಂಟಾಗಲೆಂದೇ ಈ ನರ್ತನದ ಸಂಭ್ರಮವನ್ನು ಸೃಷ್ಟಿಸಿರುವನು. ಅವನ ಕೃಪಾಲೇಶವು ಇನ್ನೂ ನನ್ನಲ್ಲಿ ಅನುವರ್ತಿಸುವುದಾಗಿದೆ. ॥೫೯॥

ನಾನು ಈ ನರ್ತನವನ್ನು ನೋಡದೆ ಇಲ್ಲಿಂದ ಮುಂದಕ್ಕೆ ಹೋಗಲು ಅಸಮರ್ಥಳಾಗಿದ್ದೇನೆ. ಅದಲ್ಲದೆ ಇದನ್ನು ನೋಡದೇ ನಾನು ಮುಂದಕ್ಕೆ ಹೋಗುವುದಾದರೆ, ಪ್ರಾಯಶಃ ನಾನು ಶಿವನಲ್ಲಿ ಅಪರಾಧವನ್ನೆಸಗಿದಂತಾಗುವುದು. ॥೬೦॥

ಈಗ ಶಿವನೇ ಈ ನರ್ತಕಿಯರನ್ನು ನನ್ನ ಬಳಿಗೆ ಕಳುಹಿಸಿರುವನು. ಹೀಗಿರುವಾಗ, ಇವರ ನಾಟ್ಯವನ್ನು ನಾನು ಅವಲೋಕಿಸದೇ ಮುಂದಕ್ಕೆ ಹೋದರೆ, ನನಗೆ ಕೆಡಕುಂಟಾಗಬಹುದು. ॥೬೧॥

ಈ ನರ್ತನದ ಕಾಲವು ಎಷ್ಟು ರಮಣೀಯವಾಗಿರುತ್ತದೆ! ಇದನ್ನು ಪ್ರಾರಂಭಿಸಿದ ಮಾತ್ರದಿಂದಲೇ ಸಂತೋಷವು ಉಕ್ಕಿ ಉಕ್ಕಿ ಬರುತ್ತಿದೆ. ಇದರಿಂದ

ನೇತ್ರತ್ರಯೇಣ ತನ್ನಾಟ್ಯಂ ದ್ರಷ್ಟುಮೇವ ನ ಶಕ್ಯತೇ ।
ಸಹಸ್ರೇಣಾಪಿ ನೇತ್ರಾಣಾಂ ಲಕ್ಷೇಣಾಪ್ಯರ್ಬುದೇನ ವಾ ॥೬೩॥

ಕಿಂ ತ್ವಪಾರಾಣಿ ನೇತ್ರಾಣಿ ವಿಶಾಲಾನ್ಯಮಲಾನಿ ಚ ।
ತೈರ್ನಾಟ್ಯಮೀದೃಶಂ ದೃಷ್ಟ್ವಾ ಸಂತುಷ್ಟಾ ನ ಭವಾಮಿ ಕಿಂ ॥೬೪॥

ಇತಿ ಗೌರೀ ವಿಚಾರ್ಯಾದೌ ಸಸರ್ಜ ನಯನಾನಿ ಸಾ ।
ವಿಪುಲಾನಿ ವಿಚಿತ್ರಾಣಿ ರಮ್ಯಾಣ್ಯಪಿ ವಿಶೇಷತಃ ॥೬೫॥

ತೈರ್ನೇತ್ರೈಸ್ತಾದೃಶಂ ನಾಟ್ಯಂ ವಿಲೋಕ್ಯಾಂಬಾ ಪ್ರತಿಕ್ಷಣಂ ।
ಸಂತುಷ್ಟಾ ಸ್ವಸ್ವರೂಪಂ ಚ ವಿಸ್ಮೃತ್ಯ ವಿವಶಾ ಸ್ಥಿತಾ ॥೬೬॥

ತನ್ನಾಟ್ಯಾಲೋಕನೇನೈವ ನೀತಃ ಕಾಲಃ ಕಿಯಾನಪಿ ।
ಪ್ರತಿಕ್ಷಣಂ ನವಂ ನಾಟ್ಯಂ ಕೇನ ವಾ ತನ್ನ ದೃಶ್ಯತೇ ॥೬೭॥

ಮುಂದೆ ಯಾವ ರೀತಿಯ ಆನಂದದ ಪರಿಣಾಮವುಂಟಾಗುವುದೋ ಅದನ್ನು ತಿಳಿಯಲಾರದವಳಾಗಿದ್ದೇನೆ. ॥೬೨॥

ಮೂರುಕಣ್ಣುಗಳಿದ್ದರೂ ಅವುಗಳ ಸಹಾಯದಿಂದ ಈ ನರ್ತನವನ್ನು ನೋಡಲು ಅಸಾಧ್ಯವಾಗಿದೆ. ಹೆಚ್ಚೇಕೆ! ಸಾವಿರ, ಅಥವಾ ಲಕ್ಷ ಕಣ್ಣುಗಳಿದ್ದರೂ ಸಹ ಇದನ್ನು ನೋಡಿ ತೃಪ್ತಿಪಡಲು ಸಾಧ್ಯವಿರುವುದಿಲ್ಲ. ॥೬೩॥

ಮತ್ತೇನೆಂದರೆ, ವಿಸ್ತಾರವಾಗಿಯೂ, ಶುಭ್ರವಾಗಿಯೂ ಇರುವ ಅಸಂಖ್ಯಾತ ವಾದ ಕಣ್ಣುಗಳು ಇದ್ದಿದ್ದರೆ, ನಾನು ಅವುಗಳಿಂದ ಅದ್ಭುತವಾದ ಈ ನರ್ತನವನ್ನು ನೋಡಿ, ಸಂತೋಷವನ್ನು ಪಡೆಯಬಹುದಾಗಿದ್ದಿತು. ॥೬೪॥

ಹೀಗೆಂದು ಯೋಚಿಸಿ, ಗಿರಿಜೆಯು ವಿಸ್ತಾರವಾಗಿಯೂ, ಸುಂದರವಾಗಿಯೂ ಇರುವ ಅನೇಕ ಕಣ್ಣುಗಳನ್ನು ಸೃಷ್ಟಿಸಿಕೊಂಡಳು. ॥೬೫॥

ಹಾಗೆ ಸೃಷ್ಟಿಸಿಕೊಂಡ ಆ ಕಣ್ಣುಗಳಿಂದ ದೇವಿಯು, ಬಿಡುವಿಲ್ಲದೆ ಅದ್ಭುತ ವಾದ ಆ ನರ್ತನವನ್ನು ನೋಡಿ, ಆನಂದಭರಿತಳಾಗಿ, ಮೈಮೇಲಿನ ಪರಿವೆಯೇ ಇಲ್ಲದಂತಾದಳು. ॥೬೬॥

ನರ್ತನವನ್ನು ನೋಡುತ್ತ ನೋಡುತ್ತ ಬಹಳ ಕಾಲವು ಹಾಗೆಯೇ ಕಳೆ ಯಿತು. ಆದರೂ ಆ ನರ್ತನವು, ಪ್ರತಿಕ್ಷಣದಲ್ಲಿಯೂ ಹೊಸ ಹೊಸದಾಗಿಯೇ ಕಾಣಿಸುತ್ತಿತ್ತು. ಇಂತಹ ನಾಟ್ಯವನ್ನು ಯಾರುತಾನೇ ನೋಡಲಿಚ್ಛಿಸುವುದಿಲ್ಲ?" ॥೬೭॥

ತಸ್ನಾಟ್ಯವಾರ್ತಾಶ್ರವಣಂ ಕೃತ್ವಾ ರಂಭಾದಿಕಾ ಅಪಿ ।
ವಿಸ್ಮಯಾವಿಷ್ಟಹೃದಯಾಃ ಪುರಾ ದೇವೇಂದ್ರಮಂದಿರೇ ॥೬೮॥

ಪ್ರತಿಕ್ಷಣಂ ನವಂ ನಾಟ್ಯಂ ಕಥಂ ತಾಭಿಃ ಕೃತಂ ತದಾ ।
ನಾಟ್ಯವಿದ್ಯಾಪಿ ಸಾತ್ಯಲ್ಪಾ ನ ತತ್ತದ್ವಿಷಯಂ ಖಲು ॥೬೯॥

ವಿಚಿತ್ರಂ ನಿರ್ಮಿತಂ ನಾಟ್ಯಂ ತದ್ವಿದ್ಯಾಯಾಂ ನ ಯನ್ಮತಂ ।
ತಾದೃಶಂ ನಾಟ್ಯಮೀಶೇನ ಸೃಷ್ಟಮತ್ರಾದ್ಭುತಂ ಚ ಕಿಂ ॥೭೦॥

ವಿಚಿತ್ರಸೃಷ್ಟಿಕರಣೇ ಸಮರ್ಥಃ ಶಂಕರಃ ಖಲು ।
ತತಸ್ತತ್ರಾಪಿ ಕಿಂ ಚಿತ್ರಂ ತದಸ್ಮಾಕಂ ಹಿ ದುರ್ಲಭಂ ॥೭೧॥

ಪಾರ್ವತಿಯ ಬಳಿಯಲ್ಲಿ ಅದ್ಭುತವಾದ ನಾಟ್ಯವಾಗುತ್ತಿರುವುದೆಂಬ ವಾರ್ತೆಯನ್ನು ಕೇಳಿ, ದೇವೇಂದ್ರನ ಸಭಾಸ್ಥಾನದಲ್ಲಿದ್ದ ರಂಭೆಯೇ ಮೊದಲಾದ ಅಪ್ಸರಸ್ತ್ರೀಯರೆಲ್ಲರೂ ಅಚ್ಚರಿಗೊಂಡವರಾದರು. ॥೬೮॥

ಪ್ರತಿ ಗಳಿಗೆಯಲ್ಲಿಯೂ ಹೊಸಹೊಸದಾಗಿ ಕಾಣಿಸುವಂತೆ ಆಡುವ ಆ ನಾಟ್ಯವಿದ್ಯೆಯು ಎಲ್ಲಿಂದ ಬಂದಿತು? ಅತ್ಯಲ್ಪವಾಗಿರುವ ಈ ನಾಟ್ಯಕಲೆಯಲ್ಲಿ ಅಷ್ಟು ನೈಪುಣ್ಯವನ್ನು ತೋರಿಸುವುದು ಹೇಗೆ? ಎಂದು ರಂಭಾದಿಗಳು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡರು. ॥೬೯॥

ಮೊದಲು ಆ ನಾಟ್ಯಕಲೆಯೇ ಅದ್ಭುತವಾಗಿದ್ದು ಅದರಲ್ಲಿ ತೋರಿಬರದ ವೈಚಿತ್ರ್ಯವೇ ಇರಲಿಲ್ಲ. ಸಾಕ್ಷಾತ್ ಶಿವನೇ ಅದಕ್ಕೆ ಪ್ರಚೋದಕನು. ಅಂತಹ ಶಂಕರನೇ ಇಷ್ಟೊಂದು ಅದ್ಭುತವಾದ ನಾಟ್ಯವನ್ನು ನಿರ್ಮಿಸಿರಲು, ಅದರಲ್ಲಿ ಆಶ್ಚರ್ಯಪಡುವುದೇನಿದೆ? ಎಂದು ಸಮಾಧಾನ ತಂದುಕೊಂಡರು. ॥೭೦॥

ಆ ಶಿವನು, ವಿಲಕ್ಷಣವಾದ ವಸ್ತುಗಳನ್ನು ನಿರ್ಮಿಸುವುದರಲ್ಲಿ ಸಮರ್ಥನಲ್ಲವೇ! ಆದುದರಿಂದ, ಶಿವನಿಂದ ನಿರ್ಮಿಸಲ್ಪಟ್ಟ ಈ ನಾಟ್ಯದಲ್ಲಿಯೂ ಅತಿಶಯ ಚಮತ್ಕಾರವಿರಬಹುದು. ಇದರಲ್ಲಿ ಆಶ್ಚರ್ಯವೇನು? ಆದರೆ ಅಂತಹ ನಾಟ್ಯವು, ನಮ್ಮಂತಹ ಕ್ಷುದ್ರಜನರಿಗೆ ದುರ್ಲಭವಾಗಿರುವುದಲ್ಲವೇ! ಎಂದು ಪಶ್ಚಾತ್ತಾಪಪಟ್ಟರು. ॥೭೧॥

ಪ್ರಾಸಾದಃ ಖಲು ಸೃಷ್ಟೋಽಸ್ತಿ ಶಂಕರೇಣ ಸ ತಾದೃಶಃ ।
ಸ್ವರ್ಗಲೋಕೇ ನಾಗಲೋಕೇ ಸತ್ಯೇ ವಿಷ್ಣುಪದೇಽಪಿ ವಾ ॥೨೨॥

ತಥೈವ ನಾಟ್ಯಸೃಷ್ಟಿಃ ಸ್ಯಾತ್ಸಾವಿದ್ಯಾ ತತ್ರ ಸಾತ್ರ ನ ।
ತಾವತಾಪಿ ಕಿಮಜ್ಞತ್ವಮಜ್ಞತ್ವೇಽಪಿ ನ ನಃ ಕ್ಷತಿಃ ॥೨೩॥

ಯಾವದ್ಯಾ ಸ್ವರ್ಗಲೋಕೇಽಸ್ತಿ ತದಭ್ಯಾಸೋ ನ ಚೇತ್ತದಾ ।
ಅಸ್ಮಾಕಮಜ್ಞತಾ ಸೇಯಮಭ್ಯಸ್ತಾ ಸಾ ವಿಲಕ್ಷಣಾ ॥೨೪॥

ಅಸ್ಮಾಕಂ ತಾದೃಶಂ ಭಾಗ್ಯಂ ತದ್ವಿದ್ಯಾಭ್ಯಾಸನೇ ಕುತಃ ।
ಸಾ ವಿದ್ಯಾ ಪರಮಾ ವಿದ್ಯಾ ಶಂಕರೇಣ ವಿನಿರ್ಮಿತಾ ॥೨೫॥

ಅತ್ಯದ್ಭುತವಾದ ಆ ದಿವ್ಯಪ್ರಾಸಾದವನ್ನೇ ಶಿವನು ಸೃಷ್ಟಿಸಿರುವನು. ಅವಕ್ಕೆ ಸದೃಶವಾದ ಮತ್ತೊಂದು ಪ್ರಾಸಾದವು ಸ್ವರ್ಗದಲ್ಲಾಗಲಿ, ಪಾತಾಳದಲ್ಲಾಗಲಿ, ಸತ್ಯಲೋಕದಲ್ಲಾಗಲಿ, ವೈಕುಂಠದಲ್ಲಿಯೇ ಆಗಲಿ ಇಲ್ಲ. ಅದರಂತೆಯೇ ಈ ನಾಟ್ಯ ಕಲೆಯನ್ನೂ ಸೃಷ್ಟಿಸಿರಬಹುದು. ಈ ನಾಟ್ಯಕಲೆಯು ಅಲ್ಲಿಯೇ ಹೊರತು ಸ್ವರ್ಗ ಲೋಕಾದಿಗಳಲ್ಲಿ ಎಂದಿಗೂ ದೊರೆಯಲಾರದು. ಆದರೆ ಅಂತಹ ನಾಟ್ಯಕಲೆಯನ್ನಾ ಗಲಿ, ಅಥವಾ ಪ್ರಾಸಾದವನ್ನೇ ಆಗಲಿ ನಾವು ಸ್ವರ್ಗಲೋಕಾದಿಗಳಲ್ಲಿ ಹೊಂದಲಿಲ್ಲ ವಾಗಿ ನಾವು ನಮ್ಮನ್ನು ಅಜ್ಞರೆಂದು ತಿಳಿಯಬಹುದೇ! ಅಥವಾ ಒಂದುವೇಳೆ ಅಂತಹ ಅಜ್ಞತ್ವವೂ ನಮಗಿರಲಿ. ತೊಂದರೆಯಿಲ್ಲ. ||೨೨-೨೩||

ಸ್ವರ್ಗಲೋಕದಲ್ಲಿ ಯಾವ ಯಾವ ಕಲೆಗಳಿರುವುವೋ, ಅವುಗಳನ್ನು ನಾವು ತಿಳಿದುಕೊಳ್ಳದಿದ್ದರೆ ಅದು ನಿಜವಾಗಿಯೂ ನಮ್ಮ ಅಜ್ಞತೆಯೆನಿಸುವುದು. ಒಂದು ವೇಳೆ ನಾವು ಇತರ ವಿದ್ಯೆಗಳನ್ನು ಅಭ್ಯಾಸಮಾಡಿದರೂ ಅದು ವಿಲಕ್ಷಣವೆನಿಸಿ ಕೊಳ್ಳುವುದಲ್ಲವೇ ? ||೨೪||

ಕ್ಷುದ್ರರಾದ ನಮಗೆ ಅಂತಹ ವಿದ್ಯೆಯನ್ನು ಅಭ್ಯಸಿಸುವ ಭಾಗ್ಯವೆಲ್ಲಿಂದ ಬಂದಿತು! ಅದು ಶಿವನಿಂದ ನಿರ್ಮಿಸಲ್ಪಟ್ಟುದಾಗಿ ಅತಿ ರಹಸ್ಯವಾಗಿರಬಹುದು. ||೨೫||

ದೈವಾದತ್ರ ಸಮಾಯಾತಿ ಕೃಪಯಾ ಶಂಕರಸ್ಯ ಸಾ ।
ಅಭ್ಯಾಸಸ್ತತ್ರ ಕರ್ತವ್ಯಸ್ತದಾಗಮನಮೇವ ನ ॥೭೬॥

ಗಾನವಾರ್ತಾ ಶ್ರುತಾ ಪೂರ್ವಂ ತದ್ಗಾನಂ ನಾತ್ರ ಸರ್ವಥಾ ।
ನೂತನಾ ಗಾನವಿದ್ಯಾ ಚೇದತ್ರ ಸಾಪಿ ಕಥಂ ಭವೇತ್ ॥೭೭॥

ಕಿಂ ಚ ಸೌಂದರ್ಯಧಾರಾಪಿ ದಿವ್ಯನಾಟ್ಯಾಂಗನಾಶ್ರಿತಾ ।
ಸಾ ಧಾರಾ ಕೇನ ವಾ ಲಭ್ಯಾ ಸಾ ಕಿಲಾತ್ಯಂತದುರ್ಲಭಾ ॥೭೮॥

ಪ್ರತಿಕ್ಷಣಂ ನವಂ ತಾಸಾಂ ಸೌಂದರ್ಯಮತಿತೋಷದಂ ।
ತತ್ಕಥಂ ಪ್ರಾಪ್ಯತೇ ಲೋಕೇ ದುರ್ಲಭಂ ತದಿತಿ ಶ್ರುತಂ ॥೭೯॥

ಆ ಗಾನಕಲೆಯ ಕೌಶಲವು ಶಿವನ ಅನುಗ್ರಹದಿಂದ ಇಲ್ಲಿಗೆ ದೊರೆತರೆ ಆಗ ನಾವೂ ಅದನ್ನು ಕಲಿಯಬಹುದು. ಆದರೆ ಆ ಕಲೆಯು ಇಲ್ಲಿಗೆ ಬರುವುದು ಹೇಗೆ? ॥೭೬॥

ಗಾನವಿದ್ಯೆಯೆಂಬ ಪ್ರಸಿದ್ಧವಾದ ಒಂದಾನೊಂದು ಕಲೆಯು ಇರುವುದೆಂದು ಈ ಹಿಂದೆಯೇ ನಾವು ಕೇಳಿರುವೆವು. ಆದರೆ ಇಲ್ಲಿ ಆ ಗಾನವಿದ್ಯೆಯು ದುರ್ಲಭವೆನಿಸಿದೆ. ಗಾನಕಲೆಯೇ ನೂತನವಾಗಿ ಅಲ್ಲಿ ಹುಟ್ಟಿತು ಎನ್ನುವುದಾದರೆ, ಅದು ನಮಗೆ ತಿಳಿಯುವ ಬಗೆ ಹೇಗೆ? ॥೭೭॥

ಇದಲ್ಲದೆ ಅಪ್ಸರಸ್ತ್ರೀಯರಂತಿರುವ ಈ ನರ್ತಕಿಯರಲ್ಲಿ ಕಾಣಿಸುವ ಸೌಂದರ್ಯರಾಶಿಯು ವರ್ಣನಾತೀತವಾಗಿರುವುದಾದರೆ, ಆ ಸೌಂದರ್ಯವು ಇನ್ನಾರಲ್ಲಿ ತಾನೇ ಇದ್ದೀತು? ನಮಗಂತೂ ಅದು ಅತಿ ದುರ್ಲಭವಾದುದಲ್ಲವೇ? ॥೭೮॥

ಅವರ ಆ ಸೌಂದರ್ಯವು ಪ್ರತಿ ಗಳಿಗೆಯಲ್ಲಿಯೂ ಹೊಸ ಹೊಸದಾಗಿ ಕಾಣಿಸುವುದಲ್ಲದೆ, ಸದಾ ಸಂತೋಷವನ್ನುಂಟುಮಾಡುವುದಾಗಿರುತ್ತದೆ. ಅಂತಹ ಅದ್ಭುತ ಸೌಂದರ್ಯವು ಯಾವ ಲೋಕದಲ್ಲಿ ತಾನೆ ದೊರೆತೀತು? ॥೭೯॥

ತದ್ವಾಂಛಾಂ ಕಮಲಾ ತಾವದಧುನಾಪಿ ಕರೋತಿ ಸಾ ।
ವಾಣೀ ಶಚೀ ಚ ಛಾಯಾ ಚ ತದಿಹಾತ್ಯಂತದುರ್ಲಭಂ ॥೮೦॥

ಕಿಂ ವಾಂಛಯಾ ಫಲಪ್ರಾಪ್ತಿರ್ವಿಲಕ್ಷಣಫಲೋದಯಃ ।
ಭೂರಿಪುಣ್ಯತಪೋಲಭ್ಯಸ್ತತ್ತಪಸ್ತಾಸು ಕುತ್ರ ವಾ ॥೮೧॥

ಕೈಲಾಸಸದನಾವಾಸಶ್ಶಿವದಾಸೀಗಣಸ್ಯ ಯತ್ ।
ತತ್ಸೌಂದರ್ಯಂ ನ ಲೋಕೇ ತು ಸುರನಾರೀಷು ಸರ್ವಥಾ ॥೮೨॥

ಕೈಲಾಸದಾಸೀವದನಂ ದೃಷ್ಟ್ವಾ ದೃಷ್ಟ್ವಾ ಪುನಃ ಪುನಃ ।
ಕಮಲಾ ಲಜ್ಜಯಾ ತಾವದ್ದೂರಾನ್ನಮ್ರಮುಖೀ ಸ್ಥಿತಾ ॥೮೩॥

ಕುರೂಪಂ ಸೃಷ್ಟವಿಧೀಶೇನ ಕಿಮೇತನ್ಮಮ ದುರ್ಭಗಂ ।
ಸಾಹಂ ತಪಸ್ಯಯಾ ಶಂಭುಃ ಪ್ರೀತೋ ಮತ್ಕೃಪಯಾ ಖಲು ॥೮೪॥

ಲಕ್ಷ್ಮಿಯೂ, ಸರಸ್ವತಿಯೂ, ಶಚೀದೇವಿಯೂ, ಸೂರ್ಯಪತ್ನಿಯಾದ ಛಾಯಾ ದೇವಿಯೂ, ಸಹ ಆ ಸೌಂದರ್ಯವನ್ನೂ ನಾಟ್ಯಕಲೆಯನ್ನೂ ಬಯಸುತ್ತಿರುವರು. ಹಾಗಿರುವಾಗ ಅದು ಇಲ್ಲಿ ಅತಿ ದುರ್ಲಭವೆಂಬುದನ್ನು ಹೇಳಬೇಕೆ? ॥೮೦॥

ಹೀಗೆ ಆಸೆಪಡುವುದರಿಂದ, ಅದು ಲಭಿಸುವುದೇ! ದುರ್ಲಭವಾದ ಆ ಫಲವನ್ನು, ಅನೇಕ ಪುಣ್ಯಕರ್ಮಗಳಿಂದಲೂ ಮತ್ತು ತಪೋನುಷ್ಠಾನದಿಂದಲೂ, ಪಡೆಯಬಹುದು. ಆದರೆ, ಅವರು ಎಂತಹ ತಪೋನುಷ್ಠಾನಗಳನ್ನು ಆಚರಿಸಿದ್ದರೋ? ॥೮೧॥

ಈಶ್ವರನ ದಾಸೀವರ್ಗಕ್ಕೆ ಕೈಲಾಸವಾಸವೇ ಒಂದು ಅಸದೃಶಸೌಂದರ್ಯ. ಅಂತಹ ಸೌಂದರ್ಯವು ಲೋಕದಲ್ಲಿ ಯಾರಿಗೆ ತಾನೆ ಲಭಿಸೀತು? ॥೮೨॥

ಕೈಲಾಸದಲ್ಲಿರುವ, ಶಿವನ ದಾಸಿಯರ ಈ ಸುಂದರವಾದ ಮುಖವನ್ನು ಬಾರಿಬಾರಿಗೂ ನೋಡಿ, ನೋಡಿ, ಲಕ್ಷ್ಮಿಯೂ ಸಹ ನಾಚಿಕೆಯಿಂದ ಮುಖವನ್ನು ತಗ್ಗಿಸಿರುವಳು. ॥೮೩॥

ಸೃಷ್ಟಿಕರ್ತನು, ತನ್ನನ್ನು ಕುರೂಪಿಯನ್ನಾಗಿ ಸೃಷ್ಟಿಸಿರುವನು. ನನ್ನ ದುರದೃಷ್ಟವನ್ನು ಏನೆಂದು ಹೇಳಲಿ? ಆದರೆ ನನ್ನ ತಪಸ್ಸಿನಿಂದ ಶಿವನು ಸಂತೋಷಗೊಂಡು ನನ್ನನ್ನು ದಯೆಯಿಂದ ಅನುಗ್ರಹಿಸಲಿ. ॥೮೪॥

ಸೌಂದರ್ಯಮೇವ ನಾರೀಣಾಂ ನಿಧಿಸ್ತೇನ ವಿನಾ ಸುಖಂ ।
ನ ಪ್ರಾಪ್ಯತೇ ಹಿ ನಾರೀಭಿರ್ಧನಲಾಭೇಽಪಿ ಭೂರಿಶಃ ॥೮೫॥

ನ ಚಾಭರಣವಾಂಛಾಪಿ ಸೌಂದರ್ಯೇ ಸತಿ ಯೌವನೇ ।
ದುರ್ಲಭಂ ತದ್ದ್ವಯಂ ಪ್ರಾಪ್ಯ ನಾರೀ ಕಿಂ ಚ ಮನೋರಮಾ॥೮೬॥

ನಾರೀರತ್ನಮಿತಿ ಪ್ರೋಕ್ತಂ ರಮ್ಯಸೌಂದರ್ಯಯೌವನೈಃ ।
ತದಭಾವೇ ತೃಣಪ್ರಾಯಾ ಪತಿತಂ ತತ್ತೃಣಂ ವರಂ ॥೮೭॥

ಪಾತಿವ್ರತ್ಯಂ ಯೌವನಂ ಚ ಸೌಂದರ್ಯಂ ಚ ವಿಶೇಷತಃ ।
ಶಂಕರಾನುಗ್ರಹೇಣೈವ ನಾರೀಭಿಃ ಪ್ರಾಪ್ಯತೇ ಪರಂ ॥೮೮॥

ಸ್ತ್ರೀಯರಿಗೆ ಸೌಂದರ್ಯವೇ ಧನವಾಗಿರುವುದು. ಸೌಂದರ್ಯವೊಂದಿಲ್ಲದಿದ್ದರೆ, ಅಪಾರವಾದ ಧನಸಂಪತ್ತಿಯಿದ್ದರೂ, ಅದರಿಂದ ಅವರಿಗೆ ಎಂದಿಗೂ ಸುಖವು ಲಭಿಸಲಾರದು. ||೮೫||

ಯೌವನವೂ ಮತ್ತು ಸ್ವಾಭಾವಿಕವಾದ ಸೌಂದರ್ಯವೂ, ಇರುವಾಗ ಸ್ತ್ರೀಯರಿಗೆ, ಆಭರಣಗಳ ಬಯಕೆಯಿರುವುದೇ? ಆದುದರಿಂದ, ಸ್ತ್ರೀಯರಿಗೆ ಯೌವನ ಮತ್ತು ಸೌಂದರ್ಯ, ಎರಡು ಆಭರಣಗಳಿದ್ದರೆ, ಇವುಗಳಿಂದಲೇ ಅವರು ಶೋಭಿಸುವರು. ಇವೆರಡೂ ಇಲ್ಲದವರು ಎಂದಿಗೂ ಮನೋರಮೆಯೆನಿಸಲಾರರು. ||೮೬||

ಸೌಂದರ್ಯ ಮತ್ತು ಯೌವನ ಇವೆರಡರಿಂದಲೇ ಸ್ತ್ರೀಯನ್ನು ರತ್ನವೆಂದು ಪರಿಗಣಿಸುವರು. ಅದಿಲ್ಲದಿದ್ದರೆ, ಅವರು, ಹಗುರವಾದ ಹುಲ್ಲು ಕಡ್ಡಿಗೆ ಸಮನೆನಿಸುವರು. ಯೌವನ ಮತ್ತು ಸೌಂದರ್ಯಗಳಿಂದ ರಹಿತಳಾದ ಸ್ತ್ರೀಗಿಂತಲೂ, ಮಾರ್ಗದಲ್ಲಿ ಬಿದ್ದಿರುವ ಹಗುರವಾದ ಹುಲ್ಲಿನ ಕಡ್ಡಿಯೂ, ಶ್ರೇಷ್ಠವೆನಿಸುವುದು. ||೮೭||

ಸ್ತ್ರೀಯರಿಗೆ ಪತಿಸೇವೆಯೂ, ಯೌವನವೂ, ಮತ್ತು ಸೌಂದರ್ಯವೂ ಈ ಮೂರು ಶಿವನ ಅನುಗ್ರಹದಿಂದಲೇ ಹೊರತು ಬೇರೆಯ ಯಾವ ರೀತಿಯಿಂದಲೂ ಲಭಿಸಲಾರವು. ||೮೮||

ಶಿವದಾಸೀಮುಖಂ ದೃಷ್ಟ್ವಾ ನಮ್ರಾಕಾರಾ ಸುರಾಂಗನಾ ।
ವೈರೂಪ್ಯಾಶ್ರಯತಾಂ ಜ್ಞಾತ್ವಾ ಕಾ ಸ್ವನಿಂದಾಂ ಚಕಾರ ನ ॥೮೯॥

ತದ್ದಾಸೀಯೌವನಸ್ಯಾಪಿ ವೈಲಕ್ಷಣ್ಯಂ ಮಹತ್ತರಂ ।
ತನ್ನಾಮರಾಂಗನಾಪ್ರಾಪ್ಯಂ ತದನ್ಯತ್ರ ಕುತೋ ಭವೇತ್ ॥೯೦॥

ತಾದೃಶಂ ಭೋಗ್ಯಮನ್ಯಾಭಿರ್ಬಹುಜನ್ಮತಪಸ್ಯಯಾ ।
ಕೃಪಯಾಪಿ ನ ಸಂಪ್ರಾಪ್ಯಂ ಶಂಕರಾನುಗ್ರಹಂ ವಿನಾ ॥೯೧॥

ಅಕಸ್ಮಾದ್ಯದಿ ಸಂಪ್ರಾಪ್ಯ ಶಂಕರಾನುಗ್ರಹಸ್ತದಾ ।
ಸರ್ವಭಾಗ್ಯಸಮಾಕೀರ್ಣಾಸ್ಫೂರ್ತಿರ್ಮೇವ ಭವತ್ಯಪಿ ॥೯೨॥

ಕುರ್ವಂತಿ ತಪಸಾ ಪ್ರೀತಂ ಶಂಕರಂ ಲೋಕಶಂಕರಂ ।
ಸಂಸಾರವಾರ್ತಾಂ ತ್ಯಕ್ತ್ವಾಪಿ ತದ್ವಾರ್ತಯಾ ಫಲಂ ಚ ನ ॥೯೩॥

ಯಾವ ದೇವತಾಸ್ತ್ರೀಯು ತಾನೇ, ಶಿವನ ದಾಸಿಯರ ಸುಂದರವಾದ ಮುಖವನ್ನು ನೋಡಿ, ನಾಚಿಕೆಯಿಂದ ಮುಖವನ್ನು ಕೆಳಕ್ಕೆ ಬಗ್ಗಿಸಿ, ತಾನು ಕುರೂಪಿಯಾಗಿರುವುದನ್ನು ತಿಳಿದುಕೊಂಡು ತನ್ನನ್ನು ತಾನು ನಿಂದಿಸಿಕೊಳ್ಳಲಾರಳು ? ॥೮೯॥

ಶಿವದಾಸಿಯರ ಆ ಯೌವನವೂ ಸಹ, ಅತ್ಯಂತ ವಿಚಿತ್ರವಾಗಿರುವುದು. ದೇವತಾಸ್ತ್ರೀಯರಿಗೂ ಅಂತಹ ಪ್ರಾಯವು ದುರ್ಲಭವೇ. ಹೀಗಿರುವಲ್ಲಿ ಇತರರಿಗೆ ಅದು ಲಭಿಸುವುದೆಂತು ? ॥೯೦॥

ಆ ಶಿವದಾಸಿಯರ ಸುಖಕ್ಕೆ ಸದೃಶವಾದ ಸುಖವು, ಇತರ ಸ್ತ್ರೀಯರಿಗೆ ಅನೇಕ ಜನ್ಮಗಳ ತಪೋನುಷ್ಠಾನದಿಂದಲೂ ದುರ್ಲಭವೆನಿಸುವುದು. ದೈವಾನುಗ್ರಹವಿದ್ದರೂ ಶಿವನ ಅನುಗ್ರಹವೊಂದಿಲ್ಲದಿದ್ದರೆ, ಆ ಸುಖವು ಇತರ ಸ್ತ್ರೀಯರಿಗೆ ಎಂದಿಗೂ ಲಭಿಸಲಾರದು. ॥೯೧॥

ಅದೃಷ್ಟವಶದಿಂದ ಶಂಕರನ ಅನುಗ್ರಹವು ಲಭಿಸಿದರೆ, ಒಡನೆಯೇ ಸೌಂದರ್ಯಾದಿ ಸಕಲ ಸಂಪತ್ತುಗಳೂ ತಾವಾಗಿಯೇ ಬಂದು ಸೇರುವುವು. ॥೯೨॥

ಭಕ್ತರು ಲೋಕಕಲ್ಯಾಣಕರನಾದ ಶಿವನನ್ನು ತಪಸ್ಸಿನಿಂದ ಮೆಚ್ಚುವಂತೆ ಮಾಡಿ, ಸಂಸಾರದಿಂದ ದೂರವಾಗುವರು. ಆದರೆ ಶೈವರ ಸುಖವನ್ನೂ ಪಡೆಯಲಾರರು. ॥೯೩॥

ಕಿಂ ಚ ಯದ್ಯತ್ಫಲಂ ರಮ್ಯಂ ವಿಲಕ್ಷಣಮನುತ್ತಮಮ್ ।
ತದನುಗ್ರಹಮಾತ್ರೇಣ ಶಂಕರಸ್ಯ ಪ್ರಜಾಯತೇ ॥೯೪॥

ಶಂಕರಾನುಗ್ರಹೇ ಬೀಜಂ ಶಿವಲಿಂಗಸಮರ್ಚನಮ್ ।
ತದರ್ಚನೇನ ಯತ್ಪ್ರಾಪ್ಯಂ ತತ್ಪ್ರಾಪ್ಯಂ ನಾನ್ಯಧರ್ಮತಃ ॥೯೫॥

ಧರ್ಮಃ ಕೋ ವಾ ಭವೇದ್ಯೇನ ಸುಪ್ರೀತಃ ಶಂಕರೋ ಭವೇತ್ ।
ಶಿವಲಿಂಗಾರ್ಚನಂ ತ್ಯಕ್ತ್ವಾ ತದರ್ಚನಮನುತ್ತಮಮ್ ॥೯೬॥

ಕಿಂ ಚ ಮುಖ್ಯಃ ಸ್ವರ್ಗಲೋಕಾಚ್ಛಿವಲೋಕ ಇತಿ ಶ್ರುತಃ ।
ತಸ್ಮಿನ್ ಲೋಕೇ ಪುಣ್ಯಪೂಜ್ಯೈಶ್ಶಾಂಕರೈಃ ಸ್ಥೀಯತೇ ಪರ ॥೯೭॥

ನ ಸ್ವರ್ಗನಾಮಮಾತ್ರೇಣ ಸ್ವರ್ಗಲೋಕೋಽಯಮೀದೃಶಃ ।
ಶಾಸ್ತ್ರೇಷು ಸ್ವರ್ಗಶಬ್ದಾರ್ಥಃ ಪ್ರಸಿದ್ಧಸ್ಸ ತು ನಾತ್ರ ತು ॥೯೮॥

ಇದಲ್ಲದೆ, ಶ್ರೇಷ್ಠವೂ, ಅಸಾಧಾರಣವೂ, ಸುಖಕರವೂ ಆದ ಯಾವ ಯಾವ ಫಲಗಳು ಲೋಕದಲ್ಲಿ ಇರುವುವೋ, ಅವೆಲ್ಲವೂ ಶಿವನ ಅನುಗ್ರಹದಿಂದಲೇ ಲಭಿಸತಕ್ಕವುಗಳು. ॥೯೪॥

ಶಿವಲಿಂಗವನ್ನು ಪೂಜಿಸುವುದೇ ಶಂಕರನ ಅನುಗ್ರಹ ಸಂಪಾದನೆಗೆ ಮುಖ್ಯ ಸಾಧನ. ಶಿವಲಿಂಗವನ್ನು ಪೂಜಿಸುವುದರಿಂದ ಯಾವ ಫಲವನ್ನು ಪಡೆಯಬಹುದೋ, ಆ ಫಲವನ್ನು ಇತರ ಯಾವ ಧರ್ಮಾಚರಣೆಯಿಂದಲೂ ಪಡೆಯಲಾಗುವುದಿಲ್ಲ. ॥೯೫॥

ಶಿವಲಿಂಗಾರ್ಚನೆಯನ್ನು ಬಿಟ್ಟು, ಇತರ ಯಾವ ಧರ್ಮದಿಂದತಾನೇ ಶಿವನು ತೃಪ್ತಿಗೊಳ್ಳುವನು! ಆದುದರಿಂದಲೇ ಶಿವಲಿಂಗಾರ್ಚನೆಯೇ ಧರ್ಮಗಳಲ್ಲಿ ಶ್ರೇಷ್ಠವೆನಿಸಿರುವುದು. ॥೯೬॥

ಇದಲ್ಲದೇ, ಸ್ವರ್ಗಲೋಕಕ್ಕಿಂತಲೂ ಶಿವಲೋಕವು ಶ್ರೇಷ್ಠವಾದುದೆಂದು ಕೇಳಿಬರುವುದು. ಶಿವಲಿಂಗವನ್ನು ಪೂಜಿಸುವವನೂ ಶಿವನ ಅನುಗ್ರಹಕ್ಕೆ ಪಾತ್ರನಾದವನೂ, ಇವರು ಮಾತ್ರವೇ ಆ ಲೋಕದಲ್ಲಿ ನೆಲಸುವವರು. ॥೯೭॥

ಸ್ವರ್ಗಲೋಕವೆಂಬ ಹೆಸರಿರುವುದರಿಂದ ಮಾತ್ರ ಈ ಲೋಕದಲ್ಲಿ ಸರ್ವ ಸುಖಗಳು ಒದಗುತ್ತವೆಂಬುದು ಸುಳ್ಳು. ಆದರೆ ಶಾಸ್ತ್ರದಲ್ಲಿ ಮಾತ್ರ ಸ್ವರ್ಗಶಬ್ದಕ್ಕೆ

ದುಃಖಾನ್ಯತ್ರ ಬಹೂನ್ಯೇವ ಸುರನ್ವೈರಿಕೃತಾನ್ಯಪಿ ।
ದುಃಖಾಕೃತಿಃ ಸ್ವರ್ಗಲೋಕಃ ಕಥಂ ವಾ ಶಾಸ್ತ್ರನಿಶ್ಚಿತಃ ॥೯೯॥

ಮುಖ್ಯಃ ಸ್ವರ್ಗಾಖ್ಯಯಾ ಖ್ಯಾತಃ ಕೈಲಾಸ ಇತಿ ವಿಶ್ರುತಃ ।
ನಾಯಂ ಸ್ವರ್ಗಃ ಸ್ವರ್ಗವಾರ್ತಾಶ್ರಾಂತಾನಾಮತ್ರ ಕೇವಲಂ ॥೧೦೦॥

ಕಿಂ ಚ ಯದ್ದುರ್ಲಭಂ ಲೋಕೇ ಸರ್ವೇಷಾಮಪಿ ತಾದೃಶಂ ।
ಲಿಂಗಾರ್ಚನೇನ ಸಂಪ್ರಾಪ್ಯಮನ್ಯತ್ಪ್ರಾಪ್ಯಂ ನ ಸರ್ವಥಾ ॥೧೦೧॥

ಅಧಿಕಾರೋಽಪಿ ಲೋಕೇಽಸ್ಮಿನ್ ದುರ್ಲಭಂ ಶಿವಪೂಜನೇ ।
ತಸ್ಮಿನ್ ಸತಿ ಕಿಮಪ್ರಾಪ್ಯಂ ಫಲಂ ಶಂಕರಪೂಜನೇ ॥೧೦೨॥

ಸಕಲಸುಖಾಶ್ರಯವಾದದ್ದು. ನಾಶರಹಿತವಾದದ್ದು. ಸಂಸಾರಸಂಬಂಧವಿಲ್ಲದಿರುವುದು, ಎಂದು ಅರ್ಥವನ್ನು ನಿರ್ವಚನಮಾಡಿರುವರು. ॥೯೮॥

ಸ್ವರ್ಗಲೋಕದಲ್ಲಿ ರಾಕ್ಷಸರ ಬಾಧೆಯಿಂದ ಅನೇಕ ದುಃಖಗಳನ್ನು ಅನುಭವಿಸಬೇಕಾಗುವುದು. ಆದುದರಿಂದ ಕರ್ಮಕಾಂಡಗಳಿಂದ ತಿಳಿದುಬರುವ ಆ ಸ್ವರ್ಗಲೋಕವು ದುಃಖದಾಯಕವಲ್ಲವೇ! ॥೯೯॥

ಸ್ವರ್ಗವೆಂಬ ಹೆಸರಿನಿಂದ ವ್ಯವಹರಿಸಲ್ಪಡುವ ಮುಖ್ಯವಾದ ಆ ಸ್ವರ್ಗವೇ ಕೈಲಾಸವೆಂಬ ಹೆಸರಿನಿಂದಲೂ ಪ್ರಸಿದ್ಧವಾಗಿರುತ್ತದೆ. ದುಃಖಕ್ಕೆ ಆಲಯವಾಗಿ ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಈ ಸ್ವರ್ಗಲೋಕವು, ಕೈಲಾಸವೆಂಬ ನಾಮಾಂತರವನ್ನು ಹೊಂದಿದ ಸ್ವರ್ಗಲೋಕಕ್ಕಿಂತಲೂ ಬೇರೆಯಾಗಿರುವುದು. ದುಃಖಕ್ಕೆ ತವರುಮನೆಯಂತಿರುವ, ಆ ಸ್ವರ್ಗಲೋಕದಲ್ಲಿ, ಜುಗುಪ್ಸೆಗೊಂಡು ಶಿವಸಾನ್ನಿಧ್ಯವನ್ನೇ ಪಡೆಯಲಪೇಕ್ಷಿಸುವ ಭಕ್ತರಿಗೆ, ಕೈಲಾಸವೆಂಬ ಆ ಸ್ವರ್ಗಲೋಕದಲ್ಲಿ ಪ್ರವೇಶವಿರುವುದು. ಇತರರಿಗೆ ಇರುವುದಿಲ್ಲ. ॥೧೦೦॥

ಲೋಕದಲ್ಲಿ, ಸಕಲ ಪ್ರಾಣಿವರ್ಗಕ್ಕೂ ದುರ್ಲಭವಾದ ಆ ಕೈಲಾಸವನ್ನು ಶಿವಲಿಂಗಾರ್ಚನೆಯಿಂದಲೇ ಪಡೆಯಬೇಕಾಗಿರುವುದಲ್ಲದೆ, ಅದನ್ನು ತೊರೆದು ಇತರ ಯಾವ ಮಾರ್ಗವೂ ಕೈಲಾಸಪ್ರಾಪ್ತಿಗೆ ಸಾಧಕವಾಗಲಾರದು. ॥೧೦೧॥

ಈ ಲೋಕದಲ್ಲಿ, ಶಿವಲಿಂಗಾರ್ಚನೆಯಲ್ಲಿ ಅಧಿಕಾರವು ದೊರಕುವುದೂ ಕಷ್ಟವೇ. ಶಿವ ಪೂಜೆಗೆ ಅಧಿಕಾರಿಯೆನಿಸಿದವನಿಗೆ ಇತರ ಯಾವ ಫಲವುತಾನೇ ದೊರಕಲಾರದು! ॥೧೦೨॥

ತಥಾಪಿ ತಾದೃಶಂ ನಾಟ್ಯಂ ದೃಷ್ಟ್ವಾ ಗೌರೀಮನೋಹರಂ ।
ತದಾ ನ ವಿರತಾ ಜಾತಾ ತತ್ರ ನಾಟ್ಯಾವಲೋಕನಾತ್ ॥೧೦೩॥

ಅಭಿನವಶಿವದಾಸೀನಾಟ್ಯಮಾನಂದರಾಶಿಃ ।
ಗಿರಿವರತನಯಾ ಸಾ ಸಾದರಂ ವೀಕ್ಷ್ಯ ತಸ್ಮಾತ್ ।
ಅನುಗತಮನುವೃತ್ತಾ ವರ್ತಮಾನಾ ವಿಮಾನೇ
ಪುನರಪಿ ಶಿವದಾಸೀನಾಟ್ಯಲೋಲಾ ಬಭೂವ ॥೧೦೪॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಶಿವದಾಸೀ ನಾಟ್ಯಾವಲೋಕನಂ ನಾಮ ಅಷ್ಟಮೋಽಧ್ಯಾಯಃ

ಹೀಗೆ ದೀರ್ಘಕಾಲವು ಅತಿಕ್ರಮಿಸಿದರೂ, ಗಿರಿಜೆಯು ರಮಣೀಯವಾದ ಆ ನಾಟ್ಯವನ್ನು ನೋಡಿ ತೃಪ್ತಿಯನ್ನೇ ಪಡೆಯದೆ, ಮತ್ತೆಮತ್ತೆ ಅದನ್ನೇ ಅವಲೋಕಿಸುತ್ತಾ ನಿಂತಳು. ॥೧೦೩॥

ಗಿರಿಜೆಯು, ಶಿವನ ಸೇವಕಿಯರು ಅಭಿನಯಿಸಿದ ಅದ್ಭುತವಾದ ಆ ನರ್ತನವನ್ನು ಅತ್ಯುತ್ಸಾಹದಿಂದ ನೋಡಿ, ಆನಂದಭರಿತಳಾದಳು. ದಾಸಿಯರ ಆ ನಾಟ್ಯವು ಅವಿಚ್ಛಿನ್ನವಾಗಿ ಸಾಗಿಬರುತ್ತಿತ್ತು. ಹಾಗೆಯೇ ಪಾರ್ವತಿಯೂ ಸಹ ವಿಮಾನದಲ್ಲಿ ಕುಳಿತುಕೊಂಡೇ, ಬಾರಿಬಾರಿಗೂ ಅವರ ರಮಣೀಯವಾದ ಆ ನಾಟ್ಯವನ್ನು ಎವೆಯಿಕ್ಕದೆ ನೋಡುವುದರಲ್ಲಿ ಮಗ್ನಳಾದಳು. ॥೧೦೪॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಮೊದಲನೆಯಭಾಗದಲ್ಲಿ
" ದೇವಿಯು ಶಿವದಾಸಿಯರ ನರ್ತನವನ್ನು ಅವಲೋಕಿಸಿದುದು "
ಎಂಬ ಎಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ನವಮೋಽಧ್ಯಾಯಃ

|| ವ್ಯಾಸ ಉವಾಚ ||

ನಾಟ್ಯಾವಲೋಕನಾನಂದಪಾರಾವಾರವರೈಃ ಪರಂ ।
ಗೌರೀ ಸಮಾವೃತಾ ರೇಜೇ ತನ್ನಾರೀಗಾನಲಾಲಸಾ ||೧||

ವಿಚಿತ್ರಪ್ರತಿಮಾನಾಟ್ಯಮಪೂರ್ವಂ ದ್ರಷ್ಟುಮುದ್ಯತಾ ।
ಅಪೂರ್ವಗಾನಲೋಲಾ ಚ ವಿವಶಾ ಜಗದಂಬಿಕಾ ||೨||

ತತಃ ಪರಂ ಮಹಾದೇವಸ್ತದ್ವಿಲಂಬಂ ವಿಲೋಕ್ಯ ಸಃ ।
ಪುನರ್ಗಣಾನಪೂರ್ವಾಂಶ್ಚ ಪ್ರೇಷಯಾಮಾಸ ಸತ್ವರಂ ||೩||

ಒಂಬತ್ತನೆಯ ಅಧ್ಯಾಯ

ಬಳಿಕ ವ್ಯಾಸರು ಮುನಿಗಳನ್ನು ಕುರಿತು ಇಂತೆಂದರು. "ಎಲೈ ಮುನಿಪುಂಗವರೇ, ಹಾಗೆ ನೆಟ್ಟದೃಷ್ಟಿಯಿಂದ ಆ ನಾಟ್ಯವನ್ನೇ ನೋಡುತ್ತಿದ್ದ ಗಿರಿಜೆಯು ಅತಿಶಯವಾದ ಆನಂದವನ್ನು ಅನುಭವಿಸುತ್ತಾ ಅವರ ಗಾನವನ್ನು ಕೇಳುವುದರಲ್ಲಿ ಆಸಕ್ತಳಾದಳು. ||೧||

ಲೋಕಮಾತೆಯಾದ ದೇವಿಯು, ಚಿತ್ರದಲ್ಲಿ ಕೆತ್ತಲ್ಪಟ್ಟ ಪುತ್ಥಳಿಗಳಂತೆ ಸುಂದರಿಯರಾದ ಆ ನರ್ತಕಿಯರ ಅದ್ಭುತವಾದ ನರ್ತನವನ್ನು ನೋಡುತ್ತಾ, ಗಾನವನ್ನು ಕೇಳುತ್ತಾ ಮೈಮೇಲಿನ ಪರಿವೆಯೇ ಇಲ್ಲದವಳಾದಳು. ||೨||

ಇತ್ತ ಪ್ರಿಯತಮೆಯಾದ ಗಿರಿಜೆಯು ತನ್ನ ಬಳಿಗೆ ಬರುವುದರಲ್ಲಿ ವಿಲಂಬ

ತೇಽಪಿ ಸರ್ವೇ ಮಹೋತ್ಸಾಹಾಃ ನಂದೀಶಪ್ರಮುಖೈರ್ಗಣೈಃ ।
ಪ್ರಮುಖಾಃ ಶಂಕರಾಜ್ಞಾಯಾಃ ಸ್ವರೂಪಂ ಪ್ರಾಹುರಾದರಾತ್ ॥೪॥

॥ ಶ್ರೀ ಶಂಕರ ಉವಾಚ ॥

ಕಿಂ ಕೃತ್ಯಂ ನಂದಿಕೇಶೇನ ಕಿಂ ವಾ ಕೃತ್ಯಂ ಗಣೈರಪಿ ।
ಕಿಮನ್ಯೈರಪಿ ಮೇ ಕೃತ್ಯಂ ಸ್ವಕಾರ್ಯಕರಣೋದ್ಯತೈಃ ॥೫॥

ಕ್ಷಣಃ ಕಲ್ಪಾಯತೇ ಸೋಽಯಂ ಗೌರೀದರ್ಶನವರ್ಜಿತಃ ।
ಉತ್ಸಾಹವೃದ್ಧಿಹೇತುಶ್ಚ ದೃಶ್ಯತೇ ನ ತಯಾ ವಿನಾ ॥೬॥

ಲೋಕೇ ಸಂತಿ ಪದಾರ್ಥಾಶ್ಚ ಬಹವಸ್ತೋಷಹೇತವಃ ।
ಕಿಂ ತೈರನಂತೈರಪಿ ಮೇ ಪದಾರ್ಥೈರಪಿ ಸಾಧಕೈಃ ॥೭॥

ವಾಗಲು, ಅದನ್ನು ನೋಡಿ ಶಿವನು ಪುನಃ ಶೀಘ್ರವಾಗಿ ಅನೇಕ ಗಣಗಳನ್ನು ಸೃಷ್ಟಿಸಿ ಅವುಗಳನ್ನು ದೇವಿಯಿದ್ದಲ್ಲಿಗೆ ಕಳುಹಿಸಿದನು. ॥೩॥

ಅವರೆಲ್ಲರೂ ಅತ್ಯಂತ ಉತ್ಸಾಹಭರಿತರಾಗಿ ಬಂದು, ನಂದಿಕೇಶನೇ ಮೊದಲಾದ ಗಣಗಳಿಗೆ ಶಿವನ ಅಪ್ಪಣೆಯನ್ನು ಮುಂದೆ ಹೇಳುವಂತೆ ತಿಳಿಸಿದರು. ॥೪॥

ಎಲೈ ನಂದಿಕೇಶನೇ, ಶಂಕರನು ಹೀಗೆಂದು ಹೇಳಿದನು.—" ನನ್ನ ಕಾರ್ಯವನ್ನು ಸಾಧಿಸುವುದಕ್ಕೋಸ್ಕರ ಇಲ್ಲಿಂದ ತೆರಳಿದ ನಂದಿಕೇಶನು ಇನ್ನೂ ಕಾರ್ಯವನ್ನು ಏಕೆ ಸಾಧಿಸಲಿಲ್ಲ? ಅವನು ಅಲ್ಲಿ ಮಾಡುತ್ತಿರುವುದು ಏನು? ಗಣಗಳ ಕಾರ್ಯವಾವುದು? ನನ್ನ ಕಾರ್ಯವನ್ನು ನೆರವೇರಿಸಲು ಹೊರಟ ಸೇವಕರೆಲ್ಲರು ಇದುವರೆಗೆ ಏನನ್ನು ತಾನೇ ಮಾಡಿದರು? ॥೫॥

ಗಿರಿಜೆಯನ್ನು ನೋಡದಿದ್ದರೆ ನನಗೆ ಒಂದೊಂದು ಕ್ಷಣವೂ ಕಲ್ಪದೋಪಾದಿಯಲ್ಲಿ ತೋರಿಬರುವುದು. ಅವಳ ದರ್ಶನವಿಲ್ಲದುದರಿಂದ ನಿರುತ್ಸಾಹಿಯಾಗಿರುವೆನು. ಅವಳಿಲ್ಲದಿದ್ದರೆ ನನ್ನ ಉತ್ಸಾಹವು ಎಂದೂ ವೃದ್ಧಿಯನ್ನು ಹೊಂದಲಾರದು. ॥೬॥

ಲೋಕದಲ್ಲಿ ಸಂತೋಷಕ್ಕೆ ಕಾರಣವಾದ ಅನೇಕ ಪದಾರ್ಥಗಳಿರುವುವು. ಆದರೆ ಅವು ಹೇರಳವಾಗಿದ್ದರೂ ಅವುಗಳಿಂದ ನನಗೆ ಅಷ್ಟು ಆನಂದವು ಲಭಿಸಲಾರದು. ॥೭॥

ರಮಣೀಯತರಂ ವಸ್ತು ಗೌರೀರೂಪಂ ಮನೋಹರಂ ।
ತದನ್ಯತ್ತಾದೃಶಂ ಲೋಕೇ ನ ಜಾತಂ ನ ಭವಿಷ್ಯತಿ ॥೮॥

ನಾರೀಸೃಷ್ಟಿರಪೂರ್ವಾಽಪಿ ವಿಲಾಸಾಯ ಕದಾಚನ ।
ಕ್ರಿಯತೇ ತಾದೃಶೀ ಸೃಷ್ಟಿಸ್ತತ್ಕಲ್ಪಾಪಿ ನ ಜಾಯತೇ ॥೯॥

ಕಸ್ಮಿನ್ಮುಹೂರ್ತೇ ಸಾ ಸೃಷ್ಟಾ ಸ ಮುಹೂರ್ತೋಽಪಿ ದುರ್ಲಭಃ ।
ಮುಹೂರ್ತೇ ಮಹಿಮಾ ಕೋ ವಾ ಸಾ ಸೃಷ್ಟಿಸ್ತಾವದದ್ಭುತಾ ॥೧೦॥

ಸೃಷ್ಟ್ವೋ ಮುಹೂರ್ತೋಽಪಿ ಮಯಾ ಸುಮುಹೂರ್ತೋ ವಿಲಕ್ಷಣಃ।
ತನ್ಮುಹೂರ್ತಸಮಾನಸ್ತು ಮುಹೂರ್ತೋಽಪಿ ನ ದೃಶ್ಯತೇ ॥೧೧॥

ನ ತತ್ಕಲ್ಪೇಽಪಿ ಕಲ್ಪಾಂತೇ ಕಲ್ಪಮಧ್ಯೇಽಪಿ ದುರ್ಲಭಃ ।
ಕಲ್ಪಾದಿರಯಮೇತಸ್ಮಿನ್ ಸಮಯೇ ದೃಶ್ಯತೇಽಪಿ ನ ॥೧೨॥

ಗಿರಿಜೆ ಎಂಬ ವಸ್ತುವು ನನಗೆ ಅತಿ ಸುಂದರವೂ ಮತ್ತು ಸಂತೋಷಕರವೂ ಆಗಿರುವುದು. ಅದಕ್ಕೆ ಸದೃಶವಾದ ಇನ್ನೊಂದು ವಸ್ತುವು ಇದುವರೆಗೂ ಹುಟ್ಟಲಿಲ್ಲ. ಇನ್ನು ಮುಂದೆಯೂ ಹುಟ್ಟಲಾರದು. ॥೮॥

ಉಪಭೋಗಾರ್ಥವಾಗಿ ಅಪೂರ್ವ ಸುಂದರ ಸ್ತ್ರೀಯರನ್ನು ಒಂದಾನೊಂದು ವೇಳೆ ಸೃಷ್ಟಿಸಿದರೂ, ಆ ಸೃಷ್ಟಿಯು ಗೌರಿಯ ಸೃಷ್ಟಿಗೆ ಸದೃಶವೆನಿಸಲಾರದು. ॥೯॥

ಯಾವ ಮುಹೂರ್ತದಲ್ಲಿ ಗಿರಿಜೆಯನ್ನು ವಿಧಿಯು ಸೃಷ್ಟಿಸಿದನೋ ಆ ಮುಹೂರ್ತವೇ ಈಗ ಸೃಷ್ಟಿಗೆ ಲಭಿಸುವಂತಿಲ್ಲ. ಆಹಾ ! ಆ ಮುಹೂರ್ತದ ಪ್ರಭಾವ ವೇನಿರಬಹುದು. ॥೧೦॥

ದಿವ್ಯಜ್ಞಾನದಿಂದ ಹಿಂದೆ ನಾನು ಪಾರ್ವತಿಯನ್ನು ಸೃಷ್ಟಿಸುವಾಗ ಒಳ್ಳೆಯ ಮುಹೂರ್ತವೊಂದು ದೊರಕಿತು. ಅಂಥ ಮುಹೂರ್ತವೇ ಈಗ ಮತ್ತೆ ದೊರೆಯ ಲಾರದು. ॥೧೧॥

ಆ ಸುಮುಹೂರ್ತವು ಕಲ್ಪದ ಆದಿಯಲ್ಲಾಗಲಿ, ಮಧ್ಯದಲ್ಲಾಗಲಿ ಅಥವಾ ಅಂತ್ಯದಲ್ಲಾಗಲಿ ದುರ್ಲಭವೆನಿಸುವುದು. ಕಲ್ಪಾದಿಯೆನಿಸಿದ ಈಗಲೂ ಆ ಮುಹೂರ್ತವು ನನಗೆ ದೊರತಿಲ್ಲ." ॥೧೨॥

ಇತ್ಯುಕ್ತಂ ತದ್ವಚಃ ಶ್ರುತ್ವಾ ನಂದಿಕೇಶಾದಯೋ ಗಣಾಃ ।
ಪರಸ್ಪರಂ ಮುಖೇ ದೃಷ್ಟ್ವಾ ವಿಚಾರಂ ಚಕ್ರುರಾದರಾತ್ ॥೧೩॥

ಸತ್ಯಮುಕ್ತಂ ಮಹೇಶೇನ ತತ್ಕಾರ್ಯಂ ತದಪೇಕ್ಷಿತಂ ।
ವಿಲಕ್ಷಣಮಿದಂ ಕಾರ್ಯಂ ಕರ್ತುಮೇವ ನ ಶಕ್ಯತೇ ॥೧೪॥

ಪುರಾ ದೇವಗಣಾಸ್ಸರ್ವೇ ತೃಣೇನೈಕೇನ ತಂತುನಾ ।
ಬಿಸವಲ್ಲ್ಯಾಂ ನಿಬದ್ಧಾಶ್ಚ ಸಾಮರ್ಥ್ಯಂ ತಾದೃಶಂ ಮಮ ॥೧೫॥

ಚುಲಕಾಂತಃ ಸ್ಥಿತಾಸ್ಸರ್ವೇ ಸಾಗರಾಸ್ಸರಿತಸ್ತಥಾ ।
ಸರಾಂಸಿ ಚ ತಥಾನ್ಯಚ್ಚ ಜಲಂ ಮುಕ್ತಾಫಲಾಕೃತಿ ॥೧೬॥

ಮದ್ವೇತ್ರಾಗ್ರನಿಪಾತೇನ ಕಂಪಯಂತೇ ಸುರಾ ಅಪಿ ।
ಬ್ರಹ್ಮಾಂಡಮಂಡಲಂ ಸರ್ವಮಣುಕಲ್ಪಂ ಕೃತಂ ಮಯಾ ॥೧೭॥

ಹೀಗೆಂದು ಹೇಳಿದ ಶಂಕರನ ಮಾತನ್ನು ಕೇಳಿ ನಂದಿಕೇಶನೇ ಮೊದಲಾದ ಗಣಗಳು ಒಬ್ಬರ ಮುಖವನ್ನೊಬ್ಬರು ನೋಡುತ್ತಾ ತಮ್ಮ ತಮ್ಮೊಳಗೆ ಹೀಗೆಂದು ಮಾತನಾಡಿಕೊಂಡರು. ॥೧೩॥

"ಶಿವನ ನುಡಿಯು ಸತ್ಯವಾಗಿರುವುದು. ಅವನಿಗೆ ಇಷ್ಟವಾದ ಈ ಕಾರ್ಯವು ನಮಗೆ ಅತಿ ಕಷ್ಟವಾಗಿರುವುದರಿಂದ ಅದನ್ನು ಸಾಧಿಸುವುದೇ ಅಸಾಧ್ಯವೆನಿಸಿದೆ. ॥೧೪॥

ಹಿಂದೆ ಒಂದಾನೊಂದು ಕಾಲದಲ್ಲಿ ನಾನು ದೇವತೆಗಳೆಲ್ಲರನ್ನೂ ಹುಲ್ಲಿನಂತೆ ಹಗುರವಾದ ಪದ್ಮದ ದಂಟಿನ ದಾರದಿಂದ ಬಂಧಿಸಿದ್ದೆನು. ನನ್ನ ಶಕ್ತಿಯು ಅಷ್ಟು ಅದ್ಭುತವಾದದ್ದು. ॥೧೫॥

ಸಮುದ್ರಗಳನ್ನೂ, ನದಿಗಳನ್ನೂ, ಮತ್ತು ಸರೋವರಗಳನ್ನೂ ಅಂಗೈಮಧ್ಯದಲ್ಲಿ ಧರಿಸಿದ್ದೆನು. ಅವೆಲ್ಲವೂ ಮುತ್ತಿನ ಆಕಾರದಂತೆ ನನ್ನ ಅಂಗೈಯಲ್ಲಿಯೇ ಹೊಳೆಯುತ್ತಿದ್ದುವು. ॥೧೬॥

ನಾನು ಧರಿಸಿರುವ ಈ ಸುವರ್ಣದಂಡವು ಎಲ್ಲಿ ಕೆಳಗೆ ಬಿದ್ದು ಸರ್ವನಾಶವಾಗುವುದೋ ಎಂಬ ಹೆದರಿಕೆಯಿಂದ ಈಗಲೂ ದೇವತೆಗಳು ಗಡಗಡನೆ ನಡುಗುತ್ತಿರುವರು. ಬ್ರಹ್ಮಾಂಡವೆಲ್ಲವೂ ನನಗೆ ಒಂದು ಪರಮಾಣುವಿನಂತಿರುವುದು. ॥೧೭॥

ಮದ್ಭೃತ್ಯಭೃತ್ಯಭೃತ್ಯೋಽಪಿ ಬ್ರಹ್ಮವಿಷ್ಣ್ವಾದಿಪೂಜಿತಃ ।
ತಂ ದೃಷ್ಟ್ವಾಪಿ ಸಕಂಪಾಸ್ತೇ ಕಿಮಿಹಾಗತ ಇತ್ಯಪಿ ॥೧೮॥

ತದಾಗಮನವೇಲಾಯಾಂ ಕೃತಾಂಜಲಿಪುಟಾಸ್ತದಾ ।
ದಂಡವತ್ಪ್ರಣತಾ ಏವ ಭವಂತಿ ಸನರಾಃ ಸುರಾಃ ॥೧೯॥

ಸಾಮರ್ಥ್ಯಮೀದೃಶಂ ಸರ್ವಂ ಮಹೇಶಸ್ಯೈವ ಯದ್ಯಪಿ ।
ತಥಾಪಿ ತತ್ಕೃಪಾಲೇಶಾದಭಿಮಾನೋ ಮಮೇದೃಶಃ ॥೨೦॥

ಶಿವಕಿಂಕರಭಾವೇನ ಮಮ ಸಾಮರ್ಥ್ಯಮೀದೃಶಂ ।
ತಥಾಪಿ ಕಿಂ ಕರೋಮ್ಯತ್ರ ಸಾಮರ್ಥ್ಯಂ ಕುಂಠಿತಂ ಮಮ ॥೨೧॥

ಕುಂಠಿತೇ ಸತಿ ಸಾಮರ್ಥ್ಯೇ ಕಾರ್ಯೋತ್ಕಂಠಾ ನ ಜಾಯತೇ ।
ಅತಸ್ತತ್ಕಾರ್ಯಕರಣಂ ದುರ್ಲಭಂ ಚಾಧುನಾ ಮಮ ॥೨೨॥

ನನ್ನ ದಾಸಾನುದಾಸರೂ ಬ್ರಹ್ಮ, ವಿಷ್ಣು ಮುಂತಾದ ದೇವತೆಗಳಿಂದ ಪೂಜಿಸಲ್ಪಡುವರು. ಅಕಸ್ಮಾತ್ತಾಗಿ ಬಂದ ನನ್ನ ಭಕ್ತನನ್ನು ನೋಡಿ ದೇವತೆಗಳು "ಇವನಿಲ್ಲೇಕೆಬಂದಿರುವನು" ಎಂದು ಭಯದಿಂದ ಗಡಗಡನೆ ನಡುಗುತ್ತಾರೆ.॥೧೮॥

ನನ್ನ ಸೇವಕರು ಎಲ್ಲಿಗೆ ಹೋದರೂ, ಮನುಷ್ಯರಿಂದ ಮೊದಲುಗೊಂಡು ಸಕಲ ದೇವತೆಗಳವರೆಗೂ ಸರ್ವರೂ ಅಂಜಲಿಬದ್ಧರಾಗಿ ದಂಡಾಕಾರವಾಗಿ ಅವರನ್ನು ನಮಸ್ಕರಿಸುವರು. ॥೧೯॥

ಇದೆಲ್ಲವೂ ಶಿವನ ಸಾಮರ್ಥ್ಯವೆಂದೇ ಹೇಳಬೇಕು. ಆದರೂ ನನ್ನಲ್ಲಿ ಶಿವನ ಅನುಗ್ರಹವು ಸ್ವಲ್ಪಮಟ್ಟಿಗೆ ಇರುವುದರಿಂದಲೇ ಈ ರೀತಿಯಾದ ಮಹಿಮೆಯು ನನ್ನಲ್ಲಿ ನೆಲಸಿರುವುದು. ॥೨೦॥

ಶಿವನಿಗೆ ಸೇವಕನಾಗಿರುವುದರಿಂದಲೇ ನನ್ನಲ್ಲಿ ಈ ರೀತಿಯಾದ ಸಾಮರ್ಥ್ಯವು ನೆಲೆಗೊಂಡಿರುವುದು. ಆದರೂ ಈ ಸಮಯದಲ್ಲಿ ನಾನು ಯಾವ ಕಾರ್ಯವನ್ನು ತಾನೇ ಮಾಡಬಲ್ಲೆನು! ಈಗ ನನ್ನ ಆ ಸಾಮರ್ಥ್ಯವೇ ಕುಂದಿ ಹೋಗಿರುವುದಲ್ಲಾ! ॥೨೧॥

ಶಕ್ತಿಯು ಕುಂದಿಹೋದರೆ ಕಾರ್ಯಸಾಧನೆಯಲ್ಲಿ ಉತ್ಸಾಹವಿರುವುದಿಲ್ಲ. ಆದುದರಿಂದಲೇ ನನಗೆ ಆ ಕಾರ್ಯವನ್ನು ಸಾಧಿಸುವ ಸಾಮರ್ಥ್ಯವು ಮಾಯವಾಗಿದೆ. ॥೨೨॥

ಕ್ವಾಂಬಾಪ್ರಭುತ್ವಂ ಕ್ವಾಸ್ಮಾಕಂ ತತ್ಕಾರ್ಯಕರಣೋದ್ಯಮಃ ।
ಮಹಾಪ್ರಭುರ್ಮಹಾದೇವಃ ಕಿಂ ನ ಜಾನಾತಿ ತದ್ದ್ವಯಂ ॥೨೩॥

ಜ್ಞಾತ್ವಾಪಿ ಸ ಮಹಾದೇವೋ ಮಹಾಪ್ರಭುರಿತಿ ಸ್ವಯಂ ।
ಅಸ್ಮಾನಾಜ್ಞಾಪಯತ್ಯೇವ ಮಹದ್ಭಾಗ್ಯಮಿದಂ ಖಲು ॥೨೪॥

ಅಹಮಾದೌ ಪ್ರೇಷಿತೋಽಸ್ಮಿ ತತಃ ಪ್ರಚಲಿತಾ ಶಿವಾ ।
ಸೋತ್ಕಂಠಯಾ ಪರಂ ತತ್ರ ನ ಕೃತ್ಯಂ ಮಮ ಸರ್ವಥಾ ॥೨೫॥

ಅತಿಸ್ವಾತಂತ್ರ್ಯಮೀಶೇನ ಗೌರ್ಯಾಸ್ತಾವದ್ವಿನಿಶ್ಚಿತಂ ।
ಸಾನ್ಯಾಜ್ಞಾವಶಗಾ ಗೌರೀ ಸ ಶಿವಾನುಗ್ರಹಸ್ತಥಾ ॥೨೬॥

ಲೋಕಮಾತೆಯಾದ ಪಾರ್ವತಿಯ ಅಧಿಕಾರದಲ್ಲಿ ನಮ್ಮ ಕಾರ್ಯಸಾಧನೆ ಹೇಗಾದೀತು ? ಜಗನ್ನಾಥನಾದ ಶಿವನು ನಮ್ಮ ಮತ್ತು ದೇವಿಯ ನಿಜವಾದ ಶಕ್ತಿಯನ್ನು ಅರಿಯದವನೆ ? ಇವೆರಡನ್ನು ಜಗದೊಡೆಯನಾದ ಆ ಶಿವನು ತಿಳಿಯ ಲಾರನೇ ! ॥೨೩॥

ಶಿವನು ತಾನು ಅದನ್ನು ಅರಿತಿದ್ದರೂ, ನಮ್ಮನ್ನು ಅಂತಹ ಕಾರ್ಯಗಳನ್ನು ಸಾಧಿಸಲು ಆಜ್ಞಾಪಿಸುವನು. ಇದು ನಮ್ಮ ಸುಕೃತವಿಶೇಷವಲ್ಲವೇ ! ಇದರಿಂದ ಶಿವನಲ್ಲಿ ಮಹಾಪ್ರಭುತ್ವವು ಸ್ಥಿರಪಡುವುದಲ್ಲವೆ ! ॥೨೪॥

ಗಿರಿಜೆಯು ಮೊಟ್ಟಮೊದಲು ನನ್ನನ್ನು ಮುಂದಕ್ಕೆ ಕಳುಹಿಸಿ, ಬಳಿಕ ತಾನು ಅಲ್ಲಿಂದ ಉತ್ಸಾಹಭರಿತಳಾಗಿ ಶಿವನ ಬಳಿಗೆ ಹೊರಟಿರುವಳು. ಹೀಗಿರುವಲ್ಲಿ ಇನ್ನು ದೇವಿಯನ್ನು ತ್ವರೆಗೊಳಿಸುವುದರಲ್ಲಿ ನನ್ನ ಸಾಮರ್ಥ್ಯವೆಲ್ಲಿದ್ದೀತು ? ॥೨೫॥

ಸ್ವಾಮಿಯಾದ ಶಿವನು ಗಿರಿಜೆಗೆ ಅತ್ಯಂತ ಸ್ವಾತಂತ್ರ್ಯವನ್ನು ದಯಪಾಲಿಸಿರುವನು. ಅದರಿಂದಲೇ ದೇವಿಯು ಯಾರ ಆಜ್ಞೆಗೂ ಒಳಪಡಲಾರಳು. ಶಂಕರನ ಅನುಗ್ರಹವೇ ಹಾಗಿರುವಾಗ ಮಾಡತಕ್ಕುದೇನು ? ॥೨೬॥

ಶಿವಾನುಗ್ರಹಮಪ್ರಾಪ್ಯ ತಾವನ್ನಾರಾಯಣಾದಯಃ ।
ತಪಸ್ಯಾಕರಣೋದ್ಯುಕ್ತಾಸ್ಸರ್ವೇಽಪಿ ಗಿರಿಕಂದರೇ ॥೨೮॥

ಮಧ್ಯೇ ಸಮಾಗತಾಃ ಕೇಚಿದ್ಭವದ್ಭಿರಧುನಾ ಗಣಾಃ ।
ಸಮಾಗತಂ ಕಿಮೇತೇನ ಭವದಾಗಮನೇನ ತು ॥೨೯॥

ನಾಟ್ಯಾವಲೋಕನೋದ್ಯುಕ್ತಾ ಗಿರಿರಾಜಕುಮಾರಿಕಾ ।
ಭವದಾಗಮನಂ ತಾವತ್ತಯಾ ನ ಜ್ಞಾಯತೇ ಖಲು ॥೩೦॥

ಕ್ವ ತನ್ನಾಟ್ಯಸಮಾರಂಭಃ ಕ್ವ ಗಣಾಗಮನಾದರಃ ।
ಭವದಾಗಮನೇನಾಪಿ ನ ಕಾರ್ಯಂ ಭಾವಿ ದೃಶ್ಯತೇ ॥೩೧॥

ಭವತಾಂ ಗಣನಾ ಕುತ್ರ ಮಮ ಚಾನ್ಯಸ್ಯ ಚಾಧುನಾ ।
ಕೋಟಿಶೋ ವಾ ಸಮಾಯಾಂತು ಗಣಾಃ ಕಿಂ ತೈಃ ಪ್ರಯೋಜನಂ ॥೩೨॥

ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳು ಶಿವನ ಅನುಗ್ರಹವನ್ನು ಪಡೆಯಲಾರದೇ, ಅದಕ್ಕೋಸ್ಕರ ಹಿಮವತ್ಪರ್ವತದ ಗುಹೆಯಲ್ಲಿ ಇನ್ನೂ ತಪಸ್ಸನ್ನಾಚರಿಸುತ್ತಿರುವರು. ॥೨೮॥

ಎಲೈ ಗಣಗಳೇ, ಈ ಮಧ್ಯದಲ್ಲಿ ನಿಮ್ಮಲ್ಲಿ ಕೆಲವರು ಅಲ್ಲಿಂದ ಇಲ್ಲಿಗೆ ಬಂದಿರುವಿರಿ. ಅಲ್ಲಿನ ವಿಚಾರವೇನು? ನಿಮ್ಮ ಆಗಮನದಿಂದ ನಮಗೇನಾದರೂ ಫಲವುಂಟೆ? ॥೨೯॥

ಗಿರಿಜೆಯು ಅದ್ಭುತವಾದ ನರ್ತನವನ್ನು ನೋಡುವುದರಲ್ಲಿ ಆಸಕ್ತಳಾಗಿರುವಳು. ನಿಜವಾಗಿಯೂ ದೇವಿಯು ನೀವು ಇಲ್ಲಿಗೆ ಬಂದಿರುವಿರೆಂಬುದನ್ನು ತಿಳಿದಿರಲಾರಳು. ॥೩೦॥

ಆ ನರ್ತನೋತ್ಸವವೆಲ್ಲಿ! ಗಣಗಳನ್ನು ಸ್ವಾಗತಿಸುವುದೆಲ್ಲಿ! ಆದುದರಿಂದ ನಿಮ್ಮ ಸಮಾಗಮದಿಂದ ಇಲ್ಲಿ ಮುಂದುವರಿಸತಕ್ಕ ಯಾವ ಕಾರ್ಯವೂ ನಮಗಿರುವುದಿಲ್ಲ. ॥೩೧॥

ನಿಮ್ಮ ಸಂಖ್ಯೆಯಾದರೋ, ನನಗೆ ಎಣಿಸಲಾಗದಷ್ಟಿದೆ. ಕೋಟಿಸಂಖ್ಯೆಯ ಗಣಗಳಿದ್ದರೂ ನಿಮ್ಮಿಂದ ನನಗೆ ಈಗ ಒದಗುವ ಪ್ರಯೋಜನವೇನು? ॥೩೨॥

ನ ಗಣಾನಾಂ ಪ್ರವೇಶೋಽಸ್ತಿ ತನ್ನಾರೀನಾಟ್ಯಮಂಡಪೇ ।
ತದ್ದ್ವಾರದೇಶೇಽಪಿ ಗತಿರಸ್ಮಾಕಮತಿದುರ್ಲಭಾ ॥೩೩॥

ಪುನಃ ಪುನಃ ಸಮಾಯಾಂತಿ ತತ್ರ ನಾಟ್ಯಾಂಗನಾಃ ಕಿಲ ।
ಗತಿರ್ಗಾನಾನುಮಾನೇನ ನೂತನೇನಾನುಮೀಯತೇ ॥೩೪॥

ಗಣಾಃ ಶೃಣ್ವಂತು ತದ್ಗಾನಂ ನಾನುಭೂತಂ ಪುರಾ ಮಯಾ ।
ನಾನ್ಯೈರ್ವಿಘ್ನೇಶ್ವರಾದ್ಯೈರ್ವಾ ಮಹೇಶೇನಾಪಿ ವಾ ತತಃ ॥೩೫॥

ಸೃಷ್ಟಾಸ್ತಾಶ್ಶಂಕರೇಣೈವ ಗಾನನಾಟ್ಯವಿಶಾರದಾಃ ।
ತಿರಸ್ಕಾರಂ ಶಾರದಾಯಾಃ ಪರಂ ತಾಃ ಕರ್ತುಮುದ್ಯತಾಃ ॥೩೬॥

ಆ ಸ್ತ್ರೀಯರ ನರ್ತನಾಂಗಣದಲ್ಲಿ ನಮ್ಮ ಗಣಗಳಿಗೆ ಪ್ರವೇಶವೇ ಇಲ್ಲ. ಹೆಚ್ಚೇಕೆ! ನಾಟ್ಯರಂಗದ ಬಾಗಿಲ ವರೆಗೆ ಹೋಗುವುದೂ ನಮಗೆ ಅಸಾಧ್ಯವೆನಿಸಿದೆ. ॥೩೩॥

ಆ ನರ್ತನಾಂಗಣದಲ್ಲಿ ನರ್ತಕಿಯರು ಮತ್ತೆ ಮತ್ತೆ ನಾಟ್ಯವನ್ನು ಅಭಿನಯಿಸಲು ಬರುತ್ತಿರುವರು. ನೂತನಕಂಠದ ಆ ಗಾನದಿಂದ ಅವರ ಬರುವಿಕೆಯನ್ನು ನಾವು ಊಹಿಸುತ್ತಿರುವೆವು. ॥೩೪॥

ಎಲೈ ಗಣಗಳೇ, ಸ್ತ್ರೀಯರ ಆ ಗಾನವನ್ನು ಲಾಲಿಸಿರಿ. ಅದು ಎಷ್ಟು ಮಂಜುಳವಾಗಿರುವುದು! ಈ ಹಿಂದೆ ಎಂದೂ ಈ ರೀತಿಯಾದ ಮನೋಹರವಾದ ಗಾನವನ್ನು ನಾನು ಕೇಳಿಲ್ಲ. ನಾನಿರಲಿ, ವಿಘ್ನೇಶ್ವರನೇ ಮೊದಲಾದ ಇತರ ಗಣನಾಯಕರೂ, ಸಾಕ್ಷಾತ್ಪರಮೇಶ್ವರನೂ ಸಹ ಇದುವರೆಗೆ ಇಷ್ಟೊಂದು ಮಂಜುಳವಾದ ಗಾನವನ್ನು ಕೇಳಿಲ್ಲವೆಂದೇ ನನ್ನ ನಂಬಿಕೆ. ॥೩೫॥

ಗಾನದಲ್ಲಿಯೂ ಮತ್ತು ನರ್ತನದಲ್ಲಿಯೂ ನಿಪುಣರಾದ ಆ ಸ್ತ್ರೀಯರನ್ನು ಪರಶಿವನೇ ಸೃಷ್ಟಿಸಿರುವನು. ಅಂತಹವರು ತಮ್ಮ ಮನೋಹರವಾದ ಗಾನದಿಂದ ಈಗ ಸರಸ್ವತಿಯನ್ನೂ ಸಹ ತಿರಸ್ಕರಿಸುತ್ತಲಿರುವರು. ॥೩೬॥

ಕ್ವ ಶಾರದಾ ಕ್ವ ಕಮಲಾ ಕ್ವ ತದನ್ಯಾಮರಾಂಗನಾಃ ।
ತದ್ಗಂಧಗಂಧಗಂಧೋಽಪಿ ಕಿಮತ್ರ ಪ್ರಸರಿಷ್ಯತಿ ॥೩೭॥

ಗಾನನಾಟ್ಯವಿಲೋಲಾಯಾಃ ಪಾರ್ವತ್ಯಾಶ್ಚಲನೇ ಯದಿ ।
ವಿಲಂಬಸ್ತಾವತಾ ಕಾ ವಾ ಸ್ಯಾದಸ್ಮಾಕಂ ವಿಡಂಬನಾ ॥೩೮॥

ಅಯಂ ವಿಲಂಬೋ ದೇವಸ್ಯ ಮಹಾದೇವಸ್ಯ ಸರ್ವಥಾ ।
ಅಪೇಕ್ಷಿತೋ ಭವತ್ಯೇವೇತ್ಯನುಮೀಯತ ಏವ ಹಿ ॥೩೯॥

ಅನ್ಯಥಾ ನಾಟ್ಯನಾರೀಣಾಂ ಪ್ರೇಷಣಂ ನಃ ಪುನಃ ಪುನಃ ।
ಪುನಃ ಪುನಃ ಫಲಾನ್ನಾದಿಪದಾರ್ಥಪ್ರೇಷಣಂ ಕಥಂ ॥೪೦॥

ಗಂಧಸ್ಸಮಾಗತಃ ಕೋಽಪಿ ಗಂಧಃ ಪೂರ್ವವಿಲಕ್ಷಣಃ ।
ಪಕ್ವಾನ್ನಾನಾಮನಂತಾನಾಮಪೂರ್ವಾಣಾಂ ವಿಶೇಷತಃ ॥೪೧॥

ಸರಸ್ವತಿಯಾಗಲಿ, ಲಕ್ಷ್ಮಿಯಾಗಲಿ ಅಥವಾ ಇನ್ನಿತರ ದೇವತಾಸ್ತ್ರೀಯರೇ ಆಗಲಿ, ಇವರಾರೂ ನಾಟ್ಯದಲ್ಲಿ ಆ ಸ್ತ್ರೀಯರಿಗೆ ಸದೃಶರಲ್ಲ. ಆ ಸ್ತ್ರೀಯರ ಗಾನನಾಟ್ಯಕಲೆಗಳ ಲೇಶವಾದರೂ ಈ ದೇವತಾಸ್ತ್ರೀಯರಲ್ಲಿರುವುದೇ ! ॥೩೭॥

ನರ್ತನದಲ್ಲಿಯೂ ಮತ್ತು ಗಾನದಲ್ಲಿಯೂ ಆಸಕ್ತಳಾದ ಗಿರಿಜೆಯು ಅಲ್ಲಿಂದ ಹೊರಡಲು ವಿಲಂಬವಾದರೆ ಆದರಿಂದ ನಾವು ಆಕ್ಷೇಪಣೆಗೆ ಗುರಿಯಾಗುವೆವೇ ! ಎಂದಿಗೂ ಇಲ್ಲ. ॥೩೮॥

ಏಕೆಂದರೆ, ದೇವಿಯ ಆ ವಿಲಂಬವು ಸ್ವಾಮಿಯಾದ ಶಿವನಿಗೂ ಸಮ್ಮತವಾಗಿಯೇ ಇರುವುದೆಂದು ಈಗ ನಾವು ಊಹಿಸಬೇಕಾಗಿದೆ. ॥೩೯॥

ಅದಿಲ್ಲದಿದ್ದರೆ ಶಿವನು ದೇವಿಯ ಬಳಿಗೆ ಬಾರಿಬಾರಿಗೂ ನಮ್ಮನ್ನೂ, ಈ ನರ್ತಕಿಯರನ್ನೂ ಮತ್ತು ಪಕ್ವವಾದ ಫಲಾದಿಗಳನ್ನು ಕಳುಹಿಸುತ್ತಿದ್ದನೇ ? ॥೪೦॥

ಇಲ್ಲಿ ವಿಧವಿಧವಾದ ಮತ್ತು ಅತಿ ರುಚಿಕರವಾದ ಪಕ್ವಾನ್ನಗಳ ಪರಿಮಳವು ವ್ಯಾಪಿಸುತ್ತಿರುವುದು. ಇಂತಹ ಸುವಾಸನೆಯನ್ನು ನಾವು ಹಿಂದೆ ಎಂದೂ ಅನುಭವಿಸಿಲ್ಲ. ॥೪೧॥

ಪಕ್ವಾನ್ನಕರಣಾಯಾಸೋ ನ ಶಿವಸ್ಯ ಕದಾಪಿ ಚ ।
ತದಿಚ್ಛಯಾ ಪರಂ ಸೃಷ್ಟಿಸ್ತೇಷಾಂ ತು ಸ್ಯಾದನುಕ್ಷಣಂ ॥೪೨॥

ಪ್ರಸೂನಾನಿ ಪ್ರೇಷಿತಾನಿ ಮಹಾದೇವೇನ ಸಾದರಂ ।
ವಿಲಕ್ಷಣಾನಿ ತದ್ಗಂಧಃ ಕಥಮತ್ರಾನುಭೂಯತೇ ॥೪೩॥

ಬ್ರಹ್ಮಾಂಡಮಂಡಲಂ ವ್ಯಾಪ್ನೋತ್ಯಯಂ ಗಂಧೋ ವಿಲಕ್ಷಣಃ ।
ಪುಷ್ಪವೃಷ್ಟಿರ್ಗಂಧವೃಷ್ಟಿಶ್ಶಂಕರೇಣ ಕೃತಾ ಖಲು ॥೪೪॥

ನ ಕಲ್ಪತರುಪುಷ್ಪೇಷು ಸುಗಂಧೋಽಪೀದೃಶಃ ಖಲು ।
ಅಸ್ಯ ಗಂಧಸ್ಯ ಮಹಿಮಾ ಶಿವೇನ ಜ್ಞಾಯತೇ ಪರಂ ॥೪೫॥

ಮಹೇಶಸೃಷ್ಟಿಚಾತುರ್ಯಮಿದಮತ್ರಾನುಭೂಯತೇ ।
ಅತಸ್ತೇನ ವಿಲಂಬಾಯ ಸೃಷ್ಟಿರೇವಂ ಪ್ರಕಲ್ಪಿತಾ ॥೪೬॥

ಶಿವನಿಗಾದರೋ, ಪಕ್ವಾನ್ನಗಳನ್ನು ಸಿದ್ಧಪಡಿಸುವ ಪರಿಶ್ರಮವೇ ಇರುವುದಿಲ್ಲ. ಏಕೆಂದರೆ ಅವನು, ತನ್ನ ಇಚ್ಛೆಯಿಂದಲೇ ಕ್ಷಣಮಾತ್ರದಲ್ಲಿ ಅವುಗಳನ್ನು ಸೃಷ್ಟಿಸುವನು. ||೪೨||

ಮಹಾದೇವನು, ದೇವಿಯಿದ್ದೆಡೆಗೆ ಸುವಾಸನೆಯಿಂದ ಘಮಘಮಿಸುವ ಹೂವುಗಳನ್ನು, ಅಕ್ಕರೆಯಿಂದ ಕಳುಹಿಸಿರುವನು. ಆ ಹೂವುಗಳ ಪರಿಮಳವು ಎಷ್ಟು ಮನೋಹರವಾಗಿರುವುದೆಂಬುದನ್ನು ನೋಡಿರಿ! ||೪೩||

ಪುಷ್ಪಗಳ ಅಪೂರ್ವವಾದ ಈ ಸುಗಂಧವು, ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿರುವುದು. ನಿಜವಾಗಿಯೂ ಆ ಶಿವನು ಎಲ್ಲೆಡೆಯಲ್ಲಿಯೂ ಪುಷ್ಪವೃಷ್ಟಿಯನ್ನು ಮತ್ತು ಗಂಧವೃಷ್ಟಿಯನ್ನೂ ಉಂಟುಮಾಡಿರುವನೆಂದೇ ನನ್ನ ಭಾವನೆ. ||೪೪||

ಕಲ್ಪವೃಕ್ಷಗಳಲ್ಲಿರುವ ಹೂವುಗಳ ಗಂಧವೂ ಸಹ, ಇಷ್ಟೊಂದು ಮನೋಹರವಾಗಿರುವುದಿಲ್ಲ. ಒಟ್ಟಿನಲ್ಲಿ ಈ ಸುಗಂಧದ ಪ್ರಭಾವವನ್ನು ಶಿವನೇ ಅರಿತಿರುವನು. ||೪೫||

ಇದೀಗ ಮಹೇಶನಿಗಿರುವ ಸೃಷ್ಟಿವೈಚಿತ್ರ್ಯ. ದೇವಿಯು ಇಲ್ಲಿಂದ ಹಿಂದಿರುಗಲು ವಿಲಂಬವಾಗಲೆಂದೇ ಶಂಕರನು ಈರೀತಿಯಾದ ಸೃಷ್ಟಿಯನ್ನು ಉಂಟುಮಾಡಿರುವನೆಂದು ನಾನು ತಿಳಿಯುವೆನು. ||೪೬||

ಸಹಸ್ರಶಃ ಪ್ರಯಾಸ್ಯಂತಿ ಬ್ರಹ್ಮಕಲ್ಪಾಸ್ತಥಾಪ್ಯಯಂ।
ನಾಟ್ಯೋತ್ಸವೋ ನ ಶಾಂತಸ್ಸ್ಯಾದಧುನಾಭಿನವೋ ಯತಃ ॥೪೭॥

ನಾಟ್ಯೇನಾಭಿನವೇನಾಯಂ ನೂತನಾಭಿನವೋತ್ಸವಃ ।
ಪುನಃ ಪುನರ್ಭವತ್ಯೇವ ನವನಾಟ್ಯಾವಲೋಕನಂ ॥೪೮॥

ನಾರೀಣಾಂ ನಾಟ್ಯಸಾಮಾನ್ಯವಿಲೋಕನರತಿರ್ನವಾ।
ಕಿಂ ಪುನರ್ನಾಟ್ಯಭೇದಾನಾಮವಲೋಕನಸಂಭವಃ ॥೪೯॥

ಅತಃ ಪರಂ ಮಹೇಶೇನ ನಾಟ್ಯನಾರೀಗಣೋ ಯದಿ ।
ನ ಪ್ರೇಷ್ಯತೇ ತದಾ ತಾವನ್ನಿರ್ವಿಘ್ನಗತಿರಂಬಿಕಾ ॥೫೦॥

ವಾಂತ್ಯೇತೇ ಪವನಾ ಮಂದಾಃ ಪ್ರಸೂನಾಸಾರಸಂವೃತಾಃ ।
ಮರಂದವೃಷ್ಟಿರಧುನಾ ಪ್ರಕೃಷ್ಟಾ ದೃಷ್ಟಿಗೋಚರಾ ॥೫೧॥

ಸಾವಿರಾರು ಬ್ರಹ್ಮಕಲ್ಪಗಳು ಒಂದೊಂದಾಗಿ ಕಳೆಯುತ್ತಾ, ಹೊಸಹೊಸದಾಗಿ ಹುಟ್ಟಿದರೂ, ಈ ನರ್ತನಸಮಾರಂಭವು ಶಾಂತವಾಗದೆ ಹೊಸಹೊಸದಾಗಿಯೇ ಕಾಣಿಸುತ್ತಿರುವುದು. ॥೪೭॥

ಅಪೂರ್ವವಾದ ನರ್ತನದಿಂದ, ಹೊಸಹೊಸದಾಗಿ ಶೋಭಿಸುತ್ತಿರುವ ಈ ಉತ್ಸವವು ಪ್ರೇಕ್ಷಕರಿಗೆ ಮತ್ತೆ ಮತ್ತೆ ಹೊಸಹೊಸದಾದ ನೋಟಗಳನ್ನು ನೋಡುವಂತೆ ಚಕಿತಗೊಳಿಸುತ್ತಲಿರುವುದು. ॥೪೮॥

ಸ್ತ್ರೀಯರ ಅದ್ಭುತವಾದ ಆ ನಾಟ್ಯವನ್ನು ನೋಡುವುದರಲ್ಲಿ, ವಿಲಕ್ಷಣವಾದ ಆಸಕ್ತಿಯು ಹುಟ್ಟುವುದು ಸಹಜ. ಹಾಗಿರುವಾಗ ವಿಧವಿಧವಾದ ನರ್ತನಗಳನ್ನು ನೋಡುವವರ ಸಡಗರವನ್ನು ಏನೆಂದು ಹೇಳೋಣ ? ಅದು ವರ್ಣನಾತೀತವಲ್ಲವೆ ? ॥೪೯॥

ಇನ್ನುಮುಂದಾದರೂ ಶಿವನು ಹೊಸ ಹೊಸ ಸ್ತ್ರೀಯರನ್ನು ಮತ್ತೆ ಸೃಷ್ಟಿಸಿ ಕಳುಹಿಸದಿದ್ದರೆ ದೇವಿಯು ಯಾವ ಆತಂಕವೂ ಇಲ್ಲದೆ ಅವನಿದ್ದಲ್ಲಿಗೆ ಜಾಗ್ರತೆ ತೆರಳುವಳು. ॥೫೦॥

ಹೂವುಗಳ ಸಾರದಿಂದ ಕೂಡಿರುವ ಈ ಮಾರುತಗಳು ಮಂದಮಂದವಾಗಿ ಬೀಸುತ್ತಲಿವೆ. ಅದೋ, ಶ್ರೇಷ್ಠವಾದ ಪುಷ್ಪಮಕರಂದವೃಷ್ಟಿಯೇ ಕಣ್ಣಿಗೆ ಗೋಚರವಾಗುತ್ತಿರುವುದು. ॥೫೧॥

ಚಿರಂ ಜೀವತು ವಾತೋಽಯಮಾಸಾರಾಸಾರಸಂಗಮಃ ।
ಗಂಧೋಽಪಿ ನಾಟ್ಯಗಾನಂ ಚ ಕಿಮಸ್ಮಾಕಮಿತೋ ಭಯಂ ॥೫೨॥

ಸ್ವಯಂ ವಿಲಂಬಂ ಸೋಢ್ವಾಪಿ ವಿಲಂಬಸ್ಯಾಸ್ಯ ಕಾರಣಂ ।
ಪ್ರೇರಯತ್ಯಂಬಿಕಾನಾಥಃ ಕಿಮಂಬಾಪಿ ಕರಿಷ್ಯತಿ ॥೫೩॥

ಅತ್ರಾಭಿನವನಾಟ್ಯಸ್ಯ ಪ್ರಸಂಗೋಽಪಿ ನಚೇದ್ಯದಿ ।
ತದಾ ಪ್ರವಿಷ್ಟಮೇವ ಸ್ಯಾದಂಬಯಾ ಶಿವಮಂದಿರಂ ॥೫೪॥

ಕಿಂ ಚಾವಗಣನಾ ತಾವದಂಬಯಾ ನ ಕೃತಾಧುನಾ ।
ನಾಟ್ಯಸ್ಯಾಸ್ಯ ಮಹೇಶೇನ ಪ್ರೇಕ್ಷಿತಸ್ಯಾದರಃ ಕೃತಃ ॥೫೫॥

ನಾಟ್ಯಾನಾದರಮಾತ್ರೇಣ ಶಂಕರಾನಾದರೋ ಯದಿ ।
ತದಾ ಕಠಿನಮಿತ್ಯೇವ ಕೃತಂ ನಾಟ್ಯಾವಲೋಕನಂ ॥೫೬॥

ಮಕರಂದದ ಪ್ರವಾಹದಿಂದ ಕೂಡಿರುವ ಶೀತಮಾರುತವು ಚಿರಕಾಲ ಬೀಸಲಿ. ಪುಷ್ಪಗಳ ಗಂಧವೂ, ನರ್ತನವೂ ಮತ್ತು ಗಾನವೂ ಸಹ ವೃದ್ಧಿಯನ್ನೈದಲಿ. ಅದರಿಂದ ನಮಗೆ ಯಾವ ಕೊರತೆಯೂ ಇಲ್ಲ. ॥೫೨॥

ಶಿವನು ದೇವಿಯ ವಿಲಂಬವನ್ನು ಮನಸ್ಸಿನಲ್ಲಿ ಸಹಿಸಿ, ವಿಲಂಬದ ಕಾರಣವನ್ನು ತಿಳಿದುಕೊಳ್ಳಲು ಉದ್ಯುಕ್ತನಾದವನಂತೆ ನಟಿಸುತ್ತಾ "ದೇವಿಯು ಏನನ್ನು ಮಾಡುತ್ತಿರುವಳೆಂಬುದನ್ನು ನೋಡಿಕೊಂಡು ಬನ್ನಿರಿ" ಎಂದು ಗಣಗಳನ್ನು ಆಜ್ಞಾಪಿಸುತ್ತಿರುವನು. ॥೫೩॥

ಇಲ್ಲಿ ಹೊಸ ಹೊಸದಾದ ನಾಟ್ಯವು ಕಣ್ಣಿಗೆ ಕಾಣಿಸಿಕೊಳ್ಳದೇ ಹೋಗಿದ್ದರೆ ಅಂಬಿಕೆಯು ಆಗಲೇ ಶಿವಾಲಯಕ್ಕೆ ತೆರಳುತ್ತಿದ್ದಳು. ॥೫೪॥

ಇದಲ್ಲದೇ ಈ ನಾಟ್ಯವನ್ನು ನೋಡಲು ದೇವಿಯೂ ಉದಾಸೀನಮಾಡುತ್ತಿಲ್ಲ. ಶಿವನೇ ನೂತನವಾಗಿ ಇದನ್ನು ಸೃಷ್ಟಿಸಿರುವನೆಂದು ತಿಳಿದು ಈ ನರ್ತನವನ್ನು ಅಕ್ಕರೆಯಿಂದ ನೋಡುತ್ತಲೇ ಇರುವಳು. ॥೫೫॥

ನರ್ತನವನ್ನು ತಿರಸ್ಕರಿಸಿ ಮುಂದುವರಿದರೆ ಶಂಕರನನ್ನು ತಿರಸ್ಕರಿಸಿದಂತಾಗುವುದು. ಎಂದು ಭಾವಿಸಿ ಆ ನಾಟ್ಯವನ್ನು ನೋಡುವುದೇ ಸರಿಯೆಂದು ದೇವಿಯು ಭಾವಿಸಿದಂತಿರುವುದು. ॥೫೬॥

ಅನಾದರಸ್ಯ ವಿಷಯೋಽಪ್ಯೇತನ್ನಾಟ್ಯಂ ನ ಸರ್ವಥಾ ।
ಅಪೂರ್ವಸ್ಯಾಸ್ಯ ನಾಟ್ಯಸ್ಯ ಕಥಂ ವಾ ಸ್ಯಾದನಾದರಃ ॥೫೭॥

ನಾಟ್ಯಕೋಲಾಹಲಸ್ಯಾಪಿ ಶ್ರವಣಂ ಮಂಗಳಾಯತೇ ।
ನಾಟ್ಯಾವಲೋಕನರಸೋ ವರ್ಣನಾವಿಷಯೋಽಪಿ ನ ॥೫೮॥

ಏತನ್ನಾಟ್ಯವಿಲೋಕನಂ ಶ್ರಮಮಹಾಂಭೋಧೇರ್ಮಹಾಬಾಡವೋ
ಸ್ಯಾನಂದಾಬ್ಧಿಸುಧಾಕರಃ ಶಿವಗಣಾಶಾಸ್ಯಃ ಶಿವಾಶಾಸ್ಯತಾಂ ।
ಪ್ರಾಪ್ತಃ ಪ್ರಾಪಕ ಏವ ದೀರ್ಘಸುಕೃತಾಂಭೋಧೇರಯಂ ವರ್ಣನಾ
ಮಾರ್ಗಾತೀತ ಇತಿ ಶ್ರಮೋಽಪಿ ನ ತಥಾ ತದ್ವರ್ಣನಾಭ್ಯುದ್ಯಮೇ ॥೫೯॥

ಸಾಮರ್ಥ್ಯಂ ಗಿರಿಶಸ್ಯ ಕಿಂ ಮುನಿಗಣಾವೇದ್ಯಂ ಪ್ರಕೃಷ್ಟಂ ಪರಂ
ತನ್ನಾಟ್ಯೈಃ ಪ್ರಕಟೀಕೃತಂ ಪಟುತರಾ ಸೃಷ್ಟಿಃ ಕ್ವ ವಾ ತಾದೃಶೀ ।

ಈ ಸಂದರ್ಭದಲ್ಲಿ ನಾಟ್ಯವನ್ನು ತಿರಸ್ಕರಿಸುವುದು ಯುಕ್ತವಾದರೂ ಅದ್ಭುತವಾದ ಇಂತಹ ನರ್ತನವನ್ನು ಹೇಗೆತಾನೇ ತಿರಸ್ಕರಿಸಲು ಸಾಧ್ಯ? ॥೫೭॥

ನರ್ತನದ ಶಬ್ದವನ್ನು ಕೇಳುವುದೇ ನಮಗೆ ಕಲ್ಯಾಣದಾಯಕವಾಗಿರುವಾಗ, ನರ್ತನವನ್ನು ನೋಡುವುದರಿಂದುಂಟಾದ ರಸವನ್ನು ವರ್ಣಿಸಲು ಸಾಧ್ಯವೇ! ॥೫೮॥

ಈ ನರ್ತನದ ನೋಟವು, ಆಯಾಸವೆಂಬ ಸಮುದ್ರಕ್ಕೆ ಬಡಬಾಗ್ನಿಯಂತಿರುವುದು. ಚಂದ್ರನು ಸಮುದ್ರವನ್ನು ವೃದ್ಧಿಗೊಳಿಸುವಂತೆ ಈ ನೃತ್ಯವು ನಮ್ಮ ಆನಂದವನ್ನು ವೃದ್ಧಿಗೊಳಿಸುತ್ತಲಿರುವುದು. ಈ ನಾಟ್ಯವನ್ನು ಗಿರಿಜೆಯೂ ಮತ್ತು ಶಿವನ ಪ್ರಮಥಗಣಗಳೂ ಸಹ ಸ್ತುತಿಸುತ್ತಿರುವರು. ಮತ್ತು ಈ ನಾಟ್ಯವು ಪ್ರೇಕ್ಷಕರ ಸುಕೃತವಿಶೇಷವನ್ನು ವೃದ್ಧಿಗೊಳಿಸುವುದಲ್ಲದೆ, ಇದನ್ನು ವರ್ಣಿಸಲು ಅಸದಳವೆನಿಸಿರುವುದು. ಇದರ ಸ್ವರೂಪವನ್ನು ಚಿತ್ರಿಸಲು ತೊಡಗಿದರೆ ಬಳಲಿಕೆಯೇ ಉಂಟಾಗಲಾರದು. ॥೫೯॥

ಮುನಿಗಳಿಗೆ ಮಾತ್ರ ಗೋಚರವಾಗುವ ಈಶ್ವರನ ಅದ್ಭುತವಾದ ಆ ಶಕ್ತಿಯನ್ನು ಏನೆಂದು ಹೇಳೋಣ? ಶಿವನು ಆ ಸಾಮರ್ಥ್ಯವನ್ನು ಈ ವಿಧವಾದ ನೃತ್ಯಗಳ ಸೃಷ್ಟಿಯಿಂದಲೇ ಸ್ಪಷ್ಟವಾಗಿ ಹೊರಪಡಿಸಿರುತ್ತಾನೆ. ಅದಿಲ್ಲದಿದ್ದರೆ ಈ

ಮಾಯಾಮಾತ್ರಮಿದಂ ನ ಯೇನ ವಿಪುಲಾವಿದ್ಯಾವಿಲಾಸೋ ಭವೇತ್
ಸೋಽಯಂ ಶರ್ವವಿಲಾಸ ಏವ ಸಕಲಃ ಕೋಽನ್ಯೋ ವಿಲಾಸೋ ಭವೇತ್
॥೬೦॥

ಭಾಗ್ಯಂ ತಾವದಿಹೇದೃಶಂ ಸುರಗಣಾಶಾಸ್ಯಂ ಸ್ವತೋ ದುರ್ಲಭಂ
ಶ್ರುತ್ಯಂತೈರಪಿ ಸರ್ವಥಾ ನ ವಿದಿತಂ ದೇವೈರ್ಮುನೀಂದ್ರೈರಪಿ ।
ಗಂಧರ್ವೈರಪಿ ಕಿನ್ನರೈರಪಿ ತಥಾ ನಾಗೇಶ್ವರೈರಪ್ಯಯಂ
ಸಂತೋಷೋ ನನು ಭೂತ ಇತ್ಯನುದಿನಂ ನಾಟ್ಯೋತ್ಸವೋ ಮೃಗ್ಯತೇ
॥೬೧॥

ಪ್ರಕಾರವಾದ ಅದ್ಭುತ ಸೃಷ್ಟಿಯು ಹೇಗೆ ತಾನೇ ಉಂಟಾದೀತು? ಇದೆಲ್ಲವೂ ಕೇವಲ ಅಚೇತನವಾದ ಮಾಯೆಯಿಂದ ಉಂಟಾಗಿರುವುದಿಲ್ಲ. ಸ್ಥಾವರವಾದ ಮತ್ತು ಮರಗಿಡಗಳಂತೆ ಅಚೇತನವಾದ ಆ ಮಾಯೆಗೆ ಚೇತನನ ಸಹಾಯವಿಲ್ಲದೆ, ಇವೆಲ್ಲವನ್ನೂ ಸೃಷ್ಟಿಸುವ ಸಾಮರ್ಥ್ಯವು ಸಂಭವಿಸಲಾರದು. ಮತ್ತೇನೆಂದರೆ ಇವೆಲ್ಲವೂ ಆ ಪರಶಿವನ ಲೀಲೆಯಾಗಿರುವುದು. ಅವನ ಲೀಲೆಯಲ್ಲದೆ ಬೇರೆ ಯಾರ ಲೀಲೆಯಿಂದ ತಾನೇ, ನೂತನ ಸೃಷ್ಟಿಯು ಉಂಟಾದೀತು? (ಎಂದರೆ, ಮಾಯೆಯು ಜಡವಾಗಿರುವುದರಿಂದ ಅದು ಪ್ರಪಂಚದ ಸೃಷ್ಟಿಗೆ ಕಾರಣವಾಗಿರದೆ, ಚೇತನನಾದ ಈಶ್ವರನಿಗೆ ಅಧೀನವಾಗಿದ್ದುಕೊಂಡೇ ಜಗತ್ತನ್ನು ಸೃಷ್ಟಿಸುವುದು. ಆದುದರಿಂದ ಆ ಪರಮೇಶ್ವರನ ಸ್ವಾತಂತ್ರ್ಯದಿಂದಲೇ ಈ ನಾಟ್ಯ, ಗಾನ ಮುಂತಾದುವುಗಳು ಸೃಷ್ಟಿಸಲ್ಪಟ್ಟಿರುವುವೇ ಹೊರತು, ಇತರರು ಯಾರೂ ಇದನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದುವುದಿಲ್ಲ.) (ಟಿಪ್ಪಣಿ—ಇದರಿಂದ ಜಡವಾದ ಮಾಯೆಯೇ ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಕಾರಣವೆಂದೂ, ಪುರುಷನು ಕರ್ತೃವಲ್ಲವೆಂದೂ ಹೇಳುವ ಸಾಂಖ್ಯರ ಮತವನ್ನು ನಿರಾಕರಿಸಿದಂತಾಯಿತು.) ॥೬೦॥

ನರ್ತನವನ್ನು ನೋಡುವ ಈ ಸುಕೃತವಿಶೇಷವನ್ನು ದೇವತೆಗಳೇ ಕೇಳಿಕೊಳ್ಳುತ್ತಿರುವಾಗ, ಅದು ಸಾಮಾನ್ಯಜನರಿಗೆ ದುರ್ಲಭವೆಂದೇ ಆಗುವುದು. ಆ ಶಿವನ ಮಹಿಮೆಯನ್ನು ತಿಳಿಯಪಡಿಸಲು ವೇದಾಂತಗಳೂ ಸಹ ಅಸಮರ್ಥವಾಗಿರುತ್ತವೆ. ಇದಲ್ಲದೇ ಅವನ ಮಹಿಮೆಯನ್ನು ಗಂಧರ್ವರೂ, ಕಿನ್ನರರೂ, ನಾಗರೂ, ತಿಳಿಯಲಪೇಕ್ಷಿಸಿ, ಇಂತಹ ನಾಟ್ಯಸಮಾರಂಭವು ನಿತ್ಯವೂ ಜರುಗಲಿ, ಎಂದೂ

ಮಾತಾ ಸೇಯಮುಮಾಸಹಾಯನಿಕಟೇ ಯಾಸ್ಯತ್ಯಯಂ ಸರ್ವಥಾ
ನಾಟ್ಯಾನಂದಸುಧಾರ್ಣವಃ ಪ್ರತಿಪದಂ ವೃದ್ಧಿಂ ಪ್ರಯಾಸ್ಯತ್ಯಯಂ ।
ವಿಘ್ನಯಾಗಮನೇ ಗಿರೀಂದ್ರತನಯಾಸಂಗೋಽಧುನಾ ದುರ್ಲಭಃ
ವಿಘ್ನಧ್ವಾಂತನಿವಾರಕೋಽಪಿ ಜಗತೀಪೃಷ್ಠೇ ನ ದೃಷ್ಟಃಪುನಃ ॥೬೨॥

ವಿಘ್ನೇಶೋಽಪಿ ನ ಶಕ್ತ ಏವ ಸಹಸಾ ನಾಟ್ಯೋತ್ಸವೋಧ್ವಂಸನೇ
ತನ್ನಾಟ್ಯಸ್ಯ ವಿನಾಶನಾಯ ಸ ಕಥಂ ಯತ್ನಂ ಕರಿಷ್ಯತ್ಯಪಿ ।
ನಾಟ್ಯೋತ್ಸಾಹವಿಘಾತಕಸ್ತದಿತರಃ ಕೋ ವಾ ಜಗನ್ಮಂಡಲೇ
ಶುಂಡಾದಂಡವಿರಾಜಿತಃ ಖಲು ಮಹಾಘುಂಡಿಃ ಸ ನಾಟ್ಯೋದ್ಯತಃ ॥೬೩॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಶಿವಾಗಮನಂ ಪ್ರತ್ಯಾಗತಶಿವಗಣನಂದಿಕೇಶ್ವರಸಂವಾದೋ ನಾಮ ನವಮೋಽಧ್ಯಾಯಃ

ಹಾರೈಸುತ್ತಿರುವರು. ಈ ನೃತ್ಯಸಮಾರಂಭವು ಅಷ್ಟು ಸಂತೋಷವನ್ನುಂಟು ಮಾಡುತ್ತಿದೆ. ಆದುದರಿಂದ ಈ ಪ್ರಕಾರವಾದ ನೃತ್ಯಸಮಾರಂಭವು ಪ್ರತಿದಿನವೂ ಉಂಟಾಗಲೆಂದೇ ಹಾರೈಸುವೆವು. ||೬೧||

ಈ ನಾಟ್ಯಾನಂದವೆಂಬ ಸುಧಾಸಮುದ್ರವು ಪರಶಿವನಿಂದ ಇಲ್ಲಿ ಇನ್ನೂ ಹೆಚ್ಚುವುದು. ಇದೇ ವಿಷಯವನ್ನೇ ಶಂಕರನೂ ಚೆನ್ನಾಗಿ ಅರಿತಿರುವನು. ಪಾರ್ವತಿಯಾದರೋ ನಾಟ್ಯದಲ್ಲಿ ನೆಟ್ಟ ಮನಸ್ಸುಳ್ಳವಳಾಗಿ, ಶಂಕರನನ್ನು ಬೇಗ ನೋಡುವಂತಿಲ್ಲ. ಈ ನಾಟ್ಯವೆಂಬ ವಿಘ್ನವನ್ನು ನಾಶಮಾಡುವ ಮಹಾತ್ಮನು ಲೋಕದಲ್ಲಿ ಯಾರೂ ಇಲ್ಲದಂತಾಯಿತಲ್ಲವೆ! ||೬೨||

ದೇವಿಗೆ ನಾಟ್ಯವನ್ನು ನೋಡುವುದರಲ್ಲಿರುವ ಆ ಉತ್ಸಾಹವನ್ನು ಭಂಗಪಡಿಸಲು, ವಿಘ್ನರಾಜನಾದ ಗಣೇಶನೂ ಸಹ ಅಸಮರ್ಥನಾಗಿರುವನು. ಉಮಾಪುತ್ರನಾದ ಆವನುತಾನೇ ಮಾತೆಯಾದ ಗಿರಿಜೆಯ ಉತ್ಸಾಹವನ್ನು ಹೋಗಲಾಡಿಸಲು ಯತ್ನಿಸುವನೇ! ಈ ಜಗತ್ತಿನಲ್ಲಿ ಗಣೇಶನನ್ನು ಬಿಟ್ಟು ಇನ್ನಿತರರಾರೂ ವಿಘ್ನರಾಶಿಯನ್ನು ನಾಶಪಡಿಸಲು ಶಕ್ತರಾಗಿಲ್ಲ. ಅಂತಹ ವಿಘ್ನೇಶನೇ ದಂಡದೋಪಾದಿಯಲ್ಲಿ

ರುವ ಸೊಂಡಿಲಿನಿಂದ ಶೋಭಿಸುತ್ತಾ, ನೃತ್ಯವನ್ನು ನೋಡುತ್ತಾ ಕುಳಿತಿರುವಾಗ ಈ ನಾಟ್ಯ ಮುಗಿಯುವುದು ಹೇಗೆ" ಎಂದು ನಂದಿಕೇಶನು ಇತರ ಗಣಗಳೊಡನೆ ಯೋಚಿಸತೊಡಗಿದನು. ||೬೩||

ಇಲ್ಲಿಗೆ ಶ್ರೀ ಶಿವರಹಸ್ಯದ ಮೂರನೆಯ ಅಂಶದ ಮೊದಲನೆಯ ಭಾಗದಲ್ಲಿ "ದೇವಿಯನ್ನು ಕರೆತರಲು ಬಂದ ಗಣಗಳೊಂದಿಗೆ ನಂದಿಕೇಶ್ವರನ ಸಂವಾದ"ವನ್ನು ತಿಳಿಸುವ ಒಂಬತ್ತನೆಯ ಅಧ್ಯಾಯವು ಕೊನೆಗಂಡಿತು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ದಶಮೋಽಧ್ಯಾಯಃ

॥ ವ್ಯಾಸ ಉವಾಚ ॥

ಶಿವಾನಾಗಮನಂ ದೃಷ್ಟ್ವಾ ಶಂಕರೋ ಲೋಕಶಂಕರಃ ।
ತದ್ವಿಲಂಬಸ್ಯ ಕಿಂ ಬೀಜಂ ಪ್ರಾಯಃ ಶ್ರಾಂತಾ ಪಥಿ ಪ್ರಿಯಾ ॥೧॥

ಪ್ರಾಯಸ್ಸೂರಕರಾಘಾತಃ ಪಥಿ ವೃತ್ತೋಽನ್ಯಥಾ ಕಥಂ ।
ಅನಾಗಮನಮೇತಸ್ಯಾಃ ಕೋಮಲಾವಯವಾ ಶಿವಾ ॥೨॥

ಹತ್ತನೆಯ ಅಧ್ಯಾಯ

ಬಳಿಕ ವ್ಯಾಸಮಹರ್ಷಿಯು ಮುನಿಗಳನ್ನು ಕುರಿತು ಇಂತೆಂದನು. “ಎಲೈ ಮುನಿವರ್ಯರೇ! ಹೀಗೆ ದೀರ್ಘಕಾಲವು ಕಳೆದರೂ, ಪಾರ್ವತಿಯು ತನ್ನ ಬಳಿಗೆ ಬರದಿದ್ದುದನ್ನು ನೋಡಿ, ಶಿವನು ತನ್ನ ಮನಸ್ಸಿನಲ್ಲಿ ಹೀಗೆಂದು ಯೋಚಿಸಿದನು. ಇಷ್ಟು ಹೊತ್ತಾದರೂ ಪ್ರೇಯಸಿಯಾದ ಗಿರಿಜೆಯು ಬರದಿರಲು ಕಾರಣವೇನಿರಬಹುದು! ಪ್ರಾಯಶಃ ಅವಳು ಮಾರ್ಗಾಯಾಸದಿಂದ ಬಳಲಿರಬಹುದಲ್ಲವೇ! ॥೧॥

ಒಂದುವೇಳೆ, ದಾರಿಯಲ್ಲಿ ಸೂರ್ಯನ ಕಠಿನವಾದ ಕಿರಣಗಳು ಅವಳ ಮೃದುವಾದ ಆ ಶರೀರವನ್ನು ಸಂತಪ್ತಗೊಳಿಸಿರಬಹುದು. ಹಾಗಿಲ್ಲದಿದ್ದರೆ, ಇಷ್ಟು ಹೊತ್ತಾದರೂ ಅವಳು ಬರದಿರಲು ಕಾರಣವೇನು? ಪ್ರಿಯತಮೆಯಾದ ಗಿರಿಜೆಯ ಅವಯವಗಳು ಅಷ್ಟು ಕೋಮಲವಾಗಿರುವುವಲ್ಲವೇ! ॥೨॥

ಶಿರೀಷಪ್ರಸವಸ್ಯಾಪಿ ಮಾರ್ದವಂ ತಾದೃಶಂ ನ ಹಿ ।
ಯಾದೃಶಂ ಗಿರಿಜಾದೇಹೇ ಸುಗಂಧಪರಿವೇಷ್ಟಿತೇ ॥೩॥

ಗಿರಿಜಾದೇಹಸಂಬಂಧಿಮಾರ್ದವಶ್ರವಣೇನ ಕಿಂ ।
ಶಿರೀಷಕುಸುಮಂ ಪ್ರಾಪ ಮಹಾರಣ್ಯಾಂತರಂ ಪರಂ ॥೪॥

ಕ್ವ ವಾ ಶಿರೀಷಕುಸುಮಂ ಕ್ವ ಶಿವಾದೇಹಮಾರ್ದವಂ ।
ಕಿಯದಂತರಮೇತಸ್ಯಾಸ್ತಸ್ಯಾಪಿ ಮೃದುಲಾನ್ವಯೇ ॥೫॥

ಕೈಲಾಸದುರ್ಗಮಾರ್ಗಸ್ಯ ಭಾಸ್ಕರಃ ಸ್ವಕರೈಃ ಪರಂ ।
ಚಕಾರ ಖಲು ದುರ್ಗತ್ವಂ ದುರ್ಗತ್ವಂ ಚ ಗಿರೇರಪಿ ॥೬॥

ತನ್ಮಾರ್ಗೇ ರವಿಜಾ ಕಾಂತಿಃ ಪ್ರವೃತ್ತಾ ಪ್ರಾಯಶಸ್ತಥಾ ।
ಶ್ರಾಂತಾ ಸಾ ಗಿರಿಜಾ ತಾಂತಾ ನಿತಾಂತತನುಕೋಮಲಾ ॥೭॥

ಮನೋಹರವಾದ ಮತ್ತು ಸುಗಂಧಭೂಯಿಷ್ಠವಾದ ಗಿರಿಜೆಯ ಶರೀರದಲ್ಲಿರುವಷ್ಟು ಸೌಕುಮಾರ್ಯವು, ಶಿರೀಷಪುಷ್ಪಗಳಲ್ಲಿಯೂ(ಬಾಗೆಯ ಹೂವು)ಕಾಣುವುದಿಲ್ಲ. ॥೩॥

ಗೌರಿಯ ಶರೀರವು, ಅತ್ಯಂತ ಸುಕುಮಾರವಾದುದೆಂಬ ವಾರ್ತೆಯನ್ನು ಕೇಳಿಯೇ ನಾಚಿಕೆಗೊಂಡ ಶಿರೀಷಪುಷ್ಪಗಳು, ಅವಳೆದುರಿಗೆ ತಲೆಯೆತ್ತಲಾರದೆ, ಘೋರವಾದ ಅರಣ್ಯವನ್ನು ಪ್ರವೇಶಿಸಿದುವು. ॥೪॥

ಶಿರೀಷಪುಷ್ಪವೆಲ್ಲಿ! ಪಾರ್ವತಿಯ ಶರೀರಸೌಕುಮಾರ್ಯವೆಲ್ಲಿ! ಮಾರ್ದವದ ವಿಷಯದಲ್ಲಿ ಅವೆರಡಕ್ಕೂ ಅಗಾಧವಾದ ಅಂತರವಿರುವುದು! ॥೫॥

ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ಕೈಲಾಸನಗರದ ಕೋಟೆಯ ದಾರಿಯನ್ನು ಅತ್ಯಂತ ದುರ್ಗಮವಾದುದನ್ನಾಗಿ ಮಾಡಿರುವನು. ಇದರಿಂದಲೇ ಕೈಲಾಸವು ಎಲ್ಲರಿಗೂ ಸುಲಭಪ್ರವೇಶವಿಲ್ಲದ್ದಾಗಿರುವುದು. ॥೬॥

ಈ ಪರ್ವತಮಾರ್ಗದಲ್ಲಿ ಸೂರ್ಯನು, ಕಣ್ಣುಗಳನ್ನು ಕೋರೈಸುವಂತಹ ತನ್ನ ಕಾಂತಿಯನ್ನು ಪ್ರಸರಿಸಿರಬಹುದು. ಅದರಿಂದಲೇ, ಕೋಮಲವಾದ ಶರೀರವುಳ್ಳ ಗಿರಿಜೆಯು, ಮಾರ್ಗಾಯಾಸದಿಂದ ಬಳಲಿರಬಹುದು. ॥೭॥

ಸುಧಾಕರಕರಾಣಾಂ ಚ ಮೃದುಲತ್ವಂ ನ ತಾದೃಶಂ ।
ತತಃ ಸಾ ಶ್ರಾಂತಿಮಾಪನ್ನಾ ಮಾರ್ಗೋ ದೂರತರೋಽಪ್ಯಯಂ ॥೮॥

ಅಮಂದವಾತಸಂಗೋ ವಾ ತದ್ವಿಮಾನೇನ ಭೂರಿಶಃ ।
ತದಾಘಾತೇನ ವಾ ಶ್ರಾಂತಾ ಸಾ ಪರಂ ಸರ್ವಮಂಗಳಾ ॥೯॥

ಯದ್ವಾ ಚಾಮರವಾತಾನಾಮಮಂದಾನಾಂ ಪ್ರಸಾರತಃ ।
ಶ್ರಾಂತಾ ತಾವನ್ನ ವಿಶ್ರಾಂತಾ ಕಿಂ ತದ್ವಿಶ್ರಾಮಸಾಧನಂ ॥೧೦॥

ನ ತದಾಪ್ತಜನಸ್ತತ್ರ ಶ್ರಮಾಪಹರಣಕ್ಷಮಃ ।
ವಿನಾ ತೇನ ಕಥಂ ಮಾರ್ಗೇ ಸಮಾಯಾಸ್ಯತಿ ಶಾಂಭವೀ ॥೧೧॥

ಮೇನಕಾ ಕಿಂ ಪರಿತ್ಯಕ್ತಾ ತಯಾ ಕೈಲಾಸಮಂದಿರಾತ್ ।
ಸಾ ಚೇತ್ಸಹ ಸಮಾಯಾತಿ ತದಾ ಖಲು ನ ಸ ಶ್ರಮಃ ॥೧೨॥

ಅವಳ ಶರೀರದಲ್ಲಿರುವ ಆ ಮಾರ್ದವವು, ಚಂದ್ರಕಿರಣಗಳಲ್ಲಿಯೂ ಇಲ್ಲ. ಅವಳ ಆಯಾಸಕ್ಕೆ ಆ ಮಾರ್ದವವೇ ಕಾರಣವಾಗಿರಬಹುದು. ಅದಲ್ಲದೇ ಬರುವ ಮಾರ್ಗವೂ ಸಹ, ಬಹಳ ದೀರ್ಘವಾದುದೇ. ॥೮॥

ಅಥವಾ, ವಿಮಾನದ ರಭಸದಿಂದ ಉಂಟಾದ ಗಾಳಿಯು ವೇಗವಾಗಿ ಬೀಸಿ ಅದರ ಹೊಡೆತದಿಂದಲೂ ಸರ್ವಮಂಗಳೆಯು ಆಯಾಸಗೊಂಡಿರಬಹುದು. ॥೯॥

ಅಥವಾ, ಅತ್ಯಂತ ವೇಗವಾಗಿ ಬೀಸುತ್ತಿರುವ ಚಾಮರಗಳ ಗಾಳಿಯಿಂದ ಬಳಲಿದವಳಾಗಿ, ಅದರ ಪರಿಹಾರಕ್ಕೋಸ್ಕರ ವಿಶ್ರಾಂತಿಯನ್ನು ತೆಗೆದುಕೊಂಡಂತೆ ಕಾಣುವುದಿಲ್ಲ. ಸ್ವಲ್ಪ ವಿಶ್ರಮಿಸೋಣವೆಂದರೆ ಆ ಪರ್ವತಪ್ರದೇಶದಲ್ಲಿ ವಿಶ್ರಾಂತಿ ಯಾದರೂ ದೊರೆಯುವ ಬಗೆ ಹೇಗೆ? ॥೧೦॥

ಅವಳ ಆ ಶ್ರಮವನ್ನು ಹೋಗಲಾಡಿಸಲು ಸಮರ್ಥರಾದ ಸಖೀಜನರೂ ಸಿಕ್ಕದಿರಬಹುದು. ಆ ಸಖೀಜನರಿಲ್ಲದೆ ದೇವಿಯು ದುರ್ಗಮವಾದ ಆ ಮಾರ್ಗದಲ್ಲಿ ಹೇಗೆ ತಾನೇ ಬರುವಳು? ॥೧೧॥

ಹಾಗಾದರೆ ಅವಳು ತನ್ನೊಂದಿಗೆ ಬಂದಿದ್ದ ಮೇನಾದೇವಿಯನ್ನು ಕೈಲಾಸ ಗೃಹದಿಂದ ಬೇರೆಯು ಕಡೆಗೆ ಕಳುಹಿಸಿದಳೇ! ಜೊತೆಗೆ ಅವಳೂ ಬಂದಿದ್ದರೆ ಗಿರಿಜೆಗೆ ಅಷ್ಟು ಆಯಾಸ ಉಂಟಾಗುತ್ತಿರಲಿಲ್ಲವಲ್ಲಾ! ॥೧೨॥

ತಯಾ ವಿನಾ ನೋಪಹಾರಂ ಗೌರ್ಯೈ ಕೋ ವಾ ಸಮರ್ಪಯೇತ್ ।
ಉಪಹಾರಾದರಾ ಗೌರೀ ಸಾನುವಾರಮಿತಿ ಶ್ರುತಂ ॥೧೩॥

ಸಾ ಸುಪ್ತಾ ಕಿಂ ಪರಿಶ್ರಾಂತಾ ಸ್ವಭಾವೇನಾಲಸಾ ಪರಂ ।
ಚಿಂತಯಾ ವಾ ಪರಿಶ್ರಾಂತಾ ಕಿಂ ತಯಾ ಚಿಂತಯಾ ಫಲಂ ॥೧೪॥

ಶ್ರಾಂತಾಯಾಃ ಪಥಿ ವಿಶ್ರಾಮೋ ಜನನೀಜನಕಾನ್ವಯೇ ।
ಪತಿಸಂಗೇನ ವಾ ನೂನಂ ಸ ನ ತೇನ ವಿನಾ ಭವೇತ್ ॥೧೫॥

ಚಿರಂ ಸಂಭ್ರಮಸಂಕ್ರಾಂತಾ ಮೇನಯಾ ಸಹ ಸಂಗಮೇ ।
ತದ್ವಿಯೋಗೇನ ಸಾ ಶ್ರಾಂತಾ ಕೋಮಲಂ ತನ್ಮನೋಽಪಿ ಹಿ ॥೧೬॥

ಮಯಾಪಿ ತಾವನ್ನ ಗತಂ ಯತ್ರ ಸಾ ಗಿರಿಕನ್ಯಕಾ ।
ತತ್ರಾಭ್ಯಾಸೇ ಸಹಾಯೇನ ಸುಖಾಗಮನಮಿಚ್ಛತಿ ॥೧೭॥

ಮೇನಕೆಯಿಲ್ಲದಿದ್ದರೆ, ಗಿರಿಜೆಗೆ ಆಹಾರಾದಿಗಳನ್ನು ಯಾರುತಾನೇ ಪ್ರೀತಿಯಿಂದ ಅರ್ಪಿಸಬಲ್ಲರು? ಆ ಗಿರಿಜೆಯು, ಬಾರಿ ಬಾರಿಗೂ, ಆಹಾರವನ್ನು ಅಪೇಕ್ಷಿಸುವಳೆಂಬುದನ್ನು ಕೇಳಿರುವೆನು. ॥೧೩॥

ಸ್ವಭಾವದಿಂದಲೇ ಉದಾಸೀನಳಾದ ಅವಳು ಮಾರ್ಗಾಯಾಸದಿಂದ ಬಳಲಿ ಮಲಗಿರುವಳೇ! ಅಥವಾ, ಚಿಂತಾಸಕ್ತಳಾಗಿ ಕುಳಿತಿರುವಳೋ! ದೇವಿಯು ಚಿಂತಿಸಿಯಾದರೂ ಫಲವೇನಿರುವುದು? ಚಿಂತೆಯಾದರೂ ಏನಿರುವುದು! ॥೧೪॥

ಮಾರ್ಗದಲ್ಲಿ ಆಯಾಸಗೊಂಡ ಅವಳ ಜೊತೆಯಲ್ಲಿ ತಂದೆತಾಯಿಗಳಾಗಲಿ, ಅಥವಾ ಪತಿಯೇ ಆಗಲಿ ಇದ್ದರೆ, ಆಗ ಸ್ವಲ್ಪ ವಿಶ್ರಾಂತಿಯು ಲಭಿಸುತ್ತಿತ್ತು. ಅದಿಲ್ಲದಿದ್ದರೆ ಅವಳಿಗೆ ಹೇಗೆತಾನೇ ವಿಶ್ರಾಂತಿ ದೊರೆತೀತು? ॥೧೫॥

ಬಹುಕಾಲ ತಾಯಿಯಾದ ಮೇನಕೆಯೊಡಗೂಡಿ ಅತ್ಯಾನಂದದಿಂದಿದ್ದಳು. ಈಗ ತಾಯಿಯ ವಿಯೋಗದಿಂದ ಚಿಂತಾಸಕ್ತಳಾಗಿರಬಹುದು. ಅವಳ ಮನಸ್ಸು ಅತ್ಯಂತ ಕೋಮಲವಾದುದಲ್ಲವೇ! ॥೧೬॥

ನಾನೂ ಸಹ ಗಿರಿಜೆಯಿರುವಲ್ಲಿಗೆ ಹೋಗಲಿಲ್ಲ. ನಾನು ಅಲ್ಲಿಗೆ ಹೋಗಿದ್ದರೆ, ನನ್ನ ಸಹಾಯದಿಂದಲಾದರೂ ಅನಾಯಾಸವಾಗಿ ಬರಲು ಬಯಸುತ್ತಿದ್ದಳು. ॥೧೭॥

ಯದ್ಯಪ್ಯೇಷಾ ಗಿರಿಸುತಾ ತಥಾಪಿ ಕಠಿನಾ ನ ಸಾ ।
ದೃಷ್ಟ್ವಾಪಿ ಬಹುಧಾ ಕಾಲೇ ಗಿರಿಜಾ ಕೋಮಲಾ ಲತಾ ॥೧೮॥

ತಪಸ್ಯಯಾ ತನುರ್ದೂನಾ ಭವಾನ್ಯಾಃ ಪೂರ್ವಮೇವ ಸಾ ।
ತಾಂತಾಂ ನಿತಾಂತಮಧುನಾ ಶ್ರಾಂತಾ ಪಥಿ ವಿಶೇಷತಃ ॥೧೯॥

ತಪಸಾ ದೂನದೇಹಾಯಾ ಗೌರ್ಯಾಸ್ತನುವಿಜೃಂಭಣಂ ।
ಅದ್ಯಾಪಿ ನ ಭವತ್ಯೇವ ಶ್ರಾಂತಾ ಪಥಿ ವಿಶೇಷತಃ ॥೨೦॥

ತಯಾಪ್ಯುಗ್ರತಪಃ ಪೂರ್ವಂ ತೇನ ತಾವತ್ಕೃತಂ ಖಲು ।
ನೂನಂ ತಸ್ಯಾಸ್ತನೂಸ್ತಾವತ್ತನುತಾಮುಗಮುತ್ಪ್ವನಃ ॥೨೧॥

ಅತಃ ಪರಂ ಮಯಾ ತಾವತ್ತತ್ರ ಗಂತುಂ ನ ಶಕ್ಯತೇ ।
ವಕ್ತುಮಪ್ಯಧುನಾ ಶಕ್ತಿಸ್ತದನಾಗಮನೇನ ಮೇ ॥೨೨॥

ಇವಳು ಪರ್ವತರಾಜನ ಪುತ್ರಿಯಾದರೂ ಸಹ, ಪರ್ವತದಂತೆ ಕಠಿನಸ್ವಭಾವದವಳಲ್ಲ. ಅನೇಕ ವೇಳೆಯಲ್ಲಿ ಪರ್ವತದಲ್ಲಿ ಮೃದುವಾದ ಬಳ್ಳಿಯು ಇರುವುದನ್ನು ನಾವು ನೋಡುವುದಿಲ್ಲವೇ! ॥೧೮॥

ಹಿಂದೆಯೇ ಗಿರಿಜೆಯ ಶರೀರವು ತಪೋನುಷ್ಠಾನದಿಂದ ಬೆಂದು ಬಳಲಿದ್ದಿತು. ಈಗಲಾದರೋ ಮಾರ್ಗಾಯಾಸದಿಂದ ಇನ್ನೂ ಬಹಳವಾಗಿ ಬಳಲಿರಬಹುದು ॥೧೯॥

ತಪಸ್ಸಿನಿಂದ ಬೆಂದು ಬಳಲಿದ ಅವಳ ದೇಹವು ಇನ್ನೂ ಪುಷ್ಟವಾಗಿರಲಾರದು. ಅದರಿಂದಲೇ ಮಾರ್ಗದಲ್ಲಿ ಹೆಚ್ಚು ಆಯಾಸಗೊಂಡಿರುವಳು. ॥೨೦॥

ಹಿಂದೆ ಅವಳು ಅತಿ ಕಠಿಣವಾದ ತಪಸ್ಸನ್ನಾಚರಿಸಿದಳು. ಅದರಿಂದಲೇ ನಿಜವಾಗಿಯೂ ಅವಳ ದೇಹವು ತುಂಬಾ ಕೃಶವಾಯಿತು. ॥೨೧॥

ಆದುದರಿಂದ ನಾನು ಅವಳಿದ್ದಲ್ಲಿಗೆ ಹೋಗಲಾರೆ. ದೇವಿಯು ನನ್ನಲ್ಲಿಗೆ ಬರದಿರುವುದರಿಂದ ನಾನು ಮಾತನಾಡಲೂ ಸಹ ಅಸಮರ್ಥನಾಗಿರುವೆನು. ॥೨೨॥

ನ ತದಾಪ್ತಮುಖಾದ್ವಾರ್ತಾ ಕ್ವಾಪಿ ನ ಶ್ರೂಯತೇ ಮಯಾ।
ಕಸ್ಯಾಪ್ಯಾಗಮನಂ ನಾತ್ರ ಯತೋ ದೂರತರಂ ಸ್ಥಲಂ ॥೨೩॥

ಆವಾಸೋಽಪ್ಯುಚಿತೋ ನಾತ್ರ ವಾರ್ತಾನಾಗಮನಾದಿಹ।
ಯತ್ರ ವಾರ್ತಾಪ್ರಸಾರಃ ಸ್ಯಾತ್ತತ್ರಾವಸ್ಥಾನಮೀಪ್ಸಿತಂ ॥೨೪॥

ಪ್ರತಿಕ್ಷಣಂ ಪ್ರಿಯಾವಾರ್ತಾ ಪ್ರಿಯೇಣ ಶ್ರೂಯತೇ ಯದಿ।
ತದಾ ಪ್ರಿಯಾ ಪ್ರೀತಚಿತ್ತಾ ವಿಶ್ರಾಂತಿಮುಪಯಾಸ್ಯತಿ ॥೨೫॥

ಅವೈರಾಗ್ಯಾದಯಂ ಸರ್ವೋ ವಿಚಾರಃ ಕ್ರಿಯತೇಽಧುನಾ।
ಭಾರ್ಯಾಚರ್ಯಾವಿಚಾರೋಽಪಿ ವಿರಕ್ತಸ್ಯ ಕಥಂ ಭವೇತ್ ॥೨೬॥

ಕಿಂ ಚಾಪರಿಗ್ರಹಃ ಪೂರ್ವಂ ನ ಕೃತಃ ಸ ಕೃತೋ ಯದಿ।
ತತ್ಪಾಲನಪರಿತ್ಯಾಗೇ ಪ್ರತ್ಯವಾಯೋಽಪಿ ಜಾಯತೇ ॥೨೭॥

ಆಪ್ತಜನರ ಮೂಲಕವಾದರೂ ಅವಳ ವಾರ್ತೆಯು ನನಗೆ ಬರಲಿಲ್ಲ. ಆ ಸ್ಥಲವು ಬಹಳ ದೂರದಲ್ಲಿರುವುದರಿಂದ ಇಲ್ಲಿಗೆ ಅಲ್ಲಿಂದ ಬರುವವರೂ ಇಲ್ಲದಂತಾಗಿದೆ. ॥೨೩॥

ಯಾವ ವೃತ್ತಾಂತವೂ ಕೇಳಿಬರದಿರುವ ಈ ಸ್ಥಳದಲ್ಲಿ ವಾಸಿಸುವುದೇ ಅಷ್ಟೊಂದು ಯೋಗ್ಯವಾಗಿ ತೋರುವುದಿಲ್ಲ. ಏಕೆಂದರೆ ಯಾವ ಸ್ಥಳದಲ್ಲಿ ವೃತ್ತಾಂತಗಳು ಚೆನ್ನಾಗಿ ತಿಳಿದುಬರುವುವೋ ಆ ಸ್ಥಳದಲ್ಲಿಯೇ ವಾಸಿಸುವುದು ಉಚಿತ. ಆದ್ದರಿಂದ ಈಗ ನಾನು ಅಲ್ಲಿಗೆ ಹೋಗಬಯಸುತ್ತೇನೆ. ॥೨೪॥

ಪತಿಯು ಪ್ರತಿಕ್ಷಣದಲ್ಲಿಯೂ ತನ್ನ ಪ್ರೇಯಸಿಯ ಯೋಗಕ್ಷೇಮಗಳನ್ನು ವಿಚಾರಿಸುತ್ತಿದ್ದರೆ ಆಗ ಪ್ರಿಯತಮೆಯು ಪ್ರಸನ್ನಳಾಗಿ ಸುಖದಿಂದಿರುತ್ತಾಳೆ. ॥೨೫॥

ಸಂಸಾರದಲ್ಲಿ ವಿರಕ್ತಿಯು ಉಂಟಾಗದಿರುವುದರಿಂದ ಈಗ ಮನಸ್ಸಿನಲ್ಲಿ ಈ ವಿಚಾರತರಂಗಗಳು ಮೂಡುತ್ತಿವೆ. ಸಂಸಾರದಲ್ಲಿ ವೈರಾಗ್ಯವನ್ನು ತಾಳಿದವನಿಗೆ ಪತ್ನಿಯ ಯೋಗಕ್ಷೇಮವಿಚಾರಗಳು ಹೇಗೆತಾನೆ ಸಂಭವಿಸುವುವು? ॥೨೬॥

ಪಾಣಿಗ್ರಹಣವನ್ನೇ ಮಾಡದಿದ್ದಲ್ಲಿ ಈ ವಿಚಾರಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ಆದರೆ ನಾನು ಈ ಮೊದಲೇ ದೇವಿಯ ಪಾಣಿಗ್ರಹಣವನ್ನು ಮಾಡಿರುವೆನು.

ನ ಸಾಧ್ವೀ ಯುವತೀ ತ್ಯಾಜ್ಯಾ ತನ್ಮನೋರಕ್ಷಣಂ ಕ್ಷಣಂ ।
ಕ್ಷಣಾರ್ಧಂ ವಾ ಯದಿ ಕೃತಂ ತೇನ ನ ಪ್ರತ್ಯವೈತ್ಯಯಂ ॥೨೮॥

ಋತುಕಾಲಾಭಿಗಮನಂ ಬ್ರಹ್ಮಚರ್ಯಮಿತಿ ಶ್ರುತಂ ।
ತದಭಾವೇ ಪ್ರತ್ಯವೈತಿ ತೇನ ನೈವ ತಪಃ ಕ್ಷಯಃ ॥೩೦॥

ಪ್ರತ್ಯಕ್ಷತಃ ಶ್ರೂಯಮಾಣಾ ಪ್ರಜಾತಂತುಮಿತಿ ಶ್ರುತಿಃ ।
ಭಾರ್ಯಾಸಂಗಪರಿತ್ಯಾಗೇ ದೂನಾ ಕಿಂ ನ ಭವಿಷ್ಯತಿ ॥೩೧॥

ವಿಶೇಷತಸ್ತತಃ ಪ್ರಾಪ್ತಂ ಭರ್ತೃತ್ವಂ ತಸ್ಯ ಪಾಲನಂ ।
ಭಾರ್ಯಾಪಾಲನಮಾತ್ರೇಣ ತನ್ನ ತೇನ ವಿನಾ ಭವೇತ್ ॥೩೨॥

ಹಾಗೆ ಮಾಡಿದ ಮೇಲೆ ಪತ್ನಿಯನ್ನು ಸಂರಕ್ಷಿಸದೆ ಉಪೇಕ್ಷಿಸಿದರೆ, ಪಾಪವು ಸಂಘಟಿಸುವುದು. ॥೨೭॥

ಯೌವನಸಂಪನ್ನಳಾದ ಪತಿವ್ರತಾಸ್ತ್ರೀಯನ್ನು ಎಂದಿಗೂ ತ್ಯಾಗಮಾಡಬಾರದು. ಒಂದು ಕ್ಷಣವಾಗಲಿ, ಅರ್ಧಕ್ಷಣವಾಗಲಿ ಅವಳ ಮನಸ್ಸನ್ನು ಸಂತೋಷಪಡಿಸಿದ ಪುರುಷನಿಗೆ ಪಾಪಸಂಘಟನೆಯಿರುವುದಿಲ್ಲ. ॥೨೮॥

ಗೃಹಸ್ಥನು ಋತುಸ್ನಾನದಿನದಲ್ಲಿ ಸ್ತ್ರೀಸಂಗವನ್ನು ಮಾಡಿದರೆ, ಅದು ಬ್ರಹ್ಮಚರ್ಯವೆಂದೇ ಹೇಳಿಸಿಕೊಳ್ಳಲ್ಪಡುತ್ತದೆ. ಋತುಸ್ನಾನದಿನವನ್ನು ಬಿಟ್ಟು ಇತರ ಕಾಲಗಳಲ್ಲಿ ಸ್ತ್ರೀಸಂಗಮಾಡುವವನು ಪಾಪಿಯೆನಿಸುವನು. ಶಾಸ್ತ್ರವಿಹಿತವಾದ ಕಾಲದಲ್ಲಿ ಸಂಭೋಗಮಾಡುವುದರಿಂದ ಯಜ್ಞಯಾಗಜಪತಪಾದಿಗಳ ಪುಣ್ಯವು ಕ್ಷಯಿಸುವುದಿಲ್ಲ. ॥೩೦॥

ಮನುಷ್ಯನು ಸಂತತಿಯನ್ನು ವಿಚ್ಛೇದಗೊಳಿಸಬಾರದೆಂದು ವೇದದಲ್ಲಿ ಹೇಳಲ್ಪಟ್ಟಿರುತ್ತದೆ. ("ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ" ಎಂದು ಶ್ರುತಿವಾಕ್ಯವಿರುವುದು.) ಹೀಗಿರಲು, ಋತುಕಾಲದಲ್ಲಿ ಸ್ತ್ರೀಸಂಗವನ್ನು ಪರಿತ್ಯಜಿಸಿದರೆ ವೇದವಾಕ್ಯವನ್ನು ಉಲ್ಲಂಘಿಸಿದಂತಾಗುವುದಿಲ್ಲವೇ! ॥೩೧॥

ಪತ್ನಿಯನ್ನು ಸಂರಕ್ಷಿಸುವುವವನಾದುದರಿಂದಲೇ ಪತಿಗೆ ಭರ್ತಾ ಎಂಬ ಅನ್ವರ್ಥನಾಮಧೇಯವು ಪ್ರಾಪ್ತವಾಗಿರುತ್ತದೆ. (ಬಿಭರ್ತಿ-ಇತಿ-ಭರ್ತಾ ಎಂಬ ವ್ಯುತ್ಪತ್ತಿಯಿಂದ ಭರ್ತೃಶಬ್ದವು ನಿಷ್ಪನ್ನವಾಗಿರುತ್ತದೆ.) ಆದುದರಿಂದ ಪತಿಗೆ

ಗೌರೀ ವಿಶಾಲನಯನಾ ಭ್ರಮರಭ್ರಮಣೋತ್ಸವಃ ।
ತನ್ಮುಖಾಂಭೋಜಮಾಸಾದ್ಯ ಸದ್ಯಃ ಸ ಪ್ರತಿವರ್ಧತಾಂ ॥೩೩॥

ಮಯಾಪಿ ತಾವದಧುನಾ ತದಾಗಮನಹೇತವಃ ।
ನ ದೃಶ್ಯಂತೇ ತದ್ವಿಲಂಬೇ ಬೀಜಂ ಕಿಮಿತಿ ಚಿಂತ್ಯತೇ ॥೩೪॥

ಇತಿ ಸಂಚಿಂತ್ಯ ಸಸ್ಮಾರ ಕುಮಾರಂ ಗಣನಾಯಕಂ ;
ತತಃ ಪರಂ ಸ ವಿಘ್ನೇಶಃ ಸತ್ವರಂ ಹೃಷ್ಟಮಾನಸಃ ॥೩೫॥

ಸಂತೋಷಕಾರಣಂ ಕಿಂ ವಾ ವಿಲಕ್ಷಣಮಿಹಾಧುನಾ ।
ಆನಂದೋ ವರ್ಧತೇ ಸೋಽಯಂ ಸುಧಾನಿಧಿಪರಾಕ್ರಮಃ ॥೩೬॥

ಪ್ರಾಪ್ತವಾಗಿರುವ ಈ ಭರ್ತೃಶಬ್ದವು ಅವನು ಪತ್ನಿಯನ್ನು ಸಂರಕ್ಷಿಸಿದರೇ ಸಾರ್ಥಕವಾಗುವುದು. ॥೩೨॥

ವಿಶಾಲವಾದ ನೇತ್ರಗಳಿಂದ ಕೂಡಿರುವ ಗಿರಿಜೆಯು ಭ್ರಮರದಂತೆ ಕಪ್ಪಾಗಿರುವ ತನ್ನ ಕಣ್ಣುಗುಡ್ಡೆಗಳಿನ್ನು ತಿರುಗಿಸಿ ಆನಂದವನ್ನುಂಟುಮಾಡುತ್ತಲಿದ್ದಳು. ಅವಳ ಮುಖಾರವಿಂದವನ್ನು ನೋಡುವುದರಿಂದ ಶೀಘ್ರದಲ್ಲಿಯೇ ಆ ಆನಂದವು ವೃದ್ಧಿಯನ್ನೈದುವುದು. ॥೩೩॥

ಈಗಲಾದರೋ ನನಗೆ ಪಾರ್ವತಿಯು ಆಗಮನದ ಚಿಹ್ನೆಗಳೂ ತೋರಿಬರುವುದಿಲ್ಲ. ಆದುದರಿಂದ ಅವಳ ವಿಲಂಬಕ್ಕೆ ಕಾರಣವೇನಿರಬಹುದೆಂದು ಚಿಂತಿಸುತ್ತೇನೆ.” ॥೩೪॥

ಹೀಗೆಂದು ಯೋಚಿಸಿ, ಶಿವನು ಪುತ್ರನಾದ ಗಣೇಶನನ್ನು ಸ್ಮರಿಸಿದನು. ತರುವಾಯ ವಿಘ್ನರಾಜನಾದ ಗಣೇಶನು ಮನಸ್ಸಂತೋಷವುಳ್ಳವನಾಗಿ, ಶಿವನ ಬಳಿಗೆ ಹೋಗಲು ಆತುರಗೊಂಡು ಹೀಗೆಂದು ಯೋಚಿಸಿದನು. ॥೩೫॥

“ ನನಗೀಗ ಅಪೂರ್ವವಾದ ಸಂತೋಷವಾಗುತ್ತಿರುವುದು. ಇದಕ್ಕೆ ಕಾರಣವೇನಿರಬಹುದು ? ನನಗುಂಟಾಗುತ್ತಿರುವ ಈ ಆನಂದವು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನೈದುತ್ತಿರುವುದು. ॥೩೬॥

ಪ್ರಾಯಃ ಸ್ಮರಹರಃ ಕಿಂ ಮಾಂ ಸಸ್ಮಾರ ಸ್ಮೇರಪೂರ್ವಕಂ ।
ಅನ್ಯಥಾ ಕಥಮೇತಾವಾನಾನಂದಾಬ್ಧಿಃ ಪ್ರವರ್ತತೇ ॥೩೭॥

ಚಿಹ್ನಾನ್ಯಪಿ ಮನೋಜ್ಞಾನಿ ದೃಶ್ಯಂತೇ ಶಿವದರ್ಶನೇ ।
ಸಾಂಬದರ್ಶನಮಾತ್ರೇಣ ಭವಿಷ್ಯತಿ ನ ಸಂಶಯಃ ॥೩೮॥

ಪುಣ್ಯಾನಾಂ ಪರಿಪಾಕೋಽಯಮಧುನಾ ಸಮುಪಸ್ಥಿತಃ ।
ತತ್ಪಾದಪದ್ಮಂ ಭಕ್ತ್ಯಾದ್ಯ ದೃಷ್ಟ್ವಾ ಪ್ರೀತೋ ಭವಾಮ್ಯಹಂ ॥೩೯॥

ವೇದಾಂತೈರಪಿ ತತ್ತ್ವಾವದದೃಷ್ಟಂ ಕಷ್ಟನಾಶನಂ ।
ದ್ರಷ್ಟವ್ಯಮಧುನಾ ರಮ್ಯಂ ರಮಣೀಯಮನುತ್ತಮಂ ॥೪೦॥

ರಮಣೀಯಾನಿ ದೃಷ್ಟಾನಿ ವಸ್ತೂನಿ ವಿವಿಧಾನ್ಯಪಿ ।
ನ ತತ್ತುಲ್ಯಂ ಕ್ವಾಪಿ ದೃಷ್ಟಂ ದುರದೃಷ್ಟವಿನಾಶಕಂ ॥೪೧॥

ಪ್ರಾಯಶಃ ಅನಂಗಶತ್ರುವಾದ ಶಿವನು ಮಂದಹಾಸಯುಕ್ತನಾಗಿ ನನ್ನನ್ನು ಸ್ಮರಿಸಿರಬಹುದೇ ! ಹಾಗಿಲ್ಲದಿದ್ದಲ್ಲಿ ನನಗೆ ಅಪರಿಮಿತವಾದ ಈ ಆನಂದವುಂಟಾಗಲು ಕಾರಣವೇನು ? ॥೩೭॥

ಶಿವದರ್ಶನವನ್ನು ಸೂಚಿಸುವ ಅನೇಕ ಶುಭಶಕುನಗಳು ಕಾಣಿಸುತ್ತಿವೆ. ಆದುದರಿಂದ ನಿಜವಾಗಿಯೂ ನನಗೆ ಅರ್ಧನಾರೀಶ್ವರನಾದ ಶಿವನ ದರ್ಶನವು ಈಗಲೇ ಲಭಿಸುವುದು. ॥೩೮॥

ನನಗೀಗ ಜನ್ಮಜನ್ಮಾಂತರಗಳಲ್ಲಿ ಆಚರಿಸಿದ ಪುಣ್ಯಕರ್ಮಗಳ ಪರಿಪಕ್ವಾವಸ್ಥೆಯು ಈಗ ಸಂಭವಿಸಿರುತ್ತದೆ. ಈ ದಿವಸ ಶಿವನ ಅಡಿದಾವರೆಗಳನ್ನು ಭಕ್ತಿಪೂರ್ವಕವಾಗಿ ಸಂದರ್ಶಿಸಿ ತೃಪ್ತಿಯನ್ನು ಹೊಂದುವೆನು. ॥೩೯॥

ಶಿವನ ಆ ಪಾದಪದ್ಮಗಳ ಸ್ವರೂಪವನ್ನು ವೇದಾಂತಗಳೂ ತಿಳಿಯಲಾರವು. ಪಾಪನಾಶಕವೂ, ಶ್ರೇಷ್ಠವೂ ಮತ್ತು ಸುಂದರವೂ ಆದ ಶಿವನ ಪಾದಕಮಲವನ್ನು ನೋಡುವ ಅವಕಾಶವು ಈಗ ಲಭಿಸಿರುವುದು. ॥೪೦॥

ಇದುವರೆಗೆ ಸುಂದರವಾದ ಮತ್ತು ವಿಧವಿಧವಾದ ಎಷ್ಟೋ ಪದಾರ್ಥಗಳನ್ನು ನೋಡಿರುವೆನು. ಆದರೆ ದೌರ್ಭಾಗ್ಯವನ್ನು ನಾಶಮಾಡುವ ಶಿವಪಾದಗಳಿಗೆ ಸದೃಶವಾದ ಮತ್ತೊಂದು ವಸ್ತುವನ್ನು ಎಲ್ಲಿಯೂ ಕಾಣೆನು. ॥೪೧॥

ವಾಂಛಂತಿ ಯತ್ಪದಾಂಭೋಜಂ ದ್ರಷ್ಟುಂ ನಾರಾಯಣಾದಯಃ ।
ತೈರ್ನ ದೃಷ್ಟಂ ನ ಕೇನಾಪಿ ದ್ರಷ್ಟವ್ಯಮಧುನಾ ಪರಂ ॥೪೨॥

ತಪಸಾ ನಾತಿಘೋರೇಣ ಧರ್ಮೈರ್ವಾ ವಿವಿಧೈರಪಿ ।
ಪರಂ ತು ತದ್ಭವತ್ವದ್ಯ ಶಂಕರಾನುಗ್ರಹಾನ್ಮಮ ॥೪೩॥

ಇತ್ಯುಕ್ತ್ವಾ ಸತ್ವರಂ ಸಾಂಬಂ ಸ್ಮೃತ್ವಾ ಶಂಕರಪಾದುಕೇ ।
ಧ್ಯಾತ್ವಾ ಯಯೌ ಗಣಾಧೀಶಶ್ಶಿವಸನ್ನಿಧಿಮಾದರಾತ್ ॥೪೪॥

ತತಃ ಪ್ರಣಮ್ಯ ಬಹುಧಾ ಕೃತಾಂಜಲಿಪುಟಃ ಪ್ರಭುಂ ।
ಶಂಭುಂ ಸ್ತೋತುಂ ಮತಿಂ ಚಕ್ರೇ ಸರ್ವಾಭೀಷ್ಟಪ್ರದಾಯಕಂ॥೪೫॥

॥ ಗಣಾಧೀಶ ಉವಾಚ ॥

ನಮಸ್ತೇ ದೇವದೇವಾಯ ನಮಸ್ತೇ ರುದ್ರಮನ್ಯವೇ ।
ನಮಸ್ತೇ ಚಂದ್ರಚೂಡಾಯಾಪ್ಯುತೋತ ಇಷವೇ ನಮಃ ॥೪೬॥

ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳು ಶಿವನ ಅಡಿದಾವರೆಗಳನ್ನು ನೋಡಬಯಸುತ್ತಿರುವರು. ಅದು ಅವರಿಗೆ ಇದುವರೆಗೂ ಲಭಿಸಲಿಲ್ಲ. ಯಾರಿಗೂ ಲಭಿಸುವಂತೆಯೂ ಇಲ್ಲ. ಆದರೆ ಈಗ ನನಗೆ ಆ ಪಾದದರ್ಶನದ ಸುಯೋಗವು ಒದಗಿರುತ್ತದೆ. ||೪೨||

ಕಠಿನವಾದ ತಪಸ್ಸಿನಿಂದಾಗಲಿ ಅಥವಾ ಬಗೆಬಗೆಯ ಪುಣ್ಯಕರ್ಮಾಚರಣೆಗಳಿಂದಾಗಲಿ ಶಿವಪಾದದರ್ಶನವು ಲಭಿಸುವುದಿಲ್ಲ. ಆದರೆ ಈಗ ನನಗೆಮಾತ್ರ ಶಿವನ ಅನುಗ್ರಹದಿಂದ ಲಭಿಸುವಂತಿದೆ." ||೪೩||

ಎಂದು ಯೋಚಿಸಿ ಗಣಪತಿಯು ಅಂಬಾಸಹಿತನಾದ ಶಿವನನ್ನು ಸ್ಮರಿಸಿ, ಅವನ ಪಾದುಕೆಗಳನ್ನು ಧ್ಯಾನಿಸುತ್ತಾ ಶೀಘ್ರವಾಗಿ ಶಿವಸನ್ನಿಧಿಯನ್ನು ಕುರಿತು ತೆರಳಿದನು. ||೪೪||

ಬಳಿಕ ಅಂಜಲಿಬದ್ಧನಾಗಿ ಅನೇಕಬಾರಿ ಶಿವನನ್ನು ನಮಸ್ಕರಿಸಿ, ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವ ಪರಮೇಶ್ವರನನ್ನು ಹೀಗೆ ಸ್ತುತಿಸತೊಡಗಿದನು. ||೪೫||

"ಓ ದೇವೇಶನೇ, ನಿನಗೆ ನಮಸ್ಕರಿಸುವೆನು. ನಿನ್ನ ಕೋಪಕ್ಕೆ ನಮಸ್ಕಾರ.

ನಮಸ್ತೇ ಪಾರ್ವತೀಕಾಂತ ನಮಸ್ತೇ ಮೇರುಧನ್ವನೇ ।
ನಮಸ್ತೇ ಭಗವನ್ ಶಂಭೋ ಬಾಹುಭ್ಯಾಮುತ ತೇ ನಮಃ ॥೪೭॥

ಇಷುಃ ಶಿವತಮಾ ಯಾ ತೇ ತಯಾ ಮೃಡಯ ರುದ್ರ ಮಾಂ ।
ಶಿವಂ ಧನುರ್ಯದ್ಬಭೂವ ತೇನಾಪಿ ಮೃಡಯಾಧುನಾ ॥೪೮॥

ಶರವ್ಯಾ ಯಾ ಶಿವತಮಾ ತಯಾಪಿ ಮೃಡಯ ಪ್ರಭೋ ।
ಯಾ ತೇ ರುದ್ರ ಶಿವಾ ನಿತ್ಯಂ ಸರ್ವಮಂಗಳಸಾಧನಂ ॥೪೯॥

ತಯಾಭಿಚಾಕಶೀಹಿ ತ್ವಂ ತನುವಾ ಮಾಮುಮಾಪತೇ ।
ಅಘೋರಯಾಪಿ ತನುವಾ ರುದ್ರಾದ್ಯಾ ಪಾಪಕಾಶಿನೀ ॥೫೦॥

ಚಂದ್ರಶೇಖರನಾದ ನಿನ್ನನ್ನೂ ಮತ್ತು ನಿನ್ನ ಬಾಣವನ್ನೂ ಸದಾ ನಮಸ್ಕರಿಸುವೆನು. (ನಿನ್ನ ಕೋಪವೂ ಮತ್ತು ನಿನ್ನ ಬಾಣವೂ ನನಗೆ ಯಾವ ತೊಂದರೆಯನ್ನೂ ಕೊಡದೇ ಇರಲಿ ಎಂದು ತಾತ್ಪರ್ಯ.) ॥೪೬॥

ಓ ಪಾರ್ವತೀಪತಿಯೇ, ನಿನಗೆ ನಮಸ್ಕಾರ. ನೀನು ತ್ರಿಪುರಸಂಹಾರದ ಸಮಯದಲ್ಲಿ ಮೇರುಪರ್ವತವನ್ನೇ ಧನುಸ್ಸನ್ನಾಗಿ ಉಪಯೋಗಿಸಿದೆ. ಷಡ್ಗುಣೈಶ್ವರ್ಯ ಸಂಪನ್ನನಾದ ನಿನ್ನನ್ನೂ ಮತ್ತು ನಿನ್ನ ತೋಳುಗಳನ್ನೂ ಈಗ ವಂದಿಸುವೆನು. ॥೪೭॥

ನಿನ್ನ ಕಲ್ಯಾಣದಾಯಕವೂ, ಶಾಂತತಮವೂ ಆದ ಬಾಣದಿಂದಲೂ ಮತ್ತು ಧನುಸ್ಸಿನಿಂದಲೂ ನನ್ನನ್ನು ಸುಖಿಯಾಗಿರಿಸು. ನಿನ್ನ ಭಕ್ತರ ವಿಷಯದಲ್ಲಿ ನಿನ್ನ ಧನುಸ್ಸೂ ಬಾಣವೂ ಶಾಂತವಾಗಿಯೇ ಇರಬೇಕಲ್ಲವೇ ! ॥೪೮॥

ಓ ಸ್ವಾಮಿಯೇ, ನಿನ್ನ ಬತ್ತಳಿಕೆಯು ಮಂಗಳಕರವೂ, ಶಾಂತವೂ ಆದದ್ದು. ಸಕಲ ಸೌಭಾಗ್ಯಗಳಿಗೂ ಸಾಧನವಾದ ಮತ್ತು ಆ ಹುಸಿಯಾಗದಿರುವ ಆ ಬತ್ತಳಿಕೆಯು ನನ್ನನ್ನು ಸುಖಿಯಾಗಿರಿಸಲಿ. ॥೪೯॥

ಉಮಾಪತಿಯೇ, ನೀನು ಭಕ್ತರನ್ನು ಅನುಗ್ರಹಿಸುವ ಶಕ್ತಿಯುಳ್ಳ ಅಘೋರವೆಂಬ ಹೆಸರಿನಿಂದ ಸೌಮ್ಯವಾದ ನಿನ್ನ ಶರೀರವನ್ನು ನನ್ನೆದುರಿಗೆ ವ್ಯಕ್ತಪಡಿಸುವವನಾಗು (ಶಿವನಿಗೆ ಘೋರಾ ಮತ್ತು ಶಿವಾ (ಅಘೋರಾ) ಎಂಬ ಹೆಸರುಳ್ಳ ಎರಡು ಆಕಾರಗಳಿವೆ. ಅವುಗಳಲ್ಲಿ ಭಕ್ತರನ್ನು ಅನುಗ್ರಹಿಸುವ ಸಮಯ

ಯಾ ತಯಾ ಮೃಡಯ ಸ್ವಾಮಿನ್ ಸದಾ ಶಂತಮಯಾ ಪ್ರಭೋ ।
ಗಿರಿಶಂತ ಮಹಾರುದ್ರ ಹಸ್ತೇ ಯಾಮಿಷು ಮಸ್ತನೇ ॥೫೧॥

ಬಿಭರ್ಷಿ ತಾಂ ಗಿರಿತ್ರಾದ್ಯ ಶಿವಾಂ ಕುರು ಶಿವಾಪತೇ ।
ಶಿವೇನ ವಚಸಾ ರುದ್ರ ನಿತ್ಯಂ ತ್ವಾಚ್ಛಾದಯಾಮಸಿ ॥೫೨॥

ತ್ವದ್ಭಕ್ತಿಪರಿಪೂತಾಂಗಂ ಮಾ ಹಿಂಸೀಃ ಪುರುಷಂ ಜಗತ್ ।
ಯನ್ನಃ ಶರ್ವ ಜಗತ್ಸರ್ವಮಯಕ್ಷ್ಮ ಸುಮನಾಭವತ್ ॥೫೩॥

ದಲ್ಲಿ ಅಘೋರಾ ಎಂಬ ಆಕಾರವನ್ನು ತಾಳಿ ಸೌಮ್ಯನಾಗಿ ಕಾಣಿಸುವನೆಂದೂ, ದುಷ್ಟರನ್ನು ನಿಗ್ರಹಿಸುವಾಗ ಘೋರಾ ಎಂಬ ಆಕಾರವನ್ನು ತಾಳಿ ಭಯಂಕರನಾಗಿ ಕಾಣಿಸುವನೆಂದೂ ರುದ್ರಸೂಕ್ತದಲ್ಲಿ ಹೇಳಲ್ಪಟ್ಟಿರುತ್ತದೆ.) (“ರುದ್ರೋ ವಾ ಏಷ ಯದಗ್ನಿ ಸ್ತಸ್ಯೈತೇ ತನುವೌ ಘೋರಾನ್ಯಾ ಶಿವಾನ್ಯಾ” ಎಂಬ ಶ್ರುತಿಯಿದೆ). ॥೫೦॥

ಕೈಲಾಸವಾಸಿಯಾಗಿ ಸದಾ ಪ್ರಾಣಿಗಳಿಗೆ ಸೌಖ್ಯವನ್ನುಂಟುಮಾಡುವ ಸ್ವಾಮಿಯೇ, ನಿನ್ನ ಅಘೋರವೆಂಬ ಸಂಜ್ಞೆಯುಳ್ಳ ಆಕಾರದಿಂದ ನಮ್ಮನ್ನು ಅನವರತವೂ ಸುಖಿಗಳನ್ನಾಗಿರಿಸು. ಪ್ರಾಣಿಗಳಿಗೆ ಸುಖವನ್ನುಂಟುಮಾಡಲು ಕೈಲಾಸದಲ್ಲಿ ವಾಸಿಸುವ ಪರಶಿವನೇ, ನೀನು ವೈರಿಗಳನ್ನು ನಾಶಮಾಡುವುದಕ್ಕೋಸ್ಕರ ಕೈಯ್ಯಲ್ಲಿ ಧರಿಸಿದ ಆ ಬಾಣದಿಂದಲೂ ನಮಗೆ ಸೌಖ್ಯವನ್ನು ದಯಪಾಲಿಸು. ॥೫೧॥

ಉಮಾಕಾಂತನೇ! ಕೈಲಾಸಪರ್ವತವನ್ನು ಸಂರಕ್ಷಿಸುವ ನೀನು, ಅಭಯಪ್ರದವಾದ ಬಾಣವನ್ನು ಕೈಯ್ಯಲ್ಲಿ ಧರಿಸಿರುವೆ. ನಿನ್ನ ಸಾನ್ನಿಧ್ಯವನ್ನು ಪಡೆಯುವುದಕ್ಕೋಸ್ಕರ ನಾವು ನಿನ್ನನ್ನು ಮಂಗಳಕರವಾದ ಮತ್ತು ಸ್ತೋತ್ರರೂಪವಾದ ಮಾತುಗಳಿಂದ ಪ್ರಾರ್ಥಿಸುವೆವು. ॥೫೨॥

ನಿನ್ನಲ್ಲಿ ಭಕ್ತಿಯಿಟ್ಟು ಪವಿತ್ರರಾಗಿರುವ ಮನುಷ್ಯ, ಪಶು ಮುಂತಾದುವುಗಳಿಂದ ಕೂಡಿದ ಈ ಪ್ರಪಂಚವನ್ನು ಹಿಂಸೆಗೊಳಿಸಬೇಡ. ಇದಲ್ಲದೇ ಈ ಮನುಷ್ಯ ಪಶ್ವಾದಿ ಪ್ರಪಂಚವನ್ನು ರೋಗರಹಿತವಾದುದನ್ನಾಗಿಯೂ, ಪ್ರಸನ್ನವಾದ ಮನಸ್ಸುಳ್ಳದುದನ್ನಾಗಿಯೂ ಮಾಡುವವನಾಗು. ॥೫೩॥

ಯಥಾ ತಥಾವ ಮಾಂ ರುದ್ರ ತದನ್ಯದಪಿ ಮೇ ಪ್ರಭೋ ।
ರುದ್ರ ತ್ವಂ ಪ್ರಥಮೋ ದೈವ್ಯೋ ಭಿಷಕ್ ಪಾಪವಿನಾಶಕಃ ॥೩೪॥

ಅಧಿವಕ್ತ್ರಾಧ್ಯವೋಚನ್ಮಾ ಭವಲಿಂಗಾರ್ಚಕಂ ಮುದಾ ।
ಅಹೀನ್ ಸರ್ವಾನ್ಯಾತುಧಾನ್ಯಃ ಸರ್ವಾ ಅಪ್ಯದ್ಯ ಜಂಭಯನ್ ॥೩೫॥

ಅಸೌ ತಾಮ್ರೋಽರುಣೋ ಬಭ್ರುಃ ನೀಲಗ್ರೀವೋ ಸುಮಂಗಲಃ ।
ವಿಲೋಹಿತೋಽಸ್ತ್ಯಯಂ ಶಂಭೋ ತ್ವದಧಿಷ್ಠಾನಮೇವ ಹಿ ॥೩೬॥

ನಮೋ ನಮಸ್ತೇ ಭಗವನ್ನೀಲಗ್ರೀವಾಯ ಮೀಢುಷೇ ।
ಸಹಸ್ರಾಕ್ಷಾಯ ಶುದ್ಧಾಯ ಸಚ್ಚಿದಾನಂದಮೂರ್ತಯೇ ॥೩೭॥

ಅದರಂತೆಯೇ ನನ್ನನ್ನು ಸಹ ಕಾಪಾಡು. ಓ, ರುದ್ರನೇ! ನಿನ್ನ ಧ್ಯಾನ ಮಾತ್ರದಿಂದಲೇ ಸಕಲ ಜನರ ರೋಗಗಳನ್ನು ನಾಶಮಾಡುವುದರಿಂದ, ನೀನು ರೋಗಿಗಳಾದ ನಮಗೆ ಚಿಕಿತ್ಸಕನಾಗಿರುತ್ತೀಯೆ. ಇದಲ್ಲದೇ ನೀನು ದೇವತೆಗಳ ಲ್ಲೆಲ್ಲಾ ಮೊದಲನೆಯವನು, ಮತ್ತು ದೇವತೆಗಳ ಅಪರಾಧಗಳನ್ನು ಕ್ಷಮಿಸುವವನೂ ಆಗಿರುವೆಯಲ್ಲವೆ! ॥೩೪॥

ಓ, ರುದ್ರನೇ, ಶಿವಲಿಂಗಾರ್ಚಕನಾದ ನನಗೆ ಸರ್ವಜನರ ಮುಂಭಾಗದಲ್ಲಿ ಧೈರ್ಯದಿಂದ ಸಂಭಾಷಿಸುವ ಸಾಮರ್ಥ್ಯವನ್ನು ದಯಪಾಲಿಸಿ, ನನ್ನನ್ನು ಭಾಷಣ ಕಾರರಲ್ಲಿ ಅಗ್ರಗಣ್ಯನನ್ನಾಗಿ ಮಾಡು. ಅದರಿಂದಲೇ ನನ್ನನ್ನು ಸರ್ವಶ್ರೇಷ್ಠನೆಂದೆ ನಿಸು. ಮತ್ತು ಕ್ರೂರಜಾತಿಗೆ ಸೇರಿರುವ, ಸರ್ಪ, ವ್ಯಾಘ್ರ ಮುಂತಾದ ಪ್ರಾಣಿಗಳನ್ನೂ ರಾಕ್ಷಸರನ್ನೂ ಸಂಹರಿಸಿ, ನಮಗೆ ಅವುಗಳಿಂದುಂಟಾಗುವ ಬಾಧೆಯನ್ನು ಹೋಗ ಲಾಡಿಸು. ॥೩೫॥

ಮಂಗಳಸ್ವರೂಪನೂ, ವಿಷಸೇವನದಿಂದ ಕಪ್ಪಾದ ಕಂಠವುಳ್ಳವನೂ ಆದ ನೀನು ಸೂರ್ಯಮಂಡಲದ ಮಧ್ಯಭಾಗದಲ್ಲಿ ಆದಿತ್ಯಸ್ವರೂಪದಿಂದ ಜಗತ್ತನ್ನು ಬೆಳಗುತ್ತಿರುವೆ. ಆ ಆದಿತ್ಯನು ಉದಯಕಾಲದಲ್ಲಿ ಅತ್ಯಂತ ಕೆಂಪಾದ ಬಣ್ಣವುಳ್ಳವ ನಾಗಿಯೂ, ಪುನಃ ಅಸ್ತನಾಗುವ ವೇಳೆಯಲ್ಲಿ ರಕ್ತನಾಗಿಯೂ ಕಾಣಿಸಿಕೊಳ್ಳುವನು. ನಿನ್ನ ಅಂಶವೇ ಆ ಆದಿತ್ಯನೆಂದು ಪ್ರಸಿದ್ಧವಾಗಿರುವುದಲ್ಲವೆ! ॥೩೬॥

ನೀನು ಮೇಘರೂಪದಿಂದ ಇರುವವನಾಗಿ ವೃಷ್ಟಿಯನ್ನು ಸುರಿಸುವೆ. ಇಂದ್ರನ ರೂಪದಿಂದ ಇದ್ದು, ಸಾವಿರ ನೇತ್ರಗಳಿಂದ ಯುಕ್ತನಾಗಿರುವೆ. ಪುಣ್ಯಪಾಪ

ಉಭಯೋರಾರ್ತ್ನಿರ್ಯೋರ್ಜ್ಯಾಯಾ ಧನ್ವನಸ್ತ್ವಂ ಪ್ರಮುಂಚತಾಂ ।
ಸಂಪ್ರಾಪ್ಯ ಧನುರನ್ಯೇಷಾಂ ಭಯಾಯ ಪ್ರಭವಿಷ್ಯತಿ ॥೫೮॥

ಅಸ್ಮದ್ಭಯವಿನಾಶಾರ್ಥಮಧುನಾ ಭಯದ ಪ್ರಭೋ ।
ಯಾಶ್ಚ ತೇ ಹಸ್ತ ಇಷವಃ ಪರಾ ತಾ ಭಗವೋ ವಪ ॥೫೯॥

ಅವತತ್ಯ ಧನುಸ್ತತ್ತ್ವಂ ಸಹಸ್ರಾಕ್ಷ ಶತೇಷುಧೇ ।
ಮುಖಾ ನಿಶೀರ್ಯ ಶಲ್ಯಾನಾಂ ಶಿವೋ ನಃ ಸುಮನಾ ಭವ ॥೬೦॥

ವಿಜ್ಯಂ ಧನುರಿದಂ ಭೂಯಾದ್ವಿಶಲ್ಯೋ ಬಾಣವಾನಪಿ ।
ಅನೇಶನ್ನಿಷವೋಽಸ್ಯಾಸ್ಯಾಭುರಸ್ಯ ನಿಷಂಗಧಿಃ ॥೬೧॥

ಗಳ ಸಂಬಂಧವಿಲ್ಲದವನೂ, ಸಚ್ಚಿದಾನಂದಸ್ವರೂಪನೂ ನೀನೇ. ಅಂತಹ ನಿನಗೆ ನಮಸ್ಕಾರ. ॥೫೭॥

ಪರಶಿವನೇ, ನಿನ್ನ ಧನುಸ್ಸಿನ ಎರಡು ತುದಿಗಳನ್ನು ಎಳೆದಿರುವ ಮೌರ್ವಿಯನ್ನು ಸಡಿಲವನ್ನಾಗಿ ಮಾಡು. ಹಾಗೆ ಮಾಡದಿದ್ದರೆ ಸರ್ವರೂ ನಿನ್ನ ಧನುಸ್ಸಿಗೆ ಹೆದರಿ ನಡುಗುವರು. ॥೫೮॥

ಭಕ್ತರಿಗೆ ಅಭಯಪ್ರದನಾದ ಸ್ವಾಮಿಯೇ, ವೈರಿಗಳಿಂದ ನಮಗೆ ಉಂಟಾಗಿರುವ ಭಯವನ್ನು ಹೋಗಲಾಡಿಸುವುದಕ್ಕೋಸ್ಕರ, ನಿನ್ನ ಕೈಯಲ್ಲಿರುವ ಬಾಣಗಳನ್ನು ಅವರ ಮೇಲೆ ಪ್ರಯೋಗಿಸುವವನಾಗು. ॥೫೯॥

ಇಂದ್ರರೂಪವನ್ನು ಧರಿಸಿ ಸಾವಿರ ಕಣ್ಣುಗಳಿಂದ ಕೂಡಿರುವ ಈಶ್ವರನೇ, ನೂರಾರು ಬತ್ತಳಿಕೆಗಳನ್ನು ಧರಿಸಿರುವ ರುದ್ರನೇ, ನಿನ್ನ ಧನುಸ್ಸಿನ ಮೌರ್ವಿಯನ್ನು ಬಿಚ್ಚಿ ಕೆಳಗಿರಿಸಿ, ಮೊನೆಯಾದ ಬಾಣಗಳ ಅಗ್ರಗಳನ್ನು ಬತ್ತಳಿಕೆಯ ಒಳಗಿಟ್ಟು ನಮ್ಮಲ್ಲಿ ಪ್ರಸನ್ನನಾಗು. ॥೬೦॥

ಸ್ವಾಮಿಯೇ, ನಿನ್ನ ಧನುಸ್ಸು ಮೌರ್ವಿಯಿಂದ ರಹಿತವಾಗಲಿ. ಮೌರ್ವಿಯನ್ನು ಕಟ್ಟಿ, ಅದನ್ನು ಸಿದ್ಧಪಡಿಸದೇ ಇರು. ನಿನ್ನ ಬಾಣಗಳು ಬತ್ತಳಿಕೆಯ ಹೊರಗೆ ಬರದೇ ಒಳಭಾಗದಲ್ಲಿಯೇ ಗುಪ್ತವಾಗಿರಲಿ. ಅವು ಬತ್ತಳಿಕೆಯ ಒಳಭಾಗದಲ್ಲಿಯೇ ಇದ್ದು, ನಮ್ಮನ್ನು ಕೊಲ್ಲಲು ಅಸಮರ್ಥವಾಗಲಿ. ಮತ್ತು ನಿನ್ನ ಆ ಬಾಣಾಸನವಾದ ಬತ್ತಳಿಕೆಯು ಬಾಣಧಾರಣೆಗೆ ಅಸಮರ್ಥವೆನಿಸಲಿ. ॥೬೧॥

ಕಪರ್ದಿನೋ ಮಹೇಶಸ್ಯ ಯದಿ ನಾಭೂರ್ನಿಷಂಗಧೀಃ ।
ಇಷವೋಽಪಿ ಸಮರ್ಥಾಶ್ಚೇತ್ತಾಸ್ವಗ್ರತ್ವೇನ ಭಯಂ ಭವೇತ್ ॥೬೨॥

ಯಾ ತೇ ಹೇತಿರ್ಧನುರ್ಹಸ್ತೇ ಮೀಢುಷ್ಟಮ ಬಭೂವ ಯಾ ।
ತಯಾಸ್ಮಾನ್ವಿಶ್ವತಸ್ತೇನ ಪಾಲಯ ತ್ವಮಯಕ್ಷ್ಮಯಾ ॥೬೩॥

ಅನಾತತಾಯಾಯುಧಾಯ ನಮಸ್ತೇ ಧೃಷ್ಣವೇ ನಮಃ ।
ಬಾಹುಭ್ಯಾಂ ಧನ್ವನೇ ಶಂಭೋ ನಮೋ ಭೂಯೋ ನಮೋ ನಮಃ ॥೬೪॥

ಪರಿ ತೇ ಧನ್ವನೋ ಹೇತಿರ್ವಿಶ್ವತೋಽಸ್ಮಾನ್ ವೃಣಕ್ತು ಸಃ ।
ಇಷುಧಿಸ್ತವ ಯಸ್ತಾವದಸ್ಮದಾರೇ ನಿಧೇಹಿ ತಂ ॥೬೫॥

ಹಿರಣ್ಯಬಾಹವೇ ತುಭ್ಯಂ ಸೇನಾನ್ಯೇ ತೇ ನಮೋ ನಮಃ ।
ದಿಶಾಂ ಚ ಪತಯೇ ತುಭ್ಯಂ ಪಶೂನಾಂ ಪತಯೇ ನಮಃ ॥೬೬॥

ಜಟಾಧಾರಿಯಾದ ನಿನ್ನ ಧನುರ್ಬಾಣಗಳು ಸದಾ ಪ್ರಯೋಗಿಸಲು ಸಿದ್ಧವಾಗಿಯೇ ಇದ್ದರೂ, ಅಶಾಂತವಾಗಿದ್ದರೆಮಾತ್ರ ನಮಗೆ ಅದರಿಂದ ಭಯವುಂಟಾಗುವುದು. ॥೬೨॥

ಕಾಮಿತಾರ್ಥಪ್ರದನೇ, ನಿನ್ನ ಹಸ್ತದಲ್ಲಿರುವ ಖಡ್ಗದಿಂದಲೂ, ಧನುಸ್ಸಿನಿಂದಲೂ, ನಮ್ಮನ್ನೂ, ನಿಖಿಲ ಜಗತ್ತನ್ನೂ ರೋಗಾದ್ಯುಪದ್ರವಗಳಿಲ್ಲದಂತೆ ಸಂರಕ್ಷಿಸು. ॥೬೩॥

ಓ ರುದ್ರನೇ, ಲಕ್ಷ್ಯವನ್ನು ಭೇದಿಸಲು ಸಮರ್ಥವೂ, ಧನುಸ್ಸಿನಲ್ಲಿ ಸೇರಿಸಲಾಗದುದೂ ಆದ ನಿನ್ನ ಅನುಗ್ರಹರೂಪವಾದ ಆಯುಧಕ್ಕೆ ನಮಸ್ಕರಿಸುವೆನು. ಅಲ್ಲದೆ ಬಾಣಪ್ರಯೋಗಸಾಧಕಗಳಾದ ನಿನ್ನ ಬಾಹುಗಳಿಗೂ ವಂದಿಸುವೆನು. ॥೬೪॥

ರುದ್ರನೇ, ನಿನ್ನ ಧನುಸ್ಸೂ ಮತ್ತು ಬಾಣವು, ನಮ್ಮನ್ನೂ ನಿಖಿಲ ಜಗತ್ತನ್ನೂ ಬಾಧಿಸದಂತೆ ಮಾಡು. ಮತ್ತು ನಿನ್ನ ಧನುಸ್ಸನ್ನೂ, ಬತ್ತಳಿಕೆಯನ್ನೂ ದೂರವಾಗಿರಿಸು. ॥೬೫॥

ನಿನ್ನ ಬಾಹುಗಳು ಸುವರ್ಣಾಭರಣಗಳಿಂದ ಕೂಡಿದವುಗಳು. ನೀನು ಯುದ್ಧದಲ್ಲಿ ಸೇನಾಪತಿಯರೂಪವನ್ನು ತಾಳುವೆ. ಸಕಲ ದಿಕ್ಕುಗಳಿಗೆ ಅಧಿಪತಿಯೂ ಪಶುಪತಿಯೂ ಎನಿಸಿರುವೆ. ಇಂತಹ ನಿನಗೆ ನಮಸ್ಕಾರ. ॥೬೬॥

ತ್ವಿಷೀಮತೇ ನಮಸ್ತುಭ್ಯಂ ನಮಸ್ಸಸ್ಪಿಂಜರಾಯ ತೇ ।
ನಮಃ ಪಥೀನಾಂ ಪತಯೇ ಬಭ್ಲುಶಾಯ ನಮೋ ನಮಃ ॥೧೭॥

ನಮೋ ವಿವ್ಯಾಧಿನೇಽನ್ನಾನಾಂ ಪತಯೇ ಪ್ರಭವೇ ನಮಃ ।
ನಮಸ್ತೇ ಹರಿಕೇಶಾಯ ರುದ್ರಾಯೋಪವೀತಿನೇ ॥೧೮॥

ಪುಷ್ಟಾನಾಂ ಜಗತೇ ತುಭ್ಯಂ ಜಗತಾಂ ಪತಯೇ ನಮಃ ।
ಸಂಸಾರಹೇತಿರೂಪಾಯ ರುದ್ರಾಯಾತತಾಯಿನೇ ॥೧೯॥

ಕ್ಷೇತ್ರಾಣಾಂ ಪತಯೇ ತುಭ್ಯಂ ಸೂತಾಯ ಸುಕೃತಾತ್ಮನೇ ।
ಅಹಂತ್ಯಾಯ ನಮಸ್ತುಭ್ಯಂ ವನಾನಾಂ ಪತಯೇ ನಮಃ ॥೨೦॥

ರೋಹಿತಾಯ ಸ್ಥಪತಯೇ ಮಂತ್ರಿಣೇ ವಾಣಿಜಾಯ ಚ ।
ಕಕ್ಷಾಣಾಂ ಪತಯೇ ತುಭ್ಯಂ ನಮಸ್ತುಭ್ಯಂ ಭುವಂತಯೇ ॥೨೧॥

ಸ್ವತಃ ಪ್ರಕಾಶಮಾನನಾಗಿಯೂ, ಎಳೆಯದಾದ ಹುಲ್ಲಿನಂತೆ ಹಳದಿಯ ಬಣ್ಣದಿಂದ ಮಿಶ್ರಿತವಾದ ಕೆಂಪುವರ್ಣವುಳ್ಳದ್ದಾಗಿಯೂ ಇರುವ ನಿನ್ನಆಕಾರಕ್ಕೆ ನಮಸ್ಕರಿಸುವೆನು. ಶಾಸ್ತ್ರೋಕ್ತವಾದ ದಕ್ಷಿಣೋತ್ತರಮಾರ್ಗಗಳಿಗೂ, ನೀನು ಅಧಿಪತಿಯಾಗಿರುವೆ. ವೃಷಭವಾಹನನೆನಿಸಿರುವೆ. ಇಂತಹ ನಿನ್ನನ್ನು ನಮಸ್ಕರಿಸುವೆನು. ||೧೭||

ವೈರಿಗಳನ್ನು ವಿಶೇಷವಾಗಿ ಸದೆಬಡಿಯುವವನೂ, ಪ್ರಾಣಿಗಳ ಆಹಾರರಕ್ಷಕನೂ, ವೃದ್ಧಾವಸ್ಥೆಯಲ್ಲಿಯೂ ಕಪ್ಪುಕೂದಲುಳ್ಳವನೂ (ವಾರ್ಧಕ್ಯವಿಲ್ಲದವನೂ) ಮಂಗಳಾರ್ಥವಾದ ಯಜ್ಞೋಪವೀತವನ್ನು ಧರಿಸಿದವನೂ ಆದ ನಿನಗೆ ನಮಸ್ಕಾರ. ||೧೮||

ಜಗನ್ನಾಥನಾದ ನೀನು ಸದ್ಗುಣಸಂಪನ್ನರಾದ ಪುರುಷರಿಗೆ ಅಧಿಪತಿಯಾಗಿರುವೆ. ಮತ್ತು ದುಃಖಕ್ಕೆ ಆಯುಧದಂತಿದ್ದು ಅದನ್ನು ಹೋಗಲಾಡಿಸುವೆ. ಅಂತಹ ನಿನಗೆ ನಮಸ್ಕಾರ. ||೧೯||

ಸಮಸ್ತ ಕ್ಷೇತ್ರಗಳಿಗೂ ಪತಿಯೆನಿಸಿದ ನಿನ್ನನ್ನು ವಂದಿಸುವೆನು. ಸಾರಥಿಸ್ವರೂಪನೂ, ಪರಿಶುದ್ಧಸ್ವಭಾವವುಳ್ಳವನೂ ಇತರರಿಂದ ಸಂಹರಿಸಲಶಕ್ಯನೂ ಆದ ನಿನಗೆ ಎರಗುವೆನು. ನೀನು ಅರಣ್ಯಗಳಿಗೂ ಒಡೆಯನಾಗಿರುವೆ. ||೨೦||

ರಕ್ತವರ್ಣವಿಶಿಷ್ಟನೂ, ಜಗತ್ಪ್ರಭುವೂ, ಮಂತ್ರಾಲೋಚನಕುಶಲನೂ, ವೈಶ್ಯರಿಗೆಲ್ಲಾ ಸ್ವಾಮಿಯೂ ಆದ ನಿನಗೆ ನಮಸ್ಕಾರ. ಅರಣ್ಯದಲ್ಲಿರುವ ಲತಾ

ತದ್ವಾರಿವಸ್ಕೃತಾಯಾಸ್ತು ಮಹಾದೇವಾಯ ತೇ ನಮಃ ।
ಓಷಧೀನಾಂ ಚ ಪತಯೇ ನಮಸ್ತುಭ್ಯಂ ಮಹಾತ್ಮನೇ ॥೨೨॥

ಉಚ್ಚೈರ್ಘೋಷಾಯ ಧೀರಾಯ ಧೀರಾಕ್ರಂದಯತೇ ನಮಃ ।
ಪತ್ತೀನಾಂ ಪತಯೇ ತುಭ್ಯಂ ಕೃತ್ಸ್ನವೀತಾಯ ತೇ ನಮಃ ॥೨೩॥

ಧಾವತೇ ಧವಲಾಯಾಪಿ ಸತ್ವಾನಾಂ ಪತಯೇ ನಮಃ ।
ನಮಸ್ತೇ ಸಹಮಾನಾಯ ತುಭ್ಯಂ ವಿವ್ಯಾಧಿನೇ ನಮಃ ॥೨೪॥

ಆವ್ಯಾಧಿನೀನಾಂ ಪತಯೇ ಕಕುಭಾಯ ನಿಷಂಗಿಣೇ ।
ಸೇನಾನಾಂ ಪತಯೇ ತುಭ್ಯಂ ದಿವ್ಯೇಷುಧಿಮತೇ ನಮಃ ॥೨೫॥

ಗುಲ್ಮಾದಿಗಳನ್ನು ಕಾಪಾಡುವವನೂ, ನೀನೇ ಆಗಿ ಸಕಲ ಭೂಮಿಪಾಲಕನೆನಿಸಿರುವೆ. ಅಂತಹ ನಿನಗೆ ನಮಸ್ಕಾರ. ||೨೧||

ಭಕ್ತರಿಗೆ ಧನಕನಕಾದಿಗಳನ್ನು ಅನುಗ್ರಹಿಸುವವನೂ, ಮತ್ತು ದೇವತೆಗಳ ಒಡೆಯನೂ ನೀನೇ ಆಗಿರುತ್ತೀಯೆ. ಓಷಧಿಗಳಿಗೆ ಸ್ವಾಮಿಯೆನಿಸಿ, ಎಲ್ಲೆಡೆಯಲ್ಲಿಯೂ ವಾಸವಾಗಿರುವೆ. ಅಂತಹ ನಿನ್ನನ್ನು ನಮಸ್ಕರಿಸುವೆನು. ||೨೨||

ಯುದ್ಧಕಾಲದಲ್ಲಿ ಸಿಂಹನಾದವನ್ನುಂಟುಮಾಡುವವನೂ, ಧೈರ್ಯಶಾಲಿಯೂ, ವೈರಿಗಳನ್ನು ಅಳುವಂತೆ ಮಾಡುವವನೂ ಆದ ನಿನಗೆ ವಂದನೆ. ಮತ್ತು ಯುದ್ಧದಲ್ಲಿ ತನ್ನ ಕಾಲಾಳುಗಳನ್ನು ತನ್ನ ಭುಜಪರಾಕ್ರಮದಿಂದ ಸಂರಕ್ಷಿಸುವವನೂ, ಶತ್ರು ಸೈನ್ಯವನ್ನು ಸುತ್ತಲೂ ಆವರಿಸಿ ನಿಲ್ಲುವವನೂ ಆದ ನಿನಗೆ ನಮಸ್ಕಾರ.||೨೩||

ಯುದ್ಧದಲ್ಲಿ ಸೋತು ಓಡಿಹೋಗುತ್ತಿರುವ ಶತ್ರುಗಳನ್ನು ಹಿಂಬಾಲಿಸಿ ಓಡುವವನೂ, ಶುಭ್ರವಾದ ದೇಹಕಾಂತಿಯುಳ್ಳವನೂ, ಶರಣಾಗತರನ್ನು ರಕ್ಷಿಸುವವನೂ, ವೈರಿಗಳ ಅಪರಾಧವನ್ನು ಕ್ಷಮಿಸುವವನೂ, ಕೊಬ್ಬಿದ ಶತ್ರುಗಳನ್ನು ವ್ಯಥೆಗೊಳಿಸುವವನೂ ಆದ ನಿನಗೆ ನಮಸ್ಕರಿಸುವೆನು. ||೨೪||

ಶೌರ್ಯದಿಂದ ಕಾದಾಡುವ ಸೇನೆಗಳನ್ನು ಸಂರಕ್ಷಿಸುವನೂ, ಸರ್ವಪ್ರಧಾನನೂ, ಖಡ್ಗಧಾರಿಯೂ, ಸೇನಾಪತಿಯೂ, ಪವಿತ್ರವಾದ ಧನುಸ್ಸನ್ನು ಧರಿಸಿದವನೂ ಆಗಿರುವ ಶಂಕರನಿಗೆ ನಮಸ್ಕಾರ. ||೨೫||

ತಸ್ಕರಾಣಾಂ ಚ ಪತಯೇ ವಂಚತೇ ಪರಿವಂಚತೇ ।
ಸ್ತಾಯೂನಾಂ ಪತಯೇ ತುಭ್ಯಂ ನಮುಸ್ತೇಽಸ್ತು ನಿಚೇರವೇ ॥೭೬॥

ನಮಃ ಪರಿಚರಾಯಾಪಿ ಮಹಾರುದ್ರಾಯ ತೇ ನಮಃ ।
ಆರಣ್ಯಾನಾಂ ಚ ಪತಯೇ ಮುಷ್ಣತಾಂ ಪತಯೇ ನಮಃ ॥೭೭॥

ಉಷ್ಣೀಷಿಣೇ ನಮುಸ್ತುಭ್ಯಂ ನಮೋ ಗಿರಿಚರಾಯ ತೇ ।
ಕುಲುಂಚಾನಾಂ ಚ ಪತಯೇ ನಮುಸ್ತೇಽಸ್ತು ಭವಾಯ ಚ ॥೭೮॥

ಕಳ್ಳರ ಶರೀರದಲ್ಲಿ ಈಶ್ವರರೂಪದಿಂದ ವಾಸಿಸುವವನೂ, ವಂಚನಸ್ವರೂಪನೂ ಅಪಹ್ನವ ಸ್ವರೂಪನೂ ಆದ ನಿನ್ನನ್ನು ವಂದಿಸುವೆನು. ಪರಿಚಿತರಾಗಿ ಚೌರ್ಯವೃತ್ತಿಯನ್ನು ಅವಲಂಬಿಸಿರುವ ಕಳ್ಳರಿಗೆ ನೀನು ಅಧಿಪತಿಯಾಗಿರುವೆ. ಮತ್ತು ದಿವ್ಯವಾದ ಬತ್ತಳಿಕೆಯನ್ನು ಧರಿಸಿರುವೆ. ಅಂತಹ ನಿನಗೆ ನಮಸ್ಕಾರ. ॥೭೬॥

(ಟಿಪ್ಪಣಿ—ಯಜಮಾನನಿಗೆ ಭಕ್ತನಾಗಿದ್ದು ಆತನ ಕ್ರಯವಿಕ್ರಯಾದಿ ವ್ಯವಹಾರಗಳಲ್ಲಿ ದ್ರವ್ಯವನ್ನು ಅಪಹರಿಸುವವನು ವಂಚಕನು. ಎಲ್ಲ ಕಾರ್ಯಗಳಲ್ಲಿಯೂ ಮೋಸಮಾಡುವವನು ಪರಿವಂಚಕನು. ರಾತ್ರಿಯಲ್ಲಿ ಯಜಮಾನನಿಗೆ ತಿಳಿಯದಂತೆ ದ್ರವ್ಯವನ್ನು ಕದಿಯುವವನು ಸ್ತೇನನು. ಸ್ವಕೀಯನಾಗಿದ್ದು, ರಾತ್ರಿಯಲ್ಲಿಯೋ, ಹಗಲಿನಲ್ಲಿಯೋ ತಿಳಿಯದಂತೆ ಯಜಮಾನನ ಸ್ವತ್ತನ್ನು ಅಪಹರಿಸುವವನು ಸ್ತಾಯುವು.)

ರುದ್ರನೇ, ಚೌರ್ಯಬುದ್ಧಿಯಿಂದ ಅಂಗಡಿಬೀದಿಗಳಲ್ಲಿ ಸಂಚರಿಸುವ ಕಳ್ಳನ ಸ್ವರೂಪನೂ ನೀನೇ ಆಗಿರುವೆ. ಮತ್ತು ಪ್ರಲಯಕಾಲದಲ್ಲಿ ಸಕಲ ಚರಾಚರಗಳನ್ನು ನಾಶಮಾಡುವವನೂ ನೀನೇ. ಅರಣ್ಯದಲ್ಲಿ ವಾಸವಾಗಿದ್ದು ಪ್ರಯಾಣಿಕರ ದ್ರವ್ಯವನ್ನು ಅಪಹರಿಸುವ ಸ್ವಭಾವವುಳ್ಳ ಕಳ್ಳರಿಗೂ ಮತ್ತು ಕೃಷಿವೃತ್ತಿಯನ್ನು ಅವಲಂಬಿಸಿ ತನ್ನ ಒಡೆಯನ ಧನಧಾನ್ಯಾದಿಗಳನ್ನು ಅಪಹರಿಸುವ ಕಳ್ಳರಿಗೂ ಅಧಿಪತಿಯೆನಿಸಿರುವೆ. ಅಂತಹ ನಿನ್ನನ್ನು ವಂದಿಸುವೆನು. ॥೭೭॥

ಉಷ್ಣೀಷೀ ಎಂದರೆ, ಹಳ್ಳಿಗಾಡಿನ ಜನರಂತೆ, ತಲೆಗೆ ಬಟ್ಟೆಯನ್ನು ಸುತ್ತಿಕೊಂಡು ಅವರ ನಡುವೆಯೇ ಸಂಚರಿಸುತ್ತಿರುವ ಕಳ್ಳನು. ಗಿರಿಚರ, ಎಂದರೆ, ಪರ್ವತದಲ್ಲಿ ಸಂಚರಿಸುವ ಕಳ್ಳನು ಎಂದರ್ಥ. ಕುಲುಂಚ ಎಂದರೆ, ಗೃಹ, ಕ್ಷೇತ್ರ ಮುಂತಾದುವುಗಳನ್ನು ಅಪಹರಿಸುವ ಕಳ್ಳನು ಎಂದರ್ಥ. ಶಂಕರನು ಈ

ನಮೋ ರುದ್ರಾಯ ಶರ್ವಾಯ ತುಭ್ಯಂ ಪಶುಪತೇ(?)ನಮಃ ।
ನಮ ಉಗ್ರಾಯ ಭೀಮಾಯ ನಮ ಅಗ್ರೇವಧಾಯ ಚ ॥೭೯॥

ನಮೋ ದೂರೇವಧಾಯಾಪಿ ನಮೋ ಹಂತ್ರೇ ನಮೋ ನಮಃ ।
ಹನೀಯಸೇ ನಮಸ್ತುಭ್ಯಂ ನೀಲಗ್ರೀವಾಯ ತೇ ನಮಃ ॥೮೦॥

ನಮಸ್ತೇ ಶಿತಿಕಂಠಾಯ ನಮಸ್ತೇಽಸ್ತು ಕಪರ್ದಿನೇ ।
ನಮಸ್ತೇ ವ್ಯುಪ್ತಕೇಶಾಯ ಸಹಸ್ರಾಕ್ಷಾಯ ಮೀಢುಷೇ ॥೮೧॥

ಗಿರಿಶಾಯ ನಮಸ್ತೇಽಸ್ತು ಶಿಪಿವಿಷ್ಟಾಯ ತೇ ನಮಃ ।
ನಮಸ್ತೇ ಶಂಭವೇ ತುಭ್ಯಂ ಮಯೋಭವ ನಮೋಽಸ್ತುತೇ ॥೮೨॥

ಕಳ್ಳರಿಗೆ ಯಜಮಾನರೂಪಿಯಾಗಿಯೂ ತೋರುವನು. ಸರ್ವವ್ಯಾಪಕನಾದ ಅಂತಹ ದೇವನನ್ನು ನಮಸ್ಕರಿಸುವೆನು. ||೭೮||

ರುದ್ರ ಎಂದರೆ, ದುಃಖವನ್ನು ಹೋಗಲಾಡಿಸುವವನು. ಶರ್ವಃ - ಪಾಪನಾಶಕನು, ಪಶುಪತಿಃ-ಪಶುಗಳಂತೆ ಅಜ್ಞರಾಗಿರುವ ಮನುಷ್ಯರನ್ನು ರಕ್ಷಿಸುವವನು. ಉಗ್ರಃ-ವೈರಿಗಳನ್ನು ಸಂಹರಿಸುವಾಗ ಕ್ರೋಧಾವಿಷ್ಟನಾಗಿರುವವನು. ಭೀಮಃ-ದರ್ಶನಮಾತ್ರದಿಂದಲೇ ಭಯಂಕರನು. ಅಗ್ರೇವಧಃ-ಕಪಟವೃತ್ತಿಯನ್ನನುಸರಿಸದೇ ಶತ್ರುಗಳನ್ನು ಎದುರಿಗೇ ಸಂಹರಿಸುವವನು. ಅಂತಹವನಿಗೆ ನಮಸ್ಕಾರ. ||೭೯||

ದೂರೇವಧಃ–ದೂರದಿಂದಲೇ ಶತ್ರುಗಳನ್ನು ಸಂಹರಿಸುವವನು. ಹಂತಾ–ಶತ್ರುಸಂಹಾರಕನು, ಹನೀಯಾನ್–ನಾಮಾವಶೇಷವಾಗಿ ಸಂಹರಿಸುವವನು. ನೀಲಗ್ರೀವಃ-ವಿಷಪಾನದಿಂದ ಕಪ್ಪಾದ ಕಂಠವುಳ್ಳವನು. ಇಂತಹ ನಿನಗೆ ನಮಸ್ಕರಿಸುವೆನು ||೮೦||

ಶಿತಿಕಂಠಃ–ಕತ್ತಿನ ಒಂದು ಭಾಗದಲ್ಲಿ ಬಿಳಿಯ ಬಣ್ಣದಿಂದ ಕೂಡಿರುವವನು. ಕಪರ್ದೀ–ಜಟಾಧಾರಿಯು, ವ್ಯುಪ್ತಕೇಶಃ–ಶಿರಸ್ಸಿನಲ್ಲಿ ಕೂದಲಿಲ್ಲದವನು. (ಎಂದರೆ ಯತಿ ವೇಷಧಾರಿ ಎಂದರ್ಥ.) ಸಹಸ್ರಾಕ್ಷಃ-ಇಂದ್ರರೂಪದಿಂದಿರುವವನು. ಅಂತಹ ನಿನಗೆ ನಮಸ್ಕಾರ. ||೮೧||

ಗಿರಿಶಃ-ಕೈಲಾಸವಾಸಿಯು, ಶಿಪಿವಿಷ್ಟಃ-ಕಿರಣರೂಪದಲ್ಲಿ ವ್ಯಾಪಿಸುವವನು. ಶಂಭುಃ–ಸುಖಕರನು, ಮಯೋಭವಃ-ಸುಖವನ್ನು ಅನುಗ್ರಹಿಸುವವನು. ||೮೨||

ಮಯಸ್ಕರ ನಮಸ್ತುಭ್ಯಂ ಶಂಕರಾಯ ನಮೋನಮಃ ।
ನಮಃ ಶಿವಾಯ ಶರ್ವಾಯ ನಮಃ ಶಿವತರಾಯ ಚ ॥೮೩॥

ನಮಸ್ತೀರ್ಥ್ಯಾಯ ಕೂಲ್ಯಾಯ ನಮಃ ಪಾರ್ಯಾಯ ತೇ ನಮಃ ।
ಅವಾರ್ಯಾಯ ನಮಸ್ತೇಽಸ್ತು ನಮಃ ಪ್ರತರಣಾಯ ಚ ॥೮೪॥

ನಮ ಉತ್ತರಣಾಯಾಪಿ ಹರಾಯಾತಾರ್ಯ ತೇ ನಮಃ ।
ಆಲಾದ್ಯಾಯ ನಮಸ್ತೇಽಸ್ತು ಭಕ್ತಾನಾಂ ವರದಾಯ ಚ ॥೮೫॥

ನಮಃ ಶಷ್ಪ್ಯಾಯ ಫೇನ್ಯಾಯ ಸಿಕತ್ಯಾಯ ನಮೋ ನಮಃ ।
ಪ್ರವಾಹ್ಯಾಯ ನಮಸ್ತೇಽಸ್ತು ಹ್ರಸ್ವಾಯಾಸ್ತು ನಮೋನಮಃ ॥೮೬॥

ಮಯಸ್ಕರಃ-ಆಚಾರ್ಯರೂಪದಿಂದ ಇದ್ದು ಶಿಷ್ಯನಿಗೆ ಮೋಕ್ಷಸುಖವನ್ನುಂಟು ಮಾಡುವವನು, ಶಂಕರಃ-ಸುಖಕರನು, ಶಿವಃ-ಕಲ್ಯಾಣಕರನು, ಶಿವಕರಃ-ಅತ್ಯಂತ ಶ್ರೇಷ್ಠನು ಆದ ನಿನ್ನನ್ನು ನಮಸ್ಕರಿಸುವೆನು. ॥೮೩॥

ತೀರ್ಥ್ಯಃ-ಪ್ರಯಾಗಾದಿಕ್ಷೇತ್ರಗಳಲ್ಲಿ ನೆಲಸಿರುವವನು. ಕುಲ್ಯಃ-ನದೀತೀರಗಳಲ್ಲಿ ಲಿಂಗರೂಪದಿಂದ ನೆಲಸಿರುವವನು. ಪಾರ್ಯಃ-ಸಂಸಾರಸಮುದ್ರದ ಪರತೀರವಾದ ಮೋಕ್ಷವನ್ನು ಹೊಂದುವುದಕ್ಕೋಸ್ಕರ, ಮುಮುಕ್ಷುಗಳಿಂದ ಧ್ಯಾನಿಸಲ್ಪಡುವವನು, ಅವಾರ್ಯಃ ಸಂಸಾರಿಗಳಿಗೆ ಕಾಮ್ಯವಾದ ಸ್ವರ್ಗಾದಿಗಳನ್ನು ಕೊಡುವವನು, ಪ್ರತರಣಃ-ಮಂತ್ರಜಪಾದಿರೂಪದಿಂದಿದ್ದು, ಜಪಿಸುವವರ ಪಾಪಗಳನ್ನು ನಾಶಮಾಡುವವನು, ಅಂತಹ ನಿನಗೆ ನಮಸ್ಕಾರ. ॥೮೪॥

ಉತ್ತರಣಃ-ಸಂಸಾರದಿಂದ ಬಿಡುಗಡೆಯನ್ನುಂಟುಮಾಡುವವನು, ಹರ-ಪಾಪನಾಶಕನೂ, ಆತಾರ್ಯಃ-ಸಂಸಾರ ಪಾಶವನ್ನು ಹೋಗಲಾಡಿಸುವ ತತ್ತ್ವಜ್ಞಾನವಿದ್ದರೂ ಅದನ್ನು ಅಪೇಕ್ಷಿಸಿ ಪುನಃ ಪುನಃ ಸಂಸಾರವನ್ನೇ ಪಡೆಯುವ ಜೀವಿಗಳ ದೇಹದಲ್ಲಿ ಈಶ್ವರರೂಪದಿಂದ ಇರುವವನು. ಆಲಾದ್ಯಃ-ಜೀವನನ್ನು ಆಯಾ ಕರ್ಮಫಲಗಳ ಭೋಗಗಳಲ್ಲಿ ಪ್ರೇರಿಸುವವನು. ಮತ್ತು ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡುವವನೂ ಆದ ನಿನ್ನನ್ನು ನಮಸ್ಕರಿಸುವೆನು. ॥೮೫॥

ಶಷ್ಪ್ಯಃ-ಗಂಗಾದಿನದೀತೀರದಲ್ಲಿ ಎಳೆಯ ಹುಲ್ಲಿನ ರೂಪದಿಂದ ಇರುವವನು. ಫೇನ್ಯಃ-ನದೀನೀರಿನಿಂದ ನೊರೆಯರೂಪದಲ್ಲಿರುವವನು. ಸಿಕತ್ಯಃ-ಮರಳಿನ ರೂಪದಲ್ಲಿರುವವನು. ಪ್ರವಾಹ್ಯಃ-ಪ್ರವಾಹರೂಪದಲ್ಲಿರುವವನು. ಹ್ರಸ್ವಃ-ಶರೀರದಲ್ಲಿ

ವಾಮನಾಯ ನಮಸ್ತೇಽಸ್ತು ನಮೋಽಸ್ತು ಬೃಹತೇ ನಮಃ ।
ವರ್ಷೀಯಸೇ ನಮಸ್ತೇಽಸ್ತು ನಮೋ ವೃದ್ಧಾಯ ತೇ ನಮಃ ॥೮೭॥

ಸಂವೃಧ್ವನೇ ನಮಸ್ತುಭ್ಯಮಗ್ರಿಯಾಯ ನಮೋ ನಮಃ ।
ಪ್ರಥಮಾಯ ನಮಸ್ತುಭ್ಯಮಾಶವೇ ಚಾಜಿರಾಯ ಚ ॥೮೮॥

ಶೀಘ್ರಿಯಾಯ ನಮಸ್ತುಭ್ಯಂ ಶೀಭ್ಯಾಯ ಚ ನಮೋ ನಮಃ ।
ನಮ ಊರ್ವ್ಯಾಯ ಸೂರ್ಮ್ಯಾಯಾಪ್ಯವಸ್ವನ್ಯಾಯ ತೇ ನಮಃ ॥೮೯॥

ಸ್ರೋತಸ್ಯಾಯ ನಮಸ್ತುಭ್ಯಂ ದ್ವೀಪ್ಯಾಯ ಚ ನಮೋ ನಮಃ ।
ಜ್ಯೇಷ್ಠಾಯ ಚ ನಮಸ್ತುಭ್ಯಂ ಕನಿಷ್ಠಾಯ ಚ ತೇ ನಮಃ ॥೯೦॥

ಹೆಬ್ಬರಳಿನ ಗಾತ್ರವಾಗಿರುವ ಹೃದಯಾಕಾಶದಲ್ಲಿ ನೆಲಸಿರುವವನೂ ಆದ ನಿನಗೆ ನಮಸ್ಕಾರ. ॥೮೬॥

ವಾಮನಃ-ಅಲ್ಪಪ್ರಮಾಣದಿಂದಿರುವವನು, ಬೃಹತ್–ಮಹದಾಕಾರವನ್ನು ತಾಳಿರುವವನು. ವರ್ಷೀಯಾನ್–ಗುಣವೃದ್ಧನು, ವೃದ್ಧಃ-ವಯಸ್ಸಿನಿಂದ ವೃದ್ಧನು ನೀನೇ ಆಗಿರುವೆ. ಅಂತಹ ನಿನಗೆ ವಂದನೆಗಳು. ॥೮೭॥

ಸಂವೃಧ್ವಾ–ವೇದಾಂತವೇದ್ಯನು, ಅಗ್ರಿಯಃ–ಜಗದುತ್ಪತ್ತಿಗಿಂತಲೂ ಪೂರ್ವದಲ್ಲಿಯೇ ಇರುವವನು, ಪ್ರಥಮಃ–ಸಭಾಪತಿಯು, ಆಶು–ಪ್ರಾಣನಾಶಕನು, ಅಜಿರಃ-ಗಮನದಲ್ಲಿ ಕುಶಲನು ಆದ ನಿನ್ನನ್ನು ವಂದಿಸುವೆನು. ॥೮೮॥

ಶೀಘ್ರಿಯಃ-ಶೀಘ್ರವಾಗಿ ಸಂಚರಿಸುವವನು, ಶೀಭ್ಯಃ–ನೀರಿನ ಪ್ರವಾಹದಲ್ಲಿ ಇರುವವನು, ಊರ್ವ್ಯಃ=ಪೃಥಿವಿಯಲ್ಲಿ ನೆಲಸಿರುವವನು, ಸೂರ್ಮ್ಯಃ–ನದಿಯಲ್ಲಿ ನೆಲಸಿರುವವನು, ಅವಸ್ವನ್ಯಃ-ನಿಶ್ಚಲವಾದ ನೀರಿನಲ್ಲಿ ನೆಲಸಿರುವವನು.॥೮೯॥

ಸ್ರೋತಸ್ಯಃ–ಪ್ರವಾಹದಲ್ಲಿ ನೆಲಸಿರುವವನು, ದ್ವೀಪ್ಯಃ-ದ್ವೀಪದಲ್ಲಿ ಇರುವವನು, ಜ್ಯೇಷ್ಠಃ-ವಿದ್ಯೆ ಮತ್ತು ಐಶ್ವರ್ಯಗಳಿಂದ ಸರ್ವರನ್ನೂ ಮೀರಿರುವವನು. ಕನಿಷ್ಠಃ-ವಿದ್ಯಾವಿಹೀನನು. ಆದ ನಿನಗೆ ವಂದನೆಗಳು. ॥೯೦॥

ಪೂರ್ವಜಾಯ ನಮಸ್ತುಭ್ಯಂ ನಮೋಽಸ್ತ್ವಪರಜಾಯ ಚ ।
ಮಧ್ಯಮಾಯ ನಮಸ್ತುಭ್ಯಮಪಗಲ್ಭಾಯ ತೇ ನಮಃ ॥೯೧॥

ಜಘನ್ಯಾಯ ನಮಸ್ತುಭ್ಯಂ ಬುಧ್ನಿಯಾಯ ನಮೋ ನಮಃ ।
ಸೋಭ್ಯಾಯ ಪ್ರತಿಸರ್ಯಾಯ ಯಾಮ್ಯಾಯ ಚ ನಮೋ ನಮಃ ॥೯೨॥

ಕ್ಷೇಮ್ಯಾಯ ಚ ನಮಸ್ತುಭ್ಯಂ ಯಾಮ್ಯಾಯ ಚ ನಮೋ ನಮಃ ।
ಉರ್ವರ್ಯಾಯ ನಮಸ್ತುಭ್ಯಂ ಖಲ್ಯಾಯ ಚ ನಮೋ ನಮಃ ॥೯೩॥

ಶ್ಲೋಕ್ಯಾಯ ಚಾವಸಾನ್ಯಾಯಾವಸ್ವನ್ಯಾಯ ಚ ತೇ ನಮಃ ।
ನಮೋ ವನ್ಯಾಯ ಕಕ್ಷ್ಯಾಯ ಮೌಂಜ್ಯಾಯ ಚ ನಮೋ ನಮಃ ॥೯೪॥

ಪೂರ್ವಜಃ–ಜಗತ್ತಿನ ಉತ್ಪತ್ತಿಗಿಂತಲೂ ಮೊದಲು ಹಿರಣ್ಯಗರ್ಭನ ರೂಪದಿಂದ ಇರುವವನು, ಅಪರಜಃ–ಜಗತ್ತಿನ ಪ್ರಲಯಕಾಲದಲ್ಲಿ ಕಾಲಾಗ್ನಿರೂಪವನ್ನು ತಾಳುವವನು, ಮಧ್ಯಮಃ–ಜಗತ್ತಿನ ಸ್ಥಿತಿಕಾಲದಲ್ಲಿ ದೇವತಿರ್ಯಗಾದಿ ಪ್ರಾಣಿಗಳ ರೂಪದಿಂದ ಇರುವವನು, ಅಪ್ರಗಲ್ಭಃ–ಬಾಲಕನು, ಈ ಎಲ್ಲಾ ರೂಪನೂ ನೀನೇ ಆಗಿರುವೆ. ಅಂಥ ನಿನ್ನನ್ನು ವಂದಿಸುವೆನು. ॥೯೧॥

ಜಘನ್ಯಃ–ಗೋವು ಮುಂತಾದ ಪ್ರಾಣಿಗಳ ಹಿಂಭಾಗದಿಂದ ಕರುವಿನ ರೂಪದಲ್ಲಿ ಜನಿಸುವವನು, ಬುಧ್ನಿಯಃ–ವೃಕ್ಷಗಳಲ್ಲಿ ಕೊಂಬೆಗಳ ರೂಪದಿಂದ ಆವಿರ್ಭವಿಸುವವನು, ಸೋಭ್ಯಃ–ಪುಣ್ಯಪಾಪಗಳಿಂದ ಉತ್ಪನ್ನವಾದ ಈ ಮನುಷ್ಯ ಲೋಕಸ್ವರೂಪನು, ಪ್ರತಿಸರ್ಯಃ=ವಿವಾಹಾದಿ ಶುಭಕರ್ಮಗಳಲ್ಲಿ ಕೈಗೆ ಕಂಕಣವನ್ನು ಧರಿಸುವವನು, ಯಾಮ್ಯಃ–ಯಮಲೋಕದಲ್ಲಿ ಪಾಪಿಗಳನ್ನು ಶಿಕ್ಷಿಸುವವನು. ॥೯೨॥

ಕ್ಷೇಮ್ಯಃ–ಮೋಕ್ಷಸುಖವನ್ನು ಹೊಂದಿರುವವನು, ಉರ್ವರ್ಯಃ–ಸಸ್ಯಾದಿಗಳಲ್ಲಿ ಧಾನ್ಯರೂಪದಿಂದ ಹುಟ್ಟುವವನು, ಖಲ್ಯಃ–ಧಾನ್ಯವನ್ನು ಚೊಕ್ಕಟವಾಗಿ ಮಾಡುವ ಕಣ, ಮೇಟಿ ಮುಂತಾದ ವಸ್ತುರೂಪದಲ್ಲಿರುವವನು. ॥೯೩॥

ಶ್ಲೋಕ್ಯಃ–ವೈದಿಕಮಂತ್ರಗಳಿಂದ ಪ್ರತಿಪಾದಿಸಲ್ಪಡುವವನು, ಅವಸಾನ್ಯಃ–ವೇದಾಂತವೇದ್ಯನು, ವನ್ಯಃ–ಅರಣ್ಯದಲ್ಲಿ ಮರಗಿಡಗಳ ರೂಪದಿಂದ ಜನಿಸುವವನು, ಕಕ್ಷ್ಯಃ–ಬಳ್ಳಿ, ಗುಲ್ಮ ಮುಂತಾದುವುಗಳ ರೂಪದಿಂದ ಜನಿಸುವವನು, ಮೌಂಜ್ಯಃ–ಮುಂಜತೃಣ ನಿರ್ಮಿತವಾದ ಮೌಂಜಿಯಂತೆ ಪ್ರತಿಫಲಿಸುವವನು. ॥೯೪॥

ಶ್ರವಾಯ ಚ ನಮಸ್ತುಭ್ಯಂ ಪ್ರತಿಶ್ರವ ನಮೋ ನಮಃ ।
ಆಶುಷೇಣಾಯ ಶೂರಾಯ ನಮೋಽಸ್ತ್ವಾಶುರಥಾಯ ಚ ॥೯೫॥

ವರೂಥಿನೇ ವರ್ಮಿಣೇ ಚ ಬಿಲ್ಮಿನೇ ಚ ನಮೋ ನಮಃ ।
ಪ್ರಹಿತಾಯ ನಮಸ್ತುಭ್ಯಂ ಧೃಷ್ಣವೇ ಪ್ರಹಿತಾಯ ಚ ॥೯೬॥

ಪಾರಾಯ ಪಾರವಿಂದಾಯ ನಮಸ್ತೀಕ್ಷ್ಣೇಷವೇ ನಮಃ ।
ಸುಧನ್ವನೇ ನಮಸ್ತುಭ್ಯಂ ಸ್ವಾಯುಧಾಯ ನಮೋ ನಮಃ ॥೯೭॥

ನಮಃ ಶ್ರುತ್ಯಾಯ ಪಥ್ಯಾಯ ನಮಃ ಕಾಟ್ಯಾಯ ತೇ ನಮಃ ।
ನಮೋ ನೀಪ್ಯಾಯ ಸೂದ್ಯಾಯ ಸರಸ್ಯಾಯ ಚ ತೇ ನಮಃ ॥೯೮॥

ಶ್ರವಃ-ಶಬ್ದಸ್ವರೂಪನು, ಪ್ರತಿಶ್ರವಃ-ಪ್ರತಿಧ್ವನಿಸ್ವರೂಪನು, ಆಶುಷೇಣಃ-ಶೀಘ್ರವಾಗಿ ಸಂಚರಿಸುವ ಸೇನೆಯುಳ್ಳವನು, ಆಶುರಥಃ-ಶೀಘ್ರವಾಗಿ ಸಂಚರಿಸುವ ರಥದಿಂದ ಕೂಡಿದವನು. ॥೯೫॥

ವರೂಥಿಃ-ಗೃಹಸ್ಥನು, ವರ್ಮೀ-ಕಂಚುಕವನ್ನು ಧರಿಸಿರುವವನು, ಪ್ರಹಿತಃ-ಸ್ವಾಮಿಯಿಂದ ಕಳುಹಿಸಲ್ಪಟ್ಟ ಭೃತ್ಯಸ್ವರೂಪನು, ಧೃಷ್ಣುಃ-ಯುದ್ಧದಲ್ಲಿ ಹೆದರಿ ಓಡದೇ ಇರುವವನು. ॥೯೬॥

ಪಾರಃ-ನದಿಯ ದಡಗಳ ರೂಪದಲ್ಲಿರುವವನು, ಪಾರವಿಂದಃ-ಸಂಸಾರ ಸಾಗರದ ಪಾರವನ್ನು ಕಂಡವನು, ತೀಕ್ಷ್ಣೇಷುಃ-ಹರಿತವಾದ ಬಾಣವುಳ್ಳವನು, ಸುಧನ್ವಾ-ಮನೋಹರವಾದ ಧನುಸ್ಸನ್ನು ಧರಿಸಿದವನು, ಸ್ವಾಯುಧಃ-ಸುಂದರವಾದ ಖಡ್ಗವನ್ನು ಧರಿಸಿದವನು. ॥೯೭॥

ಶ್ರುತ್ಯಃ-ಚಿಕ್ಕ ಚಿಕ್ಕ ಮಾರ್ಗಗಳ ಸ್ವರೂಪನು, ಪಥ್ಯಃ-ರಥಾಶ್ವಾದಿಗಳು ಸಂಚರಿಸಲು ಯೋಗ್ಯವಾದ ಮಾರ್ಗಸ್ವರೂಪನು, ಕಾಟ್ಯಃ-ಸರೋವರದಲ್ಲಿ ನೀರಿನ ರೂಪದಿಂದ ನೆಲಸಿರುವವನು, ನೀಪ್ಯಃ-ಪರ್ವತಗಳ ನಿಮ್ನಪ್ರದೇಶದಲ್ಲಿ ನೀರಿನ ರೂಪದಿಂದ ಕೆಳಗೆ ಹರಿಯುವವನು, ಸೂದ್ಯಃ-ಕೆಸರಿನ ಪ್ರದೇಶದಲ್ಲಿ ಜಲರೂಪದಿಂದಿರುವವನು, ಸರಸ್ಯಃ-ಸರೋವರದಲ್ಲಿ ಜಲರೂಪದಿಂದಿರುವವನು. ॥೯೮॥

ನಮೋ ನಾದ್ಯಾಯ ಭವ್ಯಾಯ ವೈಶಂತಾಯ ಚ ತೇ ನಮಃ ।
ಅವಟ್ಯಾಯ ನಮಸ್ತುಭ್ಯಂ ನಮಃ ಕೂಪ್ಯಾಯ ತೇ ನಮಃ ॥೧೦೦॥

ಅವರ್ಷ್ಯಾಯ ಚ ವರ್ಷ್ಯಾಯ ಮೇಘ್ಯಾಯ ಚ ನಮೋ ನಮಃ ।
ವಿದ್ಯುತ್ಯಾಯ ನಮಸ್ತುಭ್ಯಮೀಧ್ರಿಯಾಯ ನಮೋ ನಮಃ ॥೧೦೧॥

ಆತಪ್ಯಾಯ ನಮಸ್ತುಭ್ಯಂ ವಾತ್ಯಾಯ ಚ ನಮೋ ನಮಃ ।
ರೇಷ್ಮ್ಯಾಯ ಚ ನಮಸ್ತುಭ್ಯಂ ವಾಸ್ತವ್ಯಾಯ ಚ ತೇ ನಮಃ ॥೧೦೨॥

ವಾಸ್ತುಪಾಯ ನಮಸ್ತೇಽಸ್ತು ನಮಃ ಸೋಮಾಯ ತೇ ನಮಃ ।
ನಮೋ ರುದ್ರಾಯ ತಾಮ್ರಾಯಾಪ್ಯರುಣಾಯ ಚ ತೇ ನಮಃ ॥೧೦೩॥

ನಾದ್ಯಃ—ನದಿಯಲ್ಲಿ ನೀರಿನರೂಪದಿಂದಿರುವವನು. ಭವ್ಯಃ—ಸಂಸಾರಿಯಾಗಿರುವವನು. ವೈಶಂತಃ–ಕ್ಷುದ್ರವಾದ ಪ್ರದೇಶಗಳಲ್ಲಿ ಜಲರೂಪದಿಂದಿರುವವನು. ಅವಟ್ಯಃ—ಹಳ್ಳದಲ್ಲಿ ಜಲರೂಪದಿಂದಿರುವವನು, ಕೂಪ್ಯಃ–ಬಾವಿಯನೀರಿನ ರೂಪದಿಂದಿರುವವನು. ||೧೦೦||

ವರ್ಷ್ಯಃ—ವರ್ಷಾಕಾಲದ ನೀರಿನರೂಪದಿಂದಿರುವವನು. ಅವರ್ಷ್ಯಃ—ಸಮುದ್ರಾದಿಗಳಲ್ಲಿ ನೀರಿನರೂಪದಿಂದಿರುವವನು. ಮೇಘ್ಯಃ- ಮೇಘದಲ್ಲಿರುವವನು. ವಿದ್ಯುತ್ಯಃ ಮಿಂಚಿನಲ್ಲಿ ನೀರಿನ ಅಂಶದಿಂದ ನೆಲಸಿರುವವನು. ಈಧ್ರಿಯಃ–ಶರತ್ಕಾಲದ ಮೇಘದಲ್ಲಿ ನೆಲಸಿರುವವನು. ||೧೦೧||

ಆತಪ್ಯಃ–ಬಿಸಿಲುಮಳೆಯಲ್ಲಿ ಜಲರೂಪದಿಂದ ಕೆಳಕ್ಕೆ ಬೀಳುವವನು ವಾತ್ಯಃ–ಗಾಳಿಯು ಬೀಸುತ್ತಿರಲು, ಮಳೆಯರೂಪದಿಂದ ಕೆಳಕ್ಕೆ ಬೀಳುವವನು. ಶೀರ್ಷ್ಯಃ–ಪ್ರಲಯಕಾಲದಲ್ಲಿ, ಕಲ್ಲುಮಣ್ಣುಗಳಿಂದ ಕೂಡಿ ಕೆಳಕ್ಕೆ ಸುರಿಯುವ ಮಳೆಯ ಸ್ವರೂಪನು. ವಾಸ್ತವ್ಯಃ–ಧನಕನಕಾದಿ ಪದಾರ್ಥಗಳಲ್ಲಿ ಆಯಾ ಕಾರ್ಯಗಳ ರೂಪದಿಂದ ವಾಸಿಸುವವನು. ||೧೦೨||

ವಾಸ್ತುಪಃ–ಗೃಹನಿರ್ಮಾಣಕ್ಕೋಸ್ಕರ, ಇರುವ ಭೂಮಿಯನ್ನು ಕಾಪಾಡುವವನು. ಸೋಮಃ–ಉಮಾದೇವಿಯಿಂದ ಕೂಡಿರುವವನು. ರುದ್ರಃ–ದುಃಖನಾಶಕನು. ತಾಮ್ರಃ–ಸೂರ್ಯನರೂಪದಿಂದಿದ್ದು ಉದಯಕಾಲದಲ್ಲಿ ಅತ್ಯಂತ ರಕ್ತವರ್ಣವುಳ್ಳವನು. ಅರುಣಃ–ಉದಯಕಾಲವಾದ ಬಳಿಕ ಸ್ವಲ್ಪ ಕೆಂಪಾಗಿರುವವನು. ||೧೦೩||

ನಮ ಉಗ್ರಾಯ ಭೀಮಾಯ ನಮಃ ಶಂಗಾಯ ತೇ ನಮಃ ।
ನಮಸ್ತೀರ್ಥ್ಯಾಯ ಕೂಲ್ಯಾಯ ಸಿಕತ್ಯಾಯ ಚ ತೇ ನಮಃ ॥೧೦೪॥

ಪ್ರವಾಹ್ಯಾಯ ನಮಸ್ತುಭ್ಯಮಿರಿಣ್ಯಾಯ ಚ ತೇ ನಮಃ ।
ನಮಸ್ತೇ ಚಂದ್ರಚೂಡಾಯ ಪ್ರಪಥ್ಯಾಯ ಚ ತೇ ನಮಃ ॥೧೦೫॥

ಕಿಂಶಿಲಾಯ ನಮಸ್ತೇಽಸ್ತು ಕ್ಷಯಣಾಯ ಚ ತೇ ನಮಃ ।
ಕಪರ್ದಿನೇ ನಮಸ್ತೇಽಸ್ತು ನಮಸ್ತೇಽಸ್ತು ಪುಲಸ್ತಯೇ ॥೧೦೬॥

ನಮೋ ಗೋಷ್ಠ್ಯಾಯ ಗೃಹ್ಯಾಯ ಗ್ರಹಾಣಾಂ ಪತಯೇ ನಮಃ ।
ನಮಸ್ತಲ್ಪ್ಯಾಯ ಗೇಹಾಯ ಗುಹಾವಾಸಾಯ ತೇ ನಮಃ ॥೧೦೭॥

ಉಗ್ರಃ–ವೈರಿಗಳನ್ನು ಸಂಹರಿಸುವಾಗ ಕೋಪಗೊಳ್ಳುವವನು. ಭೀಮಃ–ವೈರಿಗಳಿಗೆ ದರ್ಶನಮಾತ್ರದಿಂದಲೇ ಭಯವನ್ನುಂಟುಮಾಡುವವನು. ಶಂಗಃ–ಸುಖವನ್ನುಂಟುಮಾಡುವವನು. ತೀರ್ಥ್ಯಃ–ಕ್ಷೇತ್ರಗಳಲ್ಲಿ ವಾಸಮಾಡುವವನು. ಕೂಲ್ಯಃ–ನದೀತೀರದಲ್ಲಿ ಲಿಂಗರೂಪದಿಂದ ನೆಲಸಿರುವವನು. ನಿತ್ಯಃ–ನದೀ ತೀರದಲ್ಲಿ ಮರಳಿನರೂಪದಿಂದ ವಾಸವಾಗಿರುವವನು. ॥೧೦೪॥

ಪ್ರವಾಹ್ಯಃ–ಪ್ರವಾಹದಲ್ಲಿ ನೆಲಸಿರುವವನು. ಇರಿಣ್ಯಃ–ಜವಳು (ಬಂಜರು) ಪ್ರದೇಶದಲ್ಲಿ ವಾಸವಾಗಿರುವವನು. ಚಂದ್ರಚೂಡಃ–ತಲೆಯಲ್ಲಿ ಚಂದ್ರನನ್ನು ಧರಿಸಿದವನು. ಪ್ರಪಥ್ಯಃ–ಜನರು ಸಂಚರಿಸುವ ಮಾರ್ಗದಲ್ಲಿ ನೆಲಸಿರುವವನು ॥೧೦೫॥

ಕಿಂಶಿಲಃ–ಚಿಕ್ಕ ಚಿಕ್ಕಕಲ್ಲುಗಳಿಂದ ಕೂಡಿರುವ ಪ್ರದೇಶದಸ್ವರೂಪನು. ಕ್ಷಯಣಃ–ಜನವಸತಿಗೆ ಯೋಗ್ಯವಾದ ಪ್ರದೇಶದ ಸ್ವರೂಪನು. ಕಪರ್ದೀ–ಜಟಾಧಾರಿಯು. ಪುಲಸ್ತಿಃ ಭಕ್ತರ ಮುಂಭಾಗದಲ್ಲಿ ಪ್ರಸನ್ನ ಮುದ್ರೆಯಿಂದ ನಿಲ್ಲುವವನು. ॥೧೦೬॥

ಗೋಷ್ಠ್ಯಃ–ಗೋಶಾಲೆಯಲ್ಲಿ ನೆಲಸಿರುವವನು. ಗೃಹ್ಯಃ–ಮನೆಗಳಲ್ಲಿರುವವನು. ಗ್ರಹಾಣಾಂಪತಿಃ–ಗ್ರಹಪತಿಯಾದ ಸೂರ್ಯನಸ್ವರೂಪದಿಂದ ಇರುವವನು. ತಲ್ಪ್ಯಃ–ಮಂಚದಮೇಲೆ ಮಲಗಿರುವವನು. ಗೇಹ್ಯಃ–ಮಹಡಿಯಲ್ಲಿ ವಾಸವಾಗಿರುವವನು. ಗುಹಾವಾಸಃ–ಗುಹೆಯಲ್ಲಿ ವಾಸಿಸುವವನು. ॥೧೦೭॥

ಕಾಟ್ಯಾಯ ಗಹ್ವರೇಷ್ಠಾಯ ಹ್ರದಯ್ಯಾಯ ಚ ತೇ ನಮಃ ।
ನಿವೇಷ್ಪ್ಯಾಯ ನಮಸ್ತುಭ್ಯಂ ಪಾಂಸವ್ಯಾಯ ಚ ತೇ ನಮಃ ॥೧೦೮॥

ರಜಸ್ಯಾಯ ನಮಸ್ತುಭ್ಯಂ ಪರಾತ್ಪರತರಾಯ ಚ ।
ನಮಸ್ತೇ ಹರಿಕೇಶಾಯ ಶುಷ್ಕ್ಯಾಯ ಚ ನಮೋ ನಮಃ ॥೧೦೯॥

ಹರಿತ್ಯಾಯ ನಮಸ್ತುಭ್ಯಂ ಹರಿದ್ವರ್ಣಾಯ ತೇ ನಮಃ ।
ನಮ ಊರ್ಮ್ಯಾಯ ಸೂರ್ಮ್ಯಾಯ ಪರ್ಣ್ಯಾಯ ಚ ನಮೋ ನಮಃ॥೧೧೦॥

ನಮೋಽಪಗುರಮಾಣಾಯ ಪರ್ಣಶದ್ಯಾಯ ತೇ ನಮಃ ।
ಅಭಿಘ್ನತೇ ಚಾಕ್ಖಿದತೇ ನಮಃ ಪ್ರಖ್ಖಿದತೇ ನಮಃ ॥೧೧೧॥

ವಿಶ್ವರೂಪಾಯ ವಿಶ್ವಾಯ ವಿಶ್ವಾಧಾರಾಯ ತೇ ನಮಃ ।
ತ್ರಿಯಂಬಕಾಯ ರುದ್ರಾಯ ಗಿರಿಜಾಪತಯೇ ನಮಃ ॥೧೧೨॥

ಕಾಟ್ಯಃ–ಪ್ರವೇಶಿಸಲಶಕ್ಯವಾದ ಘೋರಾರಣ್ಯದಲ್ಲಿ ವಾಸಿಸುವವನು. ಗಹ್ವರೇಷ್ಠಃ-ಗಿರಿಗುಹೆಗಳಲ್ಲಿ ವಾಸಿಸುವವನು. ಹ್ರದಯ್ಯಃ–ಮಡುವಿನಲ್ಲಿ ಇರುವವನು. ನಿವೇಷ್ಪ್ಯಃ–ಹಿಮದ ನೀರಿನಲ್ಲಿರುವವನು. ಪಾಂಸವ್ಯಃ–ಪರಮಾಣುಗಳಲ್ಲಿ ಸೂಕ್ಷ್ಮರೂಪದಿಂದ ನೆಲಸಿರುವವನು. ॥೧೦೮॥

ರಜಸ್ಯಃ–ಧೂಳುಗಳಲ್ಲಿ ನೆಲಸಿರುವವನು. ಪರಾತ್ ಪರತರಃ–ಮಾಯೆಯಿಂದ ಬಿಡಲ್ಪಟ್ಟವನು. ಹರಿಕೇಶಃ–ವಾರ್ಧಕ್ಯಾವಸ್ಥೆಯಿಲ್ಲದವನು. ಶುಷ್ಕ್ಯಃ–ಒಣಗಿದ ಕಟ್ಟಿಗೆಗಳಲ್ಲಿ ಇರುವವನು. ॥೧೦೯॥

ಹರಿತ್ಯಃ-ಆರ್ದ್ರವಾದವಸ್ತುಗಳಲ್ಲಿ ನೆಲಸಿರುವವನು. ಹರಿದ್ವರ್ಣಃ–ಎಳೆಯ ಹುಲ್ಲಿನ ಬಣ್ಣದಂತೆ ಬಣ್ಣವುಳ್ಳವನು. ಊರ್ಮ್ಯಃ–ಭೂಮಿಯಲ್ಲಿರುವವನು. ಸೂರ್ಮ್ಯಃ ನದಿಯಲ್ಲಿ ವಾಸಿಸಿರುವವನು. ಪರ್ಣ್ಯಃ–ಎಲೆಗಳಲ್ಲಿ ಇರುವವನು. ॥೧೧೦॥

ಅಪಗುರಮಾಣಃ-ಮೇಲಕ್ಕೆತ್ತಲ್ಪಟ್ಟ ಆಯುಧವುಳ್ಳವನು. ಪರ್ಣಶದ್ಯಃ–ಮರದೆಲೆಗಳ ರಾಶಿಯ ನಡುವೆ ಇರುವವನು. ಅಭಿಘ್ನನ್–ಶತ್ರುಗಳನ್ನು ಸಂಹರಿಸುವವನು. ಆಖ್ಖಿದನ್=ವೈರಿಗಳನ್ನು ಸ್ವಲ್ಪವಾಗಿ ವ್ಯಥೆಗೊಳಿಸುವವನು. ಪ್ರಖ್ಖಿದನ್-ಅತ್ಯಂತ ವ್ಯಥೆಗೊಳಿಸುವವನು. ॥೧೧೧॥

ವಿಶ್ವರೂಪಃ–ಕಾಮರೂಪಿಯು. ವಿಶ್ವಃ–ಜಗತ್ಸ್ವರೂಪನು. ವಿಶ್ವಾಧಾರಃ–

ಮಣಿಕೋಟೀರಕೊಟಿಸ್ಥಕಾಂತಿದೀಪ್ತಾಯ ತೇ ನಮಃ ।
ವೇದವೇದಾಂತವೇದ್ಯಾಯ ವೃಷಾರೂಢಾಯ ತೇ ನಮಃ ॥೧೧೩॥

ಅವಿಜ್ಞೇಯಸ್ವರೂಪಾಯ ಸುಂದರಾಯ ನಮೋ ನಮಃ ।
ಉಮಾಕಾಂತನಮಸ್ತೇಽಸ್ತು ನಮಸ್ತೇ ಸರ್ವಸಾಕ್ಷಿಣೇ ॥೧೧೪॥

ಹಿರಣ್ಯಬಾಹವೇ ತುಭ್ಯಂ ಹಿರಣ್ಯಾಭರಣಾಯ ಚ ।
ನಮೋ ಹಿರಣ್ಯರೂಪಾಯ ರೂಪಾತೀತಾಯ ತೇ ನಮಃ ॥೧೦೫॥

ಹಿರಣ್ಯಪತಯೇ ತುಭ್ಯಮಂಬಿಕಾಪತಯೇ ನಮಃ ।
ತದುಮಾಪತಯೇ ತುಭ್ಯಂ ನಮಃ ಪಾಪಪ್ರಣಾಶಕ ॥೧೧೬॥

ಜಗತ್ಕಾರಣನು. ತ್ರಿಯಂಬಕಃ–ಮುಕ್ಕಣ್ಣನು. ರುದ್ರಃ-ದುಃಖವನ್ನು ಹೋಗಲಾಡಿಸುವವನು. ಗಿರಿಜಾಪತಿಃ–ಪಾರ್ವತೀ ಕಾಂತನು. ॥೧೧೨॥

ಓ, ಶಿವನೇ, ನೀನು, ರತ್ನಖಚಿತವಾದ ಕಿರೀಟಗಳ ಗುಂತಿನ ಕಾಂತಿಯಿಂದ ಪ್ರಕಾಶಿಸುತ್ತಿರುವೆ. ವೇದವೇದಾಂತಗಳಿಂದ ತಿಳಿಯಲು ಶಕ್ಯನೂ, ವೃಷಭಾರೂಢನೂ ಆದ ನಿನ್ನನ್ನು ವಂದಿಸುವೆನು. ॥೧೧೩॥

ನಿನ್ನ ಸ್ವರೂಪವನ್ನು, ತಿಳಿಯುವುದೇ ಅಸಾಧ್ಯವಾಗಿರುವುದು. ಮತ್ತು ನೀನು ಸ್ವಪ್ರಕಾಶಸ್ವರೂಪನಾಗಿದ್ದು, ಸಕಲ ಪದಾರ್ಥಗಳನ್ನು ತಿಳಿದುಕೊಂಡಿರುವೆ. ಅಂತಹ ಗಿರಿಜಾಪತಿಯಾದ ನಿನ್ನನ್ನು ನಮಸ್ಕರಿಸುವೆನು. ॥೧೧೪॥

ಸುವರ್ಣದಂತೆ ಕಾಂತಿಯುಕ್ತವಾದ ಬಾಹುಗಳುಳ್ಳವನೂ ಸುವರ್ಣಮಯವಾದ ಆಭರಣಗಳನ್ನು ಧರಿಸಿರುವವನೂ, ಆಗಿರುವೆ. ಮತ್ತು, ಸೋಪಾಧಿಕವಾಗಿ, ಸುವರ್ಣದರೂಪದಿಂದಲೇ ಇರುವವನಾದರೂ, ವಸ್ತುತಃ ರೂಪರಹಿತನೂ ಆಗಿರುವೆ. ಅಂತಹ ನಿನ್ನನ್ನು ವಂದಿಸುವೆನು. ॥೧೧೫॥

ಧನಕನಕಾದಿಗಳಿಗೆ ನೀನೇ ಪ್ರಭುವಾಗಿರುವೆ. ಪಾಪಗಳನ್ನು ಹೋಗಲಾಡಿಸುವ ನೀನು ಅಂಬಿಕಾಪತಿಯೆಂದೂ, ಉಮಾಪತಿಯೆಂದೂ ಜನರಿಂದ ಸ್ತುತಿಸಲ್ಪಡುವೆ. ಅಂತಹ ನಿನಗೆರಗುವೆನು. ॥೧೧೬॥

ಮೀಢುಷ್ಟಮಾಯ ಭರ್ಗಾಯ ಕದ್ರುದ್ರಾಯ ಪ್ರಚೇತಸೇ ।
ತವ್ಯಸೇ ಬಿಲ್ವಪೂಜ್ಯಾಯ ನಮಃ ಕಲ್ಯಾಣರೂಪಿಣೇ ॥೧೧೭॥

ಅಪಾರಕಲ್ಯಾಣಗುಣಾರ್ಣವಾಯ
ಶ್ರೀ ನೀಲಕಂಠಾಯ ನಿರಂಜನಾಯ ।
ಕಾಲಾಂತಕಾಯಾಪಿ ನಮೋ ನಮಸ್ತೇ
ದಿಕ್ಕಾಲರೂಪಾಯ ನಮೋ ನಮಸ್ತೇ ॥೧೧೮॥

ವೇದಾಂತವೇದಿಸ್ತುತಸದ್ಗುಣಾಯ
ಗುಣಪ್ರವೀಣಾಯ ಗುಣಾಶ್ರಯಾಯ ।
ಶ್ರೀವಿಶ್ವನಾಥಾಯ ನಮೋ ನಮಸ್ತೇ
ಕಾಶೀನಿವಾಸಾಯ ನಮೋ ನಮಸ್ತೇ ॥೧೧೯॥

ಅಜಾತಸೌಂದರ್ಯಸುಧಾನಿಧಾನ
ಸಮೃದ್ಧಿರೂಪಾಯ ಶಿವಾಧವಾಯ ।

ಮೀಢುಷ್ಟಮಃ–ಇಷ್ಟಾರ್ಥಗಳನ್ನು ನೀಡುವವನು. ಭರ್ಗಃ ಪ್ರಕಾಶ ಸ್ವರೂಪನು, ರುದ್ರಃ–ಯಾವಾಗಲೂ ಭಯಂಕರನೆಂಬ ಸಂಜ್ಞೆಯುಳ್ಳವನು, ತವ್ಯಃ–ಅತ್ಯಂತ ವೃದ್ಧನು, ಬಿಲ್ವಪೂಜ್ಯಃ–ಬಿಲ್ವಪತ್ರೆಗಳಿಂದ ಪೂಜಿಸಲ್ಪಡುವವನು, ಕಲ್ಯಾಣರೂಪೀ–ಮಂಗಳಮೂರ್ತಿಯು. ॥೧೧೭॥

ಅಂಥ ಕಲ್ಯಾಣಗುಣಗಳಿಂದ ಕೂಡಿರುವವನೂ, ನೀಲಕಂಠನೂ, ಪಾಪ ರಹಿತನೂ, ಮೃತ್ಯುವನ್ನೇ ಜಯಿಸಿದವನೂ, ದಿಕ್ಕು, ಕಾಲ ಇವುಗಳ ರೂಪದಿಂದ ಇರುವವನೂ ಆದ ನಿನಗೆ ನಮಸ್ಕಾರ. ॥೧೧೮॥

ವೇದಾಂತಗಳನ್ನು ಅರಿತಿರುವವರು ನಿನ್ನ ಕಲ್ಯಾಣಗುಣಗಳನ್ನು ಅತಿಶಯ ವಾಗಿ ಸ್ತುತಿಸುವರು. ಮತ್ತು ನೀನು ಶ್ರೇಷ್ಠವಾದ ಕಾರುಣ್ಯಾದಿಗುಣಗಳಿಂದ ಕೂಡಿರುವೆ. ಜಗನ್ನಾಥನೂ, ಭಕ್ತಾನುಗ್ರಹಕ್ಕೋಸ್ಕರ ಕಾಶೀಕ್ಷೇತ್ರದಲ್ಲಿ ನೆಲಸಿರು ವವನೂ ಆದ ನಿನ್ನನ್ನು ವಂದಿಸುವೆನು. ॥೧೧೯॥

ಓ ಶಂಕರನೇ, ನಿನ್ನ ಸೌಂದರ್ಯವು ಕೃತ್ರಿಮವಲ್ಲ. ಸ್ವಾಭಾವಿಕವಾದದ್ದು. ಅಂತಹ ಸೌಂದರ್ಯವೆಂಬ ಸುಧಾರಾಶಿಗೆ ನೀನು ಗಣಿಯಂತಿರುವೆ. ಮತ್ತು ನೀನು

ಧಾರಾಧರಾಕಾರ ನಮೋ ನಮಸ್ತೇ
ಧಾರಾಸ್ವರೂಪಾಯ ನಮೋ ನಮಸ್ತೇ ॥೧೨೦॥

ನೀಹಾರತಾರಾಕರಕಾಕರಾಕ
ಪ್ರಕಾರಹಾರಾಪ್ರತಿಹಾರವೀರ ।
ವೀರೇಶ್ವರಾಪಾರದಯಾನಿಧಾನ
ಪಾಹಿ ಪ್ರಭೋ ಪಾಹಿ ನಮೋ ನಮಸ್ತೇ ॥೧೨೧॥

॥ ವ್ಯಾಸ ಉವಾಚ ॥

ಏವಂ ಸ್ತುತ್ವಾ ಮಹಾದೇವಂ ಪ್ರಣಿಪತ್ಯ ಪುನಃ ಪುನಃ ।
ಕೃತಾಂಜಲಿಪುಟಸ್ತಸ್ಥೌ ಪಾರ್ಶ್ವೇ ಢುಂಢಿವಿನಾಯಕಃ ॥೧೨೨॥

ತಮಾಲೋಕ್ಯ ಸುತಂ ಪ್ರಾಪ್ತಂ ವೇದವೇದಾಂತಪಾರಗಂ ।
ಸ್ನೇಹಾಶ್ರುಧಾರಾಸಂವೀತಂ ಪ್ರಾಹೇಚ್ಛುರಿದಮಾದಿಶತ್ ॥೧೨೩॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಗಣೇಶಕೃತರುದ್ರಾಧ್ಯಾಯಸ್ತುತಿರ್ನಾಮ ದಶಮೋಽಧ್ಯಾಯಃ

ಸರ್ವಮಂಗಳೆಯಾದ ಅಂಬಿಕೆಯ ಸ್ವಾಮಿಯೆನಿಸಿರುವೆ. ಮೇಘದಂತೆ ಕೃಷ್ಣವರ್ಣವುಳ್ಳ ಮತ್ತು ಅದ್ಭುತವಾದ ಆಕಾರವುಳ್ಳ ನಿನಗೆ ನಮಸ್ಕಾರ. ॥೧೨೦॥

ಹಿಮ, ನಕ್ಷತ್ರ ಇವುಗಳಿಗೆ ಆಶ್ರಯಭೂತನೆನಿಸಿದವನೂ, ಕಾಕ, ಹಂಸ ಮುಂತಾದ ಪಕ್ಷಿಗಳ ವರ್ಣದಿಂದ ರಂಜಿಸುವ ರತ್ನಗಳನ್ನೇ ಹಾರವನ್ನಾಗಿ ಮಾಡಿಕೊಂಡಿರುವವನೂ ಆದ ಪರಶಿವನೇ, ನೀನು ಅಸದೃಶವಾದ ಪರಾಕ್ರಮದಿಂದ ಕೂಡಿರುವವನಲ್ಲವೆ! ವೀರರಿಗೆ ವೀರನೆನಿಸಿದರೂ ಕೃಪಾಳುವಾಗಿರುವ ನೀನು ನಮ್ಮನ್ನು ರಕ್ಷಿಸು. ಸರ್ವದಾ ನಿನಗೆ ನಮಸ್ಕರಿಸುತ್ತಿರುವೆವು.” ॥೧೨೧॥

ಹೀಗೆಂದು ಢುಂಢೀ ಗಣೇಶನು ಶಿವನನ್ನು ಸ್ತುತಿಸಿ, ಮತ್ತೆ ಮತ್ತೆ ನಮಸ್ಕರಿಸಿ, ಅಂಜಲಿಬದ್ಧನಾಗಿ ಶಿವನ ಪಕ್ಕದಲ್ಲಿ ನಿಂತನು. ॥೧೨೨॥

ಈ ರೀತಿಯಲ್ಲಿ ತನ್ನ ಬಳಿಗೆ ಬಂದು ನಿಂತಿರುವ, ವೇದವೇದಾಂತಗಳನ್ನು ಅರಿತಿರುವವನೂ, ಆನಂದಾಶ್ರುಗಳನ್ನು ಸುರಿಸುವವನೂ ಆದ ಪುತ್ರನನ್ನು ನೋಡಿ

ಪರಮೇಶ್ವರನು ಅವನನ್ನು ಅನುಗ್ರಹಿಸುವ ಇಚ್ಛೆಯಿಂದ ಮುಂದೆ ಈ ರೀತಿಯಲ್ಲಿ ಆಜ್ಞಾಪಿಸಿದನು. ಎಂದು ವ್ಯಾಸಮಹರ್ಷಿಗಳು ಅಲ್ಲಿ ನೆರೆದಿದ್ದ ಋಷಿಜನರಿಗೆಲ್ಲಾ ಹೇಳಿದರು." ||೧೨೨||

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ
" ಗಣೇಶನ ರುದ್ರಾಧ್ಯಾಯಸ್ತೋತ್ರ " ಎಂಬ
ಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಏಕಾದಶೋಽಧ್ಯಾಯಃ

॥ ವ್ಯಾಸ ಉವಾಚ ॥

ಏವಂ ಸ್ತುತ್ವಾ ಮಹಾದೇವಂ ಪ್ರಣಿಪತ್ಯ ಪುನಃ ಪುನಃ ।
ಕೃತಾಂಜಲಿಪುಟಸ್ತಸ್ಥೌ ಪಾರ್ಶ್ವಂ ದುಂಢಿವಿನಾಯಕಃ ॥೧॥

ತನಮಾಲೋಕ್ಯ ಸುತಂ ಪ್ರಾಜ್ಞಂ ವೇದವೇದಾಂತಪಾರಗಂ ।
ಸ್ನೇಹಾಶ್ರುಧಾರಾಸಂವೀತಃ ಪ್ರಾಹ ದುಂಢಿಂ ಸದಾಶಿವಃ ॥೨॥

॥ ಶ್ರೀಸದಾಶಿವ ಉವಾಚ ॥

ಕುಶಲಂ ಖಲು ತೇ ದುಂಢೇ ಕುಮಾರಃ ಕುತ್ರ ವರ್ತತೇ ।
ದೃಷ್ಟೋಽಸಿ ಬಹುಕಾಲೇನ ತಸ್ಯಾಪಿ ಕುಶಲಂ ಖಲು ॥೩॥

ಹನ್ನೊಂದನೆಯ ಅಧ್ಯಾಯ

ಬಳಿಕ ವ್ಯಾಸನು ಶಿವರಹಸ್ಯವನ್ನು ಮುಂದುವರಿಸುತ್ತಾ ಹೀಗೆಂದನು— "ಎಲೈ ಮುನಿಗಳೇ, ಈ ರೀತಿ ಗಣೇಶನು ಶಿವನನ್ನು ಸ್ತುತಿಸಿ, ಮತ್ತೆ ಮತ್ತೆ ನಮಸ್ಕರಿಸುತ್ತಾ ಅಂಜಲಿಬದ್ಧನಾಗಿ ಅವನ ಪಕ್ಕದಲ್ಲಿಯೇ ನಿಂತನು. ॥೧॥

ತರುವಾಯ ವೇದವೇದಾಂತಗಳನ್ನು ಅರಿತಿರುವವನೂ, ಜ್ಞಾನಿಯೂ ಆದ ಆ ಪುತ್ರನನ್ನು ನೋಡಿ, ತಂದೆಯಾದ ಪರಮೇಶ್ವರನು ಆನಂದಬಾಷ್ಪಗಳಿಂದ ಕೂಡಿದವನಾಗಿ ಹೀಗೆಂದನು. ॥೨॥

"ಎಲೈ ದುಂಢೀಗಜಾನನನೇ, ನಿನಗೆ ಕುಶಲವೇ ? ಕುಮಾರಸ್ವಾಮಿಯು

ತ್ವಯಾ ಸಹ ಕುಮಾರೇಣ ಮಯಾ ಗಿರಿಜಯಾ ಸಹ ।
ಏಕತ್ರ ವಾಸಃ ಕರ್ತವ್ಯಃ ಸತತಂ ಸ್ಯಾತ್ತತಃ ಪರಂ ॥೪॥

ನ ಕುಮಾರವಿಯೋಗಶ್ಚ ವಿಯೋಗಸ್ತವ ವಾ ಮಮ ।
ತಥಾ ಗೌರೀವಿಯೋಗಶ್ಚ ಸರ್ವಥಾ ನೈವ ರೋಚತೇ ॥೫॥

ಗೌರೀಂ ವಿಹಾಯ ಭವತಾ ಭವತಾಪಾಪಹಾರಿಣೀಂ ।
ನ ಸ್ಥಾತವ್ಯಂ ಕುಮಾರೇಣ ಮಯಾಪೀತಿ ವಿಚಾರಯ ॥೬॥

ಅಧುನಾ ನಿರ್ಗತಾ ಗೌರೀ ಸುಂದರಾದ್ರಿರಿಮಂದಿರಾತ್ ।
ಮಂದಂ ಮಂದಂ ಸಮಾಯಾತಿ ಸಾ ಮಂದಗಮನಾ ಖಲು ॥೭॥

ಕೈಲಾಸಮಂದಿರಂ ದೂರೇ ವರಸುಂದರಸುಂದರಂ ।
ತತ್ರ ತಿಷ್ಠತಿ ಯದ್ವಾ ಸಾ ಮಧ್ಯೇ ತಿಷ್ಠತಿ ಶಾಂಭವೀ ॥೮॥

(ಷಣ್ಮುಖನು) ಎಲ್ಲಿರುವನು! ನಿನ್ನನ್ನು ನೋಡಿ ಬಹಳ ಕಾಲವು ಕಳೆದು ಹೋಯಿತು. ಷಣ್ಮುಖನೂ ಕುಶಲಿಯಾಗಿರುವನೇ! ||೩||

ಇನ್ನು ಮುಂದೆ ನಿರಂತರವೂ ನೀನು ಕುಮಾರಸ್ವಾಮಿಯೊಂದಿಗೂ, ನಾನು ಪಾರ್ವತಿಯೊಂದಿಗೂ ಒಂದೇ ಕಡೆಯಲ್ಲಿ (ಗೃಹದಲ್ಲಿ) ವಾಸಮಾಡಬೇಕು ಎಂಬುದೇ ನನ್ನ ಅಭಿಪ್ರಾಯ. ||೪||

ನಿನಗೆ ಷಣ್ಮುಖನ ವಿಯೋಗವಾಗಲಿ, ಪಾರ್ವತಿಯನ್ನು ಅಗಲಿರುವುದೇ ಆಗಲಿ ಎಂದಿಗೂ ರುಚಿಸಲಾರದು. ||೫||

ಪಾಪನಾಶಕಳಾದ ಆ ಗೌರಿಯನ್ನು ನಾನಾಗಲಿ ನೀನಾಗಲಿ ಅಥವಾ ಷಣ್ಮುಖನೇ ಆಗಲಿ ಯಾರೂ ಅಗಲಬಾರದು. ಇದನ್ನು ಯೋಚಿಸುವವನಾಗು. ||೬||

ಇದೀಗ, ಗಿರಿಜೆಯು ಹಿಮವಂತನ ಸುಂದರವಾದ ಮನೆಯಿಂದ ಹೊರ ಹೊರಟಿರುವಳು. ನನ್ನ ಬಳಿಗೆ ಬರಲು ಉದ್ಯುಕ್ತಳಾದ ಅವಳು ಮೆಲ್ಲಮೆಲ್ಲನೆ ನಡೆದುಬರುತ್ತಿರುವಳು. ಎಷ್ಟಾದರೂ ಅವಳು ಮಂದಗಮನೆಯೇ ಅಲ್ಲವೇ! ||೭||

ಇಲ್ಲಿಗೆ ಸ್ವಲ್ಪ ದೂರದಲ್ಲಿ ಅತಿ ಸುಂದರವಾದ ಕೈಲಾಸಭವನದಲ್ಲಿರುವಳೋ, ಅಥವಾ ಮಾರ್ಗದ ಮಧ್ಯದಲ್ಲಿರುವಳೋ ಎಂಬುದು ತಿಳಿದುಬಂದಿಲ್ಲ. ||೮||

ಕಸ್ತದಾಗಮನೇ ವಿಘ್ನಃ ಪರಿಹಾರಾರ್ಹ ಏವ ಸಃ ।
ಜನನೀದರ್ಶನೋತ್ಕಂಠಾ ತವ ಕಿಂ ವಾ ನ ಜಾಯತೇ ॥೯॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಪ್ರಣಿಪತ್ಯ ಪುನಃ ಪುನಃ ।
ಜಗಾದ ವಚನಂ ಚಾರು ಸ ದೇವಾರ್ಥವಿಜೃಂಭಿತಂ ॥೧೦॥

॥ ಶ್ರೀ ಗಣೇಶ ಉವಾಚ ॥

ಸ್ವಾಮಿನ್ನಾಯಾತಿ ಸಾ ಗೌರೀ ದೂರಮೇತದ್ಧಿ ಮಂದಿರಂ ।
ದೂರಾಗಮನವೇಲಾಯಾಂ ಕಿಂ ವಿಲಂಬೋ ನ ಜಾಯತೇ ॥೧೧॥

ಕಿಂ ಚ ಸಾ ಪಥಿ ವಿಶ್ರಮ್ಯ ಮಂದಮಾಯಾತಿ ಶಾಂಭವೀ ।
ಮಂದಂ ಮಂದಂ ಮಂದವಾತೋ ತೇನ ಪೀತಾಪಿ ಯಾತಿ ಸಾ ॥೧೨॥

ಅವಳು ಇಲ್ಲಿಗೆ ಬರಲು ಮಾರ್ಗಮಧ್ಯದಲ್ಲಿ ಯಾವ ತೊಂದರೆಯು ಸಂಭವಿಸಿದರೂ ಅದನ್ನು ಪರಿಹರಿಸಲೇಬೇಕು. ಆದರೂ ಇನ್ನೂ ಅವಳು ಬರದಿರುವುದಕ್ಕೆ ಕಾರಣವೇನಿರಬಹುದು ! ವತ್ಸ, ನಿನಗೆ ತಾಯಿಯನ್ನು ನೋಡಬೇಕೆಂಬ ಕುತೂಹಲವಿಲ್ಲವೇ ? ॥೯॥

ಶಿವನ ಈ ಮಾತನ್ನು ಕೇಳಿ ಗಣಪತಿಯು ಬಾರಿಬಾರಿಗೂ ನಮಸ್ಕರಿಸಿ, ತಂದೆಯನ್ನು ಕುರಿತು ಅರ್ಥಗರ್ಭಿತವಾದ ಮಾತನ್ನು ಹೀಗೆ ಹೇಳಿದನು. ॥೧೦॥

" ಓ ಪ್ರಭುವೇ, ಆ ಗಿರಿಜೆಯು ಇನ್ನೂ ಮಾರ್ಗಮಧ್ಯದಲ್ಲಿಯೇ ಬರುತ್ತಿರುವಳು. ಅವಳು ಎಲ್ಲಿಂದ ಹೊರಟಳೋ ಆ ಮಂದಿರವು ಇಲ್ಲಿಂದ ತುಂಬಾ ದೂರದಲ್ಲಿರುವುದಲ್ಲವೇ ? ಜನನಿಯು ಅಷ್ಟೊಂದು ದೂರದಿಂದ ಬರಬೇಕಾಗಿರುವುದರಿಂದ ವಿಲಂಬವಾಗಲಾರದೇ ! ॥೧೧॥

ಇದಲ್ಲದೇ ಭವಾನಿಯು ಮಾರ್ಗಾಯಾಸದಿಂದ ಬಳಲಿದವಳಾಗಿ, ಮೆಲ್ಲಮೆಲ್ಲನೆ ಬೀಸುವ ಬಾಲಮಾರುತವಿರುವೆಡೆಯಲ್ಲಿ ವಿಶ್ರಮಿಸಿಕೊಂಡು ನಿಧಾನವಾಗಿ ಇತ್ತ ಸಾಗುತ್ತಿರುವಳು. ॥೧೨॥

ನ ಕದಾಪ್ಯನುಭುಕ್ತೋಽಸ್ತಿ ಮಾರ್ಗಾಯಾಸಸ್ತಯಾ ಶಿವ ।
ಗೌರೀಶರೀರಂ ಲೋಕೇಽಸ್ಮಿನ್ ಕೋಮಲಾದಪಿ ಕೋಮಲಂ ॥೧೩॥

ಕಿಂ ಚ ನಾಟ್ಯಸಮಾರಂಭಸಾಧನಾನಿ ತ್ವಯಾ ಖಲು ।
ಪ್ರೇಷಿತಾನಿ ವಿಚಿತ್ರಾಣಿ ಪ್ರಾಯಸ್ತಲ್ಲಾಲಸಾ ಶಿವಾ ॥೧೪॥

ಗಾನನಾಟ್ಯಸಮಾರಂಭೋಪ್ಯಪೂರ್ವಃ ಕಲ್ಪಿತಸ್ತ್ವಯಾ ।
ತದಾಲೋಕನಸಂತುಷ್ಟಾ ಕಥಮಾಯಾತಿ ಸತ್ವರಂ ॥೧೫॥

ತದಾಲೋಕನವಿಘ್ನೋಽಪಿ ಮಯಾ ಕಾರ್ಯೋಽಧುನಾ ಪ್ರಭೋ ।
ಸ ವಿಘ್ನಸ್ತಾವದೇತಸ್ಯ ಭವತ್ಯೇವಾಪಕಾರಕಃ ॥೧೬॥

ಅಂಬಾ ಪಶ್ಯತಿ ನಾಟ್ಯಂ ಚೇತ್ತತ್ತನ್ನಾಟ್ಯಾವಲೋಕನೇ ।
ಮಯಾನುಕೂಲಾಚರಣಂ ಕರ್ತವ್ಯಮಿತಿ ಮನ್ಮಹೇ ॥೧೭॥

ನಮ್ಮ ತಾಯಿಯು ಮಾರ್ಗದಲ್ಲಿ ನಡೆಯುವುದರಿಂದ ಉಂಟಾಗುವ ಆಯಾಸವನ್ನು ಈ ಹಿಂದೆ ಎಂದೂ ಅನುಭವಿಸಿದವಳಲ್ಲ. ಈ ಲೋಕದಲ್ಲಿ ಗಿರಿಜೆಯ ಶರೀರದಂತೆ ಸುಕುಮಾರವಾದ ಬೇರೊಂದು ವಸ್ತುವೇ ಇರುವುದಿಲ್ಲ. ॥೧೩॥

ಮತ್ತು ನೀನು ನರ್ತನಕ್ಕೆ ಉಪಯುಕ್ತವಾಗುವಂತಹ ಸಾಮಗ್ರಿಗಳನ್ನು ಅವಳಿದ್ದೆಡೆಗೆ ಕಳುಹಿಸಿರುವೆಯಲ್ಲವೇ? ಆದುದರಿಂದ ದೇವಿಯು ಪ್ರಾಯಶಃ ನರ್ತನವನ್ನು ನೋಡುವುದರಲ್ಲಿ ಆಸಕ್ತಳಾಗಿರಬಹುದು. ॥೧೪॥

ಅದ್ಭುತವಾದ ಗಾನಸಮಾರಂಭವನ್ನೂ ಮತ್ತು ನಾಟ್ಯಸಮಾರಂಭವನ್ನೂ ನೀನು ಅಲ್ಲಿಯೇ ನಿರ್ಮಿಸಿರುವೆ. ಅವುಗಳನ್ನು ನೋಡಿ ಸಂತೋಷಗೊಂಡ ದೇವಿಯು ಹೇಗೆ ತಾನೇ ಶೀಘ್ರವಾಗಿ ಬರುವಳು? ॥೧೫॥

ಪ್ರಭೋ, ಈಗ ನಾನು ದೇವಿಯನ್ನು ಕರೆತರಲು ಹೋದರೆ ಅವಳ ನಾಟ್ಯಾವಲೋಕನಕ್ಕೆ ವಿಘ್ನವನ್ನುಂಟುಮಾಡಬೇಕಾಗುವುದು. ಆ ವಿಘ್ನದಿಂದ ನಾನೇ ದೇವಿಯ ಆಗ್ರಹಕ್ಕೆ ಪಾತ್ರನಾಗುವೆನು. ॥೧೬॥

ಮಾತೆಯು ನಾಟ್ಯವನ್ನು ನೋಡುತ್ತಲಿದ್ದರೆ ಅವಳ ನಾಟ್ಯಾವಲೋಕನಕ್ಕೆ ನಾನು ಅನುಕೂಲವುಂಟಾಗುವಂತೆ ವರ್ತಿಸುವುದೇ ಯುಕ್ತವಾಗಿರುವುದೆಂದು ನನಗೆ ತೋರುವುದು. ॥೧೭॥

ಆಂಬಾಮಹೋತ್ಸವೇ ವಿಘ್ನಂ ಕಿಂ ಕರ್ತುಂ ಯತತೇ ಮನಃ ।
ಕೃತೇಽಪಿ ಯತ್ನೇ ತದ್ವಿಘ್ನೇ ಯನ್ನ ವಿಘ್ನೋ ಭವಿಷ್ಯತಿ ॥೧೮॥

ಅನ್ಯೇಷ್ವವಿಘ್ನಾಚರಣೇ ಸಾಮರ್ಥ್ಯಂ ಮಮ ಯದ್ಯಪಿ ।
ತದ್ವಿಘ್ನಚರಣೇ ಯತ್ನಃ ಕೃತೋಽಪಿ ವಿಫಲೋ ಭವೇತ್ ॥೧೯॥

ಬಲಾಬಲವಿಚಾರೇಣ ಯತ್ಕಾರ್ಯಕರಣೋದ್ಯತಃ ।
ತೇನ ಕಾರ್ಯಂ ಭವತ್ಯೇವ ನಾನ್ಯೇನೈವಾವಧಾರಿತಂ ॥೨೦॥

ತವಾಪಿ ಯದಿ ಸಂಜಾತಾ ತದಭ್ಯಾಗಮನತ್ವರಾ ।
ತಥಾ ಕಥಮಿತಃ ಸರ್ವಮಪೂರ್ವಂ ಪ್ರೇಷಿತಂ ತ್ವಯಾ ॥೨೧॥

ಬ್ರಹ್ಮಾಂಡಮಧ್ಯೇ ಯತ್ತುಲ್ಯಂ ವಸ್ತು ಕ್ವಾಪಿ ನ ದೃಶ್ಯತೇ ।
ತಾದೃಶಂ ಸೃಷ್ಟಮದ್ಯೇಶ ತ್ವಯಾ ವಿಶ್ವಾತ್ಮನಾ ಖಲು ॥೨೨॥

ದೇವಿಯ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಆ ನಾಟ್ಯಸಮಾರಂಭಕ್ಕೆ ವಿಘ್ನವನ್ನು ತರಲು ನನ್ನ ಮನಸ್ಸು ಎಂದಿಗೂ ಬಯಸುವುದಿಲ್ಲ. ಹೀಗೆ ವಿಘ್ನವನ್ನುಂಟುಮಾಡಲು ಯತ್ನಿಸಿದರೂ ಸಹ ಅದು ಅವಳಲ್ಲಿ ವಿಘ್ನವಾಗಿ ಪರಿಣಮಿಸಲಾರದು. ॥೧೮॥

ಇತರರಿಗೆ ಇಷ್ಟವಾದ ಕಾರ್ಯದಲ್ಲಿ ವಿಘ್ನವನ್ನುಂಟುಮಾಡಲು ನಾನು ಶಕ್ತನಾಗಿರುವೆನು. ಆದರೆ ಗಿರಿಜೆಯ ಕಾರ್ಯಕ್ಕೆ ವಿಘ್ನವನ್ನು ತರಲು ಯತ್ನಿಸಿದರೂ ಆ ಯತ್ನವು ಸಫಲವಾಗಲಾರದು. ॥೧೯॥

ಯುಕ್ತಾಯುಕ್ತವನ್ನು ವಿಚಾರಿಸಿ ಯಾವ ಕಾರ್ಯವನ್ನು ಮಾಡತೊಡಗಿದರೂ ಅದು ಫಲಿಸುವುದು. ಅದಿಲ್ಲದಿದ್ದರೆ ಯಾವುದೂ ಸಫಲವೆನಿಸಲಾರದು. ॥೨೦॥

ನೀನು ದೇವಿಯ ಆಗಮನದಲ್ಲಿ ಆತುರಗೊಂಡವನೇ ಆಗಿದ್ದರೆ, ಅಪೂರ್ವವಾದ ಆ ನಾಟ್ಯದ ಸಲಕರಣೆಗಳನ್ನು ದೇವಿಯ ಸನ್ನಿಧಿಗೆ ಕಳುಹಿಸಲು ಕಾರಣವೇನು ? ॥೨೧॥

ಪ್ರಭುವೇ, ಜಗತ್ಕಾರಣನಾದ ನೀನು ಈಗ ಸೃಷ್ಟಿಸಿದ ವಸ್ತುವಿಗೆ ಸದೃಶವಾದ ವಸ್ತುವು ಬ್ರಹ್ಮಾಂಡದಲ್ಲಿಯೇ ಕಾಣುವುದಿಲ್ಲವಲ್ಲಾ ! ॥೨೨॥

ಅದೃಷ್ಟಪೂರ್ವಂ ದೃಷ್ಟ್ವಾಪಿ ಕಸ್ಯ ನಾವಿರತಂ ಮನಃ ।
ದೃಷ್ಟಪೂರ್ವಾಭಿಮರ್ಷೇಽಪಿ ನ ರಮ್ಯೇ ವಿರತಂ ಮನಃ ॥೨೩॥

ತದ್ವಿಘ್ನಚರಣೇ ಗೌರೀ ಕುಪಿತಾ ಯದಿ ಪಶ್ಯತಿ ।
ತದಾ ಮಮಾತ್ರ ಗಮನಂ ಪುನಃ ಶಂಕಿತಮೇವ ನ ॥೨೪॥

ಬ್ರಹ್ಮಾಂಡಮಂಡಲೇ ಕೋ ವಾ ತದ್ವಿಘ್ನಾಯ ಪ್ರವರ್ತತೇ ।
ಜೀವನಾಶಾಪರಿತ್ಯಾಗೇ ಕದಾಚಿದ್ಯತತೇ ತಥಾ ॥೨೫॥

ಭವತ್ಪದಾಂಭೋಜವಿಲೋಕನಾಯ
ಪುನಃ ಪುನಶ್ಚಿತ್ತಮಿದಂ ಪ್ರವೃತ್ತಂ ।
ನಾನ್ಯತ್ರ ಗಂತುಂ ಯತತೇ ಮಹೇಶ
ತ್ವಮೇವ ಮಾತಾ ಚ ಪಿತಾ ತ್ವಮೇವ ॥೨೬॥

ರಮಣೀಯವಾದ ವಸ್ತುವನ್ನು ಒಂದುಬಾರಿ ನೋಡಿದರೂ ಮನಸ್ಸು ಶಾಂತವಾಗದೇ, ಮತ್ತೆ ಮತ್ತೆ ಅದನ್ನೇ ನೋಡಬಯಸುವುದು. ಹೀಗಿರುವಲ್ಲಿ ಹಿಂದೆಂದೂ ನೋಡದಿರುವ ಸುಂದರವಾದ ವಸ್ತುವು ದೃಷ್ಟಿಗೋಚರವಾದರೆ, ಅದನ್ನು ಸ್ವಲ್ಪಹೊತ್ತು ನೋಡಿದರೆ ಮನಸ್ಸಿಗೆ ತೃಪ್ತಿಯುಂಟಾದೀತೇ! ॥೨೩॥

ಹೀಗಿರುವಾಗ ನಾನು ದೇವಿಯ ಆನಂದಕ್ಕೆ ವಿಘ್ನವನ್ನುಂಟುಮಾಡಿದರೆ ಮಾತೆಯು ನನ್ನಲ್ಲಿ ಕೋಪಗೊಳ್ಳಲಾರಳೇ! ಆಗ ನಾನು ಇಲ್ಲಿಗೆ ಹಿಂದಿರುಗಿ ಮತ್ತೆ ಬರುವೆನೆಂಬುದೇ ಅಸಂಭವವಾದೀತು! ॥೨೪॥

ಈ ಬ್ರಹ್ಮಾಂಡದಲ್ಲಿ ಯಾವನು ತಾನೇ ಜನನಿಯ ಕಾರ್ಯಕ್ಕೆ ವಿಘ್ನವನ್ನುಂಟುಮಾಡಿಯಾನು? ಒಂದುವೇಳೆ ಯಾವನಾದರೂ ಯತ್ನಿಸಿದರೆ ಅವನು ತನ್ನ ಜೀವದ ಮೇಲಿನ ಆಶೆಯನ್ನು ತೊರೆದಂತೆಯೇ ಸರಿ. ॥೨೫॥

ಮಹೇಶನೇ, ಬಾರಿಬಾರಿಗೂ ನಿನ್ನ ಅಡಿದಾವರೆಗಳನ್ನೇ ನೋಡತೊಡಗಿರುವ ಈ ನನ್ನ ಮನಸ್ಸು ನಿನ್ನನ್ನು ಬಿಟ್ಟು ಬೇರೆ ಎಲ್ಲಿಯೂ ಹೋಗಬಯಸುವುದಿಲ್ಲ. ನನಗೆ ನೀನೇ ತಂದೆ. ನೀನೇ ನನ್ನ ತಾಯಿ. ॥೨೬॥

ತ್ವತ್ಪಾದಪದ್ಮಭ್ರಮರತ್ವಮೇತ
ನ್ಮನೋಭಿವಾಂಛಂತ್ಯತಿಲಾಲಸಂ ಚ ।
ಕಿಮುತ್ತಮಂ ವಸ್ತು ವಿಹಾಯ ಯಾತಿ
ಪವಿತ್ರವೃತ್ತಿಃ ಸುಖವೃತ್ತಿಕಾಮಃ ॥೨೭॥

ಯನ್ನಃ ಶ್ರುತಂ ವೇದವಚಃಪ್ರಪಂಚ
ವಿಚಾರವಿಸ್ತಾರಪರೈರಪಾರೇ ।
ತದದ್ಯ ದೃಷ್ಟ್ವಾಽಪಿ ವಿಹಾಯ ಯಾತಿ
ಚಿತ್ತಂ ತಪೋಲಬ್ಧಮಿದಂ ಕಥಂ ವಾ ॥೨೮॥

ಅತಃ ಪರಂ ತೇ ಮಯಿ ಸತ್ಕೃಪಾ ಚೇತ್
ನ ಯಾಮಿ ಕಾಮಂ ಖಲು ಕಾಲಕಾಲ ।
ತ್ವತ್ಪಾದುಕಾರಾಧನಸೇವನಾಭ್ಯಾ
ಮನ್ಯತ್ರ ತಾವನ್ನರುಚಿರ್ಮಮಾದ್ಯ ॥೨೯॥

ನನ್ನ ಚಿತ್ತವು ನಿನ್ನ ಪಾದಕಮಲದಲ್ಲಿ ಭ್ರಮರದ ರೂಪದಿಂದಿದ್ದು ಧೂಳಿಯೆಂಬ ಮಕರಂದವನ್ನು ಆಸ್ವಾದಿಸಲು ಇಚ್ಛಿಸುತ್ತಲಿದೆ. ಶುದ್ಧವಾದ ಚಾರಿತ್ರ್ಯವುಳ್ಳವನೂ, ತಾನು ಸುಖಿಯಾಗಿರಬೇಕೆಂದು ಇಚ್ಛಿಸುವವನೂ, ಶ್ರೇಷ್ಠವಾದ ಮತ್ತು ಸುಖಸಾಧನವಾದ ವಸ್ತುವನ್ನು ಬಿಟ್ಟು ಬೇರೆಯ ಕಡೆಗೆ ದೃಷ್ಟಿಯಿಡುವನೇ? ||೨೭||

ಈ ಹಿಂದೆ ನಾವು ವೇದಾರ್ಥವನ್ನು ವಿಸ್ತಾರವಾಗಿ ತಿಳಿಸುವ ಮಹಾಮಹಿಮರಾದ ಜ್ಞಾನಿಗಳ ಮೂಲಕ ನಿನ್ನ ಶಾಶ್ವತವಾದ ಈ ಸ್ವರೂಪವನ್ನು ಪರೋಕ್ಷದಲ್ಲಿ ತಿಳಿದಿದ್ದೆವು. ತಪಸ್ಸಿನಿಂದ ಸಾಕ್ಷಾತ್ಕರಿಸಲ್ಪಟ್ಟ ಆ ಸ್ವರೂಪವನ್ನು ಈಗ ನಾವು ಅಪರೋಕ್ಷವಾಗಿ ನೋಡಿ ಬಿಟ್ಟುಹೋಗಲು, ಈ ಮನಸ್ಸು ಹೇಗೆತಾನೆ ಅಪೇಕ್ಷಿಸುವುದು? ಪ್ರತ್ಯಕ್ಷವಾಗಿ ಗೋಚರಿಸಿರುವ ನಿನ್ನನ್ನು ಅಗಲಲು ನಮ್ಮ ಮನಸ್ಸು ಎಂದಿಗೂ ಇಚ್ಛಿಸದು. ||೨೮||

ಪ್ರಭುವೇ, ಇನ್ನಾದರೂ ನಿನಗೆ ನನ್ನಲ್ಲಿ ದಯೆಯಿದ್ದುದೇ ಆದರೆ ನಾನು ನಿನ್ನನ್ನು ತೊರೆದು ಎಲ್ಲಿಗೂ ಹೋಗದಂತೆ ಅನುಗ್ರಹಿಸು. ನಿನ್ನ ಪಾದಗಳ

ಅಂಬಾ ಸಮಾಯಾಸ್ಯತಿ ಚೇದಿದಾನೀಂ
ತ್ವತ್ಪಾದಪದ್ಮಾರ್ಚನವಿಘ್ನ ಏವ ।
ನೂನಂ ತದಭ್ಯಾಗಮನಂ ತದಾನೀ
ಮವಿಘ್ನತಸ್ತ್ವತ್ಪದಪೂಜನಂ ನ ॥೩೦॥

ಯೋಷಾ ಜಾರಮಿವ ಪ್ರಿಯಾ ಪ್ರಿಯತಮಂ ತ್ವತ್ಪಾದಪದ್ಮಂ ಮಯಾ
ಪ್ಯಾಲಿಂಗಾದ್ಯ ಮಮ ಪ್ರಯಾತಿ ನ ಕಥಂ ಸ್ವಾಭೀಷ್ಟಸಿದ್ಧಿಂ ವಿನಾ ।
ತ್ಯಕ್ತುಂ ವಾಂಛತಿ ಜಾರಮಪ್ಯತಿಧನಂ ತದ್ವನ್ಮನೋ ಮೇ ಪ್ರಭೋ
ಮಚ್ಚಿತ್ತಭ್ರಮರೋ ಜಹಾತಿ ನ ಭವತ್ಪಾದಾಂಬುಜಂ ಶಂಕರಂ ॥೩೧॥

ಅನಂತಜನಿಸಂಚಿತೈರಮಿತಪುಣ್ಯಪೂರ್ಣಾರ್ಣವೈ
ರಿದಂ ಶಿವಪದಾಂಬುಜಂ ನಯನಗೋಚರಂ ಜಾಯತೇ ।

ಪೂಜೆಗಿಂತಲೂ ಮತ್ತು ಸೇವೆಗಿಂತಲೂ ಬೇರೆ ಯಾವ ಕಾರ್ಯವೂ ನನಗೆ ರುಚಿಸುವುದಿಲ್ಲ. ॥೨೯॥

ದೇವಿಯು ಈಗಲೇ ನಿನ್ನ ಬಳಿಗೆ ಬಂದರೆ, ನನಗೆ ನಿನ್ನ ಅಡಿದಾವರೆಗಳನ್ನು ಪೂಜಿಸಲು ವಿಘ್ನವುಂಟಾಗುವುದು. ಈಗ ಅವಳು ಇಲ್ಲಿಗೆ ಬಂದುದೇ ಆದರೆ, ನಿನ್ನ ಪಾದಪೂಜೆಯು ನಿರ್ವಿಘ್ನವಾಗಿ ನೆರವೇರುವುದಿಲ್ಲ ಎಂಬುದು ನನ್ನ ನಿಶ್ಚಯ. ॥೩೦॥

ದೇವನೇ, ಜಾರಸ್ತ್ರೀಯು ಜಾರನನ್ನೂ, ಕುಲಾಂಗನೆಯು ವಲ್ಲಭನನ್ನೂ ಆಲಿಂಗಿಸಿಕೊಂಡು ತನಗೆ ಸುಖವು ಲಭಿಸದೇ ಹೇಗೆ ಅವನನ್ನು ಬಿಡುವುದಿಲ್ಲವೋ, ಅದರಂತೆ ನನ್ನ ಚಿತ್ತವು ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳದೆ ನಿನ್ನ ಸ್ಮರಣೆಯನ್ನು ಬಿಡುವುದಿಲ್ಲ. ಜಾರಸ್ತ್ರೀಯು ತನ್ನ ಇಷ್ಟಾರ್ಥವು ಫಲಿಸದ ಹೊರತು, ಧನಾಢ್ಯನಾದ ತನ್ನ ರಮಣನನ್ನು ಹೇಗೆ ದೂರ ಮಾಡಲಿಚ್ಛಿಸುವುದಿಲ್ಲವೋ, ಅದರಂತೆ ನನ್ನ ಈ ಮನಸ್ಸೆಂಬ ಭ್ರಮರವು ನಿನ್ನ ಅಡಿದಾವರೆಗಳ ಮಕರಂದವನ್ನು ಪಾನಮಾಡಿ ತೃಪ್ತಿಯನ್ನು ಹೊಂದಿದ ಹೊರತು, ಅದನ್ನು ತೊರೆಯಲಿಚ್ಛಿಸುವುದಿಲ್ಲ. ॥೩೧॥

ಜನ್ಮಜನ್ಮಾಂತರಗಳಲ್ಲಿ ಆಚರಿಸಿದ ಅನೇಕ ಪುಣ್ಯಕರ್ಮಗಳ ಮಹಿಮೆಯಿಂದ ಶಿವನ ಅಡಿದಾವರೆಯ ದರ್ಶನವು ನನಗೆ ಲಭಿಸಿರುವುದು. ಜಗತ್ಪತಿಯೇ,

ಜಗಜ್ಜನಕಶಂಕರ ತ್ರಿದಶನಾಯಕಾವ ಪ್ರಭೋ
ಭವತ್ಪದಸರೋರುಹಭ್ರಮರ ಏವ ಚಿತ್ತಂ ಮಮ ॥೩೨॥

ಭವಂತು ಬಹವಸ್ಸುರಾಸ್ತ್ರಿಪುರಸೂದನಾರಾಧಕಾಃ
ಪರಂ ತು ನ ಸುರೈರಿದಂ ತವ ಪದಾಂಬುಜಂ ದೃಶ್ಯತೇ ।
ಅಪಾರಭವಸಾಗರಪ್ರಮಥವೀರಗೌರೀಪತೇ
ಚಿರಂ ಮಮ ಮನಃ ಪಥೇ ತವ ವಿಹಾರಮುನ್ವಿಚ್ಛತಿ ॥೩೩॥

ಅಲಂ ವಿಮಲಯೋಗಿಹೃತ್ಕಮಲಮಧ್ಯವಾಸೈರಲಂ
ಶಿವಾಂಘ್ರಿಕಮಲಾಧುನಾಶರಣಾದಾಗ್ರಗಣ್ಯಾದರಾತ್ ।
ವಸಸ್ವ ಮಮ ಮಾನಸೇ ಕುಗತಿಭೂರಿಭಾರಾಲಸೇ
ವಿಚಾರಗಿರಿಗಹ್ವರಪ್ರಕರಭೂತಭೂಸಾಧ್ವಸೇ ॥೩೪॥

ಅನಾಥಶರಣಾಗತಾಸುರಸುರೈಕರಕ್ಷಾಮಣೇ
ತ್ರಿಯಂಬಕ ಸದಾಶಿವ ತ್ರಿಪುರಮರ್ದನಾಶಾಂ ಹರ ।

ದೇವದೇವನೇ, ನನ್ನ ಈ ಚಿತ್ತವು ನಿರಂತರವೂ ನಿನ್ನ ಪಾದಕಮಲಗಳನ್ನೇ ಸ್ಮರಿಸುವುದಲ್ಲದೇ, ಅದನ್ನು ತೊರೆದು ಇನ್ನೆಲ್ಲಿಗೂ ಹೋಗಲಾರದು. ತಂದೆಯೇ, ಅಂತಹ ನನ್ನನ್ನು ರಕ್ಷಿಸು. ॥೩೨॥

ಅನೇಕ ದೇವತೆಗಳು ತ್ರಿಪುರಸಂಹಾರಕನಾದ ನಿನ್ನನ್ನು ಸರ್ವದಾ ಪೂಜಿಸುವರು. ಆದರೂ ಅವರು ನಿನ್ನ ಈ ಪಾದಕಮಲಗಳನ್ನು ನೋಡಿರುವುದಿಲ್ಲ. ಉಮಾಕಾಂತನೇ, ಅಪಾರವಾದ ಸಂಸಾರವನ್ನು ನಾಶಮಾಡಲು ಸಮರ್ಥನಾದ ನೀನು ಚಿರಕಾಲ ನನ್ನ ಮನಸ್ಸಿನಲ್ಲಿದ್ದು ವಿಹರಿಸುವವನಾಗು. ॥೩೩॥

ಸ್ವಾಮಿಯೇ, ಯೋಗಿಗಳ ಹೃದಯವೆಂಬ ಕಮಲದಲ್ಲಿ ವಾಸಮಾಡುವುದನ್ನು ಇನ್ನು ಸಾಕುಮಾಡು. ನಿರ್ಗತಿಕರಾಗಿ ನಿನ್ನನ್ನೇ ಮೊರೆಹೊಕ್ಕವರನ್ನು ಕಾಪಾಡುವುದರಲ್ಲಿ ದೃಢಚಿತ್ತನಾದ ನೀನು, ದುರ್ಮಾರ್ಗವೆಂಬ ಭಾರದಿಂದ ಆಯಾಸಗೊಂಡಿರುವ, ಮತ್ತು ನಿರಂತರವೂ ನಿನ್ನನ್ನೇ ಧ್ಯಾನಮಾಡುವುದರಲ್ಲಿ ಆಸಕ್ತವಾದ ನನ್ನ ಮನಸ್ಸಿನಲ್ಲಿ ಅಕ್ಕರೆಯಿಂದ ವಾಸಿಸುವವನಾಗು. ॥೩೪॥

ಪ್ರಭುವೇ, ನಿರ್ಗತಿಕರಾಗಿ ನಿನ್ನನ್ನೇ ನಿರಂತರವೂ ಮೊರೆಯಿಡುವ ದೇವತೆಗಳನ್ನು ರಕ್ಷಿಸುವವನು ನೀನೊಬ್ಬನೇ ಅಲ್ಲವೆ! ಮುಕ್ಕಣ್ಣನೇ, ಸುಖಕರನೇ,

ಕೃಪಾಸುರಸಸಾಗರ ಸ್ಮರಹರಾಂಧಕಾರೇ ಹರ
ಪ್ರಸೀದ ಭಗವನ್ ಪ್ರಭೋ ಭವ ಭವಾಬ್ಧಿಸಂಶೋಷಕ ॥೩೫॥

ಯದಿ ತ್ರಿನಯನಾಧುನಾ ತವ ಪದಾಂಬುಜಂ ತ್ಯಜ್ಯತೇ
ಮದೀಯಮಪಿ ಮಾನಸಭ್ರಮರಮದ್ಯ ಸಂಮೂರ್ಛಿತಂ ।
ಕ್ಷಣೇನ ಹತಮೇವ ವಾ ವಿಗತಜೀವನಂ ಮನ್ಮಹೇ
ನ ಜೀವನವಿವರ್ಜಿತಂ ಕ್ವ ಚ ನ ಜೀವಜಾತಂ ಪ್ರಭೋ ॥೩೬॥

ಶಿವೈಕಶರಣಸ್ಯ ಮೇ ಶರಣಮನ್ಯದಸ್ತೀತಿ ಕಿಂ
ಭ್ರಮೋಽಪಿ ಭವತಿ ಪ್ರಭೋ ಭವಪದಾಂಬುಜಾರಾಧನಂ ।
ನಿಧಾನಮಿತಿ ಮೇ ಮತಿಸ್ತದಿತರಂ ನಿಧಾನಂ ನ ಮೇ
ತದೇವ ನಿಧನೇಽಪಿ ಮೇ ಧನಮನನ್ಯಲಭ್ಯಂ ಧನಂ ॥೩೭॥

ಮಹೇಶ್ವರ ಕದಾಪಿ ವಾ ನ ಚ ಜಿಹಾಸ್ಯಮಾಸ್ಯಾಂತರ
ಸ್ಥಿತಂ ನಮತಿ ನಿರ್ಮಲಂ ಶಿವನಿವೇದಿತಂ ಸಾದರಂ ।

ತ್ರಿಪುರಸಂಹಾರಕನೇ, ಪಾಪನಾಶಕನೇ, ಕೃಪಾಸಾಗರನೇ, ಮನ್ಮಥಾರಿಯೇ, ಸಂಸಾರದುಃಖನಾಶಕನೇ, ನನ್ನಲ್ಲಿ ಪ್ರಸನ್ನನಾಗು. ||೩೫||

ತ್ರಿನಯನನೇ, ಈಗ ನಾನು ನಿನ್ನ ಅಡಿದಾವರೆಯನ್ನಗಲಿದವನಾದರೆ ನನ್ನ ಮನಸ್ಸೆಂಬ ಭ್ರಮರವೂ ಸಹ ಈಗಲೇ ಮೂರ್ಛೆಯನ್ನೈದುವುದು. ಇದು ನಿಜ. ಹಾಗೆ ಮೂರ್ಛೆಗೊಂಡು ಕ್ಷಣಕಾಲದಲ್ಲಿಯೇ ನಷ್ಟವೂ ಆಗುವುದು. ಆಗಲೇ ನಾನು ಗತಜೀವನಾಗುವೆ. ಪ್ರಾಣಧಾರಣೆಯಿಲ್ಲದಿದ್ದರೆ ಜೀವಿಯು ಬದುಕುವನೇ ! ||೩೬||

ಶಿವನನ್ನೊಬ್ಬನನ್ನೇ ಮೊರೆಹೊಕ್ಕಿರುವ ನನಗೆ, ಅವನಿಗಿಂತಲೂ ಇತರನು ರಕ್ಷಕನಿರುವನೆಂಬ ಜ್ಞಾನವಾದರೂ ಉದಯವಾಗುವುದೇ ? ಶಿವ ಎಂಬ ವಸ್ತುವೇ ನನಗೆ ಧ್ಯೇಯವಾಗಿರುವುದಲ್ಲದೆ ಬೇರೆ ಯಾವ ವಸ್ತುವನ್ನೂ ನಾನು ಧ್ಯಾನಿಸುವುದಿಲ್ಲ. ಹೀಗೆ ಮಹೇಶನಾದ ನಿನ್ನಲ್ಲಿಯೇ ಅನನ್ಯಮನಸ್ಕನಾದ ನನಗೆ, ಮರಣವೇ ಪ್ರಾಪ್ತವಾದರೂ, ಅಲಭ್ಯವಾದ ಧನವು ಲಭಿಸಿದಂತೆಯೇ ಸರಿ. ||೩೭||

ಮಹೇಶ್ವರನೇ, ನಿನಗೆ ನಿವೇದಿತವಾದ ವಸ್ತುವು ಸದಾ ನನ್ನ ಬಾಯಲ್ಲಿ ನೆಲಸಲಿ. ಅದು ಸರ್ವರಿಗೂ ಪೂಜ್ಯವೆನಿಸಿದೆ. ಕಲ್ಲುಸಕ್ಕರೆಯಂತೆ ಸದಾ ಮಧುರ

ಅಮೂಲ್ಯಸಿತಶರ್ಕರಾಮಧುರಮೇವಮಾಶಾಧುನಾ
ಭವತ್ಪದಸರೋರುಹಂ ನ ಮಮ ಮಾನಸಂ ತ್ಯಕ್ಷ್ಯತಿ ॥೩೮॥

ಕ್ಷಣಾರ್ಧಮಪಿ ವಾ ಮನಃ ಸ್ಮರಹರಾಂಘ್ರಿಪಂಕೇರುಹ
ಪ್ರಭೂತಮಕರಂದಪಃ ಪ್ರಮುದಧಾರಯಾ ಧೀರಯಾ ।
ಸುಧಾಮಪಿ ವಿಹಾಯ ತಾಂ ವಿಹರ ಸಾದರಂ ಕ್ವಾದರಃ
ತವಾಪಿ ಮಮ ವಾ ಮನಃ ಶರಣಮಿಂದುಮೌಳಿಂ ವ್ರಜ ॥೩೯॥

ವ್ರಜ ವ್ರಜ ನಿರಂತರಂ ವ್ರಜ ಮಹೇಶಪಾದಾಂಬುಜಂ
ಭಜಾಭಯದಮನ್ವಹಂ ಭಜ ಭಜಾಧುನಾ ವಾ ಭಜ ।
ಕಥಂ ನ ಭಜನೇ ರತಿಃ ಶಿವಪದಾಂಬುಜಸ್ಯಾನ್ಯಥಾ
ಜ್ವಲ ಜ್ವಲನತೇಜಸಾ ಜ್ವಲತು ತೇ ಸ್ವರೂಪಂ ಮುಹುಃ ॥೪೦॥

ನಿಧಾನಮಿದಮೇವ ಮೇ ಸುಕೃತಸಿಂಧುಸಂಘಾರ್ಜಿತಂ
ಮಮಾದ್ಯ ನಿಧಯೋ ನವತ್ರಿಪುರವೈರಿಪಾದಾಂಬುಜಂ ।

ವಾಗಿದೆ. ಅಂತಹ ಪ್ರಸಾದವನ್ನು ಆಸ್ವಾದಿಸುತ್ತಾ ನನ್ನ ಮನಸ್ಸು ಸರ್ವದಾ ನಿನ್ನ ಪಾದಕಮಲವನ್ನು ಧ್ಯಾನಿಸುತ್ತಿರಲಿ. ॥೩೮॥

ಎಲೈ ಮನಸ್ಸೆಂಬ ಭ್ರಮರವೇ, ಕ್ಷಣಾರ್ಧಕಾಲವಾದರೂ ಶಿವನ ಅಡಿದಾವರೆಗಳ ಮಕರಂದವನ್ನು ಪಾನಮಾಡು. ರುಚಿಕರವಾದ ಅಮೃತವು ಲಭಿಸಿದರೂ ಅದನ್ನು ತೊರೆದು ಶಿವನ ಅಡಿದಾವರೆಗಳ ಮಕರಂದವನ್ನೇ ಆಸ್ವಾದಿಸು. ಶಂಕರ ನನ್ನು ಬಿಟ್ಟು ನನಗಾಗಲಿ ಅಥವಾ ನಿನಗಾಗಲಿ ರಕ್ಷಣೆಯೊಂದು ಬೇರೆಕಡೆ ದೊರಕುವುದೇ ? ಆದುದರಿಂದ ಸರ್ವದಾ ಚಂದ್ರಶೇಖರನನ್ನೇ ಸ್ಮರಿಸುತ್ತಿರು. ॥೩೯॥

ನಿರಂತರವೂ ಶಿವನ ಅಡಿದಾವರೆಯನ್ನೇ ನಂಬಿ ಶರಣುಹೊಂದು. ಮತ್ತು ನಿರಂತರವೂ ಅಭಯಪ್ರದವಾದ ಶಿವಪಾದಪದ್ಮವನ್ನೇ ಭಜಿಸು. ಅಥವಾ ಕ್ಷಣಕಾಲವಾದರೂ ಶಿವನ ಪಾದಪದ್ಮವನ್ನು ಸೇವಿಸುವುದರಲ್ಲಿ ಹಿಂಜರಿಯಬೇಡ. ಅದರಲ್ಲಿ ಪ್ರೀತಿಯಿಲ್ಲದಿದ್ದರೆ ನಿನ್ನ ಸ್ವರೂಪಕ್ಕೆ ಧಿಕ್ಕಾರವೊದಗುವುದು. ಮತ್ತು ನೀನು ಪರಶಿವನ ಆಗ್ರಹಕ್ಕೆ ಸಿಕ್ಕಿ ಉರಿಯಿಂದ ಭಸ್ಮವಾಗುವೆ. ॥೪೦॥

ಶಿವಪಾದಪದ್ಮವೇ ನನ್ನ ಪುಣ್ಯರಾಶಿಯೆಂಬ ಸಮುದ್ರದಿಂದ ಸಂಪಾದಿಸಲ್ಪಟ್ಟ ಧನವಾಗಿರುವುದು. ಆ ತ್ರಿಪುರಸಂಹಾರಕನಾದ ಶಿವನ ಪಾದಪದ್ಮವೇ ನನಗೆ

ಇದಂ ಖಲು ಸುದುರ್ಲಭಂ ನ ನಿಧಯಸ್ತಥಾ ದುರ್ಲಭಾಃ
ಕಿಮನ್ಯದಪಿ ವಾಂಛಿತಂ ಮಮ ಶಿವಾಂಘ್ರಿಪದ್ಮಂ ವಿನಾ ॥೪೧॥

ಪ್ರಯಾತಿ ಮರಣೇ ಧನಂ ನ ನಿಧಯಃ ಪ್ರಯಾಂತ್ಯೇವ ಕಿಂ
ಪ್ರಯಾಂತಿ ಪಶವಃ ಪ್ರಿಯಾಃ ಪ್ರಿಯತಮಾಃ ಪ್ರಯಾಂತ್ಯೇವ ತಾಃ ।
ತದನ್ಯದಪಿ ಯಾತಿ ತದ್ಧಿತಸುಪುತ್ರಮಿತ್ರಾದಿಕಂ
ನ ಯಾತಿ ಸುಕೃತಂ ಪರಂ ಪಶುಪತಿಪ್ರಸಾದಾರ್ಜಿತಂ ॥೪೨॥

ನ ಸಾತಿಶಯಮೀದೃಶಂ ಪಶುಪತಿಪ್ರಸಾದಂ ವಿದುಃ
ಸ್ಮರಾರಿಚರಣಾರ್ಚನಾದಧಿಕಮಸ್ತಿ ಕಿಂ ವಾ ಫಲಂ ।
ಶ್ರುತಿಶ್ರುತಮನೇಕಧಾ ಶಿವಪದಾಂಬುಜಾರಾಧನಂ
ಪ್ರಧಾನಧನಮಿತ್ಯಪಿ ಪ್ರಥಿತಮೇವ ವೇದೇಷ್ವಪಿ ॥೪೩॥

ನಿರಂತರಮುಮಾಪತಿಸ್ಮರಣಕಾರಣಂ ದುರ್ಲಭಂ
ತಪಃಫಲಮಿದಂ ಮತಂ ಶಿವಪದಾಂಬುಜಾನುಗ್ರಹಾತ್ ।

ರತ್ನ, ವಜ್ರ, ವೈಡೂರ್ಯಾದಿನಿಧಿಯಂತೆ ಇರುವುದು. ನಿಜವಾಗಿಯೂ ರತ್ನ, ವಜ್ರ, ವೈಡೂರ್ಯಾದಿನಿಧಿಗಳು ದುರ್ಲಭವಲ್ಲ. ಶಿವನ ಪಾದಪದ್ಮವೇ ದುರ್ಲಭವಾದುದು. ಶಿವನ ಪಾದಕಮಲವನ್ನು ಬಿಟ್ಟು ಇತರ ಯಾವ ವಸ್ತುವನ್ನು ತಾನೇ ನಾನು ಅಪೇಕ್ಷಿಸುವೆನು ? ॥೪೧॥

ಜೀವಿಯು ಮರಣಾನಂತರ ಧನವೂ, ರತ್ನಾದಿನಿಧಿಗಳೂ ಅವರನ್ನು ಬಿಟ್ಟು ಹೋಗುವುವು. ಇದಲ್ಲದೇ ಪಶು, ಪತ್ನಿ, ಪುತ್ರ, ಮಿತ್ರ ಮುಂತಾದವರೆಲ್ಲರೂ ಅಗಲಿ ಹೋಗುವರು. ಆದರೆ ಶಿವನ ಅನುಗ್ರಹದಿಂದ ಸಂಪಾದಿಸಿದ ಭಾಗ್ಯವೊಂದುಮಾತ್ರ ದೂರಹೋಗದೇ ಸರ್ವದಾ ಜೊತೆಯಲ್ಲಿಯೇ ಬರುವುದು. ॥೪೨॥

ಈ ರೀತಿಯಾದ ಶಿವಾನುಗ್ರಹವು ನಿರತಿಶಯವಾದುದೆಂದು ಭಕ್ತರು ತಿಳಿಯುತ್ತಾರೆ. ಶಿವನ ಅಡಿದಾವರೆಯನ್ನು ಪೂಜಿಸುವುದೇ ಶ್ರೇಯಸ್ಕರ. ಮತ್ತು ಅದೇ ನಮಗೆ ಶ್ರೇಷ್ಠವಾದ ಧನವೂ ಆಗಿರುವುದೆಂದು ವೇದಗಳು ಸಾರಿ ಸಾರಿ ಹೇಳುತ್ತಲಿವೆ, ಎಂಬುದನ್ನು ನಾವು ಅನೇಕಬಾರಿ ಕೇಳಿರುವೆವು. ॥೪೩॥

ಗಿರಿಜಾರಮಣನಾದ ಶಿವನನ್ನು ನಿರಂತರವೂ ಧ್ಯಾನಿಸುವ ಸುಯೋಗವು ದೊರಕುವುದೇ ಕಷ್ಟ. ಆದರೆ ಇದೀಗ ನನಗೆ, ನನ್ನ ತಪಸ್ಸಿನ ಫಲವಾಗಿ ಶಿವನ

ಕಿಮನ್ಯದಧಿಕಂ ಫಲಂ ಶಿವಶಿವೇತಿ ನಾಚಾದರಾತ್
ಕಿಮಸ್ತಿ ಭುವನತ್ರಯೇಽಪ್ಯಧಿಕಮೇತದನ್ಯತ್ತ್ರವ ॥೪೪॥

ಯದಂಘ್ರಿಕಮಲಾರ್ಚನಂ ಜಗತಿ ದುರ್ಲಭಂ ದೇಹಿನಾಂ
ಸುರಾಸುರಮುನೀಶ್ವರಪ್ರವರವಾಂಛಿತಂ ತತ್ಪರಂ ।
ತದೇವ ಪುನರೀಪ್ಸಿತಂ ಮಮ ಪುನಸ್ತದೇವೇಪ್ಸಿತಂ
ತದೇವ ಪುನರೀಪ್ಸಿತಂ ಮಮ ಪುನಸ್ತದೇವೇಪ್ಸಿತಂ ॥೪೫॥

ಇದಂ ಶಿವಪದಾಂಬುಜಂ ಯದಿ ವಿಹಾಯ ಮೋಹಾನ್ಮುಹುಃ
ಪ್ರಯಾತಿ ಮದನಾಂತಕಸ್ಮರಣಹೀನಮೇತನ್ಮನಃ ।
ಪ್ರಣಶ್ಯತು ನ ತೇ ನ ಮೇ ಗಿರಿಶ ಕೃತ್ಯಮಸ್ತಿ ಪ್ರಭೋ
ನ ಚಾಹಿತಮಭೀಪ್ಸಿತಂ ಭವತಿ ಯಾತಿ ಸಂಗ್ರಾಹ್ಯತಾಂ ॥೪೬॥

ಅನುಗ್ರಹದ ದೆಸೆಯಿಂದ ಈ ಸುಯೋಗವು ಲಭಿಸಿರುತ್ತದೆ. ಅನವರತವೂ "ಶಿವ ಶಿವ" ಎಂದು ಶಿವನಾಮೋಚ್ಚರಣೆಯನ್ನು ಮಾಡುವುದಕ್ಕಿಂತಲೂ ಅಧಿಕವಾದ ಫಲವು ಯಾವುದಿರುವುದು? ಮೂರು ಲೋಕಗಳಲ್ಲಿಯೂ ಶಿವನಾಮೋಚ್ಚಾರಣೆಗಿಂತಲೂ ಶ್ರೇಷ್ಠವಾದ ವಸ್ತುವೇ ಇಲ್ಲವೆಂದು ನನ್ನ ಭಾವನೆ. ||೪೪||

ಯಾವ ದೇವನ ಅಡಿದಾವರೆಗಳನ್ನು ಪೂಜಿಸುವ ಯೋಗವು ಲಭಿಸುವುದೇ ಮನುಜರಿಗೆ ಕಷ್ಟತಮವಾದುದೋ, ಮತ್ತು ಯಾರ ಪಾದಕಮಲವನ್ನು ಅರ್ಚಿಸಲು ದೇವಾಸುರರೂ ಮತ್ತು ಮುನಿಶ್ರೇಷ್ಠರೂ ಸಹ ಬಯಸುತ್ತಿರುವರೋ, ಅದನ್ನೇ ನಾನೂ ಸಹ ಬಯಸುವೆನು. ಅದೇ ನನಗೆ ಹಿತಕರವಾದುದು. ||೪೫||

ನನ್ನ ಈ ಚಿತ್ತವು, ಶಿವನ ಅಡಿದಾವರೆಯನ್ನು ಬಿಟ್ಟು, ಅವಿವೇಕದಿಂದ ಶಿವನನ್ನು ಸ್ಮರಿಸದೇ ಬೇರೆಯ ಕಡೆಗೆ ಹೋಗುವುದಾದರೆ, ಅದು ನಾಶವಾದಂತೆಯೇ ಸರಿ. ಒಂದುವೇಳೆ ನನ್ನ ಮನಸ್ಸು ಹಾಗೆ ನಾಶವಾದರೂ, ನನ್ನ ಇಷ್ಟಾರ್ಥವು ಸಿದ್ಧಿಸುವಂತೆ ನೀನು ಅನುಗ್ರಹಿಸು. ಗಿರೀಶನೇ, ನಿನ್ನಲ್ಲಿ ನಾನು ಪ್ರಾರ್ಥಿಸುವ ವರವಿದೊಂದೇ. ||೪೬||

ಪರಾತ್ಪರತರಾಮರಪ್ರವರ ಶಂಕರಾಧೀರತಾಂ
ಹರಾದರವಶಾನ್ಮಮ ತ್ವಮಸಿ ಮೇ ಗತಿಃ ಸರ್ವಥಾ ।
ಅನನ್ಯಶರಣಂ ಕಥಂ ಹರ ವಿಹಾತುಮಿಚ್ಛಾ ತವ
ಪ್ರಚೋದಯ ಧಿಯಃ ಪ್ರಿಯಾಃ ಸದಯ ಭರ್ಗ ನಸ್ತೇ ಪದೇ ॥೪೭॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಶ್ರೀ ಶಿವ ವಿಘ್ನೇಶ್ವರಸಂವಾದೇ ವಿಘ್ನೇಶ್ವರಪ್ರಾರ್ಥನಂ ನಾಮ
ಏಕಾದಶೋಽಧ್ಯಾಯಃ

ಅಜ್ಞಾನ ಸಂಬಂಧವಿಲ್ಲದ ಪರಬ್ರಹ್ಮಸ್ವರೂಪನೇ, ಮತ್ತು ದೇವೇಶನೇ, ನನ್ನ ಅಧೈರ್ಯವನ್ನು ಹೋಗಲಾಡಿಸುವವನಾಗು. ಸರ್ವವಿಧಗಳಿಂದಲೂ ನೀನೇ ನನಗೆ ಗತಿಯು. ನಿನ್ನನ್ನೇ ಮರೆಹೊಕ್ಕಿರುವ ನನ್ನನ್ನು ತೊರೆಯಲು ನೀನು ಇಷ್ಟಪಡುವೆಯಾ! ನಿನ್ನ ಪಾದಗಳಲ್ಲಿ ಭಕ್ತಿಯುಂಟಾಗುವಂತೆ ನನಗೆ ಸುಜ್ಞಾನವನ್ನು ಕರುಣಿಸುವವನಾಗು ಎಂದು ವಿಘ್ನೇಶ್ವರನು ಪರಶಿವನನ್ನು ನಾನಾವಿಧವಾಗಿ ಸ್ತುತಿಸಿದನು. ॥೪೭॥

ಇಲ್ಲಿಗೆ ಶ್ರೀ ಶಿವರಹಸ್ಯದ ಮೂರನೆಯ ಅಂಶದ ಮೊದಲನೆಯ ಭಾಗದ
"ಶಿವವಿಘ್ನೇಶ್ವರಸಂವಾದವೂ ಮತ್ತು ವಿಘ್ನೇಶ್ವರನು ಮಾಡಿದ
ಶಿವಪ್ರಾರ್ಥನೆಯೂ" ಎಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ದ್ವಾದಶೋಽಧ್ಯಾಯಃ

॥ ವ್ಯಾಸ ಉವಾಚ ॥

ಇತ್ಯಾಕರ್ಣ್ಯ ವಚಸ್ತಸ್ಯ ಕರುಣಾರಸವಾರಿಧಿಃ ।
ಆಲಿಂಗ್ಯ ದುಂಢಿರಾಜಾನಮಾಹ ವಿಘ್ನಹರಂ ಹರಃ ॥೧॥

ಸ್ತವೇನಾನೇನ ಸುಪ್ರೀತಸ್ತವಾದೇಯಂ ಕಿಮಸ್ತಿ ಮೇ ।
ತ್ವಂ ಕುಮಾರಶ್ಚ ಗೌರೀ ಚ ಪ್ರಿಯಾಸ್ತ್ವನ್ಯನ್ನ ಮೇ ಪ್ರಿಯ ॥೨॥

ಅಯಂ ತವ ಶ್ರುತಿಮತಃ ಶ್ರುತ್ಯರ್ಥಃ ಪ್ರಕಟೀಕೃತಃ ।
ಸ್ತವೇನಾನೇನ ಸುಪ್ರೀತೋ ವತ್ಸ ಜೀವ ಚಿರಂ ಚಿರಂ ॥೩॥

ಹನ್ನೆರಡನೆಯ ಅಧ್ಯಾಯ .

ಬಳಿಕ ವ್ಯಾಸನು ಮುನಿಗಳನ್ನು ಕುರಿತು ಹೀಗೆಂದನು " ಎಲೈ ಮುನಿಗಳೇ ಈರೀತಿಯಲ್ಲಿ ತನ್ನನ್ನು ಪ್ರಾರ್ಥಿಸಿದ ಗಣೇಶನ ಮಾತುಗಳನ್ನು ಕೇಳಿ ಕೃಪಾಸಾಗರನಾದ ಶಿವನು ವಿಘ್ನನಾಶಕನಾದ ಗಣೇಶನನ್ನು ಆಲಿಂಗಿಸಿ ಇಂತೆಂದನು. ॥೧॥

ಎಲೈ ಪುತ್ರನೇ, ನಿನ್ನ ಈ ಸ್ತೋತ್ರದಿಂದ ಪ್ರಸನ್ನನಾದ ನಾನು ನಿನಗೆ ಏನನ್ನು ತಾನೇ ಕೊಡಲಾರೆ! ನೀನೂ, ಷಣ್ಮುಖನೂ ಮತ್ತು ಗಿರಿಜೆಯೂ ಈ ಮೂವರೂ ನನಗೆ ಪ್ರೀತಿಪಾತ್ರರಾದವರು. ಈ ಮೂವರನ್ನು ಬಿಟ್ಟು ಇನ್ನಾರಲ್ಲಿಯೂ ನನ್ನ ಪ್ರೀತಿಯು ಪ್ರಸರಿಸಲಾರದು. ॥೨॥

ವೇದಾರ್ಥವನ್ನು ತಿಳಿದುಕೊಂಡಿರುವ, ನಿನ್ನ ಸ್ತೋತ್ರದಿಂದ ವೇದಗಳ

ಸ್ತುತ್ವಾ ಸ್ತೋತ್ರೇಣ ಮಾಂ ನತ್ವಾ ಪ್ರಾಪ್ನುಯಾದೀಪ್ಸಿತಂ ಫಲಂ।
ಸ್ತವರಾಜತ್ವಮಾಪನ್ನಃ ಸ್ತವಃ ಸೋಽಯಂ ಮಮ ಪ್ರಿಯಃ ॥೪॥

ಅತಃ ಪರಂ ತ್ವಯಾ ತಾವದ್ಗಿರಿಜಾಸಂನಿಧಿಂ ಪ್ರತಿ।
ಗಂತವ್ಯಂ ತ್ವರಯಾ ತತ್ರ ತದೀಯಂ ಪಶ್ಯ ಸಂಭ್ರಮಂ ॥೫॥

ನಾಟ್ಯಾಂಗನಾಲೋಕನೇನ ಸಂತುಷ್ಟಾ ಗಿರಿಕನ್ಯಕಾ।
ಯದ್ವಾ ಮಾರ್ಗಪರಿಶ್ರಾಂತಾ ತದ್ವಿಚಾರಸ್ತ್ವವೋಚಿತಃ ॥೬॥

ಜನನೀಜನಕಶ್ಚೇತಿ ಪುಷ್ಯಪೋಷ್ಯಂ ದ್ವಯಂ ಪರಂ।
ತತ್ರಾಪಿ ಜನನೀ ಶ್ರೇಷ್ಠಾ ಗರ್ಭಧಾರಣಪೋಷಣೈಃ ॥೭॥

ಅರ್ಥವು ಈಗ ಪ್ರಕಟಿಸಲ್ಪಟ್ಟಿತು. ಇದರಿಂದ ನಾನು ಸುಪ್ರಸನ್ನನಾದೆನು. ವತ್ಸ, ನೀನು ಬಹುಕಾಲ ಜೀವಿಸು. ॥೩॥

ನನ್ನನ್ನು ಈರೀತಿಯಾಗಿ ಸ್ತುತಿಸಿ ನಮಸ್ಕರಿಸಿದರೆ ಮನುಜನು ತನ್ನ ಇಷ್ಟಾರ್ಥವನ್ನು ಹೊಂದುವನು. ಸ್ತೋತ್ರಗಳಲ್ಲೆಲ್ಲಾ ಶ್ರೇಷ್ಠವೆಂದೆನಿಸಿಕೊಂಡಿರುವ ಈ ಸ್ತೋತ್ರವೇ ನನಗೆ ಪ್ರಿಯತಮವಾಗಿರುವುದು. ॥೪॥

ಇನ್ನುಮುಂದೆ, ನೀನು ಶೀಘ್ರವಾಗಿ ಗಿರಿಜೆಯ ಬಳಿಗೆ ಹೋಗಿ, ನಾಟ್ಯಾವಲೋಕನದಲ್ಲಿ ಅವಳಿಗಿರುವ ಅಪಾರವಾದ ಆನಂದವನ್ನು ಅವಲೋಕಿಸುವವನಾಗು. ॥೫॥

ನರ್ತನವನ್ನು ಅಭಿನಯಿಸುತ್ತಿರುವ ಆ ಸ್ತ್ರೀಯರನ್ನು ನೋಡಿ ಗಿರಿಜೆಯು ಸಂತೋಷವನ್ನು ಹೊಂದಿರಬಹುದು. ಅಥವಾ ಅವಳು ಮಾರ್ಗಾಯಾಸದಿಂದ ಬಳಲಿರಬಹುದು. ಹೇಗಾದರೂ ನೀನು ಅವಳನ್ನು ವಿಚಾರಿಸುವುದು ಯುಕ್ತವಲ್ಲವೇ! ॥೬॥

ತಂದೆತಾಯಿಗಳನ್ನು ಕಾಪಾಡುವುದೇ ಪುತ್ರನ ಧರ್ಮ. ಅದರಲ್ಲಿಯೂ ಮಗನನ್ನು ಗರ್ಭಧಾರಣಾದಿಗಳಿಂದಲೂ, ಸ್ತನ್ಯಪಾನಾದಿಗಳಿಂದಲೂ ಕಾಪಾಡುವ ತಾಯಿಯೇ ಅತ್ಯಂತ ಶ್ರೇಷ್ಠಳು. ॥೭॥

ವಿರಕ್ತೇನಾಪಿ ಜನನೀ ಪೋಷಣೀಯಾ ಪ್ರಯತ್ನತಃ ।
ಅಸಾಧ್ವೀ ವಾ ಸುಸಾಧ್ವೀ ವಾ ಸಾಧ್ವೀ ತು ಸುತರಾಮಪಿ ॥೮॥

ಅಸಾಧ್ವೀ ಯದಿ ಭರ್ತಾರಂ ವಿಹಾಯಾನ್ಯತ್ರ ತಿಷ್ಠತಿ ।
ತದುಪೇಕ್ಷಾ ನ ಕರ್ತವ್ಯಾ ಪೋಷ್ಯಾ ಸಾನ್ನಾದಿದಾನತಃ ॥೯॥

ಯದಿ ಸಾಧ್ವೀ ಪಿತುರ್ಗೇಹೇ ಬಂಧುಗೇಹೇಽಪಿ ವಾ ವಸೇತ್ ।
ತಾಮಾಹೂಯ ಸ್ವಸದನಂ ಪುತ್ರಾಃ ಸಂತೋಷಯಂತಿ ಚ ॥೧೦॥

ತ್ವಯಾಪಿ ತತ್ರ ಗತ್ವಾಪಿ ತದುದ್ವೇಗಕರಂ ಪರಂ ।
ಕೃತ್ಯಂ ನ ಕಾರ್ಯಂ ಸಹಸಾ ಕಾರ್ಯಂ ತದನುಮೋದನಂ ॥೧೧॥

ಯದಿ ಶ್ರಾಂತಾ ಗಿರಿಸುತಾ ಮಾರ್ಗಾಯಾಸೇನ ಸಾ ತತಾ ।
ಸುಧಾದಾನಾದಿನಾ ಸಮ್ಯಕ್ಸೇವನೀಯಾ ತ್ವಯಾ ಖಲು ॥೧೨॥

ತಾಯಿಯು ಪತಿವ್ರತೆಯೇ ಆಗಲಿ, ಅಥವಾ ದುರಾಚರಣೆಯುಳ್ಳವಳೇ ಆಗಲಿ, ಅವಳನ್ನು ರಕ್ಷಿಸಲೇಬೇಕು. ವಿರಕ್ತನಾದವನೂ ತಾಯಿಯನ್ನು ರಕ್ಷಿಸದೇ ಇರಬಾರದು. ಅವಳು ಸಚ್ಚರಿತೆಯಲ್ಲಿ ಇರುವವಳಾದರೆ ಸರ್ವವಿಧದಿಂದಲೂ ಅವಳನ್ನು ರಕ್ಷಿಸಲು ಪ್ರಯತ್ನಿಸಲೇಬೇಕು. ॥೮॥

ಜನನಿಯು ಕೆಟ್ಟ ನಡತೆಯುಳ್ಳವಳಾಗಿ ಪತಿಯನ್ನು ತ್ಯಜಿಸಿ, ಬೇರೆಯ ಕಡೆಯಲ್ಲಿ ವಾಸಮಾಡಿದರೂ ಮಗನು ತಾಯಿಯನ್ನು ಉಪೇಕ್ಷಿಸದೇ ಅಶನವಸನಗಳಿಂದ ರಕ್ಷಿಸಬೇಕು. ॥೯॥

ತಾಯಿಯು ಪತಿವ್ರತೆಯಾಗಿದ್ದು ತನ್ನ ತಂದೆಯಲ್ಲಾಗಲಿ ಅಥವಾ ಬಂಧುಗಳ ಮನೆಯಲ್ಲಾಗಲಿ ವಾಸವಾಗಿದ್ದರೆ ಪುತ್ರರು ಅವಳನ್ನು ತಮ್ಮ ಮನೆಗೆ ಕರೆತಂದು ಅನ್ನವಸ್ತ್ರಗಳಿಂದ ಸಲಹಿ ಸಂತೋಷಗೊಳಿಸಬೇಕು. ॥೧೦॥

ಆದರಂತೆಯೇ ನೀನೂ ನಿನ್ನ ಜನನಿಯ ಬಳಿಗೆ ಹೋಗಿ ಅವಳ ಮನಸ್ಸಿಗೆ ವ್ಯಥೆಯನ್ನುಂಟುಮಾಡುವ ಯಾವ ಕಾರ್ಯವನ್ನೂ ದುಡುಕಿ ಕೈಗೊಳ್ಳದೇ, ನಿನ್ನ ತಾಯಿಗೆ ಸಂತೋಷವನ್ನುಂಟುಮಾಡುವವನಾಗು. ॥೧೧॥

ಗಿರಿಜೆಯು ಮಾರ್ಗಾಯಾಸದಿಂದ ಬಳಲಿದ್ದರೆ, ಅದನ್ನು ಹೋಗಲಾಡಿಸಲು ಅವಳಿಗೆ ಪಾನಮಾಡುವುದಕ್ಕೆ ಅಮೃತವನ್ನು ಕೊಟ್ಟು, ಅದರಿಂದ ತಾಯಿಯ ಶುಶ್ರೂಷೆಯನ್ನು ಮಾಡಬೇಕು. ॥೧೨॥

ಇತೋ ನಯ ಸುಧಾಂ ದಿವ್ಯಾಂ ನಿರ್ಮಿತಾಮಧುನಾ ಮಯಾ ।
ಪೀತಾವಶಿಷ್ಟಾ ಸಾ ಪೀತಾ ನಿರ್ಮಿತಾಪಿ ಸುಧಾ ಮಯಾ ॥೧೩॥

ಸುಧಾವಿಶೇಷಾಃ ಸಂತ್ಯೇವ ಬಹವಸ್ತೇಷು ಸಾದರಾ ।
ನ ಭವಾನೀ ಭವತ್ಯತ್ರ ಸಾದರಾ ಸಾ ಭವಿಷ್ಯತಿ ॥೧೪॥

ಮದ್ಭುಕ್ತಶೇಷಂ ದೃಷ್ಟ್ವಾಪಿ ಪ್ರಹೃಷ್ಟಾ ಗಿರಿಕನ್ಯಕಾ ।
ಸ್ಥಾಪಿತೋ ಮಹ್ಯನಿಶಾಶೇನ ಶೇಷೋಽಯಮಿತಿ ಸಾದರಾ ॥೧೫॥

ಪತಿವ್ರತಾ ಗಿರಿಸುತಾ ಸಾ ತತಃ ಪತಿದೇವತಾ ।
ತಸ್ಯಾಃ ಪ್ರೀತಿರ್ಮಯಿ ಪ್ರೀತಿರ್ಮಮ ತಸ್ಯಾಂ ವಿಶೇಷತಃ ॥೧೬॥

ಸಾಧ್ವೀ ಸುಪುತ್ರಾ ಸುಭಗಾ ಲಾವಣ್ಯನಿಧಿರಂಬಿಕಾ ।
ತತಸ್ತಸ್ಯಾಂ ಮಯಿ ಪ್ರೀತಿರ್ಧಾರಾರೂಪೇಣ ವರ್ತತೇ ॥೧೭॥

ನಾನು ತಯಾರಿಸಿದ ಈ ಸುಧೆಯನ್ನು ಇಲ್ಲಿಂದ ತೆಗೆದುಕೊಂಡುಹೋಗು. ಈ ಸುಧೆಯನ್ನು ನಾನು ಅವಳಿಗೋಸ್ಕರ ಸಿದ್ಧಪಡಿಸಿರುವೆನಾದರೂ ಇದರಲ್ಲಿ ಸ್ವಲ್ಪ ಭಾಗವನ್ನು ನಾನು ಸೇವಿಸಿ ಮಿಕ್ಕ ಅಂಶವನ್ನು ಇಲ್ಲಿಟ್ಟಿರುತ್ತೇನೆ. ॥೧೩॥

ಅಮೃತಗಳಲ್ಲಿ ನಾನಾವಿಧಗಳಿವೆ. ಆದರೆ ಗಿರಿಜೆಯು ಎಲ್ಲವನ್ನೂ ಪ್ರೀತಿಸುವುದಿಲ್ಲ. ನಾನು ಸೇವಿಸಿ ಮಿಕ್ಕ ಸುಧೆಯನ್ನು ಮಾತ್ರ ಅವಳು ಅತ್ಯಂತವಾಗಿ ಪ್ರೀತಿಸುವಳು. ॥೧೪॥

ನಾನು ಸೇವಿಸಿ ಉಳಿದುದನ್ನು ನೋಡಿದಮಾತ್ರದಿಂದಲೇ ಗಿರಿಜೆಯು ಸಂತೋಷಗೊಂಡು "ಈ ಸುಧಾಶೇಷವನ್ನು ನನ್ನ ವಲ್ಲಭನು ನನಗೋಸ್ಕರ ಮೀಸಲಾಗಿ ಇಟ್ಟಿರುವನು." ಎಂದು ತಿಳಿದು ಅದನ್ನು ಅಕ್ಕರೆಯಿಂದ ಸ್ವೀಕರಿಸುವಳು. ॥೧೫॥

ಗಿರಿಜೆಯು ಪತಿವ್ರತೆಯಾಗಿರುವಳು. ಆದುದರಿಂದ ಅವಳಿಗೆ ಪತಿಯೇ ದೇವರು. ಅಲ್ಲದೆ ವಿಶೇಷವಾಗಿ ನನ್ನಲ್ಲಿಯೇ ಪ್ರೀತಿಯಿರುವುದು. ನಾನೂ ಸಹ ಅವಳನ್ನು ವಿಶೇಷವಾಗಿ ಪ್ರೀತಿಸುವೆನು. ॥೧೬॥

ಆ ದೇವಿಯು ಸಚ್ಚರಿತ್ರಳೂ, ಸತ್ಪುತ್ರರಿಂದ ಕೂಡಿದವಳೂ ಮತ್ತು ಸುಂದರಿಯೂ ಆಗಿರುವಳು. ಆದುದರಿಂದ ನನಗೆ ಅವಳಲ್ಲಿ ಅವಿಚ್ಛಿನ್ನವಾದ ಪ್ರೀತಿಯಿರುವುದು. ॥೧೭॥

ಸಾ ಲಾವಣ್ಯಸುಧಾಂಭೋಧಿಸೌಭಾಗ್ಯಾಂಭೋಧಿರೇವ ಸಾ ।
ಸೌಭಾಗ್ಯಾನಾಂ ನಿಧಾನಂ ಸಾ ಸಾ ಗೌರೀ ಸರ್ವಮಂಗಳಾ ॥೧೮॥

ನ ಸರ್ವಮಂಗಳಾಂ ತ್ಯಕ್ತ್ವಾ ವಸಾಮಿ ಹೃದಯಾದಹಂ ।
ಹೃದಯಾನ್ನಿರ್ಗತಾ ಸಾ ಚೇನ್ಮಂಗಳಂ ದುರ್ಲಭಂ ಖಲು ॥೧೯॥

ಸರ್ವಮಂಗಳದಾನಾರ್ಥಮುದ್ಯತಾ ಸರ್ವಮಂಗಳಾ ।
ತದ್ವಿಯೋಗೇ ಮಂಗಳಾನಿ ದುರ್ಲಭಾನಿ ಮನೀಷಿಣಾಂ ॥೨೦॥

ತಾಂ ಸರ್ವಮಂಗಳಾಂ ಸ್ಮೃತ್ವಾ ದುಷ್ಕರಾಣ್ಯಪಿ ವಸ್ತುತಃ ।
ಕಾರ್ಯಾಣಿ ಕೃತ್ವಾ ಕ್ಷುದ್ರೋಽಪಿ ತತ್ಕಾರ್ಯಫಲಮಶ್ನುತೇ ॥೨೧॥

ತ್ವಯಾಪಿ ಗಮನೇ ಕಾಲೀಚರಣಾಂಬುರುಹಂ ಮುಹುಃ ।
ಸ್ಮರ್ತವ್ಯಮತಿಯತ್ನೇನ ಸರ್ವಸಿದ್ಧಿಕರಂ ಪರಂ ॥೨೨॥

ನೀರು ಸಮುದ್ರವನ್ನು ಆಶ್ರಯಿಸಿರುವಂತೆ ಸೌಂದರ್ಯವೂ ಮತ್ತು ಸೌಭಾಗ್ಯವೂ ಅವಳನ್ನು ಆಶ್ರಯಿಸಿರುವುವು. ಸರ್ವಶ್ರೇಷ್ಠಳೆನಿಸಿದ ಗೌರಿಯು ಸಕಲ ಸಂಪತ್ತುಗಳಿಗೂ ಆಶ್ರಯಸ್ಥಾನಳು. ||೧೮||

ಸಕಲರಿಗೂ ಕಲ್ಯಾಣವನ್ನುಂಟುಮಾಡುವ ಸರ್ವಮಂಗಳೆಯನ್ನು ನನ್ನ ಹೃದಯದಿಂದ ಹೊರಗಿರಿಸಿ ನಾನು ಎಂದೂ ಇರಲಾರೆ. ಏಕೆಂದರೆ ಅವಳು ನನ್ನ ಹೃದಯದಿಂದ ಹೊರಹೊರಟರೆ, ಮಂಗಳವು ಲಭಿಸುವುದು ಕಷ್ಟತರವಲ್ಲವೇ! ||೧೯||

ಸರ್ವಮಂಗಳೆಯಾದ ದೇವಿಯು ಸಕಲರಿಗೂ ಸಮಸ್ತ ಕಲ್ಯಾಣವನ್ನುಂಟು ಮಾಡುವವಳು. ಹೀಗಿರುವಾಗ ಅವಳಿಲ್ಲದಿದ್ದರೆ ಮಂಗಳವನ್ನೇ ಕೋರುತ್ತಿರುವ ಜನರಿಗೆ ಅದು ಲಭಿಸುವ ಬಗೆ ಹೇಗೆ? ||೨೦||

ಅತ್ಯಂತ ದೀನನಾದ ಮನುಜನೂ ಸರ್ವಮಂಗಳೆಯಾದ ದೇವಿಯನ್ನು ಸ್ಮರಿಸಿ, ಸ್ವಾಭಾವಿಕವಾಗಿ ಸಾಧಿಸಲಸಾಧ್ಯವಾದ ಕಾರ್ಯಗಳನ್ನು ಸುಲಭವಾಗಿ ಸಾಧಿಸಿ ಅದರ ಫಲವನ್ನು ಅನುಭವಿಸುವನು. ||೨೧||

ಆದುದರಿಂದ ನೀನು ಈಗಲೇ ದೇವಿಯ ಸನ್ನಿಧಿಗೆ ಹೋಗು. ಸಕಲ ಸಿದ್ಧಿಗಳನ್ನುಂಟುಮಾಡುವ ಗೌರಿಯ ಪಾದಕಮಲಗಳನ್ನು ಸೇವಿಸು. ||೨೨||

ಪುರಾ ತಾರಕಸಂಹಾರಂ ಕುಮಾರಃ ಕರ್ತುಮುದ್ಯತಃ ।
ತಮುವಧ್ಯಂ ವಿದಿತ್ವಾಥ ಚಿಂತಯಾಮಾಸ ಚೇತಸಾ ॥೨೩॥

ಪ್ರೇರಿತಃ ಶಂಕರೇಣಾದ್ಯ ತಾರಕಾಸುರನಾಶನೇ ।
ತನ್ನಾಶವಿಘ್ನಸಂಘಾನಾಂ ನಾಶಃ ಕೇನ ಭವಿಷ್ಯತಿ ॥೨೪॥

ವರಾಶ್ಚತುರ್ಮುಖಾತ್ಪ್ರಾಪ್ತಾಃ ಕೋಟಿಶಸ್ತೇನ ತಾರಕಃ ।
ಅವಧ್ಯತ್ವೇನ ನಿರ್ಣೀತೋ ವಧಸ್ತಸ್ಯ ಕಥಂ ಭವೇತ್ ॥೨೫॥

ಉನ್ಮತ್ತಸ್ತೈರ್ವರೈಸ್ಸೋಽಪಿ ಗಣಯತ್ಯೇವ ನಾಮರಾನ್ ।
ತೇನಾಮರಾಧಿಕಾರಾಶ್ಚ ಕ್ಷಣೇನೈವ ಹತಾಃ ಪುರಾ ॥೨೬॥

ನಿಜೇರುಸ್ತೇ ಧರಾಪೃಷ್ಠೇ ನಿಷ್ಠುರೇ ಶರ್ಕರಾವೃತೇ ।
ನಾರಾಯಣಾದಯಃ ಸರ್ವೇ ತದಾ ನಿರವಲಂಬನಾಃ ॥೨೭॥

ಹಿಂದೆ ಒಂದಾನೊಂದು ಕಾಲದಲ್ಲಿ ಕುಮಾರಸ್ವಾಮಿಯು ತಾರಕಾಸುರನನ್ನು ಕೊಲ್ಲಲು ಯುದ್ಧಸನ್ನದ್ಧನಾದನು. ಆಗ ಬಹುಕಾಲದವರೆಗೆ ಆ ರಾಕ್ಷಸನು ಯುದ್ಧದಲ್ಲಿ ಮಡಿಯದಿರುವುದನ್ನು ನೋಡಿ ಷಣ್ಮುಖನು ಈ ರಾಕ್ಷಸನನ್ನು ಸಂಹರಿಸಲು ತನ್ನಿಂದ ಸಾಧ್ಯವಿಲ್ಲವೆಂಬುದನ್ನು ಮನಗಂಡು ಮನಸ್ಸಿನಲ್ಲಿ ಹೀಗೆ ಚಿಂತಿಸತೊಡಗಿದನು. ॥೨೩॥

"ಈ ದಿವಸ ಶಿವನು ನನ್ನನ್ನು ತಾರಕಾಸುರಸಂಹಾರಕ್ಕೆ ಪ್ರೇರಿಸಿರುವನು. ಆದರೆ ಆ ರಾಕ್ಷಸನನ್ನು ಕೊಲ್ಲಲು ಅನೇಕ ಆತಂಕಗಳಿರುವುವು. ಅವುಗಳನ್ನು ಹೋಗಲಾಡಿಸುವ ಬಗೆ ಹೇಗೆ? ॥೨೪॥

ಈ ಅಸುರನು, ಬ್ರಹ್ಮನಿಂದ ಕೋಟ್ಯಂತರ ವರಗಳನ್ನು ಪಡೆದಿರುವನು. ಅದರಿಂದ ಇವನು ಯಾರಿಗೂ ವಧ್ಯನಲ್ಲವೆಂದು ತಿಳಿದುಬರುತ್ತದೆ. ಆದುದರಿಂದ ಇವನನ್ನು ಸಂಹರಿಸುವ ಬಗೆ ಹೇಗೆ? ॥೨೫॥

ಬ್ರಹ್ಮನು ದಯಪಾಲಿಸಿರುವ ಆ ವರಗಳಿಂದ ಮದಿಸಿದ ಈ ರಾಕ್ಷಸನು ದೇವತೆಗಳನ್ನೂ ಲೆಕ್ಕಿಸದೇ, ಕ್ಷಣಮಾತ್ರದಲ್ಲಿಯೇ ದೇವತೆಗಳ ಅಧಿಕಾರವನ್ನೂ ಸಹ ಅವರಿಂದ ಕಿತ್ತುಕೊಂಡಿರುವನು. ॥೨೬॥

ಅವನ ಭಯದಿಂದ ತಮ್ಮ ತಮ್ಮ ಲೋಕವನ್ನು ಬಿಟ್ಟು ಓಡಿಹೋದ ಶ್ರೀಮನ್ನಾರಾಯಣನೇ ಮುಂತಾದ ದೇವತೆಗಳು ಬೇರೆ ಎಲ್ಲಿಯೂ ಆಶ್ರಯವನ್ನು

ತಿಷ್ಠತ್ಯೇವಮತಿಕ್ರೂರಸ್ತಾರಕೋ ಭುವನತ್ರಯಂ ।
ಕರೋತಿ ಸವ್ಯಥಂ ತಸ್ಯ ಸಂಹಾರಃ ಕೇನ ವಾ ಭವೇತ್ ॥೨೮॥

ಇಂದ್ರಃ ಶಚೀಕುಟೀರೇಽಸ್ಮಿನ್ ಜಯಂತೇನಾಪಿ ಸಂವೃತಃ ।
ಸ್ವರ್ಗಲೋಕಾತ್ಪರಿಭ್ರಷ್ಟಃ ಕಷ್ಟಮಾಪ್ನೋತಿ ನಷ್ಟಧೀಃ ॥೨೯॥

ತೃಣಕಲ್ಪಮಭೂದ್ವಜ್ರಂ ವಜ್ರಂ ದಂಡಾಯತೇ ಖಲು ।
ಯಾ ವೃತ್ರಹರಣೇ ಶಕ್ತಿಸ್ತಸ್ಯ ಯಾ ಸಾಪಿ ನಿರ್ಗತಾ ॥೩೦॥

ಸೋಽಯಂ ನಾರಾಯಣಃ ಪೂರ್ವಂ ಪದ್ಮಯಾ ಸಹ ಸಾದರಂ ।
ವೈಕುಂಠೇ ಸಂಸ್ಥಿತಸ್ತಸ್ಯ ಶಕ್ತಿರಪ್ಯತಿಕುಂಠಿತಾ ॥೩೧॥

ಪಡೆಯದೆ ಕಲ್ಲು ಮಣ್ಣುಗಳಿಂದ ಕೂಡಿಕೊಂಡಿರುವ ಭೂಲೋಕವನ್ನು ಹೊಂದಿ ಅಲ್ಲಲ್ಲಿ ಸಂಚರಿಸುತ್ತಿರುವರು. ॥೨೭॥

ಹೀಗೆ ಆ ಅಸುರನು ಭಯಂಕರನಾಗಿದ್ದು ಲೋಕತ್ರಯವನ್ನೂ ವ್ಯಥೆಗೊಳಿಸುತ್ತಿರುವನು. ಯಾವ ಯುಕ್ತಿಯನ್ನು ಕೈಗೊಳ್ಳುವುದರಿಂದ ಇವನನ್ನು ಸಂಹರಿಸಬಹುದು ? ॥೨೮॥

ಇಂದ್ರನು ಪತ್ನಿಯಾದ ಶಚಿಯೊಂದಿಗೂ ಮತ್ತು ಪುತ್ರನಾದ ಜಯಂತನೊಂದಿಗೂ ಸ್ವರ್ಗಲೋಕದಿಂದ ಚ್ಯುತನಾಗಿ ಈ ಮುರುಕು ಪರ್ಣಶಾಲೆಯಲ್ಲಿ ವಾಸಮಾಡುತ್ತಾ ಮುಂದೇನು ಮಾಡಬೇಕೆಂಬುದನ್ನು ತಿಳಿಯದೇ ಅತ್ಯಂತ ಕಷ್ಟಕ್ಕೆ ಗುರಿಯಾಗಿರುವನು. ॥೨೯॥

ಅವನ ಆ ವಜ್ರಾಯುಧವೂ ಸಹ ತೃಣದಂತೆ ನಿರ್ವೀರ್ಯವಾಗಿರುವುದು. ಅದು ತಾರಕಾಸುರನನ್ನು ಸಂಹರಿಸಲು ಅಶಕ್ತವಾದುದಾಗಿ ಕೇವಲ ದಂಡದಂತೆ ಶಕ್ತಿಶೂನ್ಯವಾಗಿದೆ. ಅದಕ್ಕೆ ವೃತ್ರಾಸುರನನ್ನು ಕೊಲ್ಲುವಾಗ ಇದ್ದ ಆ ಶಕ್ತಿಯೂ ಈಗ ಮಾಯವಾಗಿದೆ. ॥೩೦॥

ದೇವತೆಗಳಲ್ಲಿ ಶ್ರೇಷ್ಠನಾದ ಶ್ರೀಮನ್ನಾರಾಯಣನು ಈ ಮೊದಲು ತನ್ನ ಪ್ರೇಯಸಿಯಾದ ಲಕ್ಷ್ಮಿಯೊಂದಿಗೆ ವೈಕುಂಠಲೋಕದಲ್ಲಿ ಶೂರನೆನಿಸಿ ವಾಸವಾಗಿದ್ದನು. ಆದರೆ ಅವನ ಶಕ್ತಿಯೂ ಈಗ ಕುಂದಿಹೋಗಿರುವುದು. ॥೩೧॥

ಆವಿಲೇ ಕಮಲೇ ಸೋಽಪಿ ತಯಾ ಕಮಲಯಾ ಸಹ ।
ನಿಲೀನೋನ್ಮೀಲಸಂಘಾತನಿಹತೋ ದುಃಖಿತೋಽಧುನಾ ॥೩೨॥

ಯೋ ವಾಣೀರಮಣಃ ಸೋಽಪಿ ಬ್ರಹ್ಮಾರಣ್ಯಮುಪಾಶ್ರಿತಃ ।
ಜೀರ್ಣಪರ್ಣಕುಟೀವಾಟೀನಿಕಟೇ ರಟತಿ ಸ್ಫುಟಂ ॥೩೩॥

ನ ಸೂರಕರಸಂಚಾರಃ ಸೂರೋ ದೂರಾಸ್ತಮಾಶ್ರಿತಃ ।
ನ ಚಂದ್ರವಾರ್ತಾ ತಾರಾಣಾಂ ದೂರೇ ವಾರ್ತಾ ವಿಶೇಷತಃ ॥೩೪॥

ವಾತೋ ವಾತಿ ಶನೈರೇವ ತಾರಕಾಸುರಮಂದಿರೇ ।
ದೂರೀಕುರ್ವನ್ ರಜಃಪುಂಜಂ ಶಂಕಿತೋಽತೀವ ದುಃಖಿತಃ ॥೩೫॥

ಪಾಪಕರ್ಮರತೋ ನಿತ್ಯಂ ಪಾವಕಸ್ತನ್ಮಹಾನಸೇ ।
ಅನಪಾಯೇನ ದುಃಖೇನ ಕಾಲಂ ನಯತಿ ದುಷ್ಕರಂ ॥೩೬॥

ಈಗ ವಿಷ್ಣುವು ಲಕ್ಷ್ಮಿಯೊಂದಿಗೆ ಕೆಸರಿನಿಂದ ಕೂಡಿರುವ ಕಮಲಪುಷ್ಪದಲ್ಲಿ ವಾಸವಾಗಿರುವನು. ಆದರೆ ಕಮಲವು ಸೂರ್ಯನ ಉದಯಾಸ್ತಗಳಿಂದ ಅರಳಿ ಮತ್ತೆ ಮೊಗ್ಗಾಗುವುದರಿಂದ ಆ ನಿಮೀಲೋನ್ಮೀಲನಗಳಿಗೆ ಸಿಕ್ಕಿ ಆ ವಿಷ್ಣುವು ತೊಂದರೆಗೀಡಾಗಿ ದುಃಖವನ್ನು ಅನುಭವಿಸುತ್ತಿರುವನು. ॥೩೨॥

ಸರಸ್ವತಿಯ ವಲ್ಲಭನೂ, ಸೃಷ್ಟಿಕರ್ತನೂ ಆದ ಈ ಬ್ರಹ್ಮನು ಸಹ ಅರಣ್ಯವನ್ನಾಶ್ರಯಿಸಿ ಒಂದಾನೊಂದು ಮುರುಕು ಪರ್ಣಶಾಲೆಯ ಸಮೀಪದಲ್ಲಿ ದುಃಖದಿಂದ ಸುತ್ತುತ್ತಿರುವನು. ॥೩೩॥

ಆ ಅಸುರನಿಂದ ಭಯಗೊಂಡ ಸೂರ್ಯನು ತನ್ನ ಕಿರಣಗಳನ್ನು ಪ್ರಸರಿಸಲಾರದೇ ಎಲ್ಲಿಯೋ ಅಡಗಿರುವನು. ಹೆಚ್ಚೇಕೆ! ಚಂದ್ರನಾಗಲಿ ಅಥವಾ ನಕ್ಷತ್ರಗಳಾಗಲಿ ಅವುಗಳ ಸುಳಿವೇ ಇರುವುದಿಲ್ಲ. ॥೩೪॥

ಮಾರುತನು ಆ ತಾರಕಾಸುರನ ಗೃಹದಲ್ಲಿ ಮೆಲ್ಲಮೆಲ್ಲನೆ ಬೀಸುತ್ತಾ ಅಲ್ಲಿರುವ ಧೂಳನ್ನು ಹೋಗಲಾಡಿಸುವವನಾಗಿ, "ಅಸುರನು ತನ್ನನ್ನು ಎಲ್ಲಿ ತೊಂದರೆಪಡಿಸುವನೋ" ಎಂಬ ಶಂಕೆಯಿಂದ ವ್ಯಥೆಗೊಳ್ಳುತ್ತಿರುವನು. ॥೩೫॥

ಅಗ್ನಿಯು ಆ ಅಸುರನ ಪಾಕಶಾಲೆಯಲ್ಲಿ ಪಾಚಕನಾಗಿದ್ದು ಅತ್ಯಂತ ದುಃಖದಿಂದ ಕಠಿಣವಾದ ಈ ಕಾಲವನ್ನು ಕಳೆಯುತ್ತಿರುವನು. ॥೩೬॥

ಧೂಮೋಽಪೀಂಧನಯೋಗೇನ ದುಃಸಹಶ್ಚೇನ್ಮಹಾನಸೇ ।
ತದಾ ದುಃಖಮಿತಿ ಜ್ಞಾತ್ವಾ ನ ಚೇಂಧನಮುಪೇಕ್ಷತೇ ॥೩೭॥

ವರುಣಸ್ತರುಣೀಂ ತ್ಯಕ್ತ್ವಾ ಸದಾ ಸ್ವರಮಣೀಂ ಗೃಹೇ ।
ತಸ್ಯೈವ ಸೇಚನಂ ಕುರ್ವನ್ನಧಿತಿಷ್ಠತಿ ದುಃಖಿತಃ ॥೩೮॥

ಸಾಗರೋಽಪಿ ಸ ರತ್ನಾನಿ ತಸ್ಮೈ ದತ್ವಾ ಮುಹುರ್ಮುಹುಃ ।
ರಿಕ್ತ ಏವ ಪುನರ್ಭೀತೋ ರತ್ನಾಭಾವವಿನಿಶ್ಚಯಾತ್ ॥೩೯॥

ಯದ್ಯಾನೇಯಾನಿ ರತ್ನಾನಿ ಬಹೂನೀತಿ ಸ ತಾರಕಃ ।
ದೂತಾನ್ ಪ್ರೇರಯತಿ ವ್ಯಗ್ರಸ್ತದಾ ಕಿಂ ಕಾರ್ಯಮಿತ್ಯಪಿ ॥೪೦॥

ಆವನ ಪಾಕಶಾಲೆಯಲ್ಲಿ ಉರಿಯುತ್ತಿರುವ ಕಟ್ಟಿಗೆಗಳನ್ನು ಆಶ್ರಯಿಸಿ, ಅದರ ಮೂಲಕ ಮನೆಯನ್ನು ವ್ಯಾಪಿಸಿದರೆ, ಆ ಅಸುರನು ಎಲ್ಲಿ ಕೋಪಿಸಿಕೊಳ್ಳುವನೋ ಎಂಬ ಭಯದಿಂದ ಅಗ್ನಿಯು ಅಲ್ಲಿರುವ ಕಟ್ಟಿಗೆಗಳನ್ನು ಆಶ್ರಯಿಸುತ್ತಿರುವುದಿಲ್ಲ. ||೩೭||

ವರುಣನು ಯುವತಿಯಾದ ತನ್ನ ಪ್ರಿಯತಮೆಯನ್ನಗಲಿ ನಿರಂತರವೂ ತಾರಕಾಸುರನ ಮನೆಯಲ್ಲಿಯೇ ಇರುತ್ತಾ ಅಲ್ಲಿ ಜಲಾನುಕೂಲ್ಯವನ್ನು ರಾಕ್ಷಸನಿಗೆ ಒದಗಿಸುತ್ತಿರುವನು. ||೩೮||

ರತ್ನಾಕರನೆಂದು ಪ್ರಸಿದ್ಧಿಗೊಂಡಿದ್ದ ಸಮುದ್ರರಾಜನೂ ಸಹ ತನ್ನಲ್ಲಿದ್ದ ರತ್ನಗಳನ್ನೆಲ್ಲಾ ಅವನಿಗೆ ಸಮರ್ಪಿಸಿ ರಿಕ್ತಹಸ್ತನಾಗಿ, ಇನ್ನು ಮುಂದೆ ತನ್ನಲ್ಲಿ ಮತ್ತೆ ರತ್ನಗಳನ್ನು ಎಲ್ಲಿ ಈ ಅಸುರನು ಕೇಳುವನೋ ಎಂಬ ಭಯದಿಂದ ನಡುಗುತ್ತಿರುವನು. ||೩೯||

ಒಂದುವೇಳೆ ಆ ತಾರಕಾಸುರನು ರತ್ನಗಳನ್ನು ಹೇರಳವಾಗಿ ತನ್ನ ಗೃಹದಲ್ಲಿ ಶೇಖರಿಸಿಡಬೇಕೆಂಬ ಆಸೆಯಿಂದ ತನ್ನ ಸೇವಕರನ್ನು ರತ್ನಾಹರಣಕ್ಕಾಗಿ ಕಳುಹಿಸಿದರೆ ಮುಂದೇನು ಗತಿ ಎಂದು ಸತತವೂ ಆ ಸಮುದ್ರರಾಜನು ಚಿಂತಾಸಕ್ತನಾಗಿರುವನು. ||೪೦||

ನೀಯಂತೇ ಪ್ರತ್ಯಹಂ ರತ್ನಾನ್ಯಸಂತಾನಿ ಪುನಃ ಪುನಃ ।
ಕಿಮುತ್ಪನ್ನಾನಿ ರತ್ನಾನಿ ಕಿಂ ದೇಯಾನೀತಿ ದುಃಖಿತಃ ॥೪೧॥

ತದ್ವದನ್ಯೇಽಪಿ ಸರ್ವೇಽಪಿ ಸುರಾಸ್ತಾರಕಪೀಡಿತಾಃ ।
ಗಿರಿಕಂಧರಮಾಶ್ರಿತ್ಯ ನಿಲೀನಾಃ ಸಂತಿ ದುಃಖಿತಾಃ ॥೪೨॥

ಮುನಯೋಽಪಿ ವನಂ ತ್ಯಕ್ತ್ವಾ ಫಲಮೂಲಜಲಾವೃತಂ ।
ಸಾಗ್ನಿಹೋತ್ರಾಶ್ಚರಂತ್ಯೇವ ನೀರಸೇ ಗಿರಿಕಂಧರೇ ॥೪೩॥

ಊಷರಾಪಿ ಧರಾ ಧೀರಾ ತಾರಕಾಸುರವಿಹ್ವಲಾ ।
ಸದಾ ಸಫಲಸಸ್ಯಾಢ್ಯಾ ಪೀಡ್ಯಮಾನಾಪಿ ದಾನವೈಃ ॥೪೪॥

ತಾರಕಾಸುರಗಂಭೀರಶರೀರಾಮಿತತೇಜಸಾ ।
ಅಹೋರಾತ್ರವಿವೇಕೋಽಪಿ ನಾಂಧಕಾರೋ ನ ಸರ್ವಥಾ ॥೪೫॥

ಸೇವಕರು ಪ್ರತಿದಿನವೂ ಅಸಂಖ್ಯಾಕವಾದ ನನ್ನ ರತ್ನಗಳನ್ನು ಅಸುರನ ಮನೆಗೆ ಕೊಂಡೊಯ್ಯುತ್ತಿರುವರು. ಇನ್ನು ಮುಂದೆಯೂ ತನ್ನಲ್ಲಿ ಉಂಟಾಗುವ ರತ್ನಗಳನ್ನೂ ಅವನಿಗೆ ಕೊಡಬೇಕಾಗುವುದೋ ಎಂದು ದುಃಖಿಸುತ್ತಿರುವನು. ॥೪೧॥

ಅದರಂತೆಯೇ ಇನ್ನುಳಿದ ದೇವತೆಗಳೂ ಸಹ ಆ ತಾರಕನಿಂದ ಪೀಡಿತರಾಗಿ ಪರ್ವತದ ತಪ್ಪಲು ಪ್ರದೇಶಗಳಲ್ಲಿ ಅಡಗಿಕೊಂಡು ದುಃಖದಿಂದ ಪರಿತಪಿಸುತ್ತಿರುವರು. ॥೪೨॥

ತಪಸ್ವಿಗಳೂ ಸಹ ಜೀವನೋಪಯುಕ್ತವಾದ ಹಣ್ಣುಹಂಪಲುಗಳಿಂದಲೂ, ಗೆಡ್ಡೆ ಗೆಣಸುಗಳಿಂದಲೂ ಮತ್ತು ನೀರಿನಿಂದಲೂ ಕೂಡಿರುವ ಅರಣ್ಯವನ್ನು ಬಿಟ್ಟು, ತಮ್ಮ ಅಗ್ನಿಹೋತ್ರಾದಿಸಾಧನದೊಂದಿಗೆ ಗೆಡ್ಡೆಗೆಣಸುಗಳಿಂದ ರಹಿತವಾದ ಪರ್ವತದ ಸಾನುಭಾಗವನ್ನು ಆಶ್ರಯಿಸಿರುವರು. ॥೪೩॥

ಚೌಳುಭೂಮಿಯೂ ಸಹ ತಾರಕನು ತನ್ನನ್ನೆಲ್ಲಿ ಪೀಡಿಸುವನೋ ಎಂಬ ಭಯದಿಂದ ಕಾತರವಾಗಿದೆ. ಇದಲ್ಲದೇ ಆ ತಾರಕನ ಅನುಚರರಾದ ಇತರ ರಾಕ್ಷಸರು ಫಲಭರಿತವಾದ ಭೂಮಿಯನ್ನಂತೂ ನಿರಂತರವೂ ಪೀಡಿಸುತ್ತಿರುವರು. ॥೪೪॥

ತಾರಕಾಸುರನ ಅತ್ಯುಗ್ರವಾದ ಶರೀರದಿಂದ ಉಂಟಾಗಿ ಸಹಿಸಲಸಾಧ್ಯವಾದ ತೇಜಸ್ಸಿನಿಂದ ಹಗಲುರಾತ್ರಿಗಳನ್ನು ವಿಂಗಡಿಸಿ ತಿಳಿದುಕೊಳ್ಳುವುದೇ ಅಸಾಧ್ಯವಾಗಿ

ನ ತತ್ಪ್ರತಿಭಟೋ ಲೋಕೇ ಲೋಕಾಲೋಕಾಚಲಾವಧಿ ।
ಕ್ರೀಡಾಂ ಕೃತ್ವಾ ಸ ವೈಕುಂಠೇ ಸ್ವದಾರೈಃ ಸಹ ತಿಷ್ಠತಿ ॥೪೬॥

ತದಗ್ರೇ ವಿರಜಾಂ ನಾಮ ನದೀಂ ದೃಷ್ಟ್ವಾ ಸ ತಾರಕಃ ।
ಭೀತಸ್ತದಗ್ರೇ ನಾಯಾತಿ ಶೂಲಜ್ವಾಲಾಸಮಾವೃತಾಂ ॥೪೭॥

ಅತೋ ನಾಯಾತಿ ಕೈಲಾಸಂ ಕಾಲಕಾಲಭಯಾದಪಿ ।
ಅನ್ಯಥಾ ತಸ್ಯ ಗಮನಂ ತತ್ರಾಪಿ ಸ್ಯಾದಕುಂಠಿತಂ ॥೪೮॥

ಏವಂ ಸಂವಸತಸ್ತಸ್ಯ ತಾರಕಸ್ಯ ದುರಾತ್ಮನಃ ।
ಅಶಕ್ಯ ಏವ ಸಂಹಾರಃ ಸರ್ವಥಾಪೀತಿ ಮನ್ಮಹೇ ॥೪೯॥

ರುತ್ತದೆ. ಏಕೆಂದರೆ ಅವನ ತೇಜಸ್ಸಿನ ಪ್ರಭಾವದಿಂದ ಎಲ್ಲಿಯೂ ಕತ್ತಲೆಯ ಸುಳಿವೇ ಇಲ್ಲ. ॥೪೫॥

ಈ ಲೋಕದಲ್ಲಿ ಲೋಕಾಲೋಕಪರ್ವತದವರೆಗೂ ಯಾವನೂ ಆ ರಾಕ್ಷಸನಿಗೆ ಎದುರಾಗಿ ನಿಲ್ಲುವವನಿಲ್ಲ. ಈಗ ಅವನು ತನ್ನ ಪ್ರಿಯಪತ್ನಿಯರೊಂದಿಗೆ ಸ್ವೇಚ್ಛೆಯಿಂದ ಕ್ರೀಡಿಸಿ ವೈಕುಂಠದಲ್ಲಿ ನೆಲಸಿರುವನು. ॥೪೬॥

ಆ ವೈಕುಂಠನಗರದ ಮುಂಭಾಗದಲ್ಲಿ ವಿರಜಾನದಿಯು ಪ್ರವಹಿಸುತ್ತಿರುವುದು. ಆ ನದಿಯು ಅತಿ ಭಯಂಕರವಾದುದು. ಆ ತಾರಕಾಸುರನು ಶೂಲದಂತಿರುವ ಅದರ ಜ್ವಾಲೆಗಳನ್ನು ನೋಡಿ ಭಯಗ್ರಸ್ತನಾಗಿ ಆ ನದಿಯ ಬಳಿಗೆ ಬರಲು ಅಂಜಿ ವೈಕುಂಠವನ್ನು ಬಿಟ್ಟು ಎಲ್ಲಿಗೂ ಕದಲುವುದಿಲ್ಲ. ॥೪೭॥

ಮೃತ್ಯುಂಜಯನಾದ ಶಿವನಿಗೆ ಮಾತ್ರ ಅವನು ಹೆದರುತ್ತಿರುವನು. ಆದುದರಿಂದಲೇ ಅವನು ಕೈಲಾಸನಗರಕ್ಕೆ ಬಂದಿಲ್ಲ. ಅದಿಲ್ಲದಿದ್ದರೆ ಯಾವ ಆತಂಕವೂ ಇಲ್ಲದೆ ಕೈಲಾಸವನ್ನೂ ವಶಪಡಿಸಿಕೊಳ್ಳುತ್ತಿದ್ದನು. ॥೪೮॥

ಈ ರೀತಿಯಲ್ಲಿ ಶತ್ರುಗಳಿಗೆ ಅಜೇಯನಾಗಿ ವೈಕುಂಠದಲ್ಲಿ ವಾಸಿಸುತ್ತಿರುವ ದುಷ್ಟನಾದ ಆ ಅಸುರನನ್ನು ಸಂಹರಿಸುವುದು ಅಸಾಧ್ಯವೆಂದೇ ತಿಳಿಯುತ್ತೇವೆ.॥೪೯॥

ದುಃಖಿತಾಸ್ತೇ ಸುರಾಃ ಸರ್ವೇ ವಿಚಿಂತ್ಯಾನ್ಯೋನ್ಯಮೇಕದಾ ।
ನಾರಾಯಣಸ್ಯ ನಿಲಯಂ ಜಗ್ಮುಸ್ತೇ ಕಮಲಾಪತೇಃ ॥೫೦॥

ಖದ್ಯೋತವದ್ವಿಲೀನಂ ತಂ ಕಮಲಾಸಹಿತಂ ಹರಿಂ ।
ಊಚುರ್ವಿಸ್ಮಯಮಾಪನ್ನಾಶ್ಶರಣಂ ಕಿಮಿಹೇತಿ ನಃ ॥೫೧॥

॥ ದೇವಾ ಊಚುಃ ॥

ನಾರಾಯಣಾಧುನಾ ಕಿಂ ವಾ ಶರಣ್ಯಂ ಶರಣಾರ್ಥಿನಾಂ ।
ಪ್ರಪನ್ನಾಃ ಸ್ಮಃ ಪ್ರಪನ್ನಾನಾಮಾಪನ್ನಾರ್ತಿವಿನಾಶಕಂ ॥೫೨॥

ಕ್ವ ತೇ ಧೈರ್ಯಂ ಕ್ವ ತೇ ಶೌರ್ಯಂ ಕ್ವ ತೇ ಬಾಹುಪರಾಕ್ರಮಃ ।
ಖದ್ಯೋತರೂಪತಾಮೇತ್ಯ ಪದ್ಮಯಾ ಸಹ ತಿಷ್ಠಸಿ ॥೫೩॥

ಹೀಗೆ ರಾಕ್ಷಸನ ಬಾಧೆಯನ್ನು ಸಹಿಸಲಾರದೆ ಅನವರತವೂ ದುಃಖಿಸುತ್ತಿದ್ದ ಆ ಸಕಲ ದೇವತೆಗಳೂ ಒಂದಾನೊಂದು ದಿನ ಕಮಲಾಕಾಂತನಾದ ಶ್ರೀಮನ್ನಾರಾಯಣನ ಬಳಿಗೆ ತೆರಳಿದವರಾದರು. ॥೫೦॥

ಮಿಣುಕು ಹುಳುವಿನಂತೆ, ಪ್ರಿಯತಮೆಯಾದ ಲಕ್ಷ್ಮಿಯೊಂದಿಗೆ ಕಮಲ ಪುಷ್ಪದಲ್ಲಿ ಅಡಗಿರುವ ಆ ವಿಷ್ಣುವನ್ನು ನೋಡಿ ಅಚ್ಚರಿಗೊಂಡವರಾಗಿ ' ಓ ಪ್ರಭುವೇ, ಅಸಹ್ಯವಾದ ಯಾತನೆಯನ್ನು ಅನುಭವಿಸುತ್ತಲಿರುವ ನಮ್ಮನ್ನು ರಕ್ಷಿಸುವವರು ಯಾರು ' ಎಂದು ದೀನವಾಣಿಯಿಂದ ವಿಷ್ಣುವನ್ನು ಹೀಗೆ ಬೇಡಿಕೊಂಡರು. ॥೫೧॥

" ನಾರಾಯಣನೇ, ರಕ್ಷಣೆಯನ್ನು ಅಪೇಕ್ಷಿಸುತ್ತಲಿರುವ ನಮ್ಮನ್ನು ಈಗ ರಕ್ಷಿಸುವವರಾರು ? ನಾವು ಅನನ್ಯಗತಿಕರಾಗಿ ಇಲ್ಲಿಗೆ ಬಂದಿರುವೆವು. ನಮಗೆ ಬಂದೊದಗಿರುವ ಈ ಕಷ್ಟವನ್ನು ಹೋಗಲಾಡಿಸು. ॥೫೨॥

ನಿನ್ನಲ್ಲಿದ್ದ ಆ ಧೈರ್ಯವು ಈಗ ಎಲ್ಲಿಹೋಯಿತು ? ನಿನ್ನ ಶೌರ್ಯವು ಎಲ್ಲಿ ಅಡಗಿತು ? ಹಿಂದೆ ತೋರುತ್ತಿದ್ದ ಅಮಿತವಾದ ಆ ಪರಾಕ್ರಮವು ಈಗ ಮಾಯವಾಯಿತೇ ? ದೀಪದ ಹುಳುವಿನ ರೂಪವನ್ನು ತಾಳಿ ಲಕ್ಷ್ಮಿಯೊಂದಿಗೆ ಈ ಕಮಲದಲ್ಲಿ ವಾಸವಾಗಿರುವೆಯಲ್ಲವೇ ! ॥೫೩॥

ಮಧುಕೈಟಭನ್ಯೈರಿತ್ವಂ ಕುತ್ರ ವಾ ಗತಮದ್ಯ ತೇ ।
ಲಜ್ಜಾವಹಂ ನ ತನ್ನಾಮ ಕಿಮಿದಂ ಮಧುಸೂದನ ॥೫೪॥

ಅತಃ ಪರಂ ಕಥಂ ಸೌಖ್ಯಂ ಈದೃಶೀ ತೇ ಗತಿರ್ಯದಿ ।
ಕಮಲಾಪತಿತಾ ವಾ ತೇ ಕಥಂ ವಾ ಸ್ಥಿರತಾಮಿಯಾತ್ ॥೫೫॥

ನಿಲೀನಂ ತ್ವಾಂ ನ ಜಾನಾತಿ ನೂನಂ ಕಮಲಯಾ ಸಹ ।
ವಿಮಲಾ ಕಮಲಾನೇನ ದೃಷ್ಟಾಚೇತ್ತ್ಯಜ್ಯತೇ ಕಥಂ ॥೫೬॥

ಅತ್ರಾವಿಲೇಽಸ್ಮಿನ್ ಕಮಲೇ ಲೀನೇ ಸತಿ ನ ದೃಶ್ಯಸೇ ।
ಅನ್ಯಥಾ ತೇನ ನೀತಾ ಸ್ಯಾದ್ಬಲಿನಾ ಕಮಲಾ ಖಲು ॥೫೭॥

ಮಧುಸೂದನನೇ, ಜಗತ್ಸೃಷ್ಟಿಯ ಆದಿಯಲ್ಲಿ ಮಧುಕೈಟಭರೆಂಬ ರಾಕ್ಷಸರನ್ನು ಸಂಹರಿಸಿ, ಮಧುಸೂದನನೆಂಬ ಅನ್ವರ್ಥನಾಮಧೇಯವನ್ನು ಪಡೆದ ನಿನ್ನ ಆ ಭುಜಪರಾಕ್ರಮವು ಈಗ ಎಲ್ಲಿ? ಈಗ ನಿನಗೆ ಮಧುಸೂದನನೆಂಬ ಆ ನಾಮಧೇಯವು ನಾಚಿಕೆಯನ್ನುಂಟುಮಾಡುವುದಿಲ್ಲವೇ ? ॥೫೪॥

ಮಧುಸೂದನನಾದ ನೀನೇ ಈರೀತಿಯಾದ ವಿಪನ್ನಾವಸ್ಥೆಯನ್ನು ಹೊಂದಿದರೆ ನಿನ್ನನ್ನೇ ಮರೆಹೊಕ್ಕಿರುವ ನಮಗೆ ಸೌಖ್ಯವು ಲಭಿಸುವ ಬಗೆ ಹೇಗೆ? ನಿನಗಿರುವ 'ಕಮಲಾಪತಿ' ಎಂಬ ಈ ನಾಮಧೇಯವಾದರೂ ಶಾಶ್ವತವಾಗಿ ಉಳಿಯುವ ಬಗೆ ಹೇಗೆ ? ॥೫೫॥

ನೀನು ಲಕ್ಷ್ಮಿಯೊಂದಿಗೆ ಈ ಕಮಲದಲ್ಲಿ ಅಡಗಿರುವೆಯೆಂಬುದನ್ನು ನಿಜವಾಗಿಯೂ ಆ ರಾಕ್ಷಸನು ಅರಿತಿಲ್ಲ. ಸುಂದರಿಯಾದ ಲಕ್ಷ್ಮಿಯು ಅವನ ದೃಷ್ಟಿಗೆ ಗೋಚರಳಾದರೆ ಆ ದುಷ್ಟನು ಅವಳನ್ನು ಅಪಹರಿಸದೇ ಬಿಡುವನೇ ?॥೫೬॥

ಕೆಸರಿನಿಂದ ಆವರಿಸಲ್ಪಟ್ಟ ಈ ಕಮಲವು ನೀರಿನಲ್ಲಿ ಮುಳುಗಿರುವುದರಿಂದ, ಅದರ ಒಳಗಡೆಯಲ್ಲಿ ಅಡಗಿರುವ ನಿನ್ನನ್ನು ಆ ರಾಕ್ಷಸನು ನೋಡದವನಾಗಿದ್ದಾನೆ. ಹಾಗಿಲ್ಲದಿದ್ದರೆ ಬಲಶಾಲಿಯಾದ ಅವನು ನಿನ್ನೊಂದಿಗಿರುವ ಲಕ್ಷ್ಮಿಯನ್ನು ಅಪಹರಿಸದೇ ಇರುತ್ತಿದ್ದನೇ? ॥೫೭॥

ತವ ಚೇತ್ಕುಂಠಿತಾ ಶಕ್ತಿರಸ್ಮಾಕಮಪಿ ಕುಂಠಿತಾ ।
ಶಕ್ತಿರತ್ರ ತ್ವಯಾ ತಾವದಧೈರ್ಯಂ ಕ್ರಿಯತೇ ಕಥಂ ॥೫೮॥

ಧೈರ್ಯಮಾವಹ ಯತ್ನೇನ ನಾರಾಯಣ ಸುರೈಃ ಸಹ ।
ಯುದ್ಧೇ ಕೃತೇ ತಾರಕೇಽಪಿ ಹಂತವ್ಯ ಇತಿ ಸತ್ವರಂ ॥೫೯॥

ಮರಣಾದಧಿಕಂ ಕಿಂ ನಃ ಕಮಲೇ ಕಮಲಾನ್ವಯಃ ।
ಅಖಿಲೆ ವಿಮಲೇಽಸ್ಯಾಪಿ ಗತಿಸ್ತವ ಕಿಮೀದೃಶೀ ॥೬೦॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಮಂದಮಾಹ ಹರಿಃ ಸುರಾನ್ ।
ತಾರಕಃ ಶ್ರೋಷ್ಯತೀತ್ಯೇವ ಭೀತಃ ಸ್ವವಚನಂ ಮುಹುಃ ॥೬೧॥

॥ ನಾರಾಯಣ ಉವಾಚ ॥

ತಾರಕಾಸುರ ಹಂತೃತ್ವಶಂಕಾಪ್ಯಸ್ಮಾಸು ನಾಮರಾಃ ।
ಬಹುವಾರಂ ಕಥಂ ತೇನ ಕ್ರೂರೇಣೈವ ನಿರಾಕೃತಾಃ ॥೬೨॥

ನಿನ್ನ ಶಕ್ತಿಯು ಕುಂದಿದರೆ ನಾವೂ ಶಕ್ತಿಹೀನರಾಗುವೆವು. ನಿನ್ನ ದೆಸೆಯಿಂದಲೇ ನಮಗೆ ಈ ಶಕ್ತಿಯಿರುವುದಲ್ಲವೇ? ಅಲ್ಲದೆ ನೀನೇಕೆ ಹೀಗೆ ಅಧೀರನಾಗಿರುವೆ? ॥೫೮॥

ನಾರಾಯಣನೇ, ನೀನು ಈಗ ಸಾಧ್ಯವಾದಷ್ಟು ಧೈರ್ಯವನ್ನು ತಾಳುವವನಾಗು. ದೇವತೆಗಳಿಂದೊಡಗೂಡಿ ಯುದ್ಧವನ್ನೆಸಗಿದರೆ ನಿಶ್ಚಯವಾಗಿಯೂ ಆ ಅಸುರನು ಜಾಗ್ರತೆಯಾಗಿ ಮರಣವನ್ನು ಹೊಂದುವನು. ॥೫೯॥

ಹೀಗೆ ಅವನು ಮರಣವನ್ನು ಹೊಂದಿದರೆ, ನಮಗೆ ಅದಕ್ಕಿಂತಲೂ ಅಧಿಕ ಫಲವೇನಿರುವುದು. ಅಲ್ಲಿಗೆ ನಮ್ಮ ಇಷ್ಟಾರ್ಥವು ಕೈಗೂಡಿದಂತೆಯೇ ಅಲ್ಲವೇ? ಹೀಗೆ ಆ ರಾಕ್ಷಸನಿಗೆ ಹೆದರಿ ಕೇಸರಿನಿಂದ ಆವರಿಸಲ್ಪಟ್ಟ ಈ ಕಮಲದಲ್ಲಿ ಹೇಡಿಯಂತೆ ಅಡಗಿರುವುದು ನಿನಗೆ ಉಚಿತವೇ?" ॥೬೦॥

ದೇವತೆಗಳ ಈ ಮಾತನ್ನು ಕೇಳಿ, ವಿಷ್ಣುವು "ಗಟ್ಟಿಯಾಗಿ ಮಾತನಾಡಿದರೆ ತಾರಕಾಸುರನೆಲ್ಲಿ ಕೇಳುವನೋ" ಎಂಬ ಹೆದರಿಕೆಯಿಂದ ದೇವತೆಗಳನ್ನು ಕುರಿತು ಮೆಲ್ಲಮೆಲ್ಲನೆ ಇಂತೆಂದನು. ॥೬೧॥

"ಎಲೈ ದೇವತೆಗಳಿರಾ! ದೇವತೆಗಳಾದ ನಮಗೆ ಆ ತಾರಕನನ್ನು ಸಂಹರಿ

ತಾರಕಾಸುರಹುಂಕಾರೋಽಪ್ಯಸ್ಮಾಕಮಶನಿಃ ಖಲು ।
ನ ಕೋಽಪ್ಯಶನಿಪಾತೇನ ಜೀವನಾಶಂ ಕರಿಷ್ಯತಿ ॥೬೩॥

ತನ್ನೇತ್ರತೇಜಸಾ ದಗ್ಧಮಸ್ತ್ರಮಂಡಲಮಸ್ಯ ಮೇ ।
ನಾರಾಯಣಾಸ್ತ್ರಭಸ್ಮೇದಂ ಚಕ್ರ ಭಸ್ಮಾವಶೇಷಿತಂ ॥೬೪॥

ಇದಮಸ್ತ್ರದ್ವಯಂ ಮುಖ್ಯಂ ಭಸ್ಮಸಾದಭವತ್ಸುರಾಃ ।
ಯುದ್ಧಸಾಧನಮಸ್ಮಾಕಮನ್ಯಂ ನಷ್ಟಮಸಂಶಯಂ ॥೬೫॥

ಶಾರ್ಙ್ಗಂ ನಷ್ಟಂ ಗದಾ ನಷ್ಟಾ ಶಂಖೋ ನಷ್ಟಸ್ತದೀಕ್ಷಣಾತ್ ।
ನಷ್ಟಂ ಬಾಹುಬಲಂ ಸರ್ವಂ ಶರೀರಬಲಮಂತತಃ ॥೬೬॥

ಸುವ ಆಶೆಯೇ ಇಲ್ಲ. ಹಾಗಿದ್ದಿದ್ದರೆ ನಾವು ಈ ಹಿಂದೆ ಅವನೊಂದಿಗೆ ಅನೇಕ ಬಾರಿ ಯುದ್ಧಮಾಡಿ ಅವನನ್ನು ಸಂಹರಿಸಲಾರದೇ ಯುದ್ಧರಂಗದಿಂದ ಓಡಿಬರುತ್ತಿದ್ದೆವೇ ? ॥೬೨॥

ತಾರಕಾಸುರನ ಹುಂಕಾರವಾದರೋ ನಮಗೆ ಸಿಡಿಲಿನಂತಿರುವುದು. ಸಿಡಿಲಿನ ಹೊಡೆತದಿಂದ ತನ್ನ ಪ್ರಾಣವನ್ನೇ ಕಳೆದುಕೊಳ್ಳಲು ಯಾವನಾದರೂ ಬಯಸುವನೇ ? ॥೬೩॥

ನನ್ನ ಅಸ್ತ್ರಗಳೆಲ್ಲವೂ, ಆ ರಾಕ್ಷಸನ ನೇತ್ರಾಗ್ನಿಯಿಂದ ದಗ್ಧವಾಗಿರುವುವು. ಇದೋ ಇತ್ತನೋಡಿ, ನಾರಾಯಣಾಸ್ತ್ರವೂ ಮತ್ತು ಸುದರ್ಶನಚಕ್ರವೂ ಭಸ್ಮಾವಶೇಷವಾಗಿ ನಿರ್ವೀರ್ಯಗಳಾಗಿರುವುವು. ॥೬೪॥

ಎಲೈ ದೇವತೆಗಳಿರಾ, ನನ್ನಲ್ಲಿದ್ದ ಪ್ರಧಾನವಾದ ಈ ಎರಡು ಅಸ್ತ್ರಗಳೂ ಭಸ್ಮಾವಶೇಷಿತವಾದುವು. ಇದಲ್ಲದೇ ನಮ್ಮ ಇನ್ನುಳಿದ ಯುದ್ಧಸಾಮಗ್ರಿಯೆಲ್ಲಾ ನಿರ್ವೀರ್ಯವಾಗಿರುವುದು. ॥೬೫॥

ಅವನ ಉಗ್ರವಾದ ಆ ದೃಷ್ಟಿಯಿಂದಲೇ ನನ್ನ ಧನುಸ್ಸು, ಗದೆ, ಶಂಖ ಇವೆಲ್ಲವೂ ನಷ್ಟವಾಗಿವೆ. ಭುಜಪರಾಕ್ರಮವು ಮಾಯವಾಯಿತು. ಶರೀರದಲ್ಲಿ ಶಕ್ತಿಯಿಲ್ಲ. ಮನಸ್ಸಿನಲ್ಲಿ ಧೈರ್ಯವಿಲ್ಲ. ॥೬೬॥

ಅತಸ್ತೇನ ಸಹಾಸ್ಮಾಕಂ ಯುದ್ಧವಾರ್ತಾಪಿ ದೂರತಃ ।
ತತ್ತೇಜಸಾತಿದೂರೇಽಪಿ ಸ್ಥಾತುಮೇವ ನ ಶಕ್ಯತೇ ॥೬೭॥

ತನ್ನೇತ್ರತೇಜಃಪಾತೇನ ದೇಹೋ ಮೇಚಕಸಂನಿಭಃ ।
ತೇನ ಕೃಷ್ಣ ಇತಿ ಖ್ಯಾತಿಃ ಲೋಕೇ ಜಾತಾ ಮಮಾಧುನಾ ॥೬೮॥

ಯುದ್ಧಪ್ರತ್ಯಾಶಯಾ ಯೂಯಮಧುನಾ ಸಮುಪಾಗತಾಃ ।
ಸಾ ತಾವದತಿದೂರೇಽಸ್ತು ವಾಸೋಽಪಿ ಕಠಿನೋತ್ರ ಮೇ ॥೬೯॥

ಬಹೂನಾಂ ವಚನೇನಾತ್ರ ಯದಿ ಕೋಲಾಹಲಸ್ತದಾ ।
ಸ ಸಮಾಗತ್ಯ ಸಹಸಾ ಹತ್ವಾ ಯಾಸ್ಯತಿ ತಾರಕಃ ॥೭೦॥

ಯದುಕ್ತಂ ಮಧುವೈರಿತ್ವಂ ಮಯಿ ತನ್ನ ಮಮಾಮರಾಃ ।
ಸ ಮಹಾಮಾಯಯಾ ತಾವತ್ಕೈಟಭೋಽಪಿ ಹತಃ ಪುರಾ ॥೭೧॥

ಆದುದರಿಂದ ನಿಜವಾಗಿಯೂ ನಮಗೆ ಅವನೊಂದಿಗೆ ಯುದ್ಧಮಾಡಲು ಶಕ್ತಿಯಿಲ್ಲ. ಅವನ ಆ ತೇಜಸ್ಸಿನ ಪ್ರಭಾವದಿಂದ ನಾವು ದೂರದಲ್ಲಿ ಸಹ ನಿಲ್ಲುವಂತಿಲ್ಲ. ||೬೭||

ಅವನ ಕಣ್ಣುಗಳ ತೇಜಸ್ಸು ಮೇಲೆ ಬಿದ್ದುದರಿಂದ ನನ್ನ ಈ ದೇಹವು ಕಪ್ಪಾಗಿಹೋಗಿದೆ. ಅದರಿಂದಲೇ ನಾನು ಈಗ ಲೋಕದಲ್ಲಿ ಕೃಷ್ಣನೆಂಬ ನಾಮಧೇಯದಿಂದ ಪ್ರಸಿದ್ಧನಾಗಿರುವೆನು. ||೬೮||

ಈಗ ನೀವು ಅವನೊಂದಿಗೆ ಯುದ್ಧಮಾಡುವ ಆಸೆಯಿಂದ ಇಲ್ಲಿಗೆ ಬಂದಿರುವಿರಿ. ಆ ಆಶೆಯು ದೂರವಾಗಿರಲಿ. ನಾನು ಇಲ್ಲಿ ವಾಸಿಸುವುದೂ ಅತ್ಯಂತ ಕಠಿಣವಾಗಿರುತ್ತದೆ. ||೬೯||

ಇಲ್ಲಿ ನೀವು ಅನೇಕ ಜನರು ಮಾತನಾಡುವುದರಿಂದ ಕೋಲಾಹಲವುಂಟಾಗುವುದು. ಆದನ್ನು ಕೇಳಿ ರಾಕ್ಷಸನು ಇಲ್ಲಿಗೆ ಬಂದು ನಮ್ಮನ್ನು ಹಿಂಸಿಸಿ ಹೋಗುವನು. ||೭೦||

ಹಿಂದೆ ನಾನು ಮಧುವೆಂಬ ರಾಕ್ಷಸನನ್ನು ಸಂಹರಿಸಿ " ಮಧುವೈರಿ " ಎಂಬ ಹೆಸರನ್ನು ಹೊಂದಿರುವೆನೆಂದು ಹೇಳಿರುವಿರಿ. ಆದರೆ ಆ ಹೆಸರು ನನಗೆ ಸಲ್ಲತಕ್ಕ

ಯಾ ಗೌರೀ ಲೋಕಜನನೀ ಮಹಾಮಾಯೇತಿ ವಿಶ್ರುತಾ ।
ಸಾ ಸಂಹಾರರತಾ ಶಕ್ತಾ ಮೋಹಯತ್ಯಖಿಲಂ ಜಗತ್ ॥೨೧॥

ಮಹಾಮಾಯಾಮೋಹಿತೋಽಹಂ ಭವಂತೋಽಪ್ಯಮರಾಸ್ತಥಾ ।
ಮೋಹಿತಾ ಮುನಯೋಽಪ್ಯನ್ಯೇ ಮೋಹಮೇಷ್ಯಂತಿ ಸರ್ವದಾ ॥೨೨॥

ಸಾ ಚೇನ್ಮೋಹಪ್ರವೃತ್ತಾ ಸ್ಯಾಜ್ಜಗತೋ ಮೋಹಿತಂ ಜಗತ್ ।
ವಿನಾಶಾಯ ಪ್ರವೃತ್ತಾ ಚೇದ್ವಿನಶ್ಯತಿ ನ ಸಂಶಯಃ ॥೨೩॥

ಮಧುಕೈಟಭನಾಶಾಯ ವಿಧಿನಾ ಸಂಸ್ತುತಾ ಶಿವಾ ।
ತದಾ ತಯೋರ್ವಿನಾಶೋಽಪಿ ಕೃತ ಏವ ತಯಾ ಖಲು ॥೨೪॥

ದಲ್ಲ. ಆ ಮಧುಕೈಟಭರನ್ನು ಮಹಾಮಾಯೆಯೆಂದು ಪ್ರಸಿದ್ಧಿಗೊಂಡ ಶಕ್ತಿ ದೇವಿಯು ಸಂಹರಿಸಿದಳು. ||೨೦||

ಯಾವ ಗಿರಿಜಾದೇವಿಯು ಮಹಾಮಾಯೆಯೆಂದು ಪ್ರಸಿದ್ಧಳಾಗಿರುವಳೋ ಜಗನ್ಮಾತೆಯಾದ ಅವಳೇ, ಈ ಸಂಹಾರಕಾರ್ಯದಲ್ಲಿ ಶಕ್ತಿಯುಳ್ಳವಳು. ಆ ದೇವಿಯೇ ಈ ಲೋಕವನ್ನು ಅಜ್ಞಾನವೆಂಬ ಬಲೆಯಿಂದ ಮೋಹಗೊಳಿಸುತ್ತಿರುವಳು. ||೨೧||

ಎಲೈ ದೇವತೆಗಳೇ, ನಾನೂ ಮತ್ತು ನೀವೂ ಎಲ್ಲರೂ ಮಹಾಮಾಯೆಯೆಂಬ ಶಕ್ತಿಯಿಂದ ಮೋಹಿತರಾಗಿರುವೆವು. ಇಷ್ಟೇಕೆ! ಇನ್ನುಳಿದ ಸಕಲ ತಪಸ್ವಿಗಳೂ ಸಹ ಆ ಮಾಯೆಯ ಅಧೀನರಾಗಿ ಮೋಹಗೊಂಡಿರುವರು. ||೨೨||

ಆ ದೇವಿಯು ಲೋಕವನ್ನು ಮೋಹಗೊಳಿಸಲು ಉದ್ಯುಕ್ತಳಾದರೆ ಲೋಕವೆಲ್ಲಾ ಏಕದಾ ಮೋಹಗೊಳ್ಳುವುದು. ಸಂಹರಿಸಲು ಉದ್ಯುಕ್ತಳಾದರೆ ಲೋಕವು ಒಂದೇಸಾರಿ ಲಯವಾಗುವುದು. ಇದರಲ್ಲಿ ಸಂಶಯವಿಲ್ಲ. ||೨೩||

ಪೂರ್ವದಲ್ಲಿ ಬ್ರಹ್ಮನು ಮಧುಕೈಟಭರನ್ನು ಸಂಹರಿಸುವುದಕ್ಕೋಸ್ಕರ ಭವಾನಿಯನ್ನು ಸ್ತುತಿಸಲು ಆಗ ದೇವಿಯು ಪ್ರಸನ್ನಳಾಗಿ ಬಳಿಕ ಆ ಮಧುಕೈಟಭರನ್ನು ಸಂಹರಿಸಿದಳು. ||೨೪||

ಚಿಚ್ಛಕ್ತಿಃ ಪರಮಾ ಮಾಯಾ ಸರ್ಜನೇ ಪಾಲನೇಽಪಿ ಸಾ ।
ಸಂಹಾರೇಽಪಿ ಸಮರ್ಥಾ ಸಾ ಮಹೇಶಸ್ಯಾಪರಾ ತನೂಃ ॥೭೬॥

ತಯಾ ಯಸ್ಯ ವಿನಾಶಾಯ ಕೃತೋ ಯತ್ನಃ ಕಿಯಾನಪಿ ।
ತಸ್ಯ ನಾಶೋ ಭವತ್ಯೇವ ತಸ್ಮಿನ್ನೇವ ಕ್ಷಣೇ ಸುರಾಃ ॥೭೭॥

ಸುರಾಣಾಮಸುರಾಣಾಂ ಚ ಸೃಷ್ಟಿಪಾಲನನಾಶನೈಃ ।
ಸಾ ಕ್ರೀಡತಿ ಮಹಾಗೌರೀ ಭವಾನೀ ಸರ್ವಮಂಗಲಾ ॥೭೮॥

ಶರ್ವಾಣೀ ಪಾರ್ವತೀ ದುರ್ಗಾ ಮೃಡಾನೀ ವಿಶ್ವಬಾಹುಕಾ ।
ಕಾಮಾಕ್ಷೀ ಸಾ ವಿಶಾಲಾಕ್ಷೀ ಶಿವಾ ತ್ರಿಪುರಭೈರವೀ ॥೭೯॥

ಸಿದ್ಧೇಶ್ವರೀ ಚ ವಿಕಟಾ ಸೈವ ಕಾತ್ಯಾಯನೀ ಸ್ಮೃತಾ ।
ವಾಗೀಶ್ವರೀ ಮಹಾಕಾಲೀ ಮಹಿಷಾಸುರಮರ್ದಿನೀ ॥೮೦॥

ಆ ಮಾಯೆಯು ಚಿದಾತ್ಮಕನಾದ ಶುದ್ಧಬ್ರಹ್ಮನಿಗೆ ಅಧೀನವಾದ ಶಕ್ತಿಯೆನಿಸಿರುವುದು. ಮತ್ತು ಅನಾದಿಯಾದುದು. ಆ ಶಕ್ತಿಯೇ ಜಗತ್ತಿನ ಸೃಷ್ಟಿಸ್ಥಿತಿಲಯಗಳಲ್ಲಿ ಕಾರಣವಾಗಿರುವುದು. ಆ ದೇವಿಯೇ ಅರ್ಧನಾರೀಶ್ವರನಾದ ಪರಶಿವನ ಅರ್ಧಾಂಗಿಯೆನಿಸಿರುವಳು. ॥೭೬॥

ದೇವಿಯು ಶತ್ರುವನ್ನು ಸಂಹರಿಸುವುದಕ್ಕೋಸ್ಕರ ಅಲ್ಪಪ್ರಯತ್ನವನ್ನು ಕೈಗೊಂಡರೂ, ಅದರಿಂದ ಅವನು ಆ ಕ್ಷಣದಲ್ಲಿಯೇ ಸಂಹರಿಸಲ್ಪಡುವನು. ॥೭೭॥

ಆ ಭವಾನೀದೇವಿಯು ದೇವಾಸುರರನ್ನು ಸೃಷ್ಟಿಸುವುದರಿಂದಲೂ, ರಕ್ಷಿಸುವುದರಿಂದಲೂ ಮತ್ತು ಸಂಹರಿಸುವುದರಿಂದಲೂ ತಾನು ಕ್ರೀಡಿಸುತ್ತಿರುವಳು. ॥೭೮॥

ಆ ದೇವಿಯು ಪರಮೇಶ್ವರನ ಅರ್ಧಾಂಗಿಯಾಗಿರುವುದರಿಂದ ಶರ್ವಾಣಿ ಎಂತಲೂ, ಪರ್ವತರಾಜನಿಗೆ ತಪಸ್ಸಿನ ಫಲವನ್ನುಂಟುಮಾಡುವುದಕ್ಕೋಸ್ಕರ ಅವನ ಮಗಳಾಗಿ ಜನಿಸಿದುದರಿಂದ ಪಾರ್ವತಿಯೆಂತಲೂ, ಶತ್ರುನಾಶಕಳಾದ್ದರಿಂದ ದುರ್ಗಾ ಎಂಬುದಾಗಿಯೂ, ಹಾಗೆಯೇ ಮೃಡಾನೀ, ವಿಶ್ವಬಾಹುಕಾ, ಕಾಮಾಕ್ಷೀ, ವಿಶಾಲಾಕ್ಷಿ, ಶಿವಾ, ತ್ರಿಪುರಭೈರವಿ ಎಂಬ ಅನ್ವರ್ಥವಾದ ಹೆಸರುಗಳಿಂದಲೂ ವ್ಯವಹರಿಸಲ್ಪಡುವಳು. ॥೭೯॥

ಮತ್ತು ಸಿದ್ಧೇಶ್ವರೀ, ವಿಕಟಾ, (ಭಯಂಕರಳು) ಕಾತ್ಯಾಯನೀ, (ಕತ್ಯಯನ ಋಷಿಯ ವಂಶದಲ್ಲಿ ಜನಿಸಿದವಳು) ವಾಗೀಶ್ವರೀ, ಮಹಾಕಾಲೀ, ಮಹಿಷಾಸುರ

ಚಂಡಮುಂಡಪ್ರಮಥಿನೀ ಧೂಮ್ರಲೋಚನಮರ್ದಿನೀ ।
ನಿಶುಂಭಮರ್ದಿನೀ ದೇವೀ ಶುಂಭಾಸುರವಿನಾಶಿನೀ ॥೮೧॥

ಸೈವ ಶಾಕ್ಯಂಭರೀ ಲೋಕೇ ಕಾಶಿಕೀತಿ ಚ ಗೀಯತೇ ।
ದುರ್ಗಾಸುರವಿನಾಶೇನ ದುರ್ಗಾದೇವೀತಿ ಗೀಯತೇ ॥೮೨॥

ಗೌರೀ ಸಂಹಾರಕಾಲೇಽಪಿ ಕರುಣಾರಸಸಾಗರಾ ।
ರಿಪೂನಪಿ ಪುನಾತ್ಯೇವ ಶಸ್ತ್ರಪ್ರಹರಣಾದಿಭಿಃ ॥೮೩॥

ಮಹಾಮಾಯಾ ಸಮುತ್ಪನ್ನಾ ಮಾಯಾ ಕಾಂಚನಶೋಭನಾ ।
ಸಂಹಾರಕಾರಿಣೀ ಸಾಪಿ ಮಾಯಾಂತರವಿಜೃಂಭಿತಾ ॥೮೪॥

ಮರ್ದಿನೀ (ಮಹಿಷನೆಂಬ ರಾಕ್ಷಸನನ್ನು ಸಂಹರಿಸಿದವಳು) ಚಂಡಮುಂಡ ಪ್ರಮಥಿನೀ (ಚಂಡ ಮತ್ತು ಮುಂಡ ಎಂಬ ರಾಕ್ಷಸರನ್ನು ಸಂಹರಿಸಿದವಳು) ಧೂಮ್ರ ಲೋಚನಮರ್ದಿನೀ (ಧೂಮ್ರಲೋಚನನೆಂಬ ರಾಕ್ಷಸನನ್ನು ಸಂಹರಿಸಿದವಳು) ನಿಶುಂಭಮರ್ದಿನೀ (ನಿಶುಂಭನೆಂಬ ರಾಕ್ಷಸನನ್ನು ಸಂಹರಿಸಿದವಳು) ಶುಂಭಾಸುರ ವಿನಾಶಿನೀ (ಶುಂಭನೆಂಬ ರಾಕ್ಷಸನನ್ನು ಸಂಹರಿಸಿದವಳು) ಎಂಬ ನಾನಾ ನಾಮಧೇಯ ಗಳಿವೆ. ॥೮೦-೮೧॥

ಆ ದೇವಿಯೇ ಲೋಕದಲ್ಲಿ ಶಾಕ್ಯಂಭರಿಯೆಂದೂ, ಕಾಶಿಕೀ ಎಂದೂ ವ್ಯವಹರಿಸಲ್ಪಡುವಳು; ಮತ್ತು ದುರ್ಗನೆಂಬ ಅಸುರನನ್ನು ಸಂಹರಿಸಿದುದರಿಂದ ದುರ್ಗಾ ಎಂಬ ಹೆಸರನ್ನೂ ಪಡೆದಿರುವಳು. ॥೮೨॥

ಆ ದೇವಿಯು ದುಷ್ಟರನ್ನು ಸಂಹರಿಸುವ ಕಾಲದಲ್ಲಿಯೂ ಸಹ ಅತ್ಯಂತ ದಯಾಲುವಾಗಿ ತೋರುವಳು. ಯುದ್ಧದಲ್ಲಿ ತನ್ನ ಆಯುಧಗಳನ್ನು ಶತ್ರುಗಳಲ್ಲಿ ಪ್ರಯೋಗಿಸುವುದರಿಂದ ಅವರನ್ನೂ ಸಹ ಪವಿತ್ರರನ್ನಾಗಿ ಮಾಡುತ್ತಿರುವಳು. ॥೮೩॥

ಚಿನ್ನದಂತೆ ಥಳಥಳಿಸುವ ಕಾಂತಿಯಿಂದ ಕೂಡಿ, ಆ ಮಾಯಾಮಯಳಾದ ದೇವಿಯು, ಮಹಾಮಾಯೆಯೆಂಬ ಹೆಸರಿನಿಂದ ಅವತರಿಸಿರುವಳು. ಅವಳೇ ಜಗತ್ತನ್ನು ಸಂಹರಿಸುವವಳು ಮತ್ತು ಅವಳೇ ತನ್ನ ಮಾಯಾಮಹಿಮೆಯಿಂದ ತನಗಿಂತಲೂ ಅಭಿನ್ನವಾದ ಮಾಯಾಮಯವಾದ ಅನೇಕ ಶರೀರಗಳನ್ನು ಧರಿಸಿ, ಈ ಲೋಕದಲ್ಲಿ ಅವತರಿಸಿರುವಳು. ॥೮೪॥

ತತ್ತನ್ಮಾಯಾಸ್ವರೂಪಾಣಿ ನಿರ್ಮಾಯ ಸ್ವಯಮೇವ ಸಾ ।
ಉತ್ಪತ್ತಿಸ್ಥಿತಿಸಂಹಾರಾನ್ ಕರೋತಿ ಭವವಲ್ಲಭಾ ॥೮೫॥

ವೃತ್ರಾಸುರಾದಯಸ್ಸರ್ವೇ ಮಹಾಮಾಯಾಹತಾಸ್ಸುರಾಃ ।
ಕೈಲಾಸನಗರದ್ವಾರಸ್ವರ್ಗಲೋಕಮುಪಾಗತಾಃ ॥೮೬॥

ತೇಽಪಿ ಧನ್ಯಾಸ್ಸುರಾಃ ಸತ್ಯಂ ಯಯಾ ತೇ ಚಾಸುರಾ ಹತಾಃ ।
ನ ತಾದೃಶಂ ವಾ ಭಾಗ್ಯಂ ನಃ ಪುಣ್ಯೈರಗಣಿತೈರ್ವಿನಾ ॥೮೭॥

ಅಸ್ಮಾಕಮಪಿ ನಷ್ಟಾನಿ ದುರದೃಷ್ಟಾನಿ ಸಾ ಶಿವಾ ।
ದುರದೃಷ್ಟವಿನಾಶಾಯ ಪ್ರಸಂಗೇನಾಪಿ ಸಂಸ್ಮೃತಾ ॥೮೮॥

ಅತಃ ಪರಂ ತಾರಕಾದ್ಯಾ ಭೀತಿರ್ಜಾತಾ ದುರತ್ಯಯಾ ।
ಸಾ ನಾಶಂ ಪ್ರಾಪ್ನುಯಾದೇವ ಗೌರೀಸ್ಮರಣಕಾರಣಾತ್ ॥೮೯॥

ಆ ದೇವಿಯೇ ಆಯಾ ಮಾಯಾಮಯವಾದ ವಿಗ್ರಹಗಳನ್ನು ಸೃಷ್ಟಿಸಿ, ಅವುಗಳ ಸ್ಥಿತಿ ಮತ್ತು ಲಯಗಳಿಗೂ ತಾನೇ ಕಾರಣಳಾಗಿರುವಳು. ॥೮೫॥

ಎಲೈ ದೇವತೆಗಳೇ, ಹಿಂದೆ ಒಂದಾನೊಂದು ಸಮಯದಲ್ಲಿ ವೃತ್ರಾಸುರನೇ ಮುಂತಾದ ದುಷ್ಟರಾಕ್ಷಸರು ವರಪ್ರದಾನದಿಂದ ಮದಿಸಿ, ಕೈಲಾಸವನ್ನು ಮತ್ತು ಸ್ವರ್ಗಲೋಕವನ್ನೂ ಜಯಿಸಿ, ಹೆಮ್ಮೆಯಿಂದ ಮೆರೆಯುತ್ತಿರಲು, ಆಗ ಮಹಾಮಾಯಾಸ್ವರೂಪಳಾದ ದೇವಿಯೇ ಅವರನ್ನು ಸಂಹರಿಸಿದಳು. ॥೮೬॥

ಆ ರಾಕ್ಷಸರೇ ಕೃತಕೃತ್ಯರು. ಏಕೆಂದರೆ ಅವರು ಪರಮಪಾವನಳಾದ ಆ ದೇವಿಯಿಂದ ಸಂಹರಿಸಲ್ಪಟ್ಟಿರುವರು. ಪೂರ್ವಜನ್ಮದಲ್ಲಿ ಸಂಪಾದಿಸಿದ ಅಪರಿಮಿತವಾದ ಸುಕೃತವಿಶೇಷವಿಲ್ಲದಿದ್ದರೆ, ಅಂತಹ ಮರಣವು ಅವರಿಗೆ ಎಂದಿಗೂ ಲಭಿಸಲಾರದು. ಆ ಸುಕೃತವು ನಮ್ಮಲ್ಲಿರುವುದೇ! ॥೮೭॥

ಎಲೈ ದೇವತೆಗಳೇ, ನಮ್ಮ ದೌರ್ಭಾಗ್ಯಗಳು ಈಗ ನಷ್ಟವಾಗಿ ಹೋದುವೆಂದೇ ತಿಳಿಯಿರಿ. ಏಕೆಂದರೆ, ಈ ಸಮಯದಲ್ಲಿ ನಾವು ದುರದೃಷ್ಟವನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳ ಆ ದೇವಿಯನ್ನು ಸ್ಮರಿಸಿದೆವಲ್ಲವೇ! ॥೮೮॥

ಯಾ ಸರ್ವಮಂಗಳಾ ನಾಮ್ನಾ ತನ್ನಾಮಸ್ಮರಣೇ ಸತಿ ।
ಶಾಂಭವಾನಾಂ ನಿರ್ಮಲಾನಾಂ ಮಂಗಳಾನಿ ಪದೇ ಪದೇ ॥೯೦॥

ನೂನಂ ಜಾಗರಣೇ ತೇಷಾಂ ಮಂಗಳಾನಿ ಪ್ರಯಚ್ಛತಿ ।
ಸ್ವಪ್ನೇಽಪಿ ಸಾ ಮಂಗಳಾನಿ ಮಂಗಳಾ ಸರ್ವಮಂಗಳಾ ॥೯೧॥

ಯದ್ವಾ ಮಾಂಗಮಿತಿ ಖ್ಯಾತಾ ವೇದೇ ಸಾ ಸರ್ವಮಂಗಳಾ ।
ಮಂಗಳಾನಿ ತನೋತ್ಯೇವ ಪ್ರತಿಕ್ಷಣಮನಾಕುಲಾ ॥೯೨॥

ಕೋ ವಾ ನ ಮಂಗಳಂ ಪ್ರಾಪ ಮಂಗಳಾಪತಿಪೂಜಯಾ ।
ಸ ಸರ್ವಮಂಗಳಾಭರ್ತಾ ಮಂಗಳಾನಿ ಪ್ರಯಚ್ಛತಿ ॥೯೩॥

ಇನ್ನು ಮುಂದೆ ನಮಗೆ ಆ ದುಷ್ಟನಾದ ತಾರಕಾಸುರನಿಂದ ಉಂಟಾಗಿರುವ ಅನಿವಾರ್ಯವಾದ ಭಯವು ದೇವಿಯನ್ನು ಸ್ಮರಿಸಿದುದರಿಂದ ದೂರವಾಗುವುದು. ॥೮೯॥

ಯಾವ ದೇವಿಯು ಸಕಲರಿಗೂ ಕಲ್ಯಾಣವನ್ನುಂಟುಮಾಡುವುದರಿಂದ ಸರ್ವಮಂಗಳಾ ಎಂಬ ನಾಮಧೇಯವನ್ನು ಹೊಂದಿರುವಳೋ, ಆ ದೇವಿಯನ್ನು ಸ್ಮರಿಸುವುದರಿಂದ ಭಕ್ತರಾದ ಮತ್ತು ಪಾಪರಹಿತರಾದ ನಮಗೆ ಅಡಿಗಡಿಗೂ ಕಲ್ಯಾಣಗಳೇ ಉಂಟಾಗುವುವಲ್ಲದೇ ಅಮಂಗಳವು ಎಂದಿಗೂ ಗೋಚರಿಸಲಾರದು. ॥೯೦॥

ಸರ್ವಮಂಗಳೆಯಾದ ಆ ದೇವಿಯು ನಿಜವಾಗಿಯೂ ತನ್ನ ಭಕ್ತರಿಗೆ ಜಾಗ್ರದವಸ್ಥೆಯಲ್ಲಿಯೂ ಮತ್ತು ಸ್ವಪ್ನಾವಸ್ಥೆಯಲ್ಲಿಯೂ ಕಲ್ಯಾಣಪರಂಪರೆಗಳನ್ನು ದಯಪಾಲಿಸುವಳು. ॥೯೧॥

ಆ ದೇವಿಯು ವೇದದಲ್ಲಿ "ಮಂಗ" ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದಿರುವಳು. ಆದುದರಿಂದಲೇ, "ಮಂಗಳಾ" ಎಂಬ ಲೌಕಿಕನಾಮಧೇಯವನ್ನು ಹೊಂದಿ, ಪ್ರತಿಕ್ಷಣದಲ್ಲಿಯೂ, ಯಾವ ಆತಂಕವೂ ಇಲ್ಲದೇ ನಮಗೆ ಮಂಗಳವನ್ನುಂಟುಮಾಡುತ್ತಿರುವಳು. ॥೯೨॥

ಗಿರಿಜಾಕಾಂತನಾದ ಆ ಪರಶಿವನನ್ನು ಪೂಜಿಸುವುದರಿಂದ ಯಾವನು ತಾನೇ ಮಂಗಳವನ್ನು ಹೊಂದಲಾರನು? ಸರ್ವಮಂಗಳೆಯ ಒಡೆಯನಾದ ಆ ಶಿವನೇ ನಮಗೆ ಸಕಲ ಸನ್ಮಂಗಳಗಳನ್ನು ದಯಪಾಲಿಸುವನು. ॥೯೩॥

ಸರ್ವಮಂಗಳಯಾ ಯುಕ್ತಸ್ತಾರಕಾಸುರನಾಶಕಂ ।
ಜನಯಾಮಾಸ ವಿಶ್ವಾತ್ಮಾ ತಾರಕಂ ಸಂಹನಿಷ್ಯತಿ ॥೯೪॥

ಅತಃ ಪರಂ ಕಿಯಾನ್ ಕಾಲೋ ನೇಯೋಽಸ್ಮಾಭಿಸ್ತತಃ ಪರಂ ।
ತಾರಕಾಸುರಸಂಹಾರಂ ಸ ಕುಮಾರಃ ಕರಿಷ್ಯತಿ ॥೯೫॥

ಸ ಮಹೇಶ್ವರವೀರ್ಯೇಣ ಕುಮಾರಃ ಸಮುಭೂತ್ಸುರಾಃ ।
ಸ ವೀರಾಗ್ರೇಸರಃ ಕ್ರೂರೋ ಮಹಾಗೌರೀಕುಮಾರಕಃ ॥೯೬॥

ಸ ಶೌರ್ಯನವನೀತೇನ ಪೋಷಿತಃ ಶೌರ್ಯಸಾಗರಃ ।
ತಾರಕಾಸುರಸಂಹಾರಂ ಕ್ಷಣೇನೈವ ಕರಿಷ್ಯತಿ ॥೯೭॥

ಕುಮಾರಶರಸಂಧಾನದಹನಜ್ವಾಲಯಾ ಪರಂ ।
ತಾರಕಾಸುರಸಂಹಾರೋ ಭವಿಷ್ಯತಿ ನ ಸಂಶಯಃ ॥೯೮॥

ಅರ್ಧನಾರೀಶ್ವರಸ್ವರೂಪನೂ, ಜಗದೊಡೆಯನೂ ಆದ ಆ ಪರಮೇಶ್ವರನು ದುಷ್ಟನಾದ ಈ ತಾರಕಾಸುರನನ್ನು ಸಂಹರಿಸುವ ಸಾಮರ್ಥ್ಯವುಳ್ಳ ಷಣ್ಮುಖನನ್ನು ಸೃಷ್ಟಿಸಿರುವನು. ಅವನೇ ಆ ತಾರಕನನ್ನು ಸಂಹರಿಸುವ ಸಾಮರ್ಥ್ಯವುಳ್ಳವನು. ॥೯೪॥

ಆದುದರಿಂದ ಇನ್ನುಮುಂದೆ ಸ್ವಲ್ಪಕಾಲವನ್ನು ಈ ರೀತಿಯಲ್ಲಿಯೇ ಕಳೆಯೋಣ. ಬಳಿಕ ಆ ಷಣ್ಮುಖನೇ ತಾರಕಾಸುರನನ್ನು ಸಂಹರಿಸುವನು. ॥೯೫॥

ಆ ಕುಮಾರಸ್ವಾಮಿಯು ಪರಮೇಶ್ವರನ ತೇಜಸ್ಸಿನಿಂದ ಜನಿಸಿದನು. ಗೌರೀಪುತ್ರನಾದ ಅವನು ವೀರರಲ್ಲಿ ಶ್ರೇಷ್ಠನೂ ಮತ್ತು ಶತ್ರುಗಳಿಗೆ ಭಯಂಕರನೂ ಆಗಿರುವನು. ॥೯೬॥

ನೀರಿಗೆ ಸಮುದ್ರವು ಹೇಗೆ ಆಶ್ರಯವಾಗಿರುವುದೋ, ಅದರಂತೆ ಸಾರವಾದ ಪರಾಕ್ರಮಕ್ಕೆ ಆಶ್ರಯನಾದ ಅವನು ಪರಾಕ್ರಮವೆಂಬ ಬೆಣ್ಣೆಯಿಂದಲೇ ಕಾಪಾಡಲ್ಪಟ್ಟಿರುವನು. ಆದುದರಿಂದ ಅವನು ಕ್ಷಣಮಾತ್ರದಲ್ಲಿಯೇ ದುಷ್ಟನಾದ ಆ ತಾರಕಾಸುರನನ್ನು ಸಂಹರಿಸುವನು. ॥೯೭॥

ಕುಮಾರಸ್ವಾಮಿಯು ತನ್ನ ಧನುಸ್ಸಿನಲ್ಲಿ ಬಾಣವನ್ನು ಸೇರಿಸುವುದರಿಂದುಂಟಾದ ಅಗ್ನಿಯ ಜ್ವಾಲೆಯಿಂದಲೇ ಆ ತಾರಕಾಸುರನು ನಾಶವಾಗುವನು ಇದರಲ್ಲಿ ಸಂಶಯವಿಲ್ಲ."

ಇತಿ ತದ್ವಚನಂ ಶ್ರುತ್ವಾ ನತ್ವಾ ನಾರಾಯಣಂ ಸುರಾಃ ।
ಪ್ರಹರ್ಷೇಣ ಪರಂ ಪ್ರಾಹುಃ ಕೃತಾರ್ಥೋಽಸೀತಿ ಸಾದರಂ ॥೯೯॥

ತಾರಕಾಸುರಸಂತ್ರಾಸದಾವಾನಲಸಮಾವೃತಾಃ ।
ಶಿವನಾಮಸುಧಾಸಾರೈಃ ಶೀತಲಾಃ ಸ್ಮ ಕಿಲಾಧುನಾ ॥೧೦೦॥

ಕಥಂ ಸ್ಮೃತೋ ಮಹಾದೇವಃ ಸಂಸಾರಾಗ್ನಿವಿನಾಶಕಃ ।
ಅಕಸ್ಮಾದಧುನಾ ದೀನಾನಸ್ಮಾನ್ ಪಾಲಯಿತುಂ ಪರಂ ॥೧೦೧॥

ಸ ಕೃಪಾಲುರ್ನೀಲಕಂಠಃ ಸರ್ವಕಂಟಕನಾಶಕಃ ।
ಕರೋತಿ ಮಂಗಳಂ ನಿತ್ಯಂ ಕ್ಷಣಾರ್ಧೇನಾಪಿ ವಾ ಸ್ಮೃತಃ ॥೧೦೨॥

ಪ್ರತಿಕ್ಷಣಂ ಮಹಾದೇವಚರಣಸ್ಮರಣಾದರಾಃ ।
ಹಾರಾಃ ಪರಮುದಾರಾಸ್ತೇ ನ ಸಂಸಾರಭಯಾತುರಾಃ ॥೧೦೩॥

ವಿಷ್ಣುವಿನ ಈ ಮಾತನ್ನು ಕೇಳಿ ದೇವತೆಗಳು ಆವನಿಗೆ ನಮಸ್ಕರಿಸಿ, ಅತ್ಯಾನಂದದಿಂದ ಕೂಡಿದವರಾಗಿ "ಓ ದೇವನೇ, ನೀನೇ ಧನ್ಯನು" ಎಂದು ವಿಷ್ಣುವನ್ನು ಶ್ಲಾಘಿಸಿದರು. ॥೯೯॥

ಬಳಿಕ ಅವರು ಇಂತೆಂದರು — ತಾರಕಾಸುರನಿಂದುಂಟಾದ ಭಯವೆಂಬ ಕಾಡುಕಿಚ್ಚಿನಿಂದ ಸುತ್ತುವರಿಯಲ್ಪಟ್ಟ ನಮ್ಮನ್ನು ಶಿವನಾಮಧೇಯವೆಂಬ ಅಮೃತ ಪ್ರವಾಹದಿಂದ ಆನಂದಗೊಳಿಸಿದೆಯಲ್ಲವೇ! ॥೧೦೦॥

ನಾವು ಸಂಸಾರವೆಂಬ ಅಗ್ನಿಯನ್ನು ನಾಶಪಡಿಸುವವನೂ ಅನಾಥರಕ್ಷಕನೂ ಆದ ಪರಮೇಶ್ವರನನ್ನು ಹೇಗೂ ಸ್ಮರಿಸುತ್ತಿರಲಿಲ್ಲ. ಈಗ ನಮ್ಮ ಅದೃಷ್ಟವಿಶೇಷದಿಂದಲೇ, ಶಿವಸ್ಮರಣೆಯೊದಗಿ ನಾವು ಪಾಲಿತರಾಗಿರುವೆವು. ॥೧೦೧॥

ದಯಾಶಾಲಿಯೂ, ವಿಘ್ನಗಳನ್ನು ಹೋಗಲಾಡಿಸುವವನೂ ಆದ ಆ ಶಿವನನ್ನು ಕ್ಷಣಾರ್ಧಕಾಲ ಸ್ಮರಿಸಿದರೂ ಸಹ, ಶಂಕರನು ಅನವರತವೂ ನಮಗೆ ಶುಭವನ್ನುಂಟುಮಾಡುವನು. ॥೧೦೨॥

ಅತ್ಯಂತ ಉದಾರರೂ ಮತ್ತು ಪ್ರತಿಕ್ಷಣದಲ್ಲಿಯೂ ಶಿವನ ಪಾದಗಳನ್ನು ಸ್ಮರಿಸುವುದರಲ್ಲಿಯೇ ಆಸಕ್ತರೂ ಆದ ಪರಶಿವಶರಣರಿಗೆ, ಸಂಸಾರಭಯವು ಎಂದಿಗೂ ಒದಗಲಾರದು. ॥೧೦೩॥

ತ ಏವ ಧನ್ಯಾ ಮಾನ್ಯಾಶ್ಚ ಧರಣೀಮಂಡಲೇ ಮುಹುಃ ।
ಯೇ ಸ್ಮರಂತಿ ಮಹಾದೇವಮುಮಾಲಿಂಗಿತವಿಗ್ರಹಂ ॥೧೦೪॥

ಅಹೋ ಮಹದಿದಂ ಭಾಗ್ಯಂ ಸೌಭಾಗ್ಯನಿಧಿರೇವ ನಃ ।
ಗೌರೀಧವೋಽಧುನಾ ಸಾಧು ಧಾರಾರೂಪೇಣ ಸಂಸ್ಮೃತಃ ॥೧೦೫॥

ಮಹಾದೇವಪದಾಂಭೋಜಭೃಂಗಮಂಗಂ ಸುಮಂಗಲಂ ।
ತನೂತ್ತಮಾಂಗಮುತ್ತುಂಗಂ ಮುಹುಸ್ತತ್ಪ್ರಣತಂ ಮುದಾ ॥೧೦೬॥

ಹರಂ ಪರಾತ್ಪರತರಂ ತಂ ಮಹಾನಂದಸಾಗರಂ ।
ಸ್ಮೃತ್ವಾ ನತ್ವಾಪಿ ದೃಷ್ಟ್ವಾ ವಾ ಪರಮಾನಂದತಾಂ ಯಯುಃ॥೧೦೭॥

ಯೇ ಯೇ ಕೃತಾರ್ಥಾಸ್ತೇ ಸರ್ವೇ ಸರ್ವದಾ ಸರ್ವಸಿದ್ಧಿದಂ ।
ಶಂಕರಂ ಶರಣಂ ಪ್ರಾಪ್ತಾಃ ಪ್ರಾಪ್ತೈಶ್ವರ್ಯಮಹೋತ್ಸವಾಃ॥೧೦೮॥

ಯಾರು ಅರ್ಧನಾರೀಶ್ವರನಾದ ಆ ಪರಮೇಶ್ವರನನ್ನು ಸದಾ ಸ್ಮರಿಸುವರೋ, ಅವರೇ ಈ ಲೋಕದಲ್ಲಿ ಕೃತಾರ್ಥರೂ ಮತ್ತು ಪೂಜ್ಯರೂ ಎನಿಸುವರು ॥೧೦೪॥

ಹೇಗೋ ಈಗ ನಾವು, ಕಲ್ಯಾಣಗಳಿಗೆ ನಿಧಿಯಂತಿರುವ ಆ ಗಿರಿಜಾಕಾಂತನನ್ನು ಎಡಬಿಡದೆ ಸ್ಮರಿಸಿರುವೆವು. ಇದು ನಮ್ಮ ಸುಕೃತವಿಶೇಷವಲ್ಲವೇ! ನಮಗೀಗ ಲಭಿಸಿರುವ ಈ ಸೌಭಾಗ್ಯವನ್ನು ಏನೆಂದು ಹೇಳೋಣ? ॥೧೦೫॥

ಶಿವನ ಪಾದಗಳೆಂಬ ಕಮಲದಲ್ಲಿ ಭ್ರಮರದಂತಿರುವ ಉನ್ನತವಾದ ಈ ನಮ್ಮ ಶಿರಸ್ಸು, ಅಕ್ಕರೆಯಿಂದ ಈಗ ಅವನ ಪಾದಗಳನ್ನು ನಮಸ್ಕರಿಸಿತು. ॥೧೦೬॥

ಜಗತ್ಕಾರಣವಾದ ಮಾಯೆಯಿಂದ ಬಿಡಲ್ಪಟ್ಟವನೂ, ಆನಂದನಿಲಯನೂ ಆದ ಆ ಶಿವನನ್ನು ಸ್ಮರಿಸಿ, ನಮಸ್ಕರಿಸಿ ಅಥವಾ ಸಂದರ್ಶಿಸಿ ಭಕ್ತರು ನಿರತಿಶಯವಾದ ಆನಂದವನ್ನು ಹೊಂದುವರು. ॥೧೦೭॥

ಯಾರು ಯಾರು ಪುಣ್ಯಶಾಲಿಗಳಾಗಿರುವರೋ ಅವರೆಲ್ಲರೂ ಅನವರತವೂ ಸಕಲ ಸಿದ್ಧಿಗಳನ್ನುಂಟುಮಾಡುವ ಆ ಶಿವನನ್ನು ಮರೆಹೊಕ್ಕು, ಸಕಲ ಸಂಪತ್ತುಗಳನ್ನೂ ಮತ್ತು ಅನಂತವಾದ ಸುಖವನ್ನೂ ಹೊಂದಿರುವರು. ॥೧೦೮॥

ಯದ್ದ್ವಾರಗಾಸ್ತುಂಗತುರಂಗಕೋಟಯಃ
ಯದ್ದ್ವಾರಿ ಮತ್ತೇಭಸಮೂಹಕೋಟಯಃ ।
ತದ್ದ್ವಾರಪಾಲಾಯ ನಮೋ ನಮಃ ಸದಾ
ಸ ಶಾಂಕರದ್ವಾರವಿಚಾರಸಾಗರಃ ॥೧೦೯॥

ನ ಶಾಂಭವಾನಾಮಶುಭಂ ಕದಾಚಿ
ತ್ತೇ ಶಾಂಭವಾನಾಂ ಸದನಂ ಸುಖಾನಾಂ ।
ತ ಏವ ಧನ್ಯಾಃ ಪೃಥಿವೀತಲೇಽಸ್ಮಿನ್
ಮಾನ್ಯಾಃ ಸುರಾಣಾಂ ಚ ನರೇಶ್ವರಾಣಾಂ ॥೧೧೦॥

ಅಸ್ಮಾಕಂ ಕೃತಪುಣ್ಯಸಂಘವಿಭವೈರದ್ಯಾಧುನಾ ಶಂಕರೇ
ಭಕ್ತಿಃ ಕಾಚನ ಕಾಪಿ ಮೇರುಸದೃಶಂ ಸೂತೇ ಧನಂ ನಿರ್ಧನಾಃ ।
ಸ್ಮೃತ್ವಾ ತಂ ಸಕೃದಪ್ಯಪಾರಧನಭೂಸೌಭಾಗ್ಯವಂತಸ್ತತಃ
ಸಂತಃ ಕೇಽಪಿ ಕಿಲಾಂತಕಾಂತಕಲಸತ್ಪಾದಾಂಬುಜಾರಾಧಕಾಃ॥೧೧೧॥

ಯಾವ ಭಕ್ತನ ಆಲಯದ ಬಾಗಿಲಿನಲ್ಲಿ ಉನ್ನತವಾದ ಮತ್ತು ಅಗಣಿತವಾದ ಕುದುರೆಗಳು ಇರುವುವೋ, ಅಂತಹ ಶಿವನ ದ್ವಾರಪಾಲಕರಿಗೆ ಮೊದಲು ನಮಸ್ಕರಿಸುವೆವು. ಏಕೆಂದರೆ ಅವರು ಅನವರತವೂ ಶಂಕರನ ಆಲಯದ ದ್ವಾರವನ್ನು ರಕ್ಷಿಸುತ್ತಾ ಮಹಾದೇವನನ್ನು ವಿಚಾರಪೂರ್ವಕವಾಗಿ ಸೇವಿಸುತ್ತಿರುವರು. ||೧೦೯||

ಈಶ್ವರ ಭಕ್ತರಿಗೆ ಎಂದಿಗೂ ಅಮಂಗಳವು ಸಂಭವಿಸುವುದಿಲ್ಲ. ಅವರೇ ಭಕ್ತಾಗ್ರೇಸರರು ಮತ್ತು ಸುಖಗಳಿಗೆ ನಿಧಿಗಳಂತೆ ಇರುವವರು. ಅವರೇ ಈ ಜಗತೀತಲದಲ್ಲಿ ಕೃತಕೃತ್ಯರೆನಿಸಿ ದೇವತೆಗಳಾದ ನಮಗೂ ಮತ್ತು ರಾಜರಿಗೂ ಪೂಜ್ಯರಾಗಿರುವರು. ||೧೧೦||

ನಮ್ಮ ಪೂರ್ವಜನ್ಮದ ಸುಕೃತಗಳ ಮಹಿಮೆಯಿಂದ ಈಗ ನಮಗೆ ಆ ಶಿವನಲ್ಲಿ ಅನಿರ್ವಚನೀಯವಾದ ಭಕ್ತಿಯುಂಟಾಗಿರುವುದು. ಆ ಭಕ್ತಿಯು ಮೇರು ಪರ್ವತದಂತೆ ಉನ್ನತವಾಗಿಯೂ ಮತ್ತು ವಿಶಾಲವಾಗಿಯೂ ಇರುವ ಸೌಭಾಗ್ಯವೆಂಬ ಧನದ ರಾಶಿಯನ್ನೇ ಉಂಟುಮಾಡುತ್ತಿರುವುದು. ದೀನರೂ, ದರಿದ್ರರೂ ಆದ ಜನರು ಆ ಶಿವನನ್ನು ಧ್ಯಾನಿಸಿ, ಕ್ಷಣಕಾಲದಲ್ಲಿ ಸಕಲ ವಸ್ತುಗಳನ್ನೂ,

ಸಂಪೂರ್ಣಕಾಮಂ ಪರಮಂ ಪ್ರಕಾಮಂ
ನಿರ್ದಗ್ಧಕಾಮಂ ಗಿರಿಜಾರ್ಧವಾಮಂ ।
ಧೃತಾರ್ಧಸೋಮಂ ಸಮನಾಮ ಸೋಮಂ
ದೇವೋತ್ತಮಂ ದೈವತಸಾರ್ವಭೌಮಂ ॥೧೧೨॥

ಕೃತಂ ಕಿಮಪಿ ಯತ್ಪುರಾ ಶಿವಪದಾಂಬುಜಾರಾಧನಂ
ತದೇತದಧುನಾ ಸುಖಂ ಕಿಮಪಿ ಸಾಧು ಸೂತೇ ಮುಹುಃ ।
ಇದಂ ನ ಸುರಧೇನುಭಿರ್ನ ಮಣಿನಾಪಿ ಕಲ್ಪದ್ರುಮೈಃ
ಸುಧಾನಿಧಿನಿಮಜ್ಜನೈರಪಿ ತು ಕೇವಲಂ ತೇನ ನಃ ॥೧೧೩॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ತಾರಕಾಸುರವೈಭವವರ್ಣನಂ ನಾಮ ದ್ವಾದಶೋಽಧ್ಯಾಯಃ

ಭೂಸಂಪತ್ತನ್ನೂ ಮತ್ತು ಸುಖಶಾಂತಿಗಳನ್ನೂ ಹೊಂದುವರು. ಆದರೆ ಮೃತ್ಯುಂಜಯನಾದ ಆ ಪರಶಿವನ ಅಡಿದಾವರೆಗಳನ್ನು ಸೇವಿಸುವವರು ಅತ್ಯಂತ ವಿರಳವಲ್ಲವೇ! ॥೧೧೧॥

ಆಪ್ತಕಾಮನೂ, ನಿತ್ಯನೂ, ನಿತ್ಯತೃಪ್ತನೂ, ಮನ್ಮಥನನ್ನು ತನ್ನ ನೇತ್ರಾಗ್ನಿಯಿಂದ ದಹಿಸಿದವನೂ, ಅರ್ಧನಾರೀಶ್ವರನೂ, ಅರ್ಧಚಂದ್ರನನ್ನು ಧರಿಸಿದವನೂ, ದೇವೇಶನೂ ಆದ ಶಿವನನ್ನು ಈಗ ವಂದಿಸುವೆವು. ॥೧೧೨॥

ಪೂರ್ವಜನ್ಮದಲ್ಲಿ ನಾವು ಕೈಗೊಂಡಿದ್ದ ಶಿವನ ಅಡಿದಾವರೆಗಳ ಸೇವೆಯೇ ನಮಗೀಗ ವರ್ಣಿಸಲಶಕ್ಯವಾದ ಈ ಸುಖಾತಿಶಯವನ್ನುಂಟುಮಾಡುವುದಾಗಿರುವುದು. ಈ ಸುಖವು ದೇವಲೋಕದ ಗೋವುಗಳಿಂದಲಾಗಲಿ, ಚಿಂತಾಮಣಿಯಿಂದಲಾಗಲಿ, ಕಲ್ಪವೃಕ್ಷಗಳಿಂದಾಗಲಿ ಅಥವಾ ಅಮೃತವನ್ನು ಪಾನಮಾಡುವುದರಿಂದಲೇ ಆಗಲಿ ಇವಾವುದರಿಂದಲೂ ಲಭಿಸಲಾರದು. ಅಂತಹ ಸುಖವು ಈಶ್ವರನಿಂದಲೇ ನಮಗೆ ಲಭಿಸಬೇಕಾಗಿದೆ. ॥೧೧೩॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದಲ್ಲಿ ಮೊದಲನೆಯ ಭಾಗದಲ್ಲಿ
"ತಾರಕಾಸುರನ ವೈಭವವರ್ಣನೆ" ಎಂಬ ಹನ್ನೆರಡನೆಯ
ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ತ್ರಯೋದಶೋಽಧ್ಯಾಯಃ

|| ಶ್ರೀ ಶಿವ ಉವಾಚ ||

ಏವಂ ದುಂಢೇ ಕುಮಾರೋಽಪಿ ವಿಚಾರ್ಯಾದರಪೂರ್ವಕಂ ।
ನತ್ವಾ ಮಾಮಾಹ ವಿನಯಾತ್ಕೃತಾಂಜಲಿಪುಟಃ ಶನೈಃ ॥೧॥

ಶಂಕರಾಪಾರಕರುಣಾಸಾರಸಾಗರ ಶಂ ಕುರು ।
ಮದನ್ಯೋ ದಯನೀಯಸ್ತೇ ದುಂಢೇರ್ವಾ ನೈವ ದೃಶ್ಯತೇ ॥೨॥

ತಾರಕಾಸುರಸಂಹಾರವಿಹಾರಚತುರೋ ಹರಃ ।
ಸ ಮಹಾವೀರ ಇತ್ಯಸ್ತಿ ಶ್ರುತಿಸ್ಮೃತಿಶಿರೋಮಣಿಃ ॥೩॥

ಹದಿಮೂರನೆಯ ಅಧ್ಯಾಯ

ಬಳಿಕ ಶಿವನು ಗಣೇಶನನ್ನು ಕುರಿತು ಇಂತೆಂದನು—ಎಲೈ ಗಣನಾಥನೇ ಹೀಗೆ ಕುಮಾರಸ್ವಾಮಿಯೂ ಆ ತಾರಕಾಸುರನ ವಿಷಯವನ್ನು ಪರ್ಯಾಲೋಚಿಸಿ, ಭಕ್ತಿಪೂರ್ವಕವಾಗಿ ನನ್ನನ್ನು ಸ್ಮರಿಸಿ ಅಂಜಲಿಬದ್ಧನಾಗಿ ಹೀಗೆಂದನು. ||೧||

" ಕೃಪಾಶಾಲಿಯಾದ ಶಿವನೇ, ನನಗೆ ಮಂಗಳವನ್ನುಂಟುಮಾಡುವವನಾಗು. ನಾನು ಮತ್ತು ದುಂಢಿ ಈ ಇಬ್ಬರೇ ನಿನ್ನ ಕೃಪೆಗೆ ಪಾತ್ರರಾಗಿರುವೆವಲ್ಲದೆ, ಇತರರಾರೂ ನಿನ್ನ ಇಷ್ಟು ಪ್ರೀತಿಯನ್ನು ಗಳಿಸಿಲ್ಲವಲ್ಲವೆ! ||೨||

ಆ ಶಿವನೇ ಅನಾಯಾಸದಿಂದ ತಾರಕಾಸುರನನ್ನು ಸಂಹರಿಸುವುದರಲ್ಲಿ ನಿಪುಣನಾಗಿರುವನು. ಅವನೇ ವೀರಾಗ್ರೇಸರನೆಂದೂ ಪ್ರಸಿದ್ಧಿಯನ್ನು ಹೊಂದಿರುವನು.

ಸೃಷ್ಟಿಪಾಲನಸಂಹಾರಾನ್ ಕರೋತಿ ಶ್ರೀಮಹೇಶ್ವರಃ ।
ನ ತದನ್ಯಃ ಕ್ವಚಿತ್ಕೋಽಪೀತ್ಯಪಿ ಶ್ರುತಿರಪಿ ಶ್ರುತಾ ॥೪॥

ಅತಸ್ತಾರಕಸಂಹಾರೋ ಕಥಂ ಕಾರ್ಯೋ ಮಯಾ ಪ್ರಭೋ ।
ತಾದೃಶಂ ನಾಸ್ಯ ಸಾಮರ್ಥ್ಯಮನ್ಯಸ್ಯಾಪಿ ನ ಸರ್ವಥಾ ॥೫॥

ಯತ್ಕಾರ್ಯಕರಣೇ ಶಕ್ತೋ ಯಸ್ತೇನೈವ ಪರಂ ಖಲು ।
ತತ್ಕಾರ್ಯಮಿತಿ ನಾನ್ಯೇನ ನ ತತ್ತ್ವಂ ತಾದೃಶಂ ಖಲು ॥೬॥

ತತ್ತೇಜಸಾ ಸುರಾಃ ಸರ್ವೇ ಪರಾಭೂತಾಃ ಪ್ರತಿಕ್ಷಣಂ ।
ತದ್ವೀರ್ಯದಾವದಹನಂ ನ ಸಹ್ಯಮಿತಿ ಮೇನಿರೇ ॥೭॥

ಅವನೇ ಸರ್ವಶ್ರೇಷ್ಠನೆಂದೂ ವೇದಗಳಲ್ಲಿಯೂ ಮತ್ತು ಸ್ಮೃತಿಗಳಲ್ಲಿಯೂ ಹೇಳಲ್ಪಟ್ಟಿರುತ್ತದೆ. ॥೩॥

ಪರಮೇಶ್ವರನೇ ಸೃಷ್ಟಿಸ್ಥಿತಿಲಯಗಳನ್ನುಂಟುಮಾಡುವವನು. ಅವನನ್ನು ಬಿಟ್ಟು, ಇತರರಾರೂ ಈ ಬ್ರಹ್ಮಾಂಡದಲ್ಲಿ ಸೃಷ್ಟಿಸ್ಥಿತಿಲಯಗಳನ್ನುಂಟುಮಾಡಲು ಶಕ್ತರಾಗಿಲ್ಲ, ಹೀಗೆಂದು ಸಕಲ ವೇದವೂ ಹೇಳಿರುತ್ತದೆ. ॥೪॥

ಸ್ವಾಮಿಯೇ, ಆದುದರಿಂದ ಆ ತಾರಕಾಸುರನನ್ನು ಸಂಹರಿಸುವ ಬಗೆ ಹೇಗೆ? ಅವನನ್ನು ಸಂಹರಿಸುವ ಸಾಮರ್ಥ್ಯವು ನನಗಾಗಲಿ ಇನ್ನಿತರರಿಗಾಗಲಿ ಇರುವುದಿಲ್ಲವಲ್ಲಾ! ॥೫॥

ಯಾವನು ಯಾವ ಕಾರ್ಯವನ್ನು ಮಾಡಲು ಶಕ್ತನೋ, ಅವನೇ ಆ ಕಾರ್ಯವನ್ನು ಮಾಡತೊಡಗುವುದು ಯುಕ್ತವಾಗಿರುವುದು. ನನ್ನಲ್ಲಾದರೋ, ಆ ತಾರಕನನ್ನು ಸಂಹರಿಸುವ ಸಾಮರ್ಥ್ಯವೇ ಇರುವುದಿಲ್ಲ. ಆದ್ದರಿಂದ ಇದರಲ್ಲಿ ನಾನು ತೊಡಗುವುದು ಹೇಗೆ? ॥೬॥

ಆ ಅಸುರನ ಪ್ರತಾಪದಿಂದ ದೇವತೆಗಳೆಲ್ಲರೂ ಅವನೆದುರಿನಲ್ಲಿ ನಿಲ್ಲಲಾರದೆ ಪರಾಜಿತರಾಗಿರುವರು. ಅವರು, ಕಾಡುಕಿಚ್ಚಿನಂತೆ ಉಗ್ರವಾಗಿರುವ ಆ ತಾರಕನ ಪರಾಕ್ರಮವು ಸಹಿಸಲಸಾಧ್ಯವಾಗಿರುವುದೆಂದೂ ತಿಳಿದಿರುವರು. ॥೭॥

ಶಲಭಾನಿವ ತತ್ತೇಜಃ ಸುರಸಂಹಾರಮಿಚ್ಛತಿ ।
ಸ ಮಹಾಪ್ರಲಯಾಗ್ನೀನಾಂ ಸಮೂಹಮಿವ ತಿಷ್ಠತಿ ॥೮॥

ಸುದುರ್ಧರ್ಷಸ್ಸುರಾಣಾಂ ಚೇತ್ಸಹಾಯೋಽಪಿ ಸುರೈರಪಿ ।
ಕಥಂ ವಿಧೇಯೋ ವಿಧಿನಾ ಸ ತು ನಾರಾಯಣೋ ಗತಃ ॥೯॥

ಅಧುನಾ ತಸ್ಯ ವಾರ್ತಾಪಿ ನ ಶ್ರುತಾ ತಾತ ಕಾ ಗತಿಃ ।
ತಸ್ಯ ನಾರಾಯಣಸ್ಯಾಪಿ ವಿಧೇರ್ವಾ ಭಕ್ತವತ್ಸಲ ॥೧೦॥

ಕಿಮೇವಮುತ್ಕಟಾ ಸೃಷ್ಟಿಸ್ತಸ್ಯ ಸಂಪಾದಿತಾ ಪ್ರಭೋ ।
ತತ್ಸಂಹಾರಾಯ ಯತ್ನೋಽಪಿ ಕಥಮೇತಾದೃಶೋಽಧುನಾ ॥೧೧॥

ಅಗ್ನಿಯು ಪತಂಗಗಳನ್ನು ಆಹಾರವನ್ನಾಗಿ ಅಪೇಕ್ಷಿಸುವಂತೆ ಅವನ ಪ್ರತಾಪವು ದೇವತೆಗಳನ್ನು ಸಂಹರಿಸಲಿಚ್ಛಿಸುತ್ತಿರುವುದು. ಅವನು ಮಹಾಪ್ರಲಯ ಕಾಲದ ಅಗ್ನಿಗಳ ಸಮುದಾಯದ ಸ್ವರೂಪನೋ ಎಂಬಂತೆ ಕಾಣಿಸುತ್ತಿರುವನು. ||೮||

ಇಂದ್ರಾದಿ ದೇವತೆಗಳೇ ಅವನನ್ನು ಜಯಿಸಲು ಅಸಮರ್ಥರಾದರೆ ಅವರಿಂದಾಗಲಿ ಅಥವಾ ಬ್ರಹ್ಮನಿಂದಾಗಲಿ ನನಗೆ ಯುದ್ಧದಲ್ಲಿ ಬೆಂಬಲವು ದೊರೆತೀತೇ ? ಎಂದಿಗೂ ಇಲ್ಲ. ಶ್ರೀಮನ್ನಾರಾಯಣನೂ ಸಹ ಆ ರಾಕ್ಷಸನ ಪ್ರತಾಪವನ್ನು ಸಹಿಸಲಾರದೆ ಅವನಿಗೆ ಹೆದರಿ ರಣರಂಗದಿಂದ ಓಡಿಹೋಗಿರುವನು. ||೯||

ಓ ಭಕ್ತವತ್ಸಲನೇ, ಆ ರಾಕ್ಷಸನ ಕಿರುಕುಳವನ್ನು ತಡೆಯಲಾರದೆ ತಮ್ಮ ತಮ್ಮ ಲೋಕವನ್ನು ಬಿಟ್ಟು ಓಡಿಹೋದ ಆ ವಿಷ್ಣು ಬ್ರಹ್ಮರು ಈಗ ಎಲ್ಲಿರುವರೋ, ಇದನ್ನು ನಾನು ತಿಳಿಯಲಾರದವನಾಗಿದ್ದೇನೆ. ಹೀಗಾದರೆ ಮುಂದೇನು ಗತಿ ! ||೧೦||

ಸ್ವಾಮಿಯೇ! ಈ ವಿಷಮವಾದ ಸೃಷ್ಟಿಯು ನಿನಗುಚಿತವೇ! ಈಗ ಆ ಶ್ರೀಮನ್ನಾರಾಯಣನು ಸಂಕಟಕ್ಕೆ ಗುರಿಯಾಗಿರುವನಲ್ಲವೇ! ಆದುದರಿಂದ ಆ ರಾಕ್ಷಸನನ್ನು ಸಂಹರಿಸುವ ಬಗೆ ಹೇಗೆ! ||೧೧||

ಸ ಕಾಲಕೂಟಕೂಟಾನಾಂ ಕೂಟವತ್ಕಿಲ ವರ್ಧಿತಃ ।
ಅತಸ್ತಸ್ಯ ನ ಸಂಹಾರೇ ಪ್ರವೃತ್ತಿರಪಿ ಜಾಯತೇ ॥೧೨॥

ನ ವಟಾಂಕುರವತ್ತಸ್ಯ ಸಂಮುಂತಂ ಪರಿಪಾಲನಂ ।
ಸಂವೃದ್ಧಃ ಕಿಂ ನಖಚ್ಛೇದ್ಯಶ್ಶಾಖಾಮುಂಡಲಮುಂಡಿತಃ ॥೧೩॥

ಕಥಂ ವಿಷತರುಃ ಸೃಷ್ಟಃ ಸುರಾಣಾಮಪಿ ನಾಶಕಃ ।
ಕಾಲಕೂಟಾದಪಿ ಭಯಂ ನ ಸುರಾಣಾಮಭೂತ್ತದಾ ॥೧೪॥

ತನ್ನೇತ್ರತೇಜಸಾಂ ಲೇಶಾಃ ಕಾಲಕೂಟವದನ್ವಹಂ ।
ಸ್ವರ್ಗಿವರ್ಗವಿನಾಶಾಯ ಚರಂತಿ ಸುರಮಂದಿರೇ ॥೧೫॥

ಅವನು ಘೋರವಾದ ಕಾಲಕೂಟವಿಷದಂತೆ ಭಯಂಕರನಾಗಿದ್ದು, ದಿನೇ ದಿನೇ ಪ್ರಬಲಿಸುತ್ತಿರುವನು. ಆದುದರಿಂದ ಅವನನ್ನು ಸಂಹರಿಸುವ ಇಚ್ಛೆಯೇ ನನಗುಂಟಾಗುವುದಿಲ್ಲ. ॥೧೨॥

ಆಲದಮರದ ಮೊಳಕೆಯನ್ನು, ನೀರು ಗೊಬ್ಬರಗಳಿಂದ ಕಾಪಾಡುವಂತೆ, ಪ್ರವೃದ್ಧಮಾನನಾಗುತ್ತಿರುವ ಆ ಅಸುರನನ್ನು ಸಂಹರಿಸದೇ ಪೋಷಿಸುತ್ತಿರುವುದು ಯುಕ್ತವಲ್ಲ. ವೃಕ್ಷವನ್ನು ಮೊಳಕೆಯಾಗಿರುವಾಗ ಕತ್ತರಿಸದೇ ಉದಾಸೀನವಾಗಿದ್ದು, ಅದು ಕೊಂಬೆಗಳಿಂದ ಕೂಡಿಕೊಂಡು ದೊಡ್ಡದಾದ ಮರವಾದಮೇಲೆ ಉಗುರಿನಿಂದ ಕತ್ತರಿಸಹೋದರೆ ಮುರಿಯುವುದೇ! ಎಂದಿಗೂ ಇಲ್ಲ. ಆದರಂತೆ ಇದುವರೆಗೆ ಅವನನ್ನು ಸಂಹರಿಸದೇ ಅತ್ಯಂತ ಬಲಿಷ್ಠನಾದಮೇಲೆ ಸಂಹರಿಸಹೋದರೆ ಅವನು ಸಾಯುವನೇ! ॥೧೩॥

ವಿಷವೃಕ್ಷದಂತಿರುವ ಈ ರಾಕ್ಷಸನು ದೇವತೆಗಳನ್ನು ನಾಶಮಾಡುತ್ತಿರುವನಲ್ಲವೇ! ಆ ಕ್ರೂರನನ್ನು ಏಕೆಂದು ಸೃಷ್ಟಿಸಿರುವೆ! ಅವನ ದುಷ್ಟತನದಿಂದ ದೇವತೆಗಳು ಕಾಲಕೂಟವಿಷದಿಂದಲೂ ಹೆದರದೆ, ಈ ಅಸುರನಿಂದ ಭಯಭ್ರಾಂತರಾಗಿರುವರು. ॥೧೪॥

ಅವನ ಕಣ್ಣುಗಳಿಂದುಂಟಾದ ತೇಜಸ್ಸಿನ ಕಣಗಳು ಘೋರವಾದ ವಿಷದಂತೆ ಭಯಂಕರವಾಗಿದ್ದು ದೇವತೆಗಳನ್ನು ನಾಶಮಾಡುವುದಕ್ಕೋಸ್ಕರ ಅವರ ಗೃಹಗಳಲ್ಲಿ ಸಂಚರಿಸುತ್ತಿವೆ. ॥೧೫॥

ತನ್ನೇತ್ರತೇಜೋಽವಯವೋಽಪ್ಯಸಂಸಹ್ಯಃ ಕಥಂ ಮಮ ।
ಸಹ್ಯಃ ಸ ಸಾಕ್ಷಾದಗ್ನೀನಾಂ ಸಮೂಹಃ ಪ್ರಲಯೋನ್ಮುಖಃ ॥೧೬॥

ತತ್ಸಂಹಾರಪ್ರಯಾಸೋಽಪಿ ಪ್ರಾಯಃ ಸ್ಯಾದ್ವಿಫಲೋ ಮಮ ।
ಅತಸ್ತದರ್ಥಮಧುನಾ ಯತ್ನೋ ನ ಕ್ರಿಯತೇ ಮಯಾ ॥೧೭॥

ಯತ್ನೇ ಕೃತೇ ಯದಿ ಫಲಂ ನ ಭವಿಷ್ಯತಿ ಸತ್ವರಂ ।
ತದಾ ಚೇತಸಿ ವೈಕ್ಲವ್ಯಮಕೀರ್ತಿರಪಿ ದುಸ್ತರಾ ॥೧೮॥

ತಸ್ಮಾದಗಮನೇನೈವ ಕಾಲೋ ನೇಯಃ ಕಿಯಾನಪಿ ।
ಅಸಹ್ಯ ಏವ ಸರ್ವೇಷಾಂ ಸ ಸಹ್ಯಃ ಕಿಂ ಮಮಾಧುನಾ ॥೧೯॥

ತತಃ ಪರಾಜಯೇ ಲೋಕೇಽಪ್ಯುಪಹಾಸೋಽಪಿ ಜಾಯತೇ ।
ಕಿಂ ತೇನಾಪ್ಯುಪಹಾಸೇನ ಶೂರಾಣಾಮಪಿ ಜೀವನಂ ॥೨೦॥

ಪ್ರಲಯಕಾಲದಲ್ಲಿ ಕಾಣಿಸಿಕೊಳ್ಳುವ ಅಗ್ನಿಸಮೂಹಗಳ ಪ್ರತಾಪವನ್ನು ಸಹ ಸಹಿಸಬಹುದು. ಆದರೆ ಆ ರಾಕ್ಷಸನ ನೇತ್ರಗಳಿಂದುಂಟಾದ ತೇಜಸ್ಸಿನ ಒಂದು ಕಣವನ್ನು ಎದುರಿಸಲಾರರು. ||೧೬||

ಅವನನ್ನು ಸಂಹರಿಸುವುದಕ್ಕೋಸ್ಕರ ಒಂದು ವೇಳೆ ಶ್ರಮವನ್ನು ವಹಿಸಿದರೂ ಅದು ವಿಫಲವಾಗುವುದೆಂದೇ ನಾನು ಭಾವಿಸುತ್ತೇನೆ. ಆದುದರಿಂದ ನಾನು ಅದಕ್ಕಾಗಿ ಪ್ರಯತ್ನಿಸುವುದೇ ಇಲ್ಲ. ||೧೭||

ಕಾರ್ಯದಲ್ಲಿ ಪ್ರಯತ್ನಿಸಿದರೂ ಶೀಘ್ರವಾಗಿ ಅದು ಫಲಿಸದಿದ್ದರೆ ಮನಸ್ಸಿಗೆ ವ್ಯಥೆಯುಂಟಾಗುವುದು. ಇದಲ್ಲದೇ, ಎಂದೆಂದಿಗೂ ಹೋಗದೇ ಇರುವ ಅಪಯಶಸ್ಸು ಸಂಭವಿಸುವುದು. ||೧೮||

ಆದುದರಿಂದ ಅವನೊಂದಿಗೆ ಯುದ್ಧವನ್ನು ಮಾಡದೆ, ಸ್ವಲ್ಪಕಾಲವನ್ನು ಕಳೆಯುವುದು ಉಚಿತವಾಗಿರುವುದು. ಸಕಲ ದೇವತೆಗಳೂ ಅವನ ಆ ಬಾಧೆಯನ್ನು ಸಹಿಸಲಸಮರ್ಥರಾಗಿರುವಾಗ ಅದನ್ನು ನಾನು ಸಹಿಸುವುದೆಂತು? ||೧೯||

ನಾನು ಅವನಿಂದ ಯುದ್ಧದಲ್ಲಿ ಪರಾಜಿತನಾದರೆ, ಜನರ ಅಪಹಾಸ್ಯಕ್ಕೆ ಗುರಿಯಾಗುವೆನು. ಶೂರರಾದವರು ಜನರ ಅಪಹಾಸ್ಯವನ್ನು ಸಹಿಸಿ ಬದುಕಿರುವುದರಿಂದ ಯಾವ ಫಲವಿರುವುದು? ||೨೦||

ಯದಿ ತಸ್ಮಿನ್ ಮಹಾಯುದ್ಧೇ ಸನ್ನದ್ಧೇ ಬುದ್ಧಿನಾಶಕೇ ।
ವಿಪರ್ಯಯೋ ಭವೇದ್ಯುದ್ಧೇ ಯಶೋವೃದ್ಧಿಸ್ತದಾ ಕಥಂ ॥೨೧॥

ಉತ್ಪತ್ತಿರೇವ ಯಶಸಃ ಪ್ರಥಮಂ ದುರ್ಲಭಾ ತತಃ ।
ಕಥಂ ತದ್ಯುದ್ಧವಾರ್ತಾಪಿ ಕೃತಾಂತಾಂತಕ ಶಂಕರ ॥೨೨॥

ಸರ್ವೇಷಾಮಂತಕತ್ವೇನ ಕೃತಾಂತಃ ಪ್ರಥಿತಃ ಕಥಂ ।
ನ ಪ್ರೇಷ್ಯತೇ ತದ್ವಧಾಯ ತದ್ವಧಂ ನ ಕರೋತಿ ಕಿಂ ॥೨೩॥

ಕಥಮಸ್ಮದವಧ್ಯಸ್ಯ ತಸ್ಯ ತದ್ವಧ್ಯತೇತಿ ಚೇತ್ ।
ತರ್ಹಿ ಸಹ್ಯಾ ತವಾಪೀಶ ಮಮ ತ್ರಿದಶದುರ್ದಶಾ ॥೨೪॥

ಯುದ್ಧವು ಮನಸ್ಸನ್ನು ಕ್ಲೇಶಪಡಿಸುವುದು. ನಾನು ಅವನೊಂದಿಗೆ ಯುದ್ಧ ಸನ್ನದ್ಧನಾದರೆ ಸೋಲುಂಟಾಗುವುದು ನಿಶ್ಚಯ. ಹೀಗೆ ಪರಾಜಯವುಂಟಾದರೆ ಕೀರ್ತಿಯು ವೃದ್ಧಿಯನ್ನು ಹೊಂದುವುದೇ? ॥೨೧॥

ಮೃತ್ಯುಂಜಯನೇ! ಮನುಜನಿಗೆ ಕೀರ್ತಿಯು ಲಭಿಸುವುದೇ ಕಷ್ಟ. ಹಾಗಿರುವಾಗ ಆ ಅಸುರನೊಂದಿಗೆ ಯುದ್ಧಮಾಡಲು ಸಿದ್ಧನಾಗಿ ಅಪಕೀರ್ತಿಯನ್ನು ಗಳಿಸುವುದು ಉಚಿತವೇ? ॥೨೨॥

ಯಮಧರ್ಮರಾಜನು ಬ್ರಹ್ಮಾದಿಸ್ತಂಭಪರ್ಯಂತವಾದ ಸಕಲಜಂತುಗಳನ್ನೂ ಸಂಹರಿಸುವವನಾದುದರಿಂದ, ಲೋಕದಲ್ಲಿ "ಅಂತಕ" ಎಂಬ ಅನ್ವರ್ಥನಾಮಧೇಯದಿಂದ ಪ್ರಸಿದ್ಧನಾಗಿರುವನು. ಹೀಗಿರುವಾಗ ಅವನನ್ನೇಕೆ ಆ ಅಸುರನ ಸಂಹಾರಕ್ಕೋಸ್ಕರ ಬೀಳ್ಕೊಡುವುದಿಲ್ಲ? ಯಮನು ಆ ತಾರಕನನ್ನು ಸಂಹರಿಸಲು ಅಸಮರ್ಥನಾಗಿರುವನೇ? ॥೨೩॥

ಸ್ವಾಮಿಯೇ! "ನನ್ನಿಂದಲೂ ಸಂಹರಿಸಲಸಾಧ್ಯನಾದ ಆ ಅಸುರನನ್ನು ಕೊಲ್ಲುವ ಕಾರ್ಯದಲ್ಲಿ ಯಮನು ಸಮರ್ಥನಾಗುವನೇ!" ಎಂದು ನೀನು ಭಾವಿಸುವುದಾದರೆ ದೇವತೆಗಳಿಗೆ ಬಂದೊದಗಿರುವ ಈ ದುರ್ಗತಿಯು ನಮ್ಮಿಬ್ಬರಿಗೂ ಸಮ್ಮತವಾದಂತೆಯೇ ಆಯಿತಲ್ಲವೇ? ॥೨೪॥

ತದಾಯುಃಪರಿಮಾಣಂ ಚ ನ ಕರ್ತುಂ ಯತತೇ ಮನಃ ।
ಅತಸ್ತದ್ಯುದ್ಧವಾರ್ತಾಭಿಃ ಕಾಲಕಾಲಾಲಮಿತ್ಯಲಂ ॥೨೫॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಮಯ್ಯೈವಂ ಸಮುದೀರಿತಂ ।
ತದಾದರೇಣ ಶೃಣು ಮೇ ಗಣೇಶ ವಚನಂ ಪುನಃ ॥೨೬॥

ಸತ್ಯಮುಕ್ತಂ ಕುಮಾರಾದ್ಯ ತಾರಕಾಸುರಸಂನಿಭಃ ।
ನಾಧುನಾ ವರ್ತತೇ ವೀರೋ ನ ಭೂತೋ ನ ಭವಿಷ್ಯತಿ ॥೨೭॥

ತಥಾಪಿ ತೇ ವಿಚಾರಃ ಕಃ ಕಾಲೀಂ ಕಾತ್ಯಾಯನೀಂ ಸ್ಮರ ।
ಕಾಲಿಕಾಲೀತಿ ಕಾಲೀತಿ ಸ್ಮರನ್ಯುದ್ಧೇ ಜಯಂ ಲಭೇತ್ ॥೨೮॥

ಉಮಾ ಗೌರೀ ಮಹಾಕಾಲೀ ಮಹಾಗೌರೀ ಶಿವಾ ಸತೀ ।
ಶರ್ವಾಣೀ ಚಂಡಿಕಾ ದುರ್ಗಾ ರುದ್ರಾಣೀ ಗಿರಿಕನ್ಯಕಾ ॥೨೯॥

ಅವನಿಗಿರುವ ಆಯುಸ್ಸಿನ ಪರಿಮಿತಿಯನ್ನು ತಿಳಿದುಕೊಳ್ಳುವುದೇ ದುಸ್ತರವಾಗಿದೆ. ಅದನ್ನು ಯೋಚಿಸಿದರೆ ನಾವು ಅವನೊಂದಿಗೆ ಯುದ್ಧವನ್ನೆಸಗುವೆವೆಂಬ ಆಶೆಯನ್ನು ತೊರೆಯುವುದೇ ಒಳ್ಳೆಯದೆನಿಸುವುದು" ||೨೫||

ಎಲೈ ಗಣನಾಥನೇ! ಷಣ್ಮುಖನು ನನ್ನ ಬಳಿಯಲ್ಲಿ ಹೀಗೆಂದು ಬಿನ್ನವಿಸಲು, ಅವನ ಆ ಮಾತನ್ನು ಕೇಳಿ, ನಾನು ಅವನನ್ನು ಕುರಿತು ಹೀಗೆಂದನು; ನಾನು ಹೇಳಿದ ಆ ವಚನವನ್ನೇ ನಿನಗೆ ಈಗ ತಿಳಿಸುವೆನು ಲಾಲಿಸು. ||೨೬||

"ಎಲೈ ಕುಮಾರನೇ, ನೀನು ನಿಜವನ್ನು ನುಡಿದಿರುವೆ. ಆ ತಾರಕಾಸುರನಿಗೆ ಸಮಾನನಾದ ವೀರನು, ಎಲ್ಲಿಯೂ ಇಲ್ಲ. ಹಿಂದೆ ಈ ಬ್ರಹ್ಮಾಂಡದಲ್ಲಿ ಯಾರೂ ಜನಿಸಿಲ್ಲ. ಮುಂದೆ ಜನಿಸುವುದೂ ಇಲ್ಲ. ||೨೭||

ಆದರೂ ನೀನು ವೃಥಾ ಯೋಚಿಸಬೇಡ. ಆ ಮಹಾಕಾಲಿಯನ್ನು ಸ್ಮರಿಸು. ಕಾಳಿ ಕಾಳಿ ಎಂದು ಎಡಬಿಡದೆ ಆ ದೇವಿಯನ್ನು ಸ್ಮರಿಸುವವನು ನಿಜವಾಗಿಯೂ ಯುದ್ಧದಲ್ಲಿ ಜಯವನ್ನೈದುವನು. ||೨೮||

ಆ ದೇವಿಯು ಉಮಾ, ಗೌರೀ, ಮಹಾಕಾಳೀ, ಮಹಾಗೌರೀ, ಶಿವಾ, ಸತೀ, ಶರ್ವಾಣೀ, ಚಂಡಿಕಾ, ದುರ್ಗಾ, ರುದ್ರಾಣೀ, ಗಿರಿಕನ್ಯಕಾ ಎಂಬ ನಾಮಧೇಯಗಳನ್ನು ಹೊಂದಿರುವಳು. ||೨೯||

ಮೃಡಾನೀ ಪಾರ್ವತೀ ಮಾಯಾ ಮಹಾಮಾಯಾ ಮಹೇಶ್ವರೀ ।
ಅಪರ್ಣಾ ಶಾಂಭವೀ ಭದ್ರಾ ಶುಭಾ ತ್ರಿಪುರಭೈರವೀ ॥೩೦॥

ಶ್ರೀಃ ಸರ್ವಮಂಗಳಾ ಲಕ್ಷ್ಮೀರ್ಭವಾನೀ ದಕ್ಷಕನ್ಯಕಾ ।
ಆರ್ಯಾ ಹೈಮವತೀ ಚೇತಿ ಶ್ರುತ್ವಾ ಜಯಮವಾಪ್ನುಯಾತ್ ॥೩೧॥

ಏಕೈಕಮಪಿ ಯನ್ನಾಮ ಗೌರ್ಯಾಸ್ತದ್ದುಃಖನಾಶಕಂ ।
ಜಯಪ್ರದಮಿದಂ ಚೈತದಾಯುರ್ವೃದ್ಧಿಕರಂ ಪರಂ ॥೩೦॥

ತತಃ ಕುಮಾರ ತಾಂ ಗೌರೀಂ ಸ್ಮೃತ್ವಾ ಯುದ್ಧಾಯ ಯಾಹಿ ತೇ ।
ಜಯೋ ಭವತ್ಯಸಂದಿಗ್ಧಂ ತನ್ನಾಮ ಜಯದಂ ಯತಃ ॥೩೩॥

ಸ್ಮೃತ್ವಾಪಿ ಗೌರೀಂ ಗಿರಿರಾಜಕನ್ಯಾಂ
ಧನ್ಯಾಂ ಚ ಮಾನ್ಯಾಂ ಚ ಕಲಂಕಶೂನ್ಯಾಂ ।

ಇದಲ್ಲದೆ ಅವಳು ಮೃಡಾನೀ, ಪಾರ್ವತೀ, ಮಾಯಾ, ಮಹಾಮಾಯಾ, ಮಹೇಶ್ವರೀ, ಅಪರ್ಣಾ, ಶಾಂಭವೀ, ಭದ್ರಾ, ಶುಭಾ, ತ್ರಿಪುರಭೈರವೀ ಎಂಬ ನಾಮಧೇಯಗಳಿಂದಲೂ ವ್ಯವಹರಿಸಲ್ಪಡುತ್ತಾಳೆ. ॥೩೦॥

ಶ್ರೀ, ಸರ್ವಮಂಗಳಾ, ಲಕ್ಷ್ಮೀ, ಭವಾನೀ, ಆರ್ಯಾ, ಹೈಮವತೀ ಎಂಬ ಹೆಸರುಗಳಿಂದಲೂ ಆ ದೇವಿಯನ್ನು ಸ್ಮರಿಸಬೇಕು. ಈ ನಾಮಧೇಯಗಳ ಶ್ರವಣ ಮಾತ್ರದಿಂದಲೇ ಯುದ್ಧದಲ್ಲಿ ಜಯವನ್ನು ಪಡೆಯುವನು. ॥೩೧॥

ಗಿರಿಜೆಯ ಆ ಒಂದೊಂದು ನಾಮಧೇಯವೂ ದುಃಖವನ್ನು ಹೋಗಲಾಡಿಸುವುದು. ಅಲ್ಲದೆ ಯುದ್ಧದಲ್ಲಿ ಶೀಘ್ರವಾಗಿ ಜಯವನ್ನುಂಟುಮಾಡುವುದು, ಮತ್ತು ಆಯುಃಪರಿಮಾಣವನ್ನು ಸಹ ಹೆಚ್ಚಿಸುವುದು. ॥೩೨॥

ಎಲೈ ಕುಮಾರನೇ, ಆದುದರಿಂದ ನೀನು ಆ ಗಿರಿಜೆಯನ್ನು ಸ್ಮರಿಸಿ ಯುದ್ಧಕ್ಕೆ ತೆರಳುವವನಾಗು. ಅದರಿಂದ ನಿನಗೆ ನಿಜವಾಗಿಯೂ ಜಯವು ಲಭಿಸುವುದು. ಇದರಲ್ಲಿ ಸಂಶಯಪಡಬೇಡ. ಅವಳ ನಾಮಧೇಯವು ಜಯಪ್ರದವಾದುದು. ॥೩೩॥

ಕೃತಕೃತ್ಯಳೂ, ಪೂಜ್ಯಳೂ, ಪಾಪರಹಿತಳೂ ಆದ ಆ ಗಿರಿಜೆಯನ್ನು ಎಡ

ದುರ್ಗಾಮನನ್ಯಾಮಪಿ ಭಾವಯಂತಃ
ಸದ್ಯೋ ಭವಂತ್ಯೇವ ಹಿ ಭಾಗ್ಯವಂತಃ ॥೩೪॥

ಸ್ಮೃತ್ವಾಪಿ ಯಾಂ ಪಾತಕಸಾಗರೇಭ್ಯೋ
ನಿರ್ಗತ್ಯ ಸಂಗತ್ಯ ಚ ಸೌಖ್ಯಸಂಘೈಃ ।
ಸ್ವರ್ಗಂ ಸಮೇತ್ಯಾಪ್ಯಪವರ್ಗಮೇತ್ಯ
ತಿಷ್ಠಂತಿ ಭಾಗ್ಯೇನ ನರಾಃ ಶಿವಾಗ್ರೇ ॥೩೫॥

ಯದ್ದೃಷ್ಟಿಪಾತೇನ ಜಗತ್ಸಮಸ್ತ
ಮುತ್ಪನ್ನಮೇತತ್ಪರಿಪಾಲಿತಂ ಚ ।
ಕಲ್ಪಾವಸಾನೇ ಪ್ರಲಯಂ ಪ್ರಯಾತಿ
ಸಾ ದೇವತಾ ಮಂಗಳದೇವತಾ ಯಾ ॥೩೬॥

ತತ್ಪಾದಪದ್ಮಸ್ಮರಣಂ ಮುನೀನಾಂ
ತಪಸ್ಯಯಾ ಕೇವಲಮಂಬಿಕಾ ಸಾ ।
ಸ್ಮೃತಾ ಸದಾ ಸರ್ವಸುಖಪ್ರದಾತ್ರೀ
ಸೈಷಾ ವಿಧಾತ್ರೀ ಸುಖಸಾಗರಾಣಾಂ ॥೩೭॥

ಬಿಡದೆ ನಿರಂತರವೂ ಧ್ಯಾನಿಸುವವರು, ಶೀಘ್ರದಲ್ಲಿಯೇ ಸಕಲ ಸಂಪತ್ತುಗಳಿಂದಲೂ ಯುಕ್ತರಾಗುವರು. ॥೩೪॥

ಆ ಗಿರಿಜೆಯ ಸ್ಮರಣಮಾತ್ರದಿಂದಲೇ ಭಕ್ತರು ಸಕಲ ಪಾಪಗಳಿಂದಲೂ ವಿನಿರ್ಮುಕ್ತರಾಗಿ ಸುಖಪರಂಪರೆಗಳನ್ನನುಭವಿಸಿ ಸ್ವರ್ಗಲೋಕವನ್ನು ಪಡೆದು, ಬಳಿಕ ಮೋಕ್ಷವನ್ನು ಹೊಂದಿ ಶಿವಸಾನ್ನಿಧ್ಯದಲ್ಲಿ ಸ್ಥಿರವಾಗಿ ವಾಸಿಸುವರು. ॥೩೫॥

ಯಾವ ದೇವಿಯ ದೃಷ್ಟಿಪಾತದಿಂದ ಸಮಸ್ತ ಲೋಕಗಳೂ ಸೃಷ್ಟಿಸಲ್ಪಡುವುವೋ, ಮತ್ತು ಯಾವ ದೇವಿಯು ಸ್ಥಿತಿಕಾಲದಲ್ಲಿ ಜಗತ್ತುಗಳನ್ನು ಸಂರಕ್ಷಿಸಿ ಕಲ್ಪಾಂತ್ಯದಲ್ಲಿ ಸಂಹರಿಸುವಳೋ ಆ ದೇವಿಯೇ ಸರ್ವಮಂಗಳೆಯೆಂಬ ಪದದಿಂದ ವಾಚ್ಯಳಾಗಿರುವಳು. ॥೩೬॥

ತಪಸ್ವಿಗಳು ಆ ದೇವಿಯ ಅಡಿದಾವರೆಗಳನ್ನು ಸ್ಮರಿಸಿ ತಪಸ್ಸನ್ನಾಚರಿಸುವರು. ಬಳಿಕ ಆ ತಪಸ್ಸಿನಿಂದಲೇ ದೇವಿಯ ಪಾದಪದ್ಮವನ್ನು ಸಾಕ್ಷಾತ್ಕರಿಸುವರು.

ಯಾಮನ್ನಪೂರ್ಣಾಂ ಪ್ರಣಮಂತಿ ದೇವಾಃ
ಸ್ತುವಂತಿ ಗಂಧರ್ವಗಣಾ ಮುನೀಂದ್ರಾಃ ।
ಮರ್ತ್ಯಾಶ್ಚ ತತ್ಪಾದರಜಃಪ್ರಸಾದಾತ್
ರಮಾದಯಃ ಸಾ ಖಲು ಪೂಜನೀಯಾ ॥೩೮॥

ಯಸ್ಯಾಃ ಕಟಾಕ್ಷಪ್ರಸರೇಣ ಧನ್ಯೋ
ದೀನೋ ದರಿದ್ರಃ ಕೃಪಣೋಽಪಿ ಧನ್ಯಃ ।
ಮಾನ್ಯಸ್ಸುರಾಣಾಂ ಧನಸಾಗರಾಣಾ
ಮಧೀಶ್ವರಃ ಸ್ಯಾದಿತಿ ತಾಂ ಭಜಾಂಬಾಂ ॥೩೯॥

ಯತ್ಪಾದಪದ್ಮಾಂಬುಜರೇಣುಲೇಶಂ
ದಧಾರ ಶೌರಿಃ ಕಿಲ ಕೂರ್ಮರೂಪಃ ।
ಶೇಷಃ ಸಹಸ್ರೇಣ ದಧಾರ ಮೂರ್ಧ್ನಾ
ಸೈಷಾ ಭವಾನೀ ಶುಭರಾಜಧಾನೀ ॥೪೦॥

ಲೋಕಮಾತೆಯಾದ ಆ ದೇವಿಯನ್ನು ಸ್ಮರಿಸಿದ ಮಾತ್ರದಿಂದಲೇ, ದೇವಿಯು ತನ್ನ ಭಕ್ತರಿಗೆ ಸಕಲ ಸುಖಸಂಪತ್ತುಗಳನ್ನೂ ದಯಪಾಲಿಸುವಳು. ॥೩೭॥

ಯಾವ ಅನ್ನಪೂರ್ಣಾದೇವಿಯನ್ನು ದೇವತೆಗಳೂ, ಗಂಧರ್ವರೂ, ತಪಸ್ವಿಗಳೂ ಮತ್ತು ಮನುಜರೂ ನಮಸ್ಕರಿಸುವರೋ, ಅಂಥ ದೇವಿಯು ಪೂಜ್ಯಳಲ್ಲವೇ! ಅವಳ ಆ ಪಾದಧೂಳಿಯ ಅನುಗ್ರಹದಿಂದಲೇ ಲಕ್ಷ್ಮೀ ಮುಂತಾದ ದೇವತೆಯರು ಇಂದು ಪೂಜ್ಯರೆನಿಸಿರುವರು. ॥೩೮॥

ಯಾವ ದೇವಿಯ ಕಟಾಕ್ಷಪಾತದಿಂದ, ಅನಾಥನೂ, ನಿರ್ಗತಿಕನೂ ಮತ್ತು ಲೋಭಿಯೂ ಆದವರೆಲ್ಲರೂ ಕೃತಕೃತ್ಯರಾಗುವರೋ, ಮತ್ತು ಧನಿಕರಾಗಿ ದೇವತೆಗಳಿಗೂ ಪೂಜ್ಯರೆನಿಸುವರೋ ಆ ದೇವಿಯನ್ನು ನಿರಂತರವೂ ಪೂಜಿಸಬೇಕು. ॥೩೯॥

ಯಾವ ದೇವಿಯ ಅಡಿದಾವರೆಗಳ ಧೂಳಿಯ ಕಣವನ್ನು ಕೂರ್ಮಾವತಾರ ತಾಳಿದ ವಿಷ್ಣುವು ತನ್ನ ಶಿರಸ್ಸಿನಿಂದ ಧರಿಸಿದನೋ ಮತ್ತು ಯಾವ ದೇವಿಯ ಪಾದಧೂಳಿಯನ್ನು ಆದಿಶೇಷನೂ ಸಹ ತನ್ನ ಸಹಸ್ರ ಶಿರಸ್ಸುಗಳಿಂದ ಧರಿಸಿರುವನೋ, ಆ ದೇವಿಯೇ ಕಲ್ಯಾಣಪರಂಪರೆಗಳಿಗೆ ಆಶ್ರಯಸ್ಥಾನಳು. ॥೪೦॥

ಕುಲಾಚಲೈರ್ಮೇರುಸಮಾನಧೈರ್ಯೈ
ರತಿಪ್ರಯತ್ನೇನ ವಿಭುಗ್ನಕಾಯೈಃ ।
ಯತ್ಪಾದಪದ್ಮಾಂಬುಜರೇಣುಲೇಶಃ
ಧೃತೋ ಮುದಾ ಸಾ ಗಿರಿಜಾ ತವಾಂಬಾ ॥೪೧॥

ದಿಗ್ದಂತಿಭಿರ್ಯತ್ಪದಪದ್ಮರೇಣು
ರ್ಧೃತಃ ಸ್ವಕುಂಭಸ್ಥಲಪಂಕಿಲೇಽಪಿ ।
ಮದಾಂಬುಧಾರಾಪರಿವೀತಗಾತ್ರೈ
ಸ್ತದ್ಧಾರಣಾಯಾಸಗತೈಃ ಸ್ವತಂತ್ರೈಃ ॥೪೨॥

ಯದ್ಪಾದಪದ್ಮಾಂಬುರುಹಾರ್ಚನಾಯ
ರತ್ನಾಕರೋ ನೂತನರತ್ನಮಾಲಾಂ ।
ಸಂಪಾದಯತ್ಯನ್ವಹಮಾದರೇಣ
ಸಾ ಕಿಂ ನ ಗೌರೀ ತವ ಪೂಜನೀಯಾ ॥೪೩॥

ಮೇರುಪರ್ವತದಂತೆ ಉನ್ನತವಾಗಿರುವ ಕುಲಾಚಲಗಳು, ಪ್ರಯತ್ನ ಪೂರ್ವಕವಾಗಿ ತಮ್ಮ ಶರೀರವನ್ನು ಕೆಳಕ್ಕೆ ಬಗ್ಗಿಸಿ ಯಾವ ದೇವಿಯ ಅಡಿದಾವರೆ ಗಳ ಧೂಳಿಯ ಅಂಶವನ್ನು ಶಿರಸ್ಸಿನಲ್ಲಿ ಧರಿಸಿದುವೋ, ಅಂತಹ ಗಿರಿಕನ್ಯೆಯಾದ ಆ ಗಿರಿಜೆಯೇ ನಿನ್ನ ಮಾತೆಯೆನಿಸಿರುವಳು. ||೪೧||

ಅಷ್ಟದಿಗ್ಗಜಗಳೂ ಆ ದೇವಿಯ ಪಾದಪದ್ಮಗಳ ಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿರುವುವು. ಸ್ವೇಚ್ಛೆಯಿಂದ ವಿಹರಿಸುತ್ತಿರುವ ಆ ಆನೆಗಳು ಮದೋದಕದಿಂದ ಒದ್ದೆಯಾದ ಶರೀರವುಳ್ಳವುಗಳಾಗಿ, ಭೂಮಿಯನ್ನು ಹೊರುವುದರಿಂದ ಉಂಟಾದ ಆಯಾಸವನ್ನೂ ಸಹ ಲಕ್ಷಿಸದೇ, ತಮ್ಮ ಕುಂಭಸ್ಥಳದಲ್ಲಿ ದೇವಿಯ ಅಡಿದಾವರೆಗಳ ಧೂಳನ್ನು ಧರಿಸಿಕೊಂಡಿರುವುವು. ||೪೨||

ಯಾವ ದೇವಿಯ ಪಾದಕಮಲವನ್ನು ಅರ್ಚಿಸುವುದಕ್ಕೋಸ್ಕರ ಸಮುದ್ರ ರಾಜನು ಅನವರತವೂ ಹೊಸ ಹೊಸ ರತ್ನಗಳ ಮಾಲಿಕೆಗಳನ್ನು ಶೇಖರಿಸಿಡುವನೋ ಆ ಗಿರಿಜಾದೇವಿಯು ನಿನಗೆ ಪೂಜ್ಯಳಾಗಿರುವಳಲ್ಲವೇ ! ||೪೩||

ಇಯಂ ಸ್ತುತಿರ್ಮನ್ಮುಖಪಂಕಜೇಭ್ಯೋ
ಮರಂದಧಾರೇವ ಮುದಂ ಭವಾನ್ಯಾಃ ।
ಮುದೇ ಪ್ರವೃತ್ತಾಽಸ್ತು ಶುಭಾಯ ನಿತ್ಯಂ
ಜಯಾಯ ಸೌಭಾಗ್ಯಸಮೃದ್ಧಿಹೇತುಃ ॥೪೪॥

ಅತಃ ಪರಂ ಸತ್ವರಮೇವ ದುಂಢೇ
ಗೌರೀಪದಾಂಭೋರುಹವೀಕ್ಷಣಾಯ ।
ಕುರು ಪ್ರಯತ್ನಂ ಕುರು ಮಾ ವಿಲಂಬಂ
ಲಂಬೋದರಾಲಂಬನಸಂಭ್ರಮಾಣಾಂ ॥೪೫॥

ಏಕಾಕಿನಶ್ಚೇತ್ತವ ತತ್ರ ಗಂತುಂ
ಮನಃಪ್ರವೃತ್ತಿರ್ನ ತದಾ ತವಾಪಿ ।
ಕುಮಾರಮಭ್ಯೇತ್ಯ ಸಹಾಯಭೂತಂ
ಸ ತಾವದಂಬಾನವಲೋಕನಾರ್ತಃ ॥೪೬॥

ನನ್ನ ಮುಖಕಮಲದಿಂದ ಮಕರಂದಧಾರೆಯಂತೆ ಹೊರಟಿರುವ ಹಿತಕರವಾದ ಈ ಸ್ತೋತ್ರವು ಗಿರಿಜೆಗೆ ಸಂತೋಷವನ್ನುಂಟುಮಾಡಲಿ. ಸಕಲ ಸಂಪತ್ತುಗಳಿಗೂ ಕಾರಣವಾದ ಈ ದೇವೀಸ್ತೋತ್ರವು ದೇವಿಯ ಭಕ್ತರಿಗೆ ಕಲ್ಯಾಣವನ್ನೂ ಮತ್ತು ಕಾರ್ಯಜಯವನ್ನೂ ಉಂಟುಮಾಡುವುದಾಗಲಿ. ॥೪೪॥

ಎಲೈ ದುಂಢಿಯೇ, ಇನ್ನು ಮುಂದೆ ನೀನು ಗಿರಿಜೆಯ ಪಾದಕಮಲದ ದರ್ಶನಕ್ಕೋಸ್ಕರ ಪ್ರಯತ್ನಿಸುವವನಾಗು. ಅವಳಿದ್ದಲ್ಲಿಗೆ ಹೊರಡುವ ಸಡಗರದಲ್ಲಿ ವಿಲಂಬವನ್ನು ಮಾಡಬೇಡ. ॥೪೫॥

ನೀನು ಏಕಾಕಿಯಾಗಿ ದೇವಿಯ ಬಳಿಗೆ ಹೋಗಲು ಬಯಸುವುದಿಲ್ಲವಾದರೆ, ಕುಮಾರಸ್ವಾಮಿಯಿದ್ದೆಡೆಗೆ ಹೋಗಿ ಅವನೊಂದಿಗೆ ದೇವಿಯ ದರ್ಶನಕ್ಕೆ ತೆರಳುವವನಾಗು. ಕುಮಾರಸ್ವಾಮಿಯೂ ಸಹ ದೇವಿಯ ದರ್ಶನವಿಲ್ಲದೇ ಚಿಂತಾಕ್ರಾಂತನಾಗಿರುವನು. ॥೪೬॥

ತೇನಾಪಿ ಶೀಘ್ರಂ ತವ ಕಾರ್ಯಮುದ್ಯ
ಕರ್ತವ್ಯಮೇವೇತಿ ವಿನಿಶ್ಚಯೋ ಮೇ ।
ತಸ್ಯಾಸ್ತ್ಯಶಕ್ಯಂ ನ ಕಿಮಪ್ಯತಸ್ತೇ
ವಿಚಾರಣೀಯಂ ಗಮನೇ ಗಣೇಶ ॥೪೭॥

ಏತೇನ ತೇನೈವ ಮದಿಷ್ಟಕಾರ್ಯಂ
ಸಿದ್ಧ್ಯತ್ಯವಶ್ಯಂ ಸ ತಥಾ ವಿಲಂಬಂ ।
ನ ಕರ್ತುಮಿಚ್ಛತ್ಯತಿಸೂಕ್ಷ್ಮಬುದ್ಧಿಃ
ಸುಹೃದ್ಗತಂ ವೇದ ಸ ಕಿಂ ನ ವೇದ ॥೪೮॥

ಸ ಮನ್ನಿಯೋಗೋದ್ಯತಚಿತ್ತವೃತ್ತಿ
ರ್ನಿವೃತ್ತಿರಪ್ಯಸ್ತ್ಯಪರಾಧಭೀತೇಃ ।
ತಚ್ಚಿತ್ತವೃತ್ತೇರನುವೃತ್ತಿರಸ್ಮಿನ್
ಸ ಶೌರ್ಯಮೂರ್ತಿಃ ಶ್ರುತಗೀತಕೀರ್ತಿಃ ॥೪೯॥

ಈಗ ನೀನು ಜಾಗ್ರತೆ ಅವನ ಸಹಾಯವನ್ನು ಪಡೆದು, ನಿನ್ನ ಕಾರ್ಯವನ್ನು ನೆರವೇರಿಸು. ಆ ಕರ್ತವ್ಯವನ್ನು ನೀನು ಅವಶ್ಯವಾಗಿ ನಡೆಸಬೇಕೆಂದು ಮತ್ತೆ ತಿಳಿಸುವೆನು. ಆ ಕುಮಾರಸ್ವಾಮಿಗೆ ಅಸಾಧ್ಯವಾದ ಯಾವ ಕಾರ್ಯವೂ ಇಲ್ಲ. ಆದುದರಿಂದ ನೀನು ದೇವಿಯ ಬಳಿಗೆ ಹೋಗುವ ವಿಷಯದಲ್ಲಿ ಸ್ವಲ್ಪವೂ ಚಿಂತಿಸಬೇಕಾದುದಿಲ್ಲ. ||೪೭||

ಆ ಕುಮಾರಸ್ವಾಮಿಯೊಬ್ಬನೇ ನನಗೆ ಹಿತವಾದ ಕಾರ್ಯವನ್ನು ಸಾಧಿಸುವವರಲ್ಲಿ ಅಗ್ರಗಣ್ಯನು. ಆದುದರಿಂದಲೇ ಕಾರ್ಯಸಾಧನೆಯಲ್ಲಿ ಚತುರನಾದ ಅವನು ಎಂದಿಗೂ ವಿಲಂಬವನ್ನು ಮಾಡಬಯಸುವುದಿಲ್ಲ. ಸ್ನೇಹಿತರ ಮನಸ್ಸಿನಲ್ಲಿರುವ ಇಂಗಿತವನ್ನು ತಿಳಿದುಕೊಳ್ಳುವುದರಲ್ಲಿಯೂ ಅವನು ಬಹು ಚತುರನು. ಇಷ್ಟೇಕೆ ? ಅವನು ಸರ್ವವನ್ನೂ ಅರಿತವನು. ||೪೮||

ನಾನು ಆಜ್ಞಾಪಿಸಿದ ಕಾರ್ಯವನ್ನು ಸಾಧಿಸುವುದರಲ್ಲಿಯೇ ಅವನ ಮನಸ್ಸು ಆಸಕ್ತವಾಗಿರುವುದು. ಲೋಕದಲ್ಲಿ ಭೃತ್ಯನು ತನ್ನ ಸ್ವಾಮಿಯ ಕಾರ್ಯವನ್ನು ಸಾಧಿಸುವಾಗ ಮಧ್ಯದಲ್ಲಿ ಅಪರಾಧವೇನಾದರೂ ಉಂಟಾಗಬಹುದೆಂಬ ಭಯದಿಂದ ಕಾರ್ಯಸಾಧನೆಯಿಂದ ಹಿಂತಿರುಗುವನು. ಆದರೆ ಕುಮಾರನ ಮನಸ್ಸು ಎಂದಿಗೂ

ತಸ್ಯಾಧುನೈವಾಗಮನೇಽವಿಲಂಬಃ
ತ್ವಯಾ ನ ಕಾರ್ಯಃ ಸಹಸಾ ವಿಲಂಬಃ ।
ನ ತಸ್ಯ ಸಹ್ಯಃ ಸ ಹಿ ಸಿಂಹಸಿಂಹಃ
ಸಿಂಹಾಸನಾಂ ದ್ರಷ್ಟುಮಪಿ ಪ್ರವೃತ್ತಃ ॥೫೦॥

ಯದ್ವೀರ್ಯವಾರ್ತಾಶ್ರವಣೇಽಪಿ ತಾರಃ
ಸ ತಾರಕಃ ಸರ್ವಸುರಾಂತಕೋಽಪಿ ।
ತ್ರಸ್ತಃ ಸಮುಸ್ತಾಸುರಭೂರಿನಿಸ್ತಃ
ಸ ಪಸ್ತುತಸ್ತಾವದತಿಪ್ರಶಸ್ತಃ ॥೫೧॥

ಏಕಃ ಕುಮಾರೋ ಜಗತೀತಲೇ ನೋ
ಕುಮಾರನಾಮ್ನಾ ಪ್ರಥಿತಃ ಕುಮಾರಃ ।
ಕುಮಾರ ಏವೇತಿ ಕುಮಾರಬುದ್ಧಿಃ
ಕುಮಾರಮಾತ್ರೇ ಮಮ ಡಿಂಭದುಂಢೇ ॥೫೨॥

ಹಾಗಲಾರದು. ಅವನ ಚಿತ್ತವು ಧೈರ್ಯದಿಂದ ಕಾರ್ಯಸಾಧನೆಯಲ್ಲಿಯೇ ಮುಂದುವರಿಯುವುದಲ್ಲದೆ ಎಂದಿಗೂ ಹಿಂದಿರುಗಲಾರದು. ಶೂರಾಗ್ರೇಸರನಾದ ಅವನ ಕೀರ್ತಿಯನ್ನು ಕೇಳಿ ಸಕಲರೂ ಅದನ್ನೇ ಗಾನಮಾಡುತ್ತಿರುವರು. ॥೪೯॥

ಅವನು ಈಗಲೇ ದೇವಿಯ ಬಳಿಗೆ ಹೋಗಲು ಕಾತುರನಾಗಿರುವನು. ಆದುದರಿಂದ ನೀನು ಪ್ರಮಾದದಿಂದಲೂ ಅವನಿದ್ದಲ್ಲಿಗೆ ಹೋಗುವುದರಲ್ಲಿ ವಿಲಂಬ ಮಾಡಬೇಡ. ಏಕೆಂದರೆ ನಿನ್ನ ವಿಲಂಬವನ್ನು ಅವನು ಸಹಿಸಲಾರನು. ಧೀರನಾದ ಅವನು ಈಗಾಗಲೇ ಸಿಂಹಾರೂಢಳಾದ ದೇವಿಯನ್ನು ನೋಡಲು ಹೊರಟಿರ ಬಹುದು. ॥೫೦॥

ಧೀರನಾದ ಆ ತಾರಕಾಸುರನು, ಸಕಲ ದೇವತೆಗಳನ್ನೂ ಭಯಪಡಿಸುವವನಾದರೂ, ಕುಮಾರಸ್ವಾಮಿಯ ಪರಾಕ್ರಮದ ವಾರ್ತೆಯನ್ನು ಕೇಳಿದ ಮಾತ್ರದಿಂದಲೇ ಭಯಭ್ರಾಂತನಾಗುವನು. ದೇವತೆಗಳಲ್ಲಿ ಅಗ್ರೇಸರನಾದ ಆ ಕುಮಾರನು ಅತ್ಯಂತ ಪರಾಕ್ರಮಶಾಲಿಯೆಂಬುದರಲ್ಲಿ ಅನುಮಾನವಿಲ್ಲ. ॥೫೧॥

ಎಲೈ ಬಾಲಕನಾದ ಮುಂಢಿಯೇ! ನನಗೆ ಬಹಳ ಮಂದಿ ಪುತ್ರರಿರುವರು. ಆದರೆ ಈ ಲೋಕದಲ್ಲಿ ಆ ಷಣ್ಮುಖನೊಬ್ಬನೇ ಕುಮಾರನೆಂಬ ಹೆಸರಿನಿಂದ ಪ್ರಸಿದ್ಧ

ತೇನಾಕುಮಾರಂ ನ ಕುಮಾರತಾಪಿ
ಪ್ರದರ್ಶಿತಾ ಕಾರ್ಯವಿಶೇಷಸಿದ್ಧ್ಯೈ ।
ಸ ಸಿದ್ಧಸಾಧ್ಯರ್ಥಿತಸಿದ್ಧಬುದ್ಧಿಃ
ನ ಬುದ್ಧಿಮಾನತ್ರ ತಥಾವಿಧೋಽನ್ಯಃ ॥೫೩॥

ಗೌರೀ ಕುಮಾರೇಣ ಕುಮಾರಸೂಃ ಸ್ಯಾತ್
ಸೂತೇ ಕುಮಾರಂ ನ ತಥಾ ತದನ್ಯಾ ।
ನ ತಾದೃಶಃ ಕೋಽಪಿ ಕುಮಾರವರ್ಗೇ
ಕುಮಾರ್ಗವೃತ್ತಿರ್ನ ತಥಾ ಕುಮಾರಃ ॥೫೪॥

ಮದುಕ್ತಕಾರ್ಯೇಣ ವಿಲಂಬಶಂಕಾ
ಲಂಬೋದರಾಂಬಾಚರಣಾಂಬುಜಸ್ಯ ।

ನಾಗಿರುವನು. ಆ ಕುಮಾರಸ್ವಾಮಿಯಲ್ಲಿ ಮಾತ್ರವೇ ನನಗೆ ಮಗನೆಂಬ ಸಂಪೂರ್ಣ ಭಾವನೆಯಿರುವುದು. ||೫೨||

ಆವನು, ನನ್ನ ಪುತ್ರನೆಂಬುದನ್ನು ಕುಮಾರಸ್ವರೂಪ ಧರ್ಮದಿಂದಲೇ ತೋರ್ಪಡಿಸಿರುವನು. ಅಂದರೆ ಅವನು ಇದುವರೆಗೆ ಯಾವ ಕಾರ್ಯವನ್ನು ಸಾಧಿಸುವುದರಲ್ಲಿಯೂ ನನಗೆ ವಿರುದ್ಧವಾದ ವರ್ತನೆಯನ್ನು ಕೈಗೊಂಡಿಲ್ಲ. ನಾನು ಕೈಗೊಂಡ ಕಾರ್ಯದ ಪರಿಣಾಮವನ್ನು, ಮೊದಲೇ ತಿಳಿದುಕೊಂಡು ಬಳಿಕ ಅದನ್ನು ಸಾಧಿಸಲು ಹೊರಡುವನು. ಆದುದರಿಂದಲೇ ಸಿದ್ಧಿಬುದ್ಧಿಪ್ರಿಯನಾದ ಅವನನ್ನು ಸಿದ್ಧರೂ, ಸಾಧ್ಯರೂ ತಮಗೆ ಸದ್ಬುದ್ಧಿಯುಂಟಾಗಲೆಂದು ಸದಾ ಪ್ರಾರ್ಥಿಸುವರು. ಈ ಲೋಕದಲ್ಲಿ ಅವನಂತೆ ಚತುರನಾದವನು ಮತ್ತೊಬ್ಬನಿರುವನೇ! ||೫೩||

ಆ ಕುಮಾರಸ್ವಾಮಿಯಿಂದಲೇ ಗಿರಿಜೆಯು ಪುತ್ರವತಿಯೆನಿಸಿಕೊಂಡಿರುವಳು. ಇತರ ಯಾವ ಸ್ತ್ರೀಯೂ ಅವಳಂತೆ ಸತ್ಪುತ್ರನನ್ನು ಹೊಂದಿಲ್ಲ. ಅವಳ ಪುತ್ರರ ನಡುವೆ ಇವನಂತೆ ಸದ್ವೃತ್ತಿಯಲ್ಲಿರುವ ಪುತ್ರನೂ ಬೇರೊಬ್ಬನಿಲ್ಲ. ಆತನು ಕೆಟ್ಟ ಮಾರ್ಗವನ್ನು ಅವಲಂಬಿಸುವ ಕುಮಾರನೇ ಅಲ್ಲ. ||೫೪||

ನಾನು ಆಜ್ಞಾಪಿಸಿದ ಕಾರ್ಯವನ್ನು ಸಾಧಿಸುವುದರಲ್ಲಿ ಕುಮಾರನು ವಿಲಂಬವನ್ನು ಮಾಡುವನೆಂಬುದನ್ನು ಎಂದಿಗೂ ಭಾವಿಸಬೇಡ. ಅವನಾಗಲೇ

ಆಲೋಕನೇ ತಸ್ಯ ಖಲು ತ್ವರಾ ಸ್ಯಾತ್
ಸಾ ತಂ ವಿಲೋಕ್ಯ ಪ್ರಮುದಾ ಭವಿತ್ರೀ ॥೫೫॥

ದೃಷ್ಟೇ ಕುಮಾರೇ ಗಿರಿರಾಜಕನ್ಯಾ
ವಿನ್ಯಸ್ಯ ಕಾರ್ಯಾಂತರಮಾಶು ತೇನ ।
ಆಲಿಂಗಿತಾ ಕ್ಷೀರಸಹಸ್ರಧಾರಾ
ಧಾರಾಧರಾತ್ಯುಚ್ಚಕುಚಾ ಭವಿತ್ರೀ ॥೫೬॥

ದೃಷ್ಟೇ ಕುಮಾರೇ ಗಿರಿರಾಜಕನ್ಯಾ
ಸ್ನೇಹಃಪರಂ ಕ್ಷೀರರಸತ್ವಮೇತ್ಯ
ಗೌರೀಕುಚದ್ವಾರವರೇಣ ತಾವತ್
ವಿನಿರ್ಗತಃ ಸ್ಯಾದ್ಬಹಿರದ್ಯ ನೂನಂ ॥೫೭॥

ಕುಮಾರಮಾರ್ಗಾಗಮನೇ ಪ್ರವೃತ್ತಿಂ
ಶ್ರುತ್ವಾಪಿ ಗೌರೀ ವಿಗತಾನ್ಯವಾರ್ತಾ ।
ಕುಚೌ ಪಯಃಪ್ರಸ್ರವಣಪ್ರವೃತ್ತೌ
ದೃಷ್ಟ್ವಾ ಮುಹುಃ ಸ್ಮೇರಮುಖಾ(ಖೀ) ಭವಿತ್ರೀ ॥೫೮॥

ದೇವಿಯ ಪಾದಕಮಲವನ್ನು ನೋಡುವುದರಲ್ಲಿ ಬಹು ಆತುರನಾಗಿರುವನು. ದೇವಿಯೂ ಸಹ ಅವನನ್ನು ನೋಡಿ ಸಂತುಷ್ಟಳಾಗುವಳು. ॥೫೫॥

ಗೌರಿಯು ಕುಮಾರಸ್ವಾಮಿಯನ್ನು ನೋಡಿದೊಡನೆಯೇ, ಯಾವ ಕಾರ್ಯದಲ್ಲಿ ಆಸಕ್ತಳಾಗಿದ್ದರೂ ಅದನ್ನು ಜಾಗ್ರತೆ ಮುಗಿಸಿ, ಮಗನನ್ನು ಆಲಿಂಗಿಸುವಳು. ಆಗ ಪುತ್ರನಲ್ಲಿರುವ ಅತಿಶಯವಾದ ಪ್ರೀತಿಯ ಪರಿಣಾಮವಾಗಿ ಅವಳ ಕುಚಗಳಿಂದ ಸ್ತನ್ಯವು ಉಕ್ಕಿ ಉಕ್ಕಿ ಬರುವುದು. ॥೫೬॥

ಪುತ್ರನನ್ನು ನೋಡಿದೊಡನೆಯೇ ಅವನಲ್ಲಿರುವ ವಾತ್ಸಲ್ಯವು ಸ್ತನ್ಯವಾಗಿ ಪರಿಣಮಿಸಿ ಗಿರಿಜೆಯ ಕುಚಗಳಿಂದ ಹೊರಚಿಮ್ಮುವುದು. ಇದು ನಿಜ. ॥೫೭॥

ಕುಮಾರನು ಮಾರ್ಗಮಧ್ಯದಲ್ಲಿ ಬರುತ್ತಿರುವನೆಂಬ ವಾರ್ತೆಯನ್ನು ಕೇಳಿ, ಗಿರಿಜೆಯು ತಾನು ಕೈಗೊಂಡ ಕಾರ್ಯವನ್ನು ತೊರೆದು, ವಾತ್ಸಲ್ಯದಿಂದ ಸ್ತನ್ಯವನ್ನು ಸುರಿಸುತ್ತಲಿರುವ ತನ್ನ ಸ್ತನಗಳನ್ನು ನೋಡಿ, ಮಂದಹಾಸದಿಂದಲೂ ನಾಚಿಕೆಯಿಂದಲೂ ಕೂಡುವಳು. ॥೫೮॥

ಸುಸ್ಮೇರದ್ವಿಗುಣೀಕೃತಾತಿರುಚಿರಕ್ಷೀರಪ್ರಸಾರಂ ಮುಹುಃ
ಪಶ್ಯಂತೀ ಕುಚಕಾಂಚನಾಚಲಶಿರಃ ಸಂಮಾನನಾಭ್ಯುದ್ಯತಾ ।
ಸ್ಕಂದಾಲಿಂಗನಲಾಲಸಾಪಿ ಚಷಕೈಃ ಕ್ಷೀರಂ ಗೃಹೀತ್ವಾ ಮುಹುಃ
ಕಿಂ ನಾಯಾಸ್ಯತಿ ಸತ್ವರಂ ಸುತ ಇತಿ ಪ್ರೇಮಾಂಬುಧಾರಾ ಶಿವಾ॥೫೯॥

ಸಾ ಗೌರೀ ಸುಖರಾಶಿರೇವ ಸುಕೃತಶ್ರೇಣೀಸುಧಾಸಾಗರಾ
ಸೌಂದರ್ಯದ್ರವವಾಹಿನೀ ಚ ಸತತಂ ಸಾ ವಾಹಿನೀ ಸಂಪದಾಂ ।
ಆಪದ್ರಾಶಿವಿನಾಶಿನೀ ಖಲು ಮಹಾಪಾಪಾಶನಿಃ ಸಾ ಶನೈಃ
ಏತನ್ಮೇ ಶಯನಂ ಸಮೇತ್ಯ ಶಮುಮಾ ಮಹ್ಯಂ ಪ್ರದಾಸ್ಯತ್ಯಪಿ॥೬೦॥

ಗೌರೀ ಶಾರದಪೂರ್ಣಚಂದ್ರವದನಾ ದೃಷ್ಟಾಪ್ಯದೃಷ್ಟೈರ್ಮುಹುಃ
ಕಷ್ಟಂ ದುಃಖಮುಪಾಕರಿಷ್ಯತಿ ಮುಹುಃ ಸ್ಪೃಷ್ಟಾ ಸುಖಾಂಭೋನಿಧಿಂ ।

ಸ್ತನ್ಯವು ಇಮ್ಮಡಿಯಾಗಿ ಹೊರಚಿಮ್ಮುತ್ತಿರಲು, ಹಾಲಿನ ಕಾಂತಿಯನ್ನು ಮಂದಹಾಸದ ಸೊಬಗಿನಿಂದ ವೃದ್ಧಿಗೊಳಿಸಿ ಸುಮೇರು ಪರ್ವತದಂತೆ ಉನ್ನತವಾದ ತನ್ನ ಕುಚಗಳ ಅಗ್ರಭಾಗವನ್ನು ನೋಡುತ್ತಾ, ಕುಚಗಳನ್ನು ಸಂಮಾನಿಸುವಳೋ ಎಂಬಂತೆ ಕಾಣುವಳು. ಕುಮಾರನನ್ನು ಅಪ್ಪಿಕೊಳ್ಳುವುದರಲ್ಲಿಯೇ ಆಸಕ್ತಿಯುಳ್ಳವಳಾಗಿ ಕ್ಷೀರಪಾತ್ರೆಯಿಂದ ಪುನಃ ಪುನಃ ಸ್ತನ್ಯವನ್ನು ತೆಗೆದು "ಇಷ್ಟೊಂದು ಹೊತ್ತಾದರೂ ಕುಮಾರನೇಕೆ ಬರಲಿಲ್ಲ" ಎಂದು ಚಿಂತಿಸುತ್ತಾ ಆನಂದಬಾಷ್ಪಗಳನ್ನು ಸುರಿಸುವಳು. ॥೫೯॥

ಆ ಗಿರಿಜೆಯು ಸುಖರಾಶಿಸ್ವರೂಪಳು. ಸುಕೃತಗಳೆಂಬ ಅಮೃತಕ್ಕೆ ಸಮುದ್ರದಂತಿರುವವಳು. ಅಲ್ಲದೆ ಸೌಂದರ್ಯಕ್ಕೆ ನಿಧಿಯಂತೆಯೂ, ಸಕಲ ಸಂಪತ್ತುಗಳಿಗೆ ಆಶ್ರಯಸ್ಥಾನದಂತೆಯೂ ಇರುವಳು. ವಿಘ್ನಗಳನ್ನು ಹೋಗಲಾಡಿಸುವವಳೂ, ಅವಳೇ. ಮಹಾಪಾತಕಗಳಿಗೆ ವಜ್ರಾಯುಧದಂತಿರುವವಳೂ ಅವಳೇ. ನನ್ನೊಂದಿಗೆ ಈ ಶಯನವನ್ನು ಅಲಂಕರಿಸಿ ನನಗೆ ಸೌಖ್ಯವನ್ನುಂಟುಮಾಡುವ ದೇವಿಯೂ ಆ ಗಿರಿಜೆಯೇ. ॥೬೦॥

ಪೂರ್ವಜನ್ಮದ ಭಾಗ್ಯವಿಶೇಷದಿಂದ ಭಕ್ತರು ಶರತ್ಕಾಲದ ಪೂರ್ಣಚಂದ್ರನಂತೆ ಆಹ್ಲಾದವನ್ನುಂಟುಮಾಡುವ ಮುಖವುಳ್ಳ ಗಿರಿಜೆಯನ್ನು ದರ್ಶನಮಾಡುವರು. ಹಾಗೆಯೇ ದೇವಿಯೂ ತನ್ನ ದರ್ಶನಮಾತ್ರದಿಂದಲೇ ವಿಘ್ನಗಳನ್ನೂ

ಸ್ಪೃಷ್ಟ್ವಾ ಸೃಷ್ಟಿವಿಚಕ್ಷಣಂ ಖಲು ಮುಹುರ್ದೃಷ್ಟಿಂ ಪ್ರವೃಷ್ಟಿಂ ಪರಂ
ಸ್ರಷ್ಟುಂ ದೃಷ್ಟವಿಶೇಷಪೋಷಿತತನುಂ ಕುರ್ಯಾದದೃಷ್ಟಾನ್ವಿತಂ ॥೬೧॥

ಭಾಗ್ಯೈರ್ಭೂರಿತಪಃಪ್ರಭಾವಭವನೈಃ ಸಂಭಾವನೀಯಾ ಮುಹುಃ
ಭಕ್ತಾಭೀಷ್ಟಫಲಪ್ರದಾನನಿಪುಣಾ ಸಾತಿಪ್ರವೀಣಾ ಕ್ಷಣಂ ।
ಧ್ಯಾತಾಪೀಕ್ಷಣದಾ ಪ್ರತಿಕ್ಷಣಮತಿಶ್ಲಕ್ಷ್ಣಂ ಭವಾನೀ ಕದಾ
ದ್ರಷ್ಟವ್ಯಾ ನಯನಶ್ರಮಾಪಹರಣಂ ಕರ್ತವ್ಯಮತ್ಯಾದರೈಃ ॥೬೨॥

ಧನ್ಯಾನಾಂ ಭವನೇಷು ಸಾ ಗಿರಿಸುತಾ ವಿನ್ಯಸ್ಯ ಪಾದಾಂಬುಜಂ
ಸ್ಥಿತ್ವಾ ವಾ ಕ್ಷಣಮಾತ್ರಮಾದರಯುತಾ ತದ್ವಾರಪಾಲಾಂಗಣೇ ।
ಇಚ್ಛಂತೀ ಕಮಲಾವಿಲಾಸಮಸಕೃತ್ತದ್ದ್ವಾರಪಾಲಾಂಗಣೇऽ
ಪ್ಯಾಲಸ್ಯೇನ ವಿನಾ ರಮಾ ವಿಹರಣಂ ಸಾ ಕರ್ತುಮನ್ವಿಚ್ಛತಿ ॥೬೩॥

ಮತ್ತು ದುಃಖಗಳನ್ನೂ ಹೋಗಲಾಡಿಸುವಳು. ಅವಳನ್ನು ಸ್ಪರ್ಶಿಸುವುದರಿಂದಲೇ ಅನಿರ್ವಚನೀಯವಾದ ಸುಖವು ಲಭಿಸುವುದು. ಜಗಜ್ಜನನಿಯಾದ ಆ ದೇವಿಯು ಜಗತ್ಸೃಷ್ಟಿ ಮಾಡುವುದರಲ್ಲಿ ಚತುರವಾದ ತನ್ನ ದೃಷ್ಟಿಯನ್ನು ಸುತ್ತಲೂ ಬೀರಿ ಬಳಿಕ ಆಯಾ ಪ್ರಾಣಿಗಳ ಅದೃಷ್ಟಕ್ಕೆ ಅನುಗುಣವಾಗಿ ಜನ್ಮವನ್ನೀಯುವಳು. ॥೬೧॥

ಭಕ್ತರ ಮನೋರಥಗಳನ್ನು ಈಡೇರಿಸುವುದರಲ್ಲಿ ಚತುರಳೂ, ಚತುಃಷಷ್ಠಿ ಕಲಾಕೋವಿದಳೂ, ಆದ ಆ ದೇವಿಯನ್ನು ಅನೇಕ ತಪಸ್ಸುಗಳ ಮಹಿಮೆಯಿಂದುಂಟಾದ ಸುಕೃತವಿಶೇಷಗಳಿಂದ ಧ್ಯಾನಿಸಬಹುದಾಗಿದೆ. ದರ್ಶನಲಾಭಕ್ಕಾಗಿ ದೇವಿಯನ್ನು ಹೀಗೆ ಧ್ಯಾನಿಸಿದರೂ ಸಹ, ಸುಲಭವಾಗಿ ದರ್ಶನವು ಲಭಿಸಲಾರದು. ಅಂತಹ ಮಹಾಮಹಿಮಳಾದ ದೇವಿಯನ್ನು ಕ್ಷಣ ಕ್ಷಣದಲ್ಲಿಯೂ ಭಕ್ತಿಪೂರ್ವಕವಾಗಿ ಧ್ಯಾನಿಸಿ, ಪ್ರಯಾಸದಿಂದ ಸಂದರ್ಶಿಸಿ ನೇತ್ರಗಳಿಗುಂಟಾದ ಆಯಾಸವನ್ನು ಹೋಗಲಾಡಿಸಿಕೊಳ್ಳಬೇಕು. ॥೬೨॥

ಗಿರಿಜೆಯು ಭಕ್ತರ ಗೃಹದಲ್ಲಿ ತನ್ನ ಅಡಿದಾವರೆಯನ್ನಿಟ್ಟು ಸ್ವಲ್ಪಹೊತ್ತು ವಿಶ್ರಮಿಸಿ ಅಲ್ಲಿ ಪ್ರೀತಿಯಿಂದ ಕ್ಷಣಕಾಲ ನಿಂತಿದ್ದು, "ನನ್ನ ಭಕ್ತರ ಗೃಹದಲ್ಲಿ ಲಕ್ಷ್ಮಿಯು ಅನವರತವೂ ವಾಸಿಸಲಿ" ಎಂದು ಆಜ್ಞಾಪಿಸಿದರೆ, ಆಗ ವಿಷ್ಣುಪತ್ನಿಯಾದ ಲಕ್ಷ್ಮಿಯು ಗಿರಿಜೆಯು ನೆಲಸಿದ ಆ ಗೃಹದಲ್ಲಿ ಗಿರಿಜೆಯ ಇಷ್ಟದಂತೆ

ದೇವಾನಾಮಪಿ ವಂದ್ಯ ಏವ ಸತತಂ ಯತ್ಪಾದುಕಾರಾಧಕಃ
ತತ್ಪಾದಾಂಬುರುಹಂ ಸ್ಮರಂತಿ ಸುಕೃತೈಕಾಂತೈರನಂತೈರಪಿ।
ತನ್ಮಾತ್ರಸ್ಮರಣೇನ ಸುಂದರತರೇ ಸಾಪೀಂದಿರಾಮಂದಿರೇ
ತತ್ಸೇವಾನಿರತಾ ಕದಾಪಿ ವಿರತಾ ಶ್ರಾಂತಾ ನ ಸಂಜಾಯತೇ ॥೬೪॥

ಜಾತಶ್ಚೇಜ್ಜನನೀಮನೋಜ್ಞಜಠರೇ ಗೌರೀಪದಾಂಭೋರುಹಂ
ಸ್ಮೃತ್ವಾ ಭೂಪತಿತಾಮುಪೇತ್ಯ ಬಹುಧಾ ಭುಕ್ತ್ವಾಪಿ ಭೋಗಾನ್ ಬಹೂನ್
ಕುರ್ವನ್ ಶಾಂಭವಪಾಲನಂ ಬಹುಧನೈಃ ಕುರ್ವನ್ ಶಿವಾರಾಧನಂ
ಕಾಶೀಂ ಪ್ರಾಪ್ಯ ವಿಮುಚ್ಯತೇ ಮುನಿವರಾರಾಧ್ಯಾಮಸಾಧ್ಯಾಮಪಿ ॥೬೫॥

ದೃಷ್ಟ್ವಾ ಚೇದ್ಗಿರಿರಾಜರಾಜತನಯಾ ನೇತ್ರೋತ್ಸವೋ ಜಾಯತೇ
ಸರ್ವಾಂಗಂ ಪುಲಕಾಂಕಿತಂ ಚ ನ ಮನಃ ಕಿಂ ತತ್ಪ್ರಸನ್ನಂ ಮಮ ;

ಅನವರತವೂ ವಾಸಿಸುವಳು. (ಅಂದರೆ, ಯಾವ ಗೃಹದಲ್ಲಿ ಗಿರಿಜೆಯು ಪೂಜಿತಳಾಗುವಳೋ ಆ ಗೃಹವು ಸಂಪದ್ಯುಕ್ತವಾಗುವುದು ಎಂದು ತಾತ್ಪರ್ಯ.) ॥೬೩॥

ದೇವಿಯ ಪಾದವನ್ನು ಪೂಜಿಸುವವನು ದೇವತೆಗಳಿಗೂ ಪೂಜ್ಯನಾಗುವನು. ಆ ದೇವಿಯ ಪಾದಕಮಲವನ್ನು ಭಕ್ತರು ಅನೇಕವಾದ ಪುಣ್ಯವಿಶೇಷಗಳಿಂದ ಸ್ಮರಿಸುವರು. ಈರೀತಿ ಗಿರಿಜೆಯ ಪಾದಪದ್ಮವನ್ನು ಸ್ಮರಿಸಿದ ಮಾತ್ರದಿಂದಲೇ ಭಕ್ತನ ರಮಣೀಯವಾದ ಆ ಗೃಹದಲ್ಲಿ ನಿರಂತರವೂ ಲಕ್ಷ್ಮಿಯು ವಾಸವಾಗಿರುವವಳಲ್ಲದೇ ಅವನನ್ನೇ ಸದಾ ಎಡಬಿಡದೇ ಸೇವಿಸುವಳು. ॥೬೪॥

ಅಂಬಿಕೆಯ ಭಕ್ತನು ತಾಯಿಯ ಉದರದಲ್ಲಿ ಜನಿಸಿ ಪೂರ್ವಜನ್ಮದ ಸುಕೃತದ ಮಹಿಮೆಯಿಂದ ಗಿರಿಜೆಯ ಅಡಿದಾವರೆಯನ್ನು ಸ್ಮರಿಸಿ, ಭೂಮಂಡಲಕ್ಕೆ ರಾಜನಾಗಿ, ನಾನಾವಿಧವಾದ ಐಹಿಕ ಸುಖಗಳನ್ನು ಅನುಭವಿಸುವನು. ಬಳಿಕ ಈಶ್ವರಭಕ್ತರನ್ನು ಕಾಪಾಡುತ್ತಾ ಅನವರತವೂ ಶಿವನನ್ನು ಪೂಜಿಸುವನು. ಹೀಗೆ ಶಿವಪೂಜೆಯಲ್ಲಿಯೇ ನಿರತನಾಗಿದ್ದು, ಅಂತ್ಯಕಾಲದಲ್ಲಿ ಪುಣ್ಯಕ್ಷೇತ್ರವೆಂದೆನಿಸಿಕೊಂಡಿರುವ ಕಾಶೀನಗರವನ್ನು ಪಡೆದು ಅಲ್ಲಿ ಮುಕ್ತಿಯನ್ನೈದುವನು. ॥೬೫॥

ಪರ್ವತರಾಜಪುತ್ರಿಯಾದ ಆ ಗೌರಿಯನ್ನು ನೋಡಿದೊಡನೆಯೇ ನನ್ನ ಕಣ್ಣುಗಳಿಗೆ ಅತ್ಯಾನಂದವುಂಟಾಗುವುದು. ನಿಖಿಲ ಅವಯವಗಳೂ, ರೋಮಾಂಚದಿಂದ ಕೂಡಿದವುಗಳಾಗುತ್ತವೆ. ಮನಸ್ಸು ಪ್ರಸನ್ನವಾಗುತ್ತದೆ. ಅವಳ ದರ್ಶನ

ನಿತ್ಯಾನಂದಸುಧಾಪ್ರಸಾರಲಹರೀಕಲ್ಲೋಲಮಾಲಾಕುಲಃ
ಕಾಲಂ ಕಿಂ ನ ನಯಾಮಿ ಕಾಲಕಲನಾ ಸಾ ಕಾಲಕಾಲಸ್ಯ ಮೇ॥೬೬॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಶಿವ ವಿಘ್ನೇಶ್ವರ ಸಂವಾದೇ ಶ್ರೀಪಾರ್ವತೀಮಹಿಮಾಸ್ತವವರ್ಣನಂ
ನಾಮ ತ್ರಯೋದಶೋಽಧ್ಯಾಯಃ

ದಿಂದ ಮನಸ್ಸಿನಲ್ಲಿ ಆನಂದವೆಂಬ ಅಮೃತದ ಪ್ರವಾಹದ ತೆರೆಗಳು ಉಕ್ಕಿ ಬರುತ್ತವೆ. ಅವಳು ನನ್ನ ಸಮೀಪದಲ್ಲಿಲ್ಲದಿದ್ದರೆ ಕ್ಷಣಕಾಲವನ್ನು ಕಳೆಯುವುದೇ ನನಗೆ ಅಸಾಧ್ಯವಾಗುವುದು. ಮೃತ್ಯುಂಜಯನಾದ ನನಗೆ ಆ ದೇವಿಯೇ ಅತಿಶಯವಾದ ಆನಂದದಾಯಕಳು. ಎಂದು ಶಂಕರನು ತನ್ನ ಪುತ್ರನಿಗೆ ಅತಿಶಯವಾದ ಪಾರ್ವತಿಯ ಮಹಿಮೆಯನ್ನು ವಿವರಿಸಿದನು. ॥೬೬॥

ಇಲ್ಲಿಗೆ ಶ್ರೀ ಶಿವರಹಸ್ಯದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಶಿವವಿಘ್ನೇಶ್ವರರ
ಸಂವಾದದಲ್ಲಿ ಪಾರ್ವತಿಯ ಮಹಿಮೆಯ ಸ್ತೋತ್ರದಿಂದೊಳಗೊಂಡ
ಹದಿಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಚತುರ್ಥೋಽಧ್ಯಾಯಃ

|| ವ್ಯಾಸ ಉವಾಚ ||

ಪುನಸ್ತಂ ಗಂತುಮುದ್ಯುಕ್ತಂ ಕರ್ತುರ್ಮೇವ ಮಹೇಶ್ವರಃ ।
ಪ್ರಾಹ ಮಂದಂ ಮಧುರಯಾ ಗಿರಾ ಗೀರ್ವಾಣನಾಯಕಃ ॥೧॥

ಕುಮಾರಾಗಮನೇ ವೃತ್ತೇ ಲಂಬೋದರವಿಲಂಬಧೀಃ ।
ನಿವೃತ್ತ್ಯೈವಾಸ್ತು ಸಹಸಾ ಸ ವಿಲಂಬಸಹೋಽಪಿ ನ ॥೨॥

ಹದಿನಾಲ್ಕನೆಯ ಅಧ್ಯಾಯ

ವ್ಯಾಸಮಹರ್ಷಿಯು ಮುನಿಗಳನ್ನು ಕುರಿತು ಇಂತೆಂದನು—" ಎಲೈ ಮುನಿಗಳೇ, ಬಳಿಕ ದೇವೇಶನಾದ ಶಿವನು ಗಣೇಶನನ್ನು ದೇವಿಯಬಳಿಗೆ ಕಳುಹಿಸಲು ಮತ್ತೊಮ್ಮೆ ಗಣಪತಿಯನ್ನು ಕುರಿತು, ಕರ್ಣಾನಂದಕರವಾದ ಮಾತಿನಿಂದ ಮೆಲ್ಲಮೆಲ್ಲನೆ ಇಂತೆಂದನು. ||೧||

ಗಣೇಶನೇ, ಕುಮಾರನು ತನ್ನ ಬಳಿಗೆ ಜಾಗ್ರತೆಯಾಗಿ ಬರಲು, ನೀನು ಬರುವುದು ಇನ್ನೂ ವಿಲಂಬವಾಗಬಹುದೆಂದು ತಿಳಿದು, ದೇವಿಯು ಅಲ್ಲಿಂದ ಅಕಸ್ಮಾತ್ತಾಗಿ ಹಿಂತಿರುಗಬಹುದು. ಕುಮಾರಸ್ವಾಮಿಯಾದರೋ ದೇವಿಯ ಬಳಿಗೆ ಹೋಗಲು ಕಾತುರನಾಗಿರುವುದರಿಂದ ನಿನ್ನಿಂದುಂಟಾಗುವ ವಿಲಂಬವನ್ನು ಸಹಿಸಲಾರನು. ||೨||

ತಸ್ಯ ತದ್ದರ್ಶನೋತ್ಕಂಠಾ ನೀಲಕಂಠಾಧಿರೋಹಣೇ ।
ಮುಹುರ್ಮುಹುಃ ಪ್ರವೃದ್ಧಾ ಸ್ಯಾತ್ತನ್ನಿರೋಧೋಽತಿದುಃಸಹಃ ॥೩॥

ಭವದ್ಗಮನಮಾತ್ರೇಣ ತ್ವರಯಾ ಗಿರಿಕನ್ಯಕಾ ।
ಸಮಾಯಾಸ್ಯತಿ ಮಾಂ ದ್ರಷ್ಟುಂ ಪ್ರಹೃಷ್ಟವದನಾ ಸತೀ ॥೪॥

ದೃಷ್ಟ್ವಾ ಗೌರೀಶರದ್ರಾಕಾಸುಧಾಕರಕರಾಶನಾಃ ।
ಮಲ್ಲೋಚನಚಕೋರಾಸ್ತೇ ಪುಷ್ಟಾಸ್ತುಷ್ಟಾ ಭವಂತ್ಯಪಿ ॥೫॥

ಏತಸ್ಮಿನ್ನಂತರೇ ವೀರಃ ಕುಮಾರಃ ಸಮುಪಾಗತಃ ।
ಪ್ರಣತಃ ಪ್ರಸೃತಾನಂದಧಾರಾಸಾರಸಮಾವೃತಃ ॥೬॥

ದೇವಿಯ ಬಳಿಗೆ ಹೋಗಬೇಕೆಂದು ಉತ್ಸಾಹಭರಿತನಾದ ಕುಮಾರನು ತನ್ನ ವಾಹನವಾದ ನವಿಲನ್ನು ಏರಲು ಉತ್ಸುಕನಾಗಿರುವನು. ಅವನ ಆ ಉತ್ಸಾಹವು ಬಾರಿಬಾರಿಗೂ ಅಭಿವೃದ್ಧಿಹೊಂದುತ್ತಿರುವಾಗ ಅದನ್ನು ತಡೆಗಟ್ಟಲು ಸಾಧ್ಯವಾಗದು. ॥೩॥

ನೀನು ದೇವಿಯ ಸಮೀಪಕ್ಕೆ ಹೋದೊಡನೆಯೇ ಆ ಗೌರಿಯು ಸಂತೋಷಭರಿತಳಾಗಿ, ಶೀಘ್ರವಾಗಿ ನನ್ನನ್ನು ನೋಡುವುದಕ್ಕೋಸ್ಕರ ಹಿಂದಿರುಗಿ ಬರುವಳು. ॥೪॥

ಶರತ್ಕಾಲದ ಹುಣ್ಣಿಮೆಯ ಚಂದ್ರನಂತೆ ಕಂಗೊಳಿಸುತ್ತಿರುವ ಗಿರಿಜೆಯ ಮುಖಚಂದ್ರದಿಂದುಂಟಾದ ಚಂದ್ರಿಕೆಯನ್ನು ಪಾನಮಾಡುವ ಚಕೋರಪಕ್ಷಿಗಳಂತೆ, ನನ್ನ ಕಣ್ಣುಗಳು ಒಡನೆಯೇ ದೇವಿಯನ್ನು ನೋಡಿ ವಿಶಾಲವಾಗಿಯೂ ಮತ್ತು ಪ್ರಸನ್ನಗಳಾಗಿಯೂ ಆಗುವುವು." ॥೫॥

ಎಲೈ ಮುನಿಗಳೇ, ಶಿವನು ಗಣೇಶನನ್ನು ಕುರಿತು ಹೀಗೆಂದು ಹೇಳುತ್ತಿರಲು, ಅಷ್ಟರೊಳಗೇ ಪರಾಕ್ರಮಿಯಾದ ಕುಮಾರನು ತಂದೆಯಾದ ಶಿವನ ಬಳಿಗೆ ಬಂದವನಾಗಿ, ಶಂಕರನಿಗೆ ನಮಸ್ಕರಿಸಿ ಆನಂದಬಾಷ್ಪಗಳನ್ನು ಸುರಿಸಿದನು. ॥೬॥

ತತಃ ಪರಂ ಸ ತುಷ್ಟಾವ ಭಗವಂತಮುಮಾಪತಿಂ ।
ಅನಂತೈರಪಿ ವೇದಾಂತೈರ್ಯೋ ನ ಜ್ಞಾತಸ್ತಮವ್ಯಯಂ ॥೭॥

॥ ಶ್ರೀಷಡಾನನ ಉವಾಚ ॥

ಯೋಽಯಂ ದೇವಃ ಸಚ್ಚಿದಾನಂದರೂಪಃ
ರೂಪಾತೀತೋ ವೇದವೇದಾಂತವಾರ್ತಾಃ ।
ಯಸ್ಮಾದಸ್ಮಾನ್ನಿರ್ಗತಾ ಏವ ಸತ್ಯಂ
ತಂ ತ್ವಾ ದೇವಂ ತತ್ತ್ವತಃ ಕೋಽಪಿ ವೇದ ॥೮॥

ಯಸ್ಮಾದೇತಜ್ಜಾಯತೇ ವಿಶ್ವಮಾದೌ
ಯೇನೈವೇದಂ ರಕ್ಷಿತಂ ರಕ್ಷಣಾರ್ಹಂ ।
ಅಂತೇ ತಾವನ್ನಾಶಮೇತಿ ಪ್ರಭೂತಂ
ತಂ ತ್ವಾಂ ವಂದೇ ದೇವತಾಸಾರ್ವಭೌಮಂ ॥೯॥

ಯತ್ಪಾದಾಬ್ಜಂ ಮೃಗ್ಯಮಾಸೀನ್ಮುನೀನಾಂ
ತತ್ತ್ವಜ್ಞಾನಾಪಾರಸಾರಾಕರಾಣಾಂ ।

ಆನಂತರ ಕುಮಾರಸ್ವಾಮಿಯು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣನೂ, ವೇದಾಂತಗಳಿಂದಲೂ ತಿಳಿಯಲಸಾಧ್ಯನೂ, ಆದ ಶಿವನನ್ನು ಮುಂದೆ ಹೇಳುವ ರೀತಿಯಲ್ಲಿ ಸ್ತುತಿಸಿದನು. ॥೭॥

"ಓ ದೇವದೇವನೇ, ಸಚ್ಚಿದಾನಂದಸ್ವರೂಪನೂ, ನಿರಾಕಾರನೂ ಆದ ನಿನ್ನ ಯಥಾರ್ಥತತ್ತ್ವವನ್ನು ತಿಳಿಸಲು ವೇದಾಂತಗಳೂ ಅಸಮರ್ಥವಾಗಿರುವುವು. ಹೀಗಿರುವಾಗ ನಿನ್ನ ನಿಜವಾದ ಸ್ವರೂಪವನ್ನು ಯಾವನು ತಾನೇ ತಿಳಿದಿರುವನು? ॥೮॥

ಯಾವ ದೇವನು ಸೃಷ್ಟಿಕಾಲದಲ್ಲಿ ಜಗತ್ತನ್ನು ಸೃಷ್ಟಿಸಿ, ಸ್ಥಿತಿಕಾಲದಲ್ಲಿ ಅದನ್ನು ಸಂರಕ್ಷಿಸಿ, ಬಳಿಕ ಲಯಕಾಲದಲ್ಲಿ ನಾಶಪಡಿಸುವನೋ ಆ ದೇವನೇ ನೀನಾಗಿರುವೆ. ದೇವೇಶನೂ, ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನೂ ಆದ ನಿನ್ನನ್ನು ವಂದಿಸುವೆನು. ॥೯॥

ಯಾವ ದೇವನ ಅಡಿದಾವರೆಯನ್ನು ಜ್ಞಾನಿಗಳು, ತತ್ತ್ವಜ್ಞಾನವನ್ನು ಸಂಪಾದಿಸಿ, ಅದರ ಮೂಲಕ ಸಾಕ್ಷಾತ್ಕರಿಸುವರೋ, ಆ ದೇವನ ಪಾದಕಮಲದ

ತತ್ಪಾದಾಬ್ಜಂ ದುರ್ಲಭಂ ದುರ್ಲಭಂ ಮೇ
ದೇವಾಶಾಸ್ಯಂ ಸರ್ವದಾ ದುರ್ಲಭಂ ಚ ॥೧೦॥

ಯತ್ಪಾದಾಬ್ಜಂ ಕಾಮುಕಾಮಾಃ ಸುರಾದ್ಯಾಃ
ಸರ್ವೇ ತಾವದ್ದ್ರಷ್ಟುಮಿಚ್ಛಂತಿ ಭಕ್ತ್ಯಾ ।
ತತ್ಪಾದಾಬ್ಜಂ ದುರ್ಲಭಂ ದೇವಗೀತಂ
ತನ್ಮೇ ಚಿತ್ತಂ ಸರ್ವದಾ ಸಾವಧಾನಂ ॥೧೧॥

ಯಾಗೈರ್ಯೋಗೈಃ ಸಾಧನೈರ್ಯನ್ನ ದೃಷ್ಟಂ
ಪಾದಾಂಭೋಜಂ ವಿಶ್ವನಾಥಸ್ಯ ತನ್ಮೇ ।
ನಿತ್ಯಂ ತಾವದ್ದುರ್ಲಭಂ ದುರ್ಲಭಾನಾಂ
ಮಧ್ಯೇ ತಾವದ್ದುರ್ಲಭಂ ತ್ವತ್ಪದಾಬ್ಜಂ ॥೧೨॥

ದರ್ಶನವು ಅಜ್ಞಾನಿಗಳಿಗೆ ಎಂದಿಗೂ ಲಭಿಸಲಾರದು. ದೇವತೆಗಳೂ ಸಹ ಅದನ್ನು ನೋಡಲು ಆಶಿಸುತ್ತಿರಲು ಅದು ಅತ್ಯಂತ ದುರ್ಲಭವಾದುದಲ್ಲವೇ? ॥೧೦॥

ನಿರಂತರವೂ ವಿಷಯಸುಖಗಳನ್ನೇ ಬಯಸುತ್ತಿರುವ ಇಂದ್ರಾದಿ ದೇವತೆಗಳೂ ಸಹ, ಯಾವ ದೇವೇಶನಾದ ಶಿವನ ಅಡಿದಾವರೆಯನ್ನು ಭಕ್ತಿಯೋಗದ ಸಹಾಯದಿಂದ ನೋಡಬಯಸುವರೋ, ಆ ದೇವನ ಪಾದಕಮಲವು ಲಭಿಸುವುದು ಕಠಿಣತರವಲ್ಲವೆ! ಅದನ್ನು ದೇವತೆಗಳೂ ಸಹ ಸ್ತುತಿಸುವರು. ಆದುದರಿಂದ ಚಂಚಲವಾದ ಈ ನನ್ನ ಮನಸ್ಸು ಆ ದೇವನ ಪಾದಾರವಿಂದವನ್ನೇ ಧ್ಯಾನಿಸುವುದರಲ್ಲಿ ಆಸಕ್ತವಾಗಿ, ಅಲ್ಲಿಯೇ ಸ್ಥಿರವಾಗಿ ನಿಲ್ಲಲಿ. ॥೧೧॥

ಸ್ವಾಮಿಯೇ, ಯಜ್ಞಯಾಗಾದಿ ಕರ್ಮಗಳಿಂದಲೂ, ಯಮನಿಯಮಾಸನಗಳೇ ಮೊದಲಾದ ಅಷ್ಟಾಂಗಗಳಿಂದ ಕೂಡಿರುವ ಯೋಗಗಳಿಂದಲೂ, ನಿನ್ನ ಯಾವ ಪಾದಕಮಲವನ್ನು ಭಕ್ತರು ಸಂದರ್ಶಿಸಿರುವುದಿಲ್ಲವೋ, ಅಂತಹ ವಿಶ್ವನಾಥನಾದ ನಿನ್ನ ಪಾದಕಮಲದ ದರ್ಶನವು ಪಾಮರನಾದ ನನಗೆ ದುರ್ಲಭವಲ್ಲವೇ? ಲೋಕದಲ್ಲಿ ದುರ್ಲಭವಾದ ವಸ್ತುಗಳಲ್ಲೆಲ್ಲಾ ಅತ್ಯಂತ ದುರ್ಲಭವಾದುದು ನಿನ್ನ ಪಾದಕಮಲವಲ್ಲವೆ! ॥೧೨॥

ತ್ವತ್ಪಾದಾಬ್ಜಂ ದ್ರಷ್ಟುಮದ್ಯಾಪಿ ಧನ್ಯಾಃ
ಯೋಗಾಭ್ಯಾಸಂ ಕರ್ತುಮುಪ್ಯುದ್ಯತಾಸ್ತೇ ।
ಕೃತ್ವಾ ಕೃತ್ವಾ ತಂ ಪುನಃ ಶ್ರಾಂತಚಿತ್ತಾಃ
ತತ್ಪಾದಾಬ್ಜಂ ದ್ರಷ್ಟುಮರ್ಧೇಂದುಮೌಳೇ ॥೧೩॥

ಘೋರಾಕಾರಾಸಾರಸಂಸಾರಸಿಂಧುಃ
ಯತ್ಪಾದಾಬ್ಜಾಲೋಕನೇ ನ ಪ್ರವೃದ್ಧಃ ।
ತಂ ತ್ವಾಂ ಸೋಮಂ ದೇವತಾಸಾರ್ವಭೌಮಂ
ವಂದೇ ವಂದೇ ಸುಂದರಾನಂದಕಂದಂ ॥೧೪॥

ನಿತ್ಯಾನಂದಾನಂದಸಂದೋಹಬೀಜಂ
ಯತ್ಪಾದಾಬ್ಜಂ ಸರ್ವವಿಜ್ಞಾನಬೀಜಂ ।
ಪಾದಾಂಭೋಜಂ ತನ್ನಮಾಮಿ ಪ್ರಪನ್ನಃ
ತ್ವತ್ಪಾದಾಬ್ಜಂ ಸರ್ವದಾ ದುರ್ಲಭಂ ಮೇ ॥೧೫॥

ಓ ಚಂದ್ರಶೇಖರನೇ, ಪುಣ್ಯಶಾಲಿಗಳು ನಿನ್ನ ಪಾದಕಮಲವನ್ನು ಸಾಕ್ಷಾತ್ಕರಿಸಬೇಕೆಂಬ ಇಚ್ಛೆಯಿಂದ ಯೋಗಾಭ್ಯಾಸವನ್ನು ಕೈಗೊಂಡಿರುವರು. ಆ ರೀತಿಯಲ್ಲಿ ಯೋಗಾಸಕ್ತರಾದ ಅವರು, ಅನವರತವೂ ಅಷ್ಟಾಂಗಾನುಷ್ಠಾನ ಮಾಡಿದರೂ ನಿನ್ನ ಪಾದಗಳ ದರ್ಶನವು ಲಭಿಸದೆ ಅವರು ಬಳಲಿ ವ್ಯಥೆಗೊಂಡಿರುವರು. ||೧೩||

ಯಾವ ದೇವನ ಪಾದಪದ್ಮಗಳ ದರ್ಶನವು ಉಂಟಾದ ಒಡನೆಯೇ ಭಯಂಕರವಾದ ಸಂಸಾರವು ನಶಿಸುವುದೋ, ಅಂತಹ ದೇವೇಶನೂ ಉಮಾದೇವಿಯೊಡಗೂಡಿದವನೂ ಆನಂದಗಳಿಗೆ ಆಶ್ರಯನೂ ಆದ ನಿನ್ನನ್ನು ಬಾರಿಬಾರಿಗೂ ನಮಸ್ಕರಿಸುವೆನು. ||೧೪||

ಯಾವನ ಪಾದಕಮಲವು ಶಾಶ್ವತವಾದ ಆನಂದವನ್ನೂ ಮತ್ತು ನಿಖಿಲ ವಸ್ತುಗಳ ಜ್ಞಾನವನ್ನು ಒದಗಿಸುವುದೋ, ಆ ದೇವದೇವನ ಪಾದಪದ್ಮದಲ್ಲಿ ನಾನು ಶರಣಾಗತನಾಗಿ ಅವನನ್ನು ನಮಿಸುವೆನು. ಪ್ರಭುವೇ, ನಿನ್ನ ಪವಿತ್ರವಾದ ಪಾದಕಮಲವು ಯಾವಾಗಲೂ ನನಗೆ ದುರ್ಲಭವೇ ಆಗಿದೆಯಲ್ಲವೆ ? ||೧೫||

ಸುರಾಪಾರಕೋಟೀರಕೋಟಿಪ್ರಭಾಭಿ
ರ್ಭವತ್ಪಾದುಕಾಕಾಂತಿಕಾಂತಾಭಿರೀಶ ।
ಪ್ರಶಾಂತೋ ವಿಧುರ್ಭಾನುಮಾನಿಂದುಮೌಳೇ
ಕಲಾ ಷೋಡಶೀ ನಾ ನ ತಸ್ಯಾಸ್ತು ತಾಸಾಂ ॥೧೬॥

ತವಾಯಂ ಪ್ರಭಾವಃ ಪ್ರಭೂತಃ ಪ್ರಭಾತಿ
ಪ್ರಭಾಮಂಡಲಸ್ಯಾಸ್ಯ ಕಾರ್ಯಂ ನ ವಿದ್ಮಃ ।
ಸ್ಫುಲಿಂಗೇನ ನಷ್ಟೇಽಪಿ ಗಾಢಾಂಧಕಾರೇ
ಕ್ವ ಸೂರ್ಯಾದ್ಯಪೇಕ್ಷಾಪಿ ಲೋಕೇಷು ದೃಷ್ಟಾ ॥೧೭॥

ತಟಿತ್ಕೋಟಿಸಂಘೂತಜಾತಪ್ರಕಾಶಂ
ತಿರಸ್ಕೃತ್ಯ ತೇಜಸ್ತವೇದಂ ಪ್ರವೃತ್ತಂ ।
ಸ್ಫುರತ್ಪಾದಪದ್ಮಸ್ಯ ತಸ್ಯ ಸ್ಫುಲಿಂಗಾಃ
ರವಿರ್ವಹ್ನಿರಿಂದುಗ್ರಹಾಸ್ತಾರಕಾಶ್ಚ ॥೧೮॥

ದೇವೇಶನೇ, ದೇವತೆಗಳ ಕೋಟ್ಯಂತರ ರತ್ನಖಚಿತವಾದ ಕಿರೀಟಗಳಿಂದುಂಟಾದ ಪ್ರಭಾರಾಶಿಯಿಂದ ನಿನ್ನ ಪಾದಗಳ ಕಾಂತಿಯು ಇಮ್ಮಡಿಯಾಗಿ ಮಾಡಲ್ಪಟ್ಟಿರುವುದು. ನೇತ್ರಾನಂದಕರವಾದ ನಿನ್ನ ಚರಣಕಾಂತಿಯನ್ನು ನೋಡಿ ಸೂರ್ಯಚಂದ್ರರೂ ತಮ್ಮ ಕಾಂತಿಯನ್ನು ಧಿಕ್ಕರಿಸುತ್ತಿರುವರು. ಚಂದ್ರನ ಆ ಕಾಂತಿಯು ನಿನ್ನ ಪಾದಕಾಂತಿಗಳ ಹದಿನಾರನೆಯ ಒಂದು ಅಂಶದೊಂದಿಗೂ ಹೋಲಲಾರದು. ||೧೬||

ಪ್ರಭೋ, ನಿನ್ನ ಮಹಿಮಾತಿಶಯವು ವರ್ಣನಾತೀತವಾಗಿರುವುದಲ್ಲವೇ ? ನಿನ್ನ ಮಹಿಮೆಯಿಂದುಂಟಾಗಿರುವ ಈ ತೇಜೋರಾಶಿಯ ವ್ಯಾಪನೆಯನ್ನು ವರ್ಣಿಸಲು ಅಸಮರ್ಥರಾಗಿರುವೆವು. ನಿನ್ನ ಕಾಂತಿಯ ಲೇಶದಿಂದಲೇ ನಿಬಿಡವಾದ ಕತ್ತಲೆಯೂ ನಾಶವಾಗುತ್ತಿರಲು ಜನರು ಸೂರ್ಯಚಂದ್ರರ ಬೆಳಕನ್ನು ಅಪೇಕ್ಷಿಸುವರೇ ! ||೧೭||

ನಿನ್ನ ಪಾದಕಮಲದ ಕಾಂತಿಯು ಕೋಟ್ಯಂತರವಾದ ವಿದ್ಯುತ್ತುಗಳ ಸಮುದಾಯದಿಂದುಂಟಾಗುವ ಪ್ರಕಾಶವನ್ನೂ ಸಹ ತಿರಸ್ಕರಿಸಿ ಕಂಗೊಳಿಸುತ್ತಿರುವುದು. ಸೂರ್ಯ, ಚಂದ್ರ, ಅಗ್ನಿ ಇವರೇ ಮೊದಲಾದ ಗ್ರಹಗಳೂ ಮತ್ತು

ಅಚಿಂತ್ಯಪ್ರಭಾವೋ ಮನೋಗೋಚರೋ ವಾ
ನ ವೇದಾಂತವಾಗ್ಗೋಚರೋ ವಾ ನಿವೃತ್ತಾಃ ।
ಸ್ವತೋ ವಾಚ ಏವೇತಿ ಮನ್ಯೇ ಸ ಚಿಂತಾ
ಪ್ರವೃತ್ತಿಃ ಕಥಂ ತತ್ರ ಮಾನಾಂತರಸ್ಯ ॥೨೦॥

ಅನಂತಾನಿ ಪಾಪಾನಿ ನಾಶಂ ಪ್ರಯಾಂತಿ
ಸ್ವತಸ್ತ್ವತ್ಪದಾಂಭೋರುಹಾನುಗ್ರಹೇಣ ।
ಕಿಮುಗ್ರಾಸ್ತ್ಯಶಕ್ಯಂ ತವಾನುಗ್ರಹಸ್ಯಾ
ಪ್ಯಯಂ ತೇ ಮಮಾನುಗ್ರಹೋಽಯಂ ಮಹೇಶ ॥೨೧॥

ನಕ್ಷತ್ರಗಳೂ ನಿನ್ನ ಅಡಿದಾವರೆಯ ಕಾಂತಿಯ ಒಂದಾನೊಂದು ಅಂಶವಾಗಿರುವರು. ॥೧೯॥

ಸಚ್ಚಿದಾನಂದಸ್ವರೂಪನೂ ನಿರಾಕಾರನೂ ಆದ ಆ ಪರಶಿವನ ಮಹಿಮಾತಿಶಯವನ್ನು ಚಿಂತಿಸುವುದೂ ಅಶಕ್ಯವಾಗಿರುವುದು. ಮನಸ್ಸಿನಿಂದಾಗಲಿ, ಉಪನಿಷದ್ವಾಕ್ಯಗಳ ಮೂಲಕವಾಗಲಿ, ಆವನ ಸ್ವರೂಪವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ವೇದಾಂತವಾಕ್ಯಗಳು ಅಭಿಧಾವೃತ್ತಿಯಿಂದ ಆ ಪರಬ್ರಹ್ಮನ ಸ್ವರೂಪವನ್ನು ತಿಳಿಸುವುದಕ್ಕೆಂದು ಪ್ರವೃತ್ತವಾಗಿ, ಬಳಿಕ ಬ್ರಹ್ಮನಲ್ಲಿ ಪ್ರವೃತ್ತಿನಿಮಿತ್ತಗಳಾದ ಜಾತಿಕ್ರಿಯಾ ಗುಣಗಳು ಯಾವುವೂ ಇಲ್ಲದಿರುವುದನ್ನು ತಿಳಿದು ಅವನ ಸ್ವರೂಪವನ್ನು ತಿಳಿಸಲಾರದೇ ಹಿಂದಿರುಗುವುವು. ಇದನ್ನೇ "ಯತೋವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ಎಂದು ಶ್ರುತಿಯು ಹೇಳುತ್ತಿರುವುದು. ಆದುದರಿಂದ ಪರಬ್ರಹ್ಮನು ಯಾವ ಪ್ರಮಾಣಗಳಿಗೂ ಗೋಚರನಾಗದಿರಲು ಅವನು ಪ್ರಮಾಣಗೋಚರನೆಂದು ಭಾವಿಸಲು ಸಾಧ್ಯವೇ ! ಎಂದಿಗೂ ಇಲ್ಲ. ॥೨೦॥

ಶಿವನೇ, ನಿನ್ನ ಪಾದಕಮಲಗಳ ಅನುಗ್ರಹದಿಂದ, ಜನ್ಮಜನ್ಮಾಂತರಗಳಿಂದ ಸಂಚಿತವಾದ ಅನೇಕಪಾಪಗಳು ನಾಶವಾಗುತ್ತವೆ. ನಿನ್ನ ಅನುಗ್ರಹವೊಂದಿದ್ದರೆ ಅಸಾಧ್ಯವಾದ ಕಾರ್ಯವೇ ನಮಗೆ ತೋರುವುದಿಲ್ಲ. ನೀನು ನನಗೆ ಅಂತಹ ಅನುಗ್ರಹವನ್ನು ದಯಪಾಲಿಸಿರುವೆ. ॥೨೧॥

ಮಹೇಶಾದ್ಯ ಯಾಚೇ ಭವತ್ಪಾದಪದ್ಮೇ
ದೃಢಾಂ ಭಕ್ತಿಮೇಕಾಂ ತದನ್ಯಂ ನ ಯಾಚೇ ।
ತ್ವಮೇವಾಸಿ ಮಾತಾ ಪಿತಾಸಿ ತ್ವಮೇವ
ತ್ವಮೇವ ಪ್ರಭುರ್ಮೇ ತ್ವಮೇವಾಸಿ ಬಂಧುಃ ॥೨೨॥

ಅನಾಥೈಕನಾಥ ಪ್ರಭೋ ವಿಶ್ವನಾಥ
ಪ್ರಭೋ ಮಾಮನಾಥಂ ಸನಾಥಂ ಕುರು ತ್ವಂ ।
ಅನನ್ಯಾವನಂ ತೇ ಕಥಂ ವಾ ನ ಧರ್ಮಃ
ತ್ವಮೇವಾಸಿ ಧರ್ಮಸ್ವರೂಪಃ ಸ್ಮರಾರೇ ॥೨೩॥

ಸ್ಮರಾಮಿ ಸ್ಮರಾಮಿ ಸ್ಮರಾರೇ ಭವಂತಂ
ವಿಪದ್ಧ್ವಾಂತಸಂಹಾರಹೇತುಂ ಪ್ರಶಾಂತಂ ।
ಜಗದ್ಧೇತುಮೇಕಂ ಭವಂತಂ ಸ್ಮರಾಮಿ
ಸ್ಮರಾರೇ ಶರಣ್ಯೋ ನ ಕೋಽಪ್ಯಸ್ತಿ ಲೋಕೇ ॥೨೪॥

ಮಹೇಶ್ವರನೇ, ನಿನ್ನ ಅಡಿದಾವರೆಗಳಲ್ಲೇ ಸದಾ ಭಕ್ತಿಯುಂಟಾಗುವಂತೆ ನಿನ್ನನ್ನು ಪ್ರಾರ್ಥಿಸುತ್ತೇನೆ. ನೀನೇ ಅಂತಹ ದೃಢಭಕ್ತಿಯನ್ನು ನೀಡುವವನು. ಆದುದರಿಂದ ನಿನ್ನನ್ನು ಬಿಟ್ಟು ಮತ್ತಾರನ್ನೂ ನಾನು ಯಾಚಿಸುವುದಿಲ್ಲ. ನೀನೇ ನನ್ನ ತಂದೆಯು. ನೀನೇ ತಾಯಿಯು. ನೀನೇ ನನ್ನ ಸ್ವಾಮಿಯೂ ಬಂಧುವೂ ಆಗಿರುವೆ. ॥೨೨॥

ಅನಾಥರಕ್ಷಕನೂ, ಜಗನ್ನಾಥನೂ ಆದ ಸ್ವಾಮಿಯೇ, ನಿರ್ಗತಿಕನಾದ ನನ್ನನ್ನು ಕಾಪಾಡು. ಅನಾಥರನ್ನು ರಕ್ಷಿಸುವುದು ನಿನ್ನ ಕರ್ತವ್ಯವಾಗಿರುವುದಿಲ್ಲವೇ ! ನಿನ್ನನ್ನೇ ನಂಬಿರುವ ನನ್ನನ್ನು ಧರ್ಮಸ್ವರೂಪನಾದ ನೀನು ಉದ್ಧರಿಸು. ॥೨೩॥

ಕಷ್ಟಗಳನ್ನು ಹೋಗಲಾಡಿಸುವವನೂ ಪ್ರಸನ್ನನೂ ಆದ ನಿನ್ನನ್ನೇ ಬಾರಿ ಬಾರಿಗೂ ಸ್ಮರಿಸುತ್ತೇನೆ. ಓ ಪ್ರಭುವೇ, ಈ ಲೋಕದಲ್ಲಿ ಜಗತ್ತಿಗೆ ಮೂಲಕಾರಣನಾದ ನೀನಲ್ಲದೆ ನಿರ್ಗತಿಕನಾದ ನನ್ನನ್ನು ರಕ್ಷಿಸುವವರು ಮತ್ತಾರು ? ಆದುದರಿಂದ ನಿನ್ನನ್ನೊಬ್ಬನನ್ನೇ ಅನವರತವೂ ಧ್ಯಾನಿಸುವೆನು. ॥೨೪॥

ಕ್ವ ವಾ ತೇ ಪದಾಬ್ಜಂ ಕ್ವ ವಾ ವಾ ಮನೋ ಮೇ
ಮನೋವೃತ್ತಿರಸ್ಮಿನ್ ಕಥಂ ವಾ ಪದಾಬ್ಜೇ ।
ಸ್ಥಿರಂ ಜಾಯತಾಮಿಂದುಮೌಳೇ ದಯಾಳೋ
ದಯಾಪಾತ್ರಮಸ್ಮಿ ತ್ರಿಣೇತ್ರಾಹಮೇಕಃ ॥೨೫॥

ಅಹಂ ಸರ್ವದಾ ತ್ವತ್ಪದಾಂಭೋಜಭೃಂಗಃ
ಭವಾಮ್ಯೇವ ಶಂಭೋ ಭವತ್ಪಾದಪದ್ಮಂ ।
ಮನಃಸದ್ಮ ತನ್ಮೇ ಮನಃ ಪದ್ಮಯಾಪಿ
ಪ್ರಭೋ ಮೋಹಕಾಲೇಽಪಿ ನ ಕ್ರೀಡತೀತಿ ॥೨೬॥

ಭವತ್ಪಾದಪದ್ಮಶ್ರಿಯಾ ಸಾಕಮೇವ
ಮನಃ ಕ್ರೀಡತೀತಿ ಪ್ರಮೋದೋ ಮಮಾಸೌ ।
ತತಸ್ತಾವತಾ ಹಾನಿರೀಶಾನ ಕಾ ತೇ
ತವಾಹಂ ತವಾಹಂ ತವಾಹಂ ತವಾಹಂ ॥೨೭॥

ಉತ್ಕೃಷ್ಟವಾದ ನಿನ್ನ ಪಾದಕಮಲವೆಲ್ಲಿ? ಚಂಚಲವಾದ ನನ್ನ ಚಿತ್ತವೆಲ್ಲಿ? ಚಪಲವಾದ ಈ ಚಿತ್ತವು ನಿನ್ನ ಪಾದಕಮಲವನ್ನು ಧ್ಯಾನಿಸುವಷ್ಟು ಶಕ್ತಿಯುಳ್ಳದ್ದೆ! ಓ ಚಂದ್ರಶೇಖರನೇ, ಆದರೂ ನನ್ನ ಮನಸ್ಸು ನಿನ್ನ ಪಾದಗಳನ್ನೇ ಧ್ಯಾನಿಸುವಂತೆ ನನ್ನನ್ನು ಅನುಗ್ರಹಿಸು. ದಯಾಶಾಲಿಯಾದ ನಿನ್ನ ದಯೆಗೆ ನಾನು ಸತ್ಪಾತ್ರನೆನಿಸಿರುವೆನು. ||೨೫||

ನಾನು ನಿರಂತರವೂ ನಿನ್ನ ಪಾದಕಮಲದಲ್ಲಿ ಭೃಂಗದಂತೆ ಲೀನನಾಗಿರುವೆನು. ನಿನ್ನ ಪಾದಪದ್ಮವೇ, ನನ್ನ ಚಿತ್ತಕ್ಕೆ ಆಶ್ರಯವಾಗಿರುವುದು. ಸ್ವಾಮಿಯೇ, ಈ ನಿನ್ನ ಮನಸ್ಸು ಅಜ್ಞಾನಾವಸ್ಥೆಯಲ್ಲಿಯೂ ಕೂಡ ವಿಲಾಸಾಸ್ಪದವಾದ ಲಕ್ಷ್ಮಿಯೇ ಮುಂತಾದುವುಗಳೊಂದಿಗೆ ವಿಹರಿಸಲಾರದು. ||೨೬||

ನಿನ್ನ ಅಡಿದಾವರೆಯ ಕಾಂತಿಯೊಂದಿಗೆ ನನ್ನ ಚಿತ್ತವು ಕ್ರೀಡಿಸುತ್ತಿರುವುದಕ್ಕಾಗಿ ನಾನು ಅತ್ಯಂತ ಸಂತೋಷದಿಂದ ಹಿಗ್ಗಿ ಮೆರೆಯುತ್ತಿರುವೆನು. ಪ್ರಭುವೇ, ಇದರಿಂದ ನಿನಗೇನಾದರೂ ತೊಂದರೆಯಿರುವುದೇ? ಮಹಾಪ್ರಭುವೇ, ನಾನು ನಿನ್ನವನೇ ಅಲ್ಲವೆ? ನಿಜವಾಗಿಯೂ ನಿನ್ನವನೇ. ||೨೭||

ನ ಲೋಕೇ ಮಮಾನ್ಯತ್ಕಿಮಾಶಾಸ್ಯಮಸ್ತೀ
ತ್ಯವಶ್ಯಂ ತ್ವಯಾ ಶಂಕನೀಯಂ ಮಹೇಶ ।
ಇತೋ ನಾಧಿಕಂ ಕ್ವಾಪಿ ಲೋಕೇಷು ಶಂಭೋ
ನ ಚಾತ್ಯಲ್ಪಮಾಶಾಸ್ಯಮಸ್ತೀತಿ ವಿದ್ಮಃ ॥೨೮॥

ಇತಿ ಸ್ತುತ್ವಾ ಮಹಾದೇವಂ ಕುಮಾರೋ ನತಕಂಧರಃ ।
ಪ್ರಣಮ್ಯ ಶಿವಪಾದಾಬ್ಜಂ ತದಾಲಿಂಗ್ಯ ಸ್ಥಿತೋ ಮುದಾ ॥೨೯॥

ತತಃ ಪರಂ ತಂ ಕುಮಾರಂ ಕರುಣಾಸಾಗರೋ ಹರಃ ।
ಆಲಿಂಗ್ಯ ದುಂಢಿನಾ ಸಾಕಮುವಾಚ ವಚನಂ ಮುದಾ ॥೩೦॥

॥ ಶ್ರೀಸದಾಶಿವ ಉವಾಚ ॥

ದುಂಢೇ ಕುಮಾರೇಣ ಸಹಾಧುನಾ ತ್ವಂ
ವಿಮಾನಮಾರುಹ್ಯ ಮನೋಜ್ಞಮದ್ಯ ।
ಪ್ರಯಾಹಿ ಗೌರೀಚರಣಾರವಿಂದ
ಮರಂದಧಾರಾದರದರ್ಶನಾಯ ॥೩೧॥

ಶಂಕರನೇ, ನಿನ್ನ ಭಕ್ತನಾದ ನಾನು, ಈ ಲೋಕದಲ್ಲಿ ಮತ್ತೇನನ್ನೂ ಆಪೇಕ್ಷಿಸುವುದಿಲ್ಲ. ಏಕೆಂದರೆ ಈ ಲೋಕದಲ್ಲಿ ನಿನ್ನ ಅಡಿದಾವರೆಗಿಂತಲೂ ಉತ್ಕೃಷ್ಟವಾದ ಮತ್ತೊಂದು ವಸ್ತುವೇ ಇಲ್ಲ. ಆದುದರಿಂದ ನಾನು ನಿನ್ನ ಪಾದ ಪದ್ಮದ ದರ್ಶನವನ್ನೇ ಸದಾ ಬಯಸುವೆನು. ಈ ನಮ್ಮ ಕೋರಿಕೆಯು ಮಹತ್ತರ ವಾದುದೆಂದು ನಾವು ತಿಳಿದಿರುವೆವು. ॥೨೮॥

ಷಣ್ಮುಖನು ಈ ರೀತಿಯಾಗಿ ಶಿವನನ್ನು ಸ್ತುತಿಸಿ ಶಿರಸ್ಸನ್ನು ಬಗ್ಗಿಸಿ, ಶಿವನ ಪಾದಪದ್ಮಗಳಿಗೆ ನಮಸ್ಕರಿಸಿ, ಬಳಿಕ ಪ್ರೀತಿಯಿಂದ ಅಪ್ಪಿಕೊಂಡನು. ॥೨೯॥

ತರುವಾಯ ದಯಾಸಾಗರನಾದ ಶಿವನು ತನ್ನನ್ನು ನಮಸ್ಕರಿಸಿದ ಕುಮಾರ ಸ್ವಾಮಿಯನ್ನು ಗಣೇಶನೊಂದಿಗೆ ಆಲಿಂಗಿಸಿ ವಿಶ್ವಾಸದಿಂದ ಮುಂದೆ ಹೇಳುವಂತೆ ಹೇಳಿದನು. ॥೩೦॥

"ಎಲೈ ದುಂಢಿಯೇ ಈಗ ನೀನು ಕುಮಾರಸ್ವಾಮಿಯೊಂದಿಗೆ ರಮಣೀಯ ವಾದ ವಿಮಾನವನ್ನೇರಿ ಗೌರೀಪಾದಪದ್ಮದ ಮಕರಂದದ ಸಂತತಧಾರೆಯನ್ನು ಸಂದರ್ಶಿಸುವುದಕ್ಕೋಸ್ಕರ ಅವಳಿದ್ದಲ್ಲಿಗೆ ಹೋಗುವವನಾಗು. ॥೩೧॥

ಇದಂ ತು ತಾವತ್ಸುದಿನಂ ಗಣೇಶ
ತ್ವಯಾದ್ಯ ನೇತ್ರಶ್ರಮವಾರಣಾಯ ।
ಆನಂದಧಾರಾಪರಿಪಾಲನಾಯ
ಗಂತವ್ಯಮಂಬಾಪದಸಂನಿಧಾನಂ ॥೩೨॥

ತ್ವಯಾ ಜಗನ್ಮಂಗಳಮಂಗಳಾಯಾಃ
ಕಿಂ ಮಂಗಲಂ ಮಂಗಳದೇವತಾಯಾಃ ।
ಸೇವ್ಯಂ ಸ್ವರೂಪಂ ನಯನಾರವಿಂದ
ಸಂದೋಹಸೇವ್ಯಂ ಖಲು ಸೇವ್ಯಮದ್ಯ ॥೩೩॥

ಧನ್ಯಂ ದಿನಂ ತಾವದಿದಂ ಗಣೇಶಂ
ಗೌರೀಪದಾಂಭೋರುಹದರ್ಶನೇನ ।
ನೂನಂ ಕುಮಾರಸ್ಯ ತವಾಪಿ ಭಾಗ್ಯಂ
ಸೌಭಾಗ್ಯಸಂಪತ್ತಿನಿದಾನಭೂತಂ ॥೩೪॥

ಎಲೈ ಗಣನಾಥನೇ, ನಿನಗೆ ಇದೊಂದು ಶುಭದಿವಸವಾಗಿರುವುದು. ಈ ಶುಭದಿವಸದಲ್ಲಿ ನೀನು ನಿನ್ನ ಕಣ್ಣುಗಳಿಂದುಂಟಾದ ಆಯಾಸವನ್ನು ಹೋಗಲಾಡಿಸಿ, ಆನಂದಬಾಷ್ಪಗಳನ್ನು ಹೊಂದುವುದಕ್ಕೋಸ್ಕರ, ದೇವಿಯಾದ ಗಿರಿಜೆಯ ಪಾದದ ಸಮೀಪಕ್ಕೆ ಹೋಗುವುದು ಉಚಿತವಾಗಿರುವುದು. ||೩೨||

ಲೋಕದಲ್ಲಿ ಮಂಗಳಕರವೆಂದೆನಿಸಿಕೊಳ್ಳುವ ವಸ್ತುಗಳಿಗೆಲ್ಲಾ ಮಾಂಗಲ್ಯ ಪ್ರದಾತಳಾದ ಆ ದೇವಿಯ ಮೂರ್ತಿಯನ್ನು ನೀನು ಪೂಜಿಸು. ದೇವಿಯಾದ ಗಿರಿಜೆಯು ಮಂಗಳಸ್ವರೂಪಳೇ ಆಗಿರುವಳು. ಈ ಶುಭದಿವಸದಲ್ಲಿ ಜಗನ್ಮಾತೆಯಾದ ಆ ದೇವಿಯನ್ನು ನಿನ್ನ ನೇತ್ರಕಮಲಗಳಿಂದ ಎವೆಯಿಕ್ಕದಂತೆ ನೋಡಿ ತೃಪ್ತಿಯನ್ನು ಹೊಂದು. ||೩೩||

ಗಿರಿಜೆಯ ಅಡಿದಾವರೆಗಳನ್ನು ಅವಲೋಕಿಸುವ ಸುಯೋಗವು ಲಭಿಸಿರುವುದರಿಂದ ನಿನಗೆ ಇಂದೇ ಸುದಿನ. ನಿನಗೂ ಮತ್ತು ಕುಮಾರನಿಗೂ ಲಭಿಸಿರುವ ಈ ಸುಯೋಗವು ನಿಮ್ಮಿಬ್ಬರಿಗೂ ಸುಕೃತವನ್ನೂ ಸಂಪತ್ತುಗಳನ್ನೂ ವೃದ್ಧಿಗೊಳಿಸುವುದರಲ್ಲಿ ಸಂದೇಹವಿಲ್ಲ. ||೩೪||

ಅಭೂತಪೂರ್ವಂ ಖಲು ಮಂಗಳಂ ತೇ
ಭವಿಷ್ಯತಿ ಪ್ರಾಯಶ ಇತ್ಯವೈಮಿ ।
ಯತಃ ಕುಮಾರೋಽಪಿ ಸಮಾಗತೋಽಯಂ
ಅಂಬಾಪದಾಂಭೋಜವಿಲೋಕನಾಯ ॥೩೫॥

ರಮಾದಿಕಾಪಾರಸುರಾಂಗನಾನಾಂ
ತುಂಗೋತ್ತಮಾಂಗಾನತಪಾದುಕಾಯಾಃ ।
ಮಮ ಪ್ರಿಯಾಯಾಃ ಪರಮಂಬಿಕಾಯಾಃ
ಪಾದಾರವಿಂದಂ ಮುನಿವೃಂದವಂದ್ಯಂ ॥೩೬॥

ವಂದಾರುವೃಂದಾರಕವಂದಿತಾಯಾಃ
ಶೈಲಾಧಿರಾಜಪ್ರಿಯಕನ್ಯಕಾಯಾಃ ।
ಪಾದಾರವಿಂದಂ ಮುದಮಾತನೋತು
ಶ್ರಿಯಂ ತನೋತು ಸ್ವತ ಏವ ದೃಷ್ಟಂ ॥೩೭॥

ಇತೀರಿತಂ ತದ್ವಚನಂ ಕುಮಾರಃ
ಶ್ರುತ್ವಾ ಪ್ರಹೃಷ್ಟಸ್ತು ಗಣೇಶಯುಕ್ತಃ ।

ಕುಮಾರಸ್ವಾಮಿಯೂ ಸಹ ಮಾತೆಯಾದ ದೇವಿಯ ಪಾದಪದ್ಮವನ್ನು ಅವಲೋಕಿಸಬೇಕೆಂಬ ಕುತೂಹಲದಿಂದ ಇಲ್ಲಿಗೆ ಬಂದಿರುವನು. ಇದೇ ನಿನಗೆ ಶುಭಶಕುನ. ಇದರಿಂದ ನಿನಗೆ ಹಿಂದೆಂದೂ ಉಂಟಾಗದಿರುವ ಮಂಗಳವು ಈ ದಿವಸ ಉಂಟಾಗುವುದೆಂದು ತಿಳಿಯುತ್ತೇನೆ. ॥೩೫॥

ಲಕ್ಷ್ಮಿಯೇ ಮೊದಲಾದ ಅನೇಕ ಶ್ರೇಷ್ಠರಾದ ದೇವತಾಸ್ತ್ರೀಯರೂ ಸಹ ನನ್ನ ಪ್ರೇಯಸಿಯ ಪಾದಯುಗ್ಮಗಳನ್ನು ಸದಾ ಸೇವಿಸುತ್ತಿರುವರು. ಅಲ್ಲದೆ ಆ ಪಾದಪದ್ಮವು ಮುನಿಗಳಿಗೂ ವಂದನಾರ್ಹವಾಗಿರುವುದು. ॥೩೬॥

ನಮಸ್ಕರಿಸುತ್ತಿರುವ ದೇವತೆಗಳಿಂದ ಸದಾ ವಂದಿತಳಾದ ಪರ್ವತರಾಜ ಪುತ್ರಿಯ ಪಾದಪದ್ಮವು, ಭಕ್ತರಿಗೆ ದರ್ಶನವನ್ನಿತ್ತು ಅತಿಶಯವಾದ ಆನಂದವನ್ನೂ ಮತ್ತು ಸಕಲ ಸಂಪತ್ತುಗಳನ್ನೂ ಉಂಟುಮಾಡಲಿ. ॥೩೭॥

ಈಶ್ವರನ ಈ ಮಾತನ್ನು ಕೇಳಿ ಷಣ್ಮುಖನು ಸಂತೋಷಗೊಂಡು ಗಣೇಶ

ಯಯೌ ವಿಮಾನೋತ್ತಮರತ್ನಸಿಂಹ
ಸಿಂಹಾಸನಾಧಿಷ್ಠಿತ ಏವ ತುಷ್ಟಃ ॥೩೮॥

ತತಃ ಪರಂ ದುಂದುಭಯೋ ವಿನೇದುಃ
ವವೃಶ್ಚ ವಾತಾ ಸುಖಹೇತವಶ್ಚ ।
ಮಂದಾರಕುಂದಾದಿಮರಂದಮಂದಾಃ
ಸುಪುಷ್ಪವೃಷ್ಟ್ಯದ್ಭುತಪುಷ್ಪರೂಪಾಃ ॥೩೯॥

ತತೋ ವಿಮಾನಾಗ್ರಪತಾಕಭಾಗಾನ್
ತನ್ಮಂದವಾತಪ್ರವರಾಲ್ಪಕಂಪಾನ್ ।
ದದರ್ಶ ತತ್ರಾಭಯಪಾನಿವಾಂಬಾ
ನಾಟ್ಯಾಂಗನಾಮಂಡಲಮಂಬರಾಂತೇ ॥೪೦॥

ಆಚೂತಮೂಲಾಮಲರತ್ನರಾಜ—
ವಿರಾಜಿತೇ ಯಾನವರೇ ಕುಮಾರಂ ।

ನೊಂದಿಗೆ ದಿವ್ಯವಿಮಾನವನ್ನೇರಿ, ಅಲ್ಲಿ ರತ್ನ ಖಚಿತವಾದ ಸಿಂಹಗಳಿಂದ ಅಲಂಕೃತ ವಾದ ಶ್ರೇಷ್ಠ ಸಿಂಹಾಸನದಲ್ಲಿ ಮಂಡಿಸಿದನು. ॥೩೮॥

ಬಳಿಕ ದೇವದುಂದುಭಿಗಳು ಮೊರೆದವು. ಗಾಳಿಯು ಮೆಲ್ಲಮೆಲ್ಲನೆ ಬೀಸುತ್ತಾ ಸುಖಸ್ಪರ್ಶನವನ್ನುಂಟುಮಾಡಿತು. ಎಲ್ಲೆಡೆಯಲ್ಲಿಯೂ ಪುಷ್ಪವೃಷ್ಟಿಯುಂಟಾಯಿತು. ಆಗ ಮಂದಾರ, ಮಾಗಿಮಲ್ಲಿಗೆ ಮುಂತಾದ ಪುಷ್ಪಗಳು ತಮ್ಮ ಮಕರಂದಗಳನ್ನು ಸ್ವೇಚ್ಛೆಯಾಗಿ ಸುರಿಸಿದುವು. ॥೩೯॥

ತರುವಾಯ ಮೆಲ್ಲನೆ ಬೀಸುತ್ತಿರುವ ಗಾಳಿಯಿಂದ ವಿಮಾನದ ತುದಿಯಲ್ಲಿದ್ದ ಪತಾಕೆಗಳು ಅಭಯಪ್ರದಾನ ಮಾಡುವುವೋ ಎಂಬಂತೆ ತೋರುತ್ತಿದ್ದವು. ನಾಟ್ಯವನ್ನಭಿನಯಿಸುತ್ತಲಿರುವ ಸ್ತ್ರೀಯರ ವೇಷಭೂಷಾದಿಗಳನ್ನು ನೋಡುತ್ತಿದ್ದ ಪಾರ್ವತಿಯು ಆ ವಿಮಾನದ ಪತಾಕೆಗಳನ್ನು ದೂರದಿಂದಲೇ ನೋಡಿದಳು.॥೪೦॥

ಮಾವಿನ ಚಿಗುರಿನಂತೆ ಕೆಂಪಾಗಿಯೂ, ಮತ್ತು ರಮಣೀಯವಾಗಿಯೂ ಇರುವ ರತ್ನಗಳಿಂದ ಶೋಭಿಸುತ್ತಿದ್ದ ವಿಮಾನದಲ್ಲಿ ಕುಳಿತುಕೊಂಡಿರುವವರು ಷಣ್ಮುಖ ಮತ್ತು ಗಣಪತಿಯೆಂದೇ ಪಾರ್ವತಿಯು ನಿರ್ಧರಿಸಿದಳು. ಮತ್ತು

ಗಣೇಶ್ವರಂ ಚಾಚಲರಾಜಕನ್ಯಾ
ಮನ್ಯೇ ಸುತಂ ಲೋಚನಗೋಚರಂ ತಂ ॥೪೧॥

ಅಯಂ ಕುಮಾರೋ ಮಮ ಷಣ್ಮುಖೋಽಸೌ
ಗಜಾನನೋಽಯಂ ಗಣನಾಯಕೋಽಯಂ ।
ಇತಿ ಪ್ರಹೃಷ್ಟಾ ಗಿರಿರಾಜಕನ್ಯಾ
ವಚೋಽವಿದಂ ವಾಚಮುದೀರಯಂತೀ ॥೪೨॥

ದದರ್ಶ ದೂರೇಣ ಗಜಾನನೋಽಸೌ
ಕುಮಾರಮಾಲೋಕ್ಯ ಮುಹುಃ ಪ್ರಹೃಷ್ಟಃ ।
ಇಯಂ ಭವಾನೀತಿ ವದನ್ ಕುಮಾರಂ
ಪ್ರಿಯಂ ಕುಮಾರಂ ದೃಢಮಾಲಿಲಿಂಗ ॥೪೩॥

ಪಶ್ಯಾದರೇಣಾದ್ಯ ಕುಮಾರ ಗೌರೀಂ
ಮಹೇಶ್ವರೀಂ ಶ್ರೀಚರಣಾರವಿಂದಂ ।
ದ್ರಷ್ಟುಂ ಪ್ರವೃತ್ತಾಪಿ ನ ಸಾ ನಿವೃತ್ತಾ
ವಿಶ್ವಾನಿ ದೇವೀ ಭುವನಾನಿ ಚಷ್ಟೇ ॥೪೪॥

ಸಂತೋಷಭರಿತಳಾಗಿ ಹೀಗೆಂದಳು. "ವಿಮಾನದಲ್ಲಿ ಕುಳಿತಿರುವ ಈ ಬಾಲಕನು ನನ್ನ ಪ್ರಿಯಪುತ್ರನಾದ ಷಣ್ಮುಖನಾಗಿರುವನು. ಅವನೊಂದಿಗೆ ಕುಳಿತಿರುವ ಮತ್ತೊಬ್ಬ ಬಾಲಕನೇ ಗಣಪತಿ." ಹೀಗೆಂದು ದೇವಿಯು ಯೋಚಿಸಿ ಬಹಳ ಸಂತೋಷಪಟ್ಟಳು. ॥೪೧-೪೨॥

ವಿಮಾನದಲ್ಲಿ ಕುಳಿತಿದ್ದ ಗಣೇಶನು, ಜನನಿಯಾದ ಗೌರಿಯನ್ನು ದೂರದಿಂದಲೇ ನೋಡಿ, ಕುಮಾರಸ್ವಾಮಿಯನ್ನು ಕುರಿತು "ಷಣ್ಮುಖನೇ! ಇಗೋ ಇತ್ತ ನೋಡು, ದೂರದಲ್ಲಿ ಕಾಣಿಸುವವಳೇ ನಮ್ಮ ಜನನಿಯಾದ ಗೌರಿ" ಎಂದು ಹೇಳಿ ಗಣೇಶನು ಕುಮಾರಸ್ವಾಮಿಯನ್ನು ಬಿಗಿಯಾಗಿ ಅಪ್ಪಿಕೊಂಡನು. ॥೪೩॥

ಬಳಿಕ ಗಣೇಶನು ಕುಮಾರಸ್ವಾಮಿಯನ್ನು ಕುರಿತು, ಹೀಗೆಂದು ಹೇಳುವನು. "ಎಲೈ ಕುಮಾರನೇ! ಇದೀಗ ಆದರಭಾವನೆಯಿಂದ ಗೌರಿಯನ್ನು ಮತ್ತೆ ನೋಡು. ದೇವಿಯ ಮಂಗಳಕರವಾದ ಪಾದಪದ್ಮವನ್ನು ನೋಡುತ್ತಾ ಇರು.

ಸೇಯಂ ಗೌರೀ ನಾಟ್ಯನಾರೀಗಣಾನಾಂ
ಕೃತ್ವಾವಜ್ಞಾಂ ಸಂಜ್ಞಯಾ ಸಾದರಂ ಮಾಂ ।
ದೃಷ್ಟ್ವಾ ಹೃಷ್ಟಾ ತ್ವನ್ಮುಖಾಂಭೋಜಮಾತಾ
ದೇವಂ ದೇವಂ ರಾಧಸೇ ಚೋದಯಂತೀ ॥೪೫॥

ಸೇಯಂ ಮಾತಾ ಸಚ್ಚಿದಾನಂದಭೂತಾ
ಗೀತಾ ಸೇಯಂ ವೇದವೇದಾಂತವೃಂದೇ ।
ಮಂದಂ ಮಂದಂ ಸ್ವಾಚರಂತೀ ಚ ವಾಚಾಂ
ಸೇಯಂ ನೇತ್ರೀ ರಾಧಸಃ ಸೂನೃತಾನಾಂ ॥೪೬॥

ಇತ್ಯುಕ್ತ್ವಾ ತೌ ತದ್ವಿಮಾನ್ಮನೋಜ್ಞಾತ್
ಅತ್ಯುತ್ತುಂಗಾದಾಗತೌ ತಾಂ ಭವಾನೀಂ ।
ನತ್ವಾ ದೂರಾತ್ತತ್ಪದಾಂಭೋಜಯುಗ್ಮಂ
ಭೂಯೋ ನತ್ವಾಪ್ಯಂಬಿಕಾಲಿಂಗಿತೌ ಚ ॥೪೭॥

ಜಗನ್ಮಾತೆಯಾದ ದೇವಿಯು ಈ ನಿಖಿಲಪ್ರಪಂಚವನ್ನು ನೋಡುತ್ತಲೇ, ಮತ್ತೂ ಮತ್ತೂ ಹೊಸಸೃಷ್ಟಿಯಿಂದ ಜಗತ್ತನ್ನು ಹೆಚ್ಚಿಸುವಂತಿದೆ. ||೪೪||

ನನ್ನ ಮಾತೆಯು ನನ್ನನ್ನು ನೋಡಿದೊಡನೆ ನಾಟ್ಯವಾಡುವ ಸ್ತ್ರೀಯರ ನಾಟ್ಯವನ್ನು ಸಂಜ್ಞೆಯಿಂದ ನಿಲ್ಲಿಸಿ, ನಿನ್ನ ಮುಖಕಮಲವನ್ನೂ ನನ್ನನ್ನೂ ಪದೇ ಪದೇ ನೋಡಿ ತುಷ್ಟಳಾಗುತ್ತಿರುವಳು. ಮತ್ತು ನಮ್ಮನ್ನು ಅನುಗ್ರಹಿಸುತ್ತಲೂ ಇರುವಳು. ||೪೫||

ಜನನಿಯಾದ ಈ ಗೌರಿಯು ಸಚ್ಚಿದಾನಂದಸ್ವರೂಪಳಾಗಿರುವಳು. ನಿಖಿಲ ವೇದಗಳೂ ಮತ್ತು ಉಪನಿಷತ್ತುಗಳೂ ಸಹ ದೇವಿಯ ಸ್ವರೂಪವನ್ನೇ ವಿವರಿಸುತ್ತಲಿವೆ. ಮೆಲ್ಲಮೆಲ್ಲನೆ ರಮಣೀಯವಾದ ಮಾತುಗಳನ್ನು ಆಡುತ್ತಿರುವ ಆ ದೇವಿಯು, ನಮಗೆ ಸಕಲ ಸನ್ಮಂಗಳಗಳನ್ನೂ, ಮತ್ತು ಸೂಕ್ತಿಗಳನ್ನೂ ಒದಗಿಸುತ್ತಿರುವಳು.” ||೪೬||

ಅವರು ಪರಸ್ಪರವಾಗಿ ಆ ದೇವಿಯನ್ನು ಪ್ರಶಂಸಿಸಿ, ಸುಂದರವಾದ ಮತ್ತು ಉನ್ನತವಾದ ವಿಮಾನದಿಂದ ಕೆಳಗಿಳಿದು, ಗೌರಿಯ ಬಳಿಗೆ ಬಂದರು. ಬಳಿಕ

ಗಣಾಶ್ಚ ಸರ್ವೇ ನನೃತುರ್ಗಣೇಶಃ
ಸಮಾಗತಃ ಷಣ್ಮುಖಸಂಯುತೋಽಯಂ ।
ಅತಃ ಪರಂ ಶಂಕರದರ್ಶನಾಯ
ಗೌರೀ ಗಮಿಷ್ಯತ್ಯವಿಲಂಬಹೇತೋಃ ॥೪೮॥

ತತಃ ಕುಚಪ್ರಸ್ನುತತತ್ಪಯೋಭಿಃ
ಸ್ನೇಹಸ್ವರೂಪೈರಭಿಷಿಂಚಮಾನೌ ।
ಮುದಂ ಪರಾಂ ಪ್ರಾಪತುರಂಬಿಕಾಯಾಃ
ತೌ ತತ್ಪದಾಂಭೋಜವಿಲೋಕನೇನ ॥೪೯॥

ಅಸ್ಮಾಕಮಪ್ಯದ್ಯ ಶಿವಾಧವಸ್ಯ
ಪಾದಾರವಿಂದಂ ಸುರವೃಂದವಂದ್ಯಂ ।
ವಂದ್ಯಂ ಮುಕುಂದಾಕ್ಷಿಸರೋಜಪೂಜ್ಯಂ
ಭಾಗ್ಯೈರನಂತೈರ್ವಿವಿಧೈರಪಾರೈಃ ॥೫೦॥

ದೂರದಿಂದಲೇ ಬಾರಿಬಾರಿಗೂ ಅಂಬಿಕೆಯ ಚರಣಕಮಲಗಳನ್ನು ಸ್ತುತಿಸಿದರು. ಹೀಗೆ ಸ್ತುತಿಸಿದ ಅವರನ್ನು ದೇವಿಯು ಅತ್ಯಾದರದಿಂದ ಆಲಿಂಗಿಸಿದಳು. ||೪೭||

ಗಣೇಶನು ಷಣ್ಮುಖನೊಂದಿಗೆ ದೇವಿಯ ಬಳಿಗೆ ಬಂದನು. ಇನ್ನು ಮುಂದೆ ಗಿರಿಜೆಯು ಶೀಘ್ರವಾಗಿಯೇ ಶಿವನ ದರ್ಶನಕ್ಕಾಗಿ ಹೋಗುವಳು. ಇನ್ನು ತಡವಾಗುವುದಿಲ್ಲ ಎಂದು ಹೇಳುತ್ತಾ ಗಣಗಳೆಲ್ಲವೂ ನರ್ತನಮಾಡಿದುವು. ||೪೮||

ಅನಂತರ ದೇವಿಗೆ ಪುತ್ರರಲ್ಲಿರುವ ಪ್ರೀತಿಯನ್ನು ಸೂಚಿಸುತ್ತಿರುವುವೋ, ಎಂಬಂತೆ, ಅವಳ ಸ್ತನಗಳಿಂದ ಸ್ತನ್ಯವು ಉಕ್ಕಿ ಹೊರಹೊಮ್ಮಿತು. ಅದು ಗಣಪತಿ ಮತ್ತು ಕುಮಾರಸ್ವಾಮಿಯ ಶರೀರದ ಮೇಲೆ ಸೇಚಿಸುತ್ತಿರುವುದೋ ಎಂಬಂತಿತ್ತು. ಈ ರೀತಿ ಕುಮಾರಸ್ವಾಮಿಯೂ ಮತ್ತು ಗಣೇಶನೂ, ಸಂತೋಷದಿಂದ ಗೌರಿಯ ಪಾದಕಮಲಗಳನ್ನು ನೋಡುತ್ತಾ ಆನಂದಭರಿತರಾದರು. ||೪೯||

ಆಗ ಗಣಗಳು ಪರಸ್ಪರವಾಗಿ ಹೀಗೆಂದು ಮಾತನಾಡಿಕೊಂಡವು. ದೇವತೆಗಳಿಂದಲೂ ವಂದಿಸಲ್ಪಡುತ್ತಿರುವ ಶಿವನ ಪಾದಕಮಲವು ನಮಗೂ ಈಗ ದರ್ಶನಲಾಭವನ್ನೀಯುವುದು. ಶ್ರೀಮನ್ನಾರಾಯಣನು ಸಹ ಅದನ್ನು ಪೂಜಿಸಿ

ಜಾತಾಸ್ತಾವದ್ಬ್ರಹ್ಮಕಲ್ಪಾಶ್ಚ ಶಾಂತಾ
ಸ್ತೇಷಾಮಂತಸ್ತಾವದದ್ಯಾಪ್ಯದೃಷ್ಟಃ
ನಾಟ್ಯಾನಂದೇನೈವ ಕಾಲೋ ಭವಾನ್ಯಾ
ನೀತಸ್ತಾವಚ್ಚಿತ್ರಮತ್ರಾಪಿ ಕಿಂ ವಾ ॥೫೧॥

ಗೌರೀನೇತ್ರೋನ್ಮಿಲನೇ ಮೀಲನೇ ವಾ
ಕಲ್ಪಾಸ್ತಾವತ್ಕೋಟಿಶಃ ಸಂಭವಂತಿ ।
ಜಾತಾಸ್ತಾವನ್ನಾಶಮಂತೇ ಪ್ರಯಾಂತಿ
ಪ್ರಾಯಃ ಸೇಯಂ ಶಂಕರಸ್ಯೈವ ಲೀಲಾ ॥೫೨॥

ಅಸ್ಮಾಕಂ ವಾ ನಾಪರಾಧೋ ಭವಾನೀ
ಲೀಲಾನಾಟ್ಯಾಲೋಕನಾಯ ಪ್ರವೃತ್ತಾ ।
ತಸ್ಯಾಶ್ಚಿತ್ತಂ ಕಿಂ ಪರಾಧೀನಮಂಬಾ
ನಿತ್ಯಾನಂದಾ ಸರ್ವತಂತ್ರಸ್ವತಂತ್ರಾ ॥೫೩॥

ಧನ್ಯನಾಗಿರುವನು. ನಾನಾವಿಧವಾದ ಸುಕೃತವಿಶೇಷಗಳಿಂದಲೇ, ಶಿವನ ಆ ಪಾದಪದ್ಮವನ್ನು ನಮಸ್ಕರಿಸುವ ಸುಯೋಗವು ನಮಗೆ ಲಭಿಸಿರುವುದೆಂದು ಭಾವಿಸುತ್ತೇವೆ. ||೫೦||

ಇದುವರೆಗೆ ಅನೇಕ ಬ್ರಹ್ಮಕಲ್ಪಗಳು ಉತ್ಪತ್ತಿಯಾಗಿ ನಾಶಹೊಂದಿದವು. ಅವುಗಳ ಕೊನೆಯನ್ನು ಇದುವರೆಗೂ ತಿಳಿಯಲಾಗಲಿಲ್ಲ. ಗೌರಿಯು ಮಾತ್ರ ನಾಟ್ಯದಿಂದುಂಟಾದ ಆನಂದದ ಅನುಭವದಿಂದಲೇ ಅಷ್ಟು ದೀರ್ಘವಾದ ಆ ಕಾಲವನ್ನೆಲ್ಲಾ ಕಳೆದಳು. ಇದು ಆಶ್ಚರ್ಯವಲ್ಲವೆ! ||೫೧||

ಗಿರಿಜೆಯು ಒಮ್ಮೆ ತನ್ನ ನಯನವನ್ನು ತೆರೆದು ಮುಚ್ಚುವುದರೊಳಗೆ ಅಸಂಖ್ಯಾತವಾದ ಕಲ್ಪಗಳು, ಆವಿರ್ಭವಿಸುವುವು. ಹೀಗೆ ಸಂಭವಿಸಿದ ಆ ಕಲ್ಪಗಳು ಪ್ರಲಯಕಾಲದಲ್ಲಿ ಲಯವನ್ನೈದುವುವು. ಇದು ನಿಜವಾಗಿಯೂ ಈಶ್ವರನ ಲೀಲಾ ಮಹಿಮೆಯೇ ಎಂದು ಹೇಳಬಹುದು. ||೫೨||

ಶಿವನ ಅರ್ಧಾಂಗಿಯಾದ ಗಿರಿಜೆಯು, ಶಿವನ ಲೀಲೆಯಿಂದ ನಿರ್ಮಿತವಾದ ಆ ನರ್ತನವನ್ನು ನೋಡುವುದರಲ್ಲಿ ಉದ್ಯುಕ್ತಳಾದಳು. ಇದರಲ್ಲಿ ನಮ್ಮ ಅಪರಾಧ ವೇನಿರುವುದು? ದೇವಿಯ ಮನಸ್ಸು ಪರರಿಗೆ ಎಂದೂ ಅಧೀನವಾಗುವುದಲ್ಲ.

ಅತ್ರಾಸ್ಮಾಕಂ ವಿಶ್ವನಾಥಾನುಗಾನಾಂ
ವೃತ್ತ್ಯಾ ತಾವನ್ನಾಪರಾಧಾಭಿಮಾನಃ।
ವೃತ್ತಿರ್ಯೇಯಂ ಶಂಕರಸ್ಯೈವ ಸೇವಾ
ಗೌರೀಮೋಂವಾಪ್ಯತ್ರ ಕುತ್ರಾಪರಾಧಃ ॥೫೪॥

ಅಸ್ಮದ್ಭಾಗ್ಯಾದಾಗತೋಽಯಂ ಕುಮಾರಃ
ತೇನೈವೇಯಂ ನಾಟ್ಯವಾರ್ತಾ ಗತೈವ।
ಅಂಬಾ ತಾವತ್ತತ್ಕುಮಾರಸ್ಯ ವಾರ್ತಾಂ
ಶ್ರುತ್ವಾ ತಾವದ್ಯಾಸ್ಯತಿ ಶ್ರೀಮಹೇಶಂ ॥೫೫॥

ಏವಂ ತೇಽಪಿ ಪರಸ್ಪರಂ ಶಿವಕಥಾವಾರ್ತಾಂ ವದಂತಃ ಪರಂ
ಪ್ರಾಪ್ಯಾನಂದಮನಂತಮಿಂದುಶಕಲಾಲಂಕಾರವಾರ್ತಾರಸೈಃ।
ಸ್ಕಂದಾಲೋಕನವಂದನಾದಿವಿವಿಧಾನಂದೋನ್ಮುಖಾಸ್ತೇ ಸುಖಂ
ನಂದೀಶಪ್ರಮುಖಾಃ ಪರಸ್ಪರಮುಖಾವಿರ್ಭೂತವಾಗುನ್ಮುಖಾಃ ॥೫೬॥

ಜಗಜ್ಜನನಿಯಾದ ಆ ದೇವಿಯು ನಿತ್ಯತೃಪ್ತಳು. ಮತ್ತು ಸಕಲ ಕಾರ್ಯಗಳಲ್ಲಿ ಸ್ವತಂತ್ರಳೂ ಅಲ್ಲವೆ! ॥೫೩॥

ಜಗದೊಡೆಯನೆನಿಸಿದ ಪರಶಿವನ ಭಕ್ತರಾದ ನಮಗೆ ಅವನ ವರ್ತನೆಯನ್ನು ಅನುಸರಿಸುವುದೇ ಮುಖ್ಯಕರ್ತವ್ಯ. ಆದ್ದರಿಂದ ನಾವು ಅಪರಾಧಿಗಳೆಂಬ ಭಾವನೆಯು ಎಂದೂ ಬರುವುದಿಲ್ಲ. ಶಂಕರನ ಈ ಲೀಲೆಯು ದೇವಿಯಾದ ಗೌರಿಯನ್ನು ತೃಪ್ತಿಪಡಿಸಬೇಕೆಂದು ಮುಂದುವರಿದಿದ್ದಿತು. ಆದುದರಿಂದ ಇದರಲ್ಲಿ ನಮ್ಮ ಅಪರಾಧವೆಂದಿಗೂ ತೋರುವುದಿಲ್ಲ. ॥೫೪॥

ನಮ್ಮ ಪುಣ್ಯವಿಶೇಷದಿಂದ ಕುಮಾರಸ್ವಾಮಿಯು ಇಲ್ಲಿಗೆ ಈಗ ಬಂದಿರುವನು. ಅವನ ಬರುವಿಕೆಯಿಂದಲೇ, ಸ್ತ್ರೀಯರ ನಾಟ್ಯವು ಕೊನೆಗಂಡಿತು. ಅಂಬಿಕೆಯು, ತನ್ನ ಪುತ್ರನು ಈಶ್ವರನಿಂದ ತಂದ ವೃತ್ತಾಂತವನ್ನು ಕೇಳಿ ಅವನನ್ನು ಸಂದರ್ಶಿಸಲು ಮುಂದೆ ಪ್ರಯಾಣ ಬೆಳೆಸುವಳು. ॥೫೫॥

ನಂದಿಕೇಶ್ವರನೇ ಮೊದಲಾದ ಗಣಗಳು ಹೀಗೆ ಅನ್ಯೋನ್ಯವಾಗಿ, ಶಿವನ ಚರಿತ್ರೆಯನ್ನಧಿಕರಿಸಿ ಮಾತನಾಡುತ್ತಾ, ಚಂದ್ರಶೇಖರನಾದ ಶಿವನ ಕಥಾಮೃತ

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಸ್ಕಂದಕೃತ ಶಿವಸ್ತುತಿಃ ಸ್ಕಂದಗಣೇಶೌಪಾರ್ವತೀಂ ಪ್ರತ್ಯಾಗಮನವರ್ಣನಂ ನಾಮ ಚತುರ್ದಶೋಽಧ್ಯಾಯಃ

ದಿಂದ ಆನಂದಪರವಶರಾದರು. ಬಳಿಕ ಷಣ್ಮುಖನನ್ನು ನೋಡಿ ಅವನನ್ನು ವಂದಿಸಿ ಅತ್ಯಾನಂದಭರಿತರಾಗಿ ಸುಖವನ್ನನುಭವಿಸಿದರು. ||೫೬||

ಇಲ್ಲಿಗೆ ಶ್ರೀ ಶಿವರಹಸ್ಯದ ಮೂರನೆಯ ಅಂಶದಲ್ಲಿ ಮೊದಲನೆಯ ಭಾಗದಲ್ಲಿ "ಷಣ್ಮುಖನಿಂದ ಮಾಡಲ್ಪಟ್ಟ ಈಶ್ವರಸ್ತೋತ್ರ ಮತ್ತು ಷಣ್ಮುಖನೂ ಗಣೇಶನೂ ಇವರಿಬ್ಬರು ಪಾರ್ವತಿಯ ಬಳಿಗೆ ಬಂದುದು" ಎಂಬ ವಿಷಯಸೂಚಕವಾದ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಪಂಚದಶೋऽಧ್ಯಾಯಃ

॥ ವ್ಯಾಸ ಉವಾಚ ॥

ತತಃ ಪರಮುಮಾಕಾಂತಂ ಸ್ಮೃತ್ವಾ ಸಾ ಗಿರಿಕನ್ಯಕಾ ।
ಆನಂದಜಲಧಾರಾಭಿರಾಕ್ರಾಂತಾ ಪ್ರಾಹ ತಂ ಸುತಂ ॥೧॥

ಕುಮಾರ ಶಂಕರಃ ಕ್ವಾಸ್ತಿ ಶಂಕರಃ ಕುಶಲೀ ಖಲು ।
ಅದ್ಯ ದೃಷ್ಟಃ ಕಿಮೀಶಾನಃ ಸರ್ವೇಶೋ ಲೋಕಶಂಕರಃ ॥೨॥

ಅದ್ಯೈವ ಪ್ರೇಷಿತಸ್ತೇನ ಮಹೇಶೇನ ಭವಾನಪಿ ।
ಯದ್ವಾ ಪೂರ್ವದಿನೇ ಯದ್ವಾ ಪ್ರೇಷಿತೋऽಸಿ ದಿನಾಂತರೇ ॥೩॥

ಹದಿನೈದನೆಯ ಅಧ್ಯಾಯ

ಬಳಿಕ ವ್ಯಾಸನು ಮುನಿಗಳನ್ನು ಕುರಿತು ಇಂತೆಂದನು—ಮುನಿವರ್ಯರೇ, ತರುವಾಯ ಗಿರಿಜೆಯು, ಪರಮೇಶ್ವರನನ್ನು ಸ್ಮರಿಸಿ, ಆನಂದಬಾಷ್ಪಗಳಿಂದ ಕೂಡಿದವಳಾಗಿ ಮಗನಾದ ಕುಮಾರಸ್ವಾಮಿಯನ್ನು ಕುರಿತು ಹೀಗೆ ಪ್ರಶ್ನಿಸಿದಳು. ॥೧॥

“ ಎಲೈ ಕುಮಾರನೇ, ಶಿವನು ಎಲ್ಲಿರುವನು ? ಮಹೇಶ್ವರನು ಕುಶಲಿಯಾಗಿ ರುವನಷ್ಟೇ ! ಸರ್ವಜ್ಞನೂ ಲೋಕಕಲ್ಯಾಣಕರನೂ ಆದ ಆ ಶಿವನನ್ನು ಈ ದಿವಸ ನೀನು ನೋಡಿದೆಯಾ ? ॥೨॥

ಆ ಪರಮೇಶ್ವರನು ನಿನ್ನನ್ನು ಈ ದಿವಸವೇ ಇಲ್ಲಿಗೆ ಕಳುಹಿಸಿದನೋ ಅಥವಾ ನಿನ್ನೆ ಮೊನ್ನೆಯೇ ಇಲ್ಲಿಗೆ ಹೋಗುವಂತೆ ಆಜ್ಞಾಪಿಸಿದ್ದನೋ ! ॥೩॥

ಶಂಕರಾಯೋಪಹಾರೋಽಪಿ ಕೇನ ವಾ ಪರಿಕಲ್ಪ್ಯತೇ ।
ಕೇನಾನುಲೇಪನಾದೀನಿ ದೀಯಂತೇ ಮೋದಹೇತವಃ ॥೪॥

ಕೇನ ಕಾಲಾಪನಯನಂ ಕಾಲಕಾಲಸ್ಯ ತಸ್ಯ ವಾ ।
ವಿಲಾಸನಿಲಯಾಃ ಕೇ ವಾ ಕೇ ವಾ ತನ್ನಿಲಯಾಲಯಾಃ ॥೫॥

ಕೃತಃ ಕಿಂ ಮದ್ವಿಚಾರೋಽಪಿ ಕ್ವಾಸ್ತಿ ಕಿಂ ವಾ ಕರೋತಿ ವಾ ।
ಇತಿ ಮದ್ವಿಷಯಾ ಚಿಂತಾ ಕಿಂ ಮಹೇಶಸ್ಯ ವರ್ತತೇ ॥೬॥

ಇತಿ ಗೌರೀವಚಃ ಶ್ರುತ್ವಾ ಕುಮಾರಶ್ಚತುರಃ ಪರಂ ।
ಧೀರೋ ಗಂಭೀರವಚನಮುವಾಚ ವಿನಯಾನ್ವಿತಃ ॥೭॥

॥ ಕುಮಾರ ಉವಾಚ ॥

ಶಂಕರಃ ಶಂಕರೋ ನಿತ್ಯಂ ಪರಮಾನಂದಸಾಗರಃ ।
ಮಹೇಶಾನಂದಲೇಶೇನ ಸಾನಂದಾಃ ಸಾಮರಾ ವಯಂ ॥೮॥

ಶಿವನಿಗೆ ಉಪಹಾರವನ್ನು ಸಿದ್ಧಪಡಿಸುವವರಾರು ? ಅಂಗಗಳಿಗೆ ಲೇಪಿಸುವ ಆನಂದಜನಕವಾದ ಸುಗಂಧದ್ರವ್ಯಗಳನ್ನು ಯಾರು ಸಮರ್ಪಿಸುತ್ತಿದ್ದರು ? ॥೪॥

ಮೃತ್ಯುಂಜಯನಾದ ಅವನು ಯಾರೊಂದಿಗೆ ಕಾಲವನ್ನು ಕಳೆಯುತ್ತಿರುವನು ? ಅವನಿಗೆ ವಿಲಾಸಾಸ್ಪದವಾದ ವಸ್ತುಗಳಾವುವು ? ಮತ್ತು ಅವನು ವಾಸಿಸುತ್ತಿದ್ದ ಸ್ಥಳಗಳಾವುವು ? ॥೫॥

ಅವನು ನನ್ನನ್ನು ವಿಚಾರಿಸುತ್ತಿದ್ದನೇ ? ಪ್ರೇಯಸಿಯು ಎಲ್ಲಿರುವಳು ? ಅವಳು ಏನನ್ನು ಮಾಡುತ್ತಿರುವಳು ? ಹೀಗೆಂದು ಎಂದಾದರೂ ನನ್ನ ವಿಷಯವನ್ನು ಕುರಿತು ಅವನು ಚಿಂತಿಸುತ್ತಿದ್ದನೇ ?" ॥೬॥

ಗಿರಿಜೆಯ ಈ ಮಾತನ್ನು ಕೇಳಿ ಧೀರನೂ ಗಂಭೀರನೂ ಮಾತುಗಳನ್ನಾಡುವುದರಲ್ಲಿ ಚತುರನೂ, ಆದ ಆ ಕುಮಾರಸ್ವಾಮಿಯು ನಮ್ರತೆಯಿಂದ ಕೂಡಿದವನಾಗಿ ತಾಯಿಯನ್ನು ಕುರಿತು ಇಂತೆಂದನು. ॥೭॥

"ಜನನಿಯೇ, ಲೋಕಕಲ್ಯಾಣಕರನಾದ ಆ ಶಿವನು, ಸದಾ ಆನಂದಾಬ್ಧಿಯಲ್ಲಿಯೇ ಮುಳುಗಿರುವನು. ಶಿವನ ಆನಂದದ ಒಂದು ಅಂಶದಿಂದಲೇ ದೇವತೆಗಳಾದ ನಾವೆಲ್ಲರೂ ಆನಂದವನ್ನನುಭವಿಸುತ್ತಿರುವೆವು. ॥೮॥

ಸಚ್ಚಿದಾನಂದರೂಪಸ್ಯ ಮಹಾದೇವಸ್ಯ ಶಾಂಭವಿ ।
ತ್ವಯಾ ವಿಜ್ಞಾಯತೇ ರೂಪಂ ತತಃ ಪ್ರಶ್ನಃ ಕಥಂ ಕೃತಃ ॥೯॥

ಚಮತ್ಕಾರಕರಂ ಗೌರಿ ವಚಸ್ತವ ಕಿಮೀದೃಶಂ ।
ವಚನಂ ವದನಾಂಭೋಜಾನ್ಮರಂದ ಇವ ನಿಃಸೃತಂ ॥೧೦॥

ಕಲ್ಪಾಂತೇ ಸಕಲಾಸುರಪ್ರಮಥನಂ ಕೃತ್ವಾ ಪುನಃ ಸಾದರಂ
ಸೃಷ್ಟ್ವಾನ್ಯಾನಸುರಾನಪಾರಮಹಿಮಾ ತಾನ್ ಪಾಲಯತ್ಯಂಬಿಕೇ ।
ಕಾಲಸ್ಯಾಪಿ ಸ ಕಾಲ ಏವ ಸ ಖಲು ಬ್ರಹ್ಮಾದಿಕಾನ್ ಸಂಹರನ್
ಅಂತೇ ಸಂತತಮಂತರಾಯರಹಿತಃ ಶಾಂತಃ ಕೃತಾಂತಾಂತಕಃ ॥೧೧॥

ತಸ್ಯೈಶ್ವರ್ಯಮನಂತಮಪ್ರತಿಹತಂ ತಸ್ಯೈವ ತದ್ಭೂತಯಃ
ಭೂತಾನಾಂ ನಿವಹಾಃ ಸ ಮೃತ್ಯುರಹಿತಃ ಮೃತ್ಯುಂಜಯಃ ಸಂತತಂ।
ಅಶ್ರಾಂತಶ್ರುತಿಗೀತಕೀರ್ತಿರಸಕೃದ್ವಿಜ್ಞಾನಮೂರ್ತಿಃ ಸ್ವತಃ
ತದ್ವೃತ್ತಿಃ ಖಲು ಶಾಂಭವೋತ್ತಮಮನಃಫುಲ್ಲಾರವಿಂದಾಂತರೇ ॥೧೨॥

ಭವಾನಿಯೇ, ಸಚ್ಚಿದಾನಂದಸ್ವರೂಪನಾದ ಆ ಶಿವನ ನಿಜಸ್ವರೂಪವನ್ನು ನೀನು ಚೆನ್ನಾಗಿ ಬಲ್ಲವಳಾಗಿರುವೆ. ಹೀಗಿದ್ದರೂ ನೀನು ನಮ್ಮನ್ನು ಕುರಿತು ಹೀಗೆ ಪ್ರಶ್ನಿಸುವುದು ಉಚಿತವೇ ? ||೯||

ಗಿರಿಜೆಯೇ, ನಿನ್ನ ಈ ಮಾತು ನನಗೆ ಆಶ್ಚರ್ಯವನ್ನುಂಟುಮಾಡುತ್ತಿರುವುದು. ನಿನ್ನ ಮುಖಕಮಲದಿಂದ ಮಕರಂದದಂತಿರುವ ಈ ವಚನವು ಹೇಗೆ ಹೊರಬಿದ್ದಿತು ? ||೧೦||

ಮೃತ್ಯುಂಜಯನಾದ ಆ ಶಿವನು ಪ್ರತಿ ಕಲ್ಪದ ಆರಂಭದಲ್ಲಿ ಲೋಕದಲ್ಲಿರುವ ಸಕಲ ಜಂತುಗಳನ್ನೂ ಮತ್ತು ದೇವತೆಗಳನ್ನೂ ಸೃಷ್ಟಿಸಿ, ಸ್ಥಿತಿಕಾಲದಲ್ಲಿ ಅವರನ್ನು ಕಾಪಾಡುವನು. ಬಳಿಕ ಅಂತಕನಿಗೂ ಅಂತಕನಾಗಿರುವ ಪರಶಿವನು ಲಯಕಾಲದಲ್ಲಿ ಬ್ರಹ್ಮಾದಿಸ್ತಂಭಪರ್ಯಂತವಾದ ಸಕಲ ಪ್ರಾಣಿಗಳನ್ನು ಸಂಹರಿಸಿ, ಯಾವ ಆತಂಕವೂ ಇಲ್ಲದಂತೆ ಸ್ವರೂಪಾನಂದವನ್ನು ಅನುಭವಿಸುವನು. ||೧೧||

ಆ ದೇವನ ಮಹಿಮೆಯು ಅಪಾರವೂ ಸ್ವತಂತ್ರವೂ ಆಗಿದೆ. ಬ್ರಹ್ಮಾದಿ ಸ್ತಂಭಪರ್ಯಂತವಾದ ಸಕಲ ಜೀವಜಂತುಗಳೂ ಅವನ ಅಂಶಗಳಾಗಿರುವುವು.

ಲೋಕೇ ಸಾಮರವೃತ್ತಯಃ ಕತಿ ಸುರಾಃ ಸಂಹಾರಕಾಲೇ ಹತಾಃ
ತೇನೇಶೇನ ವಿಹಾರ ಏವ ಸ ಜಗನ್ನಾಶೋ ಮಹೇಶಸ್ಯ ತು ।
ಯೇ ನಾರಾಯಣಪದ್ಮಜಪ್ರಭೃತಯಃ ಪಾರೇ ಪರಾರ್ಧಂ ಮುಹುಃ
ತಸ್ಯಾಂಬಾಽಕುಶಲಂ ಕುತಃ ಕುಶಲಿನಾಮಗ್ರೇಸರಃ ಶಂಕರಃ ॥೧೩॥

ಯತ್ಪಾದಾಬ್ಜರಜಃ ಪ್ರಸಾದವಿಭವಃ ಸ್ವರ್ಗಃ ಸುರಾರಾಧಿತಃ
ವೈಕುಂಠೋಽಪಿ ತದನ್ಯಲೋಕಕಲನಾಭ್ಯಾಸಃ ಪ್ರಯಾಸೋಽಪಿ ನಃ ।
ತಸ್ಯಾಪಾರಗುಣಾರ್ಣವಸ್ಯ ಕರುಣಾಸಿಂಧೋಃ ಸುಧಾದ್ಯರ್ಪಣಂ
ತತ್ತದ್ದೇವಿ ತವಾರ್ಪಣಂ ಕೃತಮಿತಿ ಜ್ಞೇಯಂ ಭವಾನಿ ತ್ವಯಾ ॥೧೪॥

ವೇದವೇದಾಂತಗಳು ನಾಶರಹಿತನಾದ ಆ ಪರಮೇಶ್ವರನ ಸ್ವರೂಪವನ್ನೇ ಬಾರಿ ಬಾರಿಗೂ ಬೋಧಿಸುತ್ತಲಿವೆ. ಜ್ಞಾನಸ್ವರೂಪನಾದ ಅವನು ಶ್ರೇಷ್ಠರಾದ ಶಿವಭಕ್ತರ ಪ್ರಸನ್ನವಾದ ಹೃದಯಕಮಲದಲ್ಲಿ ವಾಸವಾಗಿರುವನು. ||೧೨||

ಈ ಲೋಕದಲ್ಲಿ ತನಗಿಂತಲೂ ಪೂಜ್ಯನಾದ ಪರಮೇಶ್ವರನೊಬ್ಬನಿರುವನೆಂದು ತಿಳಿಯದೇ ಮೋಹಪಾಶಕ್ಕೆ ಒಳಗಾಗಿ, ಸದಾ ವಿಷಯಸುಖಗಳನ್ನನುಭವಿಸುವುದರಲ್ಲಿಯೇ ಆಸಕ್ತರಾದ ಅನೇಕ ದೇವತೆಗಳನ್ನು ಶಿವನು ಲಯಕಾಲದಲ್ಲಿ ಸಂಹರಿಸಿರುವನು. ಜಗತ್ಸಂಹಾರವೂ ಸಹ ಆ ಪರಶಿವನಿಗೆ ಒಂದು ಲೀಲೆಯಾಗಿರುವುದು. ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳಿಗೂ ಆ ದೇವದೇವನಿಗೂ ಅತಿಶಯ ವ್ಯತ್ಯಾಸವಿರುವುದು. ಎಲೌ ದೇವಿಯೇ, ಹೀಗಿರುವಾಗ ಆ ದೇವನಿಗೆ ಅಕುಶಲವೆಲ್ಲಿಂದ ಬರುವುದು? ಅವನು ಕುಶಲಿಗಳಲ್ಲಿ ಅಗ್ರೇಸರನಲ್ಲವೆ? ||೧೩||

ಯಾವ ದೇವನ ಪಾದಕಮಲದ ಧೂಳಿಯ ಮಹಿಮೆಯಿಂದುಂಟಾದ ಸ್ವರ್ಗಲೋಕವನ್ನು ದೇವತೆಗಳು ಸೇವಿಸುತ್ತಿರುವರೋ, ಮತ್ತು ಯಾವ ದೇವನ ಪಾದಧೂಳಿಯ ಅನುಗ್ರಹದಿಂದ ವಿಷ್ಣುವು ವೈಕುಂಠವನ್ನು ಆಶ್ರಯಿಸಿರುವನೋ ಅನೇಕ ಸದ್ಗುಣಗಳಿಗೆ ಆಕರನೂ ದಯಾಳುವೂ ಆದ ಆ ದೇವನಿಗೆ ಯಾರು ಯಾರು ಸುಧಾದಿಗಳನ್ನು ಅರ್ಪಿಸಿದರೂ, ಪರಶಿವನು ಅದೆಲ್ಲವನ್ನೂ ನಿನಗೆ ತೃಪ್ತಿಯಾಗಲಿ ಎಂಬ ಉದ್ದೇಶದಿಂದ ಸ್ವೀಕರಿಸುತ್ತಿದ್ದನು. ನಿನ್ನಲ್ಲಿ ಅಷ್ಟು ಅಭಿಮಾನವುಳ್ಳವನಾಗಿರುವನು ಎಂದು ನೀನು ಭಾವಿಸು. ||೧೪||

ಅನ್ಯಸ್ಯಾಸ್ತಿ ನ ಕೃತ್ಯಮತ್ರ ಗಿರಿಜೇ ಜಾತು ಪ್ರಜಾನಾಂ ಪ್ರತಿಃ
ಜಾತಸ್ತ್ವತ್ಪದಪದ್ಮರೇಣುಭಿರಯಂ ಜಾತೋಽಪಿ ನಾರಾಯಣಃ ।
ಜಾತಾ ಸಾ ಕಮಲಾ ವಿಧೇಶ್ಚ ರಮಣೀ ವಾಣೀ ತಥಾನ್ಯೇ ಶಿವೇ
ಜಾತಾಸ್ತಸ್ಯ ಮಹೇಶ್ವರಸ್ಯ ಮಹಿಮಾ ವೇದೈಶ್ಚ ನ ಜ್ಞಾಯತೇ ॥೧೫॥

ಅಜ್ಞಾನಾಂ ಪರಮಿಂದುಶೇಖರಕೃಪಾಶೂನ್ಯಾತ್ಮನಾಂ ಜಾಯತೇ
ತತ್ರಾನ್ಯಾಮರತುಲ್ಯತಾಮತಿರತಿಶ್ರಾಂತಾ ತದಂತಾಯ ಸಾ ।
ಅಂತೇನಾಪಿ ವಿನಾ ಕೃತಾಂತ ಇವ ಸಾ ತಾವದ್ದುರಂತಾ ಸತಾಂ
ಸಾ ತಾವನ್ನ ಭವತ್ಯನಂತಮಹಿಮಾ ಸೋಮಾವತಂಸಃ ಖಲು ॥೧೬॥

ಯಂ ದೇವೋತ್ತಮಮಾಮನಂತಿ ಬಹುಧಾ ವೇದಾಃ ಪರಂ ಯಂ ಪರಂ
ಮಾಯಾತೀತಮುಮಾಪತಿಂ ಪತಿಮಮುಂ ವಿಶ್ವಸ್ಯ ವಿಶ್ವಸ್ಯ ಚ ।
ವಿಶ್ವಸ್ಯ ತ್ರಿಪುರಾಂತಕಂ ತ್ರಿನಯನಂ ವೇದೈರ್ಮುನೀಂದ್ರಾದಯಃ
ಗಂಧರ್ವಾ ಅಪಿ ಕಿನ್ನರಾ ಅಪಿ ಸ ಮೇ ತಾತೋಽಸ್ಯ ಮಾತಃ ಶಿವೇ ॥೧೭॥

ಎಲೌ ಗೌರಿಯೇ, ಪ್ರಾಣಿಗಳನ್ನು ಸೃಷ್ಟಿಸುವುದರಲ್ಲಿ ಆ ದೇವನೇ ಮೂಲ ಕಾರಣನು. ಈಗ ಪ್ರಜಾಸೃಷ್ಟಿಕರ್ತನೆನಿಸಿದ ಬ್ರಹ್ಮನೂ, ಶ್ರೀಮನ್ನಾರಾಯಣನೂ ಲಕ್ಷ್ಮಿಯೂ, ಬ್ರಹ್ಮನ ಪತ್ನಿಯಾದ ಸರಸ್ವತಿಯೂ, ಮತ್ತು ಇನ್ನಿತರ ಸಕಲ ಪ್ರಾಣಿಗಳೂ ಸಹ ಆ ದೇವನ ಪಾದಕಮಲದ ಧೂಳಿಯಿಂದಲೇ ಜನಿಸಿದವರು. ಅವನ ಪ್ರಭಾವವನ್ನು ವೇದಗಳಿಂದ ಕೂಡ ತಿಳಿದುಕೊಳ್ಳಲು ಅಸಾಧ್ಯ. ॥೧೫॥

ಆ ಚಂದ್ರಶೇಖರನ ಕೃಪೆಗೆ ಪಾತ್ರರಾಗದಿರುವ ಅಜ್ಞಾನಿಗಳು ಅವನನ್ನು ಇತರ ಇಂದ್ರಾದಿದೇವತೆಗಳೊಂದಿಗೆ ಹೋಲಿಸುತ್ತಾರೆ. ಅಜ್ಞರಾದ ಅವರಿಗೆ ಅಂತಕನ ಭಯವಿಲ್ಲದಿದ್ದರೂ ಶಿವನನ್ನು ಇಂದ್ರಾದಿದೇವತೆಗಳಿಗೆ ಸಮಾನನೆಂದು ಭಾವಿಸುವ ಅವರ ಆ ದುರ್ಬುದ್ಧಿಯೇ ಅವರ ನಾಶಕ್ಕೆ ಕಾರಣವಾಗಿರುವುದು. ಆದರೆ ಸತ್ಪುರುಷರಿಗೆ ಮಾತ್ರ ಶಿವನಲ್ಲಿ ಆ ಭಾವನೆಯು ಎಂದಿಗೂ ಉಂಟಾಗುವುದಿಲ್ಲ. ಅಂತಹ ಚಂದ್ರಶೇಖರನಾದ ಆ ಶಿವನ ಮಹಿಮೆಯು ಅಪಾರವಾದುದಲ್ಲವೇ? ॥೧೬॥

ಯಾವ ದೇವೇಶನನ್ನು ವೇದಗಳು ಅನೇಕ ಪ್ರಕಾರವಾಗಿ ಸ್ತುತಿಸುವುವೋ, ಮತ್ತು ಗಿರಿಜಾಕಾಂತನೂ, ಅಜ್ಞಾನದ ಸಂಬಂಧದಿಂದ ದೂರನಾದವನೂ ತ್ರಿಪುರ

ಯಲ್ಲಿಂಗಾರ್ಚನತತ್ಪರಾಃ ಸಕೃದಪಿ ಸ್ವಾರಾಜ್ಯರಾಜ್ಯೇಶ್ವರಂ
ಧಿಕ್ಕೃತ್ಯಾಮರಲೋಕನಾಯಕಮಪಿ ಶ್ರೀಕಾಂತಮಪ್ಯಂತತಃ ।
ಸ್ವಾಂತೇ ಸಂತತಮರ್ಚಯಂತಿ ಸುಕೃತೈಃ ಪೂತಾಃ ಕೃತಾಂತಾಂತಕಂ
ತತ್ಪಾದಸ್ಮರಣೇನ ತಾವದಧುನಾ ಧನ್ಯಾ ವಯಂ ಶೈಲಜೇ ॥೧೮॥

ಜಾಯಂತೇ ಬಹವಃ ಸುರಾ ಅಪಿ ನರಾಸ್ತೇಷಾಂ ವರಿಷ್ಠಂ ಪರಂ
ಮನ್ಯೇ ಶಾಂಕರಮೇವ ಶಂಕರಪದನ್ಯಸ್ತಪ್ರಸೂನಂ ನರಂ ।
ತಸ್ಮಾದಪ್ಯಧಿಕೋ ನ ಕೋಽಪಿ ಗಿರಿಜೇ ರಾಜಾಧಿರಾಜಾರ್ಚಿತಃ
ಸೋಽಯಂ ಶಾಂಕರ ಇತ್ಯವೈಮಿ ಮನಸಾ ಸತ್ಯಂ ಹಿ ಸತ್ಯಂ ಪುನಃ ॥೧೯॥

ಉತ್ಪತ್ತಿಸ್ಥಿತಿನಾಶಸಾಧನತಯಾ ಖ್ಯಾತೋ ಮಹೇಶಸ್ತತಃ
ತಂ ತ್ಯಕ್ತ್ವಾ ಕಮುಪಾಸ್ಮಹೇ ಗಿರಿಸುತೇ ದುಗ್ಧಂ ಸಿತಾಸಂಯುತಂ ।

ಸಂಹಾರಕನೂ, ತ್ರಿಲೋಚನನೂ, ಜಗದೊಡೆಯನೂ, ಆದ ಯಾವ ದೇವನನ್ನು ಜ್ಞಾನಿಗಳೂ, ಗಂಧರ್ವರೂ, ಕಿನ್ನರರೂ ಸಹ ವೇದಗಳ ಮೂಲಕ ಸ್ತುತಿಸುವರೋ, ಆ ಪರಮೇಶ್ವರನೇ ಈ ನನಗೆ ಜನಕನಾಗಿರುವನು. ||೧೭||

ಯಾವ ದೇವನ ಲಿಂಗವನ್ನು ಅರ್ಚಿಸುವುದರಲ್ಲಿ ಆಸಕ್ತರಾದ ಭಕ್ತರು ದೇವೇಂದ್ರನನ್ನೂ ಮತ್ತು ವಿಷ್ಣುವನ್ನೂ ಸಹ ಲಕ್ಷಿಸರೋ, ಮತ್ತು ಪೂರ್ವ ಜನ್ಮದ ಸುಕೃತವಿಶೇಷದಿಂದ ಮೃತ್ಯುಂಜಯನಾದ ಶಿವನನ್ನು ಎಡಬಿಡದೇ ಪೂಜಿಸುವರೋ ಆ ದೇವದೇವನ ಪಾದಕಮಲದ ಸ್ಮರಣಮಾತ್ರದಿಂದಲೇ ನಾವು ಕೃತಾರ್ಥರಾಗಿರುವೆವು. ||೧೮||

ಎಲೌ ಗಿರಿಜೆಯೇ, ಅನೇಕ ದೇವತೆಗಳೂ ಮತ್ತು ಮನುಷ್ಯರೂ ಲೋಕದಲ್ಲಿ ಶ್ರೇಷ್ಠರೆನಿಸಿರುವರು. ಅವರಲ್ಲಿ, ಯಾರು ಒಂದೇ ಒಂದು ಹೂವನ್ನು ಈಶ್ವರನಿಗೆ ಭಕ್ತಿಯಿಂದ ಸಮರ್ಪಿಸುವರೋ ಅವರೇ ಅತ್ಯಂತ ಶ್ರೇಷ್ಠರೆಂಬುದಾಗಿ ನಾನು ತಿಳಿಯುವೆನು. ಈ ಲೋಕದಲ್ಲಿ ಅವರಿಗಿಂತ ಶ್ರೇಷ್ಠರಾದವರು ಯಾರೂ ಇಲ್ಲವೆಂದೇ ನನ್ನ ಭಾವನೆ. ||೧೯||

ಎಲೌ ಗಿರಿಜೆಯೇ, ಜಗದೊಡೆಯನಾದ ಆ ಶಿವನೇ, ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣನಾಗಿರುವನೆಂದು ಪ್ರಸಿದ್ಧವಾಗಿರುವುದು. ಹೀಗಿರುವಲ್ಲಿ ಅವನನ್ನು ಬಿಟ್ಟು ಇತರ ಯಾವ ದೇವತೆಗಳನ್ನೂ, ನಾವು ಧ್ಯಾನಿಸುವುದು ಯುಕ್ತ

ಪ್ರಾಜ್ಯಾಜ್ಯೇನ ಸಮನ್ವಿತಂ ಮುಖಗತಂ ತ್ಯಕ್ತ್ವಾ ಪುರೀಷೋದಕಂ
ಕಃ ಪಾತುಂ ಯತತೇ ಸತಾಂ ಮತಿರಿಯಂ ಸಾ ನ್ಯಾಸತಾಂ ಜಾಯತೇ ॥೨೦॥

ಜಾಯಂತೇ ಚ ಪುನಃ ಪುನಃ ಪುನರಮೀ ನಾರಾಯಣೇಂದ್ರಾದಯಃ
ತೇ ತಾವದ್ಗಿರಿಶಾರ್ಚನಾದರಗೃಹದ್ವಾರೋರುದಂಡಾಹತಿಂ ।
ಸೋಢ್ವಾ ಮುಂಡಿತಮುಂಡವಜ್ಜಡಧಿಯೋ ಧಿಗ್ಧಿಗ್ಧಿಗಿತ್ಯನ್ವಹಂ
ಜನ್ಮೇತಿ ಪ್ರಲಪಂತಿ ವೇತ್ರನಿಹತಾಃ ಧಾವಂತಿ ಧಾವಂತಿ ಚ ॥೨೨॥

ವಲ್ಲ. ಲೋಕದಲ್ಲಿ ಸಕ್ಕರೆಯಿಂದಲೂ, ತುಪ್ಪದಿಂದಲೂ ಕೂಡಿರುವ ಮಧುರವಾದ ಕ್ಷೀರವನ್ನು ಬಿಟ್ಟು, ದುರ್ಗಂಧಯುಕ್ತವೂ ಅಶುಚಿಯೂ ಆದ ಪಾನೀಯವನ್ನು ಯಾವ ಮನುಜನು ತಾನೆ ಪಾನಮಾಡಲು ಯತ್ನಿಸುವನು? ಎಂದಿಗೂ ಇಲ್ಲ. ಅದರಂತೆ ಆ ಶಿವನನ್ನು ಪೂಜಿಸಬೇಕೆಂಬ ಬುದ್ಧಿಯು ಸತ್ಪುರುಷರಿಗೇ ಉಂಟಾಗುವುದಲ್ಲದೆ ದುಷ್ಟರಿಗೆ ಎಂದಿಗೂ ಆಗದು. ॥೨೦॥

ಎಲೌ ಭವಾನಿಯೇ, ಶಿವನು ದೇವತೆಗಳಿಗೆ ಒಡೆಯನೂ, ಪಶುಗಳಂತಿರುವ ಸಕಲ ಪ್ರಾಣಿಗಳ ರಕ್ಷಕನೂ ಆಗಿರುವನು. ಮೃತ್ಯುವನ್ನು ಜಯಿಸಿರುವವನೂ ದೇವತೆಗಳಲ್ಲಿ ಅಗ್ರೇಸರನೂ, ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದವನೂ ಆದವನೆಂದರೆ ಶಿವನೊಬ್ಬನೇ. ದೇವದೇವನಾದ ಅಂತಹ ಶಿವನನ್ನೇ ನಿರಂತರವೂ ನಾನು ಧ್ಯಾನಿಸುವೆನು. ಅವನನ್ನು ಬಿಟ್ಟು ಇನ್ನಿತರ ಯಾವ ದೇವತೆಗಳನ್ನೂ ಮನಸ್ಸಿನಲ್ಲಿ ನೆನೆಸಲಾರೆ. ಅನವರತವೂ ಶಂಕರನನ್ನೇ ಧ್ಯಾನಿಸುವುದರಲ್ಲಿ ತತ್ಪರರಾದ ನಮಗೆ, ಅವನಿಗಿಂತಲೂ ಇನ್ನಿತರ ಯಾವ ದೇವನು ತಾನೇ ಪೂಜ್ಯನೆನಿಸುವನು? ॥೨೧॥

ಶ್ರೀಮನ್ನಾರಾಯಣ, ಇಂದ್ರ ಮುಂತಾದ ದೇವತೆಗಳೆಲ್ಲರೂ, ಮತ್ತೆ ಮತ್ತೆ ಜನ್ಮವನ್ನು ತಾಳುವರು. ಅಲ್ಲದೆ ಅವರು ಶಿವನನ್ನು ಪೂಜಿಸುವುದರಲ್ಲಿ ಆಸಕ್ತಿಯುಳ್ಳವರಾಗಿ, ಈಶ್ವರಾಲಯದ ದ್ವಾರಪಾಲಕರ ದಂಡಗಳ ಹೊಡೆತಗಳನ್ನೂ ಸಹಿಸಿ, ಮುಂಡನದಿಂದ ಬೆಳಗುವ ಋಷಿಜನರಂತೆ ಸ್ತಬ್ಧರಾಗಿ ಅಲ್ಲಿಯೇ ಇದ್ದು ತಮ್ಮನ್ನು ಹೀಯಾಳಿಸಿಕೊಳ್ಳುವರು. ಮತ್ತು "ಈಶಭಕ್ತರ ದಾಸ್ಯವೃತ್ತಿಯನ್ನು ಹೊಂದಿರುವ ನಮಗೆ ಧಿಕ್ಕಾರವಿರಲಿ" ಎಂದು ತಮ್ಮ ಜನ್ಮವನ್ನು ತಾವೇ ಧಿಕ್ಕರಿಸಿಕೊಳ್ಳುತ್ತಾ ಮತ್ತೆ ದಂಡದಿಂದ ತಾಡಿತರಾಗಿ ಅಲ್ಲಿಂದ ಓಡಿಹೋಗುವರು. ॥೨೨॥

ಯೋ ನಿಂದಂತಿ ಶಿವಂ ಮಹೇಶಮಮಲಂ
ದೇವೈಸ್ತು ಸಂಸೇವಿತಂ ।
ಸರ್ವಜ್ಞಂ ಕರುಣಾಮಯಂ ಪಶುಪತಿಂ
ನಾಚಾಮುಸೇವ್ಯಂ ವಿಭುಂ ॥೨೩॥

ತಾವನ್ನಿತ್ಯಂ ಸನ್ನದಂತೋ ವದಂತಿ ।
ಸ್ವಾಂತೇ ಶಾಂತೇ ಶಂಕರಂ ಪೂಜಯಾಮಿ ॥೨೪॥

ಬ್ರಹ್ಮಾಂಡಮಂಡಲವಿಲೋಡನದಂಡಘಾತಾ
ಘಾತಾಶ್ಚರಂತಿ ಕತಿ ತೇ ಶಿವಚಿಂತಕಾಃ ಕಿಂ ।
ತಚ್ಚಿಂತನೇ ಸತಿ ಕೃತಾಂತಕೃತಾ ನಿಭೀತಿ
ಶ್ರಾಂತಿಃ ಕುತಃ ಕ್ವ ಜನಿದುರ್ದಶಯಾತಿಭೀತಿಃ ॥೨೫॥

ಜಗದೊಡೆಯನೂ, ಪವಿತ್ರತಮನೂ, ದೇವತೆಗಳಿಗೆ ಪೂಜ್ಯನೂ ಆದ ಶಂಕರನು ಸರ್ವಜ್ಞನೆನಿಸಿ, ಭಕ್ತರಿಗೆ ದಯಾಳುವಾಗಿರುವನು. ಅಂತಹ ಪಶುಪತಿಯಾದ ಶಿವನನ್ನು ಯಾರು ನಿಂದಿಸುವರೋ ಅವರು, ಪುನಃ ಪುನಃ ಜನನಮರಣಗಳಿಗೆ ಸಿಕ್ಕಿದವರಾಗಿ ಅಪಾರವಾದ ಈ ಸಂಸಾರಸಾಗರದಲ್ಲಿ ಮುಳುಗಿ ದುಃಖಪರಂಪರೆಗಳನ್ನು ಅನುಭವಿಸುವರೇ ಹೊರತು ಎಂದಿಗೂ ಸದ್ಗತಿಯನ್ನು ಹೊಂದಲಾರರು. ॥೨೩॥

ಶಂಕರನು ಸಚ್ಚಿದಾನಂದಸ್ವರೂಪನೂ, ನಾಶರಹಿತನೂ, ಆಗಿರುವನೆಂದು ಸತ್ಪುರುಷರು ಹೇಳುವರು. ಅಂತಹ ಶಂಕರನನ್ನು ನಿರ್ಮಲವಾದ ನನ್ನ ಚಿತ್ತದಲ್ಲಿರಿಸಿ ಸದಾ ಪೂಜಿಸುತ್ತೇನೆ. ॥೨೪॥

ಈಶ್ವರನ ಭಕ್ತರು ಪ್ರಲಯಕಾಲದಲ್ಲಿ ಈ ಬ್ರಹ್ಮಾಂಡವನ್ನೇ ನಾಶಪಡಿಸುವ ಪರಮಾತ್ಮನ ಶಿಕ್ಷೆಗೆ ಗುರಿಯಾಗುವರೇ? ಎಂದಿಗೂ ಇಲ್ಲ. ಏಕೆಂದರೆ ಅನವರತವೂ ಆ ಶಿವನನ್ನೇ ಚಿಂತಿಸುತ್ತಲೇ ಇರುವಾಗ ಅವರ ಸಮೀಪಕ್ಕೆ ಅಂತಕನು ಬರುವುದು ಹೇಗೆ? ಹಾಗೆ ಮರಣವೇ ಇಲ್ಲದ ಮೇಲೆ ಜನನವೆಂಬ ದುಃಖಪರಂಪರೆಗಳಿಂದ ಕೂಡಿರುವ ಅವಸ್ಥೆಯನ್ನಾದರೂ ಅವರು ಹೇಗೆ ಹೊಂದುವರು? ॥೨೫॥

ಪ್ರಾಪ್ಯಾಪಿ ಜನ್ಮ ಮನುಜತ್ವಮುಪೇತ್ಯ ತತ್ರ
ಬ್ರಾಹ್ಮಣ್ಯಮೇತ್ಯ ಸಮಧೀತ್ಯ ಚ ವೇದವಿದ್ಯಾಂ ।
ಮೀಮಾಂಸಯಾ ಸಹ ತತಃ ಪರಮಿಂದುಮೌಳಿ
ಧ್ಯಾನಂ ವಿಹಾಯ ವಸತಃ ಕುಗತಿರ್ಭವಾನಿ ॥೨೬॥

ಕಿಂ ರಾಸಭೋಽಪಿ ಮಣಿಭಾರಪರೀತದೇಹಃ
ತದ್ಭೂಷಿತೋ ಭವತಿ ತದ್ವದಶಾಂಭವೋಽಪಿ ।
ವಿದ್ಯಾಮಧೀತ್ಯ ಯದಿ ಶಾಂಕರತಾಂ ನ ಯಾತಿ
ತಜ್ಜನ್ಮ ರಾಸಭಸಮಾನಮಿತಿ ಸ್ಮರಾಮಿ ॥೨೭॥

ಸಂಸಾರೇ ಗಿರಿಜಾಮನೋಹರಹರಶ್ರೀಪಾದಪದ್ಮಾರ್ಚನಂ
ತಲ್ಲಿಂಗಾರ್ಚನಮೇವ ವಾ ಸ್ಮರಹರಧ್ಯಾನಂ ಕ್ಷಣಂ ವಾ ಯದಿ ।
ದೈವಾತ್ಸ್ಯಾದ್ಗಿರಿಜೇ ತದೈವ ಸಫಲಂ ಜನ್ಮೇತಿ ಮನ್ಯೇ ಮುಹುಃ
ನೋ ಚೇತ್ಪಾತಕಪಾತಕಾಕುಲಮಹಾಜ್ವಾಲಾಕುಲೋ ಜಾಯತೇ ॥೨೮॥

ಎಲೌ ಸರ್ವಮಂಗಳೆಯೇ, ಈ ಲೋಕದಲ್ಲಿ ಮನುಷ್ಯನಾಗಿ ಜನಿಸಿ, ಬ್ರಾಹ್ಮಣಜಾತಿಯನ್ನು ಪಡೆದು ಮೀಮಾಂಸಾದಿಶಾಸ್ತ್ರಗಳಿಂದ ಸಾಂಗವಾದ ವೇದಗಳನ್ನು ಅಭ್ಯಸಿಸಿ, ಹಾಗೂ ಚಂದ್ರಶೇಖರನಾದ ಶಿವನನ್ನು ಧ್ಯಾನಮಾಡದೇ ಇರುವವನು ನಿಜವಾಗಿಯೂ ದುರ್ಗತಿಯನ್ನು ಹೊಂದುವನು. ॥೨೬॥

ಲೋಕದಲ್ಲಿ ಅಲ್ಪಪ್ರಾಣಿಯೆಂದೆನಿಸಿಕೊಂಡಿರುವ ಕತ್ತೆಯನ್ನು ರತ್ನ, ವಜ್ರ, ವೈಡೂರ್ಯಾದಿ ಆಭರಣಗಳಿಂದ ಅಲಂಕರಿಸಿದರೆ ಆ ಕತ್ತೆಯು ಎಂದಾದರೂ ಶೋಭಿಸೀತೆ? ಆದರಂತೆಯೇ ಸಕಲಶಾಸ್ತ್ರಗಳನ್ನು ಅಧ್ಯಯನಮಾಡಿದರೂ ಶಿವಭಕ್ತಿಯೊಂದಿಲ್ಲದಿದ್ದರೆ ಆ ಮನುಜನ ಜನ್ಮವು ಕತ್ತೆಯ ಜನ್ಮದಂತೆ ವ್ಯರ್ಥವೆನಿಸುವುದು. ಅವನಿಂದ ಯಾವ ಪ್ರಯೋಜನವೂ ಇರಲಾರದೆಂದು ತಿಳಿಯುತ್ತೇನೆ. ॥೨೭॥

ಎಲೌ ಗಿರಿಜೆಯೇ, ಈ ಲೋಕದಲ್ಲಿ ಉಮಾರಮಣನಾದ ಪರಮೇಶ್ವರನ ಸಂಪದ್ಭರಿತವಾದ ಪಾದಪದ್ಮವನ್ನು ಪೂಜಿಸುವುದಾಗಲಿ, ಅವನ ಶಿವಲಿಂಗವನ್ನು ಅರ್ಚಿಸುವುದಾಗಲಿ, ಶಂಕರನಾಮಸ್ಮರಣೆಮಾಡುವುದಾಗಲಿ ಇವೆಲ್ಲವೂ ಪೂರ್ವಜನ್ಮದ ಭಾಗ್ಯವಿಶೇಷದಿಂದಲೇ ತೋರಿಬರುವುವು. ಹೀಗೆ ಯಾರು ಶಂಕರನನ್ನು

ಜಾಯಂತೇ ಜನನೀಪಯೋರಸರತಾಃ ಕಿಂ ತೈರನಂತೈಃ ಫಲಂ
ಯದ್ಯಶ್ರಾಂತ ಉಮಾಸಹಾಯಚರಣಾಂಭೋಜಾರ್ಚನಾನಾದರಃ ।
ತರ್ಹಿ ಸ್ಯಾತ್ಖಲು ನಾರಕೀ ನರ ಇತಿ ಸ್ವರ್ಗಾಪವರ್ಗಪ್ರದಂ
ಭರ್ಗಂ ಕೋಽಪಿ ಭಜತ್ಯನನ್ಯಮನಸಾ ಧನ್ಯಃ ಸ ಧನ್ಯಾಗ್ರಣೀಃ ॥೨೯॥

ತತ್ಪಾದಾಂಬುಜವಂದನೇನ ಸಫಲಂ ಜನ್ಮೇತಿ ಮನ್ಯೇ ಶಿವೇ
ಯಚ್ಚಿತ್ತಂ ಕ್ಷಣಮೇವ ವಾ ಶಿವರತಂ ತದ್ಧ್ಯಾನಧಾರಾ ಯದಿ ।
ಚಿತ್ತೇ ತತ್ಪದಪದ್ಮರೇಣುಭಿರ್ಜಗದಿದಂ ಪೂತಂ ಪರಂ ಪಾವನಂ
ಸತ್ಯಂ ತಸ್ಯ ಖಲೂನ್ನತಂ ಕುಲಮತಸ್ತತ್ಸೇವಕಾನ್ನಾಧಿಕಃ ॥೩೦॥

ಸ್ಮರಿಸುವರೋ ಅವರ ಆ ಜನ್ಮವೇ ಸಾರ್ಥಕವಾದುದು. ಅದಿಲ್ಲದಿದ್ದರೆ ಅವನು ಅನೇಕ ಮಹಾಪಾತಕಗಳೆಂಬ ಅಗ್ನಿಜ್ವಾಲೆಗಳಿಗೆ ಸಿಲುಕಿ ಅನೇಕ ಕಷ್ಟಗಳನ್ನನುಭವಿಸುವನು. ||೨೮||

ಜಗತ್ತಿನಲ್ಲಿ ಮಾತೆಯ ಸ್ತನ್ಯಪಾನದಲ್ಲಿಯೇ ಆಸಕ್ತರಾದ ಅನೇಕ ಜನರು ಜನ್ಮವೆತ್ತುವರು. ಆದರೆ ಅವರು ಉಮಾರಮಣನಾದ ಮಹಾದೇವನ ಪಾದಕಮಲವನ್ನು ಅರ್ಚಿಸುವುದರಲ್ಲಿ ಆಸಕ್ತರಾಗದಿದ್ದರೆ, ಅಂತಹ ಜನರು ಜನ್ಮವೆತ್ತಿ ಯಾವ ಪ್ರಯೋಜನವನ್ನೂ ಪಡೆಯಲಾರರು. ಅಂತಹ ಮನುಜನು ನರಕವನ್ನೇ ಹೊಂದುವನಲ್ಲದೆ, ಅವನಿಗೆ ಎಂದಿಗೂ ಸದ್ಗತಿಯು ದೊರಕಲಾರದು. ಸ್ವರ್ಗಮೋಕ್ಷಗಳೆಂಬ ಪುರುಷಾರ್ಥವನ್ನು ದಯಪಾಲಿಸುವ ಶಂಕರನನ್ನು ಯಾವ ಮನುಜನು, ನಿರಂತವೂ ಭಜಿಸುವನೋ ಅವನೇ ಭಾಗ್ಯವಂತನು. ಅವನು ಭಾಗ್ಯವಂತರಲ್ಲಿ ಶ್ರೇಷ್ಠನು. ||೨೯||

ಎಲೌ ಭವಾನಿಯೇ, ಶಂಕರನ ಪಾದಕಮಲವನ್ನು ವಂದಿಸುವುದರಿಂದ ಮನುಷ್ಯಜನ್ಮವು ಸಾರ್ಥಕವಾಗುವುದೆಂದು ಭಾವಿಸುತ್ತೇನೆ. ಯಾವನ ಚಿತ್ತವು ಕ್ಷಣಕಾಲವಾದರೂ ಶಿವನನ್ನು ನೆನಸುವುದೋ ಅವನೇ ಧನ್ಯನು. ಹೀಗಿರುವಲ್ಲಿ ಎಡಬಿಡದೆ ಅನವರತವೂ ಶಿವನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದರೆ, ಕೃತಕೃತ್ಯನಾಗುವುದಿಲ್ಲವೆಂದು ಹೇಗೆ ತಾನೇ ಹೇಳಲು ಸಾಧ್ಯ? ಹೀಗೆ ಶಿವಧ್ಯಾನಾಸಕ್ತನಾಗಿರುವವನ ಪಾದಧೂಳಿಗಳಿಂದ ಈ ಜಗತ್ತು ಪವಿತ್ರವೆನಿಸುವುದು. ಅವನ ವಂಶವೇ ಅತ್ಯಂತ ಶ್ರೇಷ್ಠವಾದ ವಂಶ. ಆದುದರಿಂದ ಲೋಕದಲ್ಲಿ ಶ್ರೇಷ್ಠನಾದವನೆಂದರೆ ಶಾಂಭವನೇ. ||೩೦||

ಲೋಕೇ ಶಾಂಭವಪುಂಗವಾಃ ಖಲು ಖಲಧ್ವಾಂತಾದ್ಭುತಾಹಸ್ಕರಾಃ
ತತ್ಪಾದಾಂಬುಜರೇಣುಮಾತ್ರಮಮರಾಃ ಸರ್ವೇಽಪಿ ವಾಂಛಂತ್ಯಹೋ ।
ತಚ್ಚೇನ್ಮೂರ್ಧ್ನಿ ತದಾ ಸದಾಶಿವಕೃಪಾ ಸ್ಯಾದಿತ್ಯವಶ್ಯಂ ಮುದಾ
ಕೀಟತ್ವಂ ಸಮುಪೇತ್ಯ ಶಾಂಕರಗೃಹದ್ವಾರೇ ಚರಂತ್ಯಂಬಿಕೇ ॥೩೧॥

ಧನ್ಯಾ ತಜ್ಜನನೀ ಪಿತಾಪಿ ಸ ಮಹಾನ್ ವಂಶೋಽಪಿ ಧನ್ಯಃ ಪರಃ
ತದ್ಭೃತ್ಯೋಽಪಿ ತದಾಶ್ರಿತೋಽಪಿ ಸ ಮಹಾನ್ ತಚ್ಚೇಟಿಕಾವಾಟಿಕಾ ।
ಯಚ್ಚಿತ್ತಂ ಕ್ಷಣಮಾತ್ರಮಪ್ಯಘಹರೇ ಲಿಂಗೇಽಪಿ ನೈಶ್ವಾನರೇ
ಸಂಸಾರಾತುಲತೂಲಶೈಲನಿಲಯಾಂಗಾರೇ ಸ ಹಾರಶ್ಚಿರಂ ॥೩೨॥

ಯೋ ನಿತ್ಯಂ ಶಿವ ಏವ ದೈವತಮಿತಿ ಜ್ಞಾತ್ವಾ ತದರ್ಚಾರತಃ
ತಂ ಧ್ಯಾತ್ವಾಪಿ ವಿಮುಚ್ಯತೇ ಖಲು ಜನಿಸ್ತದ್ದಾಸದಾಸಾನ್ವಯೇ ।
ದೈವಾಜ್ಜನ್ಮ ಭವತ್ಯದುರ್ಲಭಮಿದಂ ನೇತ್ಯಾಹುರತ್ಯಾಸ್ತಿಕಾಃ
ಶ್ರುತ್ಯರ್ಥೋಽಪಿ ತಥಾವಿಧಶ್ರುತಿರಿತಿ ವ್ಯರ್ಥಾ ನ ತತ್ಪ್ರಾರ್ಥನಾ ॥೩೩॥

ಪ್ರಪಂಚದಲ್ಲಿ ಶ್ರೇಷ್ಠರಾದ ಶಿವಾನುಯಾಯಿಗಳು, ದುಷ್ಟಜನರೆಂಬ ಕಾರ್ಗತ್ತಲೆಗೆ ಸೂರ್ಯನಂತೆ ಆಗುವರು. ನಿಖಿಲ ದೇವತೆಗಳೂ ಆ ಭಕ್ತರ ಪಾದಧೂಳಿಯನ್ನು ಅಪೇಕ್ಷಿಸುವರು. ಶಿವಭಕ್ತರ ಆ ಪಾದಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿದುದೇ ಆದರೆ, ಶಿವನ ಕೃಪೆಗೆ ಪಾತ್ರರಾಗಿ ಜನ್ಮಾಂತರದಲ್ಲಿ ಕ್ರಿಮಿಕೀಟಗಳಾಗಿ ಜನಿಸಿ, ಶಿವಭಕ್ತಾಗ್ರೇಸರರ ಗೃಹದ ದ್ವಾರದಲ್ಲಿ ಸಂಚರಿಸುವವರಾಗುತ್ತಾರೆ. ॥೩೧॥

ಶಿವಪೂಜಕರ ಮಾತಾಪಿತೃಗಳೇ ಧನ್ಯರು. ಅವರ ವಂಶವೇ ಸದ್ವಂಶ. ಹೆಚ್ಚೇಕೆ? ಶಿವಭಕ್ತನೂ, ಅವನ ಸೇವಕನೂ, ಆಶ್ರಿತನೂ ಕೃತಕೃತ್ಯರಾಗುವರು. ಅವನ ದಾಸಿಯೂ ಸಹ ಭಾಗ್ಯವತಿಯೆನಿಸುವಳು. ಅವನ ಉದ್ಯಾನವು ಪವಿತ್ರವಾಗುವುದು. ಯಾವ ಮನುಜನ ಚಿತ್ತವು ಸಂಸಾರದುಃಖವೆಂಬ ಹತ್ತಿಯ ರಾಶಿಯನ್ನು ಬೆಂಕಿಯ ಕಿಡಿಯಂತೆ ನಾಶಮಾಡುವುದೋ, ಅವನೇ ಸಕಲ ಪಾಪನಿವಾರಕವಾದ ಶಿವಲಿಂಗವನ್ನು ಕ್ಷಣಕಾಲವಾದರೂ ಸ್ಮರಿಸುವನು. ಅವನೇ ಧನ್ಯನು. ಅವನೇ ಶಿವನಿಗೆ ಪ್ರೀತಿಪಾತ್ರನು. ॥೩೨॥

ಶಂಕರನನ್ನೇ ದೇವರೆಂದು ಭಾವಿಸಿ, ಸದಾ ಅವನ ಪೂಜೆಯಲ್ಲಿ ನಿರತನಾಗುವವನು ಶಿವನ ಧ್ಯಾನಮಾತ್ರದಿಂದಲೇ ಮೋಕ್ಷವನ್ನೈದುವನು. ಶಿವಭೃತ್ಯನ ವಂಶ

ಮನ್ಯೇ ದೈವತದೈವತಂ ಶಿವಮುಮೋ ವೇದಾಂತವಾಕ್ಯೇ ರತಃ
ತತ್ಪೂಜಾನಿರತಂ ನಮಾಮಿ ಮನಸಾ ತದ್ದುರ್ಲಭಂ ಮೇನಿರೇ ।
ಗೀರ್ವಾಣಾಃ ಪರಮಂಬಿಕಾಪತಿಪದಾಂಭೋಜಾರ್ಚನಂ ದುರ್ಲಭಂ
ತಲ್ಲಿಂಗಾರ್ಚನಮಪ್ಯನಂತಫಲದಂ ತದ್ದುರ್ಲಭಂ ಮೇನಿರೇ ॥೩೪॥

ಮಾನಾತೀತ ಇತಿ ಶ್ರುತೋಽಪಿ ಮಹಿಮಾ ಮಾಹೇಶ್ವರಸ್ತಂ ಕಥಂ
ವೇದೋ ವೇದ ನ ತೇನ ಯಶ್ಚ ವಿದಿತಸ್ತಂ ಶಾಂಭವೋ ವೇದ ತಂ ।
ತೇ ವೇದಾಃ ಪ್ರಣಮಂತಿ ದೇವಸಹಿತಾಸ್ತತ್ಪೂಜನೇ ಸಾದರಾಃ
ಸಾಕ್ಷಾತ್ಸಾಂಬ ಇತಿ ಶ್ರುತಿಸ್ಮೃತಿಶಿರೋರತ್ನಂ ಶ್ರುತಂ ತನ್ಮಯಾ ॥೩೫॥

ದಲ್ಲಿ ಜನಿಸುವುದೆಂದರೆ ಅತ್ಯಂತ ದುರ್ಲಭವೆಂದು ಜ್ಞಾನಿಗಳು ಹೇಳುವರು. ವೇದಾರ್ಥಗಳನ್ನು ನೋಡಿದರೂ ಹೀಗೆಂದೇ ತಿಳಿದುಬರುತ್ತದೆ. ಈ ಅಂಶವನ್ನು ವೇದದಲ್ಲಿಯೂ ನೋಡಬಹುದು. ಶಿವಪ್ರಾರ್ಥನೆಯು ಎಂದಿಗೂ ವ್ಯರ್ಥವಾಗಲಾರದು. ||೩೩||

ಎಲೌ ಭವಾನಿಯೇ, ಆ ಶಿವನು ದೇವತೆಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠನಾಗಿರುವುದರಿಂದ ಶಿವಪೂಜೆಯಲ್ಲಿ ಆಸಕ್ತವಾದ ಭಕ್ತವೃಂದವನ್ನೇ ಮನಸ್ಸಿನಲ್ಲಿ ನಮಸ್ಕರಿಸುವೆನು. ಶಿವಭಕ್ತನನ್ನು ನಮಸ್ಕರಿಸುವ ಸುಯೋಗವು ದೊರಕುವುದೇ ದುರ್ಲಭವೆಂದು ಜ್ಞಾನಿಗಳು ತಿಳಿದಿರುವರು. ದೇವತೆಗಳೂ ಸಹ ಆ ಶಿವನ ಅಡಿದಾವರೆಗಳ ಪೂಜೆಯು ದೊರಕುವುದು ಕಷ್ಟಸಾಧ್ಯವಾದುದೆಂದೂ, ಮತ್ತು ಶಿವಲಿಂಗಾರ್ಚನೆಯು ಶಾಶ್ವತವಾದ ಫಲವನ್ನುಂಟುಮಾಡುವುದೆಂದೂ ತಿಳಿದಿರುವರು. ||೩೪||

ಶಿವನು ಯಾವ ಪ್ರಮಾಣಗಳಿಗೂ ಗೋಚರನಲ್ಲವೆಂಬುದು ದೃಢವಾಗಿರುವಾಗ ವೇದಗಳಿಗೆ ಗೋಚರನಾಗುವನೇ ? ಆದರೆ ವೇದಗಳಿಗೂ ನಿಲುಕದ ಆ ಶಿವನನ್ನು ಅನೇಕಭಕ್ತರು ತಿಳಿದುಕೊಂಡಿರುವರು. ಶಿವನ ಸ್ವರೂಪವನ್ನರಿಯದ ಆ ವೇದಗಳು ದೇವತೆಗಳಿಂದೊಡಗೂಡಿ ಅವನ ಪೂಜೆಯಲ್ಲಿ ಅತ್ಯಾಸಕ್ತಗಳಾಗಿ ಅವನನ್ನೇ ನಮಸ್ಕರಿಸುತ್ತಿವೆ. ಆದ್ದರಿಂದ ಶ್ರುತಿಸ್ಮೃತಿಗಳಿಗೆ ಶಿರೋರತ್ನಪ್ರಾಯನಾಗಿರುವನು ಸಾಕ್ಷಾತ್ಸಾಂಬನೆಂದೇ ನಾನು ಭಾವಿಸಿರುವೆನು. ||೩೫||

ಪುಣ್ಯಂ ಜನ್ಮನಿ ಜನ್ಮನಿ ಪ್ರತಿದಿನಂ ಕಲ್ಪಾವಸಾನಾವಧಿ
ಸ್ರಾಚೀನಾಮಿತಯಾಗದಾನನಿಚಯಾಭ್ಯಾಸಾನುಬಂಧಂ ಯದಿ ।
ತಸ್ಮಿಂತ್ಸತ್ಯಪಿ ಶಾಂಭವೋತ್ತಮಪದಾಂಭೋಜಾಶ್ರಯೇ ಜಾಯತೇ
ಭಕ್ತಿರ್ಭರ್ಗಪದಾಂಬುಜೇ ಗಿರಿಸುತೇ ಸಾ ದುರ್ಲಭಾ ಸರ್ವಥಾ ॥೩೬॥

ಏಕಂ ಸಾರ್ಥಕಮಿತ್ಯವೈಮಿ ಗಿರಿಜೇ ಲೋಕೇಷು ವೇದೇಷ್ವಪಿ
ಪ್ರಖ್ಯಾತಂ ಶಿವಲಿಂಗಪೂಜನಮಿದಂ ಸರ್ವಾತ್ಮನಾ ದುರ್ಲಭಂ ।
ಜ್ಞಾತ್ವಾ ದುರ್ಲಭಮಿತ್ಯಪಿ ಪ್ರತಿದಿನಂ ತತ್ಪೂಜನಾಯೋದ್ಯತಃ
ಧನ್ಯೋಽತಃ ಶಿವಪೂಜಕಾದಪಿ ಪರೋ ಧನ್ಯಃ ಕ್ವ ವಾ ಭೂತಲೇ ॥೩೭॥

ಲೀಲಾಮಾನುಷವಿಗ್ರಹಃ ಶಿವರತಃ ಶೈವಃ ಶಿವಃ ಕೇವಲಂ
ತಂ ಮನ್ಯೇ ಶಿವಮೇವ ತತ್ಪದರಜೋ ಮಾನ್ಯಂ ಸುರಾಣಾಮಪಿ ।

ಎಲೌ ಗಿರಿಜೆಯೇ, ಪ್ರತಿಜನ್ಮಗಳಲ್ಲಿಯೂ, ಪ್ರತಿದಿನಗಳಲ್ಲಿಯೂ ಆಚರಿಸಿದ ಯಜ್ಞಯಾಗಾದಿಗಳಿಂದಲೂ ದಾನಧರ್ಮಗಳಿಂದಲೂ ಲಭಿಸಿರುವ ಪುಣ್ಯವು ಕಲ್ಪಾಂತ್ಯದವರೆಗೂ ಅನುವರ್ತಿಸಿ ಬರುವುದಾದರೆ, ಆಗ ಶ್ರೇಷ್ಠರಾದ ಈಶ್ವರ ಕಿಂಕರರ ಅಡಿದಾವರೆಗಳಲ್ಲಿ, ನಿರ್ಮಲವಾದ ಭಕ್ತಿಯುದ್ಭವಿಸುವುದು. ಆದರೆ ಶಿವನ ಪಾದಕಮಲಗಳಲ್ಲಿ ಮಾತ್ರ ದೃಢಭಕ್ತಿಯುದಯಿಸುವುದು ದುರ್ಲಭವೆಂದೇ ನನಗೆ ತೋರುತ್ತಿದೆ. ॥೩೬॥

ಎಲೌ ಗೌರಿಯೇ, ಲೋಕಗಳಲ್ಲಿಯೂ ಮತ್ತು ವೇದಗಳಲ್ಲಿಯೂ ಪ್ರಸಿದ್ಧವಾಗಿರುವ ಈ ಶಿವಲಿಂಗಾರ್ಚನೆಯೊಂದೇ ಸಾರ್ಥಕವಾದ ಕಾರ್ಯವೆಂದು ಭಾವಿಸುತ್ತೇನೆ. ಆದರೆ ಪವಿತ್ರವಾದ ಆ ಶಿವಲಿಂಗಾರ್ಚನೆಯು ಸರ್ವವಿಧಗಳಿಂದಲೂ ದುರ್ಲಭವೆಂದು ತಿಳಿಯಬೇಕು. ಅದು ದುರ್ಲಭವೆಂದೇ ತಿಳಿದು ಯಾವನು ಆ ಶಿವಲಿಂಗವನ್ನು ತಪ್ಪದೆ ಪ್ರತಿದಿನವೂ ಪೂಜಿಸತೊಡಗುವನೋ ಅವನೇ ಭಾಗ್ಯಶಾಲಿಯು. ಈ ಲೋಕದಲ್ಲಿ ಶಿವಪೂಜಕನಿಗಿಂತಲೂ ಶ್ರೇಷ್ಠನಾದವನು ಮತ್ತೊಬ್ಬನಿಲ್ಲ. ॥೩೭॥

ಲೀಲಾನಿರ್ಮಿತವಾದ ಈ ಮನುಷ್ಯಶರೀರವನ್ನು ಪಡೆದಿರುವ ಆ ಶೈವನು ಸಾಕ್ಷಾತ್ ಶಿವಸ್ವರೂಪನೇ ಆಗಿರುವನು. ಅವನನ್ನು ಶಿವನೆಂದೇ ತಿಳಿಯುವೆನು.

ತದ್ದೇಹಃ ಶಿವಮಂದಿರಂ ಶಿವತರಸ್ತಸ್ಮಿನ್ಸದಾ ಕ್ರೀಡತಿ
ವ್ಯಾಪಾರಾಂತರಮಂತರಾ ಗಿರಿಸುತೇ ತಚ್ಚಾಪಿ ತನ್ಮಂದಿರಂ ॥೩೮॥

ಬ್ರಹ್ಮತ್ವಾದಿಕಮಾನುಷಂಗಿಕಫಲಂ ಮನ್ಯೇ ಶಿವಾರಾಧನೇ
ಮುಖ್ಯಂ ತಸ್ಯ ಫಲಂ ಕಿಮಪ್ಯನುಮಿತಂ ಶ್ರುತ್ಯಾಪಿ ತತ್ಸರ್ವಥಾ ।
ದುರ್ಜ್ಞೇಯಂ ಶಿವರೂಪತಾ ಫಲಮಿತಿ ಜ್ಞೇಯಂ ಕಥಂ ವಾ ಮಯಾ ।
ತಸ್ಯಾನುಸ್ಮರಣೇನ ತದ್ಯದಿ ತದಾ ಕಿಂ ತತ್ಫಲಂ ಶೈಲಜೇ ॥೩೯॥

ಏವಂ ಮೇ ಮತಿರಿಂದುಶೇಖರಪದಾಂಭೋಜಾರ್ಚನಾದದ್ಯ ಸಾ
ಜಾತಾಪಿ ಸ್ಥಿರತಾಮುಪೇತ್ಯ ಪುನರಪ್ಯಭ್ಯಾಸಮಾರ್ಗಂ ಗತಾ ।
ತತ್ಪಾದಾಬ್ಜಮಿಲೋಕನೇನ ಗಿರಿಜೇ ತ್ವಂ ಶಂಕರಾರ್ಧಾಂಗಮಿತ್ಯಂಬಾ
ಹಂ ತನಯಸ್ತವೇತ್ಯಪಿ ವರೋ ದೇಯೋ ದೃಢೋಽಪ್ಯಸ್ತ್ವಿತಿ ॥೪೦॥

ಆ ಶಿವಭಕ್ತನ ಪಾದಧೂಳಿಯು ದೇವತೆಗಳಿಗೂ ಪೂಜ್ಯವೆನಿಸುವುದು. ಅವನ ದೇಹವೇ ಒಂದು ಶಿವಾಲಯ. ಆ ದೇಹದಲ್ಲಿ ಶಿವನು ನಿರಂತರವೂ ಸಂತೋಷದಿಂದ ಕ್ರೀಡಿಸುವನು. ಆ ದೇಹವೇ ಶಿವನ ವಾಸಸ್ಥಳವೆಂದರೆ ತಪ್ಪಲ್ಲ. ||೩೮||

ಒಂದು ಜನ್ಮದಲ್ಲಿ ಶಿವನನ್ನು ಆರಾಧಿಸುವುದರಿಂದ ಮುಂದಿನ ಜನ್ಮದಲ್ಲಿ, ಬ್ರಹ್ಮತ್ವವೇ ಮೊದಲಾದ ಉತ್ತಮ ಜನ್ಮವು ಲಭಿಸುವುದೆಂದು, ಶೃತಿಸ್ಮೃತಿಗಳಲ್ಲಿ ಹೇಳಿದೆ. ಆದರೆ, ಶಿವಾರಾಧನೆಯಿಂದ ಲಭಿಸುವ ಆ ಬ್ರಾಹ್ಮಣಜನ್ಮವೇ ಮುಂತಾದ ಫಲವು ಪ್ರಧಾನವಾದ ಫಲವಲ್ಲ. ಅದು ಗೌಣಫಲವೆನಿಸುವುದು. ಶಿವಸಾಯುಜ್ಯವನ್ನು ಹೊಂದುವುದೇ, ಶಿವಾರ್ಚನೆಯ ಮುಖ್ಯ ಫಲವೆಂದು ಊಹಿಸುವುದಾದರೆ ಆ ಶಿವಸಾರೂಪ್ಯವು ಕೇವಲ ಶಿವಸ್ಮರಣೆಯಿಂದಲೇ ಲಭಿಸುವುದು. ಹಾಗಿರುವಾಗ ಶಿವಾರಾಧನೆಗೆ ದೊರೆಯುವ ಉತ್ತಮ ಫಲವಾವುದೆಂಬುದೇ ನಮಗೆ ತಿಳಿಯದಾಗಿದೆ. ಇದನ್ನೇ ಸಕಲ ಶ್ರುತಿಗಳೂ ಇಂದಿಗೂ ಚರ್ಚೆಮಾಡುತ್ತಿವೆ. ||೩೯||

ಹೀಗೆ ಚಂದ್ರಶೇಖರನ ಅಡಿದಾವರೆಗಳನ್ನು ಪೂಜಿಸಿದುದರಿಂದ ನನಗುಂಟಾದ ಪವಿತ್ರಜ್ಞಾನವು, ಈಗ ಶಂಕರನ ಪಾದಾರವಿಂದವನ್ನು ಸಾಕ್ಷಾತ್ಕರಿಸಿದುದರಿಂದ ಸ್ಥಿರವಾಗಿ ನಿಂತು ಶಿವಧ್ಯಾನದ ಅಭ್ಯಾಸವನ್ನು ದೃಢಪಡಿಸಿರುವುದು. ಗಿರಿಜೆಯೇ, ಶಂಕರನ ಅರ್ಧಾಂಗಿಯಾದ ನೀನು ನನ್ನ ಮಾತೆಯಾಗಿರುವೆಯೆಂದೂ,

ಅಂಬಾಹಂ ಗಣನಾಯಕೋಽಪಿ ಗಿರಿಶೇ ನಾದ್ಯಾಧುನಾ ಪ್ರೇಷಿತಃ
ಸಂತುಷ್ಟಸ್ತ್ವಯಿ ಶಂಕರಃ ಶಿವಧನಂ ತ್ವಂ ತಾವದಂಬಾಧುನಾ ।
ತ್ವಯ್ಯೇವಾಸ್ತಿ ಮನಃ ಶಿವಸ್ಯ ನ ಶಿವೇ ಚಿಂತಾಂತರಂ ಜಾಯತೇ
ಮೂರ್ತಿಸ್ತೇ ಶಿವಚೇತಸಿ ಸ್ಫುರತಿ ಸಾ ದೃಷ್ಟೇಯಮತ್ಯುತ್ಸವೈಃ॥೪೧॥

ಧ್ಯಾನಾರೂಢಮಹೇಶಚೇತಸಿ ಶಿವೇ ತ್ವಂ ನೃತ್ಯಸಿ ತ್ವಾಂ ಪರಂ
ಮನ್ಯೇ ದೈವತದೈವತಂ ಕಿಮಿತರದ್ಧ್ಯೇಯಂ ಮಹೇಶಸ್ಯ ವಾ ।
ಕಿಂ ಕೃತ್ಯಾಂತರಮೀಶ್ವರಸ್ಯ ಜಗತಾಂ ಜನ್ಮಸ್ಥಿತಿಧ್ವಂಸನಂ
ತತ್ಪಾದಾಂಗುಲಿಚಾರಣಾದಿತಿ ಶಿವೇ ಕೃತ್ಯಾಂತರಂ ಕಿಂ ಭವೇತ್॥೪೨॥

ನಾನು ನಿನ್ನ ಪುತ್ರನಾಗಿರುವೆನೆಂದೂ ತಿಳಿದು ನನಗೆ ಶಾಶ್ವತವಾದ ವರವನ್ನು ನೀಡುವವಳಾಗು. ॥೪೦॥

ಜನನಿಯೇ, ನನ್ನನ್ನೂ ಮತ್ತು ನನ್ನೊಂದಿಗೆ ಬಂದಿರುವ ಈ ಗಣೇಶನನ್ನೂ ಈಶ್ವರನು ನಿನ್ನ ಬಳಿಗೆ ಕಳುಹಿಸಿರುವನು. ಶಿವನು ನಿನ್ನ ವಿಷಯದಲ್ಲಿ ಸಂತುಷ್ಟನಾಗಿರುವನು. ಜನನಿಯೇ, ನೀನು ಆ ಶಂಕರನ ನಿಧಿಯಾಗಿರುವೆ. ಶಿವನ ಚಿತ್ತವು ನಿನ್ನಲ್ಲಿಯೇ ನೆಟ್ಟಿರುತ್ತದೆ. ಇದಲ್ಲದೆ ಇನ್ನಿತರ ಯಾವ ಚಿಂತೆಯೂ ಅವನಿಗಿಲ್ಲ. ನಿನ್ನ ಈ ವಿಗ್ರಹವೇ ಅವನ ಮನಸ್ಸಿನಲ್ಲಿ ಸ್ಫುರಿಸುತ್ತಿರುವುದು. ಅಂತಹ ನಿನ್ನನ್ನು ನಾನು ಈಗ ನೋಡಿ ಧನ್ಯನೆನಿಸಿಡೆನು. ॥೪೧॥

ಓ ಭವಾನಿಯೇ, ನೆಟ್ಟಮನಸ್ಸಿನಿಂದ ನಿನ್ನನ್ನೇ ಧ್ಯಾನಿಸುತ್ತಿರುವ ಆ ಶಿವನ ಚಿತ್ತದಲ್ಲಿ ನೀನು ನರ್ತಿಸುತ್ತಿರುವೆ. ಆದರಿಂದ ನೀನೇ ಭಾಗ್ಯಶಾಲಿಯೆನಿಸಿರುವೆ. ಆ ಮಹೇಶನಿಗೆ ನಿನ್ನನ್ನು ಬಿಟ್ಟು ಇತರ ಧ್ಯೇಯವಾದ ವಸ್ತುವೊಂದಿರುವುದೇ ? ಶಿವನಿಗೆ ನಿನ್ನ ಧ್ಯಾನವನ್ನೊಂದನ್ನು ಬಿಟ್ಟು ಇನ್ನಿತರ ಯಾವ ಕಾರ್ಯವೂ ಇರುವುದಿಲ್ಲ. ಜಗತ್ತುಗಳ ಸೃಷ್ಟಿ ಸ್ಥಿತಿ ಲಯಗಳು ಪರಶಿವನ ಅಂಗುಷ್ಠ ಚಲನದಿಂದಲೇ ಉಂಟಾಗುತ್ತಿರುವಾಗ, ಶಿವನಿಗೆ ನಿನ್ನ ಧ್ಯಾನವನ್ನು ಬಿಟ್ಟು ಇನ್ನಿತರ ಯಾವ ಕಾರ್ಯವು ತಾನೇ ಇದ್ದೀತು ? ॥೪೨॥

ಪ್ರೀತಿರ್ಯಾ ತ್ವಯಿ ಶಂಕರಸ್ಯ ಗಿರಿಜೇ ಸಾ ತತ್ಸಮಾನಾಪಿ ವಾ
ನ ಕ್ವಾಪೀತಿ ಮತಿರ್ಮಮಾಸ್ತಿ ಶಿವವಾಗ್ವ್ಯಾಪಾರಸಾರೈರ್ಮಿತಾ ।
ಸಾ ತಾವನ್ನ ಗಣೇಶ್ವರೇಽಪಿ ನ ಮಯಿ ಸ್ವಸ್ಮಿನ್ನಪಿ ಸ್ನೇಹಭೂಃ
ತ್ವನ್ಮೂರ್ತಿಃ ಪರಮಿತ್ಯನೈಮಿ ಸಕಲಾನಂದಪ್ರದಾನೋನ್ಮುಖೇ ॥೪೦॥

ಇತ್ಯುಕ್ತಂ ಗಿರಿರಾಜರಾಜತನಯಾ ತದ್ವಾಕ್ಯಮಾಕರ್ಣ್ಯ ಸಾ
ಪೀಯೂಷದ್ರವರೂಪಮಪ್ರತಿಮಮಪ್ಯಾಸ್ವಾದ್ಯ ಹೃದ್ಯಂ ಮುಹುಃ ।
ಆಲಿಂಗ್ಯಾತ್ಮಜಮಾದರಾದತಿದೃಢಸ್ನೇಹಾಂಬುಧಾರಾವೃತಂ
ಚಕ್ರೇ ಸಾ ಗಣಪಂ ಕುಮಾರಮಸಕೃತ್ಸಂಸ್ಪೃಷ್ಟ್ವಾ ಕರಾಭ್ಯಾಂ ದ್ವಿಜಾಃ॥೪೪॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಸ್ಕಂದಾಂಬಾಸಂವಾದೇ ಶಿವಪ್ರೇಮರಸವರ್ಣನಂ
ನಾಮ ಪಂಚದಶೋಽಧ್ಯಾಯಃ

ಗೌರಿಯೇ, ಶಂಕರನಿಗೆ ನಿನ್ನಲ್ಲಿರುವಷ್ಟು ಪ್ರೀತಿಯು ಮತ್ತೆಲ್ಲಿಯೂ ಇಲ್ಲವೆಂದೇ ನನಗೆ ತೋರುವುದು. ಅದನ್ನು ನಾನು ಶಂಕರನ ಮಾತುಗಳಿಂದಲೇ ತಿಳಿಯುತ್ತೇನೆ. ಅವನಿಗೆ ನಿನ್ನಲ್ಲಿರುವ ನಿರತಿಶಯವಾದ ಪ್ರೀತಿಯು ನನ್ನಲ್ಲಾಗಲಿ ಗಣೇಶನಲ್ಲಾಗಲಿ ಇಲ್ಲ. ಹೆಚ್ಚೇಕೆ! ಪರಶಿವನಿಗೆ ತನ್ನಲ್ಲಿ ನಿಜವಾಗಿಯೂ ಆ ಪ್ರೀತಿಯಿರುವುದಿಲ್ಲ. ಸಕಲಾನಂದದಾಯಕಳಾದ ನಿನ್ನ ಈ ಮೂರ್ತಿಯೇ ಶಂಕರನಿಗೆ ಪರಮ ಪ್ರಿಯವಾಗಿರುವುದೆಂದು ತಿಳಿಯುತ್ತೇನೆ. ॥೪೩॥

ಎಲೈ ಬ್ರಾಹ್ಮಣೋತ್ತಮರೇ, ಅಮೃತಧಾರೆಯನ್ನು ಸುರಿಸುವ ಕುಮಾರ ಸ್ವಾಮಿಯ ಈ ವಚನಗಳನ್ನು ಕೇಳಿ, ಪರ್ವತರಾಜಪುತ್ರಿಯಾದ ಆ ಗಿರಿಜೆಯು, ಆನಂದಭರಿತಳಾಗಿ, ಗಣನಾಯಕನನ್ನೂ ಕುಮಾರಸ್ವಾಮಿಯನ್ನೂ ಅಕ್ಕರೆಯಿಂದ ಬಿಗಿದಪ್ಪಿ, ತನ್ನ ಕೈಗಳಿಂದ ಅವರ ದೇಹವನ್ನು ಸ್ಪರ್ಶಿಸುತ್ತಾ ಆನಂದಪಟ್ಟಳು

ತಮ್ಮನ್ನು ಆಲಿಂಗಿಸಿದುದನ್ನು ಕಂಡು ಪುತ್ರನಾದ ಷಣ್ಮುಖನು ಆನಂದಬಾಷ್ಪಗಳಿಂದ ಕೂಡಿದವನಾದನು. ||೪೪||

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ "ಷಣ್ಮುಖ ಮತ್ತು ಪಾರ್ವತಿಯ ಸಂಭಾಷಣೆ" ಎಂಬ ವಿಷಯವನ್ನೊಳಗೊಂಡ ಹದಿನೈದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಷೋಡಶೋಽಧ್ಯಾಯಃ

|| ವ್ಯಾಸ ಉವಾಚ ||

ತತಃ ಪರಂ ಕುಮಾರೇಣ ಪ್ರಣತಾ ಗಿರಿಕನ್ಯಕಾ ।
ಗಣೇಶೇನಾಪಿ ವಿನುತಾ ಪ್ರಾಹ ಮಂದಂ ವಿಚಕ್ಷಣಾ ||೧||

ಮಹೇಶ್ವರೋದೀರಿತಾ ಯಾ ವಾಣೀ ಮದ್ವಿಷಯೇ ಸುತ ।
ಕಥಂಭೂತಾ ತತ್ಸ್ವರೂಪಂ ಸ್ಮೃತ್ವಾ ಸ್ಮೃತ್ವಾ ಪುನರ್ವದ ||೨||

ವಂದೇ ಸುಂದರಮಂದಾರಸುರಜಃಪುಂಜಪಿಂಜರಂ ।
ಸುರನಾರೀಶಿರಶ್ಚಾರಿಗೌರೀಚರಣಜಂ ರಜಃ ||೩||

ಹದಿನಾರನೆಯ ಅಧ್ಯಾಯ

ಬಳಿಕ ವ್ಯಾಸಮಹರ್ಷಿಯು ಮುನಿಗಳನ್ನು ಕುರಿತು ಇಂತೆಂದನು. "ಎಲೈ ಮುನಿಪುಂಗವರೇ, ಹೀಗೆ ಗಣಪತಿಯೂ ಷಣ್ಮುಖನೂ ಗಿರಿಜೆಯನ್ನು ನಮಸ್ಕರಿಸಿ ಸ್ತುತಿಸಲು, ಮಾತಿನಲ್ಲಿ ಚತುರಳಾದ ದೇವಿಯು ಮೆಲ್ಲಮೆಲ್ಲನೆ ಇಂತೆಂದಳು. ||೧||

ಎಲೈ ಪ್ರಿಯಪುತ್ರರೇ, ನನ್ನ ವಿಷಯವನ್ನನುಸರಿಸಿ, ಮಹೇಶ್ವರನು ನುಡಿದ ಆ ಮಾತು ಎಷ್ಟು ಸುಂದರವಾಗಿರುವುದು ? ಅದರ ರೀತಿಯನ್ನು ಪುನಃ ಪುನಃ ಸ್ಮರಿಸಿ ಇನ್ನೂ ಸ್ಪಷ್ಟವಾಗಿ ನನಗೆ ತಿಳಿಸುವವನಾಗು ಎನ್ನಲು, ||೨||

ಆಗ ಕುಮಾರಸ್ವಾಮಿಯು ರಮಣೀಯವಾದ ಮಂದಾರಪುಷ್ಪಗಳ ಧೂಳಿಯ ರಾಶಿಯಂತೆ ಹೊಂಬಣ್ಣವುಳ್ಳುದಾಗಿಯೂ, ದೇವತಾಸ್ತ್ರೀಯರ ಶಿರಸ್ಸಿನಲ್ಲಿ ಹರಡಿರು

ಇತ್ಯುಕ್ತ್ವಾ ತತ್ಪದಾಂಭೋಜಂ ನತ್ವಾ ಮೂರ್ಧ್ನಾ ಮುಹುರ್ಮುಹುಃ।
ಮಧುರಾಕ್ಷರಸಂಪೂರ್ಣಾಂ ಮಧುರಾಂ ಗಿರಮಾಹ ಚ ॥೪॥

॥ ಕುಮಾರ ಉವಾಚ ॥

ಗಿರಿಜೇ ಶಂಕರಃ ಪ್ರಾತಃ ಮಾತರಾಹ ದಯಾನಿಧಿಃ ।
ಗಿರಿಜಾಚರಣಂ ದ್ರಷ್ಟುಂ ಪ್ರಯಾಹೀತ್ಯಬ್ರವೀನ್ಮುದಾ ॥೫॥

ತಚ್ಚಿತ್ತವೃತ್ತಿರ್ಗಿರಿಜೇ ಶರೀರೇ ರುಚಿರೇ ಚಿರಂ ।
ಅತಿಸುಂದರಮಿತ್ಯಂಬ ವಿಲಂಬಂ ಸಹತೇ ಸ ಕಿಂ ॥೬॥

ಕುಮಾರ ಗಿರಿಜಾ ಪರಂ ಚಿರಮುದಾರಹಾರಾದರಾ
ಸಹಾರಹರಯೋಃ ಕಿಮಪಿ ನಾಂತರಂ ಪಶ್ಯತಿ ।
ವಿಹಾರವಿರಹಾದಹೋ ಹರ ಹರಾಮರಾಧೀಶ್ವರ
ಸ್ಮರ ಸ್ಮರಹರೇತಿ ಮಾಮಿತಿ ಕರೋತಿ ಚಿಂತಾ ನ ಕಿಂ ॥೭॥

ವುದಾಗಿಯೂ ಇರುವ ಪಾರ್ವತಿಯ ಪಾದದೂಳಿಗೆ ಎರಗುವೆನು ಎಂದು ದೇವಿಯನ್ನು ವಿಧವಿಧವಾಗಿ ಮೊದಲು ಸ್ತುತಿಸಿದನು. ॥೩॥

ಅನಂತರ ಕುಮಾರಸ್ವಾಮಿಯು ಗಿರಿಜೆಯ ಪಾದಕಮಲವನ್ನು ಮತ್ತೆ ಮತ್ತೆ ಸ್ಮರಿಸಿ, ಜನನಿಯನ್ನು ಕುರಿತು ಮುಂದೆ ಹೇಳುವಂತೆ ಮೃದುಮಧುರವಾದ ವಚನಗಳಿಂದ ಹೀಗೆಂದನು. ॥೪॥

ಮಾತೆಯಾದ ಗಿರಿಜೆಯೇ, ಪ್ರಾತಃಕಾಲದಲ್ಲಿ ದಯಾಶಾಲಿಯಾದ ಶಂಕರನು, ನನ್ನನ್ನು ಕುರಿತು "ನೀನು ಗಿರಿಜೆಯನ್ನು ಸಂದರ್ಶಿಸಲು ಅವಳಿದ್ದಲ್ಲಿಗೆ ಜಾಗ್ರತೆ ಹೊರಡು" ಎಂದು ಪ್ರೀತಿಯಿಂದ ಹೇಳಿದನು. ॥೫॥

ಜನನಿಯೇ, ಮಹೇಶ್ವರನ ಚಿತ್ತವೃತ್ತಿಯೆಲ್ಲವೂ ನಿನ್ನ ಸುಂದರತಮವಾದ ಶರೀರದಲ್ಲಿ ವಿಹರಿಸುತ್ತಿರುವಾಗ, ನಮ್ಮನ್ನು ಇಲ್ಲಿಗೆ ಕಳುಹಿಸಲು ಎಂದಾದರೂ ತಡಮಾಡುವನೇ ? ಅಷ್ಟು ಶೀಘ್ರವಾಗಿ ನಮ್ಮಿಬ್ಬರನ್ನೂ ಇಲ್ಲಿಗೆ ಹೊರಡಿಸಿದನು. ॥೬॥

ಮತ್ತೂ ಶಂಕರನು ನನ್ನೊಡನೆ ಹೀಗೆಂದನು "ಎಲೈ ಕುಮಾರನೇ, ಪಾರ್ವತಿಯು ಭಕ್ತರಲ್ಲಿ ಅತಿಯಾದ ಔದಾರ್ಯವನ್ನು ತೋರಿಸುವಳು. ಅಲ್ಲದೆ ನನ್ನ

ಏತಸ್ಮಿನ್ನಂತರೇ ಕಾಲೇ ಜಯಾಂ ಚ ವಿಜಯಾಮಪಿ ।
ಪ್ರೇಷಯಾಮಾಸ ಗಿರಿಶಸ್ತಾಮಪೂರ್ವಾಂ ಶಿವಾಂ ಪ್ರತಿ ॥೮॥

ತಾಭ್ಯಾಮಾಗತ್ಯ ಸಹಸಾ ನತ್ವಾ ತಚ್ಚರಣಾಂಬುಜಂ ।
ಕುಮಾರಮಪಿ ನತ್ವಾ ತಂ ಸ್ಥಿತಂ ಪಾರ್ಶ್ವೇ ಮನೋಹರೇ ॥೯॥

ತತಸ್ತಾಭ್ಯಾಂ ಸಮಾನೀತಾನ್ಯಪಾರಾಭರಣಾನಿ ಸಾ ।
ದುಕೂಲಾನಿ ವಿಚಿತ್ರಾಣಿ ಫಲಾನ್ಯಪಿ ದದರ್ಶ ಸಃ ॥೧೦॥

ತತಃ ಸಾಭರಣಾ ಗೌರೀ ಸೇಯಂ ಸತ್ವರಮುತ್ಸ್ಥಿತಿ ।
ನಿರ್ಜಗಾಮ ಬಹಿರ್ದ್ವಾರಂ ಕುಮಾರೋ ಗಣಪಾನ್ವಿತಃ ॥೧೧॥

ಭಕ್ತರಲ್ಲಿಯೂ ನನ್ನಲ್ಲಿಡುವಷ್ಟೇ ಪೂಜ್ಯಬುದ್ಧಿಯನ್ನಿಡುವಳು. ಈಗಲಾದರೋ ನನ್ನನ್ನಗಲಿರುವುದರಿಂದ, ಬಹುವಾಗಿ ದುಃಖಿಸುತ್ತಾ, ಶಂಕರನೇ, ಪರಶಿವನೇ, ದೇವದೇವನೇ, ಮಾರಾರಿಯೇ, ನನ್ನನ್ನು ಸ್ಮರಿಸಿಕೋ, ನನಗೆ ಸಾನ್ನಿಧ್ಯವನ್ನು ನೀಡು ಎಂದು ಅಂಗಲಾಚಿಕೊಳ್ಳುತ್ತಿರುವಳು ಅಲ್ಲವೇ ?'' ॥೭॥

ಅಷ್ಟರೊಳಗೆ ಶಿವನು ಜಯಾ ಮತ್ತು ವಿಜಯಾ ಎಂಬ ಇಬ್ಬರು ಸಖಿಯರನ್ನು ಪಾರ್ವತಿಯ ಬಳಿಗೆ ಕಳುಹಿಸಿದನು. ॥೮॥

ಆ ಈರ್ವರು ಸಖಿಯರು ಪಾರ್ವತಿಯ ಬಳಿಗೆ ಬಂದು ಮೊದಲು ಅವಳ ಪಾದಕಮಲಗಳಿಗೆ ನಮಸ್ಕರಿಸಿ, ಬಳಿಕ ಅಲ್ಲಿಯೇ ನಿಂತಿದ್ದ ಕುಮಾರಸ್ವಾಮಿಗೂ ವಂದಿಸಿ ಗಿರಿಜೆಯ ಪಕ್ಕದಲ್ಲಿ ನಿಂತರು. ॥೯॥

ತರುವಾಯ ಪಾರ್ವತಿಯೂ, ಕುಮಾರನೂ ಸಖಿಯರು ತಂದಿರುವ ಹೇರಳವಾದ ಆಭರಣಗಳನ್ನೂ, ವಿವಿಧವಾದ ವಸ್ತ್ರಗಳನ್ನೂ, ಮತ್ತು ಹಣ್ಣುಹಂಪಲುಗಳನ್ನೂ ನೋಡಿದರು. ॥೧೦॥

ಬಳಿಕ ಗಿರಿಜೆಯು ಆಭರಣಗಳನ್ನು ಧರಿಸಿ ಶೀಘ್ರವಾಗಿ ಶಿವನ ಬಳಿಗೆ ಹೋಗುವ ಸಿದ್ಧತೆಯನ್ನು ಮಾಡಲು ಸೇವಕರಿಗೆ ಅಪ್ಪಣೆಕೊಡುವುದಕ್ಕಾಗಿ ಆಲಯದ ಹೊರಬಾಗಿಲಿಗೆ ಬಂದಳು. ಕುಮಾರಸ್ವಾಮಿಯೂ ಗಣಪತಿಯೊಂದಿಗೆ ಜೊತೆಯಲ್ಲಿ ಬಂದನು. ॥೧೧॥

ತತಃ ಪರಂ ನಂದಿಕೇಶಪ್ರಮುಖಾಃ ಶಿವಶಂಕರಾಃ ।
ನತ್ವಾ ಕೃತಾಂಜಲಿಪುಟಾಸ್ತುಷ್ಟುವುರ್ಹೃಷ್ಟಮಾನಸಾಃ ॥೧೨॥

ಸ್ತುತ್ವಾ ತತಃ ಪರಂ ಭಕ್ತ್ಯಾ ಪ್ರಣತಾನ್ಪುನರಾದರಾತ್ ।
ಉವಾಚ ವಚನಂ ಚಾರು ಕುಮಾರಃ ಪ್ರೀತಮಾನಸಃ ॥೧೩॥

ಶಂಕರಾಲೋಕನೋದ್ಯೋಗಃ ಕರ್ತವ್ಯಸ್ತ್ವರಯಾ ಖಲು ।
ಅತಃ ಪರಂ ವಿಲಂಬೋಽಪಿ ನ ಸಂಭಾವಿತ ಏವ ಹಿ ॥೧೪॥

ಸನ್ನದ್ಧಾನಿ ವಿಮಾನಾನಿ ಭವಂತ್ವದ್ಯಾಮಿತಾನ್ಯಪಿ ।
ಮುಕ್ತಾಮಾಲಾದಿಸಂಕೀರ್ಣಾನ್ಯಪರಾಣಿ ಚ ಸತ್ವರಂ ॥೧೫॥

ಅಂಬಾವಿಮಾನಮಾನೇಯಂ ಪರಿಷ್ಕಾರಃ ಕೃತೋ ನ ವಾ ।
ಕಾಮುಗಸ್ಯ ವಿಮಾನಸ್ಯ ತಸ್ಯ ಮುಕ್ತಾಫಲೈರಲಂ ॥೧೬॥

ತರುವಾಯ ನಂದಿಕೇಶ್ವರನೇ ಮೊದಲಾದ ಶಿವನ ಸೇವಕರು ಆನಂದಭರಿತರಾಗಿ ಕುಮಾರಸ್ವಾಮಿಗೂ ಗಣಪತಿಗೂ ನಮಸ್ಕರಿಸಿ ಸ್ತುತಿಸಿದರು. ॥೧೨॥

ಹೀಗೆ ತನ್ನನ್ನು ಸ್ತುತಿಸಿ ಭಕ್ತಿಯಿಂದ ನಮಸ್ಕರಿಸಿದ ಆ ನಂದಿಕೇಶಾದಿ ಗಣಗಳನ್ನು ಕುರಿತು, ಸುಪ್ರೀತನಾದ ಕುಮಾರಸ್ವಾಮಿಯು ಆದರಪೂರ್ವಕವಾಗಿ ಹೀಗೆ ಅಪ್ಪಣೆಮಾಡಿದನು. ॥೧೩॥

“ಎಲೈ ಗಣಗಳೇ, ಶಂಕರನ ದರ್ಶನಕ್ಕೆ ಹೋಗಲು ತಕ್ಕ ಅನುಕೂಲತೆಗಳನ್ನು ಶೀಘ್ರವಾಗಿ ಕಲ್ಪಿಸಬೇಕು. ದೀರ್ಘಕಾಲವು ಈಗಲೇ ಕಳೆದುಹೋಗಿದೆ. ಇನ್ನು ತಡಮಾಡುವುದು ಉಚಿತವಲ್ಲ. ॥೧೪॥

ಪ್ರಯಾಣಕ್ಕೆ ಅನುಕೂಲವಾದ ಕೆಲವು ವಿಮಾನಗಳನ್ನು ಸಿದ್ಧಪಡಿಸಿರಿ. ಆ ವಿಮಾನಗಳು ಮುತ್ತಿನ ಹಾರಗಳಿಂದ ಅಲಂಕರಿಸಲ್ಪಟ್ಟು ಸುಂದರವಾಗಿರಲಿ. ಅಂತಹ ಕೆಲವು ವಿಮಾನಗಳನ್ನು ಶೀಘ್ರವಾಗಿ ಇಲ್ಲಿಗೆ ತನ್ನಿರಿ. ॥೧೫॥

ದೇವಿಯಾದ ಪಾರ್ವತಿಯು ಕುಳಿತುಕೊಳ್ಳುವ ವಿಮಾನವನ್ನೂ ಇನ್ನೂ ಅಲಂಕರಿಸಿಲ್ಲವೆ? ಇಚ್ಛಾಗಾಮಿಯಾದ ಆ ವಿಮಾನವನ್ನು ಮುಕ್ತಾಫಲಗಳಿಂದ ಅಲಂಕರಿಸುವ ಅವಶ್ಯಕತೆಯೇ ಇರುವಂತೆ ಕಾಣುವುದಿಲ್ಲ. ॥೧೬॥

ಸುದುಕೂಲಪತಾಕಾಶ್ಚ ಛತ್ರಾಣ್ಯದ್ಯ ಸಹಸ್ರಶಃ ।
ವಿಮಾನಶಿಖರೇ ಸಂತು ಸಂತ್ವನ್ಯೇಷ್ವಪಿ ಕೋಟಿಶಃ ॥೧೭॥

ಸುಮಂದಾರಮರಂದಾನಾಂ ಧಾರಾಃ ಸಂತು ಸಹಸ್ರಶಃ ।
ಮಂದಾರಮಾಲಾನಿಕರೈರಾಮೂಲಾಗ್ರೇ ವಿಜೃಂಭಿತೈಃ ॥೧೮॥

ಸುಕಲ್ಪತರುಗುಚ್ಛಾನಾಂ ಛಾಯಯಾ ಛನ್ನಮಸ್ತು ತತ್ ।
ತನ್ಮಂಡಿತಂ ಭವತ್ವಾಶು ಚಂದ್ರಮಂಡಲಮಂಡನೈಃ ॥೧೯॥

ತಾರತಾರಾಮಾಲಿಕಾಶ್ಚ ಸಾಂದ್ರಾಃ ಸಂತು ಸಹಸ್ರಶಃ ।
ವಿದ್ಯುದ್ದಾಮಾರ್ಬುದೈರಸ್ತು ಪರಿವೀತಂ ತದುನ್ನತಂ ॥೨೦॥

ಇಂದ್ರನೀಲಮಣಿಚ್ಛಾಯಾ ಮಧ್ಯೇ ಮಧ್ಯೇ ತು ವರ್ತತಾಂ ।
ರತ್ನಸಿಂಹಾಸನೈರ್ದಿವ್ಯೈರಪರೈರ್ವೀತಮಸ್ತು ತತ್ ॥೨೧॥

ಅಮೂಲ್ಯವಾದ ವಸ್ತ್ರಗಳಿಂದ ನಿರ್ಮಿತವಾದ ಪತಾಕೆಗಳನ್ನೂ, ಮತ್ತು ಶ್ವೇತಚ್ಛತ್ರಗಳನ್ನೂ ದೇವಿಯ ವಿಮಾನದ ಶಿಖರದಲ್ಲಿರಿಸಿರಿ. ಮತ್ತು ಇನ್ನಿತರ ವಿಮಾನಗಳನ್ನೂ ಹಾಗೆಯೇ ಪತಾಕೆಗಳಿಂದಲೂ ಶ್ವೇತಚ್ಛತ್ರಗಳಿಂದಲೂ ಅಲಂಕರಿಸಿರಿ. ॥೧೭॥

ವಿಮಾನದ ಶಿಖರವನ್ನು ಮಂದಾರಪುಷ್ಪಗಳ ಮಾಲೆಗಳಿಂದ ಅಲಂಕರಿಸಿ, ಘಮಘಮಿಸುವ ಆ ಮಂದಾರಪುಷ್ಪಗಳ ಮಕರಂದಧಾರೆಗಳು, ವಿಮಾನದಲ್ಲಿ ಸುರಿಯುವಂತೆ ಮಾಡಿರಿ. ॥೧೮॥

ಕಲ್ಪವೃಕ್ಷಗಳ ಗೊಂಚಲುಗಳ ನೆರಳು ವಿಮಾನದ ಅಗ್ರಭಾಗವನ್ನು ಮುಚ್ಚುವಂತೆ ಮಾಡಿರಿ. ಚಂದ್ರಮಂಡಲದಂತೆ ಪ್ರಕಾಶಮಾನವಾಗಿರುವ ಅಲಂಕಾರಗಳಿಂದ ಆ ವಿಮಾನವನ್ನು ಅಲಂಕರಿಸಿರಿ. ॥೧೯॥

ಉನ್ನತವಾದ ವಿಮಾನದ ಶಿಖರವನ್ನು ನಕ್ಷತ್ರಮಾಲಿಕೆಗಳಿಂದಲೂ ಮತ್ತು ಅಸಂಖ್ಯಾತನಾದ ವಿದ್ಯುದ್ದೀಪಗಳಿಂದಲೂ ಬೆಳಗಿಸಿರಿ. ॥೨೦॥

ರಥದೊಳಗೆ ಅಲ್ಲಲ್ಲಿ ಇಂದ್ರನೀಲಮಣಿಗಳ ಪ್ರಭೆಯು ಪ್ರಸರಿಸುವಂತೆ ಮಾಡಿರಿ. ಮತ್ತು ಅದರೊಳಗಡೆಯಲ್ಲಿ ಸುತ್ತಲೂ ರತ್ನಖಚಿತವಾದ ಸಿಂಹಾಸನಗಳನ್ನು ಇರಿಸಿರಿ. ॥೨೧॥

ತನ್ಮಧ್ಯೇ ಮಣಿಶೋಭಾಭಿರ್ಘನೀಭೂತಾಭಿರುನ್ನತಾ ।
ವೇದಿಕಾ ರತ್ನಮಾಲಾಭಿಶ್ಚಿತ್ರೈರಸ್ತ್ವಾವೃತಾ ಪುನಃ ॥೨೨॥

ತತ್ರ ಸಿಂಹಾಸನಂ ದಿವ್ಯಂ ಸುಮೇರುಸದೃಶಂ ಶ್ರಿಯಾ ।
ರಚನೀಯಂ ಮೃದುತರಂ ರತ್ನಚ್ಛಾಯಾಭಿರಾದರಾತ್ ॥೨೩॥

ವಿರಾಜಿತಂ ಭವತ್ವೇತದಪಾರೈಶ್ಚಾಮರೈರಪಿ ।
ರತ್ನಸೋಪಾನಮಾರ್ಗಾಶ್ಚ ತತ್ರ ಸಂತ್ವಾಶು ಕೋಟಿಶಃ ॥೨೫॥

ಉತ್ಫುಲ್ಲಕುಸುಮಚ್ಛನ್ನಾಃ ಮಾರ್ಗಾಸ್ತೇ ಸಮರಂದಪಾಃ ।
ಭವಂತು ಸತ್ವರಂ ತತ್ರ ಮಂದೋ ವಾತಃ ಪ್ರವರ್ತತಾಂ ॥೨೬॥

ವಿಮಾನದ ಮಧ್ಯಭಾಗದಲ್ಲಿ ನಿಬಿಡವಾದ ರತ್ನಕಾಂತಿಗಳಿಂದ ಶೋಭಿಸುತ್ತಲಿರುವ ವೇದಿಕೆಯನ್ನೊಂದನ್ನು ನಿರ್ಮಿಸಬೇಕು. ಆ ವೇದಿಕೆಯನ್ನು ರತ್ನಮಾಲಿಕೆಗಳಿಂದ ಅಲಂಕರಿಸಬೇಕು. ||೨೨||

ಆ ವೇದಿಕೆಯ ಮೇಲೆ ಸುಮೇರುಪರ್ವತಕ್ಕೆ ಸದೃಶವಾದ ಕಾಂತಿಯುಳ್ಳ ಮತ್ತು ಅತ್ಯಂತ ಮೃದುವಾದ ಸಿಂಹಾಸನವನ್ನೊಂದನ್ನು ಸ್ಥಾಪಿಸಬೇಕು. ರತ್ನಗಳ ಕಾಂತಿಯು ಆ ಸಿಂಹಾಸನವನ್ನು ಬೆಳಗುವಂತಿರಬೇಕು. ||೨೩||

ಮಧ್ಯಭಾಗದಲ್ಲಿ ಚಂದ್ರನಕಿರಣಗಳ ಕಾಂತಿಯಿಂದ ನಿರ್ಮಲವಾಗಿ ಶೋಭಿಸುತ್ತಿರುವ ಆ ವೇದಿಕೆಯನ್ನು ರತ್ನಮಾಲಿಕೆಗಳಿಂದ ಅಲಂಕರಿಸಬೇಕು. ||೨೪||

ವಿಮಾನದ ಶಿಖರವನ್ನು ಅಸಂಖ್ಯಾಕವಾದ ಚಾಮರಗಳಿಂದ ಶೃಂಗರಿಸಬೇಕು. ಮತ್ತು ರತ್ನಖಚಿತವಾದ ಮೆಟ್ಟಲುಗಳಿಂದ ಕೂಡಿದ ಮಾರ್ಗಗಳನ್ನು ಅಲ್ಲಿ ಅಸಂಖ್ಯಾತವಾಗಿ ರಚಿಸಬೇಕು. ||೨೫||

ಆ ಮಾರ್ಗಗಳಲ್ಲಿ ಚೆನ್ನಾಗಿ ಅರಳಿರುವ ಹೂವುಗಳನ್ನು ಹರಡಬೇಕು. ಆ ಹೂವುಗಳ ಮಕರಂದವನ್ನು ಪಾನಮಾಡುವುದಕ್ಕೋಸ್ಕರ ಮಾರ್ಗದಲ್ಲಿ ದುಂಬಿಗಳು ಸಂಚರಿಸಲಿ. ಮತ್ತು ಮಾರ್ಗಮಧ್ಯದಲ್ಲಿ ಮಂದಮಾರುತವು ಬೀಸುವಂತೆ ಮಾರ್ಗವನ್ನು ರಚಿಸಿರಿ. ||೨೬||

ಸುಮೇರುತುಂಗಶಿಖರಪ್ರಭಾಕೋಟಿಜಯೋದ್ಯತೈಃ ।
ತದ್ರತ್ನಕಲಶೈರ್ವೀತಮುಪಾರ್ಯೈರಸ್ತು ಸತ್ವರಂ ॥೨೭॥

ಹರಮಂದಿರಮಾರ್ಗೋಽಪಿ ಸದುರ್ಗೋ ಮಾಸ್ತು ಭರ್ಗತಃ ।
ಭೀತಿರಸ್ತು ಸ ಮಾರ್ಗೋತಃ ಛಾದಿತೋಽಸ್ತು ಸುಧಾಕರೈಃ ॥೨೮॥

ಸುಧಾಕರಕರಛಾಯಾಛಾದಿತೇ ಪಥಿ ಶಂಕರಃ ।
ತದ್ವನೇ ನ ಸಮಾಯಾತಿ ಕದಾಚಿತ್ತನ್ನ ವಿದ್ಮಹೇ ॥೨೯॥

ಮೃದುಲೋ ಭರ್ಗಮಾರ್ಗಶ್ಚೇತ್ಸ್ವರ್ಗಸ್ಯಾಪಿ ತಿರಸ್ಕ್ರಿಯಾ ।
ಭವತ್ಯತಃ ಪ್ರವೃತ್ತಿಶ್ಚ ಸುಲಭಾ ಸಾ ಸುಖಾವಹಾ ॥೩೦॥

ವಿಮಾನದ ಅಗ್ರಭಾಗದಲ್ಲಿ ಸುಮೇರುಪರ್ವತದ ಉನ್ನತವಾದ ಶಿಖರದ ಕಾಂತಿರಾಶಿಯನ್ನು ತಿರಸ್ಕರಿಸುವಂತೆ ಅತಿಯಾಗಿ ಕಂಗೊಳಿಸುತ್ತಿರುವ ರತ್ನಖಚಿತವಾದ ಅನೇಕ ಕಲಶಗಳನ್ನು ಸ್ಥಾಪಿಸಿರಿ. ॥೨೭॥

ಶಿವನ ಆಲಯಕ್ಕೆ ಹೋಗುವ ದಾರಿಯು ದುರ್ಗಮವಾಗಿರುವುದು. ಅಲ್ಲಿ ಪ್ರಖರವಾದ ಸೂರ್ಯನ ಕಿರಣಗಳು ತಾಪವನ್ನುಂಟುಮಾಡುವುವು. ಅಲ್ಲಿ ತಂಪನ್ನುಂಟುಮಾಡುವ ಅಮೃತಮಯವಾದ ಚಪ್ಪರಗಳಿಂದ ಆ ಮಾರ್ಗವನ್ನು ಅಲಂಕರಿಸಿರಿ. ॥೨೮॥

ಚಂದ್ರನ ಕಿರಣಗಳಿಂದ ಆವರಿಸಲ್ಪಟ್ಟಿಒಂದು ಮಾರ್ಗದಲ್ಲಿ ಶಂಕರನು ಉದ್ಯಾನವನದಿಂದ ಒಂದೊಂದು ಬಾರಿ ಬರುವನು. ಆದರೆ ಅವನು ಬರುವ ಸಮಯವನ್ನು ನಾವು ತಿಳಿಯಲಾರೆವು. ಒಂದುವೇಳೆ ಶಂಕರನು ಅಲ್ಲಿದ್ದರೆ ಸೂರ್ಯಕಿರಣಗಳು ನಮ್ಮನ್ನು ಸಂತಾಪಗೊಳಿಸಲಾರವು. ॥೨೯॥

ಶಂಕರನು ಸಂಚರಿಸುವ ಮಾರ್ಗವು ಸೂರ್ಯಕಿರಣಗಳಿಂದ ತಪ್ತವಾಗದಿದ್ದರೆ ಅದು ಸ್ವರ್ಗಲೋಕದ ಮಾರ್ಗವನ್ನು ಸಹ ತಿರಸ್ಕರಿಸುತ್ತಿದ್ದಿತು. ಮತ್ತು ಮಾರ್ಗದಲ್ಲಿ ಎಲ್ಲರೂ ಸರಾಗವಾಗಿ ಸಂಚರಿಸಬಹುದಾಗಿದ್ದಿತು. ಆದರೆ ಸ್ವರ್ಗದ್ವಾರದಂತೆ ಇದು ಸುಗಮವಾದುದಲ್ಲ. ॥೩೦॥

ಪ್ರಸಾಶ್ಚ ಕೋಟಿಶಃ ಸಂತು ಸುಧಾಧಾರಾಭಿರಧ್ವನಿ ।
ರತ್ನಮಾಲಾಪರಿಕ್ರಾಂತಾಸ್ತೇ ಮಾರ್ಗಾಃ ಸಂತು ಕೋಟಿಶಃ ॥೩೧॥

ಮುಕ್ತಾಜಾಲಪರಿಚ್ಛನ್ನಾಃ ಪುಷ್ಪಾಸಾರಸಮಾವೃತಾಃ ।
ಫಲೈರಪ್ಯತುಲ್ಯೈಃ ಪೂರ್ಣಾಃ ಸಂತು ಮಾರ್ಗಾಸ್ಸಹಸ್ರಶಃ ॥೩೨॥

ತರವೋ ದೂರತಃ ಸಂತು ದಿಗಂತಂ ಯಾಂತು ತೇ ಪರಂ ।
ಅತ್ಯುನ್ನತಾಶ್ಚ ಕರ್ತವ್ಯಾಃ ಕುಸುಮಾಸಾರಮಂಟಪಾಃ ॥೩೩॥

ತತ್ರ ನಾಟ್ಯಾಂಗನಾಃ ಸಂತು ಕೋಟಿಶೋಽಪಿ ಪದೇ ಪದೇ ।
ಸೌಂದರ್ಯಧಾರಾಸಂಕ್ರಾಂತಾಸ್ತಾಃ ಸರ್ವಾ ನವಯೌವನಾಃ ॥೩೪॥

ಪುಷ್ಪಪ್ರಸಾರರಚನಾ ವಿಧೇಯಾಸ್ಸಾದರಂ ಪಥಿ ।
ಪ್ರಾಸಾದಾಃ ಕೋಟಿಶಃ ಸಂತು ಸುಪುಷ್ಪಾ ಮಾರ್ಗಪಾರ್ಶ್ವಯೋಃ॥೩೫॥

ಮಾರ್ಗಮಧ್ಯದಲ್ಲಿ ಅಸಂಖ್ಯಾಕವಾದ ಅರವಟ್ಟಿಗೆಗಳನ್ನು ಸ್ಥಾಪಿಸಿರಿ. ಅವುಗಳಲ್ಲಿ ಸುಧೆಯನ್ನು ಸಿದ್ಧಪಡಿಸಿರಿ. ಅಲ್ಲಿಗೆ ಹೋಗುವ ಮಾರ್ಗಗಳನ್ನು ರತ್ನಮಾಲಿಕೆಗಳಿಂದ ಅಲಂಕರಿಸಿರಿ. ॥೩೧॥

ಪ್ರಯಾಣಮಾರ್ಗಗಳನ್ನು ಸುತ್ತಲೂ ಮುತ್ತಿನಹಾರಗಳಿಂದ ಅಲಂಕರಿಸಿ, ಎಲ್ಲೆಡೆಯಲ್ಲಿಯೂ ಮಕರಂದವನ್ನು ಬೀರುವ ಹೂವುಗಳನ್ನು ಎರಚಿರಿ. ಇದಲ್ಲದೇ ಅನೇಕ ಕಡೆಗಳಲ್ಲಿ ರುಚಿರುಚಿಕರವಾದ ಅನೇಕ ಜಾತಿಯ ಹಣ್ಣುಗಳನ್ನು ಇರಿಸಿರ ಬೇಕು. ॥೩೨॥

ವೃಕ್ಷಗಳೆಲ್ಲವೂ ಮಾರ್ಗದಿಂದ ಅತ್ಯಂತ ದೂರದಲ್ಲಿದ್ದು ದಿಗಂತಗಳನ್ನು ವ್ಯಾಪಿಸುವಷ್ಟು ವಿಶಾಲವಾಗಿರಲಿ. ಮತ್ತು ಮಾರ್ಗಮಧ್ಯದಲ್ಲಿ ಎಲ್ಲೆಡೆಯಲ್ಲಿಯೂ, ಅತ್ಯಂತ ಉನ್ನತವಾದ ಪುಷ್ಪಮಂಟಪಗಳನ್ನು ರಚಿಸಿರಿ. ॥೩೩॥

ಮಾರ್ಗಮಧ್ಯದಲ್ಲಿ ಅಲ್ಲಲ್ಲಿ ಅಸಂಖ್ಯಾಕರಾದ ನರ್ತಕಿಯರು ನಿಂತಿರಲಿ. ಅವರೆಲ್ಲರೂ ಅತಿ ಸುಂದರಿಯರಾಗಿಯೂ ನೂತನಯೌವನಭರಿತರಾಗಿಯೂ ಇರ ಬೇಕು. ॥೩೪॥

ಮಾರ್ಗದಲ್ಲಿ ಹೂವುಗಳನ್ನು ಹರಡಿರಬೇಕು. ಎರಡು ಪಕ್ಕಗಳಲ್ಲಿಯೂ ಅನೇಕ ಮಹಡಿಯ ಮಂದಿರಗಳನ್ನು ನಿರ್ಮಿಸಿ, ಅವುಗಳನ್ನು ಪುಷ್ಪಮಾಲಿಕೆಗಳಿಂದ ಅಲಂಕರಿಸಬೇಕು. ॥೩೫॥

ಸುಧಾಫಲಾನಿ ವಿಮಲಾನ್ಯನಂತಾನ್ಯಪಿ ತೇಷ್ವಪಿ ।
ಸಂತು ತೇಷು ಸುಧಾಧಾರಾಸ್ತಟಿತ್ಕುಲಸಮಾಕುಲಾಃ ॥೩೬॥

ರತ್ನಮಾಲಾಭೂಷಿತಾಶ್ಚ ಚಂದ್ರಚಾರುಕರಾನ್ವಿತಾಃ ।
ಸರ್ವೇ ನವತ್ವಮಾಪನ್ನಾಸ್ಸಂತು ತಾವತ್ಪ್ರತಿಕ್ಷಣಂ ॥೩೭॥

ತನ್ಮಾರ್ಗೇ ರುದ್ರವೀಣಾನಾಂ ರಮ್ಯಾಣಾಂ ಸಂತು ಕೋಟಯಃ ।
ನಖಾಘಾತಂ ವಿನಾ ಸರ್ವೇ ಮಧುರಧ್ವನಿಸಂವೃತಾಃ ॥೩೮॥

ಶುಕಾನಾಂ ಚ ಪಿಕಾನಾಂ ಚ ಕೋಟಯಃ ಸಂತು ಸತ್ವರಂ ।
ಮರಾಲರಾಜರಾಜೀನಾಂ ರಾಜೀನಾಮಪಿ ಕೋಟಯಃ ॥೩೯॥

ಸರಾಂಸಿ ಕೋಟಿಶಃ ಸಂತು ಫುಲ್ಲರಾಜೀವರಾಜಿಭಿಃ ।
ವಿರಾಜಿತಾನಿ ರಜಸಾ ಪಿಂಜರಾಣ್ಯಪ್ಯನುಕ್ಷಣಂ ॥೪೦॥

ಆ ಮನೆಗಳಲ್ಲಿ ಅಮೃತದಂತೆ ರುಚಿಕರವಾಗಿಯೂ ಮತ್ತು ಶುಚಿಕರವಾಗಿಯೂ ಇರುವ ನಾನಾವಿಧವಾದ ಹಣ್ಣುಗಳನ್ನು ಸಿದ್ಧಪಡಿಸಿರಿ. ಮತ್ತು ಮನೆಗಳ ಗೋಡೆಗಳಲ್ಲಿ ವಿದ್ಯುದ್ದೀಪಗಳನ್ನು ಇರಿಸಿರಿ. ॥೩೬॥

ಸಕಲ ಪ್ರಾಸಾದಗಳೂ ರತ್ನಮಾಲೆಗಳಿಂದ ಅಲಂಕರಿಸಲ್ಪಟ್ಟುವುಗಳಾಗಿಯೂ, ಚಂದ್ರಕಿರಣಗಳಿಂದ ಕಂಗೊಳಿಸುವುವುಗಳಾಗಿಯೂ ಇರಲಿ. ಎಲ್ಲವೂ ಆಗತಾನೇ ಹೊಸದಾಗಿ ನಿರ್ಮಿಸಲ್ಪಟ್ಟುವುಗಳೋ ಎಂಬಂತೆ ಕಾಣಿಸುವಂತಿರಬೇಕು. ॥೩೭॥

ಶಿವಾಲಯಕ್ಕೆ ಹೋಗುವ ಆ ಮಾರ್ಗದ ಮಧ್ಯದಲ್ಲಿ ಅಸಂಖ್ಯಾತವಾದ ರುದ್ರವೀಣೆಗಳು ವಿರಾಜಿಸಲಿ. ಅವು ಮನುಷ್ಯಪ್ರಯತ್ನವಿಲ್ಲದೆಯೇ ಮಧುರವಾದ ಧ್ವನಿಯನ್ನು ನುಡಿಸುವಂತಿರಬೇಕು. ॥೩೮॥

ಮತ್ತು ಮಾರ್ಗದಲ್ಲಿ ರಮಣೀಯವಾದ ಅನೇಕ ಗಿಣಿಗಳನ್ನೂ ಕೋಗಿಲೆಗಳನ್ನೂ ಮತ್ತು ಹಂಸಗಳನ್ನು ಸಾಲುಸಾಲಾಗಿ ನಿಲ್ಲಿಸಬೇಕು. ॥೩೯॥

ಚೆನ್ನಾಗಿ ಅರಳಿರುವ ಕಮಲಗಳಿಂದ ಶೋಭಿಸುತ್ತಲಿರುವ ಮತ್ತು ಅವುಗಳ ಧೂಳಿಯಿಂದ ಹೊಂಬಣ್ಣವಾಗಿ ತೋರುವ ಅನೇಕ ಸರೋವರಗಳನ್ನು ಮಾರ್ಗಮಧ್ಯದಲ್ಲಿ ನಿರ್ಮಿಸಿರಿ. ॥೪೦॥

ವಿದ್ರುಮಾಣಾಂ ಲತಾಃ ಸಂತು ಕೋಮಲಾಃ ಕೋಟಿಶಃ ಪಥಿ ।
ನಾಟ್ಯಾಂಗನಾನುಕರಣಂ ಕೃತ್ವಾ ಕೃತ್ವಾ ಪ್ರತಿಕ್ಷಣಂ ॥೪೧॥

ತನ್ಮಾರ್ಗೇ ಪುಷ್ಪವಾಟೀನಾಂ ಕೋಟಯಃ ಸಂತು ಕೋಟಯಃ ।
ಉತ್ಫುಲ್ಲಪುಷ್ಪರೂಪಾಣಾಂ ಮಂದಿರಾಣಾಂ ಸಮಾಕುಲಾಃ ॥೪೨॥

ಏವಂ ನಿಯೋಗಮಾಸಾದ್ಯ ಸುಯಶಾಪತಿರಾದರಾತ್ ।
ಪ್ರೇಷಯಾಮಾಸ ಸ ಗಣಾನ್ ತತ್ತತ್ಕಾರ್ಯಕ್ಷಮಾನ್ ಬಹೂನ್ ॥೪೩॥

ಏತಸ್ಮಿನ್ನಂತರೇ ಕಾಲೇ ಭೃಂಗೀ ಶಂಕರಮಂದಿರಾತ್ ।
ಸಮಾಗತೋ ವಿಮಾನೇನ ಕಂಪಮಾನೇನ ವಾಯುನಾ ॥೪೪॥

ದ್ವಾರಾದ್ವಿಮಾನಮಾಲೋಕ್ಯ ಕುಮಾರಃ ಕಂಪಮಾವಹನ್ ।
ನಂದಿಕೇಶಮುವಾಚೇದಂ ವಚನಂ ತಂ ವಿಚಕ್ಷಣಃ ॥೪೫॥

ಆ ಮಾರ್ಗದಲ್ಲಿ ನರ್ತಕಿಯರು ನಾಟ್ಯವನ್ನು ಅಭಿನಯಿಸುತ್ತಿರುವುವೋ ಎಂಬಂತೆ ವಾಯುವಿನಿಂದ ಚಲಿಸುವ ಅನೇಕ ಹವಳದ ಬಳ್ಳಿಗಳು ವಿರಾಜಿಸಲಿ. ||೪೧||

ಶಿವಾಲಯಕ್ಕೆ ತೆರಳುವ ಆ ಮಾರ್ಗದಲ್ಲಿ ಅರಳಿರುವ ಸುಂದರವಾದ ಮತ್ತು ಸುಗಂಧಯುಕ್ತವಾದ ಹೂವುಗಳಿಂದ ಶೋಭಿಸುವ ಅಸಂಖ್ಯಾತವಾದ ಉದ್ಯಾನವನಗಳನ್ನು ನಿರ್ಮಿಸಬೇಕು." ||೪೨||

ಸುಯಶೆಯ ಪತಿಯಾದ ನಂದಿಕೇಶ್ವರನು, ಕುಮಾರಸ್ವಾಮಿಯ ಈ ಅನುಜ್ಞೆಯನ್ನು ಆದರಪೂರ್ವಕವಾಗಿ ಸಂಮತಿಸಿ, ಆಯಾ ಕಾರ್ಯಗಳನ್ನು ಸಾಧಿಸುವುದರಲ್ಲಿ ಚತುರರಾದ ಅನೇಕ ಗಣಗಳನ್ನು ಪ್ರಯಾಣದ ಅನುಕೂಲತೆಯನ್ನು ಸಿದ್ಧಪಡಿಸುವುದಕ್ಕೋಸ್ಕರ ಕಳುಹಿಸಿದನು. ||೪೩||

ಇಷ್ಟರೊಳಗೆ ಭೃಂಗಿ ಎಂಬ ಹೆಸರುಳ್ಳ ಶಂಕರನ ಸೇವಕನು ವಾಯುವಿನಿಂದ ಕಂಪಿಸುತ್ತಿರುವ ವಿಮಾನವನ್ನೇರಿ ಶಿವಾಲಯದಿಂದ ಅಲ್ಲಿಗೆ ವೇಗವಾಗಿ ಬಂದನು. ||೪೪||

ನಂದಿಕೇಶೇಶಮಸ್ಮಾಕಂ ಶತಾಂಶೇನಾಪಿ ದುರ್ಲಭಂ ।
ಮಮಾಸ್ಯಾಗಮನೇ ಕಾಲೋ ಭೂಯಾನೇವಾಭವತ್ಖಲು ॥೪೬॥

ತದ್ವಿಮಾನಂ ಸಮಾಯಾತಿ ತ್ವರಯಾ ಕಸ್ಯ ತದ್ಭವೇತ್ ।
ಶಂಕರಾಜ್ಞಾಂ ತ್ವರಾಂ ಪ್ರಾಪ್ಯ ಪ್ರಾಯಃ ಕೋಽಪಿ ಸಮೇತಿ ಮಾಂ ॥೪೭॥

ಇತಸ್ತ್ವಯಾ ವಿಮಾನೇನ ಗಂತವ್ಯಮಿತಿ ಸತ್ವರಂ ।
ವಿಚಾರೋಽಪಿ ತ್ವಯಾ ಕಾರ್ಯಸ್ತೇನಾಪಿ ಸಹ ಸಾದರಂ ॥೪೮॥

ನ ತೇನ ಸಹ ವಕ್ತವ್ಯಂ ನಿಷ್ಠುರಂ ಚತುರಂ ವಚಃ ।
ನ ಕರ್ಣಾರುಂತುದಂ ಯಾಹಿ ಮಧುರಂ ವದ ಸಾದರಂ ॥೪೯॥

ಷಣ್ಮುಖನು ದೂರದಿಂದ ಬರುತ್ತಿರುವ ಆ ವಿಮಾನವನ್ನು ಗೃಹದ್ವಾರದಿಂದಲೇ ನೋಡಿ ನಡುಗುತ್ತಾ ನಂದಿಕೇಶ್ವರನನ್ನು ಕುರಿತು ಹೀಗೆಂದನು. ||೪೫||

" ಎಲೈ ನಂದಿಕೇಶ್ವರನೇ, ನಮ್ಮಿಬ್ಬರ ಅಪೂರ್ವವಾದ ಈ ಸಮಾಗಮವು ಅತ್ಯಂತ ದುರ್ಲಭವಾದುದು. ನಾನು ಇಲ್ಲಿಗೆ ಆಗಮಿಸಿ ಬಹುಕಾಲವು ಕಳೆದು ಹೋಯಿತಲ್ಲವೆ! ||೪೬||

ಇಗೋ ಇತ್ತ ನೋಡು! ಆ ವಿಮಾನವು ಶೀಘ್ರವಾಗಿ ಇತ್ತ ಕಡೆ ಸಾಗಿ ಬರುತ್ತಿರುವುದು. ಅದು ಯಾರ ವಿಮಾನವಾಗಿರಬಹುದು! ಪ್ರಾಯಶಃ ಶಂಕರನ ಆಜ್ಞೆಯನ್ನು ಪಡೆದು ಯಾವನೋ ಒಬ್ಬ ಭೃತ್ಯನು ನನ್ನ ಬಳಿಗೆ ಬರುತ್ತಿರುವನು. ||೪೭||

ಆದುದರಿಂದ ಈಗ ನೀನು ಇಲ್ಲಿಂದ ವಿಮಾನವನ್ನೇರಿ, ಅವನ ಬಳಿಗೆ ಹೋಗಿ ಅವನ ಸಮಾಗಮದ ಕಾರಣವನ್ನು ವಿಚಾರಿಸುವವನಾಗು. ||೪೮||

ಅವನೊಂದಿಗೆ ಕ್ರೂರವಾಗಿಯೂ, ಕುಹಕವಾಗಿಯೂ, ಕರ್ಣಕಠೋರವಾಗಿಯೂ ಇರುವ ಮಾತನ್ನು ಆಡಬೇಡ. ಮಧುರವಾದ ಮಾತುಗಳಿಂದ ನಿಜಾಂಶವನ್ನು ತಿಳಿ. ||೪೯||

ಮಧುರಾಕ್ಷರವಾಣೀನಾಂ ಪಾತ್ರಂ ಶಂಕರಕಿಂಕರಾಃ ।
ತೇಷು ನಿಷ್ಠುರಮುಕ್ತ್ವಾಂತೇ ನರಕಂ ಯಾತಿ ಸತ್ವರಂ ॥೫೦॥

ಪುರಾ ಹಿಮಗಿರಿಪ್ರಾಂತೇ ಶಂಕರಾರಾಧನೋತ್ಸುಕಃ ।
ಶುಕನಾಮಾ ಮುನಿರ್ಜಾತಃ ಜನ್ಮಕೋಟಿತಪಃಫಲೈಃ ॥೫೧॥

ತತ್ರ ತುಂಗಾನಿ ಲಿಂಗಾನಿ ಕೋಟಿಶಃ ಸಂತಿ ತಾನ್ಯಯಂ ।
ಪೂಜಯಿತ್ವಾ ಸ್ಥಿತಸ್ತತ್ರ ಸ್ವಕರಾರ್ಜಿತಸಾಧನೈಃ ॥೫೨॥

ನೀಹಾರಧಾರಾಲಿಂಗೇಷು ತೇನ ತೇಷು ಪ್ರಕಲ್ಪಿತಾಃ ।
ಮಂದಾರಕುಸುಮಾಸಾರೈಃ ಪೂಜಿತಾನಿ ಪ್ರತಿಕ್ಷಣಂ ॥೫೩॥

ಅರ್ಕಸಂಪರ್ಕಭೀತ್ಯಾಪಿ ಸುಪುಷ್ಪಪಟಮಂಡಪೈಃ ।
ಲಿಂಗಮಂಡಲಮಾಕ್ರಾಂತಂ ಚಕಾರ ಚ ಮನೋಹರಂ ॥೫೪॥

ಶಿವನ ಸೇವಕರು, ಶ್ರುತಿಮಧುರವಾದ ಅಕ್ಷರಗಳಿಂದ ಕೂಡಿರುವ ಮಾತುಗಳನ್ನಾಡುವವರು. ಅವರೊಂದಿಗೆ ಕರ್ಣಕಠೋರವಾದ ಮಾತನ್ನಾಡಿದರೆ, ಆಡಿದವರು ಅಂತ್ಯದಲ್ಲಿ ನರಕವನ್ನು ಹೊಂದುವರು. ॥೫೦॥

ಹಿಂದೆ ಹಿಮವತ್ಪರ್ವತದ ತಪ್ಪಲಿನಲ್ಲಿ ಶುಕನೆಂಬ ಹೆಸರುಳ್ಳ ಮುನಿಯೊಬ್ಬನು ಶಿವನ ಆರಾಧನೆಯಲ್ಲಿ ಉತ್ಸಾಹವುಳ್ಳವನಾಗಿ, ಕೋಟ್ಯಂತರ ಜನ್ಮಗಳ ಸುಕೃತಮಹಿಮೆಯಿಂದ ಒಬ್ಬ ತಪಸ್ವಿಯೆನಿಸಿದನು. ॥೫೧॥

ಅಲ್ಲಿ ಕೋಟ್ಯಂತರ ಶಿವಲಿಂಗಗಳು ವಿರಾಜಿಸುತ್ತಿದ್ದವು. ಅವನು ತಾನು ಸಂಗ್ರಹಿಸಿದ ಫಲಪುಷ್ಪಾದಿ ಪೂಜಾಸಾಮಗ್ರಿಗಳಿಂದ ಆ ಶಿವಲಿಂಗಗಳನ್ನು ಪೂಜಿಸುತ್ತಾ ವಾಸವಾಗಿದ್ದನು. ॥೫೨॥

ಅವನು ಅಲ್ಲಿರುವ ಮಂಜಿನ ಧಾರೆಗಳಿಂದಲೇ ಲಿಂಗಗಳಿಗೆ ಅಭಿಷೇಕಮಾಡಿ, ಮಂದಾರಪುಷ್ಪಗಳಿಂದ ಪ್ರತಿಕ್ಷಣವೂ ಪೂಜಿಸುತ್ತಿದ್ದನು. ॥೫೩॥

ಲಿಂಗಗಳಿಗೆ ಸೂರ್ಯನ ಕ್ರೂರವಾದ ಕಿರಣಗಳೆಲ್ಲಿ ತಗುಲುವುವೋ ಎಂಬ ಭಯದಿಂದ ಅವನು, ಪುಷ್ಪಮಂಟಪಗಳಿಂದ ಲಿಂಗಗಳನ್ನು ಅಲಂಕರಿಸುತ್ತಿದ್ದನು ॥೫೪॥

ಶಂಕರಾಚಾರನಿರತೈರಸಾರ್ಯೈಃ ಶಾಂಕರೈರ್ವೃತಃ ।
ಸಂಪೂಜಯತಿ ಲಿಂಗಾನಿ ಯಾಮೇ ಯಾಮೇ ವಿಶೇಷತಃ ॥೫೫॥

ಪೂಜಯಾಮಾಸ ಲಿಂಗಾನಿ ಬಿಲ್ವಕೋಮಲಪಲ್ಲವೈಃ ।
ವಿಮಲೈರತುಲ್ಯೈಃ ಕಾಲೇ ಕಾಲೇ ಜಲಲವಾಕುಲೈಃ ॥೫೬॥

ತಾರಕಾಕರ್ಷಣಂ ಕೃತ್ವಾ ತಾರಾಮಾಲಾಸಮಾಕುಲಂ ।
ಶಿವಲಿಂಗಾಲಯಂ ಚಕ್ರೇ ಪರಿತಃ ಪರಿಶೋಧಿತಂ ॥೫೭॥

ಅಮಂದಕುಂದಮಂದಾರರಜಃಪುಂಜೈಃ ಸಮಾಕುಲಂ ।
ಲಿಂಗಮೂಲಂ ಚಕಾರಾಸಾವನುವೇಲಂ ಸಲೀಲಯಾ ॥೫೮॥

ದಿವ್ಯಾನ್ನಪರ್ವತೈರ್ರೈವ ನೈವೇದ್ಯಮತಿಸಾದರಂ ।
ಸಂಕಲ್ಪಯತಿ ಶುದ್ಧಾತ್ಮಾ ತಪಸಾ ಪರಿಕಲ್ಪಿತೈಃ ॥೫೯॥

ಅವನು ಶಂಕರನಿಗೆ ಪ್ರಿಯವಾದ ಆಚಾರಗಳಲ್ಲಿ ಆಸಕ್ತರಾದ ಅನೇಕ ಮಂದಿ ಮುನಿಗಳೊಂದಿಗೆ ಪ್ರತಿಜಾವದಲ್ಲಿಯೂ ಆ ಲಿಂಗಗಳನ್ನು ಅರ್ಚಿಸುತ್ತಿದ್ದನು. ॥೫೫॥

ಕೋಮಲವಾಗಿಯೂ ಮತ್ತು ಶುಭ್ರವಾಗಿಯೂ ಇರುವ ಅನೇಕ ಬಿಲ್ವದಳಗಳಿಂದಲೂ ಅಭಿಷೇಕದಿಂದಲೂ ಅವನು ಆ ಲಿಂಗಗಳನ್ನು ಸದಾ ಪೂಜಿಸುತ್ತಿದ್ದನು. ॥೫೬॥

ನಕ್ಷತ್ರಗಳನ್ನು ಬರಮಾಡಿಕೊಂಡು ಅವುಗಳ ಮಾಲಿಕೆಗಳಿಂದ ಆ ಶಿವಲಿಂಗದ ಆಲಯವನ್ನು ಅಲಂಕರಿಸಿ ಅದನ್ನು ಚೊಕ್ಕಟವಾಗಿಡುತ್ತಿದ್ದನು. ॥೫೭॥

ಹೊತ್ತು ಹೊತ್ತಿಗೂ ಲಿಂಗದ ಪೀಠವನ್ನು ಮಾಗಿಯ ಮಲ್ಲಿಗೆ, ಮಂದಾರ ಕುಸುಮ ಮುಂತಾದ ಅನೇಕ ಸುಗಂಧಯುಕ್ತವಾದ ಪುಷ್ಪಗಳ ಧೂಳಿಗಳಿಂದ ಅನಾಯಾಸವಾಗಿ ಅಲಂಕರಿಸುತ್ತಿದ್ದನು. ॥೫೮॥

ಅವನು ತನ್ನ ತಪೋಮಹಿಮೆಯಿಂದ ಪರ್ವತದಂತೆ ಉನ್ನತವಾದ ಅನ್ನದ ರಾಶಿಯನ್ನು ಲಿಂಗದ ಮುಂದೆ ಸ್ಥಾಪಿಸಿ ಅದನ್ನು ನಿವೇದಿಸುತ್ತಿದ್ದನು. ॥೫೯॥

ಪರಮಾನ್ನಪ್ರವಾಹಾಶ್ಚ ಶರ್ಕರಾಗಿರಿಸಂಯುತಾಃ ।
ಆಜ್ಯಪ್ರವಾಹಸಂಬಂಧಾಸ್ತೇನೇಶೇನ ಪ್ರಕಲ್ಪಿತಾಃ ॥೬೦॥

ವಟಕೋದುಂಬರಾದೀನಿ ಪಕ್ವಾನ್ನಾನ್ಯಪಿ ಕೋಟಿಶಃ ।
ಶರ್ಕರಾಜ್ಯಸಮೇತಾಶ್ಚ ಕಲ್ಪಯಾಮಾಸ ಸಾದರಂ ॥೬೧॥

ಮಧುಕ್ಷೀರಪ್ರವಾಹಾಶ್ಚ ಕಲ್ಪಿತಾಸ್ತೇನ ಕೋಟಿಶಃ ।
ಸುಧಾಪ್ರವಾಹಾಸ್ತೇನೈವ ಪಾನಾರ್ಥಮಪಿ ಕಲ್ಪಿತಾಃ ॥೬೨॥

ಏಲಾಲವಂಗಕರ್ಪೂರಖಾದಿರಾದಿ ಸಮನ್ವಿತಾನ್ ।
ತಾಂಬೂಲಶೈಲಾನ್ ವಿಪುಲಾನ್ಕಲ್ಪಯಾಮಾಸ ಕೋಟಿಶಃ ॥೬೩॥

ಚಂದನಾದಿಕಕರ್ಪೂರಕಸ್ತೂರೀಸಂಯುತಾನ್ಯಪಿ ।
ಕಲ್ಪಯಾಮಾಸ ತಪಸಾ ಚಂದ್ರಕಲ್ಪಾನಿ ಶಂಭವೇ ॥೬೪॥

ಅವನು ನದಿಯಂತೆ ಪ್ರವಾಹರೂಪವಾಗಿ ಹರಿಯುತ್ತಿರುವ ಪರಮಾನ್ನದ ರಾಶಿಯನ್ನೂ, ಸಕ್ಕರೆಯ ಗಿರಿಯನ್ನೂ, ತುಪ್ಪದ ಗಡಿಗೆಗಳನ್ನು ಶಿವನೈವೇದ್ಯಕ್ಕಾಗಿ ಅರ್ಪಿಸುತ್ತಿದ್ದನು. ॥೬೦॥

ಮತ್ತು ವಟಕಭಕ್ಷ್ಯಗಳನ್ನೂ (ವಟಕವೆಂದರೆ ಕಡಲೆಯಬೇಳೆಯಿಂದ ತಯಾರಿಸಿದ ಆಂಬೋಡೆ) ಮೋದಕಗಳನ್ನೂ, ಮತ್ತು ಸಕ್ಕರೆ ತುಪ್ಪಗಳಿಂದ ಸಿದ್ಧಪಡಿಸಿದ ಪಕ್ವಾನ್ನಗಳನ್ನೂ ತನ್ನ ತಪೋಮಹಿಮೆಯಿಂದ ಸೃಷ್ಟಿಸಿ, ಅವುಗಳನ್ನು ಭಕ್ತಿಪೂರ್ವಕವಾಗಿ ಮಹೇಶನಿಗೆ ನಿವೇದಿಸುತ್ತಿದ್ದನು. ॥೬೧॥

ಒಂದೊಂದುಸಾರಿ ಜೇನುತುಪ್ಪ ಮತ್ತು ಹಾಲುಗಳ ಪ್ರವಾಹಗಳನ್ನೇ ಸೃಷ್ಟಿಸುತ್ತಿದ್ದನು. ಇದಲ್ಲದೇ ಅಮೃತದ ಪ್ರವಾಹವನ್ನೇ ಪಾನೀಯವನ್ನಾಗಿ ನಿವೇದಿಸುತ್ತಿದ್ದನು. ॥೬೨॥

ಏಲಕ್ಕಿ, ಲವಂಗ, ಕರ್ಪೂರ, ಖಾದಿರ (ಬದರೀವೃಕ್ಷದಂತಿರುವ ಸುಗಂಧ ಮರ) ಮುಂತಾದ ಸುಗಂಧದ್ರವ್ಯಗಳಿಂದ ಕೂಡಿರುವ ಅನೇಕ ತಾಂಬೂಲಗಳ ರಾಶಿಯನ್ನೇ ಈಶನಿಗೆ ನಿವೇದಿಸುತ್ತಿದ್ದನು. ॥೬೩॥

ಚಂದ್ರನಂತೆ ಆಹ್ಲಾದವನ್ನುಂಟುಮಾಡುವ ಚಂದನ, ಕರ್ಪೂರ, ಕಸ್ತೂರೀ ಮೊದಲಾದ ಅತ್ಯುತ್ಕೃಷ್ಟವಾದ ಸುಗಂಧದ್ರವ್ಯಗಳನ್ನು ಶಿವನಿಗೋಸ್ಕರ ತನ್ನ ತಪಸ್ಸಿನಿಂದ ನಿರ್ಮಿಸಿದನು. ॥೬೪॥

ಅಪಾರಪುಷ್ಪಮಾಲಾಭಿರತುಲಾಭಿರನೇಕಧಾ ।
ಪೂಜಯಾಮಾಸ ನಿಯಮಾತ್ತಪಸಾ ಪೂಜಯನ್ ಶಿವಂ ॥೬೫॥

ರತ್ನಚ್ಛತ್ರೈಶ್ಚಾಮರೈಶ್ಚ ಕೋಟಿಶಃ ಪರಿಕಲ್ಪಿತೈಃ ।
ರತ್ನನೀರಾಜನೈರ್ದಿವ್ಯೈಶ್ಚಕಾರ ಶಿವಪೂಜನಂ ॥೬೬॥

ತಸ್ಯ ತಾವತ್ಕಲತ್ರಾಣಾಮಯುತಂ ಯೌವನಾನ್ವಿತಂ ।
ತೇನೈವ ಕಲ್ಪಯಾಮಾಸ ನಾಟ್ಯಂ ಶಂಕರಮಂದಿರೇ ॥೬೭॥

ಗಾನಂ ಚ ಕಾರಯಾಮಾಸ ರುದ್ರವೀಣಾಭಿರಾದರಾತ್ ।
ದುಂದುಭಿಧ್ವನಯಸ್ತೇನ ನಿರ್ಮಿತಾಃ ಸ್ವತಪೋಬಲಾತ್ ॥೬೮॥

ತಥಾ ಶಿವರತಸ್ತತ್ರ ರುದ್ರಾಧ್ಯಯನತತ್ಪರಃ ।
ಹರಶಿಷ್ಯಸಮಾಕ್ರಾಂತಃ ಹಾರಾನ್ ಸಂಯೋಜಯನ್ ಸ್ಥಿತಃ ॥೬೯॥

ತನ್ನ ತಪಸ್ಸಿನಿಂದ ಶಿವನನ್ನು ಆರಾಧಿಸುತ್ತಾ, ಸರ್ವೋತ್ಕೃಷ್ಟವಾಗಿರುವ ಅಸಂಖ್ಯಾತವಾದ ಪುಷ್ಪಮಾಲಿಕೆಗಳಿಂದ ಶಂಕರನನ್ನು ಅನೇಕ ವಿಧದಿಂದ ಪೂಜಿಸಿದನು. ॥೬೫॥

ರತ್ನಖಚಿತವಾದ ಛತ್ರಿಗಳಿಂದಲೂ, ಮೃದುವಾದ ಚಾಮರಗಳಿಂದಲೂ, ಮತ್ತು ರತ್ನಮಯತವಾದ ನಿರಾಜನಗಳಿಂದಲೂ ಶಿವಾರ್ಚನೆಯನ್ನು ನೆರವೇರಿಸಿದನು. ॥೬೬॥

ಅವನಿಗೆ ಯೌವನಭರಿತರಾದ ಹತ್ತು ಸಹಸ್ರ ಮಂದಿ ಹೆಂಡತಿಯರಿದ್ದರು. ಅವನು ಆ ಸ್ತ್ರೀಯರಿಂದಲೇ ಶಿವಾಲಯದಲ್ಲಿ ನರ್ತನಮಾಡಿಸಿದನು. ॥೬೭॥

ರುದ್ರವೀಣೆಗಳಿಂದ ಗಾಯನವನ್ನು ಮಾಡಿಸಿದನು. ಮತ್ತು ಅವನು ತನ್ನ ತಪಃಶಕ್ತಿಯಿಂದ ಅನೇಕ ಭೇರಿಗಳು ಧ್ವನಿಗೈಯ್ಯುವಂತೆ ಏರ್ಪಡಿಸಿದನು. ॥೬೮॥

ಹೀಗೆ ಅವನು ಶಿವಧ್ಯಾನದಲ್ಲಿ ಆಸಕ್ತನಾಗಿ ರುದ್ರಾಧ್ಯಾಯವನ್ನು ಪಠಿಸುತ್ತಾ ಶಿವನ ಶಿಷ್ಯರಲ್ಲೊಬ್ಬನಾಗಿದ್ದುಕೊಂಡು ಶಿವಭಕ್ತರಾದವರನ್ನು ಸತ್ಕರಿಸುವ ಕಾರ್ಯದಲ್ಲಿ ನೆರವಾಗಿದ್ದನು. ॥೬೯॥

ಹಾರನ್ನೈವೇದ್ಯಶೇಷೇಣ ಹಾರಾಣಾನೇವ ಭೋಜನಂ ।
ಕಲ್ಪಯಾಮಾಸ ನಿಯಮಾತ್ಸರಸೇನ ವಿಶೇಷತಃ ॥೭೦॥

ವಿಚಿತ್ರಾಣಿ ದುಕೂಲಾನಿ ಶಂಕರಾಯಾರ್ಪಿತಾನ್ಯಪಿ ;
ಹಾರೇಭ್ಯಃ ಪ್ರದದೌ ಭಕ್ತ್ಯಾ ದಿವ್ಯಾನ್ಯಾಭರಣಾನಿ ಚ ॥೭೧॥

ಯದಾ ಯಾನಿ ಪ್ರದತ್ತಾನಿ ದುಕುಲಾಭರಾಣಾನ್ಯಪಿ ।
ತಾನಿ ದತ್ವಾ ಶಾಂಭವೇಭ್ಯೋ ದದಾವನ್ಯಾನಿ ಶಂಭವೇ ॥೭೨॥

ಛತ್ರಾಣಿ ಚಾಮರಾದೀನಿ ನೂತನಾನಿ ದಿನೇದಿನೇ ।
ಕಲ್ಪಯಾಮಾಸ ತಪಸಾ ತತ್ಫಲಂ ತದಿಹಾಸ್ತ್ವಿತಿ ॥೭೩॥

ವಿನಾ ನ ತಪಸಾ ತಾವತ್ಸಾಮಗ್ರೀ ತಾವತೀ ಕುತಃ ।
ತೇನೈವ ಕಲ್ಪಯಾಮಾಸ ಶಿವಪೂಜನಸಾಧನಂ ॥೭೪॥

ಶಿವನಿಗೆ ನಿವೇದಿಸಿ ಉಳಿದ ಭಕ್ಷ್ಯಭೋಜ್ಯಗಳನ್ನು ಯೋಗ್ಯರಾದ ಶಿವಾರ್ಚಕರಿಗೆ ಭೋಜನಮಾಡಿಸುತ್ತಿದ್ದನು. ॥೭೦॥

ವಿವಿಧವಾದ ವಸ್ತ್ರಗಳನ್ನೂ, ಅಮೂಲ್ಯವಾದ ಆಭರಣಗಳನ್ನೂ ಶಂಕರನಿಗೆ ಸಮರ್ಪಿಸಿ ಬಳಿಕ ಅವುಗಳನ್ನು ಬಡವರಿಗೆ, ಶಿವಸೇವಕರಿಗೆ ದಾನಮಾಡುತ್ತಿದ್ದನು. ॥೭೧॥

ಒಂದುಬಾರಿ, ಈಶ್ವರನಿಗೆ ಸಮರ್ಪಿಸಿದ ಆ ವಸ್ತ್ರಾಭರಣಗಳನ್ನು ದಾನಮಾಡಿ ಬಳಿಕ ಬೇರೆಯಾದ ನೂತನ ವಸ್ತ್ರಗಳನ್ನು ಮತ್ತೆ ಈಶ್ವರನಿಗೆ ಸಮರ್ಪಿಸುತ್ತಿದ್ದನು. ॥೭೨॥

ತನ್ನ ತಪೋಬಲದಿಂದ, ಪ್ರತಿ ದಿನವೂ ಹೊಸ ಹೊಸದಾದ ಛತ್ರಚಾಮರಗಳನ್ನು ನಿರ್ಮಿಸಿ, "ಶಿವನಿಗೆ ಇವುಗಳನ್ನು ಸಮರ್ಪಿಸಿದುದರಿಂದ ತನಗೆ ತಪಃಫಲವು ಸಿದ್ಧಿಸಲಿ" ಎಂದು ಅವುಗಳನ್ನು ಶಂಕರನಿಗೆ ಸಮರ್ಪಿಸುತ್ತಿದ್ದನು. ॥೭೩॥

ತಪಃಶಕ್ತಿಯಿಲ್ಲವಾದರೆ ದಿವ್ಯವಾದ ಆ ಪೂಜಾಸಾಮಗ್ರಿಗಳು ಲಭಿಸುವುದು ಹೇಗೆ? ಅದಕ್ಕಾಗಿಯೇ ಅವನು ತನ್ನ ಆ ತಪಃಶಕ್ತಿಯನ್ನು ಗಳಿಸಿ ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸುತ್ತಿದ್ದನು. ॥೭೪॥

ಬಹುಜನ್ಮಾರ್ಜಿತೇನಾಪಿ ತಪಸಾ ತೇನ ಕಿಂ ಫಲಂ ।
ಯದಿ ಶಂಕರಪೂಜಾಯಾಮುಪಯುಕ್ತಂ ನ ತತ್ತಪಃ ॥೭೫॥

ತಪಸಾಪಿ ಸಮಾಸಾದ್ಯ ಶಿವಪೂಜನಸಾಧನಂ ।
ತೇನಾರ್ಚಯಿತ್ವಾ ದೇವೇಶಂ ಕೃತಕೃತ್ಯೋ ಭವೇನ್ನರಃ ॥೭೬॥

ತತ್ತಪಃ ಫಲಿತಂ ತೇನ ಯೇನ ಸಾಧನಮುತ್ತಮಂ ।
ಸಂಪಾದಿತಂ ಮಹಾದೇವಪೂಜನಾಯ ಪ್ರತಿಕ್ಷಣಂ ॥೭೭॥

ತಪಶ್ಚೇಚ್ಛಿವಪೂಜಾಯಾಮುಪಯುಕ್ತಂ ನ ತರ್ಹಿ ತತ್ ।
ತಪಃ ಕಿಂ ತು ಮಹಾರಣ್ಯಶಿಲಾವೃಕ್ಷಾದಿರೋದನಂ ॥೭೮॥

ತಪಸಾ ಪ್ರಾಪ್ಯ ಭಾಗ್ಯಾನಿ ಭಾಗ್ಯವಂತಃ ಪರಾತ್ಪರಃ ।
ಶಂಕರಂ ಪೂಜಯಂತ್ಯನ್ಯೇ ದುರ್ಭಗಾ ಏವ ಕೇವಲಂ ॥೭೯॥

ಅನೇಕ ಜನ್ಮಗಳಿಂದ ಸಂಪಾದಿಸಲ್ಪಟ್ಟಿದ್ದರೂ ತಪಃಫಲವು ಶಂಕರನ ಪೂಜೆಯಲ್ಲಿ ವಿನಿಯೋಗವಾಗದಿದ್ದರೆ ಅಂತಹ ತಪಃಫಲದಿಂದ ಲಭಿಸುವ ಸುಖವೇನು? ॥೭೫॥

ತಪೋಮಹಿಮೆಯಿಂದ, ಶಿವಪೂಜೆಯ ಸಾಮಗ್ರಿಗಳನ್ನು ಸಂಪಾದಿಸಿ ಅದರಿಂದ ಶಿವನನ್ನು ಪೂಜಿಸಿ ತೃಪ್ತಿಪಡಿಸಿದರೆ ಆಗ ಮನುಷ್ಯನು ಕೃತಾರ್ಥನೆನಿಸುವನು. ॥೭೬॥

ಯಾವ ತಪಸ್ಸಿನಿಂದ ಶಿವನನ್ನು ಪೂಜಿಸುವುದಕ್ಕೋಸ್ಕರ ಶ್ರೇಷ್ಠವಾದ ಪೂಜಾಸಾಮಗ್ರಿಯು ಸಂಪಾದಿಸಲ್ಪಡುವುದೋ, ಆ ತಪಸ್ಸೇ ಸಫಲವೆನಿಸುವುದು. ॥೭೭॥

ಅತಿ ಪ್ರಯಾಸದಿಂದ ಸಂಪಾದಿಸಿದ ತಪಃಶಕ್ತಿಯನ್ನು ಶಿವಪೂಜೆಯಲ್ಲಿ ವಿನಿಯೋಗಿಸದಿದ್ದರೆ, ಆ ತಪಸ್ಸಿಗೆ ಸಾರ್ಥಕತೆಯೇ ದೊರಕಿದಂತಾಗಲಿಲ್ಲ. ಮತ್ತೇನೆಂದರೆ ನಿರ್ಜನವಾದ ಗೊಂಡಾರಣ್ಯಪ್ರದೇಶದಲ್ಲಿ ಗಟ್ಟಿಯಾಗಿ ಅತ್ತಂತೆ ನಿಷ್ಫಲವೆನಿಸುವುದು. ॥೭೮॥

ಪುಣ್ಯಶಾಲಿಗಳಾದವರು ತಪಸ್ಸಿನಿಂದ ಸಕಲ ಸಂಪತ್ತುಗಳನ್ನೂ ಪಡೆದು ಅಜ್ಞಾನಸಂಬಂಧವಿಲ್ಲದ ಪರಿಶುದ್ಧನಾದ ಆ ಶಿವನನ್ನು ಪೂಜಿಸುತ್ತಾರೆ. ಹೀಗೆ ಅವನನ್ನು ಪೂಜಿಸದಿರುವವರು ದುರದೃಷ್ಟಶಾಲಿಗಳೇ ಅಲ್ಲವೇ? ॥೭೯॥

ತಪಸ್ತಾವದ್ವಿಧೇಯಂ ಸ್ಯಾದ್ಯಾವಚ್ಛಂಕರಪೂಜನೇ ।
ಸಾಧನಂ ಪ್ರಾಪ್ತಮೇತೇನ ನ ತತ್ಸ್ಯಾತ್ತದನಂತರಂ ॥೮೦॥

ಶಂಕರಾರ್ಚನಸಾಮಗ್ರೀಪ್ರಾಪ್ತಿರಸ್ತು ತಪಃಫಲಂ ।
ಫಲೇ ಪ್ರಾಪ್ತೇ ಪುನಸ್ತೇನ ಸಾಧನೇನಾಲಮಿತ್ಯಲಂ ॥೮೧॥

ನ ಯೇನ ತಪಸಾ ಪ್ರಾಪ್ತಂ ಶಿವಪೂಜನಸಾಧನಂ ।
ನ ತತ್ತಪಃ ಕಿಂ ತು ತತ್ತು ತಂತುವಾಯವಿಚೇಷ್ಟಿತಂ ॥೮೨॥

ತಪಸಾ ಪ್ರಾಪ್ಯ ಸಾಮಗ್ರೀಂ ಶಂಕರಾರಾಧನಸ್ಯ ಯಃ ।
ಸ ಶಂಕರಾರಾಧನೇನ ಮುಕ್ತೋ ಭವತಿ ನಾನ್ಯಥಾ ॥೮೩॥

ತದ್ಭಾಗ್ಯಮಪ್ಯಭಾಗ್ಯಂ ಸ್ಯಾದ್ಯೇನ ನಾರಾಧಿತಃ ಶಿವಃ ।
ಕೃತೇ ಶಿವಾರಾಧನೇ ತು ಭಾಗ್ಯಂ ಭಾಗ್ಯತ್ವಮಾಪ್ನುಯಾತ್ ॥೮೪॥

ಶಂಕರನ ಪೂಜೆಗೆ ಉಪಯುಕ್ತವಾದ ಸಾಮಗ್ರಿಗಳು ಲಭಿಸುವವರೆಗೆ ತಪಸ್ಸನ್ನಾಚರಿಸಬೇಕು. ದೊರೆತ ಬಳಿಕ ತಪಸ್ಸಿನ ಆವಶ್ಯಕತೆಯೇ ಇರುವುದಿಲ್ಲ. ॥೮೦॥

ಏಕೆಂದರೆ ಶಿವಪೂಜೆಗೆ ಯೋಗ್ಯವಾದ ಸಾಮಗ್ರಿಗಳು ಲಭಿಸುವುದೇ ತಪಸ್ಸಿನ ಗುರಿ. ಫಲವು ದೊರಕಿದ ಬಳಿಕ ಅದರ ಸಾಧನದ ಆವಶ್ಯಕತೆಯೇನು ? ॥೮೧॥

ಯಾವ ತಪಸ್ಸಿನಿಂದ ಶಿವಪೂಜೆಯ ಸಾಮಗ್ರಿಯು ದೊರಕುವುದಿಲ್ಲವೋ ಅದು ತಪಸ್ಸಾಗಿರದೇ, ವಸ್ತ್ರಗಳನ್ನು ನೇಯುವವನ ಚೇಷ್ಟೆಯಂತೆ ಪರೋಪಕಾರದಲ್ಲಿ ಪರ್ಯವಸಾನ ಹೊಂದುವುದು. ॥೮೨॥

ಯಾವನು ತಪಸ್ಸಿನ ಮೂಲಕ ಶಿವಪೂಜೆಯ ಸಾಮಗ್ರಿಗಳನ್ನು ಸಂಪಾದಿಸಿ ಶಿವನನ್ನು ಪೂಜಿಸುವನೋ, ಆಗ ಅವನು ಆ ಶಿವಪೂಜೆಯ ಮಹಿಮೆಯಿಂದ ಮೋಕ್ಷವನ್ನು ಹೊಂದುವನು. ಹಾಗಿಲ್ಲದಿದ್ದರೆ ಎಂದಿಗೂ ಮುಕ್ತಿಯು ಲಭಿಸಲಾರದು. ॥೮೩॥

ಯಾವನು ಶಿವನನ್ನು ಆರಾಧಿಸುವುದಿಲ್ಲವೋ ಅವನು, ಸಂಪದ್ಯುಕ್ತನಾಗಿದ್ದರೂ, ಆ ಭಾಗ್ಯವು ಭಾಗ್ಯವೆಂದೆನಿಸಿ ಕೊಳ್ಳಲಾರದು. ಶಿವಾರಾಧನೆಯೇ ಉತ್ತಮವಾದ ಒಂದು ಭಾಗ್ಯ. ॥೮೪॥

ಭಾಗ್ಯಾನಾಮಪಿ ಸಂವಾದಃ ಪುರಾ ಕೋಽಪಿ ಶ್ರುತೋ ಮಯಾ ।
ಸ ಸಂವಾದಃ ಶ್ರುತಃ ಸದ್ಯಃ ಪರಮಾನಂದಸಾಧನಂ ॥೮೫॥

ಭಾಗ್ಯಾಧಿದೇವತಾಃ ಸರ್ವಾ ಸರ್ವಸೌಭಾಗ್ಯಸಂಯುತಾಃ ।
ರತ್ನಮಂಟಪಮಧ್ಯಸ್ಥಸಿಂಹಾಸನಸಮಾಶ್ರಿತಾಃ ॥೮೬॥

ತತ್ರೈಕದೇವತಾ ಪ್ರಾಹ ಸುಂದರಂ ವಚನಂ ತದಾ ।
ಭವತಾಮುಪಯೋಗೋಽದ್ಯ ಕುತ್ರ ವಾ ಜಾಯತೇ ಫಲಂ ॥೮೭॥

ಕಿಂ ತೇ ಮಹೇಶಪೂಜಾಯಾಮುಪಯೋಗೋಽಧುನಾ ವದ ।
ವದ ತ್ವಂ ಚ ವದ ತ್ವಂ ಚ ವದ ತ್ವಂ ಚ ವದಾಶು ಮೇ ॥೮೮॥

ಅನೃತಂ ನೈವ ವಕ್ತವ್ಯಮಿದಂ ಶಂಕರಮಂದಿರಂ ।
ಅತ್ರಾನೃತಪ್ರವಾದೇನ ವಿನಾಶೋ ಭವತಿ ಧ್ರುವಂ ೮೯॥

ಈ ಹಿಂದೆ ನಾನು ಒಂದುಬಾರಿ ಭಾಗ್ಯದೇವತೆಗಳಲ್ಲಿ ನಡೆದ ಪರಸ್ಪರ ಸಂಭಾಷಣೆಯನ್ನು ಕೇಳಿರುವೆನು. ಆ ಸಂವಾದ ಶ್ರವಣಮಾತ್ರದಿಂದಲೇ ಜನರಿಗೆ ಅತ್ಯಂತ ಆನಂದವುಂಟಾಗುವುದು. ॥೮೫॥

ಒಂದಾನೊಂದು ಸಾರಿ, ಭಾಗ್ಯದ ಅಭಿಮಾನಿದೇವತೆಗಳು ಸಕಲ ಸೌಭಾಗ್ಯಗಳಿಂದಲೂ ಯುಕ್ತರಾಗಿ ರತ್ನನಿರ್ಮಿತವಾದ ಮಂಟಪದ ಮಧ್ಯದಲ್ಲಿರುವ ಸಿಂಹಾಸನವನ್ನಲಂಕರಿಸಿದ್ದರು. ॥೮೬॥

ಈ ರೀತಿಯಲ್ಲಿ ಅವರು ಒಂದೇ ಸ್ಥಳದಲ್ಲಿ ಕುಳಿತಿರಲು, ಆಗ ಅವರಲ್ಲಿ ಒಬ್ಬ ದೇವತೆಯು ತನ್ನ ಗೆಳತಿಯರಾದ ಉಳಿದ ಭಾಗ್ಯದೇವತೆಗಳಲ್ಲಿ ಒಬ್ಬೊಬ್ಬರನ್ನು ಕುರಿತು ಹೀಗೆಂದಳು.—"ಎಲೌ ಸಖಿಯರೇ, ನಿಮ್ಮಿಂದ ಜನರು ಯಾವ ಫಲವನ್ನು ಹೊಂದುವರು ? ॥೮೭॥

ಎಲೌ ಭದ್ರೆಯೇ, ಈಶ್ವರಾರಾಧನೆಯಲ್ಲಿ ನಿನ್ನ ವಿನಿಯೋಗವಿರುವುದೇ ? ಇದನ್ನು ಚೆನ್ನಾಗಿ ಮನಗಂಡು ಹೇಳುವವಳಾಗು. ॥೮೮॥

ಇದು ಶಿವಾಲಯವಾಗಿರುವುದು. ಆದುದರಿಂದ ಇಲ್ಲಿ ಸುಳ್ಳನ್ನಾಡುವುದು ಉಚಿತವಲ್ಲ. ಇಲ್ಲಿ ಸುಳ್ಳನ್ನಾಡುವುದರಿಂದ ಮರಣವೇ ಸಂಭವಿಸುವುದು. ॥೮೯॥

ಸತ್ಯಸ್ವರೂಪೋ ಭಗವಾನುಮಾಕಾಂತಸ್ತಥಾ ಸತಿ ।
ತತ್ಸನ್ನಿಧಾನೇ ವಕ್ತವ್ಯಂ ಸತ್ಯಮೇವಾದ್ಯ ಸಾದರಂ ॥೯೦॥

ಅನ್ಯತ್ರ ಯತ್ರ ಕುತ್ರಾಪಿ ಭವತ್ವನೃತಭಾಷಣಂ ।
ಶಾಲಲೋಚನದೇಶೇಷು ಸಾ ವಾರ್ತಾ ನ ಹಿತಾವಹಾ ॥೯೧॥

ಅಸತ್ಯರೂಪನಿಕಟೇ ಭವತ್ವನೃತಭಾಷಣಂ ।
ಸತ್ಯಭೂತಮಹಾದೇವಮಂದಿರೇ ತತ್ಕಥಂ ಭವೇತ್ ॥೯೨॥

ಶಂಕರೇ ಸತ್ಯಭೂತತ್ವಂ ಋತಂ ಸತ್ಯಮಿತಿ ಶ್ರುತಿಃ ।
ವದತ್ಯೇವಂ ನ ಚಾನ್ಯಸ್ಯ ಸತ್ಯತ್ವಂ ಶ್ರುತಿಚೋದಿತಂ ॥೯೩॥

ಸತ್ಯೇ ರಮಂತೇ ಮುನಯಃ ಸತ್ಯಂ ಶಂಕರ ಏವ ಸಃ ।
ತತ್ಸನ್ನಿಧಾನೇಽನೃತಂ ಮಹಾಪಾತಕಸನ್ನಿಭಂ ॥೯೪॥

ಪರಮಪೂಜ್ಯನಾದ ಪಾರ್ವತೀಪತಿಯು ಸತ್ಯಸ್ವರೂಪನು. ಆದುದರಿಂದ ಅವನ ಸನ್ನಿಧಾನದಲ್ಲಿ ಸತ್ಯವಚನವನ್ನೇ ನುಡಿಯಬೇಕು, ಅನೃತವನ್ನೆಂದಿಗೂ ನುಡಿಯಬಾರದು. ॥೯೦॥

ಶಿವಾಲಯವನ್ನು ಬಿಟ್ಟು ಇನ್ನಿತರ ಯಾವ ಪ್ರದೇಶದಲ್ಲಾದರೂ ಅನೃತವನ್ನು ನುಡಿಯಬಹುದು. ಆದರೆ, ಶಿವನ ಸಾನ್ನಿಧ್ಯದಲ್ಲಿ ಅನೃತವನ್ನಾಡುವುದು ಹಿತವನ್ನುಂಟುಮಾಡಲಾರದು. ॥೯೧॥

ಅಸತ್ಯವು ನೆಲಸಿರುವ ಕಡೆಯಲ್ಲಿ ಅನೃತವನ್ನು ನುಡಿಯುವುದು ಉಚಿತ. ಆದರೆ ಸತ್ಯಗಳಿಗೆ ನೆಲೆಯಾಗಿರುವ ಈಶ್ವರಾಲಯದಲ್ಲಿ ಅಸತ್ಯಕ್ಕೆ ಆಸ್ಪದವೆಲ್ಲಿಂದ? ॥೯೨॥

"ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ" ಎಂಬ ಈ ಶ್ರುತಿಯು ಶಂಕರನು ಸತ್ಯಸ್ವರೂಪನೆಂಬುದನ್ನು ತಿಳಿಸುತ್ತದೆ. ಅವನನ್ನು ಬಿಟ್ಟು ಇತರ ಯಾವ ವಸ್ತುವನ್ನೂ ಸತ್ಯವಾದುದೆಂದು ಶ್ರುತಿಯು ಬೋಧಿಸುವುದಿಲ್ಲ. ॥೯೩॥

ಜ್ಞಾನಿಗಳು ಆ ಸತ್ಯಸ್ವರೂಪದಲ್ಲಿಯೇ ಲೀನರಾಗಿ ಕ್ರೀಡಿಸುವರು. ಶಂಕರನೇ ಆ ಸತ್ಯಸ್ವರೂಪನಾಗಿರುವನು. ಹೀಗಿರುತ್ತಿರಲು, ಸತ್ಯರೂಪನಾದ ಅವನ ಸನ್ನಿಧಿಯಲ್ಲಿ ಅನೃತವನ್ನಾಡುವುದು ಮಹಾಪಾತಕಕ್ಕೆ ಸದೃಶವಾಗಲಾರದೆ? ॥೯೪॥

ಶಿವಸನ್ನಿಧಿಮಾಶ್ರಿತ್ಯ ಕೃತಂ ಪುಣ್ಯಂ ಚ ಪಾತಕಂ ।
ಅನಂತಮಿತಿ ನಿರ್ಣೀತಮತಃ ಸತ್ಯಂ ವದಾಧುನಾ ॥೯೫॥

ಇತಿ ತದ್ವಚನಂ ಶ್ರುತ್ವಾ ಕಾಪಿ ಭಾಗ್ಯಧಿದೇವತಾ ।
ಸತ್ಯಮೇವಾಹ ನಿಪುಣಾ ಕೃತ್ವಾ ಶಪಥಮೀಶ್ವರೇ ॥೯೬॥

ಯನ್ಮಂದಿರೇ ನಿವಾಸೋ ಮೇ ಸ ತಾವದತಿಶಾಂಭವಃ ।
ತದ್ದ್ವಾರಿ ಮತ್ತಮಾತಂಗಕೋಟಯಃ ಸಂತಿ ಸರ್ವದಾ ॥೯೭॥

ತತ್ರ ತುಂಗತುರಂಗಾಣಾಂ ಕೋಟಯಃ ಸಂತಿ ಸರ್ವದಾ ।
ಗೋಯೂಥಕೋಟಯಃ ಸಂತಿ ಮಹಿಷೀಣಾಂ ಚ ಕೋಟಯಃ ॥೯೮॥

ವಿಚಿತ್ರರತ್ನಾಭರಣಾಃ ಕೋಟಿಶಸ್ತತ್ರ ಮಂದಿರೇ ।
ಸುಮೇರುತುಲ್ಯಾಸ್ತದ್ಗೇಹೇ ತಪ್ತಕಾಂಚನಪರ್ವತಾಃ ॥೯೯॥

ಶಿವನ ಸನ್ನಿಧಿಯಲ್ಲಿ ಆಚರಿಸಿದ ಪುಣ್ಯಕರ್ಮವೂ ಮತ್ತು ಪಾಪಕರ್ಮವು ಶಾಶ್ವತವಾಗಿರುವುದೆಂದು ತಿಳಿಯಬೇಕು. ಆದುದರಿಂದ ಈಗ ನೀನು ಸತ್ಯವನ್ನೇ ನುಡಿ." ॥೯೫॥

ಅವಳ ಈ ಮಾತನ್ನು ಕೇಳಿ ಬಬ್ಬಾಳೊಬ್ಬ ಭಾಗ್ಯದೇವತೆಯು, ಈಶ್ವರ ಸನ್ನಿಧಿಯಲ್ಲಿ ಶಪಥಪೂರ್ವಕವಾಗಿ ಸತ್ಯವನ್ನೇ ನುಡಿದಳು. ॥೯೬॥

ನಾನು ಯಾವನ ಮನೆಯಲ್ಲಿ ನೆಲಸುವೆನೋ ಅವನು ಈಶ್ವರ ಭಕ್ತನೇ ಆಗಿರುವನು. ಅವನ ಮನೆಯ ಬಾಗಿಲಿನಲ್ಲಿ ನಿರಂತರವೂ ಅಸಂಖ್ಯಾತವಾದ ಮದಿಸಿದ ಆನೆಗಳು ನಿಂತಿರುತ್ತವೆ. ಗಜಾಂತವಾದ ಐಶ್ವರ್ಯವು ಲಭಿಸಬೇಕಾದರೆ ಈಶ್ವರಾರ್ಚಕನಿಗೆ ಮಾತ್ರ. ॥೯೭॥

ಅಲ್ಲದೆ ಆ ಗೃಹದ್ವಾರದಲ್ಲಿ ಲೆಕ್ಕಿಸಲಶಕ್ಯವಾದ ಕುದುರೆಗಳೂ ಗೋವುಗಳೂ ಮತ್ತು ಎಮ್ಮೆಗಳೂ ಸಿದ್ಧವಾಗಿ ನಿಂತಿರುತ್ತವೆ. ॥೯೮॥

ಅವನ ಗೃಹದಲ್ಲಿ ನಾನಾವಿಧವಾದ ರತ್ನಾಭರಣಗಳೂ, ಮತ್ತು ಸುಮೇರು ಪರ್ವತದಂತೆ ಹೊಳೆಯುವ ಸುವರ್ಣರಾಶಿಯೂ ಸದಾ ಸಿದ್ಧವಾಗಿರುತ್ತವೆ. ॥೯೯॥

ದಿವ್ಯಾನ್ನರಾಶಯಃ ಸಂತಿ ಕೋಟಿಶಃ ಕಮಲಾನನಾಃ ।
ನಾಟ್ಯಾಂಗನಾಃ ಕೋಟಿಶಸ್ತಾಸ್ಸರ್ವಾಭರಣಭೂಷಿತಾಃ ॥೧೦೦॥

ಸೌಂದರ್ಯಧಾರಾ ಧೀರಾಪಿ ನಾರೀಣಾಮನುವರ್ತತೇ ।
ತಾಸಾಂ ತದ್ವರ್ಣನಂ ತಾವತ್ಕರ್ತುಮೇವ ನ ಶಕ್ಯತೇ ॥೧೦೧॥

ಏತಾವದ್ಭಾಗ್ಯಮೇತಸ್ಯ ಪುತ್ರಾಃ ಸಂತಿ ಸಹಸ್ರಶಃ ।
ಪ್ರವೀಣಾಃ ಶಿವವಿದ್ಯಾಯಾಂ ಶಾಂಭವಾ ಏವ ಕೇವಲಂ ॥೧೦೨॥

ಭೃತ್ಯಾಶ್ಚ ಕೋಟಿಶಃ ಸಂತಿ ತೇ ತಾವದತಿಶಾಂಭವಾಃ ।
ದಾಸ್ಯಶ್ಚ ಕೋಟಿಶಸ್ಸಂತಿ ತಾಸ್ತಾವತ್ ಶಿವತತ್ಪರಾಃ ॥೧೦೩॥

ಪ್ರಾಯಃ ಸುರಾಂಗನಾ ಏವ ದಾಸೀತ್ವಂ ಸಮುಪಾಗತಾಃ ।
ಸದಾ ಕುರ್ವಂತಿ ತತ್ಸೇವಾಂ ಶಾಂಕರಾಗ್ರೇಸರಸ್ಯ ತಾಃ ॥೧೦೪॥

ಶಿವಪೂಜಕನ ಗೃಹದಲ್ಲಿ ಷಡ್ರಸೋಪೇತವಾದ ಪಕ್ವಾನ್ನರಾಶಿಗಳೇ ಕಂಡು ಬರುತ್ತವೆ. ಮತ್ತು ಅವನ ಗೃಹದಲ್ಲಿ ಪದ್ಮಮುಖಿಯರೂ ಸಕಲಾಭರಣಗಳಿಂದ ಅಲಂಕೃತರೂ ಆದ ಅನೇಕ ನಾಟ್ಯಸ್ತ್ರೀಯರಿರುತ್ತಾರೆ. ||೧೦೦||

ಸ್ತ್ರೀಯರ ಸೌಂದರ್ಯಲಹರಿಯಂತೂ ಸ್ವಲ್ಪವೂ ವ್ಯತ್ಯಾಸವಾಗದೆ ಒಂದೇ ವಿಧದಿಂದ ಅನುವರ್ತಿಸಿ ಬರುವುದು. ಅದಕ್ಕೆ ಯಾವ ಸಮಯದಲ್ಲಿಯೂ ಕಳಂಕವು ಬರಲಾರದು. ಅವರ ಆ ಸೌಂದರ್ಯವನ್ನಾದರೋ ವರ್ಣಿಸಲಸಾಧ್ಯವೆನಿಸುವುದು. ||೧೦೧||

ಶಿವಭಕ್ತನೆನಿಸಿದವನ ಭಾಗ್ಯವು ಈರೀತಿಯಾಗಿರುವುದು. ಇದಲ್ಲದೇ ಅವನಿಗೆ ಸಾವಿರಾರು ಮಂದಿ ಸುಪುತ್ರರು ಜನಿಸುವರು. ಅವರೆಲ್ಲರೂ ಶಿವಧ್ಯಾನನಿರತರಾಗಿ ಜ್ಞಾನಿಗಳೆನಿಸುವರು. ||೧೦೨||

ಅವನಿಗೆ ಕೋಟ್ಯಂತರ ಸೇವಕಸೇವಕಿಯರು ಇರುವರು. ಅವರೆಲ್ಲರೂ ಕೇವಲ ಶಿವಭಕ್ತರೇ ಆಗಿರುವರು. ||೧೦೩||

ಪ್ರಾಯಶಃ ದೇವತಾಸ್ತ್ರೀಯರೇ ಅವನ ದಾಸಿಯರಾಗುವರು. ಅವರು ಅನವರತವೂ, ಭಕ್ತಾಗ್ರೇಸರನಾದ ಅವನನ್ನು ಸೇವಿಸುವರು. ||೧೦೪||

ಭೃತ್ಯಾಸ್ತೇಽಪ್ಯಮರಾ ಏವ ತದ್ಭೃತ್ಯತ್ವಮುಪಾಗತಾಃ ।
ತತ್ಸೇವಯಾ ಮಹಾದೇವಸ್ಸಂತುಷ್ಟೋ ಭವತೀತ್ಯಪಿ ॥೧೦೫॥

ಐರಾವತೋಽಪಿ ರೂಪಾಣಿ ಧೃತ್ವಾ ತಾವತ್ಸಕೋಟಿಶಃ ।
ತದ್ದ್ವಾರಿ ಗಜರೂಪೇಣ ತಿಷ್ಠತೀತ್ಯವಗಮ್ಯತೇ ॥೧೦೬॥

ಸದೈವಾಶ್ವೋಽಶ್ವರೂಪಾಣಿ ಧೃತ್ವಾ ತದ್ದ್ವಾರಿ ಕೋಟಿಶಃ ।
ತತ್ತುರಂಗಸ್ವರೂಪೇಣ ತಿಷ್ಠತೀತ್ಯವಗಮ್ಯತೇ ॥೧೦೭॥

ತತ್ಕಲತ್ರಾಣಿ ರಮ್ಯಾಣಿ ತೇನೈವ ಶಿವಮಂದಿರೇ ।
ನಿತ್ಯೋದ್ಯತಾನಿ ನಾಟ್ಯಾಯ ಪೂಜಾಂತೇ ಪ್ರತಿವಾಸರೇ ॥೧೦೮॥

ನೃತ್ಯಂತಿ ಶಿವಲಿಂಗಾಗ್ರೇ ತಾನಗಾನಪುರಃ ಸರಂ ।
ತತ್ಕಲತ್ರಾಣಿ ಸೋತ್ಸಾಹಂ ನಾಟ್ಯಮಭ್ಯಸ್ಯ ಸತ್ವರಂ ॥೧೦೯॥

ದೇವತೆಗಳೇ ಅವನ ಸೇವಕರಾಗುವರು. ಅಲ್ಲದೆ ಅವರು ಶಿವಭಕ್ತಾಗ್ರೇಸರನಾದ ಇವನನ್ನು ಸೇವಿಸುವುದರಿಂದ ಶಿವನು ಸುಪ್ರೀತನಾಗುವನೆಂದು ತಿಳಿದು ಅವನ ಬಳಿಯಲ್ಲಿ ದಾಸ್ಯವೃತ್ತಿಯನ್ನವಲಂಬಿಸುವರು. ॥೧೦೫॥

ದೇವಲೋಕದ ಆನೆಯಾದ ಐರಾವತವೇ ಅಸಂಖ್ಯಾತವಾದ ರೂಪಗಳನ್ನು ಧರಿಸಿ ಅವನ ಗೃಹದ್ವಾರವನ್ನು ಅಲಂಕರಿಸುತ್ತಾ ನಿಲ್ಲುವುದು. ॥೧೦೬॥

ಉಚ್ಚೈಃಶ್ರವಸ್ಸೆಂಬ ಹೆಸರುಳ್ಳ ದೇವಲೋಕದ ಕುದುರೆಯೂ ರೂಪಾಂತರಗಳಿಂದ ಅವನ ಗೃಹದ್ವಾರದಲ್ಲಿ ನಿಂತಿರುವುದೋ ಎಂಬಂತೆ ತೋರುವುದು. ॥೧೦೭॥

ಸುಂದರಿಯರಾದ ಅವನ ರಮಣಿಯರು, ಶಿವಾಲಯದಲ್ಲಿ ಪ್ರತಿನಿತ್ಯವೂ ಪೂಜಾನಂತರ ನರ್ತನವನ್ನಭಿನಯಿಸಲು ಉದ್ಯುಕ್ತರಾಗುವರು. ॥೧೦೮॥

ಆ ಸ್ತ್ರೀಯರು ಮೊಟ್ಟಮೊದಲು ಕೇವಲ ನರ್ತನವನ್ನಭಿನಯಿಸಿ ಬಳಿಕ ತಾಳಲಯಗಳಿಂದ ಕೂಡಿದ ಶಿವಗೀತೆಗಳನ್ನು ಹಾಡುತ್ತಾ ನರ್ತಿಸುವರು. ॥೧೦೯॥

ಪಂಚಾಮೃತಾಭಿಷೇಕೇಣ ಗವ್ಯಸ್ಯ ವಿನಿಯೋಜನಂ ।
ತದ್ಗೇಹೇ ರತ್ನಲಿಂಗಾನಿ ಬಹೂನಿ ವಿವಿಧಾನ್ಯಪಿ ॥೧೧೦॥

ತತ್ಪೂಜಾರ್ಥಂ ಕೋಟಿಮಾತ್ರಂ ಧನಾಂಶಸ್ಯ ವ್ಯಯಸ್ತತಃ ।
ಪೂಜಾಂತೇ ತದ್ಧನಂ ತೇನ ಹಾರೇಭ್ಯೋ ದೀಯತೇ ಮುದಾ ॥೧೧೧॥

ಪರ್ವತಾಕಾರಪಕ್ವಾನ್ನೈರ್ನಾನಾರಸವಿಜೃಂಭಿತೈಃ ।
ಪರಮಾನ್ನೈಶ್ಚ ನೈವೇದ್ಯಂ ತೇನೇಶಾಯ ಪ್ರದೀಯತೇ ॥೧೧೨॥

ತತ್ಸರ್ವಂ ಶಿವಭಕ್ತೇಭ್ಯೋ ದತ್ವಾ ಶಿಷ್ಟಂ ಸುತೈಃ ಸಹ ।
ಭುಕ್ತ್ವಾವಶಿಷ್ಟಂ ಭಾರ್ಯಾಭ್ಯೋ ದತ್ವಾ ನೃತ್ಯತಿ ಶಾಂಭವಃ ॥೧೧೩॥

ಹಸುವಿನ ಹಾಲು, ಮೊಸರು ಮುಂತಾದುವುಗಳಿಂದ ಪಂಚಾಮೃತವನ್ನು ಸಿದ್ಧಪಡಿಸಿ, ಅದನ್ನು ಶಿವನ ಅಭಿಷೇಕಕ್ಕೋಸ್ಕರ ವಿನಿಯೋಗಿಸುವನು. ಅವನ ಗೃಹದಲ್ಲಿ ನಾನಾವಿಧವಾದ ಮತ್ತು ರತ್ನನಿರ್ಮಿತವಾದ ಶಿವಲಿಂಗಗಳಿರುವುವು. ||೧೧೦||

ಈಶ್ವರಪೂಜೆಗಾಗಿ ಅವರು ಕೋಟಿಸಂಖ್ಯೆಯ ಹಣವನ್ನು ವ್ಯಯಮಾಡುವರು. ಪೂಜೆಯು ಮುಗಿದ ಬಳಿಕ ಅವರು ಆ ದ್ರವ್ಯವನ್ನು ಸಂತೋಷದಿಂದ ಶಿವಸದ್ಭಕ್ತರಿಗೆ ದಾನಮಾಡುವರು. ||೧೧೧||

ಅವನು ಪರ್ವತದಂತೆ ಉನ್ನತವಾಗಿರುವ ಷಡ್ರಸೋಪೇತವಾದ ಪಕ್ವಾನ್ನರಾಶಿಯನ್ನು ಮತ್ತು ಪರಮಾನ್ನಗಳನ್ನು ಸಿದ್ಧಪಡಿಸಿ ಅವುಗಳನ್ನು ಈಶ್ವರನಿಗೆ ನಿವೇದಿಸುವನು. ||೧೧೨||

ಶಿವನಿಗೆ ನಿವೇದಿಸಿದ ಆ ಪಕ್ವಾನ್ನಪಾಯಸಗಳನ್ನು ಈಶ್ವರಾರ್ಪಣಬುದ್ಧಿಯಿಂದ ದಾನಮಾಡಿ ಉಳಿದಿರುವುದನ್ನು ತನ್ನ ಪುತ್ರರೊಂದಿಗೆ ಭುಜಿಸಿ, ಬಳಿಕ ಉಳಿದುದನ್ನು ತನ್ನ ಪತ್ನಿಯರಿಗೆ ಕೊಟ್ಟು ಸಂತೋಷದಿಂದಿರುವನು. ||೧೧೩||

ರುದ್ರಾಕ್ಷಮಾಲಾಭರಣೋ ರುದ್ರಾಕ್ಷಕವಚಾನ್ವಿತಃ ।
ರತ್ನಲಿಂಗಾರ್ಚಕೋ ನಿತ್ಯಂ ಭೂತಿಭೂಷಿತವಿಗ್ರಹಃ ॥೧೧೪॥

ಭೂತಿರುದ್ರಾಕ್ಷರಹಿತೋ ನ ತಸ್ಯ ನಗರೇ ನರಃ ।
ಅಂತತಃ ಪಶವೋಽಪ್ಯಸ್ಯ ಭೂತಿರುದ್ರಾಕ್ಷಭೂಷಣಾಃ ॥೧೧೫॥

ಏತಾದೃಶಸ್ಯ ಸದನೇ ಸರ್ವದಾ ಸ್ಥೀಯತೇ ಮಯಾ ।
ನ ತದ್ಗೃಹಪರಿತ್ಯಾಗೋ ರೋಚತೇ ಸರ್ವಥಾ ಮಮ ॥೧೧೬॥

ಇತಿ ತದ್ವಚನಂ ಶ್ರುತ್ವಾ ತದನ್ಯಾ ದೇವತಾಸ್ತತಃ ।
ಲಜ್ಜಾನತಾನನಾಃ ಸರ್ವಾಶ್ಚುಕ್ರುಶುಸ್ತಾಃ ಪರಸ್ಪರಂ ॥೧೧೭॥

ಅಹೋ ನ ತಾದೃಶಂ ಭಾಗ್ಯಮಸ್ಮಾಕಮಿತಿ ಚಿಂತಯಾ ।
ಅಶೈವಭೋಗಾಯ ಧನಂ ಜಾಯತೇ ಸರ್ವಮಿತ್ಯಪಿ ॥೧೧೮॥

ಅವನು ಅನವರತವೂ ರುದ್ರಾಕ್ಷಿಗಳ ಮಾಲಿಕೆಗಳನ್ನು ಧರಿಸಿ, ರುದ್ರಾಕ್ಷಿ ಕವಚವನ್ನು ತೊಟ್ಟು, ದೇಹದ ತುಂಬಾ ವಿಭೂತಿಯನ್ನು ಲೇಪಿಸಿ, ರತ್ನಖಚಿತವಾದ ಆ ಶಿವಲಿಂಗವನ್ನು ಅರ್ಚಿಸುವನು. ॥೧೧೪॥

ಅವನ ಊರಿನಲ್ಲಿ ವಿಭೂತಿ, ರುದ್ರಾಕ್ಷಿ ಮುಂತಾದ ಚಿಹ್ನೆಗಳನ್ನು ಧರಿಸದಿರುವ ಮನುಜನೇ ಇಲ್ಲ. ಅವನ ಗೃಹದಲ್ಲಿರುವ ಗೋವುಗಳೂ ಸಹ ವಿಭೂತಿ ಮತ್ತು ರುದ್ರಾಕ್ಷಿಗಳಿಂದ ಅಲಂಕರಿಸಲ್ಪಡುವುವು.

ಎಲೌ ಸಖಿಯೇ, ನಾನು ಅಂತಹ ಶಿವಭಕ್ತಾಗ್ರೇಸರನ ಗೃಹದಲ್ಲಿಯೇ ವಾಸವಾಗಿರುವೆನು. ನಾನು ಅವನ ಮನೆಯನ್ನು ಬಿಟ್ಟುಹೋಗಲು ಎಂದೂ ಇಚ್ಛಿಸುವುದಿಲ್ಲ. ॥೧೧೬॥

ಹೀಗೆಂದು ನುಡಿದ ಆ ದೇವತೆಯ ವಚನವನ್ನು ಕೇಳಿ ಅಲ್ಲಿದ್ದ ಇತರ ಭಾಗ್ಯದೇವತೆಗಳು ನಾಚಿಕೆಯಿಂದ ಮುಖವನ್ನು ತಗ್ಗಿಸಿ ಅನ್ಯೋನ್ಯವಾಗಿ ಹೀಗೆಂದು ಮಾತನಾಡಿಕೊಂಡರು. ॥೧೧೭॥

ಅಯ್ಯೋ! ನಮಗೆ ಅಂತಹ ಭಕ್ತಾಗ್ರೇಸರರನ್ನು ಸೇವಿಸುವ ಭಾಗ್ಯವು ಇರುವುದಿಲ್ಲವಲ್ಲಾ! ನಮ್ಮ ಧನವೆಲ್ಲವೂ ಶಿವನಿಂದಕರ ಸುಖಕ್ಕೋಸ್ಕರ ವ್ಯಯವಾಗುವುದಲ್ಲ! ಎಂಬ ಚಿಂತೆಯಿಂದ ದುಃಖಿಸಿದರು. ॥೧೧೮॥

ಇಯಂ ಭಾಗ್ಯವತೀ ಧನ್ಯಾ ಸಭಾಗ್ಯಾ ಭಾಗ್ಯದೇವತಾ ।
ವಸತೀ ಶಾಂಭವಾಽಗಾರೇ ಯಸ್ಮಾದಸ್ಯಾಃ ಸುಖಾವಹಾ ॥೧೧೯॥

ಅತಃ ಪರಂ ಕಿಲಾಸ್ಮಾಭಿರಶಾಂಭವಗೃಹೇ ಸ್ಥಿತಿಃ ।
ನ ಕರ್ತವ್ಯಾ ನ ಕರ್ತವ್ಯಾ ಸರ್ವಥಾಪೀತಿ ನಿಶ್ಚಿತಂ ॥೧೨೦॥

ತತಃ ಪರಂ ತದ್ಗೃಹಾಣಾಂ ವಾರ್ತಾಂ ತ್ಯಕ್ತ್ವಾ ವಿಶೇಷತಃ ।
ತಾಃ ಸರ್ವಾಃ ಶಾಂಭವಾಗಾರೇ ವಸತಿಂ ಚಕ್ರುರಾದರಾತ್ ॥೧೨೧॥

ತಥಾಪಿ ಸತಿ ಭಾಗ್ಯಸ್ಯ ಭಾಗ್ಯತ್ವಮಪಿ ಸರ್ವಥಾ ।
ಶಿವಪೂಜಾನುಕೂಲತ್ವಮನ್ಯಥಾ ತತ್ಕಥಂ ಭವೇತ್ ॥೧೨೨॥

ಅತಸ್ತಪಃಫಲಂ ಭಾಗ್ಯಂ ತದ್ಭಾಗ್ಯಸ್ಯಾಪಿ ಭಾಗ್ಯತಾ ।
ಶಿವಾರ್ಚನೋಪಯುಕ್ತತ್ವಾತ್ತದ್ಭಾಗ್ಯಸ್ಯಾಪಿ ತತ್ಫಲಂ ॥೧೨೩॥

ಈ ಭಾಗ್ಯದೇವತೆಗೆ ಈಶ್ವರಭಕ್ತರ ಗೃಹದಲ್ಲಿ ವಾಸಿಸುವುದರಿಂದ ಅತ್ಯಂತ ಸುಖವು ಲಭಿಸುತ್ತಿರುವುದು. ಆದುದರಿಂದ ಇವಳೇ ಧನ್ಯಳು ಇವಳೇ ಭಾಗ್ಯವತಿ. ॥೧೧೯॥

ಇನ್ನುಮುಂದಾದರೂ ನಾವು ಶಿವನಲ್ಲಿ ಭಕ್ತಿಯನ್ನಿಡದವರ ಮನೆಯಲ್ಲಿ ಎಂದಿಗೂ ವಾಸಮಾಡಬಾರದು. ಇದು ಖಂಡಿತ. ಈ ರೀತಿಯಲ್ಲಿ ಆ ದೇವತೆಗಳು ಮಾತನಾಡಿಕೊಂಡರು. ॥೧೨೦॥

ಅಂದಿನಿಂದ ಮೊದಲು ಆ ಸಕಲ ದೇವತೆಗಳೂ ಶಿವನನ್ನು ಪೂಜಿಸದ ಜನರ ಮನೆಯನ್ನು ಬಿಟ್ಟು ಭಕ್ತರ ಮನೆಯಲ್ಲಿಯೇ ವಾಸಮಾಡತೊಡಗಿದರು. ॥೧೨೧॥

ಈ ರೀತಿ ಈಶ್ವರಭಕ್ತರನ್ನು ಆಶ್ರಯಿಸುವುದರಿಂದಲೇ ಆ ಭಾಗ್ಯದಲ್ಲಿ ಭಾಗ್ಯತ್ವವೆಂಬ ಅಸಾಧಾರಣ ಧರ್ಮವು ನೆಲಸುವುದು. ಆದುದರಿಂದಲೇ ಶಿವಪೂಜೆಗೆ ಸಹಾಯವನ್ನು ನೀಡುವ ಯೋಗವು ಅದಕ್ಕೆ ಲಭಿಸಿರುವುದು. ಹಾಗಿಲ್ಲದಿದ್ದರೆ ಆ ಯೋಗವು ಅದಕ್ಕೆ ಹೇಗೆತಾನೇ ದೊರಕೀತು? ॥೧೨೨॥

ಆದುದರಿಂದ ಭಾಗ್ಯವೆಂಬುದು ತಪಸ್ಸಿನ ಫಲವು. ಹೀಗೆ ತಪಃಫಲದ ರೂಪದಿಂದ ಆ ಭಾಗ್ಯವು ಹರಭಕ್ತರಲ್ಲಿ ನೆಲಸಿರುವುದರಿಂದ ಕೃತಾರ್ಥವಾಗಿರುವುದು.

ಶಿವಪೂಜೋಪಯುಕ್ತಾನಾಂ ತರೂಣಾಮಪಿ ವಸ್ತುತಃ ।
ಮುಕ್ತಿರನ್ಯಸ್ಯ ಕಾ ವಾರ್ತಾ ಸಾಕ್ಷಾತ್ತದುಪಯೋಗಿನಾಂ ॥೧೨೪॥

ತಾದೃಶಸ್ಯ ಶುಕಸ್ಯಾಪಿ ಶಾಂಕರಸ್ಯ ಕದಾಚನ ।
ಉಕ್ತಂ ನಿಷ್ಠುರಮೇಕೇನ ಸ ತಾವನ್ನಿರಯಂ ಗತಃ ॥೧೨೫॥

ಏವಂ ಶಂಕರಪೂಜನಸ್ಯ ಮಹಿಮಾ ಮಾನಾಂತರಾಗೋಚರಃ
ಸೋಽಯಂ ಲೋಚನಗೋಚರಃ ಕಥಮತೋ ವಾಗ್ಗೋಚರೋ ವಾ ಕಥಂ

ತಸ್ಮಾನ್ನಿಷ್ಠುರಭಾಷಣೈರಲಮಲಂ ಶ್ರೀಕಾಲಕಾಲಾರ್ಚನೇ
ಸತ್ಯಂ ಯನ್ಮಧುರಾಕ್ಷರಂ ತದಧುನಾ ವಕ್ತವ್ಯಮತ್ಯಾದರಾತ್ ॥೧೨೬॥

ಅದನ್ನು ಶಿವಪೂಜೆಯಲ್ಲಿ ವಿನಿಯೋಗಿಸುವುದರಿಂದ ಶಿವಪೂಜೆಯಿಂದುಂಟಾದ ಫಲವೂ ಸಹ ಅದಕ್ಕೆ ಲಭಿಸುವುದು. ||೧೨೩||

ಶಿವಪೂಜೆಗೆ ಉಪಯುಕ್ತವಾದ ಪತ್ರಪುಷ್ಪಗಳಿಂದ ಕೂಡಿರುವ ವೃಕ್ಷಗಳೂ ಸಹ ಮೋಕ್ಷವನ್ನು ಹೊಂದುವುವು. ಹೀಗಿರುತ್ತಿರಲು ಸಾಕ್ಷಾತ್ತಾಗಿಯೇ ಶಿವಪೂಜೆಯಲ್ಲಿ ವಿನಿಯೋಗವನ್ನು ಹೊಂದುವ ವಸ್ತುವು ಮುಕ್ತಿಯನ್ನು ಪಡೆಯುವುದಿಲ್ಲವೆಂದು ಹೇಗೆತಾನೇ ಹೇಳಲು ಸಾಧ್ಯ? ||೧೨೪||

ಹಿಂದೆ ಶಿವಭಕ್ತಾಗ್ರೇಸರನಾದ ಶುಕಮಹರ್ಷಿಯನ್ನು ಕುರಿತು ಒರ್ವ ಶಿವನಿಂದಕನು ಕ್ರೂರವಾದ ಮಾತನ್ನು ನುಡಿದು ಅದರಿಂದ ಅವನು ನರಕವನ್ನು ಹೊಂದಿದನು. ||೧೨೫||

ಎಲೈ ನಂದಿಕೇಶ್ವರನೇ, ಶಿವಪೂಜೆಯ ಮಹಿಮೆಯು ಈರೀತಿಯಾಗಿರುವುದು. ಇತರ ಯಾವ ಪ್ರಮಾಣಗಳಿಗೂ ಗೋಚರನಾಗದಿರುವ ಆ ಶಂಕರನು ಚಕ್ಷುರಿಂದ್ರಿಯಕ್ಕಾಗಲಿ ಅಥವಾ ವಾಗಿಂದ್ರಿಯಕ್ಕಾಗಲಿ ಗೋಚರನಾಗುವನೇ! ಮೃತ್ಯುಂಜಯನಾದ ಶಿವನನ್ನು ಪೂಜಿಸುವ ಆ ಭಕ್ತನೊಂದಿಗೆ ಕರ್ಣಕಠೋರವಾದ ಮಾತುಗಳನ್ನಾಡದೇ ಅವನಲ್ಲಿ ಭಕ್ತಿಯನ್ನಿಟ್ಟು ಸತ್ಯವಾಗಿಯೂ ಹಿತಕರವಾಗಿಯೂ ಇರುವ ಮಾತುಗಳನ್ನು ನುಡಿಯಬೇಕು. ||೧೨೬||

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಕುಮಾರನಂದಿಕೇಶ್ವರ ಸಂವಾದೇ ಶುಕಯೋಗೀಶೈವೇತಿಹಾಸವರ್ಣನಂ ನಾಮ ಷೋಡಶೋಽಧ್ಯಾಯಃ

ಇಲ್ಲಿಗೆ ಶ್ರೀ ಶಿವರಹಸ್ಯದ ಮೂರನೆಯ ಅಂಶದಲ್ಲಿ ಮೊದಲನೆಯ ಭಾಗದಲ್ಲಿ ಕುಮಾರಸ್ವಾಮಿ ಮತ್ತು ನಂದಿಕೇಶ್ವರರ ಸಂವಾದದಲ್ಲಿ ಶುಕಯೋಗಿ ಎಂಬ ಶಿವಭಕ್ತನ ಇತಿಹಾಸ ವರ್ಣನೆಯೆಂಬ ಹದಿನಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಸಪ್ತದಶೋಽಧ್ಯಾಯಃ

॥ ವ್ಯಾಸ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಕುಮಾರಂ ನಂದಿಕೇಶ್ವರಃ ।
ಕೃತಾಂಜಲಿಪುಟಃ ಪ್ರಾಹ ವಿನಯಾನತಕಂಧರಃ ॥೧॥

॥ ನಂದಿಕೇಶ್ವರ ಉವಾಚ ॥

ಕುಮಾರ ಭಗವನ್ಕೇನ ತಸ್ಮೈ ನಿಷ್ಠುರಭಾಷಣಂ ।
ಕೃತಂ ತನ್ನಿಷ್ಠುರಸ್ಯಾಪಿ ಸ್ವರೂಪಂ ವದ ಸಾದರಂ ॥೨॥

ಹದಿನೇಳನೆಯ ಅಧ್ಯಾಯ

ವ್ಯಾಸಮಹರ್ಷಿಗಳು ಋಷಿಗಳಿಗೆ ಮುಂದಿನ ಕಥೆಯನ್ನು ವಿವರಿಸಲಾರಂಭಿಸಿದರು.--- ಈ ರೀತಿ ಕುಮಾರಸ್ವಾಮಿಯ ನುಡಿಗಳನ್ನು ಲಾಲಿಸಿ, ನಂದಿಕೇಶ್ವರನು, ಕೈಜೋಡಿಸಿ ವಿನಯದಿಂದ ತಲೆಬಾಗಿ ನಮಸ್ಕಾರಮಾಡಿ ಕುಮಾರಸ್ವಾಮಿಯನ್ನು ಕುರಿತು ಇಂತೆಂದನು. ॥೧॥

ನಂದಿಕೇಶ್ವರನು ಹೇಳಿದನು—ಎಲೈ ಷಡ್ಗುಣೈಶ್ವರ್ಯಸಮೇತನಾದ (ಭಗವನ್) ಕುಮಾರಸ್ವಾಮಿಯೇ! ಆ ಶುಕಮಹರ್ಷಿಯ ವಿಷಯದಲ್ಲಿ ನಿಷ್ಠುರವಾಗಿ ಭಾಷಣಮಾಡಿದವರಾರು? ಆ ನಿಷ್ಠುರೋಕ್ತಿಗಳ ಸ್ವರೂಪವೆಂತಹುದು? ಇದನ್ನು ಆದರದಿಂದ ನನಗೆ ತಿಳಿಸಬೇಕು. ॥೨॥

ತನ್ನಿಷ್ಠುರೋಕ್ತ್ಯಾ ತಸ್ಯಾಪಿ ಜಾತಾ ಸಾ ಯಾತನಾ ಕಥಂ ।
ತತ್ಸರ್ವಮಾದರೇಣಾದ್ಯ ವಕ್ತುಮರ್ಹಸಿ ಷಣ್ಮುಖ ॥೩॥

ಶಿವತತ್ತ್ವಜ್ಞವರ್ಯೋಽಸಿ ಶಿವಾನುಗ್ರಹಭಾಜನಂ ।
ತತಸ್ತ್ವಮಧುನಾ ತಾವತ್ತತ್ಸರ್ವಂ ವದ ಸಾದರಂ ॥೪॥

ಇತಿ ತದ್ವಚನಂ ಶ್ರುತ್ವಾ ಪ್ರಹೃಷ್ಟಃ ಷಣ್ಮುಖಸ್ತತಃ ।
ಪ್ರಕ್ರಾಂತಂ ಪೂರ್ವವೃತ್ತಾಂತಂ ವಕ್ತುಂ ಸಸ್ಮಾರ ಶಂಕರಂ ॥೫॥

॥ ಕುಮಾರ ಉವಾಚ ॥

ಶಿವಾರ್ಚಕಂ ಶುಕಂ ದೃಷ್ಟ್ವಾ ಮುನಿಃ ಕಶ್ಚಿತ್ತಪೋನಿಧಿಃ ।
ಅಂಬರೀಷಕುಲೋತ್ಪನ್ನೋ ನಿಷ್ಠುರಂ ಪ್ರಾಹ ಸತ್ವರಂ ॥೬॥

ಆ ರೀತಿಯಾದ ನಿಷ್ಠುರವಚನಗಳಿಂದ ಅವನಿಗೆ ಯಾವ ರೀತಿಯಾದ ಯಾತನೆಯುಂಟಾಯಿತು? ಅದು ಆದ ಬಗೆ ಹೇಗೆ? ಓ ಷಣ್ಮುಖಸ್ವಾಮಿಯೇ, ಇವೆಲ್ಲವನ್ನೂ ಆದರದಿಂದ ನೀನು ಹೇಳಲು ಸಮರ್ಥನಾಗಿರುವೆ. ॥೩॥

ಎಲೈ ಕುಮಾರಸ್ವಾಮಿಯೇ, ಶಿವನ ತತ್ತ್ವಗಳನ್ನು (ರಹಸ್ಯಗಳನ್ನು) ತಿಳಿದವರಲ್ಲಿ ನೀನೇ ಶ್ರೇಷ್ಠನು. ಅಲ್ಲದೆ ಶಿವನ ಅನುಗ್ರಹಕ್ಕೆ ಬೇರೆ ಪಾತ್ರನಾಗಿರುವೆ. ಆದುದರಿಂದ ಎಲೈ ದೇವ, ಇವೆಲ್ಲವನ್ನೂ ಆದರದಿಂದ ಹೇಳಬೇಕು ಎಂದು ನಂದಿಕೇಶ್ವರನು ಪ್ರಾರ್ಥಿಸಿದನು. ॥೪॥

ಈ ನಂದಿಕೇಶ್ವರನ ಪ್ರಾರ್ಥನೆಯನ್ನು ಲಾಲಿಸಿ ಷಣ್ಮುಖಸ್ವಾಮಿಯು ಹೆಚ್ಚು ಸಂತೋಷ ಹೊಂದಿದನು. ಅನಂತರ ಆ ಪ್ರಾರ್ಥನೆಯನ್ನು ನೆರವೇರಿಸಲು ಹಿಂದಿನ ವೃತ್ತಾಂತವನ್ನೆಲ್ಲಾ ಸ್ಮರಣೆಮಾಡಿಕೊಂಡು ಹೇಳಬೇಕಾದುದರಿಂದ, ಮೊದಲು ಶಂಕರನನ್ನು ಧ್ಯಾನಮಾಡಿ, ಅನಂತರ ಆ ವಿಷಯವನ್ನು ಮುಂದುವರಿಸಿದನು. ॥೫॥

“ಎಲೈ ನಂದೀಶ್ವರನೇ, ಅಂಬರೀಷಮಹಾರಾಜನ ವಂಶದಲ್ಲಿ ಜನಿಸಿದ ಒಬ್ಬ ತಪೋನಿಧಿಯಾದ ಮುನಿಯು, ಶಿವಪೂಜಾಸಕ್ತನಾದ ಶುಕಮಹರ್ಷಿಯನ್ನು ನೋಡಿ ಗರ್ವದಿಂದ ಕೆಲವು ನಿಷ್ಠುರವಾದ ಮಾತುಗಳನ್ನಾಡಿದನು. ॥೬॥

ಭಾಗ್ಯಸಂಪಾದನೇನಾಸ್ಯ ವ್ಯಯಃ ಸ್ಯಾತ್ತಪಸಃ ಖಲು ।
ಶಿವಾರ್ಚನೇನ ಕಿಂ ಕೃತ್ಯಂ ತಪಶ್ಚೇನ್ನಷ್ಟಮದ್ಭುತಂ ॥೭॥

ಇತ್ಯುಕ್ತಂ ತದ್ವಚಃ ಶ್ರುತ್ವಾ ತಮಸಂಭಾಷ್ಯಮಿತ್ಯಪಿ ।
ಮತ್ವಾ ಶಿವಾರ್ಚನೋದ್ಯೋಗಂ ಚಕಾರ ಪುನರಾದರಾತ್ ॥೮॥

ತತಃ ಸ ಮುನಿಶಾರ್ದೂಲಃ ಫಲಮೂಲಜಲಾಶನಃ ।
ಮೃತಃ ಸರ್ಪೇಣ ಸಂದಷ್ಟಃ ಕಷ್ಟೇನ ವ್ಯಾಕುಲೋಽಪ್ಯಭೂತ್ ॥೯॥

ತತಃ ಪರಂ ಕಾಲದೂತಾಃ ಕಾಲೇನ ಸಮುಪಾಗತಾಃ ।
ಕುಂಭೀಪಾಕೇ ಪಾತನೀಯಸ್ತ್ವರಯೇತಿ ವಿಚಕ್ಷಣಾಃ ॥೧೦॥

ಎಲೈ ಶುಕನೇ, ನಾವು ಸಂಪಾದಿಸಿರುವ ತಪಶ್ಶಕ್ತಿಗೆ ಐಶ್ವರ್ಯವನ್ನು ಪಡೆಯುವುದೇ ಫಲವಲ್ಲವೆ! ಕೇವಲ ಶಿವಪೂಜೆಯಿಂದ, ನಾವು ಗಳಿಸಿರುವ ಅದ್ಭುತವಾದ ತಪಸ್ಸು ವ್ಯಯವಾಗುವುದೇ ವಿನಾ ಬೇರೆ ಯಾವ ಪ್ರಯೋಜನವೂ ತೋರದು ಎಂದು ನುಡಿದನು. ||೭||

ಹೀಗೆ ನುಡಿದ ಆ ಮುನಿಯ ಮಾತನ್ನು ಕೇಳಿ ಶುಕಮಹರ್ಷಿಯು, ಶಿವಪೂಜಾನಿಂದಕನಾದ ಈ ಮುನಿಯೊಡನೆ ಮಾತನಾಡುವುದೂ ಪಾಪಕರವೆಂದು ಅರಿತು, ಆ ಮುನಿಯ ಮಾತುಗಳಿಗೆ ಗಮನವನ್ನೇ ಕೊಡದೆ ಮೊದಲಿನಂತೆಯೇ ಆದರದಿಂದ ಶಿವಪೂಜೆಯ ಪ್ರಯತ್ನದಲ್ಲಿ ನಿರತನಾದನು. ||೮||

ಹೀಗೆ ಶಿವಪೂಜೆಯನ್ನು ನಿಂದಿಸಿ ನಿಷ್ಠುರವಚನಗಳನ್ನಾಡಿದ ಮುನಿಶ್ರೇಷ್ಠನು, ಹಣ್ಣು, ಗೆಡ್ಡೆಗೆಣಸುಗಳು ಮತ್ತು ನೀರು ಇವುಗಳನ್ನೇ ಸೇವಿಸುತ್ತಾ ಕಾಲಕಳೆಯುತ್ತಿದ್ದನು. ಒಂದು ದಿನ ಈ ಮುನಿಯನ್ನು ಒಂದು ಸರ್ಪವು ಕಚ್ಚಲು ಆಗ ಆ ಮುನಿಯು ಬಹಳ ನೋವಿನಿಂದ ವ್ಯಾಕುಲಗೊಂಡು ಮೃತನಾದನು. ||೯||

ಹಾಗೆ ಈ ಮುನಿಯು ಮೃತನಾದೊಡನೆ ಯಮದೂತರು ಅಲ್ಲಿಗೆ ಸರಿಯಾದ ಕಾಲದಲ್ಲಿ ಬಂದು, ವಿಚಕ್ಷಣರಾದ (ತಮ್ಮ ಕಾರ್ಯದಲ್ಲಿ ನಿಪುಣರಾದ) ಅವರು ಅವನನ್ನು ಕರೆದುಕೊಂಡು ಯಮಧರ್ಮನ ಸಮೀಪಕ್ಕೈದಿ, ಪ್ರಭೋ, ಇವನನ್ನು ಜಾಗ್ರತೆಯಾಗಿ ಕುಂಭೀಪಾಕವೆಂಬ ನರಕದಲ್ಲಿ ಹಾಕಬೇಕು. ಇವನು ಮಹಾಪಾಪಿಯು ಎಂದರು. ||೧೦||

ತದಾ ಯಮಶ್ಚಿತ್ರಗುಪ್ತಂ ಧರ್ಮಾಧರ್ಮವಿವೇಚಕಂ ।
ಪ್ರಾಹಾನೇನ ಕೃತಂ ಪಾಪಂ ಕಿಂ ಕಿಮಿತ್ಯಾದರೇಣ ಸಃ ॥೧೧॥

ಇತಿ ತದ್ವಚನಂ ಶ್ರುತ್ವಾ ಚಿತ್ರಗುಪ್ತೋ ವಿಚಕ್ಷಣಃ ।
ಯಮಂ ಪ್ರಾಹ ವಿನೀತಃ ಸನ್ಕೃತಾಂಜಲಿಪುಟೋ ಮುಹುಃ ॥೧೨॥

॥ ಚಿತ್ರಗುಪ್ತ ಉವಾಚ ॥

ಯಮಾನೇನ ಕೃತಂ ಪಾಪಂ ಕಲ್ಪಾಂತೇಽಪಿ ನ ನಶ್ಯತಿ ।
ಮಹಾಪಾತಕಕೋಟೀನಾಂ ಜನಕಂ ತತ್ಪುನಃ ಪುನಃ ॥೧೩॥

ಕಯಾ ಯಾತನಯಾ ತಸ್ಯ ಪಾಪಸ್ಯ ಸ್ಯಾದ್ವಿನಾಶನಂ ।
ಪುನಃ ಪುನರ್ವೃದ್ಧಿಮೇವ ತತ್ಪ್ರಯಾತಿ ಪ್ರತಿಕ್ಷಣಂ ॥೧೪॥

ತನ್ನ ಭಟರು ಹಾಗೆ ನುಡಿದುದನ್ನು ಕೇಳಿ ಯಮನು, ಇದರ ನಿಶ್ಚಯಾಂಶವನ್ನರಿಯಲು ಧರ್ಮಾಧರ್ಮ ವಿಷಯಗಳನ್ನು ಚೆನ್ನಾಗಿ ಪರಿಶೀಲಿಸುವ ಚಿತ್ರಗುಪ್ತನನ್ನು ಕುರಿತು ಚಿತ್ರಗುಪ್ತನೇ, ಈ ಮುನಿಯು ಯಾವ ಯಾವ ಘೋರ ಪಾಪಗಳನ್ನೆಸಗಿರುವನು ತಿಳಿಸೆಂದು ಆದರರಿಂದ ಪ್ರಶ್ನೆಮಾಡಿದನು. ॥೧೧॥

ಯಮಧರ್ಮನು ನುಡಿದ ವಾಕ್ಯಗಳನ್ನು ಕೇಳಿ, ನಿಪುಣನಾದ ಚಿತ್ರಗುಪ್ತನು ವಿನಯದಿಂದ ಕೈಜೋಡಿಸಿ ನಮಸ್ಕಾರಮಾಡುತ್ತಾ ಯಮಧರ್ಮನನ್ನು ಕುರಿತು ಇಂತೆಂದನು. ॥೧೨॥

ಪ್ರಭೋ, ಯಮಧರ್ಮರಾಜ, ಈ ಮುನಿಯು ಮಾಡಿರುವ ಪಾಪವು ಕಲ್ಪದ ಕೊನೆಯವರೆವಿಗೆ ನರಕದಲ್ಲಿದ್ದರೂ ನಾಶವಾಗಲಾರದು. ಅಲ್ಲದೇ ಈ ಪಾಪವು ಅನಿವಾರ್ಯವಾಗಿರುವುದಲ್ಲದೇ ಅನೇಕ ಮಹಾಪಾತಕ ಸಮೂಹವನ್ನೇ ಪದೇ ಪದೇ ಅಭಿವೃದ್ಧಿಮಾಡುತ್ತಿರುವುದು. ॥೧೩॥

ಈ ಪಾತಕವು ಯಾವ ಯಾತನಾರೂಪವಾದ ನರಕಶಿಕ್ಷೆಯಿಂದ ನಾಶವಾಗುವುದೋ ನಾನರಿಯೆನು. ಇದು ನಾಶವಾಗುವುದಕ್ಕೆ ಬದಲಾಗಿ ಪುನಃ ಪುನಃ ಅಭಿವೃದ್ಧಿಯೇ ಆಗುವುದು. ॥೧೪॥

ಈದೃಶಂ ಪಾತಕಂ ಲೋಕೇ ನ ಭೂತಂ ನ ಭವಿಷ್ಯತಿ ।
ನ ವರ್ತತೇಽಪಿ ಕುತ್ರಾಪಿ ನೂನಂ ಬ್ರಹ್ಮಾಂಡಮಂಡಲೇ ॥೧೫॥

ತತ್ಪಾಪಸ್ಯಾನುವಾದೋ ಕರ್ತುಮೇವ ನ ಶಕ್ಯತೇ ।
ಯತಸ್ತದನುವಾದೇನ ಪ್ರತ್ಯವಾಯಃ ಪ್ರಜಾಯತೇ ॥೧೬॥

ವಿನಾ ತದನುವಾದೇನಾಪ್ಯಾಕಲ್ಪಾಂತಮಯಂ ಯಮ ।
ಅಘೋರನರಕಾವಾಸಂ ಕರೋತು ತ್ವರಯಾಽಧುನಾ ॥೧೭॥

ಏತದ್ದರ್ಶನಮಾತ್ರೇಣ ಯತ್ಪಾಪಂ ಸಮುಪಾರ್ಜಿತಂ ।
ತನ್ನಾಶಾಯ ಪ್ರಯತ್ನೋಽಪಿ ಕರ್ತವ್ಯಂ ಖಲು ಸತ್ವರಂ ॥೧೮॥

ನಯಂತು ದೂತಾಃ ಸಹಸಾ ಶೂಲಘಾತಪುರಸ್ಸರಂ ।
ತಂ ಪಾಪಿಷ್ಠನರಶ್ರೇಷ್ಠಂ ಮಾಸ್ತು ತಸ್ಯ ವಿಲೋಕನಂ ॥೧೯॥

ಈ ರೀತಿಯಾದ ಪಾಪವು ಲೋಕದಲ್ಲಿ ಇಲ್ಲಿಯವರೆವಿಗೂ ಎಲ್ಲಿಯೂ ನಡೆದಿಲ್ಲ, ಮುಂದೆ ನಡೆಯುವುದೂ ಅಲ್ಲ. ಅಲ್ಲದೇ ಮಂಡಲಾಕಾರವಾದ ಈ ಬ್ರಹ್ಮಾಂಡದಲ್ಲಿ ನಿಶ್ಚಯವಾಗಿ ಇಂತಹ ಪಾಪವು ಇಲ್ಲವೆಂದೇ ತಿಳಿದಿರುವೆನು. ||೧೫||

ಈ ಪಾಪವು ಇಂಥದೆಂದು ಅನುವಾದಮಾಡುವುದೂ ಅಸಾಧ್ಯವಾಗಿದೆ. ಏಕೆಂದರೆ ಇದನ್ನು ಅನುವಾದಮಾಡುವುದರಿಂದ ನಮಗೂ ಪಾಪವೇ ಸಂಘಟಿಸ ಬಹುದು. ||೧೬||

ಆದುದರಿಂದ ಎಲೈ ಯಮಧರ್ಮಪ್ರಭೋ, ಈ ಪಾಪವಿಷಯವು ಈ ರೀತಿ ಯಾದುದೆಂದು ವಿಚಾರವನ್ನೇ ಮಾಡದೇ, ಈ ಪಾಪಿಯನ್ನು ಕಲ್ಪಪರ್ಯಂತವಾ ಗಿಯೂ ಅತ್ಯಂತ ಘೋರವಾದ ನರಕದಲ್ಲಿ ವಾಸಿಸುವಂತೆ ಜಾಗ್ರತೆಮಾಡು. ಇವನು ಆ ಘೋರ ಯಾತನೆಗಳನ್ನು ವಿಶೇಷವಾಗಿ ಅನುಭವಿಸಲಿ. ||೧೭||

ಈ ಪಾಪಿಯನ್ನು ದರ್ಶನಮಾಡಿದುದರಿಂದುಂಟಾದ ಪಾಪವನ್ನು ಕಳೆದು ಕೊಳ್ಳುವುದಕ್ಕೋಸ್ಕರ ನಾವು ಮೊದಲು ಜಾಗ್ರತೆ ಪ್ರಯತ್ನಮಾಡಬೇಕಾಗಿದೆ. ||೧೮||

ಕೂಡಲೇ ಭಟರು ಪಾಪಿಷ್ಠರಲ್ಲಿ ಅಗ್ರಗಣ್ಯನಾದ ಈ ಮುನಿಯನ್ನು ಶೂಲ

ಯೇನ ಜ್ಞಾತ್ವಾ ಪ್ರತಿದಿನಂ ಕೃತಾಃ ಪಾತಕಕೋಟಯಃ ।
ಕಲ್ಪಾವಸಾನಪರ್ಯಂತಂ ಸೋಽವಿಮುಕ್ತೋ ಭವಿಷ್ಯತಿ ॥೨೦॥

ಮಹಾಪಾತಕರಾಶೀನಾಂ ಕಲ್ಪಾಂತೇ ವಿಲಯೋ ಭವೇತ್ ।
ಏತದ್ದರ್ಶನಜಂ ಪಾಪಂ ನ ಲಯಂ ಯಾಸ್ಯತಿ ಧ್ರುವಂ ॥೨೧॥

ಏತದ್ವಿಲಯನೋಪಾಯಶ್ಚಿಂತನೀಯಸ್ತ್ವಯಾ ಮಯಾ ।
ಶ್ರುತಿತತ್ತ್ವಂ ವಿಚಾರ್ಯಾದೌ ಮರ್ಯಾದಾಂ ಸುಕೃತಸ್ಯ ಚ ॥೨೨॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಕಾಲೋ ವ್ಯಾಕುಲಮಾನಸಃ ।
ಚಿಂತಯಾಮಾಸ ಬಹುಧಾ ಖಿನ್ನಖಿನ್ನಃ ಪ್ರತಿಕ್ಷಣಂ ॥೨೩॥

ದಿಂದ ಚುಚ್ಚುತ್ತಲೂ, ಹೊಡೆಯುತ್ತಲೂ ಇಲ್ಲಿಂದ ಸಾಗಿಸಲಿ. ನಮಗೆ ಈ ಪಾಪಿಯ ದರ್ಶನವು ಸಹ ಉಂಟಾಗಬಾರದು. ||೧೯||

ತಿಳಿದೂ ತಿಳಿದೂ ಈ ಪಾಪಿಯೂ ಪ್ರತಿದಿನವೂ ಕೋಟ್ಯಂತರ ಪಾಪಗಳನ್ನು ಮಾಡಿರುವನು. ಈ ಪಾಪಗಳೆಲ್ಲವೂ ಕಲ್ಪದ ಕೊನೆಯವರೆವಿಗೂ ಇವನು ಭಯಂಕರ ನರಕದಲ್ಲಿದ್ದರೆ, ನಾಶವಾಗಿ, ಅನಂತರ ಇವನು ಮುಕ್ತನಾಗುವನು. ||೨೦||

ಮಹಾಪಾಪಗಳ ಸಮೂಹವೆಲ್ಲವೂ ಕಲ್ಪದ ಕೊನೆಯಲ್ಲಿ ನಾಶವಾಗುವುದು. ಆದರೆ ಇವನ ದರ್ಶನದಿಂದುಂಟಾದ ನಮ್ಮ ಪಾಪವಾದರೋ ಆಗಲೂ ನಿಜವಾಗಿ ನಾಶವಾಗಲಾರದು. ||೨೧||

ಮೊದಲು ವೇದತತ್ತ್ವವನ್ನೂ (ವೇದಗಳ ರಹಸ್ಯವನ್ನೂ) ಮತ್ತು ಪುಣ್ಯಗಳಿಗಿರುವ ಒಂದು ಎಲ್ಲೆಯನ್ನೂ ಸಹ ಚೆನ್ನಾಗಿ ಪರ್ಯಾಲೋಚಿಸಿ ಈ ನಮಗೆ ಉಂಟಾಗಿರುವ ಪಾಪಗಳನ್ನು ಕಳೆದುಕೊಳ್ಳುವುದಕ್ಕೆ ಉಪಾಯವನ್ನು ಹುಡುಕಬೇಕು ಎಂದು ಚಿತ್ರಗುಪ್ತನು ಯಮನಿಗೆ ತಿಳಿಸಿದನು. ||೨೨||

ಈರೀತಿಯಾಗಿ ನುಡಿದ ಚಿತ್ರಗುಪ್ತನ ಮಾತುಗಳನ್ನು ಲಾಲಿಸಿ, ಕಾಲಸ್ವರೂಪನಾದ ಯಮನು ವ್ಯಾಕುಲಚಿತ್ತನಾಗಿ ಪ್ರತಿಕ್ಷಣದಲ್ಲಿಯೂ ತಮಗುಂಟಾಗುವ ಈ ಪಾಪವಿಮೋಚನೆಯ ಉಪಾಯವನ್ನು ಯೋಚಿಸುತ್ತಾ ಬಹಳ ಖಿನ್ನನಾದನು. ||೨೩||

ಅತಃ ಪರಂ ಕಿಮಸ್ಮಾಕಂ ಸಾಧನಂ ಪಾಪನಾಶನಂ ।
ಕಿಮರ್ಥಮಾಗತಂ ಮೋಹಾದ್ದುರದೃಷ್ಟಸ್ಯ ಕಿಂ ಫಲಂ ॥೨೪॥

ಪ್ರಾತಃಕಾಲೇ ಮುಖಂ ದೃಷ್ಟಂ ಕಸ್ಯ ದುಷ್ಟಸ್ಯ ದುಷ್ಕೃತಂ ।
ಕಿಮುಪಸ್ಥಿತಮಸ್ಮಾಕಂ ದುಃಖರೂಪಫಲೋನ್ಮುಖಂ ॥೨೫॥

ದುರದೃಷ್ಟಸ್ಯ ಮಹಿಮಾ ದುರ್ಜಯಃ ಖಲು ವಸ್ತುತಃ ।
ಅತಃ ಪರಂ ಕಿಮಸ್ಮಾಭಿಃ ಕರ್ತವ್ಯಮಧುನಾಪಿ ವಾ ॥೨೬॥

ವಿಚಾರ್ಯ ನಾಗತಂ ತಸ್ಮಾದ್ವೃತ್ತೋ ನ ಶಕುನೋಽಪಿ ನಃ ।
ಅಸ್ಮದಾಗಮನೇ ಪ್ರಾಯೋ ನಾಸ್ಮಾಭಿಃ ಶಂಕರಃ ಸ್ಮೃತಃ ॥೨೭॥

ಸ್ಮೃತ್ವಾ ಶಂಕರಮಾರಾಧ್ಯಮಮರಪ್ರವರಂ ಫಲಂ ।
ಯೋ ಯಾತಿ ತಸ್ಯ ವಿಜಯಃ ಸುಖಾನ್ಯಪಿ ಪದೇ ಪದೇ ॥೨೮॥

ಇನ್ನುಮುಂದೆ ನಮಗೆ ಈ ಪಾಪನಾಶವಾಗುವ ಬಗೆ ಹೇಗೆ? ಉಪಾಯ ವಾವುದು? ಈ ಪಾಪಿಯೇಕೆ ಇಲ್ಲಿಗೆ ಬಂದನು? ಈ ಅಜ್ಞಾನದಿಂದುಂಟಾದ ದುರದೃಷ್ಟಕ್ಕೆ ಏನು ಫಲವುಂಟೋ ತಿಳಿಯದು. ॥೨೪॥

ಬೆಳಗಾಗಿ ಎದ್ದು ನಾವು ಪಾಪಿಯಾದ ಯಾವನೋ ದುಷ್ಟನ ಮುಖವನ್ನು ನೋಡಿರಬೇಕು. ಅದರಿಂದ ಯಾವಾಗಲೂ ದುಃಖರೂಪವಾಗಿರುವ ಈ ಫಲವೇ ಒದಗಿರುವುದು. ಇದೆಂತಹ ಪಾಪವು ನಮಗೊದಗಿತು! ॥೨೫॥

ದುರದೃಷ್ಟದ ಮಹಿಮೆಯನ್ನು ಜಯಿಸಲು ಯಾರಿಗೂ ಸ್ವಭಾವವಾಗಿಯೇ ಅಸಾಧ್ಯ. ಇನ್ನು ಮುಂದೆ ನಾವು ಮಾಡಬೇಕಾದುದೇನು? ಈಗಿನ ನಮ್ಮ ಕರ್ತವ್ಯ ವಾವುದು? ಒಂದೂ ತಿಳಿಯದಲ್ಲಾ! ॥೨೬॥

ನಾವು ಸ್ವಲ್ಪವೂ ವಿಚಾರಮಾಡದೇ ಇಲ್ಲಿಗೆ ಬಂದೆವು. ಆದುದರಿಂದ ನಮಗೆ ಶಕುನವೂ ಸಹ ಸರಿಯಾಗಿ ಆಗಲಿಲ್ಲ. ಅಯ್ಯೋ, ನಾವು ಬರುವಾಗ ಶಂಕರನನ್ನು ಸಾಮಾನ್ಯವಾಗಿಯಾದರೂ ಸ್ಮರಣೆಮಾಡಲಿಲ್ಲವಲ್ಲಾ! ॥೨೭॥

ಲೋಕಮಂಗಳಕರನಾದ ಶಂಕರನನ್ನು ಸ್ಮರಿಸುತ್ತಾ ದೇವದೇವನಾದ ಮಹೇಶ್ವರ ನನ್ನು ಆರಾಧನೆಮಾಡಿ, ದೇವೋತ್ತಮನಾದ ಆ ಶಿವನ ಅನುಗ್ರಹ ಫಲವನ್ನು

ಶಂಕರಾರಾಧನಂ ಕಾರ್ಯಂ ಗಮನೇ ಸಮುಪಸ್ಥಿತೇ ।
ತದ್ದೂರಗಮನೇ ತಾವದದೂರಗಮನೇಽಪಿ ವಾ ॥೨೯॥

ನಾನಾಸಾಧನಯುಕ್ತೋಽಪಿ ಶಂಕರಾರಾಧನಂ ವಿನಾ ।
ತೈಃ ಸಾಧನೈಃ ಫಲಂ ತಾವನ್ನ ಪ್ರಾಪ್ನೋತ್ಯೇವ ಸರ್ವಥಾ ॥೩೦॥

ಅಲಂ ಬಹುವಿಧೈರ್ಯತ್ನೈರಲಮಾಯಾಸಕೋಟಿಭಿಃ ।
ಅಲಮನ್ಯೈರುಪಾಯೈರ್ವಾ ಕಾಲಕಾಲಾರ್ಚನಂ ವಿನಾ ॥೩೧॥

ಸಾಧನಾನಾಂ ಸಾಧನತ್ವಂ ಸಂಪಾದಯತಿ ಸತ್ವರಂ ।
ಮಹೇಶಾರಾಧನಂ ತೇನ ವಿನಾ ತತ್ಸ್ಯಾದಸಾಧನಂ ॥೩೨॥

ಶಂಕರಾರಾಧನಂ ಮುಖ್ಯಂ ಸರ್ವಸಾಧನಸಾಧನಂ ।
ತದೇವ ಸಫಲಂ ಮನ್ಯೇ ತದನ್ಯದ್ವಿಫಲಂ ಖಲು ॥೩೩॥

ಸ್ವೀಕರಿಸಿ, ಪ್ರಯಾಣಮಾಡುವನಿಗೆ ವಿಜಯವೂ ಮತ್ತು ನಾನಾವಿಧವಾದ ಸುಖಗಳೂ ಪದೇ ಪದೇ ಉಂಟಾಗುವುವು. ||೨೮||

ದೂರಪ್ರಯಾಣವನ್ನಾಗಲೀ ಹತ್ತಿರದ ಪ್ರಯಾಣವನ್ನಾಗಲೀ ನಡೆಸಬೇಕಾದ ಸಂದರ್ಭದಲ್ಲಿ ಆವಶ್ಯವಾಗಿ ಶಂಕರನನ್ನು ಭಕ್ತಿಯಿಂದ ಆರಾಧಿಸಿ, ಅನಂತರ ಪ್ರಯಾಣಮಾಡಬೇಕು. ||೨೯||

ಅನೇಕ ಸಹಾಯಸಂಪತ್ತಿಯಿದ್ದವರು ಶಂಕರನನ್ನು ಆರಾಧನೆ ಮಾಡದೇ ಪ್ರಯಾಣಮಾಡಿದರೆ ಆ ಸಾಧನಗಳೆಲ್ಲವೂ ಪ್ರಯೋಜನಕಾರಿಯಾಗಲಾರವು. ಇದು ನಿಶ್ಚಯ. ||೩೦||

ಕಾಲಕಾಲನೆನಿಸಿದ ಮಹಾದೇವನನ್ನು ಪೂಜಿಸದೇ ಇತರ ಅನೇಕ ವಿಧವಾದ ಪ್ರಯತ್ನಗಳನ್ನು ಮಾಡಿದರೂ, ಆಯಾಸಸಾಧ್ಯವಾದ ನಾನಾ ಉಪಾಯಗಳನ್ನು ಹುಡುಕಿದರೂ ಎಲ್ಲವೂ ವ್ಯರ್ಥವೇ ಎಂದು ತಿಳಿಯಬೇಕು. ||೩೧||

ಈ ಮಹೇಶ್ವರನ ಆರಾಧನೆಯು ಸಕಲ ಸಾಧನೆಗಳಿಗೂ ಕೂಡಲೆ ತಾನು ಸಾಧನತ್ವವನ್ನುಂಟುಮಾಡಿಕೊಡುವುದು. ಮಹೇಶ್ವರನ ಪೂಜೆಯೇ ಇಲ್ಲದೆ ಉಪಯೋಗಿಸುವ ಇತರ ಸಾಧನಗಳು ಎಂದಿಗೂ ಸಹಾಯಕಾರಿಗಳೇ ಆಗವು. ||೩೨||

ಸಕಲ ಸಾಧನ ಸಂಪತ್ತಿಗಳಿಗೂ, ಮೂಲಕಾರಣವಾದ ಶಂಕರನ ಆರಾಧ

ನ ಜಾನಂತ್ಯೇವ ಮೂಢಾಸ್ತೇ ಮುಖ್ಯಂ ತು ಫಲಸಾಧನಂ ।
ಶಂಕರಾರ್ಚನಮೇವೇತಿ ವೇದಬಾಹ್ಯಾಃ ಸ್ವಭಾವತಃ ॥೩೪॥

ಕಸ್ಯಚಿದ್ಭೂರಿಪುಣ್ಯಸ್ಯ ಶಿವಾರಾಧನಮೇವ ಮೇ ।
ಫಲಸಾಧನಮಿತ್ಯೇಷಾ ಪ್ರಮಾ ಭವತಿ ಭಾಗ್ಯತಃ ॥೩೫॥

ಶಾಂಕರಾ ಏವ ತತ್ತ್ವಜ್ಞಾಸ್ತೇಷಾಮಭ್ಯುದಯಃ ಸದಾ ।
ಶಿವಾರಾಧನಮಾತ್ರೇಣ ನಾನ್ಯಾಪೇಕ್ಷಾ ಪ್ರಜಾಯತೇ ॥೩೬॥

ಶಕ್ತಿಃ ಕಲ್ಪತರೂಣಾಂ ಯಾ ಶಕ್ತಿಃ ಸುರಗವಾಮಪಿ ।
ತತೋಽಪ್ಯನಂತಗುಣಿತಾ ಸಾ ಶಿವಾರಾಧನಸ್ಯ ಹಿ ॥೩೭॥

ಶಂಕರಾರ್ಚನಸಾಮರ್ಥ್ಯಂ ನ ಕಸ್ಯಾಪಿ ಜಗತ್ತ್ರಯೇ ।
ಯೇನ ಬ್ರಹ್ಮತ್ವಮಾಪ್ನೋತಿ ವಿಷ್ಣುತ್ವಂ ಮುಕ್ತಿಮಂತತಃ ॥೩೮॥

ನೆಯೇ ಮುಖ್ಯವಾದುದು. ಇದೇ ಸಫಲವು. ಉಳಿದುವೆಲ್ಲವೂ ವ್ಯರ್ಥವೆಂದೇ ನಾನು ತಿಳಿದಿರುವೆನು. ||೩೩||

ಸ್ವಭಾವವಾಗಿಯೇ ವೇದಾಧಿಕಾರವಿಲ್ಲದೇ, ವೇದಬಾಹ್ಯರೆನಿಸಿದ ಮೂಢರಾದ ಮಾನವರು, ಶಂಕರನ ಆರಾಧನೆಯೇ ಮುಖ್ಯವಾದ ಫಲಸಾಧನೆಯೆಂಬುದನ್ನು ಅರಿಯಲಾರರು. ||೩೪||

ಯಾವುದೋ ಒಂದು ಅಪಾರವಾದ ಪುಣ್ಯದ ವಿಶೇಷದಿಂದ ಶಿವಾರಾಧನೆಯೇ ಸರ್ವಫಲಗಳಿಗೂ ಮೂಲಕಾರಣವೆಂಬ ನಿಶ್ಚಯಜ್ಞಾನವು ನನಗೆ ಉಂಟಾಗಿದೆ. ||೩೫||

ಶಂಕರನ ಭಕ್ತರೇ ಮರ್ಮವನ್ನರಿತವರು. ಅವರಿಗೇ ಯಾವಾಗಲೂ ಸರ್ವಮಂಗಳಗಳೂ ಲಭಿಸುವುವು. ಶಿವನ ಆರಾಧನೆ ಮಾತ್ರದಿಂದ ಅವರಿಗೆ ಇತರ ಅಪೇಕ್ಷೆಗಳೇ ಉಂಟಾಗಲಾರವು. ||೩೬||

ಕಲ್ಪವೃಕ್ಷಕ್ಕಿರುವ ಶಕ್ತಿಗಿಂತಲೂ, ಸುರಧೇನುವೆನಿಸಿದ ಕಾಮಧೇನುವಿಗಿರುವ ಶಕ್ತಿಗಿಂತಲೂ, ಅನೇಕ ಪಾಲು ಹೆಚ್ಚಾದ ಫಲಗಳನ್ನು ಕೊಡುವ ಸಾಮರ್ಥ್ಯವು ಈ ಶಿವನ ಆರಾಧನೆಗೆ ಉಂಟು. ||೩೭||

ಮೂರು ಲೋಕಗಳಲ್ಲಿ ಯಾವುದರಿಂದಲೂ ಈ ಶಂಕರಾರ್ಚನೆಯಿಂದುಂಟಾಗುವ ಶಕ್ತಿಯನ್ನು ಸಂಪಾದಿಸಲಾಗುವುದಿಲ್ಲ. ಈ ಶಂಕರನ ಆರಾಧನೆಯಿಂದ

ಶಿವಾರ್ಚನರಸಃ ಕೋಽಪಿ ಭೂರಿಪುಣ್ಯಸ್ಯ ಜಾಯತೇ ।
ಸರಸೋ ದುರ್ಲಭೋ ಲೋಕೇ ಸುಧಾರಸರಸಸ್ಯ ತು ॥೩೯॥

ಶಂಕರಾನುಗ್ರಹಾದೇವ ಶಿವಾರಾಧನಧೀರ್ಭವೇತ್ ।
ಸೈವ ಸೂತೇ ಫಲಂ ತಾವದ್ವಿಮಲಂ ತದಪೇಕ್ಷಿತಂ ॥೪೦॥

ಶಿವಾರಾಧನಮೇವೈಕಮಭೀಷ್ಟಫಲಸಾಧನಂ ।
ತದನ್ಯಸ್ಸಾಧನಾಭಾಸಸ್ತೇನ ಕಿಂ ಜಾಯತೇ ಫಲಂ ॥೪೧॥

ಪಿಪಾಸಾಪಗಮೋ ಲೋಕೇ ಕಥಂ ವಾ ಮೃಗತೃಷ್ಣಯಾ ।
ಸಾ ಚೇತ್ತದಾ ತದಾರ್ತಸ್ಯ ಜಲಪಾನಾದಿಕಕ್ರಿಯಾ ॥೪೨॥

ಬ್ರಹ್ಮಪಟ್ಟವನ್ನೂ (ಬ್ರಹ್ಮತ್ವ ಅಥವ ಬ್ರಹ್ಮನ ಸ್ವರೂಪ) ವಿಷ್ಣುತ್ವವನ್ನೂ ಮತ್ತು ಕೊನೆಯಲ್ಲಿ ಶಾಶ್ವತವಾದ ಮುಕ್ತಿಯನ್ನೂ ಸಹ ಹೊಂದಬಹುದು. ॥೩೮॥

ಅಪಾರ ಮಹಿಮೆಯುಳ್ಳ ಈ ಶಿವಾರ್ಚನೆಯಿಂದುಂಟಾಗುವ ರಸವು ಪುಣ್ಯಶಾಲಿಯಾದ ಯಾರಿಗೋ ಒಬ್ಬನಿಗೆ ದೊರೆಯುವುದು. ಅಮೃತರಸಕ್ಕಿಂತಲೂ ಸಾರಭೂತವಾದ ಈ ಶಿವಭಕ್ತಿರಸವು ಲೋಕದಲ್ಲಿ ದೊರೆಯುವುದು ದುರ್ಲಭವೆಂದು ತಿಳಿಯಬೇಕು. ॥೩೯॥

ಶಿವಾರಾಧನೆಯನ್ನು ಮಾಡಲು ಬುದ್ಧಿಯುಂಟಾಗಬೇಕಾದರೂ ಈ ಶಂಕರನ ಅನುಗ್ರಹವೇ ಕಾರಣ. (ಅಂದರೆ ಶಂಕರನ ಅನುಗ್ರಹದಿಂದಲೇ ಶಿವಪೂಜಾಬುದ್ಧಿ ಹುಟ್ಟುವುದು) ಈ ಬುದ್ಧಿಯೇ ಪರಿಶುದ್ಧವಾದ ತಾವು ಬೇಡುವ ಫಲಗಳನ್ನುಂಟು ಮಾಡುವುದು. ॥೪೦॥

ಶಿವನ ಆರಾಧನೆಯೊಂದೇ ಇಷ್ಟವಾದ ಫಲಗಳನ್ನು ಕೊಡಲು ಸಾಧನವಾದುದು. ಇದನ್ನು ಬಿಟ್ಟು ಉಳಿದುದೆಲ್ಲಾ ಕೇವಲ ಸಾಧನಗಳಂತೆ ತೋರುವುವೇ ವಿನಾ ಅವುಗಳಿಂದ ಯಾವ ಪ್ರಯೋಜನವೂ ಉಂಟಾಗಲಾರದು. ॥೪೧॥

ಲೋಕದಲ್ಲಿ ನೀರಿನಂತೆ ತೋರುವ ಬಿಸಿಲು ಝಳದಿಂದ (ಮರೀಚಿಕೆ) ಬಾಯಾರಿಕೆಯು ಹೇಗೆ ತಾನೇ ಹೋದೀತು? ಹಾಗೇನಾದರೂ ಒಂದು ಪಕ್ಷ ಹೋಗುವುದಾದರೆ ಜಲಪಾನವೇ ಮುಂತಾದ ಬಾಯಾರಿಕೆಯನ್ನು ಹೋಗಲಾಡಿಸುವ ಕರ್ಮಗಳು ಹೇಗೆ ತಾನೇ ಪ್ರಯೋಜನಕಾರಿಗಳಾಗುವುವು? ಆ ಪಕ್ಷದಲ್ಲಿ ಜಲಪಾನಾದಿ ಕ್ರಿಯೆಗಳಿಗೆ ವೈಯರ್ಥ್ಯ ಬಂದೀತು! ॥೪೨॥

ಶುಕ್ತಿಕಾ ರಜತತ್ವೇನ ಜ್ಞಾತಾ ಕಿಂ ಕೇನಚಿತ್ಕ್ವಚಿತ್ ।
ಸಾಧಯತ್ಯತಿಯತ್ನೇನ ಕಾಮಿನೀಕರಕಂಕಣಂ ॥೪೩॥

ತಸ್ಮಾದ್ಭ್ರಮಾಸ್ಪದಂ ಯಾವತ್ತಾವನ್ನ ಫಲಸಾಧನಂ ।
ಸಾಧನತ್ವೇನ ವಿಜ್ಞಾತಂ ಫಲಂ ಸಾಧಯತಿ ಧ್ರುವಂ ॥೪೪॥

ಪ್ರಮಿತಂ ಸಾಧನತ್ವೇನ ಕೇವಲಂ ಶಿವಪೂಜನಂ ।
ತೇನೈವ ಸಿದ್ಧಿರನ್ಯೇನ ನ ಸಿದ್ಧಿರುಪಜಾಯತೇ ॥೪೫॥

ತಥಾ ಸತಿ ಪ್ರಸಂಗೇನಾಪ್ಯನಾಯಾಸೇನ ಸಾಧಿತಂ ।
ಶಿವಾರ್ಚನಂ ಫಲಂ ಸೂತೇ ನಿತ್ಯಂ ಯದ್ಯದಪೇಕ್ಷಿತಂ ॥೪೬॥

ಅತಃ ಪರಂ ಪ್ರಯತ್ನೋಽಪಿ ಕರ್ತವ್ಯಃ ಶಿವಪೂಜನೇ ।
ತೇನ ತದ್ದರ್ಶನೋತ್ಪನ್ನಪಾಪನಾಶೋ ಭವಿಷ್ಯತಿ ॥೪೭॥

ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದು ಬಹಳ ಪ್ರಯತ್ನದಿಂದ ಒಂದು ವೇಳೆ ಸಾಧಿಸಿದರೂ ಅದರಿಂದ ಸ್ತ್ರೀಯ ಕೈಕಡಗವನ್ನು ಮಾಡಿಸಲು ಯಾರಿಂದಲಾದರೂ ಸಾಧ್ಯವೇ? ॥೪೩॥

ಆದುದರಿಂದ ಭ್ರಾಂತಿಗೆ ಆಶ್ರಯವಾದ ಯಾವ ಜ್ಞಾನವೂ ಫಲಸಾಧಕವಾಗಲಾರದು. ಯಾವುದು ಭ್ರಮೆಯಿಲ್ಲದೇ ಸಾಧನವೆಂದು ತಿಳಿಯಲ್ಪಡುವುದೋ ಅದೇ ನಿಜವಾಗಿಯೂ ಫಲವನ್ನು ಸಾಧಿಸುವುದು. ॥೪೪॥

ಮೋಕ್ಷಸಾಧನವೆಂದು ನಿಶ್ಚಿತವಾಗಿರುವುದು ಕೇವಲ ಶಿವಪೂಜೆಯೊಂದೇ. ಇದರಿಂದಲೇ ಸಕಲ ಸಿದ್ಧಿಗಳೂ ಉಂಟಾಗುವುವು. ಇತರ ಯಾವುದರಿಂದಲೂ ಇಷ್ಟ ಸಿದ್ಧಿಯೊದಗಲಾರದು. ॥೪೫॥

ಹೀಗಿರುವಾಗ ಸರಿಯಾದ ಪ್ರಸಂಗದಲ್ಲಿ ಯಾವ ಆಯಾಸವೂ ಇಲ್ಲದಂತೆ ಆಚರಿಸಿದ ಶಿವಪೂಜೆಯೇ ಪ್ರತಿನಿತ್ಯವೂ ಮಾನವನು ಅಪೇಕ್ಷಿಸುವ ಫಲಗಳನ್ನೆಲ್ಲಾ ಕೊಡುವುದು. ॥೪೬॥

ಇನ್ನು ಮುಂದೆ ನಾವು ಆ ಶಿವಪೂಜೆಯನ್ನು ಮಾಡಲು ಪ್ರಯತ್ನವನ್ನಾದರೂ ಮಾಡಬೇಕು. ಇದರಿಂದ ಈ ಪಾಪಿಯಾದ ಮುನಿಯನ್ನು ನೋಡಿದ ಪಾತಕವು ನಮಗೆ ತೊಲಗುವುದು. ॥೪೭॥

ಮಹಾಘಗಿರಿಸಂಘಾತ ವಜ್ರನಿಭಾಶಾನಪೂಜನಂ ।
ತೇನ ತತ್ಪಾಪವಿಲಯೋ ಭಯಶಂಕಾ ನ ಜಾಯತೇ ॥೪೮॥

ತಾವತ್ಪಾಪಭಯಂ ಭಕ್ತ್ಯಾ ಯಾವನ್ನಾರಾಧ್ಯತೇ ಶಿವಃ ।
ತದಾರಾಧನಮಾತ್ರೇಣ ದಗ್ಧಾಃ ಪಾತಕಕೋಟಯಃ ॥೪೯॥

ಮಹಾಪಾಪಶರೀರಸ್ಯ ವಿಷಂ ಶಂಕರಪೂಜನಂ ।
ತೇನ ತಾವತ್ತಸ್ಯ ನಾಶಃ ಸತ್ವರಂ ಖಲು ಜಾಯತೇ ॥೫೦॥

ಏತಸ್ಮಿನ್ನಂತರೇ ತತ್ರ ಕಶ್ಚಿದಾರ್ತಸ್ವರಃ ಶ್ರುತಃ ।
ತತಃ ಪರಂ ಮ್ಲಾನಚಿತ್ತಂ ತ್ವರಯಾ ಸ ಯಯೌ ಯಮಃ ॥೫೧॥

ತತಃ ಪರಂ ತಂ ವಿಲೋಕ್ಯ ಭಸ್ಮೋದ್ಧೂಲಿತವಿಗ್ರಹಂ ।
ಶಿವಲಿಂಗಾರ್ಚಕಂ ಶುದ್ಧಂ ದದರ್ಶ ಮುನಿಪುಂಗವಂ ॥೫೨॥

ಈಶಾನಮೂರ್ತಿಯಾದ ಮಹೇಶ್ವರನ ಪೂಜೆಯು, ಮಹಾಪಾಪಗಳೆಂಬ ಬೆಟ್ಟದ ಸಮೂಹಕ್ಕೆ ವಜ್ರಾಯುಧಸಮಾನವಾಗಿರುವುದರಿಂದ ಈ ಪಾಪನಾಶವಾಗುವುದೋ ಇಲ್ಲವೋ ಎಂಬ ಭಯಕ್ಕೂ, ಸಂದೇಹಕ್ಕೂ ಅವಕಾಶವೇ ಇಲ್ಲ. ॥೪೮॥

ಭಕ್ತಿಯಿಂದ ಶಿವನನ್ನು ಪೂಜೆಮಾಡುವ ತನಕ ನಮಗೆ ಪಾಪಗಳ ಭಯವುಂಟು. ಅವನ ಆರಾಧನೆಮಾಡಿದ ಮಾತ್ರದಿಂದ ಕೋಟ್ಯಂತರ ಪಾಪಗಳೂ ಭಸ್ಮವಾಗಿ ಹೋಗುವುವು. ॥೪೯॥

ಮಹಾಪಾಪಗಳಿಂದ ಕೂಡಿದ ಶರೀರಕ್ಕೆ ಶಂಕರನ ಪೂಜೆಯು ವಿಷಪ್ರಾಯವಾದದ್ದು. ಈ ವಿಷಪ್ರಾಯವಾದ ಆರಾಧನೆಯಿಂದ ಕೂಡಲೇ ಆ ಪಾಪಶರೀರದ ನಾಶವಾಗುವುದು. ॥೫೦॥

ಹೀಗೆ ಯಮನು ಯೋಚಿಸುತ್ತಿರುವ ಸಮಯದಲ್ಲಿ ಒಂದು ಆರ್ತಧ್ವನಿಯು ಕೇಳಿಸಿತು. ಅನಂತರ ಯಮನು, ಮನಸ್ಸಿನಲ್ಲಿ ಕಳವಳಗೊಂಡು ಕೂಡಲೇ ಅಲ್ಲಿಂದ ಜಾಗ್ರತೆ ಆ ಆರ್ತನಾದವು ಆಗುತ್ತಿದ್ದೆಡೆಗೈದಿದನು. ॥೫೧॥

ಅಲ್ಲಿ ಭಸ್ಮದಿಂದ ಭೂಷಿತವಾಗಿದ್ದ ಶರೀರವುಳ್ಳ ಮುನಿಶ್ರೇಷ್ಠನನ್ನು ನೋಡಿದನು. ಆ ಮುನಿಯು ಪರಿಶುದ್ಧನೂ ಶಿವನ ಲಿಂಗಾರ್ಚನೆಯಲ್ಲಿ ಸದಾ ನಿರತನೂ ಆಗಿದ್ದನು. ॥೫೨॥

ತತಃ ಪ್ರಣಮ್ಯ ತಂ ಭಕ್ತ್ಯಾ ಸ ಕಾಲೋಽಪಿ ಕೃತಾಂಜಲಿಃ ।
ತಮುವಾಚಾತಿವಿನಯಾಚ್ಚಿತ್ರಗುಪ್ತೇನ ಸಂಯುತಃ ॥೫೩॥

ವನವಾಸ್ಯಸಿ ಸವನೇ ಸವನೇ ಸವನೇ ವನೇ ।
ವನೇನಾಪಿ ಮಹಾದೇವಂ ಪೂಜಯಂತ್ಯತ್ರ ಸಾಧವಃ ॥೫೪॥

ಶಿವಲಿಂಗಂ ಪ್ರಯತ್ನೇನ ವನೇನ ವನಜೈರಪಿ ।
ವನೇ ಸಂಪೂಜಯನ್ಮರ್ತ್ಯಃ ಸವನೇ ಸುಖಮಾಪ್ನುಯಾತ್ ॥೫೫॥

ಏವಂ ಚಾರ್ತಸ್ವರಃ ಕೋಽಯಂ ತವ ಕಿಂ ತತ್ರ ಕಾರಣಂ ।
ಇದಂ ವದ ವಿಶೇಷೇಣ ಮಹ್ಯಮಿತ್ಯಾಹ ತಂ ಯಮಃ ॥೫೬॥

ಆಗ ಆ ಕಾಲಸ್ವರೂಪನಾದ ಯಮನು ಚಿತ್ರಗುಪ್ತನೊಡನೆ ಭಕ್ತಿಯಿಂದ ಆ ಮುನಿಗೆ ಕೈಜೋಡಿಸಿ ನಮಸ್ಕರಿಸಿ, ವಿನಯದಿಂದ ಆ ಮುನಿಯನ್ನು ಕುರಿತು ಹೀಗೆ ಪ್ರಶ್ನೆಮಾಡಿದನು. ॥೫೩॥

ಎಲೈ ಮುನಿಯೇ! ಪರಿಶುದ್ಧವಾದ ನೀರಿನಿಂದ ಕೂಡಿರುವ ಸುಂದರವಾದ ವನದಲ್ಲಿ ವಾಸಮಾಡುತ್ತಿರುವೆ. ಅಲ್ಲಿರುವ ಸಾಧುಗಳು ಪ್ರತಿಯೊಂದು ಯಾಗರೂಪವಾದ ಕರ್ಮಗಳಲ್ಲಿಯೂ ಮಹಾದೇವನನ್ನು ನಿರ್ಮಲೋದಕದಿಂದ ಅಭಿಷೇಕ ಮಾಡುವರು. ॥೫೪॥

ಕಾಡಿನಲ್ಲಿ ವಾಸಮಾಡುತ್ತಾ ಶ್ರದ್ಧೆಯಿಂದ ಪ್ರಯತ್ನಪೂರ್ವಕವಾಗಿ ನೀರಿನಿಂದಲೂ ಮತ್ತು ವನಪುಷ್ಪಗಳಿಂದಲೂ ಮತ್ತು ಕಾಡಿನಲ್ಲಿ ಬೆಳೆಯುವ ದಿವ್ಯ ಫಲಗಳಿಂದಲೂ ಸಹ ಶಂಕರನನ್ನು ಪೂಜೆಮಾಡುವ ಮಾನವನು ಸುಖವನ್ನೈದುವನು. ॥೫೫॥

ಹೀಗಿದ್ದರೂ ನೀನು ಆರ್ತಧ್ವನಿಮಾಡಲು ಕಾರಣವೇನು? ಏತಕ್ಕೆ ಉಂಟಾಯಿತು? ಇದನ್ನು ನನಗೆ ವಿಶೇಷವಾಗಿ ತಿಳಿಸಬೇಕೆಂದು ಯಮನು ಆ ಮುನಿಯನ್ನು ಕೇಳಿಕೊಂಡನು. ॥೫೬॥

ತತಃ ಪರಮುವಾಚೇದಂ ವಚನಂ ತಂ ಯಮಂ ಪ್ರತಿ ।
ಮಯಾ ಪಾಪರತೋ ದೃಷ್ಟಸ್ತೇನಾರ್ತಿರಭವನ್ಮಮ ॥೫೭॥

ಶಿವನಿಂದಾ ಕೃತಾ ತೇನ ದುರ್ಮುಖಂ ತನ್ಮುಖಂ ಖಲು ।
ತದ್ದರ್ಶನೇನ ಪಾಪಾನಿ ಮಯಿ ಜಾತಾನಿ ಕೋಟಿಶಃ ॥೫೮॥

ತದಾಲೋಕನಪಾಪಾನಿ ವೃದ್ಧಿಂ ಯಾಂತಿ ಕ್ಷಣೇ ಕ್ಷಣೇ ।
ಅತಃ ಕಥಂ ವಿನಾಶಃ ಸ್ಯಾತ್ತೇಷಾಮಿತಿ ವಿಚಿಂತ್ಯತೇ ॥೫೯॥

ದೈವಾತ್ತ್ವಯಾಪ್ಯಯತ್ನೇನ ಸ ದೃಷ್ಟಃ ಪಾಪಕೃತ್ತಮಃ ।
ಮಯಾ ಸ ಏವ ದೃಷ್ಟೋಽತಸ್ತೇನ ದುಃಖಂ ಪ್ರವರ್ಧತೇ ॥೬೦॥

ಏತದ್ವಿನಾಶಕೋ ಧರ್ಮೋ ಧರ್ಮರೂಪೇಣ ಕಿಂ ತ್ವಯಾ ।
ನ ಜ್ಞಾತಸ್ತ್ವಂ ವದ ಪ್ರೀತ್ಯಾ ವಿಚಾರ್ಯಾದರಪೂರ್ವಕಂ ॥೬೧॥

ಅನಂತರ ಆ ಮುನಿಯು ಯಮನನ್ನು ಕುರಿತು, "ನಾನು ಪಾಪಿಯನ್ನೊಬ್ಬನನ್ನು ದರ್ಶನಮಾಡಿದೆನು. ಅದರ ಫಲವಾಗಿ ನಾನು ಆರ್ತನಾದ ಮಾಡಬೇಕಾಗಿ ಬಂದಿತು ಎಂದನು. ॥೫೭॥

ಕೆಟ್ಟಮೋರೆಯುಳ್ಳ ಆತನು ಶಿವನನ್ನು ನಿಂದಿಸಿದನು. ಅವನ ಮುಖವನ್ನು ದರ್ಶನಮಾಡಿದುದರಿಂದಲೇ, ಅನೇಕ ಕೋಟಿ ಪಾಪಗಳು ನನಗುಂಟಾದವು. ॥೫೮॥

ಈತನ ದರ್ಶನದಿಂದುಂಟಾದ ಪಾಪಗಳು ಕ್ಷಣಕ್ಷಣದಲ್ಲಿಯೂ ಅಭಿವೃದ್ಧಿ ಹೊಂದುತ್ತಿವೆ. ಆದುದರಿಂದ ಈ ಪಾಪಗಳು ನಾಶವಾಗುವ ಬಗೆ ಹೇಗೆಂದು ಯೋಚನೆ ಮಾಡುತ್ತಿರುವೆನು. ॥೫೯॥

ದೈವಸಂಘಟನೆಯಿಂದ ಅಕಸ್ಮಾತ್ತಾಗಿ ನೀನು ಯಾವ ಪಾಪಿಯನ್ನು ದರ್ಶನ ಮಾಡಿದೆಯೋ ಆ ಪಾಪಿಯೇ ನನ್ನಿಂದಲೂ ನೋಡಲ್ಪಟ್ಟನು. ಅದರಿಂದಲೇ ನನಗೆ ದುಃಖವು ಹೆಚ್ಚುತ್ತಿರುವುದು. ॥೬೦॥

ಎಲೈ ಯಮಧರ್ಮನೇ, ನೀನು ಧರ್ಮಸ್ವರೂಪನಾಗಿರುವೆ. ಆದುದರಿಂದ ಈ ಪಾಪವನ್ನು ನಾಶಮಾಡುವ ಸಾಮರ್ಥ್ಯವುಳ್ಳ ಧರ್ಮವೇನಾದರೂ ನಿನಗೆ ತಿಳಿದಿದ್ದರೆ, ಅದನ್ನು ಚೆನ್ನಾಗಿ ಪರ್ಯಾಲೋಚಿಸಿ ಆದರಪೂರ್ವಕವಾಗಿ ಪ್ರೀತಿಯಿಂದ

ಇತಿ ತದ್ವಚನಂ ಶ್ರುತ್ವಾ ಯಮೋಽಪಿ ನಿಯಮಾನ್ವಿತಃ ।
ಶುಕಾಶ್ರಮಂ ಯಯೌ ತೇನ ಮುನಿನಾ ಸಹ ಸತ್ವರಂ ॥೬೨॥

ತಂ ಶುಕಂ ಮುನಿಶಾರ್ದೂಲಂ ಕಾಲಕಾಲಾರ್ಚನೇ ರತಂ ।
ಪ್ರಣಮ್ಯ ದಂಡವದ್ಭೂಮಾವುವಾಚ ವಚನಂ ಯಮಃ ॥೬೩॥

॥ ಯಮ ಉವಾಚ ॥

ದೃಷ್ಟಃ ಕಶ್ಚಿನ್ಮಯಾ ದುಷ್ಟೋ ದುರದೃಷ್ಟೇನ ದೂರತಃ ।
ಸ ಶೈವನಿಂದಕಸ್ತೇನ ಪಾತಕಂ ತಾವದಾರ್ಜಿತಂ ॥೬೪॥

ತದ್ದುಷ್ಟಾಲೋಕನಾದೇವ ಮಯಾಪ್ಯಘಮುಪಾರ್ಜಿತಂ ।
ಕೋವಾ ತನ್ನಾಶಕೋಪಾಯಸ್ತಂ ಮೇ ವದ ಶಿವಾರ್ಚಕ ॥೬೫॥

ನನಗೆ ತಿಳಿಸು. ಅದರಿಂದಲಾದರೂ ಈ ಪಾತಕವನ್ನು ಕಳೆಯೋಣ" ವೆಂದು ಆ ಮುನಿಯು ಯಮನಲ್ಲಿ ಕೇಳಿಕೊಂಡನು. ॥೬೧॥

ಈ ಮುನಿಯ ವಚನಗಳನ್ನು ಕೇಳಿ, ಯಮನೂ ಸಹ ನಿಯಮದಿಂದ ಆ ಮುನಿಯೊಡನೆ ಅಲ್ಲಿಂದ ಹೊರಟು ಜಾಗ್ರತೆಯಾಗಿ ಶುಕಮಹರ್ಷಿಯ ಆಶ್ರಮಕ್ಕೆ ತೆರಳಿದನು. ॥೬೨॥

ಆಗ ಆ ಮುನಿಶ್ರೇಷ್ಠನಾದ ಶುಕನು ಕಾಲಕಾಲನೆನಿಸಿದ ಮಹೇಶ್ವರನ ಪೂಜೆಯಲ್ಲಿ ನಿರತನಾಗಿದ್ದನು. ಆ ಸಂದರ್ಭದಲ್ಲಿ ಯಮನು ಅಲ್ಲಿಗೆ ಹೋಗಿ ಆ ಮುನಿಪುಂಗವನಿಗೆ ಭೂಮಿಯ ಮೇಲೆ ದಂಡಪ್ರಣಾಮಮಾಡಿ, ಅವನನ್ನು ಕುರಿತು ಹೀಗೆಂದನು. ॥೬೩॥

"ಎಲೈ ಮಹರ್ಷಿಯೇ, ನನ್ನ ದುರದೃಷ್ಟದಿಂದ ನಾನು ಶಿವನಿಂದಾತತ್ಪರನಾದ ಒಬ್ಬ ದುಷ್ಟನನ್ನು ದರ್ಶನಮಾಡಿದೆನು. ಅವನು ಮಹಾಪಾಪಿಯಲ್ಲವೇ? ॥೬೪॥

ಆ ದುಷ್ಟನ ದರ್ಶನದಿಂದ ನನಗೆ ಪಾಪಸಂಘಟನೆಯಾಗಿದೆ. ಎಲೈ ಶಿವಪೂಜಾಪರಾಯಣನೇ, ಇದು ನಿವಾರಣೆಯಾಗುವ ಬಗೆ ಹೇಗೆ? ಅದನ್ನು ನಮಗೆ ದಯವಿಟ್ಟು ತಿಳಿಸು" ಎಂದು ಯಮನು ನುಡಿದನು. ॥೬೫॥

ತತಃ ಸೋಽಪಿ ಶುಕಃ ಪ್ರಾಹ ದೃಷ್ಟೋ ಯಸ್ತು ಮಯಾ ಯಮೆ ।
ತ್ವಯಾ ದೃಷ್ಟಃ ಸ ದುಷ್ಟೋಽಪಿ ಯತಃ ಸ ಶಿವನಿಂದಕಃ ॥೬೬॥

ಕೃತಂ ಯದ್ಯಪಿ ತೇನಾತ್ರ ತಪೋ ಘೋರತರಂ ಪರಂ ।
ತಥಾಪ್ಯಶಂಕರೋ ಜಾತಸ್ತದದೃಷ್ಟಂ ತಥಾವಿಧಂ ॥೬೭॥

ಕಿಂ ಘೋರತಪಸಾ ಕೃತ್ಯಂ ಕಿಮನ್ಯೈರ್ಧರ್ಮಸಂಚಯೈಃ ।
ಶಿವಲಿಂಗಾರ್ಚನೇ ನಿತ್ಯಂ ವಿಶ್ವಾಸೋ ಯದಿ ನಾದ್ಭುತಃ ॥೬೮॥

ಅಪಾರಪುಣ್ಯನಿಧಯೋ ಯೇನ ಪುಣ್ಯೈಃ ಸಮಾರ್ಜಿತಾಃ ।
ತಸ್ಯೈವ ತಾವದ್ವಿಶ್ವಾಸಃ ಶಿವಲಿಂಗಾರ್ಚನೇ ಯಮೆ ॥೬೯॥

ಕಲ್ಪಾವಸಾನಪರ್ಯಂತಂ ಧರ್ಮೈಶ್ಚೇದ್ದಿನಯಾಪನಂ ।
ತದಾ ಕಥಂಚಿದ್ವಿಶ್ವಾಸೋ ಜಾಯತೇ ಶಂಕರಾರ್ಚನೇ ॥೭೦॥

ಆಗ ಆ ಶುಕಮಹರ್ಷಿಯು "ಎಲೈ ಯಮುನೇ, ನಾನು ಮೊದಲು ನೋಡಿದ ಶಿವನಿಂದಕನಾದ ದುಷ್ಟನನ್ನೇ ನೀನೂ ಈಗ ದರ್ಶನಮಾಡಿರುವೆ. ॥೬೬॥

ಆ ದುಷ್ಟನಾದರೋ ಘೋರವಾದ ತಪಸ್ಸನ್ನು ಅತಿಶಯವಾಗಿಯೇ ಮಾಡಿರುವನು. ಆದರೆ ಮಾತ್ರ ಶಂಕರನ ಆರಾಧಕನಾಗಲಿಲ್ಲ. ಯಾರೇನುಮಾಡುವುದಕ್ಕಾದೀತು? ಅವನ ಅದೃಷ್ಟವೇ ಅಂತಹದು. ॥೬೭॥

ನಿತ್ಯವೂ ಶಿವಲಿಂಗಾರ್ಚನೆಯಲ್ಲಿ ಅದ್ಭುತವಾದ ವಿಶ್ವಾಸವಿಲ್ಲದೇ ಹೋದರೆ ಭಯಂಕರವಾದ ತಪಸ್ಸು ಮಾಡಿದರೇನು? ಅಲ್ಲದೇ ಅನೇಕ ಧರ್ಮಸಮೂಹಗಳನ್ನೇ ಆಚರಿಸಿದರು ತಾನೇ ಏನು ಪ್ರಯೋಜನ? ॥೬೮॥

ಯಮುನೇ, ಅಪಾರವಾದ ಪುಣ್ಯಕರ್ಮಗಳನ್ನಾಚರಿಸಿ ಪುಣ್ಯನಿಧಿಗಳಾಗಿರುವರಿಗೆ ಮಾತ್ರ ಶಿವಲಿಂಗಾರ್ಚನೆಯಲ್ಲಿ ಅಂತಹ ವಿಶ್ವಾಸವುಂಟಾಗುವುದು. ॥೬೯॥

ಒಂದು ಕಲ್ಪವು ಕಳೆಯುವವರೆವಿಗೂ ಹಾಗೂ ಹೀಗೂ ಕೇವಲ ಧರ್ಮಕಾರ್ಯಗಳಿಂದಲೇ ಕಾಲಕಳೆಯುತ್ತಿದ್ದರೆ, ಆಗ ಶಂಕರನ ಪೂಜೆಯಲ್ಲಿ ಸ್ವಲ್ಪ ವಿಶ್ವಾಸಹುಟ್ಟುವುದು. ॥೭೦॥

ಸುಲಭಂ ಪುಣ್ಯಪುಂಜಾನಾಂ ಶ್ರೀಮೃತ್ಯುಂಜಯಪೂಜನಂ ।
ಅನ್ಯೇಷಾಂ ದುರ್ಲಭಂ ತಾವತ್ತದೇವ ಶಿವಪೂಜನಂ ॥೭೦॥

ಸುಮೇರುಶಿಖರಸ್ಥಾನಂ ಚಂದ್ರೇಣ ಸಹ ಸಂಸ್ಥಿತಿಃ ।
ಪಾತಾಲವಾಸಿನಾಂ ಸಾ ತು ದುರ್ಲಭಾ ತತ್ತಥಾ ಖಲು ॥೭೧॥

ಅತಃ ಶಿವಾರಾಧನೇಽಪಿ ವಿಘ್ನಾಸ್ಸಂಭಾವಿತಾಸ್ತತಃ ।
ತತ್ಕಾರ್ಯಮಪ್ರಮಾದೇನ ಪ್ರಮಾದೇ ಕುಗತಿರ್ಭವೇತ್ ॥೭೩॥

ಅಶಾಂಕರಾಗಾರಾ ನಾರೀ ನರನೀರಾವಲೋಕನೇ ।
ನಿಮೀಲ್ಯ ಲೋಚನೇ ಪಶ್ಚಾತ್ಕುರ್ಯಾತ್ಸೂರ್ಯಾವಲೋಕನಂ ॥೭೪॥

ಅಶಾಂಕರಶರೀರಾಣಿ ದೃಷ್ಟ್ವಾ ನಾರಕಿಣಾಮಪಿ ।
ದೃಷ್ಟ್ವಾ ಭಾಸುಂ ವಿಶಿಷ್ಟಶ್ಚೇದ್ದೂರಂ ಯಾತ್ಯಪಿ ಧಾವತಿ ॥೭೫॥

ಪುಣ್ಯಸಮೂಹಗಳಿಂದ ಯುಕ್ತರಾದವರಿಗೆ ಮಾತ್ರ ಶ್ರೀ ಮೃತ್ಯುಂಜಯನೆನಿಸಿದ ಪರಮೇಶ್ವರನ ಪೂಜೆಯು ಸುಲಭವಾಗಿ ದೊರೆಯುವುದು. ಇತರರಿಗೆ ಈ ಶಿವಪೂಜೆಯು ದೊರೆಯುವುದು ಅತಿ ದುರ್ಲಭ. ॥೭೦॥

ಸುಮೇರುಪರ್ವತದ ಶಿಖರದಲ್ಲಿ ವಾಸವೂ, ಯಾವಾಗಲೂ ಚಂದ್ರನೊಡನೆ ಸೇರುವೆಯೂ ಸಹ ಪಾತಾಲವಾಸಿಗಳಾದ ಆ ಪಾಪಿಗಳಿಗೆ ದೊರೆಯುವುದು ದುರ್ಲಭವೇ ಆಹುದು. ॥೭೧॥

ಆದುದರಿಂದ ಈ ಶಿವಾರಾಧನೆಯಲ್ಲಿಯೂ ನೀವು ಮಧ್ಯೆ ಬಂದದ್ದರಿಂದ ಅನೇಕ ವಿಘ್ನಗಳು ಸಂಭವಿಸಿದುವು. ಈ ಶಿವಾರಾಧನೆಯನ್ನು ಸ್ವಲ್ಪವೂ ಪ್ರಮಾದವಿಲ್ಲದೇ ಮಾಡಬೇಕು. ಹಾಗೇನಾದರೂ ಪ್ರಮಾದವುಂಟಾದರೇ ಹೀನದೆಸೆಯೇ ಪ್ರಾಪ್ತವಾಗುವುದು. ॥೭೩॥

ಶಂಕರನ ಧ್ಯಾನ ಪೂಜಾದಿಗಳಿಲ್ಲದ ಮನೆ, ಹೆಂಗಸರು, ಗಂಡಸರು ಮತ್ತು ನೀರು ಇವುಗಳನ್ನು ದರ್ಶನಮಾಡಿದರೆ ಸ್ವಲ್ಪ ಹೊತ್ತು ಕೂಡಲೇ ಕಣ್ಣುಮುಚ್ಚಿ ಅನಂತರ ಸೂರ್ಯನನ್ನು ದರ್ಶನಮಾಡಬೇಕು. ॥೭೪॥

ಶಂಕರನ ಲಾಂಛನವಿಲ್ಲದ ನರಕವಾಸಿಗಳಾದ ಜನರ ಶರೀರವನ್ನು ಒಂದು ವೇಳೆ ದರ್ಶನ ಮಾಡಿದರೆ, ಪರಿಶುದ್ಧವಾದ ಸಂಪ್ರದಾಯವುಳ್ಳ ಶೈವನು ಕೂಡಲೇ

ಶಿವನೇತ್ರತ್ವಬುದ್ಧ್ಯೈವ ಕರ್ತವ್ಯಂ ಭಾನುದರ್ಶನಂ ।
ಅನ್ಯಥಾ ಧೀರ್ಯದಿ ಪುನಸ್ತದಾ ನರಕಮಶ್ನುತೇ ॥೭೬॥

ತತಃ ಪರಂ ಭಸ್ಮನಾಂಗಂ ಸಮ್ಯಗುದ್ಧೂಲ್ಯ ಸಾದರಂ ।
ಹರಲಿಂಗಾರ್ಚನಂ ಕಾರ್ಯಂ ಕೃತ್ವಾ ಮುಕ್ತೋ ಭವೇದಘೈಃ ॥೭೭॥

ಉದ್ಧೂಲಿತಂ ಭಸ್ಮನಾಂಗಂ ನವಮೇವೋಪಜಾಯತೇ ।
ಭಸ್ಮ ಪಾಪಶರೀರಾಣಾಂ ಭಸ್ಮೀಕರಣಸಾಧನಂ ॥೭೮॥

ತತ್ಪುಣ್ಯಪರಿಪಾಕೇನ ಭಸ್ಮಾಂಗಮುಪಯಾತ್ಯಪಿ ।
ತಸ್ಮಾದುದ್ಧೂಲನೇ ನಾನ್ಯನ್ನವಾಂಗಮುಪಜಾಯತೇ ॥೭೯॥

ಸೂರ್ಯನನ್ನು ದರ್ಶನಮಾಡಿ, ಅಲ್ಲಿ ನಿಲ್ಲದೇ ದೂರ ಹೋಗುವನು. ಅಥವಾ ಓಡಿಹೋಗುವನು. ॥೭೫॥

ಸೂರ್ಯನನ್ನು ದರ್ಶನಮಾಡಬೇಕಾದರೂ, ಈ ಸೂರ್ಯನು ಪರಶಿವನ ನೇತ್ರಸ್ವರೂಪನೆಂಬ ಭಾವನೆಯಿಂದಲೇ ನೋಡಬೇಕು. ಹೀಗಿಲ್ಲದೇ ಬೇರೆ ಭಾವನೆಯಿಂದ ನೋಡುವುದಾದರೆ ಖಂಡಿತ ಆಗಲೂ ನರಕವನ್ನೇ ಹೊಂದುವನು. ॥೭೬॥

ಅನಂತರ ಭಸ್ಮವನ್ನು ಶರೀರಕ್ಕೆಲ್ಲಾ ಚೆನ್ನಾಗಿ ಬಳಿದುಕೊಂಡು, ಆದರದಿಂದ ಶಿವಲಿಂಗವನ್ನು ಪೂಜಿಸಬೇಕು. ಹೀಗೆ ಶಿವಲಿಂಗಾರ್ಚನೆಮಾಡಿದರೆ ಸರ್ವ ಪಾಪಗಳೂ ತೊಲಗುವುವು. ॥೭೭॥

ಪಾಪಿಯಾದವನು ತನ್ನ ಅವಯವಗಳಿಗೆಲ್ಲಾ ಚೆನ್ನಾಗಿ ಭಸ್ಮವನ್ನು ಬಳಿದುಕೊಂಡರೆ ಆ ಶರೀರವು ಹೊಸ ಶರೀರವೇ ಆಗುವುದು. ಪಾಪಯುಕ್ತವಾದ ಶರೀರಗಳನ್ನೆಲ್ಲಾ ಈ ಭಸ್ಮವು ಭಸ್ಮಮಾಡಲು (ಸುಟ್ಟುಹಾಕಲು) ಸಾಧನವಾಗುವುದು. ॥೭೮॥

ಆ ಭಸ್ಮಧಾರಣೆಯಿಂದುಂಟಾಗುವ ಪುಣ್ಯಪರಿಪಾಕದಿಂದ ಪಾಪವಿಶಿಷ್ಟವಾದ ಅವಯವಗಳೆಲ್ಲಾ ಸುಟ್ಟು ನಾಶವಾದರೂ, ಅದೇ ಭಸ್ಮೋದ್ಧೂಲನಸಾಮರ್ಥ್ಯದಿಂದ ಪುಣ್ಯಕರವಾದ ಹೊಸ ಅವಯವಗಳೂ ಉಂಟಾಗುವುವು. ॥೭೯॥

ಪ್ರವಿಷ್ಟೋ ರೋಮಕೂಪೇಷು ಶರೀರಸ್ಥೇಷು ಕೋಟಿಶಃ ।
ಸಂಗಾನಿ ಜನಯತ್ಯೇವ ತದಂಗೇ ಭೂತಿರುತ್ತಮಾ ॥೮೦॥

ಮನ್ಯೇ ಲಿಂಗಮಯಂ ಕಾಯಂ ವಿಭೂತ್ಯುದ್ಧೂಲನಾದ್ಯಮ ।
ತದಂಗಂ ಚರಲಿಂಗಂ ಸ್ಯಾದುತ್ತುಂಗಂ ಚೇತನಾಶ್ರಯಂ ॥೮೧॥

ಅಚೇತನಾನಿ ಲಿಂಗಾನಿ ಕಾಶ್ಮೀರಾದೀನಿ ಕೋಟಿಶಃ ।
ಸಂತಿ ತತ್ಪೂಜನೇ ತಾವನ್ನ ತಾವತ್ಫಲಮುಚ್ಯತೇ ॥೮೨॥

ಪ್ರತ್ಯಕ್ಷೇಣ ವಿರೂಪಾಕ್ಷಃ ಶಾಂಭವಾಕಾರಮಾಶ್ರಿತಃ ।
ಗೃಹ್ಣಾತಿ ಫಲಮನ್ಯಂ ವಾ ನೀರಂ ವಾ ಪುಷ್ಪಮೇವ ವಾ ॥೮೩॥

ಮಾನವನು ಶರೀರದಲ್ಲಿರುವ ಕೋಟ್ಯಂತರ ರೋಮಕೂಪಗಳಲ್ಲಿ ಪ್ರವೇಶ ಮಾಡಿದ ಶ್ರೇಷ್ಠವಾದ ಭಸ್ಮವು, ಅದೇ ಶರೀರದಲ್ಲಿ ಕೋಟಿಲಿಂಗಗಳನ್ನು ಪ್ರತಿಷ್ಠಿಸುವುದು. ॥೮೦॥

ಯಮುನೇ, ವಿಭೂತಿಯನ್ನು ಉದ್ಧೂಲನಮಾಡಿಕೊಳ್ಳುವುದರಿಂದ ಆ ಶರೀರವು ಲಿಂಗಮಯವಾಗುವುದು. ಈ ಲಿಂಗಮಯವಾದ ಶರೀರವೇ ಚರಲಿಂಗವೆಂದೂ, ಶ್ರೇಷ್ಠವೂ, ಚೇತನಾಶ್ರಯವೂ ಎಂದೂ ಹೇಳಲ್ಪಡುವುದು. ಇದೇ ನನ್ನ ಮುಖ್ಯ ನಂಬಿಕೆ. ॥೮೧॥

ಇದಲ್ಲದೇ ಕಾಶ್ಮೀರ ದೇಶೋದ್ಭವವಾದ ಕೋಟ್ಯಂತರ ಅಚೇತನ ಲಿಂಗಗಳಿರುವುವು. ಆದರೆ ಮೇಲೆ ಹೇಳಿದ ಚರಲಿಂಗವನ್ನು ಪೂಜಿಸಿದರೆ ಉಂಟಾಗುವಷ್ಟು ಫಲವು ಸ್ಥಾವರವೂ, ಅಚೇತನವೂ ಆದ ಲಿಂಗಪೂಜೆಯಿಂದ ದೊರೆಯಲಾರದು. ॥೮೨॥

ವಿರೂಪಾಕ್ಷನೆನಿಸಿದ (ಮುಕ್ಕಣ್ಣನಾದುದರಿಂದ ಇತರ ದೇವತೆಗಳಿಗಿಂತಲೂ ವಿರೂಪವಾದ ನೇತ್ರವುಳ್ಳವನು) ಮಹಾದೇವನು ಶಂಭುಭಕ್ತನ ಆಕಾರವನ್ನು ಧರಿಸಿ ತಾನೇ ಪ್ರತ್ಯಕ್ಷವಾಗಿ ತನ್ನ ಭಕ್ತರು ತನಗೆ ಸಮರ್ಪಿಸುವ ಫಲ, ನೀರು, ಮತ್ತು ಪುಷ್ಪಗಳನ್ನು ವಿಶ್ವಾಸದಿಂದ ಸ್ವೀಕರಿಸುವನು. ॥೮೩॥

ಲಿಂಗಾರ್ಚಕಸ್ಯ ಮಹಿಮಾ ತಸ್ಯ ಲಿಂಗಾರ್ಚನಸ್ಯ ವಾ ।
ವೇದಃ ಕಥಂಚಿಜ್ಜಾನಾತಿ ನ ವಿಜಾನಾತಿ ವಾ ಯಮ ॥೮೪॥

ಶಾಂಕರಾಗ್ರೇಸರಸ್ಯಾಂಗಂ ವಿಭೂತಿಪರಿವೇಷ್ಟಿತಂ ।
ದೃಷ್ಟ್ವಾ ಭೂತಪತಿಸ್ತ್ರಾವನ್ನೃತ್ಯತ್ಯಂಬಿಕಯಾ ಸಹ ॥೮೫॥

ಅಭೂತಪೂರ್ವಮೇವೇದಂ ಚರಲಿಂಗಮಿತಿ ಶ್ರುತಂ ।
ಶೈವಾಂಗಮುತ್ತಮಾಂಗಂ ತು ತಸ್ಯ ತಲ್ಲಿಂಗಮುತ್ತಮಂ ॥೮೬॥

ಬಾಹುದ್ವಯಪ್ರಸಾರೇಣ ಲಿಂಗಾಕಾರತಯಾ ಪರಂ ।
ಉತ್ತಮಾಂಗಂ ದೃಶ್ಯಮಾನಂ ತಸ್ಯ ಲಿಂಗಮಿತಿ ಸ್ಮೃತಂ ॥೮೭॥

ಎಲೈ ಯಮಧರ್ಮನೇ, ಲಿಂಗವನ್ನು ಪೂಜೆಮಾಡುವವನ ಪ್ರಭಾವ ಅಥವ ಲಿಂಗಪೂಜೆಯ ಮಹಿಮೆ ಇವುಗಳನ್ನು ವೇದವೇನಾದರೂ ತಿಳಿದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. (ಎಲ್ಲ ವಿಷಯಗಳಿಗೂ ವೇದವೇ ಮೂಲಾಧಾರವಾಗಿರುವುದರಿಂದ ಆ ವೇದಕ್ಕೇ ಈ ಮಹಿಮೆಯ ವಿಷಯಜ್ಞಾನವಿಲ್ಲದಿದ್ದರೆ ಮತ್ತಾರಿಂದ ತಾನೇ ತಿಳಿಯಲು ಸಾಧ್ಯವೆಂದು ಭಾವವು.) ॥೮೪॥

ವಿಭೂತಿಯಿಂದ ಅಲಂಕೃತವಾಗಿರುವ ಶಂಕರನ ಭಕ್ತಾಗ್ರಗಣ್ಯನ ಅವಯವವನ್ನು ನೋಡಿ ಸಂತೋಷಪಟ್ಟು ಸರ್ವಭೂತಗಳಿಗೂ ಒಡೆಯನಾದ ಪರಮೇಶ್ವರನು ಅಂಬಿಕಾದೇವಿಯೊಡನೆ ನರ್ತನಮಾಡುತ್ತಾನೆ. ॥೮೫॥

ಈ ಚರಲಿಂಗವು ಹಿಂದೆ ಯಾವಾಗಲೂ ತೋರ್ಪಡಿಸದಿರುವ ಮಹಿಮೆಯುಳ್ಳದ್ದು ಎಂದು ಪ್ರಸಿದ್ಧವಾಗಿದೆ. ಶಿವಭಕ್ತನ ಉತ್ತಮವಾದ ಅವಯವಗಳೇ ಅಥವ ಉತ್ತಮಾಂಗವೆನಿಸಿದ ತಲೆಯೇ ಆ ಉತ್ತಮವಾದ ಚರಲಿಂಗವೆನಿಸುವುದು. ॥೮೬॥

ಎರಡು ಬಾಹುಗಳನ್ನೂ ನೀಡಿದರೆ ಲಿಂಗಾಕಾರವಾಗಿ ತೋರುವ ಶ್ರೇಷ್ಠವಾದ ಆ ಶಿವತತ್ತ್ವಜ್ಞಾನಿಯ ತಲೆಯೇ ಆ ಚರಲಿಂಗವೆನಿಸುವುದು. ॥೮೭॥

ಅರ್ಪಿತಂ ಚರಲಿಂಗೇಷು ಸಾಕ್ಷಾದ್ಭುಂಕ್ತೇ ಮಹೇಶ್ವರಃ ।
ತತಃ ಸ್ಥಾವರಲಿಂಗೇಷು ನ ತಥಾ ಶಿವಸನ್ನಿಧಿಃ ॥೮೮॥

ರತ್ನಲಿಂಗಂ ಶ್ರುತಿಪ್ರೋಕ್ತಂ ರತ್ನಂ ಶಾಂಭವಪುಂಗವಃ ।
ಅತಸ್ತದಾತ್ಮಕಂ ಲಿಂಗಂ ಲಿಂಗೋತ್ತಮಮಿತಿ ಶ್ರುತಂ ॥೮೯॥

ಯಸ್ಯ ಶಾಂಭವಲಿಂಗೇಷು ನ ಭಕ್ತಿರುಪಜಾಯತೇ ।
ತೇನ ಸ್ಥಾವರಲಿಂಗಸ್ಯ ಪೂಜಾ ಕಾರ್ಯಾ ಪ್ರಯತ್ನತಃ ॥೯೦॥

ಸ್ಥಾವರಸ್ಯಾಪಿ ಲಿಂಗಸ್ಯ ಪೂಜಾ ಕೃತ್ವಾ ತತಃ ಪರಂ ।
ತದರ್ಪಿತೋಪಹಾರೇಣ ಕರ್ತವ್ಯಂ ಹಾರತೋಷಣಂ ॥೯೧॥

ಭುಂಕ್ತೇ ಹಾರಮುಖಂ ಪ್ರಾಪ್ಯ ಸಾದರೋ ಹರ ಇತ್ಯಪಿ ।
ಶ್ರುತಿಃ ಶ್ರುತಾ ತತೋ ಹಾರಂ ಹಾರಾಹಾರೋದರಂ ವಿದುಃ ॥೯೨॥

ಚರಲಿಂಗಗಳಿಗೆ ಸಮರ್ಪಣೆಮಾಡಿದ, ಫಲ, ನೈವೇದ್ಯಾದಿಗಳನ್ನು ಸಾಕ್ಷಾತ್ತಾಗಿ ಮಹೇಶ್ವರನು ಸ್ವೀಕರಿಸುವನು. ಸ್ಥಾವರಲಿಂಗಗಳಲ್ಲಿ ಮಾತ್ರ ಆ ಪರಮೇಶ್ವರನ ಸನ್ನಿಧಾನವು ಅಷ್ಟು ಶೀಘ್ರವಾಗಿ ಲಭಿಸಲಾರದು. ಅಲ್ಲದೆ ಪೂಜಾವಸ್ತುಗಳನ್ನು ಅವನು ಪ್ರತ್ಯಕ್ಷವಾಗಿ ಸ್ವೀಕರಿಸಲಾರನು. ॥೮೮॥

ರತ್ನಲಿಂಗದ ಮಹಿಮೆಯನ್ನೂ ಮತ್ತು ಲಕ್ಷಣವನ್ನೂ ಶ್ರುತಿಯಲ್ಲಿ ಹೇಳಲಾಗಿದೆ. ಅದರಲ್ಲಿ ಶಂಭುವಿನ ಭಕ್ತಶ್ರೇಷ್ಠನೇ ರತ್ನವೆಂದೂ, ಅವನ ಸ್ವರೂಪವಾದ ಲಿಂಗವೇ ಉತ್ತಮವಾದ ರತ್ನಲಿಂಗವೆಂದೂ ಹೇಳಿದೆ. ॥೮೯॥

ಶಿವಭಕ್ತರಸ್ವರೂಪವಾದ ರತ್ನಲಿಂಗ ಅಥವ ಚರಲಿಂಗಗಳಲ್ಲಿ ಭಕ್ತಿಹುಟ್ಟದ ಮಾನವರು, ಸ್ಥಾವರಲಿಂಗಗಳನ್ನಾದರೂ ಭಕ್ತಿಯಿಂದ ಪೂಜೆಮಾಡಬೇಕು. ॥೯೦॥

ಸ್ಥಾವರಲಿಂಗದ ಪೂಜೆಯನ್ನು ಮಾಡಿದ ಮೇಲೆ, ಆ ಸ್ಥಾವರಲಿಂಗಕ್ಕೆ ಸಮರ್ಪಣೆಮಾಡಿದ ನೈವೇದ್ಯದಿಂದ ಪರಮೇಶ್ವರನಿಗೆ ಸಂತೋಷವನ್ನುಂಟುಮಾಡಬೇಕು. ಅಂದರೆ ಆ ಉಪಹಾರವನ್ನು ಹರಭಕ್ತರಿಗೆ ಸಮರ್ಪಣೆಮಾಡಬೇಕು. ॥೯೧॥

ಹರಭಕ್ತರೂಪವಾದ ಮುಖವನ್ನು ಧರಿಸಿ ಪರಮೇಶ್ವರನು, ಆದರದಿಂದ ಭಕ್ತರು ಸಮರ್ಪಿಸುವ ನೈವೇದ್ಯವನ್ನು ಊಟಮಾಡುತ್ತಾನೆಂದು ಶ್ರುತಿಯಲ್ಲಿ

ಹಾರಮಾಹಾರಮಾಸಾದ್ಯ ಹಾರೋಽಪಿ ಹರತಾಮಿಯಾತ್ ।
ತತೋ ಹಾರೋ ಹರಃ ಸಾಕ್ಷಾತ್ತದಾಹಾರೋದರಂ ಚ ಸಃ ॥೯೩॥

ಯೇಷಾಂ ನ ಹಾರರೂಪೇಷು ಲಿಂಗೇಷು ಚ ದೃಢಾ ಮತಿಃ ।
ತೈರರ್ಚನೀಯಂ ತಲ್ಲಿಂಗಂ ಸ್ಥಾವರಂ ಗಿರಿಗಹ್ವರೇ ॥೯೪॥

ಹಾರಾಂತಃ ಕರಣಾಕಾರಗುಹಾಮಾಶ್ರಿತ್ಯ ಶಂಕರಃ ।
ತಿಷ್ಠತೀತ್ಯವಗಂತವ್ಯಂ ಸಾ ಗುಹಾ ವೇದಬೋಧಿತಾ ॥೯೫॥

ತಸ್ಯಾಂ ಗುಹಾಯಾಂ ಸಂವಿಷ್ಟಮಂಬಿಕಾರಮಣಂ ಪ್ರಭುಂ ।
ಸ್ಮೃತ್ವಾ ಹರ್ಷಾಶ್ರುಧಾರಾಭಿರ್ಧೀರೋ ಹಾರೋಽಮೃತೋ ಭವೇತ್॥೯೬॥

ಪ್ರಸಿದ್ಧವಾಗಿದೆ. ಆದುದರಿಂದ ಆ ಈಶ್ವರ ಭಕ್ತನನ್ನೇ ಹರನ ಆಹಾರಸ್ಥಾನೀಯವಾದ ಉದರವೆಂದು ಹೇಳುವರು. ॥೯೨॥

ಹರನ ಭಕ್ತರೆನಿಸಿದವರು ಶಿವಪ್ರಸಾದವನ್ನು ಸ್ವೀಕರಿಸಿ ಪರಮೇಶ್ವರನ ಸ್ವರೂಪವನ್ನು ಹೊಂದುವರು. ಆದುದರಿಂದ ಹರಭಕ್ತನೇ ಸಾಕ್ಷಾತ್ಪರಮೇಶ್ವರನು. ಪರಮೇಶ್ವರನಿಗಾದರೋ ಹಾರರೂಪವಾದ ತನ್ನ ಭಕ್ತನೇ ಉದರ. ॥೯೩॥

ಹಾರರೂಪವಾದ ಲಿಂಗಗಳಲ್ಲಿ ದೃಢವಾದ ನಂಬಿಕೆಯಿಲ್ಲದ ಮಾನವರು, ಬೆಟ್ಟ, ಗುಹೆ, ಮುಂತಾದವುಗಳಲ್ಲಿರುವ ಸ್ಥಾವರಲಿಂಗವನ್ನು ಪೂಜಿಸಬೇಕು. ॥೯೪॥

ಶಂಕರನು ತನ್ನ ಭಕ್ತನ ಅಂತಃಕರಣರೂಪವಾದ ಗುಹೆಯನ್ನಾಶ್ರಯಿಸಿ ನೆಲಸಿರುವನು. ಆ ಭಕ್ತಹೃದಯವೇ ವೇದದಲ್ಲಿ ಗುಹೆಯೆಂದು ಹೇಳಲ್ಪಟ್ಟಿದೆ ಎಂದು ತಿಳಿಯಬೇಕು. ॥೯೫॥

ಅಂತಹ ಹೃದಯಕುಹರನಲ್ಲಿ ನೆಲಸಿರುವ ಅಂಬಿಕಾರಮಣನಾದ ಪ್ರಭುವನ್ನು ಸಂತೋಷ ಬಾಷ್ಪಗಳೆಂಬ ಜಲಧಾರೆಯನ್ನು ಹೊರಸೂಸುತ್ತಾ, ಸ್ಮರಣೆ ಮಾಡುವ ಧೀರನಾದ ಹರಭಕ್ತನು ಅಮರನಾಗುವನು. (ಮರಣರಹಿತನಾಗುವನು.) ॥೯೬॥

ಯಥಾಧಿಕಾರಂ ಲಿಂಗಾರ್ಚಾಂ ಕೃತ್ವಾ ಪಾಪೈರ್ವಿಮುಚ್ಯತೇ ।
ಯಥಾವಿಭವಮೇತಸ್ಯ ಪೂಜಾ ಕಾರ್ಯಾ ವಿಶೇಷತಃ ॥೯೭॥

ಶಿವ ಏವ ಯದಾ ದೃಷ್ಟಶ್ಚಿದಾನಂದಘನಸ್ತದಾ ।
ತದರ್ಚನಪರೋ ಭೂಯಾನ್ನ ಲಿಂಗಾರ್ಚನತತ್ಪರಃ ॥೯೮॥

ಶಿವಸನ್ನಿಧಿರಿತ್ಯೇವ ಲಿಂಗೇ ಪೂಜಾ ವಿಧೀಯತೇ ।
ಸ ಚೇತ್ಸನ್ನಿಹಿತಃ ಸಾಕ್ಷಾತ್ಕಾರ್ಯಂ ತಸ್ಯೈವ ಪೂಜನಂ ॥೯೯॥

ಅತಃ ಪ್ರಕೃತಪಾಪಸ್ಯ ನಾಶಾಯಾಪಿ ಪ್ರಯತ್ನತಃ ।
ಶಿವಲಿಂಗಾರ್ಚನಂ ಕಾರ್ಯಂ ತನ್ನಾಶಸ್ತೇನ ಜಾಯತೇ ॥೧೦೦॥

ಪಾಪದಾವಾನಲಸ್ಯಾಯಂ ಶಿವಲಿಂಗಾರ್ಚನಾಂಬುದಃ ।
ವಿನಾಶಕೋ ಭವತ್ಯೇವ ಸಭಾಗ್ಯಾನಾಂ ಭವೇತ್ಸ ತು ॥೧೦೧॥

ತನ್ನ ಅಧಿಕಾರಕ್ಕೆ ತಕ್ಕಂತೆ ಲಿಂಗಾರ್ಚನೆಮಾಡುವ ಮಾನವನು ಪಾಪರಹಿತನಾಗುವನು. ವಿಶೇಷವಾಗಿ ತನ್ನ ಐಶ್ವರ್ಯ ಸಮೃದ್ಧಿಯನ್ನನುಸರಿಸಿ ಶಿವಲಿಂಗವನ್ನು ಪೂಜಿಸಬೇಕು. ॥೯೭॥

ಚಿತ್, (ಜ್ಞಾನ) ಆನಂದ ಇವುಗಳಿಂದ ಕೂಡಿ, ಮೇಘದಂತೆ ಗಂಭೀರನಾದ ಪರಶಿವನೇ ಭಕ್ತರರೂಪದಲ್ಲಿ ಪ್ರತ್ಯಕ್ಷವಾಗಿ ಕಂಡರೆ, ಆಗ ಸ್ಥಾವರಲಿಂಗಾರ್ಚನೆ ಮಾಡದೇ ಆ ಪ್ರತ್ಯಕ್ಷ ಪರಮೇಶ್ವರನನ್ನೇ ಭಕ್ತಿಯಿಂದ ಪೂಜಿಸಬೇಕು. ॥೯೮॥

ಲಿಂಗದಲ್ಲಿ ಯಾವಾಗಲೂ ಶಿವನು ಸನ್ನಿಹಿತನಾಗಿರುತ್ತಾನೆಂಬ ಭಾವನೆಯಿಂದಲೇ ಜನಗಳು ಲಿಂಗವನ್ನು ಪೂಜೆಮಾಡುವುದು ವಾಡಿಕೆಯಾಗಿದೆ. ಆದರೆ ಆ ಪರಶಿವನೇ ಪ್ರತ್ಯಕ್ಷವಾಗಿ ಭಕ್ತರರೂಪದಲ್ಲಿ ಬಂದಪಕ್ಷದಲ್ಲಿ ಅವನನ್ನೇ ಪೂಜಿಸಬೇಕು. ॥೯೯॥

ಆದುದರಿಂದ ಎಲೈ ಯಮನೇ! ಪ್ರಕೃತ ನಿನಗುಂಟಾಗಿರುವ ಪಾಪನಿವೃತ್ತಿಗೂ ಆ ಪರಶಿವನನ್ನೇ ಪೂಜಿಸಬೇಕು. ಅದರಿಂದಲೇ ಈ ಪಾಪನಿವಾರಣೆಯಾಗುವುದು. ॥೧೦೦॥

ಪಾಪಸಮೂಹಗಳೆಂಬ ಕಾಡುಕಿಚ್ಚನ್ನು ಈ ಶಿವಲಿಂಗಾರ್ಚನೆಯೆಂಬ ಮೇಘವು ನಿಜವಾಗಿಯೂ ನಾಶಪಡಿಸುವುದು. (ಅಥವ ಪಾಪವೆಂಬ ಕಾಡುಗಿಚ್ಚನ್ನು

ಅತಃ ಪರಂ ಕಾಲಕಾಲಪೂಜಯಾ ಕಾಲಯಾಪನಂ ।
ಕರ್ತವ್ಯಂ ಕಾಲ ನಿಲಯಂ ಕಾಲಕಾಲಂ ಸ್ಮರನ್ವ್ರಜ ॥೧೦೨॥

ಇತ್ಯುಕ್ತಂ ತದ್ವಚಃ ಶ್ರುತ್ವಾ ತತ್ಕೃತಂ ಲಿಂಗಪೂಜನಂ ।
ತತ್ಸಾಧನಾನಿ ದೃಷ್ಟ್ವಾಽಪಿ ಯಮಃ ಪ್ರಾಹ ಶುಕಂ ಪ್ರತಿ ॥೧೦೩॥

ಧನ್ಯೋಽಸಿ ಭಾಗ್ಯವಾನ್ಲೋಕೇ ಭವಾನೇಕಃ ಶುಕಾಧುನಾ ।
ಸರ್ವಲೋಕೋಪಕಾರಾಯ ಶಿವಪೂಜಾ ತವೇದೃಶೀ ॥೧೦೪॥

ನಾಶಪಡಿಸುವುದರಲ್ಲಿ ಈ ಶಿವಲಿಂಗಾರ್ಚನೆಯು ಮೇಘಸ್ವರೂಪವಾಗಿರುವುದು) ಈ ಶಿವಲಿಂಗಾರ್ಚನೆಯೂ ಮತ್ತು ಅದರಿಂದುಂಟಾಗುವ ಪಾಪ ನಿವೃತ್ತಿಯೂ ಸಹ ಕೇವಲ ಭಾಗ್ಯವಂತರಿಗೆ ಮಾತ್ರ ದೊರಕುವುದು. ॥೧೦೧॥

ಎಲೈ ಕಾಲನೇ! ಇನ್ನು ಮುಂದೆ ಕಾಲಕಾಲನೆನಿಸಿದ ಮಹೇಶ್ವರನ ಪೂಜೆ ಮಾಡುತ್ತಾ ಕಾಲವನ್ನು ಕಳೆಯುವನಾಗು. ಯಮನೇ, ಇಗೋ ಮನೆಗೆ ಹೊರಡು. ಹೋಗುವಾಗಲೂ ಕಾಲಕಾಲನನ್ನೆ ಸ್ಮರಣೆಮಾಡುತ್ತಾ ಪ್ರಯಾಣ ಮಾಡು. ನಿನಗೆ ಸರ್ವಮಂಗಳವೂ ಲಭಿಸುವುದು", ಎಂದು ಶುಕಮಹರ್ಷಿಯು ಯಮನಿಗೆ ಹೇಳಿದನು. ॥೧೦೨॥

ಶುಕಮುನಿಯ ಈ ಮಾತುಗಳನ್ನು ಕೇಳಿ, ಆ ಶುಕನು ಮಾಡಿದ ಲಿಂಗ ಪೂಜೆಯನ್ನೂ ಮತ್ತು ಆ ಲಿಂಗಪೂಜಾಸಲಕರಣೆಗಳನ್ನೂ ನೋಡಿ ಯಮನು ಪುನಃ ಆ ಶುಕಮಹರ್ಷಿಯನ್ನು ಕುರಿತು ಹೀಗೆಂದನು. ॥೧೦೩॥

"ಎಲೈ ಶುಕಮಹರ್ಷಿಯೇ! ಈಗ ಈ ಲೋಕದಲ್ಲಿ ಪೂಜ್ಯನಾದ ನೀನೊಬ್ಬನೇ ಧನ್ಯನು ಮತ್ತು ಭಾಗ್ಯವಂತನು. ನೀನು ಈರೀತಿ ಆಚರಿಸುತ್ತಿರುವ ಶಿವಪೂಜೆಯು ನಿನಗೊಬ್ಬನಿಗಲ್ಲದೆ ಸಕಲ ಜನಗಳಿಗೂ ಉಪಕಾರಮಾಡುತ್ತಿರುವುದು. ಮತ್ತು ನೀನು ಸಕಲಜನಗಳ ಉಪಕಾರಕ್ಕೋಸ್ಕರವೇ ಈ ರೀತಿ ಶಿವಪೂಜೆಮಾಡುತ್ತಿರುವೆಯಲ್ಲವೆ! ॥೧೦೪॥

ಶಿವಪೂಜಾಸಾಧನಾನಾಂ ಸಾಧನಂ ತಪಸಾಂ ಫಲಂ ।
ಏತಾವತೈವ ತಪಸಾ ಸರ್ವೇಷಾಂ ಕೃತಕೃತ್ಯತಾ ॥೧೦೫॥

ತ್ವಯಾ ಜನ್ಮಾರ್ಜಿತಾನಂತತಪೋರೂಪೇಣ ಕೇವಲಂ ।
ಲಿಂಗಾರ್ಚನಂ ಕೃತಮಿದಂ ಸರ್ವಸಾಧನಸಿದ್ಧಿದಂ ॥೧೦೬॥

ಲೋಚನಾನಾಂ ಫಲಮಿದಂ ಶಿವಲಿಂಗಾವಲೋಕನಂ ।
ಅರ್ಚಿತಸ್ಯಾಸ್ಯ ಲಿಂಗಸ್ಯ ದರ್ಶನಂ ತು ವಿಶೇಷತಃ ॥೧೦೭॥

ಶಿವಾರಾಧನಸಾಮಗ್ರೀ ದೃಷ್ಟಾ ಸೇಯಂ ಮುಹುರ್ಮುಹುಃ ।
ತನೋತಿ ಪರಮಾನಂದಂ ಸೇಯಮತ್ಯದ್ಭುತಾ ಖಲು ॥೧೦೮॥

ನ ಶಿವಾರ್ಚನಸಾಮಗ್ರೀಪ್ರಭಾವಸ್ಯಾಪಿ ವರ್ಣನಂ ।
ಅಪಾರರಸನಾಭಿರ್ವಾ ಶಕ್ಯತೇ ಕರ್ತುಮೇಕದಾ ॥೧೦೯॥

ಶಿವನ ಪೂಜಾಸಾಧನಗಳಿಗೆ ತಪಃ ಫಲವೇ ಮುಖ್ಯವಾದ ಸಾಧನವಾಗಿರುವುದು. ಈರೀತಿಯಾದ ತಪಸ್ಸಿನಿಂದಲೇ ಎಲ್ಲರೂ ಕೃತಕೃತ್ಯರೆನಿಸುವರು ಅಥವಾ ಎಲ್ಲರಿಗೂ ಕೃತಕೃತ್ಯತೆಯುಂಟಾಗಬೇಕಾದರೆ ಇಂತಹ ತಪಸ್ಸೇ ಕಾರಣವಾಗುವುದು. ||೧೦೫||

ನೀನು ಹಿಂದಿನ ಜನ್ಮದಲ್ಲಿ ಮಾಡಿದ ಅಪಾರವಾದ ತಪಃಪ್ರಭಾವವೇ, ಈಗ ಮಾಡುತ್ತಿರುವ ಸಕಲಸಾಧನಗಳಿಗೂ ಸಿದ್ಧಿಪ್ರದವಾಗಿ ಈ ಲಿಂಗಾರ್ಚನೆಗೂ ಮೂಲಕಾರಣವಾಗಿರುವುದು. ||೧೦೬||

ಸಾಮಾನ್ಯವಾಗಿ ಶಿವಲಿಂಗಗಳನ್ನು ನೋಡುವುದೂ, ಮತ್ತು ವಿಶೇಷವಾಗಿ ಪೂಜೆಮಾಡಿದ ಶಿವಲಿಂಗಗಳನ್ನು ದರ್ಶನಮಾಡುವುದೂ ಇವೇ ಈ ಕಣ್ಣುಗಳಿಗೆ ಮುಖ್ಯವಾದ ಫಲಗಳು. ||೧೦೭||

ಶಿವನ ಪೂಜಾಸಾಮಗ್ರಿಗಳನ್ನು ಪದೇಪದೇ ಇದೇರೀತಿ ದರ್ಶನ ಮಾಡಿದರೆ, ಅತ್ಯದ್ಭುತವಾದ ಈ ದರ್ಶನವು ಭಕ್ತರಿಗೆ ಪರಮಾನಂದವನ್ನುಂಟುಮಾಡುವುದು. ಇದಲ್ಲವೇ ಆಶ್ಚರ್ಯ ! ||೧೦೮||

ಅನೇಕ ನಾಲಿಗೆಗಳಿಂದಲೂ, ಒಂದೇಸಲ ಶಿವಾರ್ಚನ ಸಾಮಗ್ರಿಗಳ ಮಹಿಮೆಯನ್ನು ವರ್ಣನೆಮಾಡಲು ಸಾಧ್ಯವಾಗಲಾರದು. ||೧೦೯

ಕಲ್ಪಿತಾ ರಚನಾ ಸೇಯಂ ತ್ವಯಾ ಶಂಕರಮಂದಿರೇ ।
ಅಪಾರತಪಸಾಮೇಷಾ ರಚನಾ ಫಲಮುಚ್ಯತೇ ॥೧೧೦॥

ಜನ್ಮ ತೇ ಸಫಲಂ ಮಾತಾ ಧನ್ಯಾ ಧನ್ಯಃ ಪಿತಾ ತವ ।
ಶಾಂಭವಸ್ಯ ತ್ವಯಾ ಸಂಗಾದ್ಧನ್ಯಂ ಮಾಮಪಿ ಮನ್ಮಹೇ ॥೧೧೧॥

ಭುವನೇಷು ನ ಕುತ್ರಾಪಿ ದೃಷ್ಟಃ ಶಾಂಭವಪುಂಗವಃ ।
ಏತಾದೃಶಃ ಶಿವರತೋ ದುರ್ಲಭಃ ಖಲು ಸರ್ವದಾ ॥೧೧೨॥

ಧನ್ಯಂ ನೇತ್ರಯುಗಂ ಧನ್ಯಂ ಧನ್ಯಂ ಮಮ ಕರದ್ವಯಂ ।
ಶಿವಪೂಜನಸಾಮಗ್ರೀಕರಣಾಲೋಕನಾದರಾತ್ ॥೧೧೩॥

ಏತಾದೃಶಂ ಮಹಾದೇವಂ ಪೂಜಯಾ ಪರಯಾನಯಾ ।
ಫಲಂ ಶಾಂಕರಪಾದಾಬ್ಜಮಕರಂದತಯಾ ಮತಂ ॥೧೧೪॥

ನೀನು ಶಿವಮಂದಿರದಲ್ಲಿ ಅಲಂಕರಿಸಿರುವ ರಚನೆಯು ನಿನ್ನ ಅಪಾರವಾದ ತಪಸ್ಸುಗಳಿಗೆ ಈ ರಚನೆಯೇ ಫಲವೆಂಬುದನ್ನು ಹೇಳುತ್ತಿದೆ. ||೧೧೦||

ನಿನ್ನ ಜನ್ಮವು ಸಫಲವಾಯಿತು. ನಿನ್ನ ತಾಯಿತಂದೆ ಇವರೆಲ್ಲರೂ ನಿನ್ನಿಂದ ಧನ್ಯರೆನಿಸಿದರು. ಅಲ್ಲದೇ ಶಂಭುಭಕ್ತಾಗ್ರೇಸರನಾದ ನಿನ್ನ ಸಹವಾಸದಿಂದ ನಾನೂ ಧನ್ಯನಾದೆನೆಂದೇ ತಿಳಿಯುವೆನು. ||೧೧೧||

ಪ್ರಪಂಚದಲ್ಲಿ ಎಲ್ಲಿಯೂ ನಿನ್ನಂತಹ ಶಿವಪೂಜಾನಿರತನಾದ ಶಾಂಕರ ಭಕ್ತನು ದೊರಕಲಾರನು. ದೊರಕಿದರೂ ಅತಿ ವಿರಳವೆಂದೇ ತಿಳಿದಿರುವೆನು ||೧೧೨||

ಶಿವಪೂಜಾಸಾಮಗ್ರಿಗಳನ್ನು ಆದರದಿಂದ ಸಿದ್ಧಪಡಿಸಿದುದರಿಂದ ಈ ಎರಡು ಕೈಗಳೂ, ದರ್ಶನಮಾಡಿದುದರಿಂದ ಈ ಎರಡು ಕಣ್ಣುಗಳೂ ಸಹ ನಿಜವಾಗಿಯೂ ಧನ್ಯವಾದುವು. ||೧೧೩||

ಸರ್ವಸಮರ್ಥನಾದ ಮಹಾದೇವನನ್ನು ಉತ್ತಮವಾದ ರೀತಿಯಿಂದ ಪೂಜಿಸಿದರೆ, ಅದಕ್ಕೆ ಶಂಕರನ ಪಾದಕಮಲ ಸಂಬಂಧಿಯಾದ ಮಕರಂದವೇ ಫಲವೆಂದು ಹೇಳಿದೆ." ||೧೧೪||

ಇತ್ಯುಕ್ತ್ವಾ ಶಂಕರಂ ನತ್ವಾ ಸ ಪುನಃಪುನರಾದರಾತ್ ।
ಶುಕಂ ನತ್ವಾ ಯಯೌ ಕಾಲಶ್ಚಿತ್ರಗುಪ್ತಸಮನ್ವಿತಃ ॥೧೧೫॥

ಯಮಃ ಸ್ವನಿಲಯಂ ಗತ್ವಾ ದೂತಾನಾಹೂಯ ತಾಂಸ್ತತಃ ।
ಶೈವನಿಷ್ಠುರವಕ್ತಾರಂ ತಾಡಯಂತ್ವಿತಿ ಚಾಬ್ರವೀತ್ ॥೧೧೬॥

ತಸ್ಯ ತು ಕ್ಷಣಮಾತ್ರಂ ವಾ ನರಕಾನ್ಮಾಸ್ತು ನಿರ್ಗಮಃ ।
ಘೋರೇಷು ನರಕೇಷ್ವೇವ ಸ ನಿತ್ಯಮಧಿತಿಷ್ಠತು ॥೧೧೭॥

ಸ ಪಾಪಿಷ್ಠಃ ಪಾಚನೀಯೋ ಭರ್ಜನೀಯೋ ನಿರಂತರಂ ।
ತಾಡನೀಯಃ ಕಶಾಘಾತೈರಗ್ನಿಕಲ್ಪೈರ್ಮುಹುರ್ಮುಹುಃ ॥೧೧೮॥

ಇತ್ಯಾಜ್ಞಾಪ್ಯ ಯಮಃ ಸ್ವಸ್ಥಶ್ಚಿತ್ರಗುಪ್ತೇನ ಸಂಯುತಃ ।
ಲಿಂಗಾರ್ಚನೋತ್ಸವಂ ಸ್ಮೃತ್ವಾ ಶುಕಸ್ಯಾತೀವ ವಿಸ್ಮಿತಃ ॥೧೧೯॥

ಯಮನು ಹೀಗೆ ಹೇಳಿ, ಶಂಕರನಿಗೆ ಪುನಃ ಪುನಃ ಆದರದಿಂದ ನಮಸ್ಕರಿಸಿ ಅನಂತರ ಶುಕಮಹರ್ಷಿಗೂ ವಂದಿಸಿ, ಬೀಳ್ಕೊಟ್ಟು ಅಲ್ಲಿಂದ ಚಿತ್ರಗುಪ್ತನೊಡನೆ ಹೊರಟನು. ||೧೧೫||

ಒಡನೆಯೇ ಯಮನು ತನ್ನ ಊರಿಗೆ ಹೋಗಿ, ದೂತರನ್ನು ಕರೆದು ಈ ಶಿವನನ್ನು ನಿಷ್ಠುರವಾಗಿ ಬೈದ ಮುನಿಯನ್ನು ಚೆನ್ನಾಗಿ ಹೊಡೆಯಿರಿ ಎಂದು ಆಜ್ಞೆಮಾಡಿದನು. ||೧೧೬||

ಈ ಪಾಪಿಯು ಒಂದು ಕ್ಷಣಕಾಲವೂ ನರಕದಿಂದ ಹೊರಗೆ ಬರದಂತೆ ಅಲ್ಲಿಯೇ ನೆಲಸಿ, ಭಯಂಕರವಾದ ನರಕಗಳಲ್ಲಿ ನಿತ್ಯವೂ ಯಾತನೆಯನ್ನು ಅನುಭವಿಸುತ್ತಿರಲಿ. ||೧೧೭||

ಈ ಪಾಪಿಷ್ಠನನ್ನು ಬೆಂಕಿಯಲ್ಲಿ ಬೇಯಿಸಿರಿ. ಭರ್ಜಿ ಮುಂತಾದ ಆಯುಧಗಳಿಂದ ತಿವಿದು ಹಿಂಸಿಸಿರಿ. ಯಾವಾಗಲೂ ಅಗ್ನಿಸದೃಶವಾದ ಚಾವಟಿಯ ಏಟುಗಳಿಂದಲೇ ಎಡಬಿಡದೆ ಹೊಡೆಯಿರಿ. ||೧೧೮||

ಈರೀತಿ ಯಮನು ತನ್ನ ಭಟರಿಗೆ ಆಜ್ಞೆಮಾಡಿ ಚಿತ್ರಗುಪ್ತನೊಡನೆ ತಾನು ನೋಡಿದ ಶುಕಮಹರ್ಷಿಯ ಲಿಂಗಾರ್ಚನೆ ಮತ್ತು ಭಕ್ತಿ ಮುಂತಾದುವುಗಳನ್ನು ಸ್ಮರಿಸಿಕೊಂಡು ಆಶ್ಚರ್ಯಪಡುತ್ತಿದ್ದನು. ||೧೧೯||

ಭುವಿ ಖಲು ಶಿವಲಿಂಗಾರಾಧಕಾ ಏವ ಧನ್ಯಾಃ
ನಿಜಹಿತಧನಧಾನ್ಯೈಃ ಶಂಕರಂ ಪೂಜಯಂತಃ ।
ಶಿವಜನಪರಿವೀತಾಃ ಶೈವವಾರ್ತಾಪ್ರವೃತ್ತಿ
ಪ್ರಕಟಿತನಿಜಪುಣ್ಯಾಃ ಪುಣ್ಯಪೂರ್ಣಾರ್ಣವಾಸ್ತೇ ॥೧೨೦॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಶುಕಮುನಿ ಯಮಸಂವಾದೇ ಶೈವನಿಂದಾಪ್ರಾಯಶ್ಚಿತ್ತಶೈವಜನಮಹಿಮಾನುಕೀರ್ತನಂ ನಾಮ ಸಪ್ತದಶೋಽಧ್ಯಾಯಃ

ತನಗೆ ಹಿತಕರವೆನಿಸಿದ ಧನ ಮತ್ತು ಧಾನ್ಯಗಳಿಂದ ಪ್ರತಿದಿನವೂ ಶಂಕರನನ್ನು ಪೂಜೆಮಾಡುವ ಶಿವಲಿಂಗಾರಾಧಕರೇ ಭೂಮಿಯಲ್ಲಿ ಧನ್ಯರೆನಿಸುವರು. ಯಾವಾಗಲೂ ಶಿವಭಕ್ತರೊಡನೆ ಕೂಡಿಕೊಂಡು, ಸದಾ ಶಿವಭಕ್ತರ ಸಮಾಚಾರವನ್ನು ತಿಳಿಯುವುದರಲ್ಲಿಯೇ ತಮ್ಮ ಪುಣ್ಯಗಳನ್ನು ಪ್ರಕಟಪಡಿಸುವ ಇವರು ಪುಣ್ಯಗಳಿಗೆ ಸಮುದ್ರದಂತೆ ಆಶ್ರಯದಾತರಾಗಿರುವರು. ಅಂದರೆ ಜ್ಞಾನಪರಿಪೂರ್ಣರಾಗಿ ಸಮುದ್ರದಂತೆ ತೋರುತ್ತಿರುವರು. ॥೧೨೦॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಹರಸಂಜ್ಞಕವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಶುಕಮಹರ್ಷಿ ಮತ್ತು ಯಮ ಇವರುಗಳ ಸಂವಾದದಲ್ಲಿ ಶಿವಭಕ್ತರನಿಂದೆ ಅದರ ಪ್ರಾಯಶ್ಚಿತ್ತ ಮತ್ತು ಶಿವಭಕ್ತರ ಪ್ರಭಾವ ಇವುಗಳ ವರ್ಣನೆ ಎಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಅಷ್ಟಾದಶೋಽಧ್ಯಾಯಃ

॥ ವ್ಯಾಸ ಉವಾಚ ॥

ಅತಃ ಶಂಕರಭಕ್ತೇಷು ನ ಯುಕ್ತಂ ನಿಷ್ಠುರಂ ವಚಃ ।
ಸದಾ ಸ್ನೇಹೇನ ವಕ್ತವ್ಯಂ ವಿನೀತೇನ ಶನೈಃ ಶನೈಃ ॥೧॥

ಅತಸ್ತ್ವಯಾಪಿ ಗತ್ವಾಗ್ರೇ ನಂದಿಕೇಶ್ವರ ಸಾದರಂ ।
ವಕ್ತವ್ಯಂ ತೇನ ಸಹಸಾ ಮಧುರಾ ವಾಗನುತ್ತಮಾ ॥೨॥

ಹದಿನೆಂಟನೆಯ ಅಧ್ಯಾಯ

ಮಹಾಮಹಿಮರಾದ ವ್ಯಾಸಮಹರ್ಷಿಗಳು ಋಷಿಜನರಿಗೆ ಮುಂದಿನ ಕಥಾ ಭಾಗವನ್ನು ವಿವರಿಸುತ್ತಾ ಹೀಗೆಂದರು.—" ಓ ಮುನಿಗಳಿರಾ, ಈಶ್ವರನ ಭಕ್ತರ ನಿಂದೆಯು ಘೋರವಾದ ಪಾಪಕ್ಕೆ ಕಾರಣವಾಗಿರುವುದರಿಂದ ಯಾವಾಗಲೂ ಆ ಶಂಕರನ ಭಕ್ತರ ವಿಷಯದಲ್ಲಿ ನಿಷ್ಠುರವಾಗಿ ಮಾತನಾಡದೇ ಸ್ನೇಹದಿಂದಲೂ ವಿನಯದಿಂದಲೂ ನಡೆದುಕೊಳ್ಳಬೇಕು. ॥೧॥

ಆದುದರಿಂದ ನಂದಿಕೇಶ್ವರನೇ, ನೀನೂ ಕೂಡ ಜಾಗ್ರತೆ ಇಲ್ಲಿಂದ ಹೊರಟು ಕುಮಾರಸಿದ್ಧೆಡೆಗೆ ಹೋಗಿ, ಆದರಪೂರ್ವಕವಾಗಿ ಮಧುರವೂ ಶ್ರೇಷ್ಠವೂ ಆದ ಈ ಮಾತುಗಳನ್ನು ಹೇಳು " ಎಂದು ಶಿವನು ನುಡಿದನು. ॥೨॥

ಇತ್ಯುಕ್ತಃ ಪ್ರೇಷಿತಸ್ತೇನ ಯಯೌ ಸತ್ವರಮಾದರಾತ್ ।
ರತ್ನಪುಷ್ಪಕಮಾರುಹ್ಯ ಗಣಕೋಟಿಸಮಾವೃತಃ ॥೩॥

ತತೋ ದೂರಂ ನಂದಿಕೇಶಂ ಭೃಂಗೀ ದೃಷ್ಟ್ವಾ ಪ್ರಹೃಷ್ಟಧೀಃ ।
ಪ್ರಣಮ್ಯ ಶಿರಸಾ ಭಕ್ತ್ಯಾ ಪಪ್ರಚ್ಛ ಕುಶಲಂ ತತಃ ॥೪॥

ಅನಂತಬ್ರಹ್ಮಕಲ್ಪಾಂತಾಃ ಪ್ರವೃತ್ತಾಃ ಸುಯಶಾಪತೇ ।
ತಥಾಪಿ ತ್ವರಯಾ ತಾವನ್ನಾಭೂದ್ಗಮನಮಾದರಾತ್ ॥೫॥

ಶಂಕರಾಜ್ಞಾನುಸಾರೇಣ ವರ್ತನಂ ಖಲು ದುರ್ಲಭಂ ।
ನ ಶಾಂಕರಾಜ್ಞಾ ಭವತಾಂ ವಿಲಂಬಕರಣಾಯ ಸಾ ॥೬॥

ನಾರಾಯಣಾಃ ಸಮುತ್ಪನ್ನಾಃ ಕೋಟಿಶಃ ಪದ್ಮಜಾದಯಃ ।
ತಥಾಪಿ ಭವತಾಂ ತಾವತ್ತತ್ಕಾಲಕಲನಾಪಿ ನ ॥೭॥

ಹೀಗೆ ಮಹೇಶ್ವರನ ಅಪ್ಪಣೆ ಪಡೆದು, ಅವನಿಂದಲೇ ಕಳುಹಿಸಲ್ಪಟ್ಟಿರುವ ನಂದಿಕೇಶ್ವರನು, ರತ್ನಮಯವಾದ ಪುಷ್ಪಕವಿಮಾನವನ್ನೇರಿ ತನ್ನ ಕೋಟ್ಯಂತರ ಗಣಗಳೊಡನೆ ಸುತ್ತುವರಿಯಲ್ಪಟ್ಟವನಾಗಿ, ಜಾಗ್ರತೆಯಾಗಿ ಪ್ರಯಾಣ ಮಾಡಿದನು. ॥೩॥

ನಂದಿಕೇಶ್ವರನು ಬರುತ್ತಿರುವುದನ್ನು ದೂರದಿಂದಲೇ ನೋಡಿ ಭೃಂಗಿಯು ಸಂತೋಷದಿಂದ, ಅವನಿಗೆ ತಲೆಬಾಗಿ ನಮಸ್ಕರಿಸಿ ಅನಂತರ ಕುಶಲಪ್ರಶ್ನೆಮಾಡಿದನು. ॥೪॥

"ಎಲೈ ಸುಯಶಾಕಾಂತನೇ! ಇಲ್ಲಿಯ ವರೆವಿಗೆ ಅನೇಕ ಬ್ರಹ್ಮಕಲ್ಪಗಳು ಕಳೆದುಹೋದವು. ಆದರೆ ಅವುಗಳಲ್ಲಾವುದರಲ್ಲೂ, ನೀನು, ಇಷ್ಟು ಆತುರದಿಂದಲೂ ಮತ್ತು ಆದರದಿಂದಲೂ ಸಂಚಾರಮಾಡಿದುದನ್ನು ನಾನು ಕಾಣೆನು. ॥೫॥

ಶಂಕರನ ಆಜ್ಞೆಯನ್ನನುಸರಿಸಿ ನಡೆಯುವುದು ತುಂಬಾ ಕಷ್ಟಸಾಧ್ಯ. ಆದರೆ ಈ ಮಹೇಶನಾಜ್ಞೆಯನ್ನು ನಡೆಸುವುದರಲ್ಲಿ ಮಾತ್ರ ನೀವು ಎಂದೂ ಸಾವಕಾಶ ಮಾಡುವವರಲ್ಲ. ॥೬॥

ಇಲ್ಲಿಯುವರೆವಿಗೆ ಅನೇಕಮಂದಿ ನಾರಾಯಣರೂ, ಕೋಟ್ಯಂತರ ಬ್ರಹ್ಮ ಮುಂತಾದವರೂ ಹುಟ್ಟಿದರು. ಆದರೆ ನಿಮಗೆ ಮಾತ್ರ ಈರೀತಿಯಾದ ಕಾಲನಿಯ

ಕಾಲಕಾಲಕೃಪಾ ತಾವದಧುನಾಪ್ಯನುವರ್ತತೇ ।
ಭವತ್ಸ್ವೇವಂ ಕೃಪಾ ಪೂಜಾ ಭವದ್ಭಿಃ ಶಂಕರಸ್ಯ ತು ॥೮॥

ಆರಾಧಿತಃ ಸಾವಧಾನಂ ಗಿರಿರಾಜಸುತಾಧವಃ ।
ಅತೋ ನ ಕಾಲಕಾಲಸ್ಯ ಕೋಪಲೇಶೋ ಭವತ್ಸ್ವಪಿ ॥೯॥

ಪ್ರಭುಕಾರ್ಯಾರ್ಥಮುದ್ಯುಕ್ತೋ ವಿಲಂಬಂ ಕಿಂ ಕರಿಷ್ಯತಿ ।
ಉಗ್ರೋಽಪ್ಯನುಗ್ರೋ ಭಗವಾನ್ಭಕ್ತೇಷ್ವೇವಮನುಗ್ರಹಾತ್ ॥೧೦॥

ಅನುಗ್ರಹೇಽಪಿ ವಿಜ್ಞಾತೇಽಪ್ಯೇವಂ ಕಾರ್ಯವಿಲಂಬನಂ ।
ನೋಚಿತಂ ಭೃತ್ಯಕೃತ್ಯಾನಿ ನ ವಿಲಂಬಸಹಾನ್ಯಪಿ ॥೧೧॥

ಮವೇ ಇಲ್ಲ. ಅಂದರೆ ನಾರಾಯಣ ಬ್ರಹ್ಮ ಮುಂತಾದವರು ಕಾಲನಿಯಮನ್ನನು ಸರಿಸಿ ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸಿ ಮುಂದೆ ಮತ್ತೊಬ್ಬರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು. ನಿಮಗೆ ಮಾತ್ರ ಪರಮೇಶ್ವರನ ಕೃಪೆಯಿಂದ ಇಷ್ಟೇ ಕಾಲ, ಈ ಸ್ಥಾನವು ನಿಮಗೇರ್ಪಟ್ಟಿದೆ, ಎಂಬ ನಿಯಮವೇ ಇಲ್ಲ.॥೭॥

ಕಾಲಸ್ವರೂಪನಾದ ಯಮನನ್ನೂ ನಿಗ್ರಹಿಸಿದ ಮಹೇಶನ ದಯೆಯು ಮಾತ್ರ ನಿಮ್ಮಲ್ಲಿ ಇನ್ನೂ ಮೊದಲಿನಂತೆಯೇ ಬರುತ್ತಿದೆ. ನೀವು ಪರಮೇಶ್ವರನಿಗೆ ಮಾಡುವ ಪೂಜೆಯೂ, ಶಂಕರನಿಗೆ ನಿಮ್ಮಲ್ಲಿರುವ ದಯೆಯೂ ಸ್ವಲ್ಪವೂ ವ್ಯತ್ಯಾಸವಾಗಿಲ್ಲ. ॥೮॥

ನೀವು ಕಾಲಕಾಲನೆನಿಸಿದ ಗಿರಿಜಾರಮಣನನ್ನು ಸಾವಧಾನಚಿತ್ತದಿಂದ ಭಕ್ತಿಪೂರ್ವಕವಾಗಿ ಪೂಜಿಸುತ್ತಿರುವುದರಿಂದ ಆ ಮಹಾದೇವನಿಗೆ ನಿಮ್ಮ ಮೇಲೆ ಸ್ವಲ್ಪವೂ ಕೋಪಕ್ಕೆ ಕಾರಣವೇ ಇಲ್ಲ. ॥೯॥

ಸ್ವಾಮಿಯ ಕಾರ್ಯಕ್ಕೋಸ್ಕರ ಪ್ರಯತ್ನಿಸುತ್ತಿರುವವನು ಎಂದಿಗಾದರೂ ತಡ ಮಾಡುವನೇ! ಮಹೇಶ್ವರನು ಬಹು ಭಯಂಕರನಾದರೂ ಮಹಾನುಭಾವನಾದ ಆತನಿಗೆ ತನ್ನ ಭಕ್ತರಲ್ಲಿ ಮಾತ್ರ ಯಾವಾಗಲೂ ಉಗ್ರಸ್ವಭಾವವಿರುವುದಿಲ್ಲ. ಸದಾ ಅನುಗ್ರಹೋನ್ಮುಖನೇ ಆಗಿರುವನು. ॥೧೦॥

ಹೀಗೆ ತಮ್ಮ ಪ್ರಭುವು ತಮಗೆ ಸುಮುಖನಾಗಿ ಭೃತ್ಯನು ಸ್ವಾಮಿಯ ಕಾರ್ಯದಲ್ಲಿ ವಿಲಂಬಮಾಡುವುದು ಉಚಿತವಲ್ಲ. ಯಾವಾಗಲೂ ಸೇವಕನ ಕಾರ್ಯಗಳು ವಿಲಂಬವನ್ನು ಸಹಿಸಲಾರವು. ॥೧೧॥

ಮೃತ್ಯುಂಜಯತ್ವಾತ್ತತ್ಕಾರ್ಯವಿಲಂಬೇಽಪಿ ನ ನಃ ಕ್ಷತಿಃ ।
ಮೃತ್ಯುಂಜಯಸ್ಯ ಕೃತ್ಯಂ ಚ ನ ಮೃತ್ಯುಮುಪಯಾಸ್ಯತಿ ॥೧೨॥

ಇತಿ ತದ್ವಚನಂ ಶ್ರುತ್ವಾ ನಂದಿಕೇಶಃ ಪ್ರಹೃಷ್ಟಧೀಃ ।
ತ್ವಯಾ ಸಾಧೂಕ್ತಮಿತ್ಯುಕ್ತ್ವಾ ದದಾವಾಲಿಂಗನಂ ತತಃ ॥೧೩॥

ತತಃ ಪರಂ ಸ ತರಸಾ ಕುಮಾರನಿಕಟಂ ಯಯೌ ।
ಕುಮಾರೇಣ ಪ್ರೇಕ್ಷಿತೋಽಹಮಿತ್ಯುದೀರ್ಯ ಶಿವಂ ಸ್ಮರನ್ ॥೧೪॥

ವಿಮಾನಾದವತೀರ್ಯಾಥ ನಂದೀ ಭೃಂಗಿಸಮನ್ವಿತಃ ।
ನನಾಮ ದಂಡವದ್ಭಕ್ತ್ಯಾ ತಮುವಾಚ ಚ ಷಣ್ಮುಖಃ ॥೧೫॥

ಮಹೇಶ್ವರನು ಮೃತ್ಯುಂಜಯನಾಗಿರುವುದರಿಂದ (ಮೃತ್ಯುವನ್ನೇ ಜಯಿಸಿರುವನಾದ್ದರಿಂದ) ಅವನ ಕಾರ್ಯವನ್ನು ನಿರ್ವಹಿಸುವುದರಲ್ಲಿ ಸ್ವಲ್ಪ ತಡವಾದರೂ ನಮಗೆ ತೊಂದರೆಯಿಲ್ಲ. ಏಕೆಂದರೆ ಮೃತ್ಯುಂಜಯನ ಕಾರ್ಯಕ್ಕೆ ಎಂದೂ ಮೃತ್ಯುವು ಒದಗುವಂತಿಲ್ಲ. ಅಡ್ಡಿಯಿಲ್ಲದೆ ಅವನ ಕಾರ್ಯವು ಮುಂದುವರಿಯುವುದು." ॥೧೨॥

ಹೀಗೆ ಆಡಿದ ಆ ಭೃಂಗಿಯ ಮಾತನ್ನು ಕೇಳಿ ನಂದಿಕೇಶ್ವರನು ಸಂತೋಷದಿಂದ ಎಲೈ ಭೃಂಗಿಯೇ! ನೀನು ಸಾಧುವಾಗಿ ಹೇಳಿದೆ ಎಂದು ನುಡಿದು, ಆ ಭೃಂಗಿಯನ್ನು ಆಲಿಂಗನಮಾಡಿದನು. ॥೧೩॥

ಅನಂತರ ನಂದಿಕೇಶ್ವರನು ಎಚ್ಚೆತ್ತು, ಎಲೈ ಭೃಂಗಿಯೇ! ನಾನು ಕುಮಾರಸ್ವಾಮಿಯಿಂದಲೇ ಪ್ರೇರಿತನಾಗಿ ಈಗ ಅವನ ಸಮೀಪಕ್ಕೇ ಹೋಗುತ್ತಿರುವೆನು ಎಂದು ಹೇಳಿ ಶಿವನನ್ನು ಸ್ಮರಿಸುತ್ತಾ ಆ ಸ್ಕಂದನ ಸಮೀಪಕ್ಕೆ ಹೊರಟನು. ॥೧೪॥

ಹೀಗೆ ನಂದಿಕೇಶ್ವರನು ಅಲ್ಲಿಗೆ ಹೊರಡುವಾಗ ವಿಮಾನದಿಂದಿಳಿದು, ಭೃಂಗಿಯೊಡನೆ ಕುಮಾರಸ್ವಾಮಿಯಿದ್ದೆಡೆಗೆ ತೆರಳಿ ದಂಡಪ್ರಣಾಮ ಮಾಡಿದನು. ಆಗ ಆ ಷಣ್ಮುಖಸ್ವಾಮಿಯು ಆ ನಂದಿಕೇಶ್ವರನನ್ನು ಸ್ವಾಗತಿಸಿ ಅವನಿಗೆ ಹೀಗೆ ಹೇಳಿದನು. ॥೧೫॥

|| ಷಣ್ಮುಖ ಉವಾಚ ||

ದೇವತಾಸಾರ್ವಭೌಮಸ್ಯ ಮಹಾದೇವಸ್ಯ ಸೇವಕಾಃ ।
ಯೂಯಂ ಕೃತಾರ್ಥಾಃ ಪುಣ್ಯಾನಾಂ ಸಾಗರಾ ಏವ ಕೇವಲಂ ॥೧೬॥

ಕಿಂ ಕರೋತಿ ಮಹಾದೇವಸ್ತಸ್ಮಿನ್ಸಿಂಹಾಸನೇ ನವೇ ।
ಪ್ರವೃದ್ಧಮಾನೇ ವಸತಿ ಕಿಂ ವಾ ರತ್ನಪ್ರಭಾಲಯೇ ॥೧೭॥

ಕಿಮೇಕರತ್ನಭವನೇ ಯೋಜನಾರ್ಬುದಮುನ್ನತೇ ।
ಕಿಂ ನೀಲರತ್ನಸದನೇ ಯೋಜನಾಯುತಮುನ್ನತೇ ॥೧೮॥

ಹೀರಾಗಾರೇಽತಿರುಚಿರೇ ಲಕ್ಷಯೋಜನಮುನ್ನತೇ ।
ಸ ಮುಕ್ತಾಫಲಸೌಧೇ ವಾ ಗಿರಿರಾಜಸುತಾಧವಃ ॥೧೯॥

ದೇವತಾಸಾರ್ವಭೌಮನೆನಿಸಿದ ಮಹಾದೇವನ ಸೇವಕರಾದ ನೀವೇ ಕೃತಾರ್ಥರು. ನೀವು ಪುಣ್ಯರಾಶಿಸ್ವರೂಪರಾಗಿರುವಿರಿ. (ಅಂದರೆ ಸಾಗರವು ಹೇಗೆ ನೀರಿನ ಅಪಾರವಾದ ಸಮೂಹಕ್ಕೇ ಆಶ್ರಯವಾಗಿರುವುದೋ ಹಾಗೆಯೇ ಪುಣ್ಯರೂಪವಾದ ನೀರುಗಳಿಗೆ ಸಾಗರದಂತೆ ನೀವು ಆಶ್ರಯರಾಗಿರುವಿರಿ ಎಂದು ತಾತ್ಪರ್ಯ.) ||೧೬||

ಮಹಾದೇವನು, ಆ ಹೊಸಸಿಂಹಾಸನದ ಮೇಲೆ ಕುಳಿತು ಏನು ಕಾರ್ಯವನ್ನೆಸಗುತ್ತಿರುವನು? ಅಥವಾ ಅಭಿವೃದ್ಧಿಹೊಂದುತ್ತಾ ರತ್ನಕಾಂತಿಯಿಂದ ಕೂಡಿದ ಮನೆಯಲ್ಲಿ ಸುಖವಾಗಿ ವಾಸಿಸುತ್ತಿರುವನೇ! ||೧೭||

ಅಥವಾ ನೂರುಕೋಟಿ (ಅರ್ಬುದ) ಯೋಜನ ಎತ್ತರವುಳ್ಳ ಕೇವಲ ರತ್ನಮಯವಾದ ಮನೆಯಲ್ಲೇ ವಾಸಿಸುತ್ತಿರುವನೇ! ಅಥವಾ ಹತ್ತುಸಾವಿರಯೋಜನ ಎತ್ತರವಾದ ನೀಲರತ್ನಗಳಿಂದ ರಚಿತವಾದ ಮನೆಯಲ್ಲಿ ನೆಲಸಿರುವನೋ? ||೧೮||

ಲಕ್ಷಯೋಜನ ಎತ್ತರವಾಗಿ, ಅತ್ಯಂತ ಮನೋಹರವಾದ ಹೀರರತ್ನಗಳ ಮನೆಯಲ್ಲೇನಾದರೂ ಇರುವನೋ? ಅಥವಾ ಗಿರಿಜಾರಮಣನು ಮುತ್ತಿನಮಣಿಗಳಿಂದ ರಚಿತವಾಗಿರುವ ಉಪ್ಪರಿಗೆಯ ಮನೆಯಲ್ಲಿ ವಿಹರಿಸುತ್ತಿರುವನೋ? ||೧೯||

ಕಿಂ ಪದ್ಮರಾಗಭವನೇ ನಾನಾರತ್ನವಿಚಿತ್ರಿತೇ ।
ಯದ್ವಾ ಗೋಮೇಧಿಕಾಗಾರೇ ಶಂಖಯೋಜನಮುನ್ನತೇ ॥೨೦॥

ಪುಷ್ಪರಾಗಸ್ಯ ಸದನೇ ಯದ್ವಾ ಮರಕತೇ ಗೃಹೇ ।
ಶಂಖಲಕ್ಷೋನ್ನತೇ ಯದ್ವಾ ಶಿವೋನ್ಯತ್ರಾಧಿತಿಷ್ಠತಿ ॥೨೧॥

ಮರಂದಕುಲ್ಯಾನಿಕಟೇ ಯಾನಿ ಲಿಂಗಾನಿ ಕೋಟಿಶಃ ।
ಪೂಜಿತಾನಿ ವಿಚಿತ್ರಾಣಿ ತೇಷು ಕ್ರೀಡತಿ ಕಿಂ ಮೃಡಃ ॥೨೨॥

ಯದ್ವಾ ಕ್ರೀಡತಿ ವಿಶ್ವಾತ್ಮಾ ಚಂದ್ರಮಂಡಲಮಂಟಪೇ ।
ವಿದ್ಯುದ್ವಾಮಸಮಾಕೀರ್ಣೇ ತಾರಾರಾಜಿವಿರಾಜಿತೇ ॥೨೩॥

ಮಂದಾರಕುಸುಮಾಸಾರಮಂಡಪೇಷು ಚರತ್ಯುತ ।
ತುಂಗಭೃಂಗಾಂಗನಾನಾಟ್ಯಂ ಪಶ್ಯನ್ಗೌರೀಮನುಸ್ಮರನ್ ॥೨೪॥

ನಾನಾರತ್ನಗಳಿಂದ ಚಿತ್ರವಿಚಿತ್ರವಾಗಿ ರಚಿಸಲ್ಪಟ್ಟಿರುವ ಪದ್ಮರಾಗಮಣಿಯ ಮನೆಯಲ್ಲಿ ಏನಾದರೂ ಮಹೇಶನ ವಾಸವೇರ್ಪಟ್ಟಿದೆಯೋ? ಅಥವಾ ಶಂಖ ಸಂಖ್ಯಾಕ (ನೂರುಕೋಟಿ) ಯೋಜನ ಎತ್ತರವಾದ ಗೋಮೇಧಿಕಾವಜ್ರಗಳ ಮನೆಯಲ್ಲಿ ವಾಸಮಾಡುತ್ತಿರುವನೇ? ॥೨೦॥

ಪುಷ್ಪರಾಗ ರತ್ನದ ಮನೆಯಲ್ಲೇನಾದರೂ ಇದ್ದನೇ! ಅಥವ ಮರಕತಮಣಿ ರಚಿತವಾದ ಗೃಹದಲ್ಲಿ ಇರುವನೇ! ಇಲ್ಲವೇ, ಲಕ್ಷಶಂಖಸಂಖ್ಯಾಕವಾದ ಯೋಜನ ಎತ್ತರವುಳ್ಳ ಮನೆಯಲ್ಲಿಯೇ ವಿಹರಿಸುತ್ತಿರುವನೋ! ಹಾಗಿಲ್ಲದೆ ಇವುಗಳೆಲ್ಲೆಲ್ಲಿಯೂ ಕಾಣದೆ ಶಿವನು ಮತ್ತೆಲ್ಲಿಯಾದರೂ ಇರಬಹುದೇ! ॥೨೧॥

ಮಕರಂದ ಸರೋವರದ ದಡದಲ್ಲಿ ಕೋಟ್ಯಂತರ ಲಿಂಗಗಳನ್ನು ನಾನಾ ರೀತಿಯಿಂದ ಪೂಜೆಮಾಡಿರುವರು. ಒಂದು ವೇಳೆ ಮೃಡಸಂಜ್ಞಕನಾದ ಮಹೇಶ್ವರನು ಈ ಲಿಂಗಗಳಲ್ಲಿ ವಿಹರಿಸುತ್ತಿರುವನೇ! ॥೨೨॥

ಹಾಗಿಲ್ಲದಿದ್ದರೆ, ಮಿಂಚಿನ ಸಮೂಹದಿಂದ ವ್ಯಾಪ್ತವಾಗಿ, ನಕ್ಷತ್ರ ಮಾಲೆಗಳಿಂದ ಪ್ರಕಾಶಿಸುತ್ತಿರುವ ಚಂದ್ರಮಂಡಲಮಂಟಪದಲ್ಲಿ ಏನಾದರೂ, ಪ್ರಪಂಚ ಸ್ವರೂಪನಾದ ಮಹಾದೇವನು ಕ್ರೀಡಿಸುತ್ತಿರಬಹುದೇ! ॥೨೩॥

ಮಂದಾರಕುಸುಮಗಳ ಸುವಾಸನೆಯಿಂದ ಕೂಡಿರುವ ಲತಾಮಂಟಪಗಳಲ್ಲಿ

ಯದ್ವಾ ಕುಸುಮಸೌಧೇಷು ತತ್ಪ್ರಾಸಾದೇಷು ವಾ ಶಿವಃ ।
ಯದ್ವಾ ಸಾಧುಸುಧಾಕುಲ್ಯಾಕಾರೇ ಚರತಿ ಶಂಕರಃ ॥೨೫॥

ಇತಿ ತದ್ವಚನಂ ಶ್ರುತ್ವಾ ಭೃಂಗೀ ವಿನಯಸಂಯುತಃ ।
ಉವಾಚ ಮಧುರಾಂ ವಾಣೀಂ ವಾಣೀವಾಣೀಶದುರ್ಲಭಂ ॥೨೬॥

ಮಂದಾರಪುಷ್ಪಶಯನೈರನಂತೈರಪಿ ಸಂಯು(ವೃ)ತೇ ।
ಅತ್ಯುಚ್ಚಕುಸುಮಾಸಾರಪ್ರಾಸಾದೇಷು ಹರಃ ಸ್ಥಿತಃ ॥೨೭॥

ತತ್ರ ಸ್ಥಿತ್ವಾ ಸ ಮಾಹೂಯ ಮಾಮಾದೇಶಪುರಸ್ಸರಂ ।
ಪ್ರೇಷಯಾಮಾಸ ಭಗವಾನ್ಕುಮಾರ ತವ ಸಂನಿಧಿಂ ॥೨೮॥

ಸಂಚರಿಸುತ್ತಾ ಅಲ್ಲಿಯೇ ದೊಡ್ಡದೊಡ್ಡ ಹೆಣ್ಣು ದುಂಬಿಗಳ ನಾಟ್ಯವನ್ನು ನೋಡಿ, ಗಿರಿರಾಜಪುತ್ರಿಯಾದ ಗೌರಿಯನ್ನೇನಾದರೂ ಸ್ಮರಿಸಿಕೊಳ್ಳುತ್ತಿರುವನೋ! ||೨೪||

ಶಿವನು ಒಂದು ವೇಳೆ ಪುಷ್ಪಸೌಧಗಳಲ್ಲಿಯೋ ಅಥವ ಆ ಸೌಧಗಳ ಪ್ರಾಸಾದಗಳಲ್ಲೋ ಇರಬಹುದು. ಇಲ್ಲದಿದ್ದರೆ, ಶ್ರೇಷ್ಠವಾದ ಅಮೃತ ಸರೋವರಗಳ ತೀರದಲ್ಲಾದರೂ ಶಂಕರನು ಸಂಚರಿಸುತ್ತಿರಬಹುದು. ಎಲೈ ನಂದಿಕೇಶ್ವರನೇ, ಇವುಗಳಲ್ಲಿ ಎಲ್ಲಿ ಮಹಾದೇವನಿರುವನು? ತಿಳಿಸು ಎಂದು ಷಣ್ಮುಖನು ನಂದಿಯನ್ನು ಕುರಿತು ಪ್ರಶ್ನಿಸಿದನು. ||೨೫||

ಕುಮಾರಸ್ವಾಮಿಯು ಹೇಳಿದ ಈ ಮಾತುಗಳನ್ನು ಕೇಳಿ ಭೃಂಗಿಯು ವಿನಯದಿಂದ ಸರಸ್ವತೀ, ಬೃಹಸ್ಪತ್ಯಾಚಾರ್ಯರು ಇವರಿಬ್ಬರಿಂದಲೂ ಹೇಳಲು ಸಾಧ್ಯವಾಗದಂತಹ ಮೃದುಮಧುರವಾದ ವಾಕ್ಯಗಳನ್ನು ಈರೀತಿ ನುಡಿದನು. ||೨೬||

"ಪ್ರಭೋ! ಕುಮಾರಸ್ವಾಮಿಯೇ, ಅನೇಕ ಮಂದಾರಪುಷ್ಪಗಳ ಹಾಸಿಗೆಗಳಿಂದ ಆವೃತವಾಗಿರುವ, ಬಹಳ ಎತ್ತರವಾದ ಪುಷ್ಪಪ್ರಾಸಾದಗಳಲ್ಲಿ ಪರಮೇಶ್ವರನು ವಾಸಿಸುತ್ತಿರುವನು. ||೨೭||

ಕುಮಾರನೇ, ಪರಶಿವನು ಅಲ್ಲಿಂದಲೇ ನನ್ನನ್ನು ಆದರದಿಂದ ಕರೆಸಿ, ಈಗ ನಿನ್ನ ಹತ್ತಿರಕ್ಕೆ ಕಳುಹಿಸಿಕೊಟ್ಟನು. ||೨೮||

ಧನ್ಯೋಽಸ್ಮಿ ತ್ವತ್ಪದಾಂಭೋಜಂ ದೃಷ್ಟ್ವಮದ್ಯ ಯತೋಽಧುನಾ ।
ಅತಃ ಪರಂ ಪ್ರಯಾಣಾಯ ಕುರು ಯತ್ನಂ ವಿಶೇಷತಃ ॥೨೯॥

ಮಹಾದೇವಪದಾಂಭೋಜವಿಲೋಕನಮಹೋತ್ಸವಃ ।
ಸತ್ವರಂ ಭವತು ಸ್ವಾಮಿನ್ತದ್ವಿಲಂಬೇ ಶುಭಂ ಕಥಂ ॥೩೦॥

ಇತಿ ಸಂಭಾಷಣೈರ್ಭೃಂಗೀ ಕುಮಾರಮಭಿನಂದಯನ್ ।
ಕುಮಾರೋಕ್ತಾಂ ಶಿವಕಥಾಂ ಶೃಣ್ವನ್ನಾದರತಃ ಸ್ಥಿತಃ ॥೩೧॥

ಅಂಬಾ ವಿಜಯಯಾ ಸಾಕಂ ಜಯಯಾ ಸೇವಿತಾ ಮುದಾ ।
ಪ್ರಾಹ ಸ್ಮೇರಮುಖಾಂಭೋಜರುಚಿರಾ ಚಿರಮಾದರಾತ್ ॥೩೨॥

॥ ಗೌರ್ಯುವಾಚ ॥

ಹರಃ ಸ್ಮರಾರಿಃ ಸ್ಮರತೀತಿ ಚಿತ್ರಂ
ಸ್ವತಃ ಸುಖಾಸಾರಸಮಾವೃತೋಽಪಿ ।

ಸ್ವಾಮಿಯೇ! ನಿನ್ನ ಪಾದಕಮಲವನ್ನು ದರ್ಶನಮಾಡಿದುದರಿಂದ ಇಂದು ನಾನು ಧನ್ಯನಾದೆನು. ಕುಮಾರ! ಇನ್ನು ಮೇಲೆ ಜಾಗ್ರತೆಯಾಗಿ ಇಲ್ಲಿಂದ ಹೊರಡುವ ಸಿದ್ಧತೆಯನ್ನು ಮಾಡು. ॥೨೯॥

ಸ್ವಾಮಿಯೇ, ಮಹಾದೇವನ ಪಾದಕಮಲ ಸಂದರ್ಶನ ಮಾಡುವ ಮಹೋತ್ಸವವು ಕೂಡಲೇ ಜರುಗಲಿ. ವಿಲಂಬಮಾಡುವುದರಲ್ಲಿ ಶುಭವೆಲ್ಲಿಂದ ಬಂತು! ॥೩೦॥

ಈರೀತಿಯಾದ ಸಂಭಾಷಣೆಗಳಿಂದ ಭೃಂಗಿಯು ಕುಮಾರಸ್ವಾಮಿಯನ್ನು ಸಂತೋಷಪಡಿಸುತ್ತಾ, ತಾನೂ ಆ ಕುಮಾರನು ಹೇಳುತ್ತಿದ್ದ ಶಿವಕಥೆಗಳನ್ನು ಆದರದಿಂದ ಕೇಳುತ್ತಾ ನಿಂತಿದ್ದನು. ॥೩೧॥

ಆಗ ಅಂಬಿಕೆಯು ವಿಜಯಾಸಖಿಯೊಡನೆಯೂ, ಜಯೆಯೆಂಬ ಗೆಳತಿಯಿಂದಲೂ ಸೇವಿಸಲ್ಪಡುತ್ತಾ ಇದ್ದಳು. ಒಡನೆಯೇ ಮುಗುಳ್ನಗೆಯಿಂದ ತುಂಬಾ ಮನೋಹರವಾಗಿ ತೋರುತ್ತಿರುವ ಮುಖಕಮಲವುಳ್ಳ ಆ ಗಿರಿಜಾದೇವಿಯು ಆದರದಿಂದ ಹೀಗೆಂದಳು. ॥೩೨॥

"ಮನ್ಮಥಧ್ವಂಸಕನಾದ ಪರಮೇಶ್ವರನು ಸ್ವತಃ ಅಪಾರವಾದ ಸುಖಪರಂಪರೆಗಳಿಂದ ಯುಕ್ತನಾಗಿ ಸುಖಸ್ವರೂಪಿಯಾಗಿದ್ದರೂ ಈಗ ನನ್ನನ್ನು ಸ್ಮರಿಸುತ್ತಿರುವ

ಅಪಾರಮಾನಂದಮಪಿ ಪ್ರಯಚ್ಛ
ನ್ನಾಂದೋಲಯನ್ಮಂದಮಿದಂ ಮನೋ ಮೇ ॥೩೩॥

ಗೌರೀ ಹಾರವಿಹಾರೋರುವಿಲಾಸಾಲಸತಾಂ ಕದಾ ।
ಪ್ರಯಾಸ್ಯತೀತಿ ವಿಜಯಾ ಹಾರಾಕಾರಂ ಜಗೌ ಮುಹುಃ ॥೩೪॥

ಅಂಬಾ ತ್ವಾಮೇವ ಸತತಂ ಚಿಂತಯಿತ್ವಾ ಪುನಃ ಪುನಃ ।
ತ್ವನ್ಮೂರ್ತಿಮಾತ್ರಧ್ಯಾನೇನ ಕಾಲಂ ನಯತಿ ಶಂಕರಃ ॥೩೫॥

ಸುಂದರಾಣ್ಯರವಿಂದಾನಿ ಸೌವರ್ಣಾನಿ ವಿಲೋಕಯನ್ ।
ಕರೋತಿ ನಿಂದಾಮೇತೇಷಾಂ ಸೌಂದರ್ಯಂ ಧಿಗ್ಧಿಗಿತ್ಯಪಿ ॥೩೬॥

ದೃಷ್ಟಂ ಗೌರೀಮುಖಾಂಭೋಜೇ ಸೌಂದರ್ಯಮತಿಶೋಭನಂ ।
ತತ್ಕೋಟ್ಯಂಶೋಽತಿ ನಾತ್ರೇತಿ ಸೃಷ್ಟಿರ್ವ್ಯರ್ಥೇತಿ ಮನ್ಯತೇ ॥೩೭॥

ನೆಂಬುದು ಆಶ್ಚರ್ಯಕರವಾಗಿ ತೋರುತ್ತಿದೆ. ಪರಮೇಶ್ವರನು ನನ್ನನ್ನು ಸ್ಮರಣೆ ಮಾಡುತ್ತಿರುವನೆಂಬುದು ನನಗೆ ತುಂಬಾ ಆನಂದವನ್ನುಂಟುಮಾಡುತ್ತಿರುವುದಲ್ಲದೇ ನನ್ನ ಮನಸ್ಸನ್ನೂ ಅಲ್ಲೋಲಕಲ್ಲೋಲವನ್ನಾಗಿ ಮಾಡುತ್ತಿದೆ." ॥೩೩॥

ಆ ಸಮಯದಲ್ಲಿ ವಿಜಯಾ ಎಂಬ ದೇವಿಯ ಸಖಿಯು, ನಮ್ಮ ಈ ಗಿರಿರಾಜಪುತ್ರಿಯಾದ ಗೌರಿಯು ಯಾವಾಗ ಪರಮೇಶ್ವರನೊಡನೆ ವಿಹಾರಮಾಡುತ್ತಾ ಆಲಸ್ಯಹೊಂದಿ ಪರಮೇಶ್ವರನ ತೊಡೆಯನ್ನಲಂಕರಿಸುವಳೋ, ಎಂದು ಯೋಚಿಸುತ್ತಾ ಈ ಪರಮೇಶ್ವರನ ಸ್ವರೂಪವನ್ನೇ ಪದೇ ಪದೇ ಹಾಡತೊಡಗಿದಳು. ॥೩೪॥

ಎಲೌ ಅಂಬಿಕಾದೇವಿಯೇ, ನಿನ್ನನ್ನೇ ಪದೇ ಪದೇ ಧ್ಯಾನಮಾಡುತ್ತಾ ಯಾವಾಗಲೂ ನಿನ್ನ ಮೂರ್ತಿಧ್ಯಾನದಿಂದಲೇ ಶಂಕರನು ಕಾಲವನ್ನು ಕಳೆಯುತ್ತಿರುವನು. ॥೩೫॥

ಸುಂದರವಾದ ಚಿನ್ನದ ಕಮಲಗಳನ್ನು ನೋಡಿ, ನಿನ್ನ ಮುಖಸೌಂದರ್ಯವನ್ನು ಸ್ಮರಿಸಿದ ಪರಮೇಶ್ವರನು, "ಛೀ, ಈ ಕಮಲಗಳ ಸೌಂದರ್ಯಕ್ಕೆ ಧಿಕ್ಕಾರವಿರಲಿ ;" ಎಂದು ಹೇಳುತ್ತಾ ಈ ಕಮಲಗಳನ್ನು ನಿಂದೆಮಾಡುತ್ತಿರುವನು. ॥೩೬॥

ಗೌರೀಮುಖಕಮಲದಲ್ಲಿ ನೋಡಿದ ಅತಿ ಮನೋಹರವಾದ ಸೌಂದರ್ಯದ ಕೋಟ್ಯಂಶಕ್ಕೂ ಈ ಕಮಲಗಳ ಸೌಂದರ್ಯವು ಸರಿದೂಗಲಾರದು. ಗೌರಿಯ ಮುಂದೆ ಈ ಕಮಲಗಳ ಸೃಷ್ಟಿಯು ವ್ಯರ್ಥವೆಂದೇ ನನಗೆ ತೋರುವುದು. ॥೩೭॥

ಸಸಂಪೂರ್ಣಶರದ್ರಾಕಾಸುಧಾಕರವಿಲೋಕನಂ।
ನ ಚಕಾರ ಕಲಂಕೀತಿ ಮತ್ವಾ ಸ್ಮೃತ್ವಾ ತ್ವದಾನನಂ ॥೩೮॥

ನ ದದರ್ಶ ಮಹಾದೇವಃ ಶಫರೀಪರಿವರ್ತನಂ।
ತ್ವನ್ನೇತ್ರಸಂಭವಂ ಸ್ಮೃತ್ವಾ ನೀಲಿಮಾನಂ ವಿಲೋಕಯನ್ ॥೩೯॥

ಕೋಮಲಾ ವಿದ್ರುಮಲತಾ ಪದ್ಮರಾಗಪ್ರಭಾನ್ವಿತಾ।
ನಿಂದಿತಾ ತೇನ ತೇ ಗೌರಿ ಸುಂದರಾಧರಚಿಂತನಾತ್ ॥೪೦॥

ಫುಲ್ಲಂ ತಿಲಪ್ರಸೂನಂ ವಾ ತೇನ ನಾಲೋಕಿತಂ ಶಿವೇ।
ನಾಸಾಪುಟತಟಂ ಸ್ಮೃತ್ವಾ ಶಿವೇನಾದರಪೂರ್ವಕಂ ॥೪೧॥

ಖಂಡನೀಲಾಲಿಮಾಲಾಪಿ ತೇನ ನಾಲೋಕಿತಾ ಶಿವೇ।
ರುಚಿರಾನ್ರುಚಿರಾನ್ಸ್ಮೃತ್ವಾ ಧಮ್ಮಿಲ್ಲಮಪಿ ಶೋಭನಂ ॥೪೨॥

ನಿನ್ನ ಸುಂದರವಾದ ಮುಖಕಮಲವನ್ನು ಸ್ಮರಿಸಿಕೊಳ್ಳುತ್ತಾ ಪರಮೇಶ್ವರನು, ಸಂಪೂರ್ಣವಾದ ಶರತ್ಕಾಲದ ರಾಕಾಚಂದ್ರನನ್ನು ನೋಡಿದರೆ ಅವನನ್ನೂ ಕಲಂಕಿಯೆಂದೇ (ಕಲಂಕವುಳ್ಳವನೆಂದೇ) ತಿಳಿಯುತ್ತಾನೆ. ॥೩೮॥

ನಿನ್ನ ಕಪ್ಪಾದ ನೇತ್ರಕಾಂತಿಗಳನ್ನು ಸ್ಮರಿಸಿಕೊಂಡು, ಆ ನೇತ್ರಸಂಬಂಧಿಯಾದ ನೀಲವರ್ಣವನ್ನೇ ಸದಾ ಅನುಸಂಧಾನ ಮಾಡುತ್ತಾ ಮಹಾದೇವನು ಮೀನುಗಳ ಸಂಚಾರವನ್ನೂ ಮತ್ತು ಅವುಗಳ ನೀಲವರ್ಣವನ್ನೂ ಗಮನಿಸಲೇ ಇಲ್ಲ. ॥೩೯॥

ಎಲೌ ಗೌರಿಯೇ, ನಿನ್ನ ಸುಂದರವಾದ ಅದರ ಕಾಂತಿಯನ್ನು ಯೋಚಿಸಿದುದರಿಂದ ಮಹೇಶ್ವರನಿಗೆ ಪದ್ಮರಾಗದ ಕಾಂತಿಯಿಂದ ಕೂಡಿದ ಕೋಮಲವಾದ ಹವಳದ ಲತೆಯಲ್ಲಿ ತಿರಸ್ಕಾರಭಾವನೆಯುಂಟಾಯಿತು. ॥೪೦॥

ಎಲೌ ಮಂಗಳಾಂಗಿಯಾದ ಶಿವೆಯೇ, ಪರಶಿವನು ನಿನ್ನ ಮೂಗಿನ ಸೌಂದರ್ಯವನ್ನೇ ಆದರಪೂರ್ವಕವಾಗಿ ಸ್ಮರಿಸಿಕೊಂಡು ಅರಳಿದ ಎಳ್ಳುಹೂವನ್ನು ಕಡೆಗಣ್ಣಿಂದಲೂ ನೋಡುತ್ತಿಲ್ಲ. ॥೪೧॥

ಶಿವೇ, ಶೋಭನವೂ ಅತ್ಯಂತ ಮನೋಹರವೂ ಆದ ನಿನ್ನ ತಲೆಯ ಗಂಟನ್ನು ಸ್ಮರಿಸುತ್ತಾ ಮಹಾದೇವನು ಗುಂಪುಕೂಡಿಕೊಂಡು ಕಪ್ಪಾದ ಕಾಂತಿ

ಸುಮೇರುಗಿರಿಕಲ್ಪಾಶ್ಚ ಗಿರಯಸ್ತೇನ ನೇಕ್ಷಿತಾಃ ।
ತ್ವತ್ಕುಚಸ್ಮರಣೇನೈವ ತತ್ಸೌಂದರ್ಯವಿನಿಂದಯಾ ॥೪೩॥

ಪುರಂದಾವರ್ತಪಾರ್ತಾಪಿ ನ ಕೃತಾ ತೇನ ಶೈಲಜೇ ।
ಗಂಭೀರನಾಭಿಸ್ಮರಣಾತ್ಕದಾಪಿ ಗಿರಕನ್ಯಕೇ ॥೪೪॥

ನ ಹೇಮರಂಭಾನಾಂ ಸೌಂದರ್ಯಮಪಿ ವೀಕ್ಷಿತಂ ।
ತ್ವದೂರುಭಾಗಸೌಂದರ್ಯಸ್ಮರಣೇನ ಪ್ರತಿಕ್ಷಣಂ ॥೪೫॥

ನ ಕೋಕನದಸೌಂದರ್ಯಂ ದೃಷ್ಟಂ ತೇನ ಶಿವಪ್ರಿಯೇ ।
ಪಾದಾರಪಿಂದಸ್ಮರಣೇ ಮಹಾದೇವೇನ ತೇ ಮುಹುಃ ॥೪೬॥

ಯಿಂದ ಮೆರೆಯುತ್ತಿರುವ ಭ್ರಮರಪಂಕ್ತಿಗಳನ್ನು ಹಿಯ್ಯಾಳಿಸುವನು. ಇವು ಎಂದಿಗೂ ನಿನ್ನ ಪ್ರೇಯಸಿಯ ತಲೆಯ ಗಂಟಿನ ಕಾಂತಿಯನ್ನು ಹೋಲಲಾರದೆಂದು ಉದಾಸೀನ ಭಾವನೆಯನ್ನು ಹೊಂದಿರುವನು. ॥೪೨॥

ಒಂದೊಂದು ಸಲ, ಅತ್ಯಂತ ಉನ್ನತವಾದ ನಿನ್ನ ಕುಚವನ್ನೂ ಅದರ ಸೌಂದರ್ಯವನ್ನೂ ನೆನೆಸಿಕೊಂಡು ಮಹೇಶ್ವರನು, ಸುಮೇರುಪರ್ವತಕ್ಕೆ ಸಮಾನ ವಾದ ಬೆಟ್ಟಗಳ ಸೌಂದರ್ಯ ಮತ್ತು ಔನ್ನತ್ಯ ಇವುಗಳನ್ನು ಕಣ್ಣೆತ್ತಿಯೂ ನೋಡದೆ ನಿಂದಿಸುತ್ತಿರುವನು. ॥೪೩॥

ಗಿರಿರಾಜಪುತ್ರಿಯೇ, ನಿನ್ನ ಗಂಭೀರವಾದ ನಾಭಿಮಂಡಲವನ್ನು ಸ್ಮರಿಸಿ ಕೊಂಡ ಮಹಾದೇವನಿಗೆ, ಯಾವಾಗಲೂ ಅಗಾಧವಾದ ಮಕರಂದ ಸರೋವರದ ಸುಳಿಯೇ ಮನಸ್ಸಿಗೆ ಬರುತ್ತಿಲ್ಲ. ॥೪೪॥

ಗಿರಿಜೆಯೇ! ಸುವರ್ಣಮಯವಾದ ಬಾಳೆಯಕಂಬಗಳ ಸೌಂದರ್ಯವನ್ನೂ ತಿರಸ್ಕರಿಸಿರುವ, ನಿನ್ನ ತೊಡೆಗಳ ಸೌಕುಮಾರ್ಯವನ್ನು ಪ್ರತಿಕ್ಷಣದಲ್ಲಿಯೂ ಸ್ಮರಿಸುವ ಮಹೇಶ್ವರನಿಗೆ, ಚಿನ್ನದ ಬಾಳೆಯಕಂಬಗಳಲ್ಲಿದ್ದ ವಿಶ್ವಾಸವೇ ಕಡಿಮೆಯಾಗಿದೆ. ॥೪೫॥

ಪದೇಪದೇ ನಿನ್ನ ಪಾದಕಮಲವನ್ನು ಸ್ಮರಣೆ ಮಾಡುತ್ತಾ ಮಹಾದೇವನು, ರಕ್ತವರ್ಣದ ನೈದಿಲೆಯ ಪುಷ್ಪದ ಸೌಂದರ್ಯವನ್ನು ನೋಡುತ್ತಲೇ ಇಲ್ಲ. (ಆ ಕೆಂಪುನೈದಿಲೆಯ ಹೂವಿನ ಸೌಂದರ್ಯಕ್ಕಿಂತಲೂ ಅತಿಶಯವಾದ ಕಾಂತಿಯಿಂದ

ನ ಕೃತಂ ತೇನ ಗಿರಿಜೇ ತಾರಾಹಾರಾವಲೋಕನಂ ।
ತ್ವದುರೋಜಾತಿರುಚಿರಹಾರಾನುಸ್ಮರಣೇ ಸತಿ ॥೪೭॥

ಮರಂದಪಾನಾಂ ದೂರೇಣ ಸ್ಥಿತಿಮಿಚ್ಛತಿ ಶಂಕರಃ ।
ಪಿಕಾಲಾಪಾಂಶ್ಚ ಹುಂಕಾರಾನ್ನ ಶೃಣೋತಿ ವಿನಿಂದತಿ ॥೪೮॥

ಅಮ್ಲಾನಪುಷ್ಪಶಯ್ಯಾನಾಂ ನ ಕರೋತಿ ವಿಲೋಕನಂ ।
ನಾಸ್ವಾದಿತೋ ರಸಸ್ತೇನ ಸುಧಾಯಾಃ ಸರ್ವಥಾಂಬಿಕೇ ॥೪೯॥

ಉನ್ಮತ್ತರಾಜಹಂಸಾನಾಂ ಗಮನಂ ಸ ವಿನಿಂದತಿ ।
ವರಟಾನಾಂ ಸಗರ್ಭಾಣಾಂ ಸ್ಮೃತ್ವಾ ತ್ವತ್ಪಾದಚಾಲನಂ ॥೫೦॥

ಕೂಡಿದ ನಿನ್ನ ಪಾದಕಮಲವನ್ನು ಪದೇ ಪದೇ ಸ್ಮರಿಸಿಕೊಂಡ ಮಹೇಶ್ವರನಿಗೆ ಆ ನೈದಿಲೆಯ ಹೂವಿನಲ್ಲಿ ಒಂದು ತರಹ ತಿರಸ್ಕಾರಭಾವನೆಯುಂಟಾಗಿದೆಯೆಂದು ಭಾವವು.) ॥೪೬॥

ಗಿರಿಜೆಯೇ, ನಿನ್ನ ಸ್ತನಗಳ ಮೇಲೆ ಮನೋಹರವಾಗಿ ವಿರಾಜಿಸುತ್ತಿರುವ ಹಾರವನ್ನು ಸ್ಮರಿಸಿಕೊಂಡಾಗಲೆಲ್ಲಾ, ಮಹಾದೇವನು ನಕ್ಷತ್ರಮಾಲಿಕೆಯನ್ನು ಅಲ್ಲಗಳೆಯುವನು. ॥೪೭॥

ನಿನ್ನ ವಿರಹದಿಂದ ಪೀಡಿತನಾದ ಮಹೇಶ್ವರನು ಆ ವಿರಹೋದ್ದೀಪಕವಾದ ಭ್ರಮರಗಳ ಹುಂಕಾರಗಳನ್ನೂ, ಕೋಗಿಲೆಗಳ ಧ್ವನಿಗಳನ್ನೂ, ಕೇಳುವುದನ್ನು ನಿಲ್ಲಿಸಿರುವುದಲ್ಲದೇ, ನಿನ್ನ ಮಧುರಧ್ವನಿಯನ್ನು ಸ್ಮರಿಸಿಕೊಂಡು ಆ ಕೋಗಿಲೆ ಮುಂತಾದವುಗಳ ನಾದವನ್ನು ಆಗಾಗ್ಗೆ ನಿಂದಿಸುತ್ತಾನೆ. ॥೪೮॥

ನಿನ್ನ ವಿರಹದಿಂದ ತಪ್ತನಾಗಿರುವ ಶಂಕರನು, ಬಾಡದೆ ಸುಕುಮಾರವಾದ ಪುಷ್ಪಗಳಿಂದಲೇ ನಿರ್ಮಿಸಲ್ಪಟ್ಟಿರುವ ಹಾಸಿಗೆಗಳನ್ನು ಕಣ್ಣೆತ್ತಿ ಸಹ ನೋಡುತ್ತಿಲ್ಲ. ಅಂಬಿಕೆಯೇ! ನಿಜವಾಗಿಯೂ ಅಮೃತರಸವನ್ನು ಪಾನಮಾಡುವುದರಲ್ಲಿ ಸಹ ಪರಮೇಶ್ವರನಿಗೆ ಈಗ ಬೇಸರಿಕೆಯುಂಟಾಗಿದೆ. ॥೪೯॥

ಮನೋಹರವಾದ ನಿನ್ನ ಮಂದಗಮನವನ್ನು ಸ್ಮರಿಸಿಕೊಂಡು, ಮಹೇಶ್ವರನು ಗರ್ಭಸಹಿತವಾದ, ಮದಿಸಿದ ಹೆಣ್ಣುರಾಜ ಹಂಸಗಳ ಗಮನವನ್ನು ನಿಂದಿಸುತ್ತಿರುವನು. (ಇವುಗಳ ಮಂದಗಮನಕ್ಕಿಂತ ತನ್ನ ಪ್ರೇಯಸಿಯ ಗಮನವೇ

ಮಧ್ಯಂ ಸ್ಮೃತ್ವಾ ತವಾಂಬಾದ್ಯ ಸಿಂಹಮಧ್ಯವಿನಿಂದನಂ ।
ಅಣೂನಾಂ ಪರಿಮಾಣಸ್ಯ ನಿಂದಾಮಪಿ ಚಕಾರ ಸಃ ॥೫೧॥

ಸುಮೇರುಸಾನುಸೌಂದರ್ಯನಿಂದಕೋಽಪಿ ಸ ಧೂರ್ಜಟಿಃ ।
ಸ್ಮೃತ್ವಾ ಕಟಿತಟಂ ತಿಷ್ಠತ್ಯಂಬ ತೇನ ವಿಡಂಬನಾ ॥೫೨॥

ನೀಹಾರತಲ್ಪಮಧಿತಿಷ್ಠತಿ ಚಂದ್ರಮೌಳಿ
ರ್ಮಾರಜ್ವರಾನಲವಿದಾಹವಿನಾಶನಾಯ ।
ತತ್ಸಂಗಮೇನ ಗಿರಿಜೇ ತದಭೂದಸಹ್ಯ
ದಾವಾನಲಪ್ರತಿಮಮಪ್ರತಿಮಂ ಭವಾನಿ ॥೫೩॥

ಕುಂದೋಚ್ಚಯೇಷು ಶಯನಂ ನ ಚಕಾರ ಗೌರಿ
ಮಂದಾರಪುಷ್ಪನಿವಹೇಷ್ವಪಿ ಕಾಲಕಾಲಃ ।

ಇನ್ನೂ ನಿಧಾನವಾಗಿರುವುದೆಂದು, ಯೋಚಿಸಿ ಮಹಾದೇವನಿಗೆ ಈ ರೀತಿ ಆ ಹಂಸಗಮನದಲ್ಲಿ ನಿಂದೆಯುಂಟಾಗಿದೆ.) ॥೫೦॥

ಅಂಬಿಕೆಯೇ, ನಿನ್ನ ಸೂಕ್ಷ್ಮವಾದ ಸೊಂಟವನ್ನು ಸ್ಮರಿಸಿಕೊಂಡ ಮಹಾದೇವನು ಸಿಂಹದ ಸೊಂಟಭಾಗವನ್ನು ನಿಂದೆಮಾಡುವನು. ಅಲ್ಲದೆ ಅದಕ್ಕಿಂತಲೂ ಸೂಕ್ಷ್ಮವಾದ ಪರಮಾಣುವನ್ನು ಸಹ ಇದು ತನ್ನ ಪ್ರಿಯೆಯ ಸೊಂಟದ ಸೂಕ್ಷ್ಮಭಾಗಕ್ಕಿಂತಲೂ ಇನ್ನೂ ಸ್ಥೂಲವಾಗಿದೆಯೆಂದು ನಿಂದಿಸುತ್ತಿರುವನು. ॥೫೧॥

ನಿನ್ನ ಅತ್ಯುನ್ನತವಾದ ಕಟಿಪಶ್ಚಾದ್ಭಾಗಗಳನ್ನು ಸ್ಮರಿಸಿಕೊಂಡ ಮಹೇಶ್ವರನಿಗೆ ಸುಮೇರುಪರ್ವತದ ತಪ್ಪಲು ಪ್ರದೇಶದ ಸೌಂದರ್ಯವು ಸಹ ನಿಂದಾಸ್ಪದವಾಗಿದೆ. ॥೫೨॥

ಎಲೌ ಭವಾನಿಯೇ, ಚಂದ್ರಚೂಡನಾದ ಮಹೇಶ್ವರನು, ನಿನ್ನ ವಿರಹದಿಂದುಂಟಾಗಿರುವ ಮನ್ಮಥಜ್ವರದ ದಾಹವನ್ನು ನಾಶಮಾಡಿಕೊಳ್ಳುವುದಕ್ಕೋಸ್ಕರ, ಮಂಜಿನ ಹಾಸಿಗೆಯನ್ನು ಆಶ್ರಯಿಸಿರುವನು. ಹೀಗೆ ಆ ಹಿಮತಲ್ಪವನ್ನು ಆಶ್ರಯಿಸಿದುದರಿಂದ ಮಹೇಶ್ವರನ ಮದನಾಗ್ನಿಯು ಆ ಮಂಜಿನಲ್ಲಿ ಸಂಬಂಧಿಸಿ ಸಹಿಸಲಾರದಷ್ಟು ಕಾಡುಗಿಚ್ಚಿಗೆ ಸದೃಶವಾದ ಅಗ್ನಿಜ್ವಾಲೆಯನ್ನುಂಟುಮಾಡಿತು. ॥೫೩॥

ಕಾಲಕಾಲನೆನಿಸಿದ ಮಹೇಶನು ಎತ್ತರವಾದ ಕುಂದಪುಷ್ಪಗಳ ಹಾಸಿಗೆಯಲ್ಲಾಗಲೀ, ಅಥವಾ ಮಂದಾರಪುಷ್ಪಸಮೂಹದಿಂದ ವ್ಯಾಪ್ತವಾಗಿರುವ ಶಯನದ

ದೂರೀಕರೋತಿ ವಿಧುಮಂಡಲಚಾರುಶಯ್ಯಾಂ
ಚಂಡಾಂಶುಮಂಡಲಧಿಯಾ ಗಿರಿಜೇ ಧವಸ್ತೇ ॥೫೪॥

ಉತ್ಕಂಠಯಾಪಿ ಯದಕುಂಠಿತನೀಲಕಂಠ
ನಾಟ್ಯಾವಲೋಕನಮಶೇಷವಿಶೇಷಚಿಂತಾಂ ।
ಕುರ್ವನ್ಗಿರೀಂದ್ರತನಯೇ ನ ಚಕಾರ ಧೀರೋ
ಮಾರಾರಿರದ್ಯ ತು ವಿಶೇಷತ ಏವ ನೂನಂ ॥೫೫॥

ಕರ್ಪೂರಗೌರಮಭವದ್ಗಿರಿಜೇ ಶರೀರಂ
ಕಿಂ ಶಂಕರಸ್ಯ ರುಚಿರಂ ನ ಸುಮೇರುಚಾರು ।
ಕಾರ್ಶ್ಯಂ ಚ ತಾವದಧುನಾ ತನುರೇತಿ ಶಂಭೋ
ಸ್ಸಾ ಕಿಂ ತನುರ್ನ ಭವತೀತಿ ನ ಮಾ ವದಾದ್ಯ ॥೫೬॥

ಲ್ಲಾಗಲಿ ಎಂದಿಗೂ ಮಲಗಲಿಲ್ಲ. ನಿನ್ನ ಪತಿಯು ನಿನ್ನ ವಿರಹದಿಂದ ಬಳಲಿ ಚಂದ್ರಮಂಡಲದಿಂದ ಮನೋಹರವಾಗಿರುವ ಹಾಸಿಗೆಯನ್ನು ಸಹ ಇದು ಕ್ರೂರವಾದ ಕಿರಣಮಂಡಲವುಳ್ಳ ಸೂರ್ಯನ ಸಂಬಂಧವಾದುದೆಂಬ ಬುದ್ಧಿಯಿಂದ ತಿರಸ್ಕರಿಸುತ್ತಿರುವನು. (ಪ್ರಾಯಶಃ ವಿರಹತಪ್ತರಾದವರಿಗೆ ಶೀತಕಿರಣನಾದ ಚಂದ್ರನು ಸಹ ಸೂರ್ಯನಂತೆ ಉದ್ವೇಗಕರವಾದ ತೀಕ್ಷ್ಣಕಿರಣವುಳ್ಳವನಂತೆ ತೋರುವನೆಂದು ವರ್ಣಿಸುವುದು ಮಹಾಕವಿಗಳ ಸಂಪ್ರದಾಯ.) ॥೫೪॥

ಗಿರಿಜೆಯೇ, ಯಾವಾಗಲೂ ನಾಟ್ಯವನ್ನು ಸಂಪೂರ್ಣವಾಗಿ ನೋಡುವುದರಲ್ಲಿ ಹೆಚ್ಚು ಅಪೇಕ್ಷೆಯಿಂದ ಕೂಡಿದ್ದ ಧೀರನಾದ ಮನ್ಮಥರಿಪುವು, ಈಗ ವಿಶೇಷ ಚಿಂತಾಕ್ರಾಂತನಾಗಿ ನಿನ್ನ ವಿರಹದಿಂದ ಆ ನಾಟ್ಯದಲ್ಲಿಯೂ ವಿಶೇಷವಾದ ಆಸಕ್ತಿಯನ್ನು ತೋರಿಸುತ್ತಿಲ್ಲ. ॥೫೫॥

ಸುವರ್ಣಪರ್ವತವೆನಿಸಿದ ಮೇರುವಿನಂತೆ ಮನೋಹರವಾದ ಹೊಂಬಣ್ಣವುಳ್ಳ ಶಂಕರನ ಶರೀರವು ಈಗ ವಿರಹತಾಪದಿಂದ ಕರ್ಪೂರದಂತೆ ಬೆಳ್ಳಗಾಗಿರುವುದನ್ನು ನೀನು ನೋಡುವೆ. ಹೀಗೆ ಶರೀರವು ಬೆಳ್ಳಗಾಗುತ್ತಿರುವುದಲ್ಲದೆ, ನಿನ್ನ ವಿರಹತಾಪದಿಂದ ಕೃಶವೂ ಆಗುತ್ತಿದೆ. ಇದನ್ನು ನೋಡಿದರೆ ಇದು ನಿಜವಾಗಿಯೂ ಹಿಂದೆ ಪರಮೇಶ್ವರನಿಗಿದ್ದ ಸುಂದರವಾದ ಶರೀರವೋ, ಅಲ್ಲವೋ ಎಂಬ ಸಂಶಯ ಬರುವಂತಿದೆ. ಹಾಗೆ ನೀನು ಸಂಶಯಪಡಬೇಡ. ॥೫೬॥

ಯೇ ಕಲ್ಪಿತಾಃ ಪರಿಮಿತಾ ಅಪಿ ಲೀಲಯಾದ್ಯ
ಲೀಲಾವಿಹಾರನಿಲಯಾಃ ಕಮಲಾಲಯಾಸ್ತೇ ।
ದೂರೀಕೃತಾಶ್ಚ ತರಸಾ ವಿನಯಂ ಪ್ರಪನ್ನಾಃ
ಕಿಂ ಶೈಲರಾಜತನಯೇ ವದತಿ ತ್ರಿಣೇತ್ರಃ ॥೫೭॥

ಮಂದಾರಸುಂದರಮರಂದವಿನೋದಸೌಧ
ಭೃಂಗಾಂಗನಾಂಗಮಪಿ ಶಂಗವಿಲೋಕನಾರ್ಹಂ ।
ಅಂಗಾರಕಲ್ಪಮಭವದ್ಗಿರಿರಾಜಕನ್ಯೇ
ಧನ್ಯೇ ತವೈವ ವಿರಹೇಣ ಮಹೇಶ್ವರಸ್ಯ ॥೫೮॥

ನಾರೀವಿಶೇಷರಚನಾಚತುರಶ್ಚಿರಂ ತೇ
ಸ್ಮೃತ್ವಾ ಶರೀರಮಗರಾಜಸುತೇ ಮಹೇಶಃ ।
ದೂರೀಕರೋತಿ ತರಸಾ ರಚನಾಂ ಚಕೋರಃ
ಕಾಂಚೀಮಿವ ಪ್ರತಿದಿನಂ ಸ್ಮೃತಚಾರುಚಂದ್ರಃ ॥೫೯॥

ಎಲೌ ಪರ್ವತರಾಜಕುಮಾರಿಯೇ, ನಿನ್ನೊಡನೆ ವಿಹರಿಸುವುದಕ್ಕೋಸ್ಕರ ಮಹೇಶ್ವರನು ವಿಲಾಸದಿಂದ ನಿರ್ಮಿಸಿದ್ದ ವಿಹಾರಭವನಗಳಾಗಿದ್ದ ಕಮಲಾಲಯಗಳೆಲ್ಲಾ, ಈಗ ಆ ಮಹೇಶ್ವರನಿಂದ ದೂರಮಾಡಲ್ಪಟ್ಟಿವೆ. ಅದರಿಂದಲೇ ಅವುಗಳೆಲ್ಲಾ ಈಗ ಬಗ್ಗಿಹೋಗಿವೆ. ದೇವಿಯೇ, ಇದಕ್ಕಿಂತಲೂ ಆ ಮಹೇಶ್ವರನ ವಿರಹತಾಪವನ್ನು ನಿನಗೆ ಹೆಚ್ಚೇನು ಹೇಳಲಿ! ॥೫೭॥

ಮಾತೆಯೇ,—ಸುಂದರವಾದ ಮಂದಾರ ಪುಷ್ಪಗಳ ಮಕರಂದವನ್ನು ವಿನೋದದಿಂದ ಸ್ವೀಕರಿಸುತ್ತ ಸೌಧವನ್ನಾರೋಹಣಮಾಡಿ, ಆ ದಿವ್ಯಸೌಧದಲ್ಲಿ ವಿನೋದದಿಂದ ಕಾಲವನ್ನು ಕಳೆಯುವ ಹೆಣ್ಣುದುಂಬಿಗಳ ಅಂಗಕಾಂತಿಯನ್ನು ಹಿಂದೆ ಶಂಗಸಂಜ್ಞಕವಾದ ಮಹೇಶ್ವರನು ನೋಡಿ ಸಂತೋಷಪಡುತ್ತಿದ್ದನು. ಎಲೌ ದೇವಿಯೇ! ಈಗ ನಿನ್ನ ವಿರಹದಿಂದ ಆ ಭೃಂಗಾಂಗನಾ ಅವಯವಗಳೆಲ್ಲಾ ಮಹೇಶ್ವರನಿಗೆ ಇದ್ದಿಲಿನ ಮಸಿಯಂತೆ ನೋಡಲು ಬೇಸರವನ್ನುಂಟುಮಾಡುತ್ತಿವೆ ದೇವಿ! ನೀನೇ ಧನ್ಯಳು. ॥೫೮॥

ಎಲೌ ಗಿರಿರಾಜನ ಪ್ರೇಮಪುತ್ರಿಯೇ, ನಾರೀಮಣಿಗಳನ್ನು ನಿರ್ಮಿಸುವುದರಲ್ಲಿ ಅತಿ ನಿಪುಣನಾದ ಮಹೇಶ್ವರನು ನಿನ್ನ ಮನೋಹರವಾದ ದೇಹವನ್ನು

ಪೂರ್ವಂ ವಿಹಾಯ ವಿಧುಮಂಡಲಮಂಡಪಾನಿ
ಗೌರೀವಿನೋದಮುದವರ್ಧನಸಾಧನಾನಿ ।
ತಾನೀತಿ ತೇನ ಗಿರಿಜಾವಿರಹೇ ವೃಥೇತಿ
ದೂರೀಕೃತಾನಿ ಗಿರಿಶೇನ ಗಿರೀಶಕನ್ಯೇ ॥೬೦॥

ಯದ್ಯನ್ಮನೋಹರವರಂ ಗಿರಿಶೇನ ಸೃಷ್ಟಂ
ತತ್ಸರ್ವಮದ್ಯ ಗಿರಿಜಾಗಮನಂ ವಿನಾ ಮೇ ।
ಕೃತ್ಯಂ ನ ದೃಷ್ಟಮಿತಿ ದುಷ್ಟತಮತ್ವಶಂಕಾಂ
ಕೃತ್ವಾಧಿತಿಷ್ಠತಿ ಸ ನಿಷ್ಠುರಸೃಷ್ಟಿಬುದ್ಧ್ಯಾ ॥೬೧॥

ಅದ್ಯಾಪಿ ಶಂಕರವಿಹಾರವಿಚಾರಲೇಶಃ
ಕಿಂ ತೇ ಗಿರೀಶತನಯೇ ಕಮನೀಯಮೂರ್ತಿಃ ।

ನೆನಸಿಕೊಂಡಾಗ, ಮನೋಹರವಾದ ಚಂದ್ರನನ್ನು ಸ್ಮರಿಸಿಕೊಂಡ ಚಾತಕಪಕ್ಷಿಯು ಒಡ್ಯಾಣವನ್ನು ದೂರಮಾಡುವಂತೆ ಇತರ ಸುಂದರಾಂಗಿಯರ ಶರೀರ ರಚನೆಯನ್ನೇ ದೂರಮಾಡಿರುವನು. ॥೫೯॥

ಅಮ್ಮ ಗಿರಿಜೇ! ಹಿಂದೆ, ಶುಭ್ರಾಂಗಿಯಾದ ನಿನ್ನ ವಿನೋದಕ್ಕೋಸ್ಕರ, ಮದಜನಕಗಳಾಗಿರುವ ಚಂದ್ರಮಂಡಲರೂಪವಾದ ಮಂಟಪಗಳನ್ನು ರಚಿಸಿ, ಅದರಲ್ಲಿ ಸಂತೋಷದಿಂದ ನಿನ್ನೊಡನೆ ವಿಹರಿಸುತ್ತಿದ್ದ ಮಹೇಶ್ವರನು, ಈಗ ಅವುಗಳನ್ನೆಲ್ಲಾ ದೂರಮಾಡಿ, "ಗಿರಿಜೆಯ ವಿರಹವುಂಟಾಗಿರುವಾಗ ನನಗೆ ಈ ಮಂಟಪಗಳೆಲ್ಲಾ ಕೇವಲ ವ್ಯರ್ಥವಾದವುಗಳೆಂದು ಭಾವಿಸಿ" ಎಲ್ಲವನ್ನೂ ತಿರಸ್ಕರಿಸಿರುವನು. ॥೬೦॥

"ನಾನು ಸೃಷ್ಟಿಮಾಡಿರುವ ಅತ್ಯಂತ ಮನೋಹರಗಳೆನಿಸಿದ ಪದಾರ್ಥಗಳೆಲ್ಲಾ ಗಿರಿಜೆ ಬಾರದಿರುವಾಗ ಅವು ನನಗೆ ವ್ಯರ್ಥವೆಂದೇ ತೋರುತ್ತಿವೆ." ಎನ್ನುತ್ತಾ ಸ್ವಾಮಿಯು ನಿಷ್ಠುರ ಬುದ್ಧಿಯುಳ್ಳವನಾಗಿ ಇವೆಲ್ಲವೂ ದುಷ್ಟವಾದವುಗಳೆಂದು ಭಾವಿಸುತ್ತಾ, ಅನ್ಯಾಯವಾಗಿ ಇವುಗಳನ್ನು ಸೃಷ್ಟಿಮಾಡಿದೆನಲ್ಲಾ ಎಂದುಕೊಂಡು ನಿನ್ನ ವಿರಹದಿಂದ ಮುಗ್ಧನಾಗಿರುವನು. ॥೬೧॥

ಗಿರಿರಾಜನಂದಿನಿ, ಈಗ ನಿನಗೆ ಶಂಕರನ ವಿಹಾರವಿಚಾರದ ಲೇಶವನ್ನು ಮಾತ್ರ ನಾನು ತಿಳಿಸಿರುವೆನು. ದೇವಿಯೇ, ಹೆಚ್ಚಿಗೆ ಹೇಳಬೇಕಾದ್ದೇನಿದೆ.

ಕಿಂ ನಃ ಸ್ಮೃತಃ ಶ್ರವಣಮಂಗಳಪುಣ್ಯಕೀರ್ತಿ
ರ್ಭಾಗ್ಯಪ್ರದಾನವಿನಿವಾರಿತಪಾತಕಾರ್ತಿಃ ॥೬೨॥

ಯತ್ಪಾದುಕಾಸ್ಮರಣಮಾತ್ರಮಮಂಗಲಾನಿ
ದೂರೀಕರೋತಿ ಶತಧಾಪಿ ಸಹಸ್ರಧಾಪಿ ।
ಪಶ್ಚಾತ್ತನೋತಿ ವಿವಿಧಾನ್ಯಪಿ ಮಂಗಲಾನಿ
ತತ್ಪಾದುಕಾಸ್ಮರಣಮಾಶು ಶುಭಾವಹಂ ತೇ ॥೬೩॥

ಧನ್ಯಾಸಿ ದೇವಿ ಗಿರಿಜೇ ಗಿರಿಶಪ್ರಸಾದ
ಸಂದೇಹಪಾತ್ರಮಪಿ ಚಿತ್ರಮಿದಂ ತವೇದಂ ।
ಗಾತ್ರಂ ಪವಿತ್ರಮಿದಮತ್ರ ಕಥಂ ತ್ರಿಣೇತ್ರ
ಸೇವಾಖ್ಯಸತ್ರವರದೀಕ್ಷಿತಮಸ್ತು ಶಸ್ತಂ ॥೬೪॥

ಮನೋಹರವಾದ ಆಕಾರದಿಂದ ವಿರಾಜಿಸುವವನೂ, ಭಕ್ತಜನರ ಮನಸ್ಸಿಗೆ ಆನಂದವಾಗುವ ನಾಮವುಳ್ಳವನೂ, ಮಂಗಳಸ್ವರೂಪನೂ ಮತ್ತು ಪುಣ್ಯಮಯವಾದ ಕೀರ್ತಿಯುಳ್ಳವನೆಂದು ಪ್ರಸಿದ್ಧಿಪಡೆದು ತನ್ನ ಆರಾಧಕರಿಗೆ ಸಕಲ ಭಾಗ್ಯಗಳನ್ನೂ ಕೊಟ್ಟು, ಅವರ ಪಾಪಭೀತಿಯನ್ನೆಲ್ಲಾ ಹೋಗಲಾಡಿಸುವವನೂ ಆದ ಮಹಾದೇವನ ವಿಷಯವು ನಮಗೆ ತಿಳಿದಿಲ್ಲವೇ ? ॥೬೨॥

ಪರಮೇಶ್ವರನು ತನ್ನ ಪಾದುಕೆಯನ್ನು ಸ್ಮರಣೆಮಾಡಿದ ಮಾತ್ರದಿಂದಲೇ ಭಕ್ತರ ಅಮಂಗಲಗಳನ್ನು ನೂರು ಅಥವ ಸಾವಿರ ಅಥವ ಅದಕ್ಕಿಂತಲೂ ಹೆಚ್ಚು ಭಾಗಗಳನ್ನಾಗಿ ಚೂರುಚೂರುಮಾಡಿಬಿಡುವನು. (ಅಂದರೆ ತನ್ನ ಪಾದುಕಾಸ್ಮರಣೆ ಮಾಡಿದ ಮಾತ್ರಕ್ಕೇ ಭಕ್ತರ ಸಕಲ ಅಪರಾಧಗಳನ್ನೂ, ಪಾಪಗಳನ್ನೂ ಸಹ ಸ್ವಲ್ಪವೂ ಉಳಿಯದಂತೆ ಕ್ಷಮಿಸುವನು. ಎಂದು ತಿಳಿಯಬೇಕು.) ಹೀಗೆ ಅವರ ದುರಿತಗಳೆಲ್ಲಾ ತೊಲಗಿದಮೇಲೆ ಅವರಿಗೆ ನಾನಾವಿಧವಾದ ಸನ್ಮಂಗಳಗಳನ್ನೆಸಗುವನು. ತಾಯಿಯೇ, ನೀನೂ ಆ ನಿನ್ನ ರಮಣನ ಪಾದುಕೆಗಳನ್ನು ಸ್ಮರಿಸು. ಇದರಿಂದ ನಿನಗೆ ಒಳ್ಳೆಯದಾಗುವುದು. ॥೬೩॥

ಗಿರಿಜಾದೇವಿಯೇ, ನೀನೇ ಧನ್ಯಳು ! ಗಿರಿಶನೆನಿಸಿದ ಮಹೇಶ್ವರನ ಪ್ರಸಾದಕ್ಕೆ ಸಂದೇಹಭೂತವಾದ ಪಾತ್ರವೆನಿಸಿದ ಈ ನಿನ್ನ ಶರೀರವು ಪವಿತ್ರತಮವೆಂಬುದೇ ಆಶ್ಚರ್ಯಜನಕವಾಗಿದೆ. ಈ ಪವಿತ್ರವಾದ ನಿನ್ನ ಶರೀರವು ಮಹೇಶ್ವರ ಪ್ರಸಾದ

ಕಲ್ಯಾಣರೂಪಸುಗುಣಾರ್ಣವಮಿಂದುಮೌಳಿಂ
ತೂರ್ಣಂ ವಿಲೋಕಯ ಪರಾತ್ಪರಮನ್ನಪೂರ್ಣೇ ।
ಅಭ್ಯರ್ಣಮೇತ್ಯ ವರವರ್ಣಿನಿ ವರ್ಣನೀಯಂ
ಸಂಪೂರ್ಣಕಾಮಮಪರಾಜಿತಮೇಹಿ ಭದ್ರೇ ॥೬೫॥

ಅಂಗಶ್ರಿಯಾ ಕನಕಚಂಪಕಕಾಂತಿಧಾರಾ
ದೂರೀಕೃತಾ ತವ ತಯಾ ಫಲಮಸ್ತಿ ಕಿಂ ನ್ವೈ ।

ಸ್ವೀಕಾರಕ್ಕೇ ಸಂದೇಹಸ್ಥಾನವಾಗಿರುವಾಗ ಇದು ಹೇಗೆತಾನೆ ಮಹಾದೇವನ ಸೇವಾರೂಪವಾದ ಶ್ರೇಷ್ಠವಾದ ಯಜ್ಞದಲ್ಲಿ ದೀಕ್ಷಾಯೋಗ್ಯವೆನಿಸಿ ಪ್ರಶಸ್ತವೆನಿಸುವುದು? (ಇಲ್ಲಿ ಸಂದೇಹವೆಂಬ ಶಬ್ದಕ್ಕೆ "ದಿಹ ಉಪಚಯೇ" ಎಂಬ ಧಾತುವಿನಿಂದ ಉಪಚಯ ಎಂದರೆ ಅಭಿವೃದ್ಧಿ ಎಂಬ ಅರ್ಥವನ್ನಿಟ್ಟುಕೊಂಡು ಸಂ ಎಂಬ ಉಪಸರ್ಗಕ್ಕೂ ಸಂಪೂರ್ಣವಾದ ಎಂಬ ಅರ್ಥವನ್ನು ಮಾಡಿಕೊಂಡರೆ ಈ ವಿರೋಧ ಪರಿಹಾರವಾಗುವುದು.) "ದೇವಿಯಾದ ಗಿರಿಜೆಯೇ, ಮಹೇಶ್ವರನ ಪ್ರಸಾದಕ್ಕೆ ಪೂರ್ಣ ಅಭಿವೃದ್ಧಿಕರವಾದ ಪಾತ್ರವೆನಿಸಿದ ನಿನ್ನ ಶರೀರವು ಪರಮಪವಿತ್ರವೂ ಮತ್ತು ಮಹಾದೇವನ ಸೇವಾರೂಪವಾದ ಯಜ್ಞದಲ್ಲಿ ದೀಕ್ಷಿತವೂ ಆಗಿ ಪವಿತ್ರತಮವೂ ಎನಿಸಿರುವುದು ಏನು ತಾನೇ ಆಶ್ಚರ್ಯ!" ಎಂದು ಅರ್ಥವಾಗುವುದು ಮತ್ತು ಹಿಂದಿನ ವಿರೋಧ ಪರಿಹಾರವಾಗುವುದು. ॥೬೪॥

ಅನ್ನಪೂರ್ಣೆಯೇ, ಕಲ್ಯಾಣಸ್ವರೂಪನೂ ಸದ್ಗುಣಗಳಿಗೆ ಸಮುದ್ರದಂತೆ ಆಶ್ರಯನೂ ಆದ ಚಂದ್ರಮೌಲಿಯನ್ನು ಜಾಗ್ರತೆಯಾಗಿ ದರ್ಶನಮಾಡು. ದೇವಿ! ನೀನು ವರವರ್ಣಿನಿಯು (ಉತ್ತಮ ಜಾತಿಯ ಸ್ತ್ರೀ) ಪರಮೇಶ್ವರನಾದರೋ ಪರಾತ್ಪರನು, ಉತ್ಕೃಷ್ಟವಾದ ವಸ್ತುಗಳಿಗಿಂತಲೂ ಉತ್ಕೃಷ್ಟನೆನಿಸಿದವನು. ಅಲ್ಲದೇ ನಿನ್ನಿಂದ ವರಿಸಲು ಯೋಗ್ಯನಾಗಿರುವನು. ಗಿರಿಜೇ! ಮಂಗಳಾಂಗಿಯಾದ ನೀನು ಈಗಲೇ ಪರಶಿವನ ಸಮೀಪಕ್ಕೆ ತೆರಳಿ ನಿನ್ನ ಸಕಲ ಇಷ್ಟಾರ್ಥಗಳನ್ನೂ ತಪ್ಪದೇ ಹೊಂದುವವಳಾಗು. ॥೬೫॥

ಗಿರಿಜೆಯೇ, ನೀನು ನಿನ್ನ ದೇಹಕಾಂತಿಯಿಂದ ಸುವರ್ಣದ ಸಂಪಿಗೆ ಹೂವಿನ ಕಾಂತಿಯು ಸಮೂಹವನ್ನೇ ತಿರಸ್ಕರಿಸಿರುವೆ. ಹೀಗಿರುವಾಗ ಅದರಿಂದ ಈಗ ಫಲವೇನಿರುವುದು? ದೇವಿಯೇ ಈ ಸುವರ್ಣಚಂಪಕಕಾಂತಿಯನ್ನು ತಿರಸ್ಕರಿ

ಯದ್ಯದ್ಯ ಶಂಕರವಿಹಾರವರಾನುಕೂಲಾ
ನ ಸ್ಯಾತ್ತದಾ ಗಿರಿಸುತೇ ವಿಫಲಾ ನ ಕಿಂ ಸಾ ॥೬೬॥

ರಾಕಾಸುಧಾಕರಮನೋಹರಬಿಂಬಮುಂಬ
ತನ್ನಂದನಂ ವದನಮದ್ಯ ಕರೋತಿ ತೇ ವೈ ।
ಕಿಂ ತೇನ ವಾ ಫಲಮನುಕ್ಷಣಮಿಂದುಮೌಳಿ
ಲೀಲಾವಿನೋದಮಧುರಸ್ಮಿತವರ್ಜಿತಂ ಚೇತ್ ॥೬೭॥

ನೀಲೋತ್ಪಲಾಮಲವಿಶಾಲದಲಶ್ರಿಯಾಪಿ
ದೂರೇ ಗತಂ ತವ ವಿಲೋಚನಧಾಮಧಾರಾಂ ।
ದೃಷ್ಟ್ವೇತ್ಯದೃಷ್ಟಪರಿಪಾಕವಿಚಿಂತನೇನ
ತದ್ಗೌರಿ ಶಂಕರವಿನೋದಮುದೇ ಕದಾ ಸ್ಯಾತ್ ॥೬೮॥

ಸಿರುವ ಈ ನಿನ್ನ ದಿವ್ಯ ದೇಹವು ಈಗ ಶಂಕರನ ವಿಹಾರಕ್ಕೆ ಅನುಕೂಲವಾಗದ ಪಕ್ಷದಲ್ಲಿ ನಿಜವಾಗಿಯೂ ವ್ಯರ್ಥವೇ ಅಲ್ಲವೇ! (ಶಂಕರನ ವಿಹಾರಕ್ಕನುಕೂಲ ವಾಗದ ಈ ನಿನ್ನ ದಿವ್ಯದೇಹವು ಕೇವಲ ವ್ಯರ್ಥವೆಂದೇ ಭಾವವು) ॥೬೬॥

ಅಂಬಿಕೇ! ಈ ನಿನ್ನ ಸುಂದರವಾದ ಮುಖಕಮಲವು ಅಮೃತಕಿರಣನಾದ ಪೂರ್ಣಚಂದ್ರನ ಬಿಂಬವನ್ನೇ ನಗಿಸುತ್ತಿರುವಂತೆ ಮನೋಹರವಾಗಿರುವುದು. ಇಂತಹ ಮುಖಕಮಲವು ಪ್ರತಿಕ್ಷಣದಲ್ಲಿಯೂ ಚಂದ್ರಮೌಳಿಯ ಲೀಲಾವಿನೋದಕ್ಕೆ ಪಾತ್ರವಾಗಿ, ಮಧುರವಾದ ಮಂದಹಾಸದಿಂದ ಯುಕ್ತವಾಗದೇ ಹೋದರೆ ಇದಕ್ಕೆ ಯಾವ ಪ್ರಯೋಜನವಿದ್ದೀತು? ॥೬೭॥

ಗೌರಿಯೇ, ನಿನ್ನ ವಿಶಾಲವಾದ ಕಣ್ಣುಗಳ ಧಾರಾಕಾರವಾದ ಕಾಂತಿಯನ್ನು ನೋಡಿ ನಿರ್ಮಲವೂ ವಿಶಾಲವೂ ಆದ ಕನ್ನೈದಿಲೇ ದಳಗಳ ಕಾಂತಿಯೂ ಸಹ ತಿರಸ್ಕೃತವಾಗಿ ಬಹುದೂರ ಹೋಯಿತು ಎಂದು ನಿನ್ನ ಅದೃಷ್ಟದ ಮಹಿಮೆಯನ್ನು ಯೋಚಿಸುತ್ತಿರುವೆನು. ಇಂತಹ ಮನೋಹರವಾದ ನೇತ್ರವು ಮಹೇಶ್ವರನ ಪ್ರೀತಿ ಪೂರ್ವಕವಾದ ವಿನೋದಕ್ಕೆ ಯಾವಾಗ ಪಾತ್ರವಾಗುವುದೋ ನಾ ಕಾಣೆನು. ॥೬೮॥

ನೀಲಾಚಲಾಲಿಕುಲಕಾಂತಿವಿಶೇಷಪೂರಂ
ದೂರೀಕರೋತಿ ಚಿಕುರಪ್ರಚುರಪ್ರಭಾ ತೇ ।
ಏಷಾ ತ್ರಿಲೋಚನವಿಲೋಚನಗೋಚರಾ ಚೇ
ದ್ಗೌರಿ ಪ್ರಮೋದಜನನೀ ಜನನಿ ಸ್ವತಃ ಸ್ಯಾತ್ ॥೬೯॥

ಧೀರೇ ಸುಮೇರುಶಿಖರಾತಿಮನೋಹರಶ್ರೀಃ
ದೂರಂ ಪ್ರಯಾತಿ ವಿಪುಲಂ ಕುಚಮಂಡಲಂ ತೇ ।
ದೃಷ್ಟ್ವಾ ತದೇತದಧುನಾ ಗಿರಿಜೇ ಗಿರೀಶ
ದೃಷ್ಟಂ ಪ್ರಕೃಷ್ಟಮತಿಪುಷ್ಟಿಮುಪೇತ್ಯಹೃಷ್ಟಂ ॥೭೦॥

ರೋಮಾವಲಿಸ್ತ್ರಿವಲಿಸಂವಲಿತಾ ತನೋತಿ
ಕಾಮಧ್ವಜಶ್ರಿಯಮಿಯಂ ಗಿರಿಜೇ ಪಿಧೇಹಿ ।
ಏಷಾ ಸ್ಮೃತಾಪಿ ಮದನಜ್ವರಭೂರಿಧಾರಾಂ
ಸಂಪಾದಯಿಷ್ಯತಿ ಹರಾಯ ಚಿರಾಯ ಧಾರಾಂ ॥೭೧॥

ನೀಲಪರ್ವತ ಮತ್ತು ಭ್ರಮರಪಂಕ್ತಿ ಇವುಗಳ ಪೂರ್ಣವಾದ ಕಾಂತಿ ವಿಶೇಷವನ್ನೆಲ್ಲಾ ಈ ನಿನ್ನ ಮುಂಗುರುಳಿನ ಕಾಂತಿಯು ತಿರಸ್ಕರಿಸುತ್ತಿದೆ. ಜಗಜ್ಜನನಿಯೇ, ಈ ನಿನ್ನ ಮುಂಗುರುಳಿನ ಪ್ರಭೆಯು ಮುಕ್ಕಣ್ಣನಾದ ಮಹೇಶನ ದೃಷ್ಟಿಗೆ ಗೋಚರವಾದರೆ, ನಿಜವಾಗಿಯೂ ಮಹಾದೇವನಿಗೆ ಆನಂದ ವುಂಟಾಗುವುದು. ಇದೇ ನಿನ್ನ ಮುಂದಲೆಯ ಕೂದಲಿಗೆ ಸಾರ್ಥಕತೆಯೆಂದು ತಿಳಿ. ॥೬೯॥

ಸುಮೇರುಪರ್ವತದ ಅತ್ಯಂತ ಮನೋಹರವಾದ ಕಾಂತಿಯು, ನಿನ್ನ ವಿಸ್ತಾರವೂ ಉನ್ನತವೂ ಆದ ಸ್ತನಮಂಡಲವನ್ನು ನೋಡಿ ನಾಚಿಕೆಯಿಂದ ದೂರ ಹೋಗುತ್ತಿದೆ. ಗಿರಿಜೆಯೇ, ಈ ನಿನ್ನ ಮನೋಹರವಾದ ಕುಚಮಂಡಲವನ್ನು ಈಗ ಮಹೇಶನು ನೋಡಿದರೆ, ಇದು ಉತ್ಕೃಷ್ಟವೆನಿಸುವುದಲ್ಲದೆ ಅತ್ಯಂತ ಪುಷ್ಟಿ ಯನ್ನು ಹೊಂದಿ ಪತಿಗೆ ಪ್ರಿಯವೆನಿಸುವುದು. ॥೭೦॥

ಎಲೌ ಗಿರಿಜೆಯೇ, ತ್ರಿವಲಿಗಳಿಂದ ಕೂಡಿದ ಈ ನಿನ್ನ ರೋಮಪಂಕ್ತಿಗಳು ಮನ್ಮಥನ ಧ್ವಜವಾದ ಕಪ್ಪಾದ ಮೀನಿನ ಕಾಂತಿಯನ್ನು ಪ್ರಕಾಶಪಡಿಸುತ್ತಿರುವುವು.

ತ್ವತ್ಪಾದಪದ್ಮಮತಿಸುಂದರವಿದ್ರುಮಾದಿ
ಮುದ್ರಾದ್ರವಶ್ರಿಯಮಿದಂ ನ ತಿರಸ್ಕರೋತಿ ।
ತುಚ್ಛಸ್ಯ ತಸ್ಯ ನ ತಿರಸ್ಕ್ರಿಯಯಾ ಫಲಂ ಸ್ಯಾ
ದಿತ್ಯಂಬ ಶಂಕರಹರಾರಿಮನೋಹರಂ ತೇ ? ॥೭೨॥

ಸಂಪೂರ್ಣದೋಹದಮದಾಂಧಮರಾಲಕಾಂತಾ
ಮತ್ತೇಭದಾರಗಮನಾನಿ ತಿರಸ್ಕರೋತಿ ।
ತ್ವತ್ಪಾದಪದ್ಮಚಲನಂ ನವಚಂದ್ರಮೌಳಿ
ಲೀಲಾರಸಾಸ್ಪದಮಿದಂ ನ ಮುದಂ ತನೋತಿ ॥೭೩॥

ಅಂಬಾಧುನಾ ಘನಮಿದಂ ಜಘನಂ ತವೇದಂ
ನೂನಂ ನದೀಷು ಪುಲಿನಂ ಪ್ರಕಟೀಕರೋತಿ ।

ಇದನ್ನು ಕಾಣದಂತೆ ವಸ್ತ್ರದಿಂದ ಮರೆಮಾಚುವವಳಾಗು. ಈ ರೋಮರಾಜಗಳನ್ನು ಸ್ಮರಿಸಿದ ಮಾತ್ರದಿಂದಲೇ ಪರಮೇಶ್ವರನಿಗೆ ಅಪಾರವಾದ ಮನ್ಮಥಜ್ವರವು ಸಂತತವಾಗಿ ಉಂಟಾದೀತು. ॥೭೧॥

ಅಂಬ, ಈ ನಿನ್ನ ಪಾದಕಮಲದ ಸೌಂದರ್ಯವು ಅತಿ ಸುಂದರವಾದ ಹವಳವೇ ಮುಂತಾದ ಮುದ್ರೆಗಳ ದ್ರವರೂಪವಾದ ಕಾಂತಿಯನ್ನು ತಿರಸ್ಕರಿಸುತ್ತಿಲ್ಲ. ತುಚ್ಛವಾದ ಆ ವಿದ್ರುಮಾದಿಗಳನ್ನು ತಿರಸ್ಕರಿಸುವುದರಿಂದ ಶ್ರೇಷ್ಠವಾದ ನಿನ್ನ ಪಾದಕಮಲಕ್ಕೆ ಏನೂ ಪ್ರಯೋಜನವಿಲ್ಲವೆಂದು, ನಿನ್ನ ವಿಷಯದಲ್ಲಿ ಸರ್ವಮಂಗಳಪ್ರದನಾದ ಮಹೇಶ್ವರನ ಮನಸ್ಸಿನ ಒಳ ಅಭಿಪ್ರಾಯವಿರುವುದು. ॥೭೨॥

ಸಂಪೂರ್ಣವಾದ ಗರ್ಭದ ಬಯಕೆಯಿಂದ ಕೂಡಿ ಮದಯುಕ್ತವಾಗಿರುವ ಹಂಸಸ್ತ್ರೀಯರುಗಳ (ಹೆಣ್ಣು ಹಂಸಗಳ) ಮತ್ತು ಮದಿಸಿದ ಆನೆಗಳ ಮಂದಗಮನವನ್ನೂ ಸಹ ನಿನ್ನ ಈ ಮಂದಗಮನವು ತಿರಸ್ಕರಿಸುತ್ತಿರುವುದು. ಇಂತಹ ನಿನ್ನ ಮೇಲುನಡಗೆಯು ಬಾಲಚಂದ್ರನನ್ನು ಶಿರೋಭೂಷಣವಾಗಿ ಧರಿಸಿರುವ ಪರಮೇಶ್ವರನ ಲೀಲಾರಸಕ್ಕೆ ಪಾತ್ರವಾಗಿ ಸಂತೋಷವನ್ನುಂಟುಮಾಡಲಾರದೇ ! ॥೭೩॥

ಅಂಬ, ಈ ನಿನ್ನ ಘನವಾದ ಜಘನಪ್ರದೇಶವು ಈಗ ನದಿಗಳಲ್ಲಿರುವ ಮರಳುದಿಣ್ಣೆಗಳನ್ನು ಅನುಕರಿಸುತ್ತಿರುವುದು. ಕಾದ ಸುವರ್ಣದಂತೆ ಕಾಂತಿಯುಕ್ತವಾಗಿರುವ ಈ ನಿನ್ನ ಒಡ್ಯಾಣಕ್ಕೆ (ಡಾಬಿಗೆ) ನಿನ್ನ ಉನ್ನತವಾದ ಜಘನಪ್ರದೇಶ

ಉತ್ತಪ್ತಕಾಂಚನವಿಶೇಷಿತಕಾಂಚಿಕಾಕಂ
ಕಿಂ ಜಾತಮುಸ್ಯ ಕಿಮಿಯಂ ಸ ತು ರಕ್ಷಣಾಯ ॥೭೪॥

ಆವರ್ತವೃತ್ತಿರಪಿ ಯಾ ಸರಿತಾಂ ಸದಾ ಸಾ
ತ್ವನ್ನಾಭಿದೇಶಸುಷುಮಾಶ್ರವಣೇನ ಲಜ್ಜಾ ।
ಕಿಂ ನಾಂಬುಮಜ್ಜನನಿಲೀನಕುಲಾಕುಲಾನಾಂ
ಹಾನಿಂ ಪ್ರವೃದ್ಧಸಕಲಾನನಲೋಕನೇನ ॥೭೫॥

ಕಿಂ ಗೌರೀ ವಿಷಮೇಕ್ಷಣಂ ಕ್ಷಣಮಪಿ ಜ್ಞಾತ್ವೈವ ನಾಯಾತಿ ಮಾಂ
ಯದ್ವಾ ಸಾತಿವಿಶಾಲಫಾಲವಿಪುಲಜ್ವಾಲಾನಲವ್ಯಾಕುಲಂ ।
ಯದ್ವಾ ಸನ್ನಿಹಿತತ್ರಿಶೂಲಮಥವಾ ಮಾಂ ಕಾಲಕೂಟಾಶನಂ
ಗೌರಂ ಮಾಮುರುದರ್ಪಸರ್ಪವಲಯಂ ಪಂಚಾಸ್ತ್ರಸಂಹಾರಕಂ ॥೭೬॥

ವನ್ನು ರಕ್ಷಣೆಮಾಡಲು ಸಾಮರ್ಥ್ಯವೇ ಇಲ್ಲ. ಹೀಗಿರುವ ಈ ಕಾಂಚಿಯು ಏಕೆ ನಿರ್ಮಿತವಾಯಿತೋ ಕಾಣೆನು. ॥೭೪॥

ನದಿಗಳ ನೀರಿನ ಹನಿಗಳೂ ಸಹ ನಿನ್ನ ನಾಭಿಮಂಡಲದ ಸುಕುಮಾರವಾದ ಸುಳಿಯ ಸೌಂದರ್ಯವನ್ನು ಕೇಳಿ ನಾಚಿಕೆಯಿಂದ ಯಾವಾಗಲೂ ನೀರಿನಲ್ಲೇ ಮುಳುಗಿರುತ್ತಾ ತಮಗೆ ಉಂಟಾಗಿರುವ ಹಾನಿಯನ್ನು ಶ್ರೇಷ್ಠರಾದವರು ನೋಡ ಬಾರದೆಂಬ ನೆಪದಿಂದಲೋ ಎಂಬಂತೆ ಒಳಗೇ ಸುತ್ತುತ್ತಿರುವುವು. (ಶ್ರೇಷ್ಠವಂಶದಲ್ಲಿ ಜನಿಸಿದವರಿಗೆ ಏನಾದರೂ ಅವಮಾನವುಂಟಾದರೆ ಆವರು ಒಳಗೇ ಪರಿತಪಿಸುವಂತೆ ಈ ನೀರಿನ ಸುಳಿಗಳೂ ತಮ್ಮ ಸೌಂದರ್ಯಕ್ಕಿಂತಲೂ ಉತ್ತಮವಾದ ಸೌಂದರ್ಯ ವುಳ್ಳ ನಿನ್ನ ಸುಕುಮಾರವಾದ ನಾಭಿಮಂಡಲದ ಸುಳಿಯನ್ನು ನೋಡಿ ನಾಚಿಕೆ ಯಿಂದ ಒಳಗೇ ಸಂಚರಿಸುತ್ತಿರುವುವೆಂದು ಭಾವ.) ॥೭೫॥

ಗೌರಿಯು "ನನ್ನನ್ನು ಇವನು ವಿರೂಪಾಕ್ಷನು (ಅಂದರೆ ವಿರೂಪನೆಂದು ಭಾವ) ಎಂದು ತಿಳಿದು ಏನಾದರೂ ಇನ್ನೂ ಬರುತ್ತಿಲ್ಲವೋ, ಅಥವಾ ವಿಶಾಲ ವಾದ ಹಣೆಯುಳ್ಳವನು, ಯಾವಾಗಲೂ ಇವನ ಫಾಲನೇತ್ರದಲ್ಲಿ ವಿಪುಲವಾದ ಜ್ವಾಲೆಯೇ ವ್ಯಾಪಿಸಿರುತ್ತದೆ. ಇದು ನನಗೆ ಭಯಂಕರವಾಗಿರುವುದು. ಅಲ್ಲದೆ ಈ ಮಹಾತ್ಮನು ಕಾಲಕೂಟವಿಷವನ್ನೇ ಭಕ್ಷಣೆಮಾಡಿದವನು, ಇವನ ಸಹವಾಸವು

ಸಮಾ ದೃಷ್ಟಿಸ್ತಸ್ಯಾಃ ಕುಟಿಲಚಟುಲಾಲೋಲನಲನಾ
ಭವಿತ್ರೀ ಫಾಲಾಗ್ನಿಂ ವಿಷಮಪಿ ಸಶೂಲಂ ಹರತಿ ಕಿಂ ।
ನ ಸಂವ್ಯಾಲಂ ಬಾಲಾ ಮದನಶರಮಾಲಾತಿವಿಮಲಾ
ವಿಶಾಲಾಂ ಲೀಲಾಂ ವಾ ಕಿಮಿತಿ ನ ಮುದಾ ಪಶ್ಯತಿ ಮುಹುಃ ॥೭೭॥

ಅಂಬಾ ಶಂಬರವೈರಿವೈರಿರುಚಿರವ್ಯಾಹಾರಸಾರಾದರಾ
ಧೀರಾಪ್ಯಸ್ರವಿಕಾರಸಾರಸರಸಾಸಾರಾನುಹಾರೈರಲಂ ।
ಸಾ ರೇಜೇ ವಿಕಲಂಕಸುಂದರಶರದ್ರಾಕಾನಿಶಾಸಾಯಕಾ ।
ಲೋಕಾಲೋಕನಶೋಕನಾಶಕವರಂ ಸಸ್ಮಾರ ಹಾರಂ ಚಿರಂ ॥೭೮॥

ಕಷ್ಟ. ಮತ್ತು ಯಾವಾಗಲೂ ಭಯಂಕರವಾದ ತ್ರಿಶೂಲವನ್ನೇ ಈ ಪರಮೇಶ್ವರನು ಹಿಡಿದಿರುವನು. ಶುಭ್ರವಾದ ದೇಹಕಾಂತಿಯುಳ್ಳವನಾದರೂ ದೊಡ್ಡ ಸರ್ಪವನ್ನೇ ಕಂಕಣವನ್ನಾಗಿ ಧರಿಸಿರುವನು. ಸಾಲದ್ದಕ್ಕೆ ಸರ್ವಜಗತ್ತನ್ನೂ ಸಂತೋಷಯುಕ್ತ ವಾಗುವಂತೆ ಮಾಡುತ್ತಿದ್ದ ಪಂಚಬಾಣನಾದ ಮನ್ಮಥನನ್ನೇ ಈ ಶಿವನು ಸಂಹಾರ ಮಾಡಿರುವನು, ಎಂಬ ಭಾವನೆಯಿಂದ ಗಿರಿಜೆಯು ಇನ್ನೂ ನನ್ನ ಸಮೀಪಕ್ಕೆ ಬರಲು ಅಂಜುತ್ತಿರಬಹುದು, ಎಂದು ಮಹಾದೇವನು ನಿನ್ನಗಲುವಿಕೆಯಿಂದ ತನ್ನ ಲ್ಲಿರುವ ದೋಷಗಳನ್ನೇ ಊಹಿಸುತ್ತಿರುವನು. ॥೭೬॥

ಹಿಂದೆ ನಿಷ್ಪಕ್ಷಪಾತದೃಷ್ಟಿಯಿಂದ ಕೂಡಿದ್ದ ದೇವಿಯು ಈಗ ಕುಟಿಲ ವಾದ ದೃಷ್ಟಿಯುಳ್ಳವಳಾಗಿ ಚಂಚಲವಾದ ತನ್ನ ನೇತ್ರವ್ಯಾಪ್ತಿಯಿಂದ ಹೀಗೇ ನಾದರೂ ಉದಾಸೀನಮಾಡುತ್ತಿರುವಳೇ ? ಬಾಣಪರಂಪರೆಯಂತೆ ಬಹು ನಿರ್ಮಲ ವಾದ ದೇಹಕಾಂತಿಯುಳ್ಳ ಈ ಬಾಲಿಕೆಯು ಮದಯುಕ್ತಳಾಗಿ ನನ್ನ ಫಾಲಾಗ್ನಿ ಯನ್ನೂ, ವಿಷವನ್ನೂ, ತ್ರಿಶೂಲವನ್ನೂ ಮತ್ತು ಕಂಕಣಸ್ಥಾನೀಯವಾಗಿರುವ ಸರ್ಪವನ್ನೂ ಸಹ ತನ್ನ ಸಾಮರ್ಥ್ಯದಿಂದ ತಡೆಯಲಾರಳೇ ಏನು ? ಹೀಗಿದ್ದರೂ ತನ್ನ ವಿಶಾಲವಾದ ಲೀಲೆಯನ್ನು ಪ್ರಕಟಪಡಿಸುತ್ತಾ ಏತಕ್ಕೋಸ್ಕರ ಪ್ರೀತಿಪೂರ್ವಕ ವಾಗಿ ನನ್ನನ್ನು ಸೇರುತ್ತಿಲ್ಲ ? ಎಂದು ಯೋಚಿಸುತ್ತಿರುವನು. ॥೭೭॥

ಹೀಗೆ ವಿಜಯಾಸಖಿಯು, ಶಂಬರಾಸುರನನ್ನು ನಿಗ್ರಹಿಸಿದ ಮನ್ಮಥನ ಶತ್ರುವೆನಿಸಿ ತನ್ನ ರಮಣನಾದ ಮಹಾದೇವನ ವಿಷಯದಲ್ಲಿ ಮನೋಹರವೂ ರಸಭರಿತವೂ ಆಗಿರುವಂತೆ ನುಡಿಯುತ್ತಿರಲು, ಆ ಮಾತುಗಳನ್ನು ಆದರದಿಂದ

ಲೀಲಾಕಲ್ಪಿತಕಲ್ಪಭೂರುಹವರಾಪಾರಾಂತರಾಲಸ್ಫುರ
ದ್ರತ್ನಾಕಾರಸುಮೇರುಧೀರರುಚಿರಾಕಾರಪ್ರಕಾರಾಕರೇ ।
ಧೀರೇ ಮಾರಶರಾತಿಸುಂದರಸರಸ್ತೀರೇ ವಿಹಾರೇ ಚಿರಂ
ವಾರಂ ವಾರಮಲಂ ವಿಹಾರಮಕರಂ ಗೌರಿ ಸ್ಮರಾರೇಃ ಪರಂ ॥೭೯॥

ಲಾಲಿಸುತ್ತಿರುವ ಧೀರಳಾದ ಅಂಬಿಕೆಯು, ತನ್ನ ಪತಿಯು ಸಾರವತ್ತಾದ ತ್ರಿಶೂಲವೇ ಮುಂತಾದ ಆಯುಧಗಳನ್ನು ಧರಿಸಿ ವಿರೂಪನೆಂದು ಹೇಳುತ್ತಿದ್ದರೂ, ಆ ಮಹೇಶ್ವರನಲ್ಲಿಯೇ ರಸಾಭಿನಿವೇಶವುಳ್ಳವಳಾಗಿ ಅವನ ಸನ್ನಿಧಿಯನ್ನೈದಿ ಸುಖಾನುಭವ ಹೊಂದಲು, ಉದ್ಯಾನದಲ್ಲಿ ಬೆಳೆದ ಸುಗಂಧ ಪುಷ್ಪಮಾಲೆಗಳನ್ನು ಧರಿಸಿದಳು. ಆ ಸಮಯದಲ್ಲಿ ದೇವಿಯು, ಯಾವ ಕಲಂಕವೂ ಇಲ್ಲದ ಸೌಂದರ್ಯವನ್ನು ತೋರ್ಪಡಿಸುತ್ತಿರುವ ಶರತ್ಕಾಲದ ಪೂರ್ಣಚಂದ್ರನಂತೆ ಮುಖಕಾಂತಿಯಿಂದ ಪ್ರಕಾಶಿಸುತ್ತಾ, ಸಕಲ ಲೋಕವನ್ನೂ ತನ್ನ ಕೃಪಾದೃಷ್ಟಿಯಿಂದ ನೋಡಿ, ಅವರ ದುಃಖವನ್ನು ನಿವಾರಣೆಮಾಡುವುದರಲ್ಲಿ ಸಮರ್ಥನಾದ ತನ್ನ ಪತಿ ಮಹೇಶ್ವರನನ್ನು ಪದೇ ಪದೇ ಧ್ಯಾನಮಾಡಿದಳು. ॥೭೮॥

ಎಲೌ ತಾಯಿಯೇ, ಮಹೇಶ್ವರನು ನಿನ್ನೊಡನೆ ವಿಹರಿಸುವುದಕ್ಕೋಸ್ಕರ ಲೀಲಾಮಾತ್ರದಿಂದ ಅನೇಕ ಶ್ರೇಷ್ಠಜಾತಿಯ ಕಲ್ಪವೃಕ್ಷಗಳನ್ನು ನಿರ್ಮಿಸಿ ಅದರ ಮಧ್ಯದಲ್ಲಿ ಒಂದು ಸುಂದರವಾದ ಸರೋವರವನ್ನು ಸಹ ರಚಿಸಿರುವನು. ಆ ಸರೋವರದ ಸುತ್ತಲೂ ಅನೇಕ ರತ್ನಮಯವಾದ ಕಲ್ಲುಗಳೂ ಸುಮೇರುಪರ್ವತದಂತೆ ಉನ್ನತವೂ ಮನೋಹರವೂ ಆದ ಅನೇಕ ಪ್ರಾಕಾರಗಳೂ ರಚಿಸಲ್ಪಟ್ಟಿವೆ. ಅಲ್ಲದೇ ಮನ್ಮಥನ ಬಾಣಗಳಾದ ಕಮಲ, ಅಶೋಕ, ಮಾವಿನ ಹೂ, ನವಮಲ್ಲಿಕಾ ಮತ್ತು ಕನ್ನೈದಿಲೇ ಇವೇ ಮುಂತಾದ ಪರಿಮಳ ಪುಷ್ಪಗಳು ಸುಂದರವಾಗಿ ಪ್ರಕಾಶಿಸುತ್ತಿರುವುವು. ಈರೀತಿ ನಿನ್ನಗಲುವಿಕೆಯಿಂದ ಕಾತರನಾಗಿ ಉದ್ವಿಗ್ನನಾಗಿರುವ ಮನ್ಮಥನ ಶತ್ರುವಾದ ಮಹಾದೇವನಿಗೆ ಶಾಂತಿಯುಂಟಾಗುವುದಕ್ಕೋಸ್ಕರ ನಾನು ಪದೇ ಪದೇ ಪ್ರಭುವು ವಿಹರಿಸಲೆಂದು ಅವನೊಡನೆ ಸಂಚರಿಸುತ್ತಾ ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟೆನು. ಆದರೂ ಆ ಪರಮೇಶ್ವರನಿಗೆ ಅದರಲ್ಲಿ ಉತ್ಸಾಹವೇ ಉಂಟಾಗಲಿಲ್ಲ. ॥೭೯॥

**ಸೌಂದರ್ಯೇ ಸುರವಾಹಿನೀ ತರಲಿಮಾ ಭೂಮಾ ಭವಾನೀತಿ ಯಾ
ಪ್ರೇಮಾ ಸೋಮಕಲಾವತಂಸಮಹಿಮಾ ಸ್ಥೇಮಾ ಸುಸಂವರ್ಧತಾಂ ।
ತಸ್ಯೈವ ಪ್ರಥಿಮಾ ತಥೈವ ಲಘಿಮಾ ತಸ್ಯಾಸ್ತ್ವಯಂ ದ್ರಾಘಿಮಾ
ತಸ್ಯಾಯಂ ಮಹಿಮಾ ತಥಾ ಮಧುರಿಮಾ ಸೋಮಾನ್ವಿತಂ ತೇಜಸಃ॥೪೦॥**

**ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ವಿಜಯಾ ಗೌರೀ ಸಂವಾದೇ ಶಿವಮನೋಽಭಿಪ್ರಾಯವರ್ಣನಂ
ನಾಮ ಅಷ್ಟದಶೋಽಧ್ಯಾಯಃ**

ದೇವಿ, ಭವಾನಿಯು ಸೌಂದರ್ಯದಲ್ಲಿ ದೇವನದಿಯಾದ ಗಂಗೆಗೆ ಸಮಾನಳು. ಅಂದರೆ ನಿಷ್ಕಲ್ಮಷವೂ ಪವಿತ್ರವೂ ಅಗಾಧವೂ ಅಪಾರವೂ ಆದ ಸೌಂದರ್ಯವುಳ್ಳವಳು. ಚಂಚಲಸ್ವಭಾವಕ್ಕೆಲ್ಲಾ ನೀನೇ ಆಶ್ರಯಳು. ಚಂದ್ರಚೂಡನಾದ ಮಹೇಶ್ವರನ ಮಹಿಮೆಯೂ ಪ್ರೇಮವೂ ನಿನ್ನಲ್ಲಿ ಸ್ಥಿರವಾಗಿ ಅಭಿವೃದ್ಧಿಹೊಂದಲಿ. ಆ ಮಹೇಶ್ವರನ ಪ್ರಖ್ಯಾತಿಯೂ ಹಾಗೆಯೇ ಲಘಿಮಾ (ಸಕಲ ಪದಾರ್ಥಗಳೂ ತನಗಿಂತ ಕಡಿಮೆ ಎಂಬ ಭಾವವೂ) ಮತ್ತು ತಾನೇ ಸರ್ವಶ್ರೇಷ್ಠನೆಂಬ ಬುದ್ಧಿಯೂ (ದ್ರಾಘಿಮಾ) ಆ ಮಹೇಶ್ವರನ ಪ್ರಭಾವವೂ, ಅಲ್ಲದೆ ಮನೋಹರನಾದ ಆ ಮಹಾದೇವನ ಮಾಧುರ್ಯಗುಣಗಳೂ, ಮತ್ತು ದಿವ್ಯತೇಜಸ್ಸುಗಳೂ ಅತಿಶಯವಾಗಿ ನಿನ್ನಲ್ಲಿ ಪ್ರತಿಫಲಿಸಲಿ. ||೪೦||

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದಲ್ಲಿ ಮೊದಲನೆಯ ಭಾಗದ
ವಿಜಯಾ ಮತ್ತು ಗೌರೀ ಇವರ ಸಂವಾದದಲ್ಲಿ ಶಿವನ ಮನಸ್ಸಿನ ಅಭಿಪ್ರಾಯ
ವರ್ಣನೆಯೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಏಕೋನವಿಂಶೋಽಧ್ಯಾಯಃ

|| ವ್ಯಾಸ ಉವಾಚ ||

ಇತಿ ತಾಂ ವಿಜಯಾವಾಣೀಂ ಸಾಕ್ಷಾದ್ವಾಣೀಮಿವ ಸ್ಥಿತಾಮ್ ।
ಶುಶ್ರಾವ ಶ್ರವಣಾನಂದಧಾರಾಮಿವ ಮನೋಹರಾಮ್ ॥೧॥

ತತಃ ಪರಂ ದುಕೂಲಾನಿ ಸೃಷ್ಟೇನ ಗಿರಿಶೇನ ಸಾ ।
ಪ್ರಕೃಷ್ಟಾನಿ ವಿಲೋಕ್ಯಾಂಬಾ ಚಂದ್ರಬಿಂಬಾನನಾ ಬಭೌ ॥೨॥

ಪರಿಧಾಯ ತತೋ ಧೀರಾ ವಸನಾನಿ ಸವಾಸನಮ್ ।
ಶನೈರ್ವಿಲೋಕ್ಯ ವಸನಂ ಕಮನೀಯತರಂ ಶಿವಾ ॥೩॥

ಹತ್ತೊಂಬತ್ತನೆಯ ಅಧ್ಯಾಯ

ಈ ರೀತಿ, ಸಾಕ್ಷಾತ್ಸರಸ್ವತಿಯ ಮಾತುಗಳಂತೆಯೇ ಧಾರಾಕಾರವಾಗಿ ಶ್ರವಣಾನಂದವನ್ನುಂಟುಮಾಡುತ್ತಾ ಮನೋಹರವಾಗಿರುವ ವಿಜಯಾಸಖಿಯ ಮಾತುಗಳನ್ನು ಲಾಲಿಸಿ ಗಿರಿಜೆಯು ಸಂತೋಷಭರಿತಳಾದಳು. ||೧||

ಅನಂತರ ಚಂದ್ರಬಿಂಬದಂತೆ ಸುಂದರವೂ, ವರ್ತುಲವೂ ಆದ ಮುಖದಿಂದ ಶೋಭಿಸುತ್ತಿರುವ ಅಂಬಿಕೆಯು, ಮಹೇಶ್ವರನು ತನಗೋಸ್ಕರ ರಚಿಸಿ ಕಳುಹಿಸಿ ಕೊಟ್ಟಿರುವ ಶ್ರೇಷ್ಠವಾದ ರೇಷ್ಮೆಯ ವಸ್ತ್ರಗಳನ್ನು ನೋಡಿ ಸಂತುಷ್ಟಳಾದಳು. ||೨||

ಆಮೇಲೆ ಧೀರಳಾದ ದೇವಿಯು ಆ ಮನೋಹರವಾದ ವಸ್ತ್ರಗಳನ್ನು ಮಂದಹಾಸದಿಂದ ನೋಡುತ್ತಾ ಅಲಂಕಾರಮಾಡಿಕೊಂಡಳು. ||೩||

ಧಮ್ಮಿಲ್ಲಸ್ಯ ಪರಿಷ್ಕಾರಂ ಸೀಮಂತಸ್ಯಾಪಿ ಸಾ ಸಖೈಃ ।
ಚಕಾರ ಗೌರೀ ತ್ವರಯಾ ರತ್ನಾಭರಣಭೂಷಿತಾ ॥೪॥

ತತಃ ಪರಂ ವಿಚಿತ್ರೇಷು ರತ್ನಪಾತ್ರೇಷು ಕೋಟಿಶಃ ।
ಪಕ್ವಾನ್ನಾನಿ ನಿಧಾಯಾಂಬಾ ಬುಭುಜೇ ಸಸುತಾ ಸತೀ ॥೫॥

ತತಸ್ತಾಂಬೂಲಮಾದಾಯ ಜಯಯಾ ವಿಜಯಾಯ ಚ ।
ದತ್ತಂ ಭವಾನೀ ರುರುಚೇ ಚಿರಮಾನಂದವಾಹಿನೀ ॥೬॥

ಹರೋಪಹಾರಶೇಷಾನ್ನಂ ಪ್ರೇಷಯಾಮಾಸ ಶೈಲಜಾ ।
ಗಣೇಭ್ಯಸ್ತೇ ಗಣಾಧೀಶಾಸ್ತುಷ್ಟಾಃ ಪುಷ್ಟಾಃ ಪರಸ್ಪರಂ ॥೭॥

ದೇವದುಂದುಭಯೋ ನೇದುಸ್ತೂರ್ಯಧ್ವನಿವಿಜೃಂಭಿತಾಃ ।
ಶಂಖದುಂದುಭಿನಿರ್ಘೋಷೈರ್ವ್ಯಾಪ್ತಂ ಶಂಕರಮಂದಿರಂ ॥೮॥

ಅನಂತರ ಗೌರೀದೇವಿಯು ರತ್ನಮಯವಾದ ಆಭರಣಗಳನ್ನು ತೊಟ್ಟು, ಜಾಗ್ರತೆಯಾಗಿ ತಲೆಯ ಗಂಟಿನ ಪರಿಷ್ಕಾರವನ್ನೂ ಮತ್ತು ಬೈತಲೆಯ ತಿದ್ದುವಿಕೆಯನ್ನೂ ತನ್ನ ಉಗುರುಗಳಿಂದಲೇ ಮಾಡಿಕೊಂಡಳು. ॥೪॥

ಆಮೇಲೆ ಅಂಬಿಕೆಯು ಚಿತ್ರವಿಚಿತ್ರವಾಗಿ ರಚಿಸಿರುವ ರತ್ನಮಯವಾದ ಪಾತ್ರೆಗಳಲ್ಲಿ ಪಕ್ವವಾದ ಅನ್ನಗಳನ್ನು ಬಡಿಸಿ, ಕುಮಾರಸ್ವಾಮಿಯೊಡನೆ ಕುಳಿತುಕೊಂಡು ಸಂತೋಷದಿಂದ ಭೋಜನಮಾಡಿದಳು. ॥೫॥

ಅನಂತರ ಜಯಾ ಎಂಬ ಸಖಿಯು ವಿಜಯವಾಗಲಿ ಎಂದು ಕೊಟ್ಟ ತಾಂಬೂಲವನ್ನು ಸ್ವೀಕರಿಸಿ ಭವಾನಿಯು ಬಹಳಕಾಲ ಎಲ್ಲರಿಗೂ ಆನಂದವನ್ನುಂಟುಮಾಡುತ್ತಾ ಪ್ರಕಾಶಿಸಿದಳು. ॥೬॥

ಆಮೇಲೆ ಗಿರಿರಾಜಕುಮಾರಿಯು ಪರಮೇಶ್ವರನಿಗೆ ನಿವೇದನಮಾಡಿ ಉಳಿದ ಅನ್ನವನ್ನು ತನ್ನ ಗಣಗಳಿಗೆಲ್ಲಾ ಕಳುಹಿಸಿಕೊಟ್ಟಳು. ಆ ಗಣಾಧ್ಯಕ್ಷರೆಲ್ಲರೂ ಸಂತುಷ್ಟರಾಗಿ ಪರಸ್ಪರ ಆ ಅನ್ನಶೇಷವನ್ನು ಊಟಮಾಡಿ ತೃಪ್ತಿಹೊಂದಿ ದೃಢಕಾಯರಾದರು. ॥೭॥

ಆ ಸಮಯದಲ್ಲಿ ದೇವದುಂದುಭಿವಾದ್ಯಗಳು ತೂರ್ಯಧ್ವನಿಗಳಿಂದ ಬೆರತು ವಿಶೇಷವಾಗಿ ಧ್ವನಿಗೈದವು. ಆ ಶಂಕರನ ಮಂದಿರವೆಲ್ಲವೂ ಶಂಖ ಮತ್ತು ದುಂದುಭಿ ಈ ವಾದ್ಯಗಳ ಘೋಷದಿಂದ ತುಂಬಿಹೋಯಿತು. ॥೮॥

ಅಪೂರ್ವಂ ದುಂದುಭಿಧ್ವಾನಂ ಧ್ಯಾನಾರೂಢೋಽಪಿ ಶಂಕರಃ ।
ದಿವ್ಯಾಭರಣಸಂಕೀರ್ಣಸ್ಫುಟಕರ್ಣಪುಟೈಃ ಪಪೌ ॥೯॥

ತತಃ ಕೋಽಯಮಪೂರ್ವೋಽತ್ರ ದುಂದುಭಿಧ್ವನಿರಿತ್ಯಪಿ ।
ಮೃಡಸ್ತಂಡಿಂ ಸಮಾಹೂಯ ಬಾಢಮೂಚೇ ವಚಸ್ತದಾ ॥೧೦॥

ಕೋಽಯಂ ಡಿಂಡೀರವಸ್ತಂಡೇ ಮಂಡನಂ ಕರ್ಣಮಂಡಲೇ ।
ಗೌರೀ ಪ್ರಾಯಃ ಸಮಾಯಾತಿ ನ ವಾ ತತ್ತ್ವಂ ವಿಚಾರಯ ॥೧೧॥

ಇತ್ಯುಕ್ತೋ ದಂಡವದ್ಭೂಮೌ ತಂಡೀ ನತ್ವಾ ಮೃಡಂ ತತಃ ।
ವಿಮಾನರತ್ನಮಾರುಹ್ಯ ಸ ಯಯೌ ತ್ವರಯಾ ದ್ವಿಜಾಃ ॥೧೨॥

ತದ್ವಿಮಾನಂ ತದಾ ಗೌರೀ ದೂರಾಲ್ಲೋಚನಗೋಚರಂ ।
ಚಕಾರ ತರಸಾ ಧೀರಾ ಕಿಮೇತದಿತಿ ವಿಸ್ಮಿತಾ ॥೧೩॥

ಶಂಕರನು ತಾನು ಧ್ಯಾನಮಗ್ನನಾಗಿದ್ದರೂ ಅಪೂರ್ವವಾಗಿ ಭೋರ್ಗರೆಯುತ್ತಿರುವ ದುಂದುಭಿಧ್ವನಿಯನ್ನು, ದಿವ್ಯಾಭರಣಗಳಿಂದಲಂಕೃತವಾಗಿರುವ ತನ್ನ ಕಿವಿಗಳಿಂದ ಸ್ಪಷ್ಟವಾಗಿ ಕೇಳಿದನು. ॥೯॥

ಆಗ ಮೃಡಮೂರ್ತಿಯೆನಿಸಿದ ಶಿವನು ಅಪೂರ್ವವಾದ ಈ ದುಂದುಭಿಧ್ವನಿಯಾವುದು ಎಂಬುದನ್ನು ತಿಳಿದುಕೊಂಡುಬರುವುದಕ್ಕೋಸ್ಕರ ತಂಡಿಯನ್ನು ಕರೆದು, ಅವನಿಗೆ ಹೀಗೆ ಅಪ್ಪಣೆಮಾಡಿದನು. ॥೧೦॥

"ಎಲೈ ತಂಡಿಯೇ, ಈ ರೀತಿ ನಮ್ಮ ಕರ್ಣಕುಹರವನ್ನು ಇಂಪುಗೊಳಿಸುತ್ತಿರುವ ಡಿಂಡಿಮವಾದ್ಯದ ಧ್ವನಿ ಯಾವುದಿರಬಹುದು? ಪ್ರಾಯಶಃ ಗೌರಿಯೇನಾದರೂ ಬರುತ್ತಿರುವಳೇನೋ, ಯಾವುದನ್ನೂ ಕೂಡಲೇ ವಿಚಾರಿಸು" ಎಂದು ಶಿವನು ತಂಡಿಗೆ ಹೇಳಿದನು. ॥೧೧॥

ಹೀಗೆ ಪರಮೇಶ್ವರನಿಂದ ಆಜ್ಞಪ್ತನಾದ ತಂಡಿಯು, ವಿನಯದಿಂದ ಮೃಡನಿಗೆ ದಂಡಪ್ರಣಾಮಮಾಡಿ, ಅನಂತರ ಶ್ರೇಷ್ಠವಾದ ವಿಮಾನವನ್ನೇರಿ ಜಾಗ್ರತೆ ವಿಚಾರಿಸಲು ಹೊರಟನು. ॥೧೨॥

ಆಗ ಗೌರಿಯು ದೂರದಿಂದಲೇ ತನ್ನ ದೃಷ್ಟಿಗೆ ಗೋಚರವಾದ ಈ ವಿಮಾನವನ್ನು ನೋಡಿ, ಧೀರಳಾದ ಅವಳು; ಇದೇನು? ಇದು ಯಾರ ವಿಮಾನವಿರಬಹುದು? ಎಂದು ಆಶ್ಚರ್ಯಗೊಂಡಳು. ॥೧೩॥

ಅತ್ಯದ್ಭುತಂ ವಿಲೋಕ್ಯಾಂಬಾ ತದ್ವಿಮಾನಂ ಮನೋಹರಂ ।
ಸಾದರಂ ಹಾರಮಿತ್ಯೇವ ಹೃಷ್ಟಾ ಪುಷ್ಟಾ ಪ್ರಕೃಷ್ಟಧೀಃ ॥೧೪॥

ತತಃ ಕುಮಾರಮಾಹೂಯ ಕಸ್ಯೇದಂ ಪುಷ್ಪಕಂ ಶಿಶೋ ।
ಇದಂ ಹಾರಮುದಾರಂ ಕಿಂ ತರಸಾ ತದ್ವಿಚಾರಯ ॥೧೫॥

ತತಃ ಕುಮಾರಸ್ತಂ ದೃಷ್ಟ್ವಾ ಹಾರಂ ಧ್ವಜವಿವರ್ಜಿತಂ ।
ನ ಹಾರಂ ಹರಸಂಬಂಧೀತ್ಯುವಾಚ ವಚನಂ ಚ ಸಃ ॥೧೬॥

ತತೋ ಬಹಿರ್ಗತಃ ಸ್ಕಂದಸ್ತದ್ವಿಚಾರಾಯ ಸಾದರಂ ।
ತತಃ ಸತ್ವರಮೇವಾತ್ರ ಸ ತಂಡಿಃ ಸಮುಪಾಗತಃ ॥೧೭॥

ಅತ್ಯದ್ಭುತವೂ ಅತಿ ಮನೋಹರವೂ ಆಗಿರುವ ಆ ತಂಡಿಯ ವಿಮಾನವನ್ನು ನೋಡಿ ಅಂಬಿಕೆಯು, ಆದರಪೂರ್ವಕವಾಗಿ ಇದು ನಿಜವಾಗಿ ಪರಮೇಶ್ವರನ ವಿಮಾನವೇ ಎಂದು ಉತ್ತಮಭಾವನೆಯುಳ್ಳವಳಾಗಿ ಸಂತೋಷ ಹೊಂದಿ ತುಷ್ಟಳಾದಳು. ॥೧೪॥

ಅನಂತರ ಕುಮಾರಸ್ವಾಮಿಯನ್ನು ಕರೆದು ಮಗು! ಈ ಪುಷ್ಪಕವಿಮಾನವು ಯಾರದ್ದು? ಇದೇನಾದರೂ ಉದಾರಗುಣ ಪರಿಪೂರ್ಣನಾದ ಪರಮೇಶ್ವರನ ವಿಮಾನವೇ ಆಗಿರುವುದೇ ಎಂಬುದನ್ನು ಕೂಡಲೇ ವಿಚಾರಿಸು? ಎಂದು ಹೇಳಿದಳು. ॥೧೫॥

ಆಗ ಕುಮಾರನು ಆ ವಿಮಾನವನ್ನು ನೋಡಿ, ಅದು ಈಶ್ವರನ ಧ್ವಜ ಚಿಹ್ನೆಯಿಂದ ಯುಕ್ತವಾಗಿಲ್ಲ. ಆದುದರಿಂದ ಪರಮೇಶ್ವರನ ವಿಮಾನವಲ್ಲ. ಆದರೆ ಅವನ ಸಂಬಂಧವಾದ ಬೇರೆ ಯಾರ ವಿಮಾನವೋ ಆಗಿರುವುದು, ಎಂದು ಗಿರಿಜೆಗೆ ಹೇಳಿದನು. ॥೧೬॥

ಹೀಗೆ ತನ್ನ ತಾಯಿಗೆ ತಿಳಿಸಿ, ಹೊರಗಡೆ ಸರಿಯಾದ ಸಮಾಚಾರವನ್ನು ತಿಳಿದುಕೊಂಡು ಬರುತ್ತೇನೆಂದು ಕುಮಾರಸ್ವಾಮಿಯು ಹೋದನು. ಕೂಡಲೇ ಅದೇ ಸಮಯಕ್ಕೆ ಆ ತಂಡಿಯೂ ವಿಮಾನದಿಂದಿಳಿದು ಕುಮಾರನ ಸಮೀಪಕ್ಕೆ ಬಂದನು. ॥೧೭॥

ಸ ನತ್ವಾ ದಂಡವದ್ಭಕ್ತ್ಯಾ ಕುಮಾರಂ ನತಕಂಧರಃ ।
ವಿಲಂಬೋ ನಾಂಬಿಕಾಕಾಂತ ಹಿತಾಯೇತ್ಯಬ್ರವೀನ್ಮುಹುಃ ॥೧೮॥

ತತಃ ಕುಮಾರಸ್ತ್ವರಯಾ ಗೌರೀಚರಣಪಂಕಜಂ ।
ನತ್ವಾ ಚಲಾಚಲಸುತೇ ತ್ವರಯೇತ್ಯಬ್ರವೀನ್ಮುದಾ ॥೧೯॥

ಅಯಂ ತಂಡೀ ಪ್ರಚಂಡೋಽಸಾವುದ್ದಂಡಗಣಸಾಶ್ರಯಃ ।
ತದ್ದೋರ್ದಂಡಬಲೇನೈವ ಶ್ರಾಂತಂ ಭೂಮಂಡಲಂ ಪುರಾ ॥೨೦॥

ತ್ವರಯಾ ಪ್ರೇಷಿತಃ ಸೋಽಪಿ ಶಂಕರೇಣ ಸಮಾಗತಃ ।
ಅತಃ ಪರಮವಸ್ಥಾನಮತ್ರಾಪ್ಯನುಚಿತಂ ಶಿವೇ ॥೨೧॥

ವಿಮಾನಂ ರತ್ನಸನ್ನದ್ಧಂ ತವ ತದ್ಧಿ ಮನೋಹರಂ ।
ತವಾರೋಹಣಮಾತ್ರೇಣಾಪ್ಯಾನಂದೋ ವೃದ್ಧಿಮೇಷ್ಯತಿ ॥೨೨॥

ಆಗ ಆ ತಂಡಿಯು ಕುಮಾರನಿಗೆ, ಭಕ್ತಿಯಿಂದ ದಂಡಪ್ರಣಾಮಮಾಡಿ, ತಲೆ ಬಗ್ಗಿಸಿ ವಿನಯದಿಂದ, ಕುಮಾರ! ಇನ್ನು ತಡಮಾಡುವುದು ಅಂಬಿಕಾರಮಣನಾದ ಮಹೇಶ್ವರನಿಗೆ ಹಿತವನ್ನುಂಟುಮಾಡಿದಂತಾಗುವುದಿಲ್ಲ. ಆದುದರಿಂದ ಅಂಬಿಕೆಯು ಶೀಘ್ರವಾಗಿ ಹೊರಡುವುದು ಉಚಿತ ಎಂದನು. ॥೧೮॥

ಹಾಗೆಂದ ತಂಡಿಯ ಮಾತನ್ನು ಕೇಳಿದ ಕುಮಾರಸ್ವಾಮಿಯು ಜಾಗ್ರತೆ ತಾಯಿಯ ಸಮೀಪಕ್ಕೆ ಬಂದು, ಗೌರಿಯ ಚರಣಕಮಲಗಳಿಗೆ ನಮಸ್ಕರಿಸಿ, ಎಲೌ ಮಾತೆಯೇ ತ್ವರೆಮಾಡು? ಎಂದು ಸಂತೋಷದಿಂದ ನುಡಿದನು. ॥೧೯॥

ಅಮ್ಮ! ಈ ತಂಡಿಯು ತುಂಬಾ ಪ್ರಚಂಡನು. ಉದ್ದಂಡರೆನಿಸಿದ ಶಿವಗಣಗಳಿಗೆಲ್ಲಾ ಅಧಿಪತಿಯು. ಈ ತಂಡಿಯ ದಂಡರೂಪವಾದ ಬಾಹುಬಲದಿಂದಲೇ ಹಿಂದೆ ಈ ಭೂಮಂಡಲವೆಲ್ಲವೂ ನಡುಗಿಹೋಯಿತು. ॥೨೦॥

ಪರಮೇಶ್ವರನಿಂದ ಕಳುಹಿಸಲ್ಪಟ್ಟು ಜಾಗ್ರತೆಯಾಗಿ ಇವನು ಇಲ್ಲಿಗೆ ಬಂದಿರುವನು. ಎಲೌ ಮಂಗಳಾಂಗಿಯೇ! ಇನ್ನು ಮುಂದೆ ಇಲ್ಲಿ ವಾಸಮಾಡುವುದು ಅನುಚಿತ. ॥೨೧॥

ದೇವಿಯೇ, ನಾನಾ ರತ್ನಗಳಿಂದ ಸನ್ನದ್ಧವಾಗಿರುವ ವಿಮಾನವು ಮನೋಹರವಾಗಿ ನಿನ್ನ ಪ್ರಯಾಣಕ್ಕೆ ಸಿದ್ಧವಾಗಿರುವುದು. ನೀನು ಹತ್ತಿದ ಮಾತ್ರದಿಂದಲೇ ಈ ವಿಮಾನಕ್ಕೆ ಆನಂದವು ಅಭಿವೃದ್ಧಿಯಾಗುವುದು. ॥೨೨॥

ಇತಿ ತದ್ವಚನಂ ಶ್ರುತ್ವಾ ವಿಮಾನರಚನಾಂ ಶಿವಾ ।
ದೃಷ್ಟ್ವಾ ಪ್ರಹೃಷ್ಟಾ ಸಜಯಾ ತಯಾ ವಿಜಯಯಾ ಸಹ ॥೨೩॥

ತದಾರುಹ್ಯ ತತೋ ಗೌರೀ ವಿಮಾನಮತಿಶೋಭನಂ ।
ನಾಟ್ಯಾಂಗನಾರ್ಬುದಯುತಾ ಗಾನಂ ಶುಶ್ರಾವ ತತ್ಕೃತಂ ॥೨೪॥

ತತಃ ಕುಮಾರೇ ಚಲತಿ ತೇನ ತೇನ ಗಣೈಃ ಸಹ ।
ದುಂದುಭಿಧ್ವನಿಸಂಪೂರ್ಣಂ ಪುನಃ ಶಂಕರಮಂದಿರಂ ॥೨೫॥

ಪರಾರ್ಧಯೋಜನಾಯಾಮೇ ಯಾನೇ ಸ್ಥಿತ್ವಾ ಗಿರೀಂದ್ರಜಾ ।
ಪುನರ್ವಿಸ್ಮಯಮಾಪನ್ನಾ ವ್ಯಾಪನ್ನಾರ್ತಿವಿನಾಶಿನೀ ॥೨೬॥

ವಿದ್ಯುಲ್ಲತಾಸಮಾನಾನಿ ವೇತ್ರಾಣ್ಯತ್ಯುತ್ತಮಾನ್ಯಪಿ ।
ಅಪರಾಣಿ ದದರ್ಶಾಂಬಾ ಗಣಹಸ್ತಸ್ಥಿತಾನಿ ಸಾ ॥೨೭॥

ಈರೀತಿಯಾದ ವಚನವನ್ನು ಕೇಳಿ, ಅದರಂತೆಯೇ, ಸಿದ್ಧವಾಗಿದ್ದ ವಿಮಾನ ರಚನೆಯನ್ನೂ ನೋಡಿ ಸಂತೋಷದಿಂದ, ಜಯಾ ಮತ್ತು ವಿಜಯಾ ಎಂಬ ಇಬ್ಬರು ಸಖಿಯರೊಡನೆ ಗಿರಿಜಾದೇವಿಯು, ॥೨೩॥

ಆ ಶ್ರೇಷ್ಠವಾದ ವಿಮಾನವನ್ನೇರಿ, ಕೋಟ್ಯಂತರ ನಾಟ್ಯಸ್ತ್ರೀಯರೊಡನೆ ಪರಿವೃತಳಾಗಿ, ಆ ಗಂಧರ್ವಸ್ತ್ರೀಯರು ಮಾಡಿದ ಮಧುರವಾದ ಸಂಗೀತವನ್ನು ಕೇಳುತ್ತಿದ್ದಳು. ॥೨೪॥

ಅನಂತರ ಕುಮಾರಸ್ವಾಮಿಯು ತನ್ನ ಗಣಗಳೊಡನೆ ಮುಂದೆ ಸಂಚರಿಸುತ್ತಿರಲು, ಆಗ ಅನೇಕ ದುಂದುಭಿಧ್ವನಿಯುಂಟಾಗಿ ಅದರಿಂದ ಆ ಶಿವ ಮಂದಿರವೆಲ್ಲಾ ಸಂಪೂರ್ಣವಾಗಿ ವ್ಯಾಪ್ತವಾಯಿತು. ॥೨೫॥

ದುಃಖಿತರಾದ ಜನರ ಪೀಡೆಯನ್ನು ಪರಿಹರಿಸುವ ಗಿರಿಜೆಯು ಪರಾರ್ಧ ಯೋಜನ ವಿಸ್ತಾರವಾದ ವಿಮಾನದಲ್ಲಿ ಕುಳಿತುಕೊಂಡು, ಪುನಃ ವಿಸ್ಮಯ ಹೊಂದಿದಳು. ॥೨೬॥

ಮಿಂಚಿನ ಬಳ್ಳಿಗಳಿಗೆ ಸಮಾನವಾದ ಕಾಂತಿಯಿಂದ ಕೂಡಿರುವ ಅತ್ಯುತ್ತಮವಾದ ಅನೇಕ ಬೆತ್ತಗಳನ್ನು ಗಣಗಳು ಕೈಯ್ಯಲ್ಲಿ ಹಿಡಿದುಕೊಂಡು ಬರುತ್ತಿದ್ದರು. ಅಂಬಿಕೆಯು ಅದನ್ನೂ ನೋಡಿದಳು. ॥೨೭॥

ಬಭೂವ ಕುಸುಮಾಸಾರೋ ಮಂದಮಾರುತಸಂಯುತಃ ।
ಸುಗಂಧಪುಷ್ಪರಜಸಾಮಾಸಾರೋಽಪಿ ತತಃ ಪರಂ ॥೨೮॥

ಸಾ ಪುಷ್ಪಮಂಡಪಚ್ಛಾಯಾಪ್ರಚ್ಛನ್ನೇ ಪುಷ್ಪಕೇ ಸ್ಥಿತಾ ।
ರರಾಜ ಗೌರೀ ರಾಜೀವರಾಜಿರಾಜಿವಿರಾಜಿತೇ ॥೨೯॥

ಪುಷ್ಪಪ್ರಾಸಾದಶೃಂಗಾಣಿ ಪಶ್ಯಂತೀ ಸಾ ಪುನಃ ಪುನಃ ।
ನಾಟ್ಯಾಂಗನಾನತಪದಾ ಮಂದಂ ಮಂದಂ ಯಯೌ ಶಿವಾ ॥೩೦॥

ಮಂದಮಾರುತಪೋತೇನ ಕೇತಕೀಸಂಯುತೇನ ಸಾ ।
ಸೇವಿತಾ ಸಾ ಸುತೌ ದೃಷ್ಟ್ವಾ ಸಸ್ಮೇರಾಪಿ ಪುನಃ ಪುನಃ ॥೩೧॥

ದೇವಿಯು ಸಂಚಾರಮಾಡುವಾಗ, ಪುಷ್ಪಗಳ ಸಾರಭೂತವಾದ ಪರಾಗಗಳೆಲ್ಲವೂ ಮಂದಮಾರುತದೊಡನೆ ಯುಕ್ತವಾಗಿ, ಸುಗಂಧಪೂರಿತವಾದ ಪುಷ್ಪಗಳ ಮಕರಂದ ವೃಷ್ಟಿಯಂತೆ ಮೈಮೇಲೆ ಬೀರುತ್ತಿದ್ದವು. ||೨೮||

ದೇವಿಯು ಕುಳಿತಿದ್ದ ಪುಷ್ಪಕವಿಮಾನವು ಪುಷ್ಪಮಂಡಪಗಳ ಸಮೂಹದ ನೆರಳಿನಿಂದ ವಾಪ್ತವಾಗಿದ್ದಿತು. ಈ ಮಂಟಪಗಳಲ್ಲಿ ಉತ್ತಮವಾದ ಕಮಲಪಂಕ್ತಿಗಳು ವಿರಾಜಿಸುತ್ತಿದ್ದವು. ಇಂತಹ ಪುಷ್ಪಕವಿಮಾನದಲ್ಲಿ ದೇವಿಯು ಪ್ರಕಾಶಿಸುತ್ತಿದ್ದಳು. ||೨೯||

ಹೀಗೆ ಪುಷ್ಪಮಯವಾದ ಪ್ರಾಸಾದಗಳ ಶಿಖರಗಳನ್ನು ಪದೇಪದೇ ನೋಡುತ್ತಾ ಶಿವೆಯು, ನಾಟ್ಯಮಾಡುತ್ತಿದ್ದ ಗಂಧರ್ವಸ್ತ್ರೀಯರಿಂದ ನಮಸ್ಕರಿಸಲ್ಪಡುತ್ತಿರುವ ಪಾದಕಮಲವುಳ್ಳವಳಾಗಿ ಮೆಲ್ಲಮೆಲ್ಲಗೆ ಪ್ರಯಾಣಮಾಡಿದಳು. ||೩೦||

ಕೇದಗೀ (ತಾಳೇ) ಪುಷ್ಪದ ಸೌಗಂಧ್ಯಯುಕ್ತವಾದ ಮಂದಮಾರುತನಿಂದ ಸೇವೆ ಹೊಂದುತ್ತಾ, ಪದೇ ಪದೇ ಪ್ರಯಾಣಕಾಲದಲ್ಲಿ ಮಂದಹಾಸಯುಕ್ತವಾದ ದೃಷ್ಟಿಯಿಂದ ಕುಮಾರರನ್ನು (ಗಣಪತಿ ಮತ್ತು ಷಣ್ಮುಖ) ನೋಡಿ ಸಂತೋಷ ಹೊಂದುತ್ತಿದ್ದಳು. ||೩೧||

ಉತ್ಫುಲ್ಲಕಮಲಾಕ್ರಾಂತಸರಾಂಸಿ ವಿಪುಲಾನಿ ಸಾ ।
ರತ್ನಸೋಪಾನಕಲ್ಲೋಲಸಂಕುಲಾನಿ ದದರ್ಶ ಸಾ ॥೩೨॥

ತತ್ರಾಪೂರ್ವಮರಾಲಾನಾಂ ವರಟಾನಾಂ ಚ ಕೋಟಯಃ ।
ದೃಷ್ಟ್ವಾ ಪ್ರಹೃಷ್ಟಾ ಪುಷ್ಟಾಂಗಾ ಶಿಪಿವಿಷ್ಟಪ್ರಿಯಾ ಪರಂ ॥೩೩॥

ಶುಕಾನ್ಪಿಕಾನ್ಚಕೋರಾಂಶ್ಚ ಭ್ರಮರಾನಪಿ ಕೋಟಿಶಃ ।
ಸುಸ್ವರಾನ್ಪುಷ್ಪಮಾಲಾಸು ನಿಬಿಡಾಸು ಮನೋಹರಾನ್ ॥೩೪॥

ರುದ್ರವೀಣಾ ಸಹಸ್ರಾಣಿ ದೃಷ್ಟ್ವಾ ಸಾ ಪ್ರತಿಮಂಡಪೇ ।
ಸ್ವತಃ ಸ್ವನಯುತಾನ್ಯಂಬಾ ವಿಸ್ಮಯಂ ಪರಮಂ ಯಯೌ ॥೩೫॥

ಸುಧಾಪ್ರಪಾಸು ವಿಶ್ರಾಂತಾ ಪಶ್ಯಂತೀ ಪುಷ್ಪಮಂದಿರಂ ।
ಪದೇ ಪದೇ ಪ್ರಕೃಷ್ಟಾನಿ ಫಲಾನ್ಯಾಸ್ವಾದ್ಯ ಸಾ ಯಯೌ ॥೩೬॥

ಪ್ರಯಾಣ ಕಾಲದಲ್ಲಿ ರತ್ನಮಯವಾದ ಸೋಪಾನ ಪಂಕ್ತಿಗಳಿಂದ ಕೂಡಿ ಅರಳಿದ ಕಮಲಗಳಿಂದ ವಿರಾಜಿಸುತ್ತಿರುವ ಅನೇಕ ದೊಡ್ಡ ಸರೋವರಗಳನ್ನು ಗಿರಿಜೆಯು ಅಕ್ಕಪಕ್ಕದಲ್ಲಿ ನೋಡಿದಳು. ॥೩೨॥

ಆ ಕಮಲ ಸರೋವರಗಳಲ್ಲಿ ಅಪೂರ್ವವಾದ ರಾಜಹಂಸಪಂಕ್ತಿಗಳನ್ನೂ ಮತ್ತು ಹೆಣ್ಣು ಹಂಸಗಳ ಗುಂಪನ್ನೂ ನೋಡಿ, ಪುಷ್ಟವಾದ ಅವಯವವುಳ್ಳವಳಾಗಿ, ಕಿರಣರೂಪಿಯಾಗಿ ಹರಡುವ ಶಂಕರನ ಪ್ರಿಯಪತ್ನಿಯಾದ ಅಂಬಿಕೆಯು ತುಂಬಾ ಸಂತೋಷಹೊಂದಿದಳು. ॥೩೩॥

ದೇವಿಯು ಸಾಂದ್ರವಾದ ಪುಷ್ಪಪಂಕ್ತಿಗಳಲ್ಲಿ ಸುಸ್ವರಮಾಡುತ್ತಿರುವ ಗಿಳಿ, ಕೋಗಿಲೆ, ಚಕೋರ ಮತ್ತು ದುಂಬಿಗಳು, ಇವು ಗುಂಪುಗುಂಪಾಗಿ ಮತ್ತು ಮನೋಹರವಾಗಿ ತೋರುತ್ತಿರುವುದನ್ನು ನೋಡಿದಳು. ॥೩೪॥

ಪ್ರತಿಯೊಂದು ಮಂಟಪದಲ್ಲಿಯೂ ತಾನಾಗಿಯೇ ಧ್ವನಿಮಾಡುತ್ತಿರುವ ಸಾವಿರಾರು ರುದ್ರವೀಣೆಗಳನ್ನು ನೋಡಿ ಗಿರಿಜೆಯು ತುಂಬಾ ಆಶ್ಚರ್ಯ ಹೊಂದಿದಳು. ॥೩೫॥

ಪ್ರಯಾಣಮಾಡುವಾಗ ಮಧ್ಯದಲ್ಲಿ ಅಮೃತದ ಅರವಟ್ಟಿಗೆಗಳಲ್ಲಿ ವಿಶ್ರಾಂತಿ ಹೊಂದಿ ಅಲ್ಲಿರುವ ಪುಷ್ಪಮಂದಿರಗಳನ್ನು (ಹೂವಿನಿಂದಲೇ ರಚಿತವಾದ ಮನೆ

ತಟಿಕ್ಕೋಟಿಕುಟೀರಾಣಿ ದದರ್ಶ ಗಿರಿಜಾ ತತಃ ।
ಪ್ರತಿಕ್ಷಣಂ ಪುಷ್ಪವೃಷ್ಟಿಂ ದೃಷ್ಟ್ವಾ ಹೃಷ್ಟಾ ಚ ನೂತನಾಂ ॥೩೭॥

ತಾಂ ತದ್ವಿಲೋಕನಾನಂದಧಾರಾಂ ಮಂದಗತಿಂ ಶಿವಾಂ ।
ದೃಷ್ಟ್ವಾ ತುಷ್ಟಾವ ತುಷ್ಟಾತ್ಮಾ ತದಾ ಗಣಗಣೋ ಮುದಾ ॥೩೮॥

ಜಯಾಂಬ ಜಯ ಶರ್ವಾಣಿ ಜಯಗೌರಿ ಶಿವಪ್ರಿಯೇ ।
ಜಯಾನ್ನಪೂರ್ಣೇ ವಿಮಲೇ ಕಾಲಕಾಲಪ್ರಿಯೇಽನಘೇ ॥೩೯॥

ಗಳನ್ನು) ದರ್ಶನಮಾಡುತ್ತಾ, ಉತ್ತಮವಾದ ಹಣ್ಣುಗಳನ್ನು ಭಕ್ಷಿಸುತ್ತಾ ಮುಂದೆ ಪ್ರಯಾಣಮಾಡುತ್ತಿದ್ದಳು. ॥೩೬॥

ಕೋಟ್ಯಂತರ ಮಿಂಚಿನಂತೆ ಹೊಳೆಯುತ್ತಿರುವ ಗುಡಿಸಲುಗಳನ್ನೂ, ಪ್ರತಿಕ್ಷಣದಲ್ಲಿಯೂ ಹೊಸ ಹೊಸದಾಗಿ ಬೀಳುತ್ತಿರುವ ಪುಷ್ಪವೃಷ್ಟಿಯನ್ನೂ ನೋಡಿ ಗಿರಿಜೆಯು ಸಂತೋಷ ಹೊಂದುತ್ತಾ, ಮುಂದೆ ಮುಂದೆ ಪ್ರಯಾಣಮಾಡುತ್ತಿದ್ದಳು. ॥೩೭॥

ಹೀಗೆ ಪ್ರಯಾಣ ಮಾಡುವಾಗ ತನ್ನ ದೃಷ್ಟಿಗೆ ಬೀಳುವ ಸರೋವರ, ಪಕ್ಷಿಗಳು, ಮನೆಗಳು, ಮುಂತಾದುವುಗಳನ್ನು ನೋಡಿ ಆನಂದಬಾಷ್ಪವನ್ನು ಸುರಿಸುತ್ತಾ ನಿಧಾನವಾಗಿ ಪ್ರಯಾಣಮಾಡುತ್ತಿರುವ ಮಂಗಳಾಂಗಿಯಾದ ಗಿರಿಜಾದೇವಿಯನ್ನು ನೋಡಿ, ಗಣ ಸಮೂಹವು ತಾವೂ ಸಂತೋಷ ಹೊಂದುತ್ತಾ ಆ ದೇವಿಯನ್ನು ಪ್ರೀತಿಯಿಂದ ಈ ರೀತಿ ಸ್ತೋತ್ರಮಾಡಿತು. ॥೩೮॥

"ಅಂಬಿಕೆಯೇ, ನಿನಗೆ ಜಯವಾಗಲಿ ಎಲೌ ಶರ್ವಾಣಿಯೇ (ಶಿವನ ಅರ್ಧಾಂಗಿ) ನೀನು ಶುಭ್ರವಾದ ಮೈಬಣ್ಣವುಳ್ಳವಳು, ಅಲ್ಲದೇ ಶಿವನಿಗೆ ತುಂಬಾ ಪ್ರೀತಿಪಾತ್ರಳು. ನಿನಗೆ ವಿಜಯವಾಗಲಿ. ಎಲೌ ಅನ್ನಪೂರ್ಣೇ, ಪರಿಶುದ್ಧಳೂ, ಪಾಪರಹಿತಳೂ ಆದ ನೀನು ಕಾಲಕಾಲನೆನಿಸಿದ ಪರಶಿವನ ಭಾರ್ಯೆಯಾಗಿರುವೆ. ದೇವಿ, ನಿನಗೆ ಜಯವಾಗಲಿ. ॥೩೯॥

ಜಯ ಶೈಲಸುತೇ ದೇವಿ ಕಮಲಾಮಲಲೋಚನೇ ।
ಜಯಾಮರಾಂಗನಾರಾಧ್ಯೇ ಜಯ ಕಲ್ಯಾಣಿ ಶಾಂಭವಿ ॥೪೦॥

ಜಯ ಮಂಗಲಸರ್ವಾಂಗೇ ಮಂಗಲೇ ಸರ್ವಮಂಗಲೇ ।
ಜಯ ಮೃತ್ಯುಂಜಯಾರ್ಧಾಂಗಿ ತುಂಗಸಿಂಹಾಸನಾಶ್ರಯೇ ॥೪೧॥

ಜಯ ಭಕ್ತಜನಾನಂದಪ್ರದಾನನಿಯತವ್ರತೇ ।
ಜಯ ದುರ್ಗೇ ವಿಶಾಲಾಕ್ಷಿ ಜಯ ತ್ರಿಪುರಭೈರವಿ ॥೪೨॥

ಜಯ ವಾಗೀಶ್ವರಿ ಪ್ರಜ್ಞೇ ಮಂಗಲೇ ಗೌರಿ ಚಂಡಿಕೇ ।
ಚಿತ್ರಘಂಟೇ ಜಯಾನಂಗವಿಜಯಧ್ವಜಮಾಲಿಕೇ ॥೪೩॥

ನಿರ್ಮಲವಾದ ಕಮಲದಂತೆ ಕಣ್ಣುಳ್ಳ ದೇವಿಯೇ, ಗಿರಿರಾಜಕುಮಾರಿಯಾದ ನಿನಗೆ ನಮಸ್ಕಾರ. ಎಲೌ ಮಂಗಳಾಂಗಿಯೇ, ದೇವತಾಸ್ತ್ರೀಯರೆಲ್ಲರೂ ನಿನ್ನನ್ನು ಪೂಜಿಸುವರು. ಹೇ ಶಂಭುವಿನ ಅರ್ಧಾಂಗಿಯೇ, ನೀನು ಜಯಶಾಲಿನಿಯಾಗು. ||೪೦||

ಎಲೌ ಸರ್ವಮಂಗಳೆಯೇ, ಮಂಗಳಸ್ವರೂಪಳಾದ ನಿನ್ನ ಅಂಗಗಳೆಲ್ಲಾ ಮಂಗಳಕರಗಳೇ ಆಗಿರುವುವು. ದೇವಿಯೇ, ನೀನು ಮೃತ್ಯುಂಜಯನಾದ ಪರಮೇಶ್ವರನ ಅರ್ಧಾಂಗಿಯು. ಎತ್ತರವಾದ ಸಿಂಹಾಸನದ ಮೇಲೆ ಕುಳಿತಿರುವ ತಾಯೆ, ನಿನಗೆ ಜಯವಾಗಲಿ. ||೪೧||

ತನ್ನ ಭಕ್ತಜನರಿಗೆ ಆನಂದವನ್ನುಂಟುಮಾಡುವುದರಲ್ಲಿ ಸದಾ ಬದ್ಧ ಕಂಕಣಳಾಗಿರುವವಳೇ, ನೀನೇ ದುರ್ಗಾದೇವಿಯು. ನಿನ್ನನ್ನೇ ವಿಶಾಲವಾದ ನೇತ್ರಗಳುಳ್ಳವಳು ಎನ್ನುವರು. ಎಲೌ ತ್ರಿಪುರಭೈರವೀದೇವಿ, ನಿನಗೆ ಜಯವಾಗಲಿ. ||೪೨||

ಎಲೌ ಪ್ರಾಜ್ಞಳೇ, ವಾಕ್ಕುಗಳಿಗೆಲ್ಲಾ ನೀನೇ ಸ್ವಾಮಿನಿಯು, ಸರ್ವಮಂಗಳ ಸ್ವರೂಪಣಿಯಾದ ನಿನ್ನನ್ನೇ ಗೌರೀ, ಚಂಡಿಕೆ ಎಂದು ವ್ಯವಹರಿಸುವರು. ಚಿತ್ರವಿಚಿತ್ರವಾದ ಗಂಟೆಗಳಿಂದ ಕೂಡಿರುವ ತಾಯೇ, ನೀನು ಮನ್ಮಥನ ವಿಜಯ ಸೂಚಕವಾದ ಧ್ವಜದಲ್ಲಿ ಹಾರದಂತಿರುವೆ. ಮನ್ಮಥನನ್ನು ಜಯಿಸಿದ ಮಹೇಶ್ವರನಿಗೆ ನೀನೇ ಧ್ವಜಪ್ರಾಯಳು. ಮತ್ತು ಹಾರದಂತೆ ಮನೋಹರಳು. ದೇವೀ, ನಿನಗೆ ಜಯವಾಗಲಿ. ||೪೩||

ಜಯಶ್ರೀವಿಲಸದ್ಗೌರಿ ಸಿದ್ಧೇಶ್ವರಿ ನಮೋ ನಮಃ ।
ನಮಸ್ತೇ ಸಂಕಟಾಗೌರಿ ಶೀತಲಾಗೌರಿ ತೇ ನಮಃ ॥೪೪॥

ಬಂದೀದೇವಿ ನಮಸ್ತುಭ್ಯಂ ಲಲಿತೇ ವಿಶ್ವಬಾಹುಕೇ ।
ಛಂದಲಾಂಬ ನಮಸ್ತುಭ್ಯಂ ನಮಸ್ತೇ ಭ್ರಮರಾಂಬಿಕೇ ॥೪೫॥

ಜ್ಞಾನಪ್ರಸೂನಾಂಬ ನಮೋ ನಮಸ್ತೇ
ನಮೋ ನಮಸ್ತೇ ಶಿವಕಾಮಸುಂದರಿ ।
ನಮೋ ನಮಸ್ತೇಽಸ್ತ್ವರುಣಾಚಲೇಶ್ವರಿ
ನಮೋ ಮಹಾಗೌರಿ ನಮೋ ನಮಸ್ತೇ ॥೪೬॥

ನಮೋ ನಮಃ ಕಲ್ಪಲತಾಪ್ರಸೂನ
ಮಾಲಾಸಮಾಕ್ರಾಂತಪದಾರವಿಂದೇ ।
ವಂದೇ ಸ್ವಭಕ್ತೇಪ್ಸಿತದಾನಲೋಲೇ
ವಿಲಾಸಶೀಲೇ ಗಿರಿಜೇ ನಮಸ್ತೇ ॥೪೭॥

ಜಯಲಕ್ಷ್ಮಿಯಿಂದ ಪ್ರಕಾಶಿಸುತ್ತಿರುವ ಎಲೌ ಗೌರಿಯೇ! ಸಿದ್ಧೇಶ್ವರಿಯೆನಿಸಿದ ನಿನಗೆ ನಮಸ್ಕಾರವು. ನೀನೇ ಸಂಕಟಹರಳಾದ ಗೌರಿಯು. ನಿನ್ನನ್ನೇ ಶೀತಲಾಗೌರಿಯೆಂದೂ ಕರೆಯುವರು. ಅಂತಹ ನಿನಗೆ ನಮಸ್ಕಾರವು. ॥೪೪॥

ಎಲೌ ಲಲಿತಾಂಬಿಕೇ! ಬಂದೀದೇವಿಯೂ, ಪ್ರಪಂಚವನ್ನೇ ತನ್ನ ಬಾಹುಗಳಂತೆ ಪರಿಗಣಿಸಿರುವಳೂ ಆದ ನಿನಗೆ ನಮಸ್ಕಾರ. ನೀನೇ ಛಂದಲಾಂಬೆಯು. ಎಲೌ ಭ್ರಮರಾಂಬಿಕೆಯೇ, ಇದೋ ನಿನಗೆ ನಮಸ್ಕಾರ ಮಾಡುವೆನು. ॥೪೫॥

ಜ್ಞಾನಪ್ರಸೂನಾಂಬ (ಜ್ಞಾನದಾತ್ರೀ) ಎಂಬ ಸಂಜ್ಞೆಯುಳ್ಳ ದೇವಿಯೇ, ನಿನಗೆ ನಮಸ್ಕಾರ. ದೇವಿ! ಶಿವಕಾಮಸುಂದರಿಯೆನಿಸಿದ ನಿನ್ನನ್ನು ನಮಸ್ಕರಿಸುವೆನು. ಎಲೌ ಅರುಣಾಚಲವೆಂಬ ಪರ್ವತಕ್ಕೆ ಒಡೆಯಳಾದ ಮಹಾಗೌರಿಯೆ! ನಿನಗೆ ಅನಂತವಾದ ನಮಸ್ಕಾರಗಳು. ॥೪೬॥

ಕಲ್ಪಲತೆಗಳ ಬಳ್ಳಿಗಳಲ್ಲಿ ಬಿಟ್ಟಿರುವ ಹೂಮಾಲೆಗಳಿಂದ ಪೂಜಿಸಲ್ಪಟ್ಟಿರುವ ಪಾದಕಮಲಗಳುಳ್ಳ ದೇವಿಯೇ! ನಿನಗೆ ನಮಸ್ಕಾರ. ತನ್ನ ಭಕ್ತರಿಗೆ ಬೇಕಾದ ವರಗಳನ್ನು ದಾನಮಾಡುವುದರಲ್ಲಿ ಪ್ರೀತಿಯುಳ್ಳ ನಿನ್ನನ್ನು ನಮಸ್ಕರಿಸುವೆನು.

ನಮೋ ನಮಸ್ತ್ವಚ್ಚರಣಾರವಿಂದಮರಂದ
ಧಾರಾಪ್ರಸರೋಽಸ್ತು ಮೂರ್ಧ್ನಿ ।
ಅಸ್ಮಾಕಮೀಶಾನದಯಾ ಯಥಾ ಸ್ಯಾತ್ತಥಾ
ವಿಧೇಯಂ ಗಮನೋತ್ತರಂ ವಾ ॥೪೮॥

ನ ಸ್ವಾಪರಾಧೇನ ಕೃತೋ ವಿಲಂಬಃ
ತವಾಂಬ ಸಂವೇದಯ ಶಂಕರಾಯ ।
ಕೃತಾಪರಾಧಾನಪಿ ಬಾಲಪುತ್ರಾನಂಬಾ
ನ ಸ್ಮಾ ಕುಪ್ಯತಿ ಸರ್ವಥಾಪಿ ॥೪೯॥

ಅಸ್ಮಾಕಮನ್ಯಚ್ಛರಣಂ ಕಿಮಸ್ತಿ
ವಿಹಾಯ ತಾವಚ್ಚರಣಂ ತವಾಂಬ
ಶಿವಸ್ಯ ವಾ ತಾವದುಮೇ ತತೋಽಸ್ಮಾ
ನವಾವನಂ ಭಕ್ತಜನಸ್ಯ ಕಾರ್ಯಂ ॥೫೦॥

ಎಲೌ ಯಾವಾಗಲೂ ವಿಹಾರದಲ್ಲಿ ರಸಿಕಳಾದ ಗಿರಿಜಾಂಬಿಕೆಯೇ, ನಿನಗೆ ನಮಸ್ಕಾರ ಮಾಡುವೆನು. ||೪೭||

ತಾಯೇ, ನಿನ್ನ ಪಾದಕಮಲಗಳ ಮಕರಂದಧಾರೆಗಳು ನನ್ನ ತಲೆಯಮೇಲೆ ಪ್ರಸರಿಸಲಿ. ದೇವಿ, ಈ ಪ್ರಯಾಣ ಮುಗಿದನಂತರ ನಮ್ಮ ಮೇಲೆ ಈಶ್ವರನ ದಯೆಯುಂಟಾಗುವಂತೆ ದಯೆಯಿಟ್ಟು ಅನುಗ್ರಹಿಸು. ||೪೮||

ಅಂಬಿಕೆಯೇ, ಈರೀತಿ ಪ್ರಯಾಣದಲ್ಲಿ ವಿಲಂಬವಾಗಲು ಈ ಗಣಗಳ ಅಪರಾಧವೇನೂ ಇಲ್ಲವೆಂದು ದಯವಿಟ್ಟು ಶಂಕರನಿಗೆ ಅರಿಕೆಮಾಡು. ಹುಡುಗರೂ, ಮಕ್ಕಳೂ ಒಂದುವೇಳೆ ತಪ್ಪುಮಾಡಿದರೂ ತಾಯಿಯಾದವಳು ಸ್ವಲ್ಪವೂ ಕೋಪಿಸಿಕೊಳ್ಳದೇ ಎಲ್ಲವನ್ನೂ ಸಹಿಸಿಕೊಳ್ಳುವುದು ಸಹಜವೇ ಅಲ್ಲವೇ. ||೪೯||

ಅಂಬ, ನಿನ್ನ ಪಾದಗಳನ್ನು ಬಿಟ್ಟರೆ ನಮಗೆ ಬೇರೇ ಗತಿಯೆಲ್ಲಿ ಬಂತು. ಮತ್ತು ಶಿವನ ಪಾದಗಳೇ ನಮಗೆ ರಕ್ಷಕವಾಗುವುವು. ಎಲೌ ಉಮಾದೇವಿ, ಯಾವಾಗಲೂ ನಿಮ್ಮಿಬ್ಬರ ಪಾದಸೇವೆಯೇ ನಮಗೆ ಎಲ್ಲಕ್ಕೂ ಗತಿಯಾಗಿರುವುದು. ಆದುದರಿಂದ ನಿಮ್ಮ ಪಾದಸೇವಕರಾದ ಪರಶಿವ ಭಕ್ತರನ್ನು ಸದಾ ಕಾಪಾಡು ತಾಯೇ! ||೫೦||

ಅಸ್ಮಾಕಮುಷ್ಯಂತಕವೈರಿಧೀರ
ದ್ವಾರಾಶ್ರಯಾಣಾಂ ನ ಭಯಂ ಕುತೋಽಪಿ ।
ದಯಾ ವಿಧೇಯಾ ಖಲು ತಾವದಂಬ
ತ್ವತ್ಪಾದಪದ್ಮಾರ್ಚಕತತ್ಪರಾಣಾಂ ॥೫೦॥

ವಿಹಾರಕಾಲೇಷು ಕದಾಚಿದಂಬ
ಸಾಂಬಾಯ ತಾವದ್ವಿನಿವೇದನೀಯಾಃ ।
ವಯಂ ಯಥಾ ಸಾಧು ಸುಖಂ ಪ್ರಪನ್ನಾಃ
ಶಿವಪ್ರಸಾದೇನ ಭವತ್ಪ್ರಸಾದಾತ್ ॥೫೧॥

ಸಾ ತ್ವಂ ಶಿವಾರ್ಧಾಂಗಮುಮೇ ದಯಾ ಚೇ
ದಸ್ಮಾಸು ತಾವತ್ತವ ತಾವತಾಪಿ ।
ನ ದುಃಖಲೇಶೋಽಪಿ ತತಃ ಪ್ರಸನ್ನೇ
ಪ್ರಸನ್ನಚಿತ್ತಾನ್ಕುರು ಸರ್ವದಾ ನಃ ॥೫೨॥

ದೇವಿಯೇ, ಯಮನನ್ನೇ ನಿಗ್ರಹಿಸಿರುವ ಧೀರನಾದ ಪರಮೇಶ್ವರನ ದ್ವಾರ ಪ್ರದೇಶದಲ್ಲಿ (ಬಾಗಿಲಿನಲ್ಲಿ) ಯಾವಾಗಲೂ ನಿಂತು ಸೇವೆಮಾಡುತ್ತಿರುವ ನಮಗೆ ಭಯವೆಲ್ಲಿಂದ ಬಂತು! ಎಲೌ ಅಂಬಿಕೆಯೇ, ನಿನ್ನ ಪಾದಪದ್ಮವನ್ನು ಸೇವಿಸುವುದರಲ್ಲೇ ನಿರತರಾದ ಈ ನಿನ್ನ ದಾಸರ ಮೇಲೆ ನಿನ್ನ ದಯೆಯು ಪೂರ್ಣವಾಗಿ ಉಂಟಾಗಲಿ. ॥೫೦॥

ಅಂಬ, ಮಹೇಶ್ವರನೊಡನೆ ನೀನು ವಿನೋದದಿಂದ ವಿಹಾರಮಾಡುವಾಗ, ಯಾವಾಗಲಾದರೂ 'ಸ್ವಾಮಿ, ನಿನ್ನ ಅನುಗ್ರಹದಿಂದಲೂ ಮತ್ತು ನನ್ನ ಪ್ರಸಾದದಿಂದಲೂ ಸಹ ಶಿವಗಣಗಳೆಲ್ಲಾ ಸುಖವನ್ನನುಭವಿಸುತ್ತಿರುವರು. ಅವರಿಗೆ ಯಾವ ಕೊರತೆಯೂ ಇಲ್ಲ'ವೆಂಬುದನ್ನು ಮಾತ್ರ ದಯವಿಟ್ಟು ಮಹಾದೇವನಿಗೆ ತಿಳಿಸು. ॥೫೧॥

ದೇವಿಯೇ, ನೀನು ಶಿವನ ಅರ್ಧಾಂಗಿಯು. ಎಲೌ ಉಮೆಯೇ, ನಮ್ಮಲ್ಲಿ ನಿನಗೆ ದಯೆಯುಂಟಾದರೆ ನಮಗೆ ಯಾವಾಗಲೂ ದುಃಖವುಂಟಾಗಲಾರದು. ಎಲೌ ಪ್ರಸನ್ನಚಿತ್ತಳೇ, ಜನನಿಯೇ, ನಮ್ಮನ್ನು ಯಾವಾಗಲೂ ಪ್ರಸನ್ನಚಿತ್ತರನ್ನಾಗಿ ಮಾಡು. ॥೫೨॥

ವಿಜ್ಞಾಪನೇಯಂ ಹೃದಿ ಸಾವಧಾನ
ಮಾನಂದದಾನಪ್ರವಣೇ ತವಾಸ್ತು ।
ಏತಾವದಸ್ಮಾಕಮುಮಾಸಹಾಯ
ಸಹಾಯತಾಮೇತಿ ನ ಸಂಶಯೋಽತ್ರ ॥೫೪॥

ಏವಂ ಸಾ ಗಣನಾಯಕೋಕ್ತವಚನಾನ್ಯುಚ್ಚೈಃ ಸಮಾಕರ್ಣ್ಯ ಸಾ
ಭೂಯಸ್ತದ್ವಚನಾನಿ ಶಂಕರಪದೋಪೇತಾನ್ಯನಂತಾನ್ಯಪಿ ।
ಶ್ರುತ್ವಾ ಹೃಷ್ಟಮತಿಪ್ರಕೃಷ್ಟಹೃದಯಾ ಮತ್ವಾ ಪುನಃ ಶಂಕರ
ಧ್ಯಾನಾನಂದರಸಪ್ರಭೂತವಿಲಸದ್ರೋಮಾಂಚಕಾಂತಾ ಶಿವಾ ॥೫೫॥

ತತ್ರಾದೂರಮಹೇಶ್ವರಾತಿರುಚಿರಾರಾಗೋರುಸಿಂಹಾಸನಾ
ನಂತಾಶ್ರಾಂತಸುಕಾಂತಿಸಂತತಿಸಮಾಕ್ರಾಂತಾ ನಿತಾಂತಂ ಶಿವಾ ।
ರೇಜೇ ರಾಜತಶೈಲತುಂಗಶಿಖರಾಕಾರೋರುರತ್ನಾಸನೇ
ಷ್ವಾಸೀನಾಪ್ಯನುವೇಲಮಿಂದುಶಕಲಾಲಂಕಾರಕಾಂತಾ ಬಭೌ ॥೫೬॥

ಭಕ್ತರಿಗೆ ಆನಂದವನ್ನುಂಟುಮಾಡುವುದರಲ್ಲಿ ಸಮರ್ಥಳಾದ ದೇವಿಯೇ, ಈ ನಮ್ಮ ವಿಜ್ಞಾಪನೆಯು ನಿನ್ನ ಮನಸ್ಸಿನಲ್ಲಿ ನೆಲೆಯಾಗಿರಲಿ. ನಮಗೆ ಸರ್ವದಾ ಪರಮಾನಂದವನ್ನು ಅನುಗ್ರಹಿಸು. ಇಷ್ಟುಮಾತ್ರವೇ ನಮಗೆ ಗಿರಿಜಾ ರಮಣನಾದ ಪರಮೇಶ್ವರನಿಂದ ಸಹಾಯವಾದರೆಸಾಕು. ಅದಕ್ಕೆ ಪರಶಿವನ ಅನುಗ್ರಹವೊಂದೇ ಬೇಕು." ॥೫೪॥

ಹೀಗೆ ಆ ಗಣಶ್ರೇಷ್ಠರು ಗಟ್ಟಿಯಾಗಿ ಹೇಳಿದ ಆ ವಿಜ್ಞಾಪನೆಗಳನ್ನು ಲಾಲಿಸಿ ಆ ಗಿರಿಜಾಂಬಿಕೆಯು, ಪದೇ ಪದೇ ಆ ಶಂಕರನ ಸ್ತೋತ್ರರೂಪವಾಗಿರುವ ಆ ಅನಂತವಾದ ಪದಗಳನ್ನೇ ಕೇಳುತ್ತಾ ಸಂತೋಷಹೊಂದಿದಳು. ಪುನಃ ಅತ್ಯುತ್ಕೃಷ್ಟವಾದ ಮನಸ್ಸುಳ್ಳ ಆ ದೇವಿಯು ಆ ಶಂಕರನನ್ನೇ ಧ್ಯಾನಮಾಡುತ್ತಾ, ಅದರ ಆನಂದದಿಂದುಂಟಾದ ಅಪಾರವಾದ ರಸಾನುಭವವನ್ನನುಭವಿಸುವವಳಾಗಿ ರೋಮಾಂಚವನ್ನು ಹೊಂದಿ ಮನೋಹರಳಾಗಿ ತೋರುತ್ತಿದ್ದಳು. ॥೫೫॥

ದೇವಿಯು ಪ್ರಯಾಣಮಾಡುತ್ತಿದ್ದ ವಿಮಾನದಲ್ಲಿಯೇ ಮಹೇಶ್ವರನ ಸಂಬಂಧವಾದ, ಮನೋಹರಕಾಂತಿಯಿಂದ ಕೂಡಿದ ಒಂದು ದೊಡ್ಡ ಸಿಂಹಾಸನವಿದ್ದಿತು. ಆ ಸಿಂಹಾಸನವು ಎಲ್ಲಾ ಕಡೆಗಳಲ್ಲಿಯೂ ತನ್ನ ಕಾಂತಿಯನ್ನು ಬೀರುತ್ತಿದ್ದಿತು.

ದೂರಾದಂಬರಶೇಖರಾಂತರವಿಮಾನಾರೂಢಗೌರೀಸ್ಫುರ
ದ್ಭೇರಾಪಾರತಟಿಲ್ಲತಾತಿಸುಷುಮಾಪೂರಂ ವಿಲೋಕ್ಯಾದರಾತ್ ।
ಸಾ ಗೌರೀ ಸಮುಪಾಗತೇತಿ ಸ ಮುಹುಃ ಪಶ್ಯನ್ಪುನಃ ಶಂಕರಃ
ಶಂಕಾಶೋಕವಿವರ್ಜಿತಃ ಸ್ಮರಹರಃ ಸಸ್ಮಾರ ಪೂರ್ವಾಂ ದಶಾಂ ॥೫೭॥

ಅದ್ಯಾಯಾಸ್ಯತಿ ಶೈಲಜಾ ಕ್ಷಣರುಚಿವ್ರಾತಪ್ರತಾಪಂ ಮುಹು
ರ್ದೂರೀಕೃತ್ಯ ಶನೈರತಃ ಪರಮಿಯಂ ಪ್ರೇಮ್ಣಾ ಸಮಾಲಿಂಗ್ಯ ಮಾಂ ।
ಆರ್ತಿಂ ಸಾ ಪರಿಹೃತ್ಯ ಕೃತ್ಯಶತಮುಪ್ಯಾಶಾಸ್ಯಮಾಶಾಸ್ಯತಾಂ
ಪ್ರಾಪ್ತಾ ಪೂರಯಿತುಂ ಸಮರ್ಥಹೃದಯಾ ಯಾ ಸಾ ದಯಾಸಾಗರಃ॥೫೮॥

ಅಲ್ಲಿಯೇ ಕುಳಿತಿದ್ದ ದೇವಿಯೂ ಆ ಕಾಂತಿಸಮೂಹದಿಂದ ವ್ಯಾಪಿಸಲ್ಪಟ್ಟು ಬಹಳ ವಾಗಿ ಪ್ರಕಾಶಿಸುತ್ತಿದ್ದಳು. ಈ ಸಿಂಹಾಸನದ ಮಧ್ಯದಲ್ಲಿ ರಜತಪರ್ವತದ ಶಿಖರ ದಂತೆ ಉನ್ನತವಾದ ರತ್ನಾಸನವೊಂದು ರಚಿಸಲ್ಪಟ್ಟಿದ್ದಿತು. ಅಂತಹ ದಿವ್ಯಪೀಠದ ಪಕ್ಕದಲ್ಲಿಯೇ ಕುಳಿತುಕೊಂಡು ಚಂದ್ರಶೇಖರನೆನಿಸಿದ ಮಹಾದೇವನ ಪ್ರೇಯಸಿ ಯಾದ ಗಿರಿಜೆಯು ಪ್ರಕಾಶಿಸುತ್ತಿದ್ದಳು. ||೫೬||

ದೂರದಲ್ಲಿ ಅಂತರಿಕ್ಷದ ಮಧ್ಯದಲ್ಲಿ ಬಹಳ ಮೇಲೆ ವಿಮಾನಾರೂಢಳಾಗಿ ಬರುತ್ತಿರುವ ಗೌರಿಯ ತೇಜಸ್ಸು ಅನೇಕ ಮಿಂಚಿನ ಬಳ್ಳಿಗಳಂತೆ ಸುಕುಮಾರವಾದ ಕಾಂತಿಪ್ರವಾಹವನ್ನು ಬೀರುತ್ತಿದ್ದಿತು. ಅದನ್ನು ನೋಡಿದ ಶಂಕರನು 'ಓಹೋ, ಗೌರಿಯು ಬಂದಳು' ಎಂದು ಪದೇ ಪದೇ ಆ ದಿಕ್ಕನ್ನೇ ನೋಡುತ್ತಾ ಸ್ವಲ್ಪ ಹೊತ್ತು ಹಾಗೆಯೇ ಇದ್ದನು. ಅನಂತರ ಗೌರಿಯು ಆಗಮನವನ್ನು ನಿಶ್ಚಯಿಸಿ ಮನ್ಮಥಧ್ವಂಸಕನಾದ ಶಿವನು ತನ್ನ ಹಿಂದಿನ ಅವಸ್ಥೆಯನ್ನು (ಗಿರಿಜೆಯು ಇದ್ದಾಗ ತಾನು ಯಾವರೀತಿ ಇದ್ದೆನೆಂಬುದನ್ನು) ಸ್ಮರಿಸಿಕೊಂಡನು. ||೫೭||

'ಗಿರಿರಾಜಕುಮಾರಿಯು ಈಗ ಬರುವಳು. ತನ್ನ ದಿವ್ಯಕಾಂತಿಗಳಿಂದ ಮಿಂಚಿನ ಪ್ರತಾಪವನ್ನೆಲ್ಲಾ ಜಯಿಸುತ್ತಾ ಪ್ರೀತಿಯಿಂದ ನನ್ನನ್ನು ಆಲಿಂಗನಮಾಡಿ ವಿರಹದುಃಖವನ್ನೆಲ್ಲಾ ಹೋಗಲಾಡಿಸುವಳು. ಅನೇಕ ಕಾರ್ಯಗಳನ್ನು ಹೀಗೆ ಮಾಡಬೇಕೆಂದು ನಿಯಮಿಸುವಳು. ಇಗೋ, ಸಕಲ ಮನೋರಥಗಳನ್ನೂ ಪೂರ್ತಿ ಗೊಳಿಸಲು ಸಮರ್ಥವಾದ ಹೃದಯವುಳ್ಳ ಅಂಬಿಕೆಯು ಬಂದೇಬಿಟ್ಟಳು' ಎಂದು ದಯಾಸಾಗರನಾದ ಪರಮೇಶ್ವರನು ತವಕಿಸುತ್ತಿದ್ದನು. ||೫೮||

ಗೌರೀಚಾರುವಿಹಾರಸಾಗರಲಸತ್ಕಲ್ಲೋಲಮಾಲಾಕುಲೋ
ಲ್ಲೀಲಾಕಲ್ಪಿತದಿವ್ಯವಿಗ್ರಹಯುತಃ ಪುಷ್ಪೋಚ್ಚಯೇಷ್ವಪ್ಯಹಂ ।
ಪ್ರಾಸಾದೇಷ್ವಪಿ ಪುಷ್ಪಪುಂಜರಚಿತಾಕಾರೇಷು ಪುಷ್ಪೋಲ್ಲಸ
ಚ್ಛಾಯಾಕೋಟಿಸಮಾವೃತೇಷು ಸುದೃಶಾಕ್ರಾಂತೇಷು ನೇಯಂ ದಿನಂ
॥೫೯॥

ವಾತೋ ವಾತು ಮನೋಹರಪ್ರಸವಜೋ ಮಂದಂ ಸುಧಾಶೀಕರ
ವ್ಯಾಸಾರಪ್ರಚುರಶ್ಚಿರೇಣ ರುಚಿರಸ್ಸ್ವೈರಂ ವಿಹಾರಾಕರಃ ।
ಉತ್ಫುಲ್ಲಾನಿ ಸರಾಂಸಿ ಸಾರಸಕುಲೋ ಲೀಲಾಂಬುವೀಚೀಪ್ರಭಾ
ಸಂಬದ್ಧಾನಿ ಶನೈಃ ಶನೈಶ್ಚ ಕುಸುಮಾಶಯ್ಯಾಂ ಸ್ಪೃಶನ್ಸಂತತಂ॥೬೦॥

ಗೌರೀಚಾರುಶರೀರತಃ ಕಿಮಿತಿ ವಾ ನಾಯಾತಿ ವಾತೋಽಧುನಾ
ಕಸ್ತೂರೀಘನಸಾರಗಂಧರುಚಿರವ್ಯಾಪಾರಭಾರಾನಪಿ ।

ಗೌರಿಯೊಡನೆ ಮನೋಹರವಾಗಿ ವಿಹರಿಸುತ್ತಾ ಆನಂದಸಾಗರದ ಚಂಚಲ ವಾದ ಅಲೆಗಳ ಸಮೂಹದಿಂದ ವ್ಯಾಪ್ತನಾಗಿ, ಲೀಲಾವಿನೋದಕ್ಕೋಸ್ಕರ ದಿವ್ಯವಾದ ರೂಪವನ್ನು ಧರಿಸಿ ಸದಾ ಹೂವಿನ ಸಮೂಹಗಳಲ್ಲೇ ಕಾಲಕಳೆಯುವೆನು. ಮತ್ತು ಪುಷ್ಪಗುಚ್ಛಗಳಿಂದ ರಚಿತವಾಗಿ ಮನೋಹರವಾದ ಆಕಾರವುಳ್ಳ ಪ್ರಾಸಾದಗಳ ಲ್ಲಿಯೂ, ದಿವ್ಯವಾದ ಪುಷ್ಪಗಳಿಂದ ಶೋಭಿಸುತ್ತಿರುವ ನೆಳಲುಗಳಿಂದ ಕೂಡಿದ ಲತಾಕುಂಜಗಳಲ್ಲಿಯೂ ದಿವಸಗಳನ್ನು ಕಳೆಯುವೆನು. ಸುಂದರಾಂಗಿಯರ ದಿವ್ಯನೋಟಗಳಿಂದ ಕೂಡಿರುವ ಉದ್ಯಾನಗಳಲ್ಲಿ ಗಿರಿಜೆಯೊಡನೆ ವಿಹರಿಸುವೆನು ಎಂದು ಪರಮೇಶ್ವರನು ಯೋಚಿಸಲಾರಂಭಿಸಿದನು. ॥೫೯॥

"ಅಮೃತಕಣಗಳನ್ನು ಹೊತ್ತುಕೊಂಡು ಬರುವುದರಲ್ಲಿ ಸಮರ್ಥವಾದ ವಾಯುವು ಮನೋಹರವಾದ ಸೌಗಂಧ್ಯವನ್ನು ಧರಿಸಿ, ನಮ್ಮ ವಿಹಾರಕ್ಕನುಕೂಲ ವಾಗದಂತೆ ಮೆಲ್ಲಗೆ ಹಿತವಾಗಿ ಬೀಸಲಿ. ಹಂಸಪಂಕ್ತಿಗಳು, ಚಂಚಲವಾದ ನೀರಿನ ಪ್ರವಾಹಕಾಂತಿಯಿಂದ ಶೋಭಿಸುತ್ತಾ ಅರಳಿದ ಕಮಲಗಳಿಂದ ಕೂಡಿರುವ ಸರೋ ವರಗಳಲ್ಲಿ ಬೀಸಿ ಮೆಲ್ಲಮೆಲ್ಲಗೆ ಪುಷ್ಪಮಯವಾದ ಹಾಸಿಗೆಯನ್ನು ಸ್ಪರ್ಶಮಾಡುತ್ತಾ ಸಂಚರಿಸಲಿ. ॥೬೦॥

ಗೌರಿಯು ಸುಗಂಧಯುಕ್ತವಾದ ಶರೀರದಿಂದ ಬರುತ್ತಿರುವ ವಾಯುವೇ ಸುಗಂಧಮಯವಾಗಿರುವುದು. ನಾನು ಇಲ್ಲಿದ್ದರೆ ಅದಕ್ಕಿಂತಲೂ ಸೌಗಂಧ್ಯವನ್ನುಂ

ದೂರೀಕೃತ್ಯ ನಿರಂತರಶ್ರಮಕೃತಸ್ವೇದಾಂಬುಧಾರಾಮಪಿ
ಪ್ರಾಸಾರಪ್ರಸರಪ್ರಸಾದವಿಭವಂ ಸಂಪಾದಯನ್ಸರ್ವತಃ ॥೬೧॥

ತದ್ಧಮ್ಮಿಲ್ಲವಿಲೋಕನೇನ ವಿಲಯಃ ಸ್ಯಾದಪ್ಯಲೀನಾಮಹೋ
ತನ್ನೀಲಾಚಲಕಾಂತಿಸಾರಮಸಕೃದ್ದೂರೀಕರೋತೀತ್ಯಪಿ ।
ಚಂದ್ರಸ್ತಾವದಿತಃ ಪ್ರಯಾಸ್ಯತಿ ಶಿವಾವಕ್ರೇಂದುಸಂದರ್ಶನಾ
ದಾಸ್ಯಂತ್ಯೇವ ವಿಲೋಲಸುಂದರದಲಾಕ್ರಾಂತಾರವಿಂದಾನ್ಯಪಿ ॥೬೨॥

ಅತ್ಯುನ್ಮತ್ತಚಕೋರರಾಜಿರಧುನಾ ದೂರಂ ಪ್ರಯಾಸ್ಯತ್ಯಯಂ
ಕ್ರೀಡಾರತ್ನಗಿರಿಃ ಪ್ರಯಾಸ್ಯತಿ ಶಿವಾವಕ್ಷೋಜಸಂವೀಕ್ಷಣಾತ್ ।

ಟುಮಾಡುವ ಶಕ್ತಿಯು ನನಗಿಲ್ಲ, ಎಂದೇನಾದರೂ ವಾಯುವು ಇಲ್ಲಿ ಸಂಚರಿಸುತ್ತಿಲ್ಲವೋ ಏನೋ, ಹೇಗಾದರೂ ಆಗಲಿ, ಕಸ್ತೂರಿಯೇ ಮೊದಲಾದ ದಿವ್ಯಗಂಧಗಳ ಮನೋಹರ ಸೌಗಂಧ್ಯವನ್ನು ಎತ್ತಿಕೊಂಡು ಬಂದು, ದೇವಿಗೆ ನಿರಂತರ ಪ್ರಯಾಣದಿಂದುಂಟಾಗಿರುವ ಸ್ವೇದಧಾರೆಗಳನ್ನು ಹೋಗಲಾಡಿಸಿ, ವಿಶಾಲವಾದ ಪುಷ್ಪಮಯಪ್ರಾಸಾದದ ವೈಭವವು ಅತಿಶಯವಾಗಿರುವಂತೆ ಮಾಡುತ್ತಾ ವಾಯುವು ಎಲ್ಲಾ ಕಡೆಯಲ್ಲೂ ಬೀಸಲಿ. (ಎಂದು ಶಿವನು ವಾಯುವಿಗೆ ಆಜ್ಞೆಮಾಡಿದನು). ॥೬೧॥

ಆ ಗಿರಿಜೆಯ ತಲೆಯ ಕೂದಲಿನ ಗಂಟಿನ ಕಪ್ಪಾದ ಕಾಂತಿಯನ್ನು ನೋಡಿ, ಓಹೋ, ಈ ಗಂಟಿನ ಕಾಂತಿಯು ನೀಲಪರ್ವತದ ಸಾರಭೂತವಾದ ಕಾಂತಿಯನ್ನೇ ಒಟ್ಟಿಗೆ ತಿರಸ್ಕರಿಸುವಂತಿರುವುದೆಂದು ನಿಶ್ಚಯಿಸಿ ಭ್ರಮರಗಳು ಇನ್ನು ನಾವು ಇಲ್ಲಿರುವುದು ಯೋಗ್ಯವಲ್ಲವೆಂಬುದಾಗಿ ನಾಶವಾದವೋ ಏನೋ! ಚಂದ್ರನೂ ಸಹ ಮಂಗಳಾಂಗಿಯಾದ ದೇವಿಯ ಮುಖಕಾಂತಿಯನ್ನು ನೋಡಿ, ಕಲಂಕವಿಶಿಷ್ಟನಾದ ನನಗೆ ಇನ್ನಿಲ್ಲೇನು ಕೆಲಸವೆಂದು ಇಲ್ಲಿಂದ ಹೊರಡುವನು. ಚಂಚಲವೂ ಸುಂದರವೂ ಆದ ಎಸಳುಗಳಿಂದ ಕೂಡಿದ ಕಮಲಗಳೂ ಕೂಡ ದೇವಿಯ ಸುಂದರ ಮುಖವನ್ನು ಸಂದರ್ಶಿಸಿ ನಾಚಿಕೆಯಿಂದ ಮುಂದುವರಿಯುವುವು. ॥೬೨॥

ಅತಿಯಾಗಿ ಮದಿಸಿದ ಈ ಚಕೋರ ಪಕ್ಷಿಗಳ ಸಮೂಹವು ಇನ್ನು ಮುಂದೆ ಇಲ್ಲಿರದೇ ದೂರ ಹಾರಿಹೋಗುವುದು. (ಮದಶಾಲಿನಿಯಾದ ದೇವಿಯು ಇಲ್ಲಿಗೆ ಈಗ ಬರುವುದರಿಂದ ಮದಾಭಿಮಾನಿಗಳಾದ ಈ ಚಕೋರಗಳು ಇನ್ನು ನಿಲ್ಲಲಾರವು.)

ಮೀನಾಃ ಸಂತು ಜಲೇಷು ಸಂತತಮಮೀ ತನ್ನೇತ್ರಮೀನಪ್ರಭಾ
ಪ್ರಾದುರ್ಭಾವವಿಲೋಕನೇನ ಸಕೃದಪ್ಯತ್ಯದ್ಭುತಾ ಸಾ ಶಿವಾ ॥೬೩॥

ಯದ್ಯದ್ಯಾಸ್ಯತಿ ತತ್ಪ್ರಯಾತು ನ ಚ ಮೇ ತೈರಸ್ತು ಕಾರ್ಯಂ ಯದಾ
ಗೌರೀ ಲೋಚನಗೋಚರಾ ಮಮ ತದಾ ಸಾಕಂ ತಯಾ ಕ್ರೀಡನೇ ।
ಬ್ರಹ್ಮಾಂಡಪ್ರಲಯಾ ಭವಂತು ಬಹವಃ ಕಲ್ಪೋಽಪಿ ತತ್ಸಂಗಮೇ
ಸ್ಯಾದೇವ ಕ್ಷಣಕಲ್ಪ ಇತ್ಯನುದಿನಂ ತತ್ಸನ್ನಿಧಾನಂ ಧನಂ ॥೬೪॥

ಸೃಷ್ಟಿಃ ಕೇಯಮಭೂದಪೂರ್ವವಿಭವಾ ಗೌರೀಸ್ವರೂಪಾ ಪುರಾ
ತತ್ತುಲ್ಯಂ ನ ಮಯಾಮಿತಂ ವಸುಮಣಿಶ್ರೇಷ್ಠಂ ಭವಾನೀ ಪರಂ ।

ಶಿವನರ್ಧಾಂಗಿಯಾದ ಗಿರಿಜೆಯ ಉನ್ನತವಾದ ಸ್ತನಗಳನ್ನು ನೋಡಿ, ವಿಹಾರಕ್ಕೆ ಆಶ್ರಯವಾದ್ದ ಈ ರತ್ನಪರ್ವತವೂ ಇಲ್ಲಿಂದ ನಾಚಿಕೆಪಟ್ಟು ಹೊರಟುಹೋಗುವುದೋ ಎಂಬಂತಿದೆ. (ಅಂದರೆ ಆ ಪರ್ವತದಂತೆ ಉನ್ನತವಾದ ಸ್ತನವುಳ್ಳವಳು ದೇವಿಯೆಂದು ಭಾವವು) ಇನ್ನು ಮುಂದೆ ದೇವಿಯು ನೇತ್ರಗಳೆಂಬ ಮೀನುಗಳ ಕಾಂತಿಯನ್ನು ಒಂದು ಬಾರಿ ನೋಡಿದ ಮಾತ್ರದಿಂದಲೇ ಮೀನುಗಳೆಲ್ಲವೂ ಹೊರಗೆ ಮುಖ ತೋರಿಸದೇ ಯಾವಾಗಲೂ ನೀರಿನಲ್ಲಿಯೇ ಸಂಚರಿಸಲಿ. (ದೇವಿಯ ನೇತ್ರ ಕಾಂತಿಯು ಮೀನುಗಳ ನೀಲವರ್ಣರೂಪವಾದ ಕಾಂತಿಯನ್ನೂ ಸಹ ಮೀರಿರುವು ದೆಂದು ಭಾವವು.) ॥೬೩॥

ಗೌರಿಯು ನನ್ನ ದೃಷ್ಟಿಗೆ ಗೋಚರಳಾದಮೇಲೆ ಅವಳ ಅವಯವಗಳಿಗೆ ಸ್ವಲ್ಪ ಸಾಮ್ಯವನ್ನು ಹೊಂದುತ್ತಿದ್ದ ಈ ಪದಾರ್ಥಗಳಲ್ಲಿ ಯಾವುದು ಬೇಕಾದರೂ ಹೊರಟುಹೋಗಲಿ. ದೇವಿಯೇ ಪ್ರತ್ಯಕ್ಷವಾಗಿ ಬಂದಿರುವಾಗ ಅವುಗಳಿಂದ ನನಗೆ ಯಾವ ಕಾರ್ಯವೂ ಇಲ್ಲ. ಆ ಗಿರಿಜೆಯೊಡನೆ ಸಂತೋಷದಿಂದ ನಾನು ವಿಹರಿಸುವ ಸಮಯದಲ್ಲಿ ಅನೇಕ ಬ್ರಹ್ಮಾಂಡ ಪ್ರಲಯಗಳಾಗಲಿ ಅಥವಾ ಒಂದು ಕಲ್ಪವೇ ಬೇಕಾದರೂ ಕಳೆದು ಹೋಗಲಿ, ದೇವಿಯು ನನ್ನೊಡನೆ ಇದ್ದರೆ ಆ ದಿವಸಗಳೆಲ್ಲಾ ಕೇವಲ ಒಂದು ಕ್ಷಣಕ್ಕೆ ಸಮಾನವಾದುದೆಂದು ತಿಳಿಯುವೆನು. ಈಗ ನನಗೆ ಆ ಶಿವೆಯ ಸನ್ನಿಧಾನವೇ ಧನಪ್ರಾಯವಾದದ್ದು. ॥೬೪॥

ಹಿಂದೆ ನಡೆದಿರುವ ಈ ಅಪೂರ್ವವೆನಿಸಿದ ಗೌರೀರೂಪವಾದ ಸೃಷ್ಟಿಯು ಬಹು ವೈಭವಯುಕ್ತವಾದುದು. ವಸುಗಳು, ರತ್ನಗಳು ಇವುಗಳಲ್ಲಿ ಉತ್ತಮವಾದವುಗಳು

ನಾರೀರತ್ನಮಿತಿ ಶ್ರುತಂ ನಯನಯೋರಾನಂದದಾನಾಯ ಸಾ
ಜ್ಞಾನಾನಂದಸುಧಾಯುತಾಘನಘನಾ ಜ್ಞಾತಾ ಭವಾನೀ ಮಯಾ ॥೬೫॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಗೌರೀಸದ್ಗುಣಗಣವರ್ಣನಂ ನಾಮ ಏಕೋನವಿಂಶೋಽಧ್ಯಾಯಃ

ಯಾವುವೂ ಈಕೆಗೆ ಸರಿದೂಗಲಾರವು. ಭವಾನಿಯೇ ಇವೆಲ್ಲಕ್ಕಿಂತಲೂ ಉತ್ಕೃಷ್ಟಳು. ಅಲ್ಲದೇ ನೇತ್ರಗಳಿಗೆ ಆನಂದವನ್ನುಂಟುಮಾಡುವುದಕ್ಕೋಸ್ಕರವೇ ಸೌಂದರ್ಯ ನಿಧಿಯಾದ ಈ ನಾರೀರತ್ನವು ಸೃಷ್ಟಿಯಾಗಿದೆ. ಈ ಭವಾನಿಯನ್ನು ಜ್ಞಾನಾನಂದ ರೂಪವಾದ ಅಮೃತವನ್ನು ವರ್ಷಿಸುವ ಗಂಭೀರವಾದ ಮೇಘವೆಂದು ನಾನು ತಿಳಿಯುವೆನು. ॥೬೫॥

ಇಲ್ಲಿಗೆ ಶ್ರೀಶಿವರಹಸ್ಯದ ಹರಸಂಜ್ಞಕವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ
ಶಿವಗಣಗಳು ಮಾಡಿದ ಗೌರಿಯ ಸದ್ಗುಣಗಳ ವರ್ಣನೆಯೆಂಬ
ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ವಿಂಶೋಽಧ್ಯಾಯಃ

|| ವ್ಯಾಸ ಉವಾಚ ||

ಇತ್ಯುದೀರ್ಯ ಮಹಾದೇವೇ ಸಾನಂದೇ ಸತಿ ಸತ್ವರಂ ।
ವಿಮಾನರತ್ನಚ್ಛಾಯಾಭಿಃ ಸಮಾಕ್ರಾಂತೋ ಮಹೇಶ್ವರಃ ॥೧॥

ಜಯಧ್ವನಿಃ ಶ್ರುತಸ್ತೇನ ತೂರ್ಯಧ್ವನಿರನಂತರಂ ।
ದುಂದುಭಿಧ್ವನಯಃ ಪಶ್ಚಾಚ್ಛ್ರುತಾಸ್ತೇನ ಮನೋಹರಾಃ ॥೨॥

ಗೌರೀಶರೀರಕಾಂತಿಶ್ಚ ತಟಿತ್ಕೋಟಿನಿಭಾ ತದಾ ।
ದೃಷ್ಟ್ವಾ ತೇನ ಮಹೇಶೇನ ಪುಷ್ಟಸ್ತೇನಾಭವದ್ದ್ವಿಜಾಃ ॥೩॥

ಇಪ್ಪತ್ತನೆಯ ಅಧ್ಯಾಯ

ಹೀಗೆ ಹೇಳಿ ಶಿವನು ಆನಂದಭರಿತನಾಗಿರಲು ಕೂಡಲೇ, ಆ ಮಹೇಶ್ವರನ ಸುತ್ತಲೂ ದೇವಿಯುಬರುತ್ತಿದ್ದ ಶ್ರೇಷ್ಠವಾದ ವಿಮಾನದ ನೆರಳು ವ್ಯಾಪಿಸಿತು. ||೧||

ಅನಂತರ ಜಯಧ್ವನಿಯೂ, ಆಮೇಲೆ ತೂರ್ಯವಾದ್ಯಧ್ವನಿಗಳೂ ಹಾಗೆಯೇ ಮನೋಹರವಾದ ದುಂದುಭಿಧ್ವನಿಗಳೂ ಸಹ ಪರಮೇಶ್ವರನಿಗೆ ಕೇಳಿಸಿದವು. ||೨||

ಕೋಟಿ ಮಿಂಚಿನಂತೆ ಹೊಳೆಯುವ ಗೌರಿಯ ಶರೀರಕಾಂತಿಯನ್ನು ನೋಡಿ ಮಹೇಶ್ವರನು ಸಂತೋಷ ಹೊಂದಿ ಉಬ್ಬಿಹೋದನು. ||೩||

ಜಯಧ್ವನೀನಾಮಭವದ್ಯಸ್ತು ಕೋಲಾಹಲಸ್ತದಾ ।
ಸ ಸುಧಾಸಂನಿಭೋ ಜಾತಸ್ತದಾ ಶ್ರವಣಮಂಗಳಂ ॥೪॥

ತತಃ ಪರಂ ಶಿವಾ ದೃಷ್ಟ್ವಾ ಸೌಂದರ್ಯನಿಧಿರಾದರಾತ್ ।
ಮಹಾದೇವೇನ ತೇನಾಯಂ ಪರಮಾನಂದಮಾಪ್ತವಾನ್ ॥೫॥

ಯಚ್ಚಿಂತಿತಂ ಫಲಂ ಪೂರ್ವಂ ತತ್ಪ್ರಾಪ್ತಮಧುನಾ ಮಯಾ ।
ಅತಃ ಪರಂ ನ ಮೇ ಕಿಂಚಿದ್ದುರ್ಲಭಂ ವಸ್ತು ದೃಶ್ಯತೇ ॥೬॥

ನವನೀತಮಿವ ಪ್ರಾಪ್ಯ ಬಾಲಕಃ ಸ ತದಾ ಹರಃ ।
ತುಷ್ಟಃ ಪುಷ್ಟಃ ಪ್ರಹೃಷ್ಟಶ್ಚ ದೃಷ್ಟ್ವಾ ತಾಂ ಗಿರಿಕನ್ಯಕಾಂ ॥೭॥

ಅನನ್ನಃ ಪರಮಾನ್ನಾನಿ ಯಥಾಸ್ಯಂ ಪ್ರಾಪ್ಯ ತುಷ್ಯತಿ ।
ತಥಾ ತುಷ್ಟೋ ಮಹಾದೇವೋ ದೃಷ್ಟ್ವಾ ಗೌರೀಂ ಮನೋಹರಾಂ ॥೮॥

ಆ ಸಮಯದಲ್ಲಿ ಆದ ಜಯಧ್ವನಿಗಳ ಕೋಲಾಹಲವು ಅಮೃತಸಮಾನವಾಗಿ ಕಿವಿಗಳಿಗೆ ಇಂಪಾಗಿ ಮಂಗಳಕರವಾಗಿ ತೋರಿತು. ॥೪॥

ಅನಂತರ ಮಹಾದೇವನು ಸೌಂದರ್ಯನಿಧಿಯಾದ ಪಾರ್ವತಿಯನ್ನು ನೋಡಿ ಪರಮಾನಂದಭರಿತನಾದನು. ॥೫॥

ಹಿಂದೆ ನಾನು ಯೋಚನೆಮಾಡಿದ ಫಲವು ಈಗ ನನಗೆ ದೊರೆತಿದೆ. ಇನ್ನು ಮುಂದೆ ನನಗೆ ದುರ್ಲಭವಾದ ವಸ್ತುವೇ ಇಲ್ಲ ಎಂದು ಯೋಚಿಸಿದನು. ॥೬॥

ಬೆಣ್ಣೆಯನ್ನು ಕಂಡ ಬಾಲಕನಂತೆ, ಪರಮೇಶ್ವರನು ಗಿರಿಜೆಯನ್ನು ನೋಡಿ, ತುಷ್ಟಿಯನ್ನೂ (ತೃಪ್ತಿಯನ್ನೂ) ದೇಹಪುಷ್ಟಿಯನ್ನೂ ಹೊಂದಿದನಲ್ಲದೇ ಸಂತುಷ್ಟನೂ ಆದನು. ॥೭॥

ಅನ್ನವನ್ನೇ ಕಾಣದವನು ಬೇಕಾದಷ್ಟು ಪರಮಾನ್ನವನ್ನು ಕಂಡು ಸಂತೋಷ ಹೊಂದುವಂತೆ, ಮನೋಹರಳಾದ ಗೌರಿಯನ್ನು ನೋಡಿದ ಮಹೇಶ್ವರನು ಸಂತುಷ್ಟನಾದನು. ॥೮॥

ಅಪುತ್ರಃ ಪುತ್ರಮಾಸಾದ್ಯ ಯಥಾ ತುಷ್ಟೋ ಭವೇತ್ತಥಾ ।
ತುಷ್ಟೋ ಗೌರೀಂ ವಿಲೋಕ್ಯಾಶು ಕೃಶಃ ಪೂರ್ವಂ ಸ ತಾಂ ವಿನಾ॥೯॥

ಮಾಕಂದಕಂದಂ ಸಂಪ್ರಾಪ್ಯ ಪಿಕಃ ಪುಷ್ಟೋ ಯಥಾ ತಥಾ ।
ಗೌರೀಂ ದೃಷ್ಟ್ವಾ ಮಹಾದೇವಸ್ತುಷ್ಟ ಏವ ಪ್ರತಿಕ್ಷಣಂ ॥೧೦॥

ಪ್ರಾಜ್ಯಂ ರಾಜ್ಯಂ ಸಮಾಸಾದ್ಯ ಧನಹೀನೋ ಯಥಾ ನರಃ ।
ತುಷ್ಟಸ್ತಥಾ ಮಹಾದೇವೋ ದೃಷ್ಟ್ವಾ ತುಷ್ಟೋ ಗಿರೀಂದ್ರಜಾಂ॥೧೧॥

ತತಃ ಪರಂ ಪ್ರಾಪ ಗಿರೀಂದ್ರಕನ್ಯಾ
ಧನ್ಯಾ ಪುರಾರಾತಿಪುರಃ ಪ್ರಕಾರಂ ।
ತತಃ ಪರಂ ಹರ್ಷಮನೋಜ್ಞದೃಷ್ಟಿಃ
ಸುಪುಷ್ಪವೃಷ್ಟ್ಯಾ ಸಹ ಸಂಬಭೂವ ॥೧೨॥

ಪುತ್ರಸಂತಾನವೇ ಇಲ್ಲದಿರುವವನಿಗೆ ಪುತ್ರಪ್ರಾಪ್ತಿಯಾದರೆ ಸಂತೋಷವುಂಟಾಗುವಂತೆ, ಗೌರಿಯ ದರ್ಶನಕ್ಕಿಂತಲೂ ಹಿಂದೆ ಕೃಶನಾಗಿದ್ದ ಪರಮೇಶ್ವರನು ಈಗ ಆ ಕಾರ್ಶ್ಯವನ್ನು ಬಿಟ್ಟು ಗೌರಿಯನ್ನು ನೋಡಿ ಕೂಡಲೆ ಆನಂದಭರಿತನಾದನು. ||೯||

ಸಿಹಿಮಾವಿನಮರದ ಚಿಗುರನ್ನು ಹೊಂದಿದ ಕೋಗಿಲೆಯು ಸಂತೋಷದಿಂದ ಪುಷ್ಟಿಹೊಂದುವಂತೆ ಗೌರಿಯನ್ನು ನೋಡಿ ಮಹಾದೇವನು ಪ್ರತಿಕ್ಷಣದಲ್ಲಿಯೂ ಸಂತೋಷಮಗ್ನನಾಗುತ್ತಿದ್ದನು. ||೧೦||

ದರಿದ್ರನಾದ ಮಾನವನು ಐಶ್ವರ್ಯಸಮೃದ್ಧಿಯಿಂದ ಕೂಡಿದ ರಾಜ್ಯವನ್ನು ಪಡೆದು ಸಂತೋಷಪಡುವಂತೆ ಗಿರಿರಾಜಕುಮಾರಿಯನ್ನು ನೋಡಿ ಮಹಾದೇವನು ಉತ್ಸಾಹಗೊಂಡನು. ||೧೧||

ಅನಂತರ ಧನ್ಯಳಾದ ಗಿರಿರಾಜಪುತ್ರಿಯು ತ್ರಿಪುರಾಸುರರ ಶತ್ರುವಾದ ಮಹೇಶ್ವರನ ಪಟ್ಟಣದ ಪ್ರಾಕಾರವನ್ನು ಸೇರಿದಳು. ಒಡನೆಯೇ ಪುಷ್ಪವೃಷ್ಟಿಯಾಗಲು ದೇವಿಯು ಸಂತೋಷದಿಂದ ಪತಿಭವನವನ್ನೈದಿದಳು. ||೧೨||

ಅಪಾರತೂರ್ಯಧ್ವನಯಃ ಪ್ರವೃತ್ತಾಃ
ಸುದುಂದುಭಿಧ್ವಾನವಿಧಾನಯುಕ್ತಾಃ ।
ಸಶಂಖನಾದಾಶ್ಚ ಸುಗಾನನಾದಾಃ
ಜಯಧ್ವನೀನಾಮಪಿ ವೃಷ್ಟಿರಾಸೀತ್ ॥೧೩॥

ತದಾ ನವಂ ಸೃಷ್ಟಮಭೂತಪೂರ್ವಂ
ಸಮುಂದಿರಂ ತನ್ನಗರಂ ಶಿವೇನ ।
ಜಯಪ್ರದಂ ಶೋಭನದಂ ಮನೋಜ್ಞಂ
ಸರ್ವತ್ರ ಸರ್ವೋತ್ಸವಸಾಗರಾಢ್ಯಂ ॥೧೪॥

ಅನಂತನಾನಾವಿಧರತ್ನಮಾಲಾ
ಸುತೋರಣಾಗಾರವರಾವೃತಾನಿ
ಸ್ಥಲಾನಿ ಸರ್ವಾಣಿ ಚಕಾರ ಶಂಭು
ರ್ಲೀಲಾವಿನೋದೇನ ದಯಾನಿಧಾನಃ ॥೧೫॥

ಅನಂತರ ಅಪಾರವಾದ ತೂರ್ಯವೆಂಬ ವಾದ್ಯಧ್ವನಿಗಳಾದವು. ಒಳ್ಳೆಯ ದುಂದುಭಿಗಳ ಧ್ವನಿಗಳು ಈ ತೂರ್ಯಧ್ವನಿಗಳೊಡನೆ ಬೆರೆತುಹೋದವು. ಒಳ್ಳೆಯ ಸಂಗೀತನಾದವೂ, ಶಂಖಧ್ವನಿಯೂ ಏಕದಾ ಆದುವು. ಇವುಗಳನ್ನು ನೋಡಿದರೆ ಜಯಧ್ವನಿಗಳ ವೃಷ್ಟಿಯೇ ಬರುತ್ತಿರುವುದೋ ಎಂಬಂತೆ ತೋರುತ್ತಿದ್ದಿತು. ॥೧೩॥

ಆಗ ಶಿವನು ಅಭೂತಪೂರ್ವವಾದ ಒಂದು ಹೊಸ ಪಟ್ಟಣವನ್ನು ಸೃಷ್ಟಿಮಾಡಿದನು. ಈ ನಗರವು ಜಯಪ್ರದವೂ ಮಂಗಳಕರವೂ ಅಲ್ಲದೇ ಮನೋಹರವೂ ಆಗ ಎಲ್ಲಾ ಕಡೆಯಲ್ಲಿಯೂ ಸಕಲ ಉತ್ಸವಗಳೆಂಬ ಸಾಗರಗಳಿಂದ ಕೂಡಿದ್ದಿತು. ॥೧೪॥

ದಯಾನಿಧಿಯಾದ ಪರಶಿವನು ಈ ಪಟ್ಟಣದಲ್ಲಿ ಎಲ್ಲಾಸ್ಥಳಗಳಲ್ಲಿಯೂ ಅನಂತವೂ ನಾನಾವಿಧವೂ ಆದ ರತ್ನಮಾಲೆಗಳಿಂದಲೂ ಒಳ್ಳೆಯ ತೋರಣಗಳಿಂದಲೂ ಕೂಡಿರುವ ಉತ್ತಮವಾದ ಮನೆಗಳನ್ನು ತನ್ನ ಲೀಲಾಮಾತ್ರದಿಂದಲೇ ರಚಿಸಿದನು. ॥೧೫॥

ರತ್ನದ್ವಾರವಿಶೇಷಕೋಟಿಶಿಖರದ್ವಾರಾಣಿ ತೀರ್ತ್ವಾ ಶನೈಃ
ಗೌರೀ ರತ್ನವಿಮಾನರತ್ನನಿಲಯಾ ಸಂತೋಷವರ್ಷಾಯುತಾ ।
ಸಾ ನೀರಾಜನಕೋಟಿಕೊಟಿಘಟಿತಾ ನಾಟ್ಯಾನಿ ದೃಷ್ಟ್ವಾ ಮುಹುಃ
ತಸ್ಮಾದಪ್ಯವತೀರ್ಯ ಶಂಕರಗೃಹದ್ವಾರೇ ಸ್ಥಿತಾ ಸಾ ಕ್ಷಣಂ ॥೧೬॥

ಸಾ ತಸ್ಮಿನ್ಸಮಯೇ ಶಿವಂ ಹೃದಿ ಮುಹುಃ ಸ್ಮೃತ್ವಾ ಪುನಃ ಸಸ್ಮಿತಾ
ಧೃತ್ವಾ ಸಾ ವಿಜಯಾಕರಂ ಸುರುಚಿರಾ ಗೌರೀ ಶಿವಾಲೋಕನೇ ।
ಲಜ್ಜಾನಮ್ರಮುಖೀ ವಿಹಾರಸದನಂ ಮಂದಂ ಮುದಾ ಪ್ರಾಪ ಸಾ
ಸಾನಂದಾ ಶಿವವೀಕ್ಷಿತಾ ಮುಹುರುಮಾ ಧನ್ಯೇತಿ ಮನ್ಯೇತಿ ಚ ॥೧೭॥

ಸಾನಂದಂ ಮುಹುರಿಂದುಮೌಳಿವದನಂ ಸ್ಮೇರಾಂಕಿತಂ ಸಸ್ಮಿತಾ
ದೃಷ್ಟ್ವಾ ಸನ್ನಿಧಿಮೇತ್ಯ ಶೈಲತನಯಾ ತೃಪ್ತಾ ನ ಸಾ ಸರ್ವಥಾ ।

ರತ್ನಮಯವಾದ ದ್ವಾರವಿಶೇಷಗಳನ್ನೂ, ಕೋಟ್ಯಂತರ ಶಿಖರದ್ವಾರಗಳನ್ನೂ ಮೆಲ್ಲಮೆಲ್ಲಗೆ ದಾಟಿ, ಶ್ರೇಷ್ಠವಾದ ರತ್ನವಿಮಾನದಲ್ಲಿ ಕುಳಿತಿರುವ ಗೌರಿಯು ಸಂತೋಷವೆಂಬ ಮಳೆಯಿಂದ ಯುಕ್ತಳಾದಳು. (ಅಂದರೆ ಸಂತೋಷಹೊಂದಿದ ಳೆಂದು ಭಾವವು) ಅನಂತರ ದೇವಿಯು ಬಂದಳೆಂದು ಕೋಟ್ಯಂತರ ಸಖಿಯರು ಆರತಿಗಳನ್ನು ಮಾಡಿ ದೇವಿಗೆ ಬೆಳಗಿದರು. ಆಗ ಗಿರಿಜೆಯು ನಾಟ್ಯವನ್ನು ಪದೇ ಪದೇ ನೋಡುತ್ತಾ, ವಿಮಾನದಿಂದಿಳಿದು ಶಂಕರನ ಮನೆಯ ಬಾಗಿಲಿನಲ್ಲಿ ಒಂದು ಕ್ಷಣಕಾಲ ನಿಂತುಕೊಂಡಳು. ॥೧೬॥

ಗಿರಿಜೆಯು ಆ ಶಿವನ ಮಂದಿರದ ಮುಂದೆ ನಿಂತುಕೊಂಡು ಮನಸ್ಸಿನಲ್ಲಿ ಶಿವನನ್ನು ಧ್ಯಾನಮಾಡುತ್ತಾ ಪ್ರವೇಶಿಸಲು ಸಮಯವನ್ನು ನಿರೀಕ್ಷಿಸುತ್ತಿದ್ದಳು. ಅನಂತರ ಮಂದಹಾಸಯುಕ್ತಳಾಗಿ ಮನೋಹರಳಾಗಿ ತೋರುತ್ತಿರುವ ಗೌರಿಯು ಶಿವನನ್ನು ದರ್ಶನಮಾಡಲು ಲಜ್ಜೆಯಿಂದ ಬಗ್ಗಿದ ಮುಖವುಳ್ಳವಳಾಗಿ, ಸಖಿಯಾದ ವಿಜಯಾದೇವಿಯ ಕೈಹಿಡಿದು, ತನ್ನ ನಾಚಿಕೆಯನ್ನು ತೋರ್ಪಡಿಸುತ್ತಾ ಮೆಲ್ಲ ಮೆಲ್ಲಗೆ ಶಿವನ ವಿಹಾರಮಂದಿರವನ್ನು ಸೇರಿದಳು. ಅಲ್ಲಿಗೆ ಹೋದನಂತರ ಬಾರಿ ಬಾರಿಗೂ, ಉಮೇ, ನೀನೇ ಧನ್ಯಳು. ನೀನೇ ಪೂಜ್ಯಳು ಎಂದು ತಾನೇ ಹೇಳಿ ಕೊಳ್ಳುತ್ತಾ ಶಿವನ ದೃಷ್ಟಿಗೆ ಪಾತ್ರಳಾದಳು. ॥೧೭॥

ವಿಹಾರಮಂದಿರವನ್ನು ಪ್ರವೇಶಮಾಡಿದ ಮೇಲೆ, ಮಂದಹಾಸದಿಂದ ಕೂಡಿ

ತಾಂ ದೃಷ್ಟ್ವಾ ವಿಜಯಾ ಯಯೌ ಚ ಸಜಯಾ ಗೇಹಾಂತರಂ ಸಾ ತತೋ
ಗೌರೀ ಶಂಕರಸುಂದರಾಂಕಮಗಮದ್ವಿದ್ಯುಲ್ಲತೇವಾಂಬುದಂ ॥೧೮॥

ಗಾಢಾಲಿಂಗನಚುಂಬನಾಧರರಸಾಸ್ವಾದಾನುಮೋದಾದ್ಭುತಾ
ನಂದಾಂಭೋಧಿತರಂಗಸಂಗಲಲಿತಸ್ವಸ್ವಾಂಗರಾಗಸ್ಥಲೇ ।
ಲೀಲಾ ಕಾಪ್ಯಭವದ್ಯಯಾ ನ ಪುನರಪ್ಯಂಗೇ ಭವೇದೂನತಾ
ತದ್ಧಾರಾಸುಧಯಾ ಪ್ರತಿಕ್ಷಣಮಭೂದಾನಂದವೃದ್ಧಿಸ್ತಯೋಃ ॥೧೯॥

ಕುಂದಾಮಂದಮರಂದಮಂದಿರರಸಾಲಿಂದಾಲಿಮಾಲಾಕುಲಾ
ಶಯ್ಯಾ ಶಂಕರಚಿತ್ತವೃತ್ತಿರಚಿತಾ ತಾರಾಕುಲವ್ಯಾವೃತಾ ।

ಆನಂದಭರಿತವಾಗಿರುವ ಚಂದ್ರಮೌಳಿಯ ಮುಖವನ್ನು ಅನೇಕ ಸಲ ನೋಡಿ ತಾನೂ ಮಂದಹಾಸವನ್ನು ಬೀರುತ್ತಾ ಗಿರಿರಾಜಕುಮಾರಿಯು ಆ ತನ್ನ ರಮಣನ ಸಮೀಪಕ್ಕೆ ಹೋದಳು. ದೇವಿಗೆ ಪರಮೇಶ್ವರನನ್ನು ಎಷ್ಟು ನೋಡಿದರೂ ತೃಪ್ತಿಯೇ ಉಂಟಾಗಲಿಲ್ಲ. ಇದನ್ನು ನೋಡಿ ದೇವಿಯು ವಿಹಾರೋನ್ಮುಖಳಾಗಿ ರುವಳು, ಇನ್ನು ನಾವಿಲ್ಲಿರುವುದು ಸರಿಯಲ್ಲವೆಂದು ಭಾವಿಸಿ ವಿಜಯಾಸಖಿಯು ಜಯಾಸಖಿಯೊಡನೆ ಆ ಸ್ಥಳವನ್ನು ಬಿಟ್ಟು ಅಲ್ಲಿಂದ ಹೊರಟುಹೋದಳು. ಹೀಗೆ ತನ್ನ ಸಖಿಯರು. ಹೊರಟುಹೋದಮೇಲೆ ಗೌರಿಯು, ಮಿಂಚು, ಮೇಘವನ್ನು ಸೇರುವಂತೆ, ಶಂಕರನ ಸುಂದರವಾದ ತೊಡೆಯ ಮೇಲೆ ಕುಳಿತಳು. ॥೧೮॥

ಅನಂತರ ಉಮಾಮಹೇಶ್ವರರು ಪರಸ್ಪರ ಗಾಢಾಲಿಂಗನ, ಚುಂಬನ, ಅಧರರಸಾಸ್ವಾದ ಮತ್ತು ಅನುಮೋದ (ಪ್ರೀತಿಯುಕ್ತವಾದ ಮಾತುಗಳಿಂದ ಸಂತೋಷವನ್ನುಂಟುಮಾಡುವಿಕೆ) ಮುಂತಾದ ಬಾಹ್ಯಸುರತಕ್ರೀಡೆಗಳಿಂದ, ಆನಂದ ವೆಂಬ ಸಮುದ್ರದ ಅಲೆಗಳ ಸಂಬಂಧದಿಂದ ಮನೋಹರರಾಗಿ, ತಮ್ಮ ಅನುರಾಗ ವನ್ನು ಅವಯವಗಳ ಮೂಲಕ ತೋರ್ಪಡಿಸುತ್ತಾ ವಿಹರಿಸಿದರು. ಹೀಗೆ ವರ್ಣಿಸಲಸಾಧ್ಯವಾಗಿರುವಂತೆ ವಿಹರಿಸಿದರೂ ಪಾರ್ವತೀಪರಮೇಶ್ವರರ ಅವಯವ ಗಳಲ್ಲಿ ಯಾವ ವಿಧವಾದ ಊನತೆಯಾಗಲೀ ಮಾಲಿನ್ಯವಾಗಲೀ ಉಂಟಾಗಲಿಲ್ಲ. ಅಂತೂ ಉಮಾಮಹೇಶ್ವರರು ತಮ್ಮ ಅನುರಾಗವೆಂಬ ಅಮೃತಧಾರೆಯನ್ನು ಪರಸ್ಪರ ಬೀರುತ್ತಾ ಪ್ರತಿಕ್ಷಣದಲ್ಲಿಯೂ ಆನಂದಾತಿರೇಕದಿಂದ ಶೋಭಿಸುತ್ತಿದ್ದರು. ॥೧೯॥

ಅಪಾರವಾದ ಕುಂದಪುಷ್ಪಗಳ ಮಕರಂದ ಧಾರೆಗಳಿಂದ ವ್ಯಾಪ್ತವಾಗಿರುವ ಶಿವಮಂದಿರದ ರಸವತ್ತಾದ ಒಳಗಿನ ಕೊಠಡಿಯಲ್ಲಿ ಪುಷ್ಪಸಮೂಹಗಳಿಂದ ರಚಿತ

ಶುದ್ಧಾಶುದ್ಧಸುಧಾಂಶುಮಂಡಲಕುಲವ್ಯಾಪ್ತಾ ಶಿವಾಸಂಗಮೇ
ಶಂಗಾಯಾತಿಮುದಂ ತತಾನ ಪರಮಾನಂದಾಯ ಸಾ ಲೀಲಯಾ ॥೨೦॥

ಕಾರ್ಯಾಕಾರ್ಯವಿಚಾರದೂರಹೃದಯಾ ಮೃತ್ಯುಂಜಯಸ್ಯ ಪ್ರಿಯಾ
ಸಂಗಾಲಿಂಗನತತ್ಪರಾ ಮುಹುರಿಹಾನಂಗವ್ಯಥಾ ಮಾಸ್ತ್ವಿತಿ ।
ಗ್ರೀಷ್ಮಾರ್ತಸ್ತೃಷಿತೋ ಜಹಾತಿ ಸಲಿಲಂ ಪ್ರಾಪ್ಯಾಮಲಂ ಕೋಮಲಂ
ಕಸ್ತದ್ವನ್ನ ಜಹಾತಿ ಸಾಪಿ ಗಿರಿಜಾ ಶಂಗಾಂಗಸಂಗಂ ಪುನಃ ॥೨೧॥

ಲೋಕೇ ಯನ್ಮಧುರಂ ತತೋಽಪಿ ಮಧುರಂ ಹಾರಂ ವಿಹಾರಂ ಪರಂ
ಮೇನೇ ಸಾ ಗಿರಿರಾಜರಾಜತನಯಾ ಸೌಭಾಗ್ಯಸಂಘಾಲಯಾ ।

ವಾದ ಶಯ್ಯೆಯು ಪರಮೇಶ್ವರನ ಮನೋಭಿಪ್ರಾಯಕ್ಕನುಗುಣವಾಗಿತ್ತು. ಅದು ಮಹಾದೇವನಿಂದಲೇ ಲೀಲಾಮಾತ್ರದಿಂದ ನಿರ್ಮಿಸಲ್ಪಟ್ಟಿದ್ದಿತು. ಆ ಶಯ್ಯೆಯಲ್ಲಿರುವ ಸುಗಂಧವನ್ನು ಹೊತ್ತುಕೊಂಡು ಹೋಗುವುದಕ್ಕಾಗಿ ಭ್ರಮರಪಂಕ್ತಿಗಳೆಲ್ಲಾ ಅಲ್ಲಿ ಬಂದು ಮುತ್ತಿಕೊಂಡಿದ್ದವು. ನಕ್ಷತ್ರಪಂಕ್ತಿಗಳೂ, ಪೂರ್ಣಚಂದ್ರಮಂಡಲವೂ ಆ ಶಯ್ಯೆಯ ಅಲಂಕಾರವನ್ನು ಇಮ್ಮಡಿಮಾಡುತ್ತಿದ್ದವು. ಇಂತಹ ಶಯ್ಯೆಯಲ್ಲಿ ಗಿರಿಜೆಯೊಡನೆ ವಿಹರಿಸಿದ ಪರಮೇಶ್ವರನು ಅತ್ಯಾನಂದವನ್ನು ತಳೆದವನಾದನು.॥೨೦॥

ಮೃತ್ಯುಂಜಯನೆನಿಸಿದ ಶಿವನ ಪ್ರೇಯಸಿಯಾದ ಗಿರಿಜೆಯು ಆನಂದ ಪರವಶಳಾಗಿ ಕಾರ್ಯಾಕಾರ್ಯವನ್ನು ವಿಚಾರಿಸುವುದರಲ್ಲಿಯೂ ಮನಸ್ಸಿಲ್ಲದವಳಾಗಿ ಪದೇ ಪದೇ ಸುಖಸ್ವರೂಪನಾದ ಮಹೇಶ್ವರನ ಆಲಿಂಗನದಲ್ಲಿ ತತ್ಪರಳಾಗಿ ನಮಗೆ ಬಾರಿಬಾರಿಗೂ ಈ ಮನ್ಮಥನ ಪೀಡೆಯೇ ಉಂಟಾಗಬಾರದೆಂದು ನಿಶ್ಚಯಿಸಿ ಮಹೇಶ್ವರನೊಡನೆ ವಿಹರಿಸುತ್ತಿದ್ದಳು. ಗ್ರೀಷ್ಮಕಾಲದ ಉರಿಬಿಸಿಲಿನಿಂದ ಬಳಲಿ ಕಡುಬಾಯಾರಿದ ಮಾನವನು ಮೃದುಮಧುರವಾದ ನೀರನ್ನು ಹೊಂದಿದರೆ ಹೇಗೆ ಬಿಡದೇ ಅಲ್ಲೇ ಜಲಪಾನಮಾಡುತ್ತಲೂ ಆ ನೀರಿನ ಮಾಧುರ್ಯವನ್ನು ಅನುಭವಿಸುತ್ತಲೂ ತತ್ಪರನಾಗುವನೋ, ಹಾಗೆಯೇ ಬಹಳ ಕಾಲದಿಂದ ವಿರಹವ್ಯಥೆಯಲ್ಲಿ ಮಗ್ನಳಾಗಿದ್ದ ಗಿರಿಜಾದೇವಿಯು ಪರಮೇಶ್ವರನ ಆಲಿಂಗನವನ್ನು ಬಿಡದೇ ಪದೇ ಪದೇ ಮಾಡುತ್ತಾ ಆನಂದಪರವಶಳಾದಳು. ॥೨೧॥

ಸಕಲ ಸೌಭಾಗ್ಯಸಮೂಹಗಳಿಗೂ ಆಶ್ರಯಳಾದ ಗಿರಿರಾಜಕುಮಾರಿಯು ಲೋಕದಲ್ಲಿ ಮಧುರವಾದ ವಸ್ತುಗಳೆಷ್ಟುಂಟೋ ಅವೆಲ್ಲಕ್ಕಿಂತಲೂ ಪರಮೇಶ್ವರನ

ದುಃಖಾನಿ ಪ್ರಲಯಂ ಪ್ರಯಾಂತು ವಿಲಯಂ ಕಾರ್ಶ್ಯಂ ಪ್ರಯಾತ್ವಪ್ರಿಯಂ
ದೂರಂ ಯಾಂತು ವಿಪತ್ಕುಲಾನ್ಯಪಿ ಮುಹುಃ ಶಂಗಾಂಗಸಂಗಾದಿತಿ ॥೨೨॥

ಶಂಗಾಲಿಂಗನತತ್ಪರಾ ಗಿರಿಸುತಾ ಜಾತಾ ಯದಾ ಸಾ ತದಾ
ಹಾರಾಸ್ತು ತ್ರುಟಿತಾಸ್ತಥಾಂಗದಯುಗಂ ಭಗ್ನಂ ಚ ಕಾಂಚೀ ತಥಾ ।
ಭಗ್ನಾ ಕಂಕಣಮಂಡಲಂ ಚ ಕಣಶೋ ಭಗ್ನಂ ತದಾಲಿಂಗನಾತ್
ಪುಷ್ಟಾ ತತ್ತನುರಷ್ಟಮೂರ್ತಿಮಹಿಲಾಲೀಲಾವಿಲಾಸೈರಲಂ ॥೨೩॥

ಕ್ರೀಡಾಮಂಡಿತಗಂಡಮಂಡಲಲಸತ್ಕಸ್ತೂರಿಕಾಮಂಡನಂ
ಕರ್ಪೂರಾಗರುಕೇಸರಾದಿರುಚಿರಶ್ರೀಖಂಡಖಂಡದ್ರವ್ಯೈಃ ।
ಸಾಕಂ ನಿರ್ಗತಮೇವ ಸತ್ವರಮತಿಸ್ವೇದಾಂಬುಧಾರಾನ್ವಿತೈ
ಸ್ತನ್ನಾಭೀಸರಸಿ ಪ್ರವಿಶ್ಯ ರುಚಿರಂ ತದ್ಗಂಧಬಂಧಾನ್ವಿತೈಃ ॥೨೪॥

ವಿಹಾರದಿಂದುಂಟಾಗುವ ಮಾಧುರ್ಯವೇ ಅತಿಶಯವಾದುದು ಎಂದು ತಿಳಿದಳು. ಸುಖಸ್ವರೂಪನಾದ ಮಹಾದೇವನ ಅವಯವಸಂಸ್ಪರ್ಶದಿಂದ ನಾನಾವಿಧವಾದ ದುಃಖಗಳೂ, ವಿರಹದಿಂದುಂಟಾಗಿದ್ದ ಕೃಶತೆಯೂ, ಅಪ್ರಿಯವೆನಿಸಿದ್ದ ಪದಾರ್ಥಗಳೂ ಮತ್ತು ವಿಪತ್ಪರಂಪರೆಗಳೂ ಸಹ ದೂರವಾಗಲಿ ಎಂಬುದಾಗಿಯೇ ಗಿರಿಜೆಯು ಶಿವನೊಡನೆ ಆಲಿಂಗನಾದಿಗಳನ್ನು ಮಾಡುತ್ತಾ ವಿಹರಿಸಿದಳು. ॥೨೨॥

ಗಿರಿರಾಜಪುತ್ರಿಯು ಸುಖಮಯನಾದ ಶಿವನ ಆಲಿಂಗನದಲ್ಲಿ ಉದ್ಯುಕ್ತಳಾದ ಕೂಡಲೇ ದೇವಿಯ ದೇಹವು ಆನಂದಪರವಶತೆಯಿಂದ ಉಬ್ಬಿಹೋಯಿತು. ಆಗ ತಾನು ಧರಿಸಿದ್ದ ಹಾರವು ಕಿತ್ತುಹೋಯಿತು. ಭುಜಕೀರ್ತಿಯು ಭಗ್ನವಾಯಿತು. ಕಾಂಚಿಯೂ (ಡಾಬೂ) ಮುರಿಯಿತು. ಅಲ್ಲದೇ ಆ ಪರಶಿವನ ಆಲಿಂಗನಲಾಭ ದಿಂದಲೂ ಅಷ್ಟಮೂರ್ತಿಯೆನಿಸಿದ ಶಿವನ ಪ್ರಿಯೆಯಾದ ಗಿರಿಜೆಯ ಲೀಲಾವಿಲಾಸ ಗಳಿಂದಲೂ ಶರೀರವು ಉಬ್ಬಿ ಕೈಬಳೆಗಳು ಸಿಡಿದುಹೋದುವು. ಹೀಗೆ ದೇವಿಯು ಆನಂದ ಸಮುದ್ರದಲ್ಲಿ ಮುಳುಗಿ ಮೈಮರೆತಳು. ॥೨೩॥

ವಿಹಾರಕ್ಕೋಸ್ಕರ ಗಂಡಪ್ರದೇಶದಲ್ಲಿ ಅಲಂಕರಿಸಿಕೊಂಡಿರುವ (ಬಳಿದು ಕೊಂಡಿರುವ) ಕಸ್ತೂರಿಯು, ಕರ್ಪೂರ, ಅಗರು, ಕೇಸರಿ ಮುಂತಾದ ದೇವಿಯ ಶರೀರಕ್ಕೆ ಲೇಪನೆಮಾಡಿದ್ದ ಮನೋಹರವಾದ ಸುಗಂಧದ್ರವ್ಯಗಳೊಡನೆಯೂ,

ಚಿರಹಾರವಿಹಾರಸಾರಭಾರ
ಪ್ರಚುರಾನಂಗವಿಲಾಸಲಾಲಸಾಯಾಃ ।
ವಿಧಿಕಲ್ಪಸಹಸ್ರಮಪ್ಯನಲ್ಪಂ
ಕ್ಷಣಕಲ್ಪಂ ಸಮಭೂದ್ಗಿರೀಂದ್ರಜಾಯಾಃ ॥೨೫॥

ಅಮೃತಾಮೃತಮಿಂದುಮೌಳಿಲೀಲಾನಿಲಯಂ
ಕಾಯಮನಾಮಯಂ ಮಮೇದಂ ।
ಅನುಮೇಯಮಹೋದಯಂ ಸ್ವಮಾಯಾ
ವಿಲಯೋಪಾಯತಯಾ ಶಿವಾಪಿ ಮೇನೆ ॥೨೬॥

ಬಹುಕಲ್ಪವಿರೋಗಜಾತನೋ
ಸ್ತನುತಾ ಸಾತನುತಾಮವಾಪ ರೂಪಂ ।

ಮತ್ತು ಶ್ರೀಗಂಧದೊಡನೆಯೂ ಯುಕ್ತವಾಗಿ ವಿಹಾರಶ್ರಮದಿಂದುಂಟಾಗಿರುವ ಬೆವರಿನಧಾರೆಗಳೊಡನೆ ಬೆರೆತು, ಧಾರಾಕಾರವಾಗಿ ಹರಿಯುತ್ತಾ, ಆ ದೇವಿಯ ಗಂಭೀರವಾದ ನಾಭಿಪ್ರದೇಶದಲ್ಲಿ ಪ್ರವೇಶಮಾಡಿ, ಆ ನಾಭಿಯ ದಿವ್ಯಗಂಧದಿಂದ ಮನೋಹರವಾಗಿ ಶೋಭಿಸುತ್ತಿದ್ದಿತು. ॥೨೪॥

ಬಹಳಕಾಲ ಹರನೊಡನೆ ವಿಹರಿಸುತ್ತಾ, ರಸಭರಿತವಾದ ವಿನೋದಗಳಿಂದ ಕೂಡಿದ ಅಪಾರವಾದ ಮನ್ಮಥವಿಲಾಸಗಳಲ್ಲಿ ಕಾತರಳಾಗಿರುವ ಗಿರಿರಾಜಕುಮಾರಿಗೆ, ಬ್ರಹ್ಮಮಾನದ ಸಹಸ್ರ ಕಲ್ಪಗಳೂ ಅಲ್ಪವೆನಿಸಿ ಕೇವಲ ಒಂದು ಕ್ಷಣಕ್ಕೆ ಸಮಾನವಾಗಿ ಕಳೆದುಹೋದುವು. ॥೨೫॥

ಚಂದ್ರಮೌಳಿಯ ವಿಹಾರಕ್ಕೆ ಆಶ್ರಯವಾಗಿರುವ ಈ ನನ್ನ ಶರೀರವು ರೋಗಾದಿಗಳಿಂದ ವರ್ಜಿತವಾದದ್ದು, ಅಲ್ಲದೇ ಅಮೃತಕ್ಕಿಂತಲೂ ಉತ್ಕೃಷ್ಟವೆನಿಸಿದುದು. ಶಿವನ ಸಂಬಂಧವು ನನ್ನ ಅಜ್ಞಾನಗಳೆಲ್ಲವೂ ನಾಶವಾಗುವುದಕ್ಕೆ ಉಪಾಯಭೂತವಾಗಿರುವುದು. ಮತ್ತು ಮಹಾಮಹಿಮನಾದ ಮಹಾದೇವನ ಲೀಲೆಗೆ ಪಾತ್ರವಾಗಿರುವುದು. ಇದರ ಮಹಾಸೌಭಾಗ್ಯವನ್ನು ಇಷ್ಟೆಂದು ಹೇಳಲು ಶಕ್ಯವಲ್ಲ.॥೨೬॥

ಅನೇಕ ಕಲ್ಪಗಳ ವರೆವಿಗೆ ಯಾವ ವ್ಯಾಧಿಯೂ ಇಲ್ಲದೇ ಕೇವಲ ಪರಮೇಶ್ವರನ ವಿರಹದಿಂದ ಕೃಶವಾಗಿದ್ದ ಗಿರಿಜೆಯ ಆ ಶರೀರವು ಈಗ ಪರಶಿವನ ಶರೀರ

ಅನುರೂಪಮವಾಪ ತೇನ ರೇಜೇ
ಗಿರಿಜಾ ಶ್ರೀಗಿರಿನಾಯಕಾಂಕಶಯ್ಯಾಂ ॥೨೭॥

ಅಮಂದಪರಮಾನಂದಕಲ್ಲೋಲಕಲಿತೌ ಶಿವೌ ।
ಸ್ವಶಿವಾಕಾರಮಾಲೋಕ್ಯ ತುಷ್ಟೌ ಪುಷ್ಟೌ ಪುನಃ ಪುನಃ ॥೨೮॥

ಮಂದಸ್ಮೇರಾನುಸಂಧಾನನಿಧಾನಮಧುನಾ ಪರಂ ।
ಪ್ರಲಬ್ಧಮಿತಿ ತೌ ತಾವದನ್ಯೋನ್ಯಾನಂದಸಂವೃತೌ ॥೨೯॥

ತತಃ ಪರಂ ಪರತರೇ ವಿಹಾರರಸಸಾಗರೇ ।
ಗೌರೀಹರೌ ಪರಾಂ ಕ್ರೀಡಾಂ ಸವ್ರೀಡೌ ಚಕ್ರತುರ್ಭೃಶಂ ॥೩೦॥

ಏವಂ ಕ್ರೀಡಾವಿನೋದೇನ ನೀತಾಃ ಕಲ್ಪಾಃ ಸಹಸ್ರಶಃ ।
ತತಃ ಪರಂ ಶಂಕರೋಽಪಿ ಸಸ್ಮಾರಾನಂದಮಂಡಪಂ ॥೩೧॥

ಸಂಬಂಧದಿಂದ ಕಾರ್ಶ್ಯವನ್ನು ಕಳೆದುಕೊಂಡು ಪುಷ್ಟಿಹೊಂದಿರುವುದು. ದಿವ್ಯವಾದ ಆ ದೇವಿಯ ರೂಪಕ್ಕೆ ಈಗ ಪರಮೇಶ್ವರನ ಸಮಾಗಮವು ಅನುರೂಪವೆನಿಸಿತು. ಈ ದೇವಿಯು ಹಾಗೆ ದಿವ್ಯವಾದ ದೇಹಕಾಂತಿಯಿಂದ ಯುಕ್ತಳಾಗಿ, ಪರ್ವತಗಳಿಗೆ ಒಡೆಯನಾದ ಪರಶಿವನ ತೊಡೆಯೆಂಬ ಹಾಸಿಗೆಯನ್ನು ಆಶ್ರಯಿಸಿ, ಪ್ರಕಾಶಿಸಿದಳು. ॥೨೭॥

ಹೀಗೆ ಪಾರ್ವತೀಪರಮೇಶ್ವರರು ಅಪಾರವಾದ ಆನಂದ ಪ್ರವಾಹದಲ್ಲಿ ಮಗ್ನರಾಗಿ, ಪರಸ್ಪರವಾದ ತಮ್ಮ ಮಂಗಳರೂಪವನ್ನು ನೋಡಿಕೊಳ್ಳುತ್ತಾ, ಸಂತುಷ್ಟರಾಗಿ ಪುನಃ ಪುನಃ ಪುಷ್ಟಿಯನ್ನು ಹೊಂದುತ್ತಿದ್ದರು. ॥೨೮॥

ಈಗ ತಾನೇ ನಮಗೆ ಪರಸ್ಪರ ಅನುರಾಗವನ್ನು ತೋರ್ಪಡಿಸುವ ಸಮಯ ದೊರಕಿತೆಂದು ಆ ಉಮಾಮಹೇಶ್ವರರಿಬ್ಬರೂ ಪರಸ್ಪರ ಮಂದಹಾಸಯುಕ್ತರಾಗಿ ಆನಂದಭರಿತರಾದರು. ॥೨೯॥

ಅನಂತರ ಶ್ರೇಷ್ಠವಾದ ವಿಹಾರರಸಭರಿತವಾದ ಸಾಗರದಲ್ಲಿ ಗೌರೀ ಮತ್ತು ಪರಮೇಶ್ವರ ಇವರಿಬ್ಬರೂ ಲಜ್ಜಾಯುಕ್ತರಾಗಿ ವಿಶೇಷವಾದ ಸಂಭ್ರಮದಿಂದ ವಿಹರಿಸಿದರು. ॥೩೦॥

ಹೀಗೆ ಉಮಾಮಹೇಶ್ವರರು ವಿನೋದದಿಂದ ಕ್ರೀಡಿಸುತ್ತಿರಲು ಸಾವಿರಾರು ಕಲ್ಪಗಳೇ ಕಳೆದುಹೋದವು. ಆಗ ಶಂಕರನು ತಮ್ಮ ವಿಹಾರಕ್ಕೋಸ್ಕರವೇ ರಚಿಸ

ರತ್ನೇನೈಕೇನ ರಜತಂ ಶಂಖಯೋಜನಮುನ್ನತಂ ।
ತದನಂತಮಹಾಭೋಗಂ ತಾವದ್ಯೋಜನಮಾಯುತಂ ॥೩೨॥

ತದನಂತಸುಧಾರಶ್ಮಿಮಂಡಲೈಃ ಪರಿವೇಷ್ಟಿತಂ ।
ವಿದ್ಯುತ್ಕೋಟಿಗಣಾಕ್ರಾಂತಂ ತಾರಾಮಂಡಲಮಂಡಿತಂ ॥೩೩॥

ಕುಂದಮಂದಾರರಾಜೀವರಾಜೀಸೋಪಾನರಾಜಿತಂ ।
ತತ್ಸುಧಾಕುಲ್ಯಕಲ್ಲೋಲಮಾಲಿಕಾಲಲಿತಂ ಕೃತಂ ॥೩೪॥

ಚಂದ್ರಮಂಡಲಪರ್ಯಂತಶಿರಃ ಪಲ್ಯಂಕಸಂವೃತಂ ।
ಮಂದಾರಕುಸುಮಾಸಾರಮರಂದರಜಸಾವೃತಂ ॥೩೫॥

ಲ್ಪಟ್ಟಿರುವ ಆನಂದಮಂಟಪವನ್ನು ಸ್ಮರಿಸಲ್ಪಟ್ಟಿರುವ ಆನಂದಮಂಟಪವನ್ನು ಸ್ಮರಿಸಿಕೊಂಡನು. ॥೩೧॥

ಆ ಆನಂದಮಂಟಪವು ಒಂದೇ ಒಂದು ರತ್ನದಿಂದ ರಚಿಸಲ್ಪಟ್ಟು (ಅಥವಾ ಕೇವಲ ರತ್ನಗಳಿಂದಲೇ ರಚಿಸಲ್ಪಟ್ಟು) ಶಂಖಸಂಖ್ಯಾಕವಾದ (ಕೋಟ್ಯಂತರ) ಯೋಜನಗಳಷ್ಟು ಉನ್ನತವಾಗಿದ್ದಿತು. ಮತ್ತು ಅದು ಅಷ್ಟೇ ಯೋಜನದ ಉದ್ದವೂ ವಿಶಾಲವೂ ಆಗಿದ್ದಿತು. ॥೩೨॥

ಈ ಮಂಟಪವು ಸುತ್ತಲೂ ಅಮೃತಕಿರಣನಾದ ಚಂದ್ರನ ಮಂಡಲಗಳಿಂದ ಸುತ್ತುವರಿಯಲ್ಪಟ್ಟಿದ್ದಿತು. ಮತ್ತು ವಿದ್ಯುನ್ಮಾಲೆಗಳ ಗುಂಪು ಈ ಮಂಟಪದಲ್ಲಿ ಶೋಭಿಸುತ್ತಿದ್ದಿತು. ಅಲ್ಲದೇ ನಕ್ಷತ್ರಮಂಡಲಗಳು ಈ ಮಂಟಪವನ್ನು ಅಲಂಕರಿಸಿದ್ದವು. ॥೩೩॥

ಆ ಮಂಟಪವು ಕುಂದ, ಮಂದಾರ, ತಾವರೆ ಮುಂತಾದ ಪುಷ್ಪಸಮೂಹಗಳಿಂದ ಯುಕ್ತವಾದ ಸೋಪಾನಗಳಿಂದ ಮೆರೆಯುತ್ತಿದ್ದಿತು. ಸಮೀಪದಲ್ಲಿದ್ದ ಅಮೃತ ಸರೋವರದ ಪ್ರವಾಹಮಾಲೆಗಳು ಈ ಮಂಟಪವನ್ನು ಮತ್ತಷ್ಟು ಶೋಭಾಯಮಾನವನ್ನಾಗಿ ಮಾಡಿದ್ದುವು. ॥೩೪॥

ಈ ಮಂಟಪದ ಮೇಲ್ಭಾಗವು ಚಂದ್ರಮಂಡಲದವರೆವಿಗೂ ವ್ಯಾಪಿಸಿದ್ದಿತು. ಅಲ್ಲದೇ ಮಂದಾರಪುಷ್ಪಗಳ ಸಾರವತ್ತಾದ ಮಕರಂದಗಳೂ ಮತ್ತು ಪರಾಗಗಳೂ ಸಹ ಈ ಮಂಟಪದಲ್ಲಿ ವ್ಯಾಪಿಸಿದ್ದುವು. ॥೩೫॥

ಕೇತಕೀವಾತಪೋತೇನ ವೀತಂ ಪೂತಂ ವಿಭೂತಿಭಿಃ ।
ಅನುಭೂತಮಹಾನಂದಸಂದೋಹಸಮಲಂಕೃತಂ ॥೩೬॥

ತತ್ಕಾಲಕಾಲಸಲ್ಲಾಪಲೀಲಾಲೋಲಸುಧಾಮಯಂ ।
ಅನಾಮಯವಿಹಾರಾಣಾಮಾಲಯತ್ವೇನ ಸಂಶ್ರುತಂ ॥೩೭॥

ತಸ್ಮಿನ್ನುಮಾಸಹಾಯತ್ವಮುಮಯಾ ಮಯ್ಯನಾಮಯೇ ।
ಸಂಪಾದನೀಯಮಿತ್ಯೇವ ಯಯೌ ಮೃತ್ಯುಂಜಯಃ ಸ್ವಯಂ ॥೩೮॥

ತತ್ರ ಸಿಂಹಾಸನಂ ದ್ರಷ್ಟುಂ ಕೋಟಿಯೋಜನಮುನ್ನತಂ ।
ತಾವದಾಯತಮುತ್ತುಂಗರತ್ನಶೃಂಗವಿರಾಜಿತಂ ॥೩೯॥

ಕೇತಕೀಪುಷ್ಪಗಳ ಮೇಲೆ ಬೀಸುವ ಮಂದಮಾರುತವು ಈ ಮಂಟಪದಲ್ಲಿ ಸದಾ ಬೀಸುತ್ತಾ ಪವಿತ್ರವನ್ನಾಗಿ ಮಾಡುತ್ತಿರುವುದು. ಅಣಿಮಾದ್ಯಷ್ಟೈಶ್ವರ್ಯಗಳೂ ಈ ಮಂಟಪದಲ್ಲಿ ಸದಾ ಸಿದ್ಧವಾಗಿರುವುವು. ಈ ಮಂಟಪವು ಸಕಲ ಮಹಾನಂದಸಮೂಹವನ್ನೂ ಅನುಭವಿಸಲು ಯೋಗ್ಯವಾಗಿರುವಂತೆ ಅಲಂಕರಿಸಲ್ಪಟ್ಟಿರುವುದು. ॥೩೬॥

ಆ ವಿಹಾರಕಾಲದಲ್ಲಿ ಕಾಲಕಾಲನೆನಿಸಿದ ಮಹೇಶ್ವರನ ಮೃದುವಾದ ಸಂಭಾಷಣೆಯಿಂದಲೂ ಲೀಲಾವಿಹಾರದಿಂದುಂಟಾದ ಅಮೃತಸದೃಶವಾದ ಆನಂದದಿಂದಲೂ, ಆ ಮಂಟಪವು ರಾರಾಜಿಸುತ್ತಿದ್ದಿತು. ಈ ಮಂಟಪವು ನಿರಾತಂಕವಾದ ದಿವ್ಯವಿಹಾರಗಳಿಗೆ ಆಶ್ರಯಸ್ಥಾನವೆಂದು ಹೇಳಲ್ಪಡುವಂತಿದ್ದಿತು. ॥೩೭॥

ಸ್ವಭಾವಸುಂದರವಾದ ಈ ಮಂಟಪದಲ್ಲಿ ಮೃತ್ಯುಂಜಯನು ಉಮಾದೇವಿಯೊಡನೆ ಸೇರಿ, ಉಮಾಸಹಚರನೆನಿಸಬೇಕೆಂದು ತಾನೇ ಆ ಮಂಟಕ್ಕೆ ತೆರಳಿದನು. ಅಥವಾ ನಾನು ಯಾವ ಜುಗುಪ್ಸೆಯನ್ನೂ ಹೊಂದದಿರಬೇಕಾದರೆ ಆ ಮಂಟಪದಲ್ಲಿ ಉಮಾಸಹಾಯವನ್ನು ಹೊಂದಿ ಅವಳೊಡನೆ ವಿಹರಿಸಬೇಕೆಂಬುದಾಗಿ ಮೃತ್ಯುಂಜಯನು ತಾನೇ ಅಲ್ಲಿಗೆ ಹೋದನು. ॥೩೮॥

ಆ ಮಂಟಪದಲ್ಲಿರುವ ಸಿಂಹಾಸನವನ್ನು ನೋಡಲು ಮಹಾದೇವನು, ಮೊದಲು ಹೋದನು. ಆ ಸಿಂಹಾಸನವು ಕೋಟಿಯೋಜನದಷ್ಟು ಎತ್ತರವೂ ಅಷ್ಟೇ ವಿಸ್ತಾರವೂ ಆಗಿ ಉನ್ನತವಾದ ರತ್ನಶೃಂಗಗಳಿಂದ ವಿರಾಜಿಸುತ್ತಿದ್ದಿತು. ॥೩೯॥

ತದ್ಧ್ವನೀಭೂತಮಂದಾರಮಕರಂದವಿರಾಜಿತಂ ।
ತದನಂತಮಣಿಚ್ಛಾಯಾಭಾಯಾಭಾಧಿತಮುತ್ತಮಂ ॥೪೦॥

ರುದ್ರವೀಣಾಕೋಟಿಗಾನಧ್ವನಿಶೋಭನಸಾಧನಂ ।
ತತ್ಫುಲ್ಲಕುಂದಮಂದಾರಶಿರೀಷಕುಸುಮಚ್ಛದೈಃ ॥೪೧॥

ಆಚ್ಛಾದಿತಂ ವಿನೋದಾನಾಮಾಸ್ಪಂದಂ ಸದನಂ ಪ್ರಭೋಃ ।
ಶಂಭೋರ್ಮನೋಹರಂ ದೃಷ್ಟ್ವಾ ಹೃಷ್ಟಾ ಪ್ರಾಹ ಶಿವಾ ಶಿವಂ ॥೪೨॥

ಕೋಽಯಂ ಸೃಷ್ಟಿರ್ಮಹಾದೇವ ನ ದೃಷ್ಟಾ ನಾಪಿ ಸಂಶ್ರುತಾ ।
ಕೇನ ತುಲ್ಯಮಿದಂ ಲೋಕೇ ಕಿಮಿತೋಽಪ್ಯಧಿಕಂ ಭವೇತ್ ॥೪೩॥

ಆ ಸಿಂಹಾಸನದಲ್ಲಿ ಮಂದಾರಪುಷ್ಪಗಳ ಮಕರಂದಗಳು ಗಟ್ಟಿಯಾಗಿ ಹೆಪ್ಪು ಕಟ್ಟಿಕೊಂಡು ಹೊಳೆಯುತ್ತಿದ್ದುವು. ಈ ಉತ್ತಮವಾಧ ಸಿಂಹಾಸನವು ಅನಂತವಾದ ರತ್ನಚ್ಛಾಯೆಗಳಿಂದ ಸುತ್ತಲೂ ಆವರಿಸಲ್ಪಟ್ಟಿದ್ದಿತು. ||೪೦||

ಕೋಟ್ಯಂತರ ರುದ್ರವೀಣೆಗಳ ಮನೋಹರವಾದ ಧ್ವನಿಯಿಂದ ಕೂಡಿದ ಗಾನವು ಆ ಸಿಂಹಾಸನಯುಕ್ತವಾದ ಮಂಟಪದಲ್ಲಿ ಕೇಳುತ್ತಿದ್ದಿತು. ಸಿಂಹಾಸನವು ಅರಳಿದ ಕುಂದ, ಮಂದಾರ ಮತ್ತು ಶಿರೀಷ (ಬಾಗೆಹೂ) ಮುಂತಾದ ಪುಷ್ಪಗಳ ಸಮೂಹದಿಂದ ವ್ಯಾಪ್ತವಾಗಿ ಮೃದುವಾಗಿದ್ದಿತು. ||೪೧||

ಹೀಗೆ ಅನೇಕ ಪುಷ್ಪಗಳಿಂದ ವ್ಯಾಪ್ತವಾಗಿರುವ ಸಿಂಹಾಸನವನ್ನೂ ಸರ್ವ ಸಮರ್ಥನಾದ ಶಂಭುವಿನ ಮನೋಹರವಾದ ಮನೆಯನ್ನೂ ನೋಡಿ ಸಂತೋಷ ಹೊಂದಿ ಗಿರಿಜೆಯು ಶಿವನನ್ನು ಕುರಿತು ಹೀಗೆ ಪ್ರಶ್ನೆಮಾಡಿದಳು. ||೪೨||

ಮಹಾದೇವನೇ, ಇದೆಂತಹ ಅದ್ಭುತವಾದ ಸೃಷ್ಟಿ! ಇಂತಹುದನ್ನು ನಾನು ಹಿಂದೆ ನೋಡಿಲ್ಲ. ಅಲ್ಲದೇ ಕೇಳಿಯೂ ಇಲ್ಲ. ಪ್ರಪಂಚದಲ್ಲಿ ಇದಕ್ಕೆ ಸಮಾನವಾದುದು ಇಲ್ಲವೆಂದೇ ನಾನು ತಿಳಿದಿರುವೆನು. ದೇವನೇ, ಇದಕ್ಕಿಂತ ಉತ್ಕೃಷ್ಟವಾದ ಪದಾರ್ಥವು ಇನ್ನೇನಾದರೂ ಇರುವುದೇ? ||೪೩||

ಈದೃಶೀ ರಚನಾ ಶಂಭೋ ನ ಕೈಲಾಸೇಽಪ್ಯಭೂತ್ಪ್ರಭೋ ।
ಅಚಿಂತನೀಯೋ ಮಹಿಮಾ ತವಾಯಮಮರಪ್ರಭೋ ॥೪೪॥

ನಖರಪ್ರಸರಾಭಾವೇ ಶಿವನಾಮಾನುಗಾಯನಂ ।
ಅನಂತರುದ್ರವೀಣಾಸು ಶ್ರೂಯತೇ ತಾನರಂಜಿತಂ ॥೪೫॥

ಮನೋಹರಘನೀಭೂತರತ್ನಚ್ಛಾಯಾವಿರಾಜಿತಃ ।
ಪ್ರಾಸಾದಃ ಕೋಽಯಮೇತಸ್ಮಿನ್ಮನೋವೈಭವಭಾವಿತಃ ॥೪೬॥

ಇಂದುಮಂಡಲಮಂಚಸ್ಯ ನಿರ್ಮಾಣಮತಿಶೋಭನಂ ।
ತದಿದಂ ಕಮನೀಯೇನ ಶಯನೀಯೇನ ರಂಜಿತಂ ॥೪೭॥

ನೇತ್ರಪಾತ್ರಮಿದಂ ಚಿತ್ರಂ ತ್ರಿನೇತ್ರಾತ್ರಾಸ್ತು ಮೇ ಸ್ಥಿತಿಃ ।
ಕಲ್ಪಮಾತ್ರಮಿತಸ್ತಾವದಿತೋ ಗಮನಮೇವ ನ ॥೪೮॥

ಪ್ರಭುವೆನಿಸಿದ ಶಂಭುವೇ, ಈ ರೀತಿಯಾದ ರಚನೆಯು ಕೈಲಾಸದಲ್ಲಿ ಸಹ ಆಗಲಿಲ್ಲವಲ್ಲಾ! ದೇವತೆಗಳಿಗೆ ದೇವನಾದ ಸ್ವಾಮಿಯೇ, ನಿನ್ನ ಪ್ರಭಾವವನ್ನು ಯೋಚಿಸಲು ಅಸಾಧ್ಯವಾಗಿರುವುದು. ॥೪೪॥

ಕೈ ಉಗುರುಗಳ ಸಂಬಂಧವೇ ಇಲ್ಲದೆ ಅಪಾರವಾದ ಈ ರುದ್ರವೀಣೆಗಳು ಮೃದುವಾಗಿ ಧ್ವನಿಮಾಡುತ್ತಾ ತಾವೇ ಶಿವನಾಮವನ್ನು ಗಾನಮಾಡುತ್ತಿರುವುದು ಕೇಳಬರುತ್ತಿದೆ. ॥೪೫॥

ಮನೋಹರವಾಗಿ, ಸಾಂದ್ರವಾದ ರತ್ನಗಳ ಛಾಯೆಗಳಿಂದ ವಿರಾಜಿಸುತ್ತ ಲಿರುವ, ಈ ನಿನ್ನ ಮನಸ್ಸಿನ ವೈಭವಕ್ಕೆ ಅನುಸಾರವಾಗಿ ನಿರ್ಮಿಸಲ್ಪಟ್ಟಿರುವ ಪ್ರಾಸಾದವು ಎಷ್ಟು ಅದ್ಭುತವಾಗಿದೆ! ॥೪೬॥

ಈ ಚಂದ್ರಮಂಡಲದಿಂದ ರಂಜಿತವಾಗಿರುವ ಮಂಚವು ತುಂಬಾ ಮಂಗಳ ಕರವಾಗಿರುವುದು. ಈ ಚಂದ್ರಮಂಡಲಮಂಚವು ಮನೋಹರವಾದ ಹಾಸಿಗೆಯಿಂದ ಬೇರೆ ಶೋಭಿಸುತ್ತಿರುವುದಲ್ಲವೆ? ॥೪೭॥

ಕಣ್ಣುಗಳಿಗೆ ನೋಡಲು ಆಶ್ಚರ್ಯವನ್ನುಂಟುಮಾಡುತ್ತಿರುವ ಈ ರಚನಾ ವಿಶೇಷವು ತುಂಬಾ ಅದ್ಭುತವಾದುದು. ನಾನು ಹೀಗೆಯೇ ಒಂದು ಕಲ್ಪದವರೆವಿಗೂ

ಇತ್ಯುಕ್ತ್ವಾ ತತ್ರದಾನಂದಸಂದೋಹಾನಂದಮಂದಯಾ ।
ಮಕರಂದಶ್ರಿಯಾ ಯುಕ್ತಂ ಪ್ರಾಪಾಂಬಾ ಸಶಿವಾಶಿವಂ ॥೪೯॥

ತದ್ದೃಷ್ಟ್ವಾ ತತ್ರ ವಿಶ್ರಾಂತಾ ಶ್ರಾಂತಿಂ ವಿಸ್ಮೃತ್ಯ ಶೈಲಜಾ ।
ಆನಂದರಸಧಾರಾಭಿರಪಾರಾಭಿರ್ಬಭೌ ದ್ವಿಜಾಃ ॥೫೦॥

ಆನಂದರಸಮಗ್ನಾ ಸಾ ವಿಜ್ಞಾನಘನಸಾಗರಂ ।
ಗೌರೀ ಶಂಕರಮಾಲಿಂಗ್ಯ ನ ಸಸ್ಮಾರ ಸ್ವವರ್ತನಂ ॥೫೧॥

ಕ್ವಚಿಚ್ಚೇಲಂ ಕ್ವಚಿಚ್ಚೋಲೀಂ ಧಮ್ಮಿಲ್ಲಂ ಚ ಕ್ವಚಿತ್ಕ್ವಚಿತ್ ।
ರಸಸಾಗರಮಗ್ನಾಯಾಃ ಕ್ವಚಿದ್ಬಾಹುಲತಾದಿಕಂ ॥೫೨॥

ನಿಂತುಕೊಂಡು ನೋಡುವಂತೆ ಮುಕ್ಕಣ್ಣನಾದ ನಿನ್ನ ಅನುಜ್ಞೆಯಾಗಲಿ. ಇಲ್ಲಿಂದ ಮುಂದೆ ಹೋಗಲು ನನಗೆ ಮನಸ್ಸೇ ಬರುತ್ತಿಲ್ಲ. ||೪೮||

ಮಂಗಳಾಂಗಿಯಾದ ಅಂಬಿಕೆಯು ಹೀಗೆ ಹೇಳಿ, ಆಗ ಆನಂದಸಮೂಹದಲ್ಲಿ ಮಗ್ನಳಾಗಿ ಆನಂದಾಸ್ವಾದಮಾಡುತ್ತಾ, ಪುಷ್ಪಮಕರಂದಗಳ ಕಾಂತಿಯಿಂದ ಯುಕ್ತನಾಗಿರುವ ಶಿವನನ್ನು ಹೊಂದಿ ಆನಂದಪರವಶಳಾದಳು. ||೪೯||

ಆ ಸಿಂಹಾಸನವನ್ನು ನೋಡಿ ಗಿರಿಜೆಯು ಅಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಕ್ಷಣಕಾಲದಲ್ಲಿಯೇ ತನಗೆ ಉಂಟಾಗಿದ್ದ ಆಯಾಸವನ್ನೆಲ್ಲಾ ಮರೆತುಬಿಟ್ಟಳು. ಹಾಗೆ ಈ ಗಿರಿಜಾದೇವಿಯು ಅಪಾರವಾದ ಆನಂದರಸಪ್ರದಾಯಕವಾದ ಆ ಸಿಂಹಾಸನದಲ್ಲಿ ಪ್ರಕಾಶಿಸಿದಳು. ||೫೦||

ಹೀಗೆ ಆನಂದರಸದಲ್ಲಿ ಮಗ್ನಳಾದ ಗೌರಿಯು, ವಿಜ್ಞಾನಗಳಿಗೆ ನಿಧಿಯಂತೆ ವರ್ತಿಸುವ ಶಂಕರನನ್ನು ಆಲಿಂಗಿಸಿ, ತನ್ನ ಲಜ್ಜಾದಿ ಸಕಲ ವ್ಯಾಪಾರವನ್ನೂ ಮರೆತಳು. ||೫೧||

ಆನಂದರಸಸಾಗರದಲ್ಲಿ ಮುಳುಗಿರುವ ದೇವಿಗೆ ಒಂದುವೇಳೆ ವಸ್ತ್ರವೂ, ಒಂದುಸಲ ಕುಪ್ಪಸವೂ, ತಲೆಯುಗಂಟೂ, ಒಂದೊಂದು ವೇಳೆ ಲತಾಸದೃಶವಾದ ಬಾಹುವೇ ಮುಂತಾದ ಅವಯುವಗಳೂ ಅಸ್ತವ್ಯಸ್ತವಾಗಿರುವುದೊಂದೂ ಗೊತ್ತೇ ಆಗುತ್ತಿರಲಿಲ್ಲ. ||೫೨||

ಏವಂ ಕ್ರೀಡಾರಸೇನೈವ ಶಿವಾಭ್ಯಾಂ ಕಲ್ಪಕೋಟಯಃ ।
ನೀತಾಃ ಕ್ಷಣಾರ್ಧಕಲ್ಪಾಸ್ತೇ ಸರ್ವೇಽಪಿ ಶಿವಯೋಃ ಪರಂ ॥೫೩॥

ತತಃ ಪರಂ ತತೋಽಪ್ಯುಚ್ಚೈಸ್ತಲ್ಪೇ ಕಲ್ಪಿತಮಂಡನೇ ।
ವಿಹಾರನಿರತಾ ಗೌರೀ ಶಂಕರೇಣ ಸಹಾದರಾತ್ ॥೫೪॥

ಏವಂ ಕಲ್ಪೇಷ್ವನಂತೇಷು ದಿವ್ಯಮಂಡಲಮಂಡಿತಾ ।
ವಿಹಾರನಿರತಾ ಗೌರೀ ವಿರತಾ ನ ಕದಾಚನ ॥೫೫॥

ಪ್ರತಿಕ್ಷಣಂ ವಿಚಿತ್ರಾಣಿ ಸಾ ರತ್ನಾಭರಣಾನ್ಯಪಿ ।
ಸ್ವತಃ ಸಮಾಗತಾನ್ಯಂಬಾ ಸಾ ಜಹೌ ಶಿವಲೀಲಯಾ ॥೫೬॥

ತುಂಗಶಂಗಾಂಗಸಂಗೇನ ಮದಂಗಮಪಿ ಮಂಗಲಂ ।
ತನೋತೀತಿ ನ ಹಾರೇಷು ಚಕಾರ ರತಿಮಂಬಿಕಾ ॥೫೭॥

ಹೀಗೆ ಕ್ರೀಡಾರಸಮಗ್ನರಾಗಿರುವ ಶಿವಪಾರ್ವತಿಯರಿಗೆ ಕೋಟ್ಯಂತರ ಕಲ್ಪಗಳು ಕಳೆದರೂ ಅವೆಲ್ಲವೂ ಅವರಿಗೆ ಕೇವಲ ಒಂದು ಕ್ಷಣಾರ್ಧಕ್ಕೆ ಸಮಾನವಾದಂತೆ ತೋರಿದವು. ॥೫೩॥

ಅನಂತರ ಗೌರಿಯು ಇದಕ್ಕಿಂತಲೂ ಅತಿಶಯವಾಗಿ, ಅಲಂಕಾರಮಾಡಿರುವ ಹಾಸಿಗೆಯ ಮೇಲೆ ಮಲಗಿ ಶಂಕರನೊಡನೆ ಆದರದಿಂದ ವಿಹಾರದಲ್ಲಿ ತೊಡಗಿದಳು. ॥೫೪॥

ಇದೇ ರೀತಿ ಅನೇಕ ಸುಪ್ಪತ್ತಿಗೆಗಳ ಮೇಲೆ ದಿವ್ಯಾಲಂಕಾರಭೂಷಿತಳಾದ ಗೌರಿಯು ಸ್ವಲ್ಪವೂ ವಿಶ್ರಾಂತಿಯಿಲ್ಲದಂತೆ ಪರಮೇಶ್ವರನೊಡನೆ ವಿಹರಿಸಿದಳು. ॥೫೫॥

ಶಿವನ ಲೀಲಾಮಾತ್ರದಿಂದ ತಾನಾಗಿಯೇ ಪ್ರತಿಕ್ಷಣದಲ್ಲಿಯೂ ಬಂದ ವಿಚಿತ್ರವಾದ ರತ್ನಾಭರಣಗಳನ್ನು ಅಂಬಿಕಾದೇವಿಯು ಧರಿಸದೇ ತ್ಯಾಗಮಾಡಿದಳು. ॥೫೬॥

ಉನ್ನತವೂ ಶ್ರೇಷ್ಠವೂ ಆದ ಶಂಕರನ ಅವಯವಸಂಬಂಧದಿಂದ ನನ್ನ ಈ ಶರೀರವೂ ಮಂಗಳವನ್ನು ಹೊಂದುವುದೆಂದು ತಿಳಿದು ಅಂಬಿಕೆಯು ರತ್ನಹಾರಗಳಲ್ಲಿ ಅಪೇಕ್ಷೆಯಿಡಲಿಲ್ಲ. ॥೫೭॥

ಶರ್ವಸರ್ವಾಂಗಸಂಗಸ್ಯಾಪ್ಯಂತರಾಯೋ ಭವೇದಯಂ ।
ಹಾರೋ ಮನೋಹರೋಽಪೀತಿ ಹಾರಂ ದೂರೀಚಕಾರ ಸಾ ॥೫೮॥

ಸಾ ಗೌರೀ ಕುಚಮಂಡಲಾಯ ಶಿಖರೋತ್ತುಂಗಾಯ ಹಾರಾಂ ದದೌ
ಶೃಂಗಾರದ್ರವಪೂರಿತಾಯ ರುಚಿರಾಕಾರಾಯ ಧೀರಾಯ ಚ ।
ಹಾರಾಪಾರಜಯಾಯ ಚೂಚುಕಲಸನ್ಮೃಡಾಯ ರುದ್ರಪ್ರಿಯಾ
ಹಾರದ್ರಾವಣಧಾರಣಾಯ ವಲಿಕಾಂ ನಿಶ್ರೇಣಿಕಾಯಾದರಾತ್ ॥೫೯॥

ಸಾ ಪಶ್ಚಾದ್ದೃಢಗಂಡಮಂಡಲತಲೇ ಕಸ್ತೂರಿಕಾಮಂಡನಂ
ನಾಸಾಯಾಂ ನವಮೌಕ್ತಿಕಂ ತದಧರೇ ತಾಂಬೂಲರಾಗಂ ಮುಹುಃ ।

ಶರ್ವನೆನಿಸಿದ ಶಿವನ ಸಕಲ ಅವಯವಸಂಸರ್ಗಕ್ಕೂ ಈ ಹಾರವು ಅಡಚಣೆಮಾಡುವುದೆಂದು ತಿಳಿದು ಹಾರವು ಮನೋಹರನಾಗಿದ್ದರೂ ಅದನ್ನು ದೇವಿಯು ತಿರಸ್ಕರಿಸಿದಳು. (ಹಾರವನ್ನು ಧರಿಸಿ ಆಲಿಂಗನಾದಿಗಳನ್ನು ಮಾಡಿದರೆ ಎಲ್ಲಾ ಅವಯವಸಂಸ್ಪರ್ಶವೂ ಉಂಟಾಗಲಾರದೆಂದು ತಿಳಿದು ಗಿರಿಜೆಯು ಮನೋಹರವಾಗಿದ್ದರೂ ಹಾರವನ್ನು ಧರಿಸದೇ ಬಿಟ್ಟಳೆಂದು ಭಾವ.) ॥೫೮॥

ಆ ಗೌರಿಯು ತನಗೆ ಸಮರ್ಪಿಸಿದ್ದ ಮನೋಹರವಾದ ಹಾರವನ್ನು ಪರ್ವತ ಶಿಖರದಂತೆ ಉನ್ನತವಾಗಿದ್ದ ತನ್ನ ಕುಚಮಂಡಲಕ್ಕೆ ಸಮರ್ಪಿಸಿದಳು. ಆ ಕುಚ ಮಂಡಲವು ಶೃಂಗಾರದ್ರವಗಳಿಂದ ಪೂರ್ಣವಾಗಿ, ಮನೋಹರವಾದ ಆಕೃತಿಯಿಂದ ಯುಕ್ತವಾಗಿ ದೃಢವಾಗಿದ್ದಿತು. ಚೂಚುಕಗಳಿಂದ ಶೋಭಿಸುತ್ತಾ ಶಿವನ ನಖಚಿಹ್ನೆ ಗಳಿಂದ ಗುರುತಾಗಿರುವ ಈ ಸ್ತನಮಂಡಲವು ಪರಮೇಶ್ವರ ಭಕ್ತರ ವಿಜಯಕ್ಕೆ ಕಾರಣವಾಗಿದ್ದಿತು. ರುದ್ರನ ಪ್ರಿಯರಾಣಿಯಾದ ಶಂಕರಿಯು ತನ್ನ ಉನ್ನತವಾದ ಸ್ತನಗಳಿಗೆ ಹಾರವನ್ನು ಹಾಕುವುದಕ್ಕೂ ಮತ್ತು ಚಂದನಾದಿ ದ್ರವವಸ್ತುಗಳನ್ನು ಲೇಪನಮಾಡುವುದಕ್ಕೂ ಸಹ ಅನುಕೂಲವಾಗುವಂತೆ ಸೋಪಾನಪಂಕ್ತಿಯಂತಿರುವ ತನ್ನ ತ್ರಿವಲಿಗಳನ್ನೇ ಏಣಿಯಂತೆ ಸಾಧನವನ್ನಾಗಿ ಮಾಡಿಕೊಂಡಳು. ॥೫೯॥

ಅನಂತರ ಗಿರಿಜಾದೇವಿಯು ತನ್ನ ದೃಢವಾದ ಗಂಡಪ್ರದೇಶದಲ್ಲಿ ಕಸ್ತೂರಿ ಯನ್ನು ಲೇಪನಮಾಡಿಕೊಂಡಳು. ಮೂಗಿಗೆ ಹೊಸ ಮುತ್ತಿನ ಮೂಗುತಿ

ತಾಟಂಕಂ ಶ್ರವಣಾಯ ಫಾಲಫಲಕೇ ಮುಕ್ತಾಮಯಂ ಮಂಡನಂ
ಸೀಮಂತೇಽಪಿ ನಖಪ್ರಚಾರರುಚಿರೇ ಸಾ ರತ್ನಮಾಲಾಂ ದದೌ ॥೬೦॥

ತಾರಾಕಾರಸ್ಥೂಲಮುಕ್ತಾಫಲಶ್ರೀ
ಗೌರೀನಾಸಾವಾಸಮಾಸಾದ್ಯ ಸದ್ಯಃ ।
ಅದ್ಯ ಪ್ರಾಪ್ತಂ ಪದ್ಮರಾಗಪ್ರಭಾವಂ
ಕೇನೇತ್ಯೇವೇತ್ಯಾದರೇಣಾಧರೇಣ ॥೬೧॥

ಸಾ ರತ್ನಾಂಗದಮಂಗದೋಚಿತಮುಮಾ ದೃಷ್ಟ್ವಾ ದಧೌ ಕಂಕಣೇ
ನಾನಾರತ್ನವಿರಾಜಿತೇ ಕರಮುಖೇ ರತ್ನಾಂಗುಲೀಯಾನ್ಯಪಿ ।

ಯನ್ನು ಧರಿಸಿದಳು. ಅಧರಗಳಲ್ಲಿ ಪದೇ ಪದೇ ತಾಂಬೂಲ ರಾಗವು ಕಾಣುವಂತೆ ತಾಂಬೂಲಚರ್ವಣಮಾಡುತ್ತಿದ್ದಳು. ಕಿವಿಗಳಲ್ಲಿ ಸುಂದರವಾದ ಓಲೆಗಳನ್ನೂ, ಹಲಗೆಯಂತಿರುವ ಹಣೆಯಲ್ಲಿ ಮುತ್ತಿನ ಅಲಂಕಾರವನ್ನೂ ಅಲಂಕರಿಸಿಕೊಂಡಿದ್ದಳು. ಉಗುರುಗಳಿಂದಲೂ ಬಾಚಣಿಗೆಗಳ ಸಹಾಯದಿಂದಲೂ, ಮನೋಹರವಾಗಿ ಅಲಂಕರಿಸಲ್ಪಟ್ಟಿರುವ ಬೈತಲೆಗಳಲ್ಲಿ ರತ್ನಮಾಲೆಗಳನ್ನೂ ಸಹ ಧರಿಸಿಕೊಂಡಳು. ॥೬೦॥

ನಕ್ಷತ್ರದಂತೆ ಆಕಾರವುಳ್ಳ ದೊಡ್ಡ ಮುತ್ತಿನ ಕಾಂತಿಯು ಗೌರಿಯ ಮೂಗಿನ ವಾಸವನ್ನು ಹೊಂದಿ, ಈ ದೇವಿಯ ಅಧರಕಾಂತಿಯಿಂದ ನನಗೆ ಈಗ ಪದ್ಮರಾಗಮಣಿಯ ಪ್ರಭಾವವೇ ಉಂಟಾಗಿದೆಯೆಂದು ಆದರದಿಂದ ಹೇಳುತ್ತಿರುವುದೋ ಎಂಬಂತಿದ್ದಿತು. ಅಲ್ಲದೆ ಈಗ ಅಧರಕ್ಕೆ ಪದ್ಮರಾಗಮಣಿಗಳ ಕಾಂತಿಯುಂಟಾಗಿದೆಯೋ ಅಥವಾ ನನಗೆ ಉಂಟಾಗಿದೆಯೋ ನೋಡೋಣವೆಂದು ತಿಳಿಸುವಂತಿದ್ದಿತು. ಸ್ವಭಾವವಾಗಿಯೇ ಕೆಂಪಾಗಿರುವ ದೇವಿಯ ಮೂಗಿನ ಕಾಂತಿಯಿಂದ ಕೂಡಿರುವ ಮೂಗುತಿಯ ಮುತ್ತುಗಳು ಪದ್ಮರಾಗದ ಕಾಂತಿಯನ್ನು ಹೋಲುವಂತಾದವು. ॥೬೧॥

ಆ ಗೌರಿಯು ಮನ್ಮಥವಿಲಾಸಕ್ಕೆ ಯೋಗ್ಯವಾದ ರತ್ನಾಂಗದವೆಂಬ ಆಭರಣವನ್ನು ನೋಡಿ ಕಂಕಣಸ್ಥಾನದಲ್ಲಿ ಅದನ್ನು ಧರಿಸಿದಳು. ಅನೇಕ ರತ್ನಗಳಿಂದ

ಸಾದಾತುಂ ವಿರತಾ ನಖಪ್ರತಿಮಯಾ ಛನ್ನಾಸು ತಾಸ್ವಂಗುಲೀ
ಷ್ವಾನೀಲಾಭರಣಾನಿ ಕಾನ್ಯಪಿ ತಥಾ ಯೋಗ್ಯಾನಿ ರತ್ನಾನ್ಯಪಿ ॥೬೨॥

ಸಾ ಕಾಂಚೀಮತಿಸೂಕ್ಷ್ಮಮಧ್ಯವಿಲಸದ್ಭಾಗ್ಯೋಚಿತಾಕುಂಚಿತಾ
ಕಾಂಚೀ ನೇತ್ಯತಿಭಾರಭೀರುಹೃದಯಾ ಸಾ ತದ್ದಯಾಂ ಕುರ್ವತೀ ।
ಮಧ್ಯೇ ರತ್ನಮಣಿಪ್ರಭಾಭಿರಭಿತೋ ಬದ್ಧಂ ಚಕಾರಾಂಬಿಕಾ
ತಚ್ಛಂಕಾಪನಯಾಯ ಸಾಪಿ ಜಘನೇ ತಾವದ್ದುಕೂಲಂ ದಧೌ ॥೬೩॥

ಯಾ ದೇವೀ ದ್ರುಮಪದ್ಮರಾಗರುಚಿರೇ ಲಾಕ್ಷಾರಸಾಸೇಚನಂ
ಸಾ ಗೌರೀ ನ ಚಕಾರ ಸಾರುಣಕರವ್ಯಾಪಾರಭಂಗೋದ್ಯತೇ ।
ಧಮ್ಮಿಲ್ಲೇ ಕೃತಮೇವ ಬಂಧನಮಿದಂ ಕಿಂ ವಿಶ್ಲಯಂ ನಿರ್ಗತಂ
ಮನ್ಯೇಽಸಂಗಮದಾಪಹಾರನಿರತೇ ಯುಕ್ತಂ ಕಿಮಸ್ಯೇತಿ ವಾ ॥೬೪॥

ವಿರಾಜಿಸುತ್ತಿರುವ ರತ್ನದ ಉಂಗುರಗಳನ್ನು ಬೆರಳುಗಳಿಗೆ ತೊಡಲು ಪ್ರಯತ್ನಿಸಿದಾಗ ಆ ದೇವಿಯ ಉಗುರಿನ ಕಾಂತಿಯುಕ್ತವಾದ ಹೊಳಪು ಆ ಉಗುರುಗಳಲ್ಲಿ ಪ್ರತಿಫಲಿಸಿದುವು. ಹೀಗೆ ಗಿರಿಜೆಯು ತನ್ನ ಮನೋಹರವಾದ ಉಗುರುಗಳಿಗೆ ಕಪ್ಪು ಕಾಂತಿಯಿಂದ ಕೂಡಿದ ಆಭರಣಗಳನ್ನೂ ಮತ್ತು ಯೋಗ್ಯವಾದ ರತ್ನಾಭರಣಗಳನ್ನೂ ಧರಿಸಿದಳು. ॥೬೨॥

ಪಾರ್ವತಿಯು ನಾನಾ ರತ್ನಗಳಿಂದ ಖಚಿತವಾಗಿರುವ ಸುವರ್ಣದ ಡಾಬನ್ನು ಧರಿಸಿದರೆ ತುಂಬಾ ಭಾರವಾಗುವುದೆಂದು ತಿಳಿದು, ಭಾಗ್ಯೋಚಿತವಾಗಿ ಬಗ್ಗಿರುವ ಈ ಕಾಂಚಿಯು ಈಗ ಬೇಡವೆಂದೂ, ಆದರ ಮೇಲೆ ದಯೆತೋರಿಸುತ್ತಾ ಆದರೆ ಆ ಡಾಬನ್ನು ಧರಿಸಿಲ್ಲವೆಂಬ ಸಂದೇಹವನ್ನು ಹೋಗಲಾಡಿಸುವುದಕ್ಕೋಸ್ಕರ ಸುತ್ತಲೂ ರತ್ನಕಾಂತಿಗಳಿಂದ ಆವರಿಸಲ್ಪಟ್ಟಿರುವ ಆ ಕಾಂಚಿಯಷ್ಟೇ ಪ್ರಮಾಣವುಳ್ಳ ರೇಷ್ಮೆಯ ಪಟ್ಟಿಯನ್ನು ಧರಿಸಿದಳು. ॥೬೩॥

ಯಾವ ದೇವಿಯು ಹಿಂದೆ ಪದ್ಮರಾಗಮಣಿಗಳಂತೆ ಮನೋಹರವಾದ ತನ್ನ ಕೈಗಳಿಂದಲೇ ಲಾಕ್ಷಾರಸವನ್ನು ಹಚ್ಚಿಕೊಳ್ಳುತ್ತಿದ್ದಳೋ, ಆ ಪಾರ್ವತಿಯೇ ಈಗ ಅಂಗರಾಗವನ್ನು ಹಚ್ಚಿಕೊಳ್ಳಲಿಲ್ಲ. ಅಲ್ಲದೇ ಸ್ವಭಾವದಿಂದ ಕೆಂಪಾದ ಕೈಗಳಿಂದ ತನ್ನ ಕೆದರಿದ ಕೂದಲನ್ನು ಗಂಟು ಹಾಕುವುದನ್ನು ನೋಡಿದರೆ

ಪಶ್ಚಾಚ್ಚಂದನಸಕರ್ದಮೇನ ಸಹಿತಂ ಕಸ್ತೂರಿಕಾಕರ್ದಮಂ
ದತ್ವಾಂಗೇಷು ವಿಲೇಪನೌಷಧಧಿಯಾ ಜನ್ಯಕ್ಷತಾಕ್ಷೇಪಕಂ ।
ಚೌಲೀಂ ಸಾ ಕುಚಯೋಃ ಸುಮೇರುವಿಜಯಪ್ರಾರಬ್ಧಯೋಸ್ತಜ್ಜಯ
ಪ್ರಾರಂಭೇಽಪಿ ಜಯಃ ಪುನಃ ಪುನರಿದಂ ಭೂಯಾದಿತೀಯಂ ಶಿವಾ ॥೬೫॥

ಗೌರೀ ಶಂಕರಚಾರುಧೀರಕರಜವ್ಯಾಪಾರಚಿಹ್ನಾಂಕಿತಾ
ಶಂಗಾಲಿಂಗನಮಂಗಲೈರಭಿನವೈಃ ಸಂಪೂರ್ಣಕಾಮೋದಯಾ ।
ಸಾ ಸರ್ವಾಭರಣಾನ್ವಿತಾ ವಿರುರುಚೇ ದಿವ್ಯಾಂಗರಾಗಾಂಕಿತಂ
ಶಂಗಾಂಗಂ ಸಮುಪೇತ್ಯ ಮಂಗಲತಮಂ ಶೃಂಗಾರಧಾರಾಕರಂ ॥೬೬॥

ಮನ್ಮಥನ ಗರ್ವವನ್ನು ಹೋಗಲಾಡಿಸುವ ಆತುರದಲ್ಲಿ ಕಾಮಯುದ್ಧಕ್ಕೆ ಸಿದ್ಧಳಾಗುತ್ತಿರುವಳೋ ಎಂಬಂತೆ ತೋರುತ್ತಿದ್ದಳು. ॥೬೪॥

ಅನಂತರ ಗಿರಿಜೆಯು ಚಂದನಗಂಧದಿಂದ ಬೆರೆತ ಕಸ್ತೂರೀ ಲೇಪವನ್ನು ನಖಕ್ಷತಾದಿಗಳು ಕಾಣದಂತೆ, ಘಾಯವಾದವರು ತಮ್ಮ ಘಾಯಗಳ ಮೇಲೆ ಲೇಪನ ಮಾಡಿಕೊಳ್ಳುವ ಔಷಧಿಯಂತೆ ತನ್ನ ಅಂಗಾಂಗಗಳಿಗೆಲ್ಲಾ ಧರಿಸಿದಳು (ಹಚ್ಚಿಕೊಂಡಳು) ಮತ್ತು ತಮ್ಮ ಔನ್ನತ್ಯದಿಂದ ಸುಮೇರುಪರ್ವತವನ್ನೇ ಜಯಿಸಲು ಪ್ರಾರಂಭಿಸಿರುವ ಕುಚಗಳ ಮೇಲೆ ಧರಿಸಿದ್ದ ಕುಪ್ಪಸವನ್ನು ತೆಗೆದು, ವಿಜಯದ ಪ್ರಾರಂಭದಲ್ಲಿಯೇ ಪುನಃ ಪುನಃ ಜಯವುಂಟಾಗಲೆಂದು ಆ ಸ್ತನಗಳಿಗೆ ಚಂದನ ಮತ್ತು ಕಸ್ತೂರೀ ಇವುಗಳ ಗಂಧವನ್ನು ಬಳಿದಳು. ॥೬೫॥

ಗೌರಿಯು ಧೀರನಾದ ಶಂಕರನ ಮನೋಹರವಾದ ನಖಕ್ಷತಾದಿವ್ಯಾಪಾರಗಳಿಂದ ಸ್ತನಾದಿಪ್ರದೇಶಗಳಲ್ಲಿ ಚಿಹ್ನೆಗಳನ್ನು ಹೊಂದಿದಳು. ಸುಖಮಯನಾದ ಶಿವನ ಮಂಗಳಕರವೂ, ನೂತನವೂ ಆದ ಆಲಿಂಗನದಿಂದ ಸಂಪೂರ್ಣವಾದ ಮನ್ಮಥನ ಆವಿರ್ಭಾವವನ್ನು ಪಡೆದಳು. ತಾನು ಸಕಲ ಆಭರಣಗಳಿಂದಲೂ ಅಲಂಕೃತಳಾಗಿ, ದಿವ್ಯವಾದ ಅಂಗರಾಗಗಳಿಂದ ಲೇಪನಮಾಡಲ್ಪಟ್ಟು ಅತ್ಯಂತ ಮಂಗಳಕರವೂ ಶೃಂಗಾರರಸಧಾರೆಗಳಿಗೆ ಗಣಿಯಂತಿರುವುದೂ ಆದ ಸುಖಮಯನಾದ ಪರಮೇಶ್ವರನ ದಿವ್ಯದೇಹವನ್ನು ಹೊಂದಿ (ಆಲಿಂಗಿಸಿ) ತಾನೂ ದಿವ್ಯಕಾಂತಿ

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಪಾರ್ವತ್ಯಾಗಮಗೌರೀಶಂಕರಯೋಃ ಕ್ರೀಡಾನುವರ್ಣನಂ ನಾಮ ವಿಂಶೋಽಧ್ಯಾಯಃ

ಯಿಂದ ಶೋಭಿಸಿದಳು. ಎಂದು ವ್ಯಾಸಮಹರ್ಷಿಗಳು ಅಲ್ಲಿ ನೆರೆದಿದ್ದ ಋಷಿವರ್ಗಕ್ಕೆಲ್ಲಾ ಉಮಾಮಹೇಶ್ವರರ ವಿಹಾರಕ್ರೀಡೆಯ ವರ್ಣನೆಯನ್ನು ವಿವರವಾಗಿ ತಿಳಿಸಿದರು. ॥೬೬॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಪಾರ್ವತಿಯ ಆಗಮನ ಗೌರೀ ಮತ್ತು ಶಂಕರ ಇವರ ವಿಹಾರವರ್ಣನೆಯೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.